ಕರ್ನಾಟಕದ ಐತಿಹಾಸಿಕ ದೀಪಸ್ತಂಭಗಳು

ಒಂದು ಅಧ್ಯಯನ

(ಮೈಸೂರು ವಿಭಾಗವನ್ನು ಅನುಲಕ್ಷಿಸಿ)

ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಬಿ.ಆರ್. ಗೀತಾಂಜಲಿ

ಮಾರ್ಗದರ್ಶಕರು
ಡಾ॥. ಎಸ್.ಸಿ. ಪಾಟೀಲ



ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೬

ಕರ್ನಾಟಕದ ಐತಿಹಾಸಿಕ ದೀಪಸ್ತಂಭಗಳು ಒಂದು ಅಧ್ಯಯನ

(ಮೈಸೂರು ವಿಭಾಗವನ್ನು ಅನುಲಕ್ಷಿಸಿ)



ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಬಿ.ಆರ್. ಗೀತಾಂಜಲಿ

ಮಾರ್ಗದರ್ಶಕರು
ಡಾ. ಎಸ್.ಸಿ. ಪಾಟೀಲ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಲಲಿತಕಲಾ ನಿಕಾಯ
ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬನಶಂಕರಿ, ಬಾದಾಮಿ

೨೦೦೬

ಪ್ರಮಾಣ ಪತ್ರ

ಕರ್ನಾಟಕದ ಐತಿಹಾಸಿಕ ದೀಪಸ್ತಂಭಗಳು- ಒಂದು ಅಧ್ಯಯನ, (ಮೈಸೂರು ವಿಭಾಗವನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ. ಎಸ್.ಸಿ. ಪಾಟೀಲ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

B.R. Geethanjali

ದಿನಾಂಕ: ೨೫-೦೫-೨೦೦೬

ಸ್ಥಳ: ಬನಶಂಕರಿ, ಬಾದಾಮಿ

(ಬಿ.ಆರ್. ಗೀತಾಂಜಲಿ)
ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬನಶಂಕರಿ, ಬಾದಾಮಿ

ಪ್ರಮಾಣ ಪತ್ರ

ಬಿ.ಆರ್. ಗೀತಾಂಜಲಿ ಇವರು ಬರೆದು ಸಾದರಪಡಿಸಿದ ಕರ್ನಾಟಕದ ಐತಿಹಾಸಿಕ ದೀಪಸ್ತಂಭಗಳು–ಒಂದು ಅಧ್ಯಯನ, (ಮೈಸೂರು ವಿಭಾಗವನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು, ಇವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಮಹಾಪ್ರಬಂಧ ಇಡಿಯಾಗಿ, ಇಲ್ಲವೇ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ: ೨೫-೬-೨೦೦೬
ಸ್ಥಳ: ಬನಶಂಕರಿ, ಬಾದಾಮಿ

(ಡಾ. ಎಸ್.ಸಿ. ಪಾಟೀಲ)
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬನಶಂಕರಿ, ಬಾದಾಮಿ

ಪರಿವಿಡಿ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ವಿಶ್ವದಲ್ಲಿ ಭಾರತೀಯರ ಅನೇಕ ಸಂಪ್ರದಾಯಗಳು ವಿಶೇಷವಾದ ಮಾನ್ಯತೆಯನ್ನು ಪಡೆದಿವೆ. ಈ ಸಂಪ್ರದಾಯದ ನೆರಳಿನಂತೆ ಕಲೆಗಳು ಬೆಳೆದುಬಂದಿರುವುದು ಗಮನಾರ್ಹ. ಭಾರತದ ಜನತೆಯಲ್ಲಿ ವೈವಿಧ್ಯತೆ, ವಿಭಿನ್ನತೆಯಿದ್ದರೂ ಅವರ ಆಚರಣೆಯಲ್ಲಿ ಒಂದಲ್ಲ ಒಂದು ರೀತಿ, ಒಂದಲ್ಲ ಒಂದು ಕಡೆ ಸಮಾನತೆಯ ಅಂಶಗಳು ಇರುವುದನ್ನು ಗಮನಿಸಬಹುದು. ಬೇರೆ ಬೇರೆ ರಾಜ್ಯದ ಜನರು ಮಾಡುವ ಪೂಜಾವಿಧಾನ, ಆಚರಣೆಯಲ್ಲಿ ಕೆಲವು ವಿಭಿನ್ನತೆಯಿದ್ದರೂ ಅವರ ಆಚರಣೆಗಳಲ್ಲಿ ಉಪಯೋಗಿಸುವ ಸಾಮಗ್ರಿಗಳು ಅವುಗಳ ಉದ್ದೇಶ ಒಂದಲ್ಲ ಒಂದು ರೀತಿಯಲ್ಲಿ ಸಾಮರಸ್ಯವನ್ನು ಪಡೆದಿರುವುದು ಕುತೂಹಲಕಾರಿಯಾದ ಅಂಶವಾಗಿದೆ.

ಭಾರತೀಯ ಸಂಸ್ಕೃತಿ ಆಚರಣೆಯಲ್ಲಿ ಉಪಯೋಗಿಸಲ್ಪಡುವ ಸಾಮಗ್ರಿಗಳು ಯಾವುದಾದರೂ ಆಗಿರಲಿ ಅವುಗಳನ್ನು ಉಪಯೋಗಿಸಲು ನಿರ್ದಿಷ್ಟವಾದ ಕಾರಣವು ಅದರಲ್ಲಿ ಇರುವುದು ವಿಶೇಷವಾಗಿ ಕಾಣುತ್ತದೆ. ಹಾಗೆ ನೋಡಿದರೆ ಯಾವುದೇ ಆಚರಣೆಯನ್ನು ಭಾರತದ ಪೂರ್ವಿಕರು ವಿನಾಕಾರಣ ಕೈಗೊಂಡಿರುವಂತೆ ಕಾಣುವುದಿಲ್ಲ. ಪ್ರತಿಯೊಂದು ಆಚರಣೆಗೂ ವಿಶಿಷ್ಟವಾದ ಅರ್ಥವು ಇರುವುದು ಇದರಿಂದ ತಿಳಿದು

ಬರುತ್ತದೆ. ನಮ್ಮ ದೇಶದಲ್ಲಿ ದೇವಾಲಯ ಎಂದರೆ ಬರಿಯ ಕಟ್ಟಡವಲ್ಲ ; ಅದೊಂದು ಸಂಕೇತ, ದೈವತ್ವದ ಕಲ್ಪನೆ[೧]. ಭಾರತದ ದೇವಾಲಯಗಳು ಸಂಕೇತಗಳ ಜಾಲದಿಂದ ಕೂಡಿದೆ ಎಂಬುದು ದೇವಾಲಯಗಳಲ್ಲಿ ಬಳಸಲ್ಪಟ್ಟಿರುವ ಸಂಕೇತಗಳನ್ನು ನೋಡಿದರೆ ಮನವರಿಕೆಯಾಗುತ್ತದೆ.

ಭಾರತದ ಎಲ್ಲಾ ಸಂಪ್ರದಾಯದ ಚಟುವಟಿಕೆಯ ಮೂಲ ಕೇಂದ್ರವು ದೇವಾಲಯವಾಗಿದೆ. ಪ್ರಾಚೀನ ಕಾಲದಲ್ಲಿ ದೇವಾಲಯವು ಸಮಾಜದ, ಸಾಮಾಜಿಕ ಚಟುವಟಿಕೆಯ ಮೂಲ ಬಿಂದುವೇ ಆಗಿತ್ತು. ದೇವಾಲಯದ ಧಾರ್ಮಿಕ ಆಚರಣೆಗಳಲ್ಲಿ ಉಪಯೋಗಿಸುವ ವಸ್ತುಗಳಾಗಲೀ ಅಥವಾ ಅವುಗಳನ್ನು ಬಳಸುವ ವಿಧಾನವಾಗಲೀ ಕಾರಣವಿಲ್ಲದೆ ನಿಯಮಿಸಿದವಲ್ಲ. ಪ್ರತಿಯೊಂದು ಆಚರಣೆಯಲ್ಲಿ ದೊರೆಯುವ ವಸ್ತುಗಳನ್ನು ಕುರಿತು ವಿಶೇಷವಾದ ಅಧ್ಯಯನವನ್ನು ಮಾಡುವಷ್ಟು ವಿಷಯಗಳು ದೊರೆಯುತ್ತವೆ.

ಧರ್ಮಕ್ಕೂ ಕಲೆಗೂ ಹತ್ತಿರದ ಸಂಬಂಧವಿದೆ. ಮನುಷ್ಯ ಭೂಮಿಯ ಮೇಲೆ ಕಾಣಿಸಿಕೊಂಡಾಗಿನಿಂದಲೂ ಕಲೆಗಳೂ, ಮೂರ್ತಿಗಳೂ ಇದ್ದೇ ಇವೆ. ದೇವಾಲಯದ ಆವರಣವು ಮಾನವನ ಕಲ್ಪನೆ ಮತ್ತು ಆ ಕಲ್ಪನೆಯಿಂದ ಮೂಡಿದ ಮೂರ್ತಿಗಳೆರಡನ್ನೂ ಒಂದು ಮಾಡಲು ಸಹಕಾರಿಯಾಗಿದೆ ಎಂದೂ ಹೇಳಬಹುದು. ಇದರಲ್ಲಿ ಧರ್ಮವೂ ಉಂಟು ಕಲೆಯೂ ಉಂಟು[೨]. ಈ ಧರ್ಮದ ಜೊತೆಯಲ್ಲಿಯೇ ಕಲೆಯು ಬೆಳೆದು ಬಂದಿದೆ ಎಂದರೆ ತಪ್ಪಾಗಲಾರದು.

ಪ್ರಕೃತಿಯಲ್ಲಿ ನಡೆಯುವ ಪ್ರಳಯಗಳು ಮನುಷ್ಯನ ಹತೋಟಿಯನ್ನು ಮೀರಿ ನಿಂತಿರುವಂತಹವು. ಈ ಪ್ರಕೃತಿಯ ಪ್ರಕೋಪಗಳಿಗೆ ಬೆದರುವ ಮನುಷ್ಯ ತನ್ನ ಕಲ್ಪನಾ ಶಕ್ತಿಯಿಂದ ಅವುಗಳನ್ನು ನಿಯಂತ್ರಿಸುವ ಸಲುವಾಗಿ ಪ್ರಕೃತಿಯನ್ನೇ ದೈವವನ್ನಾಗಿಸಿ ಪೂಜಿಸತೊಡಗಿದನು. ತನ್ನ ಬದುಕಿಗೆ ಅವಶ್ಯವಿರುವ ಗಿಡ, ಮರಗಳನ್ನು, ಬೆಳಕನ್ನು ಕೊಡುವ ಸೂರ್ಯನನ್ನು ಹೀಗೆ ಇನ್ನೂ ಹಲವಾರು ಸೇರಿದಂತೆ ಪ್ರಕೃತಿಯಲ್ಲಿ ದೊರೆಯುವ ಇತರೆ ಎಲ್ಲಾ ವಸ್ತುಗಳನ್ನು ಆರಾಧಿಸತೊಡಗಿದನು.

ಮಾನವನು ಜೀವನವನ್ನು ಸಾಗಿಸಲು ಅವಶ್ಯವಿರುವ ಪಂಚಭೂತಗಳು– ಭೂಮಿ, ಅಗ್ನಿ, ವಾಯು, ನೀರು ಮತ್ತು ಆಕಾಶ ಇವು ಕೂಡಾ ಅವನ ಆಚರಣೆಯಲ್ಲಿ ದೈವತ್ವವನ್ನು ಪಡೆದವು. ಹೀಗೆ ಪ್ರಾರಂಭಗೊಂಡವು ಆರಾಧನೆ, ಆಚರಣೆಗಳು ಎಂದು ತೋರುತ್ತದೆ. ಈ ಎಲ್ಲಾ ಆಚರಣೆಗೆ ಜನಪದರ ಕಲ್ಪನೆಗಳೇ ಮೂಲ ಆಧಾರವಾಗಿದೆ. ಅನಾದಿ ಕಾಲದಿಂದಲೂ ಬೆಳೆಸಿಕೊಂಡು, ಪೋಷಿಸಿಕೊಂಡು ಬಂದ ಕಲೆಗಳೆಲ್ಲವೂ ಆರಾಧನಾ ಸಂದರ್ಭದಲ್ಲಿಯೇ ಹುಟ್ಟಿಬಂದವುಗಳಾಗಿವೆ[೩]. ಈ ರೀತಿಯಾಗಿ ಆರಾಧನಾ ಸಂದರ್ಭದಲ್ಲಿ

---

೧. ಪ್ರೊ. ಎಸ್.ಕೆ. ರಾಮಚಂದ್ರರಾವ್‌ರಾವ್: **ಭಾರತದ ದೇವಾಲಯ ನೆಲೆ–ಹಿನ್ನೆಲೆ**, ಪುಟ–೩೯

೨. ಪ್ರೊ. ಎಸ್.ಕೆ. ರಾಮಚಂದ್ರರಾವ್‌ರಾವ್: **ಭಾರತದ ದೇವಾಲಯ ನೆಲೆ–ಹಿನ್ನೆಲೆ**, ಪುಟ–೨

೩. ಡಾ. ಎಸ್.ಸಿ. ಪಾಟೀಲ: **ಕರ್ನಾಟಕದ ಜನಪದ ಚಿತ್ರಕಲೆ**, ಪುಟ–೧೩,

ಹುಟ್ಟಿದ ಧಾರ್ಮಿಕ ಚಿಂತನೆಯನ್ನು ಹೊತ್ತ ಕಲೆಗಳು ಮುಂದೆ ಅವುಗಳಲ್ಲಿನ ಕಲಾತ್ಮಕ ದೃಷ್ಟಿಯನ್ನು ಮತ್ತಷ್ಟು ಹೆಚ್ಚಿಸಿಕೊಂಡವು.

ಮನುಷ್ಯ ತಾನು ಭೂಮಿಯಲ್ಲಿ ಸೃಷ್ಟಿಯಾದಾಗಿನಿಂದ ನಾಗರಿಕನಾದುದಲ್ಲ. ತನ್ನ ಜೀವನದಲ್ಲಿ ಸಿಗುವ ಪ್ರತಿಯೊಂದು ಹೊಸ ಅನುಭವದಿಂದ ಪಡೆದ ಬುದ್ಧಿಯಿಂದ ತನ್ನ ಜೀವನದ ಶೈಲಿಯನ್ನು ತಿದ್ದುವುದು ಮಾನವನ ಸಹಜ ಗುಣಗಳಲ್ಲೊಂದು. ಹೀಗೆ ಒಂದರ ನಂತರ ಮತ್ತೊಂದು ಬದಲಾವಣೆಗಳನ್ನು ಸೇರಿಸಿಕೊಂಡು ಜೀವನವನ್ನು ಕಳೆದ ಮಾನವನು ತನ್ನ ಬದುಕಿನಲ್ಲೂ ಅಭಿವೃದ್ಧಿಯನ್ನು ಹೊಂದುತ್ತಾ ಬಂದನು ಎಂದರೆ ತಪ್ಪಾಗಲಾರದು.

ಮನುಷ್ಯನು ಯಾವುದನ್ನೂ ಪ್ರಯತ್ನ ಪೂರ್ವಕವಾಗಿ ಕಲಿಯಬೇಕು ಎಂದುಕೊಂಡವನಲ್ಲ. ಆತನ ಅವಶ್ಯಕತೆಗೆ ಅನುಗುಣವಾಗಿ, ಅವನಿಗರಿಯದೆ ಸಹಜವಾಗಿ ಕೊರತೆಯನ್ನು ನೀಗಿಸುವ ರೂಪದಲ್ಲಿ ಎಲ್ಲವೂ ಜನ್ಮ ತಾಳಿವೆ[೪]. ಅವನ ಜೀವನದಲ್ಲಿ ಆಗಿರುವ ಬದಲಾವಣೆಗೆ ಅವನಲ್ಲಿರುವ ಮನೋಭಾವ ಅದರಲ್ಲೂ ವಿಶೇಷವಾಗಿ ಅವನ ಹುಡುಕಾಟದ ದೃಷ್ಟಿ ಹಾಗೂ ಅವನ ವಿವೇಚನೆಯ ಶಕ್ತಿಯೇ ಕಾರಣ ಎಂದು ಹೇಳಬಹುದು.

ನೈಸರ್ಗಿಕವಲ್ಲದ ಕೃತಕವಾಗಿ ತಯಾರಿಸುವ ಪ್ರತಿಯೊಂದು ವಸ್ತುವನ್ನೂ ಅವನು ಆಕಸ್ಮಿಕವಾಗಿ ಕಂಡುಕೊಂಡದ್ದೇ ಆಗಿದೆ. ಆಕಸ್ಮಿಕ ಘಟನೆಗಳು ಮತ್ತೆ ಮತ್ತೆ ಪುನರಾವರ್ತನೆಯಾದಾಗ ಅವನಲ್ಲಿರುವ ಬುದ್ಧಿಶಕ್ತಿಯು ಜಾಗೃತಗೊಂಡಿತು. ಅವುಗಳನ್ನು ಕುರಿತು ವಿಶ್ಲೇಷಿಸಿದಾಗ ಅವುಗಳ ಭೌತಿಕ ತತ್ವಗಳು ದೊರಕಿದವು ಎನ್ನಬಹುದು. ಈ ಭೌತಿಕ ತತ್ವಗಳನ್ನು ಅರಿತ ಮಾನವನ ಜೀವನ ಶೈಲಿಯಲ್ಲಿ ಆದ ಬದಲಾವಣೆಗಳು ಅಭಿವೃದ್ಧಿಯ ಕಡೆಗೆ ದಾರಿ ಮಾಡಿಕೊಟ್ಟವು. ಇದೇ ರೀತಿಯ ಪ್ರಗತಿಯ ಹಿನ್ನೆಲೆಯನ್ನು ಹೊತ್ತು ಬೆಳೆದಂತಹವು ದೇವಾಲಯಗಳು.

ದೇವಾಲಯ ಎಂದ ಕೂಡಲೆ ನೆನಪಿಗೆ ಬರುವುದು ಒಂದು ಗುಡಿ, ಗುಡಿಯ ಮುಂದೆ ದೀಪಸ್ತಂಭ, ಧ್ವಜಸ್ತಂಭ ಅಥವಾ ಗರುಡಗಂಬ, ಗುಡಿಯೊಳಗೆ ಮೂಲ ಮೂರ್ತಿ, ಮೂಲ ದೇವರಿಗೆ ಮಾಡುವ ಆರತಿ, ಪೂಜೆ ಮುಂತಾದವು. ದೇವಾಲಯದ ಆವರಣದಲ್ಲಿರುವ ಎಲ್ಲಾ ವಿಧದ ವಾಸ್ತು ರಚನೆ, ವಸ್ತು ವಿಷಯಗಳು, ಆಚರಣೆಗಳು ಕುತೂಹಲವನ್ನು ಕೆರಳಿಸವಂತಹ ವಿಷಯಗಳನ್ನು, ಉದ್ದೇಶಗಳನ್ನು ಹೊಂದಿವೆ.

ಪ್ರತಿಯೊಂದು ವಸ್ತು ವಿಷಯವು ದೇವಾಲಯದ ಆವರಣದಲ್ಲಿರುವ ಉದ್ದೇಶ, ಅವುಗಳ ಸ್ವರೂಪಗಳು ಏನೆಂಬುದರನ್ನು ಕುರಿತು ಪ್ರಶ್ನೆ ಮಾಡುತ್ತವೆ. ಉದಾಹರಣೆಗೆ ದೇವಾಲಯದ ಮೂಲ ಮೂರ್ತಿಗೆ ಮಾಡುವ ಆರತಿಯನ್ನು ಕುರಿತು ಪ್ರಶ್ನೆಗಳು ಏಳುತ್ತವೆ. ಹಣತೆಯಲ್ಲಿನ ಸಣ್ಣ ದೀಪವು ಏನನ್ನು ಪ್ರತಿನಿಧಿಸುತ್ತದೆ, ಅಲ್ಲಿ ಅದನ್ನು

೪. ಎ. ಸೀತಾರಾಮಯ್ಯ: **ಕಲಾನುಭವ**, ಪುಟ-೨೭,

ಬಳಸುವ ಉದ್ದೇಶವಾದರೂ ಏನು ಎಂಬ ಪ್ರಶ್ನೆಗಳು ಚಿಕ್ಕದಾದರೂ ಕುತೂಹಲಕಾರಿಯಾದುದಾಗಿವೆ. ಸಣ್ಣ ದೀಪವೇ ಇಷ್ಟೊಂದು ಕುತೂಹಲಕಾರಿಯಾದಾಗ ಇನ್ನು ದೀಪಸ್ತಂಭಗಳು ಎಷ್ಟು ಮಹತ್ತರದ ವಿಷಯಗಳನ್ನು ಹೊಂದಿರಬಹುದು ಎಂಬ ಯೋಚನೆ ಬರುವುದು ಸಹಜ.

ಪ್ರಾಚೀನ ಭಾರತದಲ್ಲಿ ದೀಪಸ್ತಂಭಗಳು ಇದ್ದಂತಹ ಪುರಾವೆಗಳು ದೊರೆಯುತ್ತವೆ. ಪ್ರಾಚೀನ ಭಾರತದ ಇತಿಹಾಸದ ಮೂಲವೆಂದು ಗುರುತಿಸಲ್ಪಡುವ ಸಿಂಧೂ ನದಿ ನಾಗರಿಕತೆಯ ತಾಣಗಳಾದ ಹರಪ್ಪಾ ಮತ್ತು ಮೊಹೆಂಜೊದಾರೋಗಳಲ್ಲಿ ಬೀದಿ ದೀಪಗಳು ಇದ್ದುವೆಂದು ಉತ್ಖನನದಿಂದ ತಿಳಿದು ಬಂದಿದೆ. ಪ್ರತಿಯೊಂದು ಮುಖ್ಯ ಬೀದಿಯಲ್ಲೂ ಒಂದೊಂದು ದೀಪಸ್ತಂಭವಿರುತ್ತಿತ್ತು ಎಂದು ಅಲ್ಲಿ ದೊರೆತ ಪುರಾವೆಗಳು ತಿಳಿಸುತ್ತವೆ. ಇವು ಬೀದಿ ದಿಪಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು. ಸಿಂಧೂ ನದಿ ನಾಗರಿಕತೆಯ ನಂತರದ ಕಾಲದಲ್ಲಿ ನಿರ್ಮಿಸಿದಂತಹ ಯಾವುದೇ ರಚನೆಗಳು ದೊರೆತಿಲ್ಲ.

ಆನಂತರ ದೊರೆಯುವ ವಾಸ್ತುಶಿಲ್ಪಗಳ ಪ್ರಕಾರ ಮೌರ್ಯರ ಕಾಲದಲ್ಲಿ ಸ್ತಂಭಗಳು ಇದ್ದುವೆಂದು ತಿಳಿದು ಬರುತ್ತದೆ. ಈ ಕಂಬಗಳು ಯಾವುದೇ ಕಟ್ಟಡದ ಜೊತೆಗಿರದೆ ವಿಶೇಷವಾದ ಸ್ಮಾರಕಗಳಂತೆ ನಿಂತಿರುವುದನ್ನು ಈಗಲೂ ನೋಡಬಹುದು. ದೀಪಸ್ತಂಭಗಳನ್ನು ತಿಳಿಯುವ ಮೊದಲು ಸ್ತಂಭ ಮತ್ತು ಅದರ ಚಾರಿತ್ರಿಕ ಬೆಳವಣಿಗೆಯನ್ನು ತಿಳಿಯುವುದು ಅವಶ್ಯಕವೆನಿಸುತ್ತದೆ. ಈ ನಿಟ್ಟಿನಲ್ಲೂ ಈ ಅಧ್ಯಯನವು ಸಂಪೂರ್ಣವಾಗಿ ಸಹಕಾರಿಯಾಗಿ ನಿಲ್ಲುತ್ತದೆ.

ದೇವಾಲಯದ ಹೊರ ಆವರಣದಲ್ಲಿ ಕಾಣುವ ದೀಪಸ್ತಂಭಗಳನ್ನು ಕುರಿತು ವಿಶೇಷವಾಗಿ ಹೇಳುವಂತಹ ಯಾವುದೇ ಗ್ರಂಥಗಳು ಇಲ್ಲದಿರುವುದು ಆಶ್ಚರ್ಯದ ಸಂಗತಿ. ಶಬ್ದಾರ್ಥದ ನಿಟ್ಟಿನಲ್ಲಿ ಹೇಳುವುದಾದರೆ ದೀಪ ಎಂದರೆ ಬೆಳಕು, ದೀಪಸ್ತಂಭ ಎಂದರೆ ಬೆಳಕನ್ನು ಹೊತ್ತಂತಹ ಸ್ತಂಭ, ಬೆಳಕನ್ನು ಕೊಡುವ ಉದ್ದೇಶಕ್ಕಾಗಿಯೇ ನಿರ್ಮಾಣಗೊಂಡ ಒಂದು ಸ್ತಂಭ ಎಂದಾಗುತ್ತದೆ. ಹೆಚ್ಚಾಗಿ ದೀಪಸ್ತಂಭಗಳನ್ನು ದೇವಾಲಯದ ಹೊರ ಆವರಣಗಳಲ್ಲಿ ಸ್ಥಾಪಿಸಲಾಗಿರುತ್ತದೆ. ಈ ದೀಪಸ್ತಂಭಗಳು ದೇವಾಲಯದ ಹೊರ ಆವರಣದಲ್ಲಿ ಸ್ಥಾಪಿಸಲು ಕಾರಣವೇನು ಎಂದು ತಿಳಿಯುವುದು ಈ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ.

ಮಾನವನ ಸುತ್ತಮುತ್ತ ಇರುವ ಪರಿಸರದಲ್ಲಿ ಸೇರ್ಪಡೆಯಾಗಿರುವ ಪ್ರತಿಯೊಂದು ಮಾನವ ನಿರ್ಮಿತ ವಸ್ತುವಿಗೂ ಚಾರಿತ್ರಿಕ ಹಿನ್ನೆಲೆಯಿರುವುದು ತಿಳಿದು ಬರುತ್ತದೆ. ಹಾಗಿದ್ದ ಪಕ್ಷದಲ್ಲಿ ದೀಪಸ್ತಂಭವು ಚಾರಿತ್ರಿಕವಾಗಿ ಯಾವ ರೀತಿಯಲ್ಲಿ ಬೆಳವಣಿಗೆಯನ್ನು ಪಡೆಯಿತು ಮತ್ತು ಪ್ರಸ್ತುತ ಸಮಯದಲ್ಲಿ ಅದರ ಸ್ಥಾನ ಮಾನಗಳೇನು ಎಂಬುವುದನ್ನು ಕುರಿತು ತಿಳಿಯುವುದು ಸೂಕ್ತವಾಗುತ್ತದೆ. ಈ ರೀತಿಯಾಗಿ ಬೆಳೆದು ಬಂದ ದೀಪಸ್ತಂಭದ ಚಾರಿತ್ರಿಕ ಬೆಳವಣಿಗೆಯನ್ನು ಕುರಿತು ತಿಳಿಯುವುದನ್ನು ಈ ಅಧ್ಯಯನವು ಒಳಗೊಂಡಿರುತ್ತದೆ.

ಕಲೆಯ ಅಧ್ಯಯನವನ್ನು ಮಾಡುವಾಗ ಜನಪದ ಅಥವಾ ಶಿಷ್ಟಪದವೆಂದು ವಿಂಗಡಣೆ ಮಾಡಬೇಕಾಗುತ್ತದೆ. ಜನಪದ ಕಲೆಯಲ್ಲಿ ಮಾನವನು ತನಗೆ ತೋಚಿದಂತೆ ತನ್ನ ಸಮೂಹ ಒಪ್ಪುವ ನಂಬಿಕೆ, ಧರ್ಮಗಳನ್ನು ಆಧರಿಸಿ ನಿರ್ಮಾಣ ಮಾಡುತ್ತಾನೆ. ಶಿಷ್ಟಪದ ಕಲೆಯು ಕೇವಲ ಒಂದು ಸಮೂಹಕ್ಕಷ್ಟೇ ಮೀಸಲಾಗಿರುವುದಿಲ್ಲ. ಅದು ಇಡೀ ಒಂದು ಧರ್ಮವನ್ನು ಪ್ರತಿನಿಧಿಸುವ ಕಲೆಯಾಗಿರುತ್ತದೆ. ಜನಪದ ಕಲೆ ಮತ್ತು ಶಿಷ್ಟಪದ ಕಲೆ ಎಂದು ಎರಡು ವಿಭಾಗಗಳು ಕಲೆಯಲ್ಲಿ ಇರುವುದನ್ನು ಕಾಣುತ್ತೇವೆ. ಇದೇ ರೀತಿಯಾಗಿ ಶಿಲ್ಪಕಲೆಯಲ್ಲಿ ಜನಪದ ಶಿಲ್ಪಕಲೆ ಹಾಗೂ ಶಿಷ್ಟಪದ ಶಿಲ್ಪಕಲೆಯೆಂದು ಗುರುತಿಸಬಹುದಾಗಿದೆ. ಶಿಷ್ಟಪದ ಕಲೆಗೆ ಮೂಲ ಜನಪದ ಶಿಲ್ಪಕಲೆಯೇ ಆಗಿದೆ ಎನ್ನುವುದನ್ನು ಇಲ್ಲಿ ಮರೆಯುವಂತಿಲ್ಲ.

ಜನಪದರು ಯಾವುದೇ ಶಾಸ್ತ್ರೀಯ ಚೌಕಟ್ಟಿಗೆ ಒಳಪಡದೆ ತಮ್ಮ ಪೂರ್ವಜರು ನಡೆಸಿಕೊಂಡು ಬಂದ ಆಚರಣೆಗಳನ್ನು ಮುಂದುವರೆಸುತ್ತಾ ಬಂದಿರುವುದು ಕಾಣುತ್ತದೆ. ಇದೇ ಜನಪದ ಕಲೆಗೆ ಶಾಸ್ತ್ರೀಯವಾದ ನಿಯಮಗಳನ್ನು ಹಾಕಿ ಅವುಗಳಿಗೆ ನಿಗಧಿತ ವಿಧಿವಿಧಾನಗಳನ್ನು ರಚಿಸಿರುವುದು ಶಿಷ್ಟಪದ ಕಲೆ ಹಾಗೂ ಧರ್ಮದಲ್ಲಿ ಕಾಣುತ್ತದೆ. ಕಲೆಯು ಜನಪದವಾಗಲಿ, ಶಿಷ್ಟಪದವಾಗಲಿ ಇವೆರಡರ ಉದ್ದೇಶ ಒಂದೇ ಆಗಿರುತ್ತದೆ. ಅವುಗಳ ಧ್ಯೇಯ ಮತ್ತು ಉದ್ದೇಶಗಳನ್ನು ಅಭಿವ್ಯಕ್ತಿಸುವ ರೀತಿಯು ಭಿನ್ನವಾಗಿದೆಯಷ್ಟೇ ಎಂದು ಹೇಳಬಹುದು. ಇವೆಡರಲ್ಲೂ ಜೀವನದ ಪರಿಕಲ್ಪನೆ, ಆತ್ಮ ಪರಮಾತ್ಮನ ಸಂಬಂಧ ಒಂದೇ ಆದರೂ ಆಚರಣೆಯ ವಿಧಿವಿಧಾನಗಳು ಭಿನ್ನವಾಗಿರುವುದು ತಿಳಿದು ಬರುತ್ತದೆ.

ಕಲೆಯು ಜನಪದವಾಗಲೀ ಇಲ್ಲವೇ ಶಿಷ್ಟಪದವಾಗಲೀ ಆಯಾ ಸಮೂಹದ ಇಲ್ಲವೇ ಧರ್ಮದ ಪುರಾಣಗಳ ಆಧಾರದ ಮೇಲೆ ರೂಪುಗೊಂಡಿರುತ್ತದೆ ಎಂಬುದನ್ನು ಗಮನಿಸಬಹುದು. ಪುರಾಣಗಳು ಒಂದೇ ಆದರೂ ಜನಪದ ಕಲೆ ಹಾಗೂ ಶಿಷ್ಟಪದ ಕಲೆಗಳಲ್ಲಿ ಅವುಗಳ ಅಭಿವ್ಯಕ್ತಿ ಭಿನ್ನವಾಗಿರುತ್ತದೆ ಎಂದಷ್ಟೇ ಹೇಳಲು ಸಾಧ್ಯ. ಪುರಾಣಗಳ ಉಗಮ ತಿಳಿಯುವುದು ಕಷ್ಟ ಆದರೂ ಯಾವುದೇ ಧರ್ಮದ ಅಸ್ತಿತ್ವಕ್ಕೆ ಕಾರಣವಾಗಿರುವುದೇ ಅವುಗಳ ವಿಶೇಷತೆ ಎನ್ನಬಹುದು. ಹಿಂದೂ ಧರ್ಮದಲ್ಲೂ ಪುರಾಣಗಳು ಇರುವುದನ್ನು ನೋಡಬಹುದು. ಈ ಪುರಾಣಗಳಲ್ಲಿ ಪಂಚಭೂತಗಳನ್ನು ಕುರಿತು ಹೇಳಿರುವ ಉಲ್ಲೇಖಗಳು ದೊರೆಯುತ್ತವೆ.

ಪಂಚಭೂತಗಳಿಗೆ ಮಾನವನಂತೆ ರೂಪ ಆಕಾರಗಳನ್ನು ಕೊಟ್ಟು ದೇವಾನುದೇವತೆಗಳ ಜೊತೆಗೆ ಸಂಬಂಧವಿರುವಂತೆ ಪುರಾಣಗಳಲ್ಲಿ ಕಲ್ಪಿಸಲಾಗಿದೆ. ಈ ದೃಷ್ಟಿಯ ಆಧಾರದ ಮೇಲೆ ಪುರಾಣದಲ್ಲಿ ಪಂಚಭೂತಗಳಲ್ಲಿ ಒಂದಾದ ಅಗ್ನಿಯನ್ನು ಕುರಿತು ಅದರ ಮಹತ್ವವನ್ನು ಕುರಿತು ವಿಷಯಗಳು ದೊರೆಯುತ್ತವೆ. ಪುರಾಣಗಳಲ್ಲಿ ಅಗ್ನಿಯ ಜೊತೆಗೆ ಅಗ್ನಿಸ್ತಂಭಗಳನ್ನು ಕುರಿತು ಉಲ್ಲೇಖಗಳು ದೊರೆಯುತ್ತವೆ. ದೀಪಸ್ತಂಭದ ರಚನೆಯು ಲಿಂಗದ ರೂಪವನ್ನು ಹೊಂದಿದೆ ಎಂಬ ಹಿನ್ನೆಲೆಯಲ್ಲಿ ಲಿಂಗದ ರಚನಾ

ವಿಧಾನವನ್ನು ಕುರಿತು ತಿಳಿಯಬೇಕಾಗಿದೆ. ಇಲ್ಲಿ ಲಿಂಗ ಮತ್ತು ಪೀಠದ ಮಹತ್ವವನ್ನು ಅರಿಯುವುದು ಅವಶ್ಯಕವಾಗುತ್ತದೆ. ಆದ್ದರಿಂದ ದೀಪಸ್ತಂಭಗಳ ಪೌರಾಣಿಕ ಹಿನ್ನೆಲೆಯಲ್ಲಿ ಲಿಂಗ, ಪೀಠಗಳನ್ನು ಕುರಿತು ವಿವೇಚಿಸುವುದನ್ನು ಈ ಅಧ್ಯಯನವು ಒಳಗೊಂಡಿದೆ.

ವಿಶ್ವದ ಯಾವುದೇ ಜಾತಿಯಾಗಲೀ ಧರ್ಮವಾಗಲೀ ಸೂರ್ಯನ ಬೆಳಕನ್ನು ಇಲ್ಲವೇ ಸೂರ್ಯನನ್ನು ಪ್ರತಿನಿಧಿಸುತ್ತದೆ ಎನ್ನಲಾಗುವ ದೀಪದ ಬೆಳಕನ್ನು ಆರಾಧಿಸುವುದನ್ನು ನೋಡಬಹುದು. ಸೂರ್ಯನು ಬೆಳಕನ್ನು ಕೊಡುವುದರಿಂದ ಮಾನವನ ದೃಷ್ಟಿಯಲ್ಲಿ ದೈವತ್ವವನ್ನು ಪಡೆದ. ರಾತ್ರಿಯ ಹೊತ್ತು ಸೂರ್ಯನಿಲ್ಲದೆ ಕತ್ತಲಿರುವುದರಿಂದ ಕೃತಕ ಬೆಳಕನ್ನು ಮಾನವ ಬಳಸಿಕೊಂಡ. ರಾತ್ರಿಯ ಅಂಧಕಾರವನ್ನು ತೊಡೆದು ಹಾಕುವ ಬೆಳಕು ಮಾನವನಿಗೆ ಮಹತ್ವವಾದುದಾಯಿತು.

ಬೆಳಕು ಎನ್ನುವುದು ಜಗತ್ತಿನ ಜೀವಗಳೆಲ್ಲಕ್ಕೂ ಅತ್ಯಂತ ಅವಶ್ಯವಿರುವುದಾಗಿದೆ. ಬೆಳಕು ಚೇತನದ ಸ್ವರೂಪವೂ ಆಗಿದೆ. ದೀಪವು ಕೇವಲ ಬೆಳಕಿಗಾಗಿ ಅಷ್ಟೇ ಅಲ್ಲದೆ ಧಾರ್ಮಿಕವಾಗಿಯೂ ಆರಾಧಿಸಲ್ಪಡುತ್ತದೆ. ಬೆಳಕು ಧರ್ಮದ ಜೊತೆಗೆ ಆಧ್ಯಾತ್ಮಿಕತೆಯ ಬೆಳವಣಿಗೆಗೂ ಸಹಕಾರಿಯಾಯಿತು.

ಭಾರತದಲ್ಲಿ ಧಾರ್ಮಿಕ ದೀಪಗಳು ಹಲವಾರು ದೊರೆಯುತ್ತವೆ. ಇವುಗಳಲ್ಲಿ ನಂದಾದೀಪ, ಆರತಿ ದೀಪ, ಕಾಲುದೀಪ, ವೃಕ್ಷದೀಪ, ತೂಗುದೀಪ ಮುಂತಾದವುಗಳು ಪ್ರಮುಖವಾದವು. ದೇವಾಲಯದಲ್ಲಿನ ದೀಪಗಳ ಸ್ಥಾನ ಹಾಗೂ ಅವುಗಳನ್ನು ಆಚರಣೆಯಲ್ಲಿ ಬಳಸುವ ವಿಧಿ ವಿಧಾನಗಳನ್ನು ತಿಳಿಯುವುದು ಅತ್ಯವಶ್ಯಕವಾಗುತ್ತದೆ. ಧಾರ್ಮಿಕ ದೀಪಗಳು ಕೇವಲ ಧಾರ್ಮಿಕ ಆಚರಣೆಗಾಗಿ ಉಪಯೋಗಿಸಲ್ಪಟ್ಟರೂ ಮಾನವನ ಮಾನಸಿಕ ವಿಕಾಸದೊಡನೆ ಅವು ಕೂಡ ಕಲಾತ್ಮಕತೆಯನ್ನು ಪಡೆದವು. ಈ ದೀಪಗಳು ಕಲಾವಿದನ ಕಲಾಕೌಶಲ್ಯಕ್ಕೆ ತಕ್ಕಂತೆ ಅವನ ಪರಿಸರಕ್ಕೆ ಅನುಗುಣವಾಗಿ ಕಲಾತ್ಮಕ ಬೆಳವಣಿಗೆಯನ್ನು ಹೊಂದಿದವು. ಈ ಅಧ್ಯಯನದಲ್ಲಿ ದೀಪಗಳು, ಅವುಗಳ ವಿಧಗಳು ಹಾಗೂ ಕಲಾತ್ಮಕತೆಯನ್ನು ಕುರಿತು ಹೇಳಲಾಗಿದೆ.

ಯಾವುದೇ ಸಂಸ್ಕೃತಿಯ ನೆಲೆಯನ್ನು ತಿಳಿಯುವ ಹಿನ್ನೆಲೆಯಲ್ಲಿ ಪ್ರಾಚೀನ ಶಾಸನಗಳು ಬಹು ಮುಖ್ಯವಾದ ಸ್ಥಾನವನ್ನು ಪಡೆಯುತ್ತವೆ. ಅಂದಿನ ಕಾಲದ ರಾಜರ, ಅವರ ಧ್ಯೇಯೋದ್ದೇಶಗಳನ್ನು ತಿಳಿಯಲು ಶಾಸನಗಳು ಸಹಕಾರಿಯಾಗಿವೆ. ಶಾಸನಗಳು ಹೆಚ್ಚಾಗಿ ಕಲ್ಲಿನ ಮೇಲೆ ಕೆತ್ತಲಾಗಿರುತ್ತದೆ, ಇಲ್ಲವೇ ತಾಮ್ರದ ಹಾಳೆಯ ಮೇಲೆ ರಚಿಸಲಾಗಿರುತ್ತದೆ. ದೇವಾಲಯದ ಹೊರ ಆವರಣದಲ್ಲಿ ಇಲ್ಲವೆ ಒಳ ಆವರಣದ ಯಾವುದಾದರೂ ಸ್ತಂಭಗಳ ಮೇಲೆ, ಗೋಡೆಯ ಮೇಲೆ, ಮೂಲ ಮೂರ್ತಿಯ ಪೀಠದ ಮೇಲೆ ಹೀಗೆ ಇನ್ನೂ ಮುಂತಾದ ಸ್ಥಳಗಳಲ್ಲಿ ಕೆತ್ತಿರುವ ಶಾಸನಗಳು ದೊರೆಯುತ್ತವೆ.

ಪ್ರಾಚೀನ ಕಾಲದಲ್ಲಿ ರಾಜ ಮಹಾರಾಜರು ತಾವು ಮಾಡಿದ ಕೆಲಸ ಕಾರ್ಯಗಳನ್ನು

ಕುರಿತು ಶಾಸನಗಳನ್ನು ಕೆತ್ತಿಸುತ್ತಿದ್ದರು. ಈ ರೀತಿಯ ಶಾಸನಗಳಲ್ಲಿ ದೀಪದಾನ ಶಾಸನಗಳು ದೊರೆಯುತ್ತವೆ. ದೀಪವನ್ನು ದಾನಮಾಡುವುದು ಪುಣ್ಯದ ಕೆಲಸವೆಂಬ ನಂಬಿಕೆಯಿಂದ ತಾವು ಮಾಡಿದ ದೀಪದಾನಗಳನ್ನು ಕುರಿತು ದೀಪಸ್ತಂಭದ ಮೇಲೆ ಇಲ್ಲವೇ ಇನ್ನಾವುದಾದರೂ ಕಲ್ಲು ಕಂಬದ ಮೇಲೆ ಕೆತ್ತಿಸುತ್ತಿದ್ದರು. ದೀಪದಾನ ಶಾಸನಗಳು ಹೆಚ್ಚಾಗಿ ನಂದಾದೀಪಕ್ಕಾಗಿ ದಾನ ಮಾಡಿದುದನ್ನು ಕುರಿತು ಹೇಳುತ್ತವೆ. ಹೀಗೆ ಕೆತ್ತಿರುವಂತಹ ದೀಪದಾನ ಶಾಸನಗಳ ವಿಶ್ಲೇಷಣೆಯನ್ನು ಈ ಅಧ್ಯಯನವು ತಿಳಿಸುತ್ತದೆ.

ದೇವಾಲಯಗಳ ಒಳ ಆವರಣದಷ್ಟೇ ಗಂಭೀರವಾಗಿ ಹೊರ ಆವರಣವನ್ನೂ ನಿರ್ಮಿಸಲಾಗಿರುತ್ತದೆ. ದೇವಾಲಯಗಳ ಹೊರ ಆವರಣದಲ್ಲಿ ಅನೇಕ ವಿಧದ ಪ್ರಾಕಾರಗಳು ಇರುವುದನ್ನು ಕಾಣಬಹುದು. ದೇವಾಲಯದ ಹೊರ ಆವರಣವು ಹೆಚ್ಚಾಗಿ ಸ್ತಂಭಗಳನ್ನು ಹೊಂದಿರುತ್ತದೆ. ವಿವಿಧ ವಿನ್ಯಾಸದ ಕಂಬಗಳು ದೇವಾಲಯದ ಆವರಣದಲ್ಲಿ ವಿಶಿಷ್ಟವಾದ ಸ್ಥಾನಗಳನ್ನು ಪಡೆದಿರುವುದು ತಿಳಿದು ಬರುತ್ತದೆ. ಇದರಲ್ಲಿ ನಂದಿಗಂಬ, ಧ್ವಜಸ್ತಂಭ, ಬಲಿಪೀಠ, ಗರುಡಗಂಬ ಇಲ್ಲವೇ ದೀಪಸ್ತಂಭ ಮುಂತಾದವುಗಳು ಪ್ರಮುಖವಾಗಿ ದೇವಾಲಯದ ವಾಸ್ತು ರಚನೆಗೆ ಸಂಬಂಧಿಸಿದುದಾಗಿವೆ.

ಕೆಲವು ದೇವಾಲಯಗಳ ಆವರಣದಲ್ಲಿ ವೀರಗಲ್ಲುಗಳಾದ ಗರುಡರಗಂಬಗಳು ಇರುವುದನ್ನೂ ನೋಡಬಹುದು. ಕೆಲವು ದೇವಾಲಯಗಳಲ್ಲಿ ಜಯಸ್ತಂಭ, ಯೂಪಸ್ತಂಭ, ತೋರಣಗಂಬ, ಉಯ್ಯಾಲೆಗಂಬ, ಗಂಟೆಕಂಬ ಮುಂತಾದವುಗಳು ಇರುವುದು ಕಾಣುತ್ತದೆ. ಈ ವಿವಿಧ ವಿನ್ಯಾಸದ ಕಂಬಗಳಲ್ಲಿನ ಸಾಮ್ಯ ಹಾಗೂ ಅಂತರಗಳನ್ನು ಕುರಿತು, ದೇವಾಲಯದ ಹೊರ ಅವರಣದಲ್ಲಿರುವ ಅವುಗಳ ಮಹತ್ವವನ್ನು ಕುರಿತು ಚರ್ಚಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಭಾರತೀಯರ ಮನೆ, ದೇವಾಲಯಗಳು ವಾಸ್ತುಶಾಸ್ತ್ರವನ್ನು ಆಧರಿಸಿ ನಿರ್ಮಾಣಗೊಂಡಿರುವುದು ವಿಶೇಷವೇ ಆಗಿದೆ. ಅದರಲ್ಲೂ ದೇವಾಲಯಗಳ ರಚನೆಯಲ್ಲಿ ವಾಸ್ತುಶಾಸ್ತ್ರವು ಪ್ರಾಧಾನ್ಯತೆಯನ್ನು ಪಡೆದಿರುವುದು ತಿಳಿದು ಬರುತ್ತದೆ. ದೇವಾಲಯದಲ್ಲಿ ನವರಂಗ, ಮುಖಮಂಟಪ, ಗರ್ಭಗುಡಿ ಮುಂತಾದ ಪ್ರಾಕಾರಗಳ ಜೊತೆಗೆ ಹೊರ ಆವರಣದಲ್ಲಿರುವ ನಂದಿಸ್ತಂಭ, ಧ್ವಜಸ್ತಂಭ, ಬಲಿಪೀಠ, ದೀಪಸ್ತಂಭಗಳ ರಚನೆಯನ್ನು ತಿಳಿಯ ಬೇಕಾಗುತ್ತದೆ. ಈ ಎಲ್ಲಾ ಪ್ರಾಕಾರಗಳೂ ವಾಸ್ತುಶಾಸ್ತ್ರದ ಆಧಾರದ ಮೇಲೆ ನಿರ್ಮಾಣಗೊಂಡಿವೆ. ವಾಸ್ತುಶಾಸ್ತ್ರದಲ್ಲಿ ಈ ಎಲ್ಲಾ ಪ್ರಾಕಾರಗಳ ಮಾನ ಅಂದರೆ ಅಳತೆ, ಪ್ರಮಾಣಗಳನ್ನು ತಿಳಿಸಲಾಗಿದೆ.

ವಾಸ್ತುಶಾಸ್ತ್ರ ಗ್ರಂಥಗಳಲ್ಲಿ ಅವುಗಳ ಪ್ರತಿಷ್ಠಾಪನಾ ವಿಧಿ ವಿಧಾನಗಳನ್ನು ಕುರಿತು ಹೇಳಲಾಗಿದೆ. ದೇವಾಲಯದ ಪ್ರಾಕಾರಗಳ ರಚನಾ ವಿಧಾನಗಳು ಕೂಡ ವಾಸ್ತುಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಆದ್ದರಿಂದ ವಾಸ್ತುಶಾಸ್ತ್ರದಲ್ಲಿ ದೀಪಸ್ತಂಭಗಳ ಪಾತ್ರವೇನು ಎಂದು ತಿಳಿಯುವುದು ಈ ಅಧ್ಯಯನದಲ್ಲಿ ಅವಶ್ಯವಾಗಿರುತ್ತದೆ.

ಕರ್ನಾಟಕದ ದೇವಾಲಯಗಳು ವಿಶ್ವದಾದ್ಯಂತ ಹೆಸರುವಾಸಿಯಾಗಿದ್ದು ಅವುಗಳು ಪ್ರದೇಶಕ್ಕೆ ತಕ್ಕಂತೆ ಅಲ್ಲಿದ್ದ ರಾಜ ಮಹಾರಾಜರ ಕಲಾಸಕ್ತಿಗೆ ಹಾಗೂ ಕಲಾವಿದರ ಕಲಾಕೌಶಲ್ಯಕ್ಕೆ ಅನುಗುಣವಾಗಿ ವಿಭಿನ್ನತೆಯನ್ನು ಪಡೆದಿವೆ. ದಕ್ಷಿಣ ಕರ್ನಾಟಕದ ದೀಪಸ್ತಂಭಗಳ ರಚನೆಯು ಒಂದು ವಿಧವಾಗಿ ದೊರೆತರೆ ಉತ್ತರ ಕರ್ನಾಟಕದಲ್ಲಿ ದೀಪಮಾಲೆಗಂಬಗಳು ವಿಶೇಷವಾಗಿ ಇರುವುದನ್ನು ನೋಡಬಹುದು. ಉತ್ತರ ಕರ್ನಾಟಕದಲ್ಲಿ ಕೆಲವು ದೇವಾಲಯಗಳ ಎದುರು ಮೂರು, ಐದು, ಏಳು, ಒಂಬತ್ತು ದೀಪಮಾಲೆಗಂಬಗಳು ದೊರೆಯುವುದುಂಟು. ಈ ಭಿನ್ನತೆಗೆ ಕಾರಣವನ್ನು ತಿಳಿಯುವುದಕ್ಕೆ ಹಾಗೂ ಅವುಗಳನ್ನು ಕುರಿತು ವಿವೇಚನೆ ನಡೆಸುವುದಕ್ಕೆ ಈ ಅಧ್ಯಯನವು ಸಹಕಾರಿಯಾಗುತ್ತದೆ.

ದೇವಾಲಯದ ಪರಿಸರವು ಹಬ್ಬ ಹರಿದಿನಗಳಂದು ವಿಶೇಷವಾಗಿರುತ್ತದೆ. ಈ ಹಬ್ಬ ಹರಿದಿನಗಳಲ್ಲಿ ದೇವಾಲಯಗಳನ್ನು ಸಿಂಗರಿಸಲಾಗಿರುತ್ತದೆ. ದೀಪಗಳ ಹಬ್ಬವೆಂದು ಆಚರಿಸುವ ದೀಪಾವಳಿಯಂದು ದೇವಾಲಯದ ಆವರಣದಲ್ಲಿ ವಿಶೇಷವಾಗಿ ದೀಪಗಳನ್ನು ಬೆಳಗಿಸುವುದು ರೂಢಿ. ಈ ಹಬ್ಬ ಉತ್ಸವಗಳ ಸಂದರ್ಭದಲ್ಲಿ ದೀಪಸ್ತಂಭಗಳಿಗೂ ದೀಪವನ್ನು ಹಚ್ಚುವುದು ಪದ್ಧತಿಯಾಗಿದೆ.

ದೇವಾಲಯದ ಆವರಣದಲ್ಲಿ ಇರುವ ದೀಪಸ್ತಂಭಗಳ ಎತ್ತರವು ಸುಮಾರು ೧೫ ಅಡಿಯಿಂದ ೫೦ ಅಡಿಯವರೆಗೂ ದೊರೆಯುತ್ತದೆ. ಎತ್ತರದ ಕೆಲವು ದೀಪಸ್ತಂಭಗಳಿಗೆ ದೀಪವನ್ನು ಹಚ್ಚಲೆಂದೇ ಏಣಿಯನ್ನು ಅಳವಡಿಸಿರಲಾಗಿರುತ್ತದೆ. ಕೆಲವು ದೀಪಸ್ತಂಭಗಳಿಗೆ ಸರಪಳಿಯ ಸಹಾಯದಿಂದ ದೀಪವನ್ನು ಹಚ್ಚುತ್ತಾರೆ. ಹಿಂದಿನ ಕಾಲದಲ್ಲಿ ದೇವಾಲಯದ ದೀಪಸ್ತಂಭಗಳನ್ನು ದಿನಾಲೂ ಹಚ್ಚುತ್ತಿದ್ದರು. ಆದರೆ ಈಗ ಕೇವಲ ಹಬ್ಬ ಹರಿದಿನಗಳಲ್ಲಿ ಮಾತ್ರ ದೀಪಸ್ತಂಭಗಳನ್ನು ಹಚ್ಚಲಾಗುತ್ತದೆ. ಕೆಲವು ದೀಪಸ್ತಂಭಗಳಲ್ಲಿ ದೀಪವನ್ನು ಮೇಲೆ ತುದಿಯಲ್ಲಿ ಹಚ್ಚದೆ ಅದರ ಪೀಠದ ಭಾಗದ ಮೇಲೆ ದೀಪಗಳನ್ನು ಸಾಲಾಗಿ ಹಚ್ಚಲಾಗುತ್ತದೆ. ಪ್ರಸ್ತುತ ಕಾಲದಲ್ಲಿ ಅನುಕೂಲಕ್ಕೆ ತಕ್ಕಂತೆ ದೀಪಗಳನ್ನು ಹಚ್ಚುವುದನ್ನು ನೋಡಬಹುದು. ಈ ರೀತಿ ನಡೆಯುವ ಹಬ್ಬಹರಿದಿನಗಳಲ್ಲಿನ ದೀಪಗಳ ಉತ್ಸವ, ಅವುಗಳ ಆಚರಣೆಯನ್ನು ಕುರಿತು ಹೇಳುವುದು ಅಧ್ಯಯನದ ಉದ್ದೇಶಗಳಲ್ಲೊಂದು.

ಕರ್ನಾಟಕದ ದೀಪಸ್ತಂಭಗಳು ವಿವಿಧ ಮಾಧ್ಯಮಗಳಲ್ಲಿ ವಿವಿಧ ವಿನ್ಯಾಸಗಳಲ್ಲಿ ನಿರ್ಮಾಣಗೊಂಡಿರುವುದನ್ನು ನೋಡಬಹುದು. ಅವುಗಳನ್ನು ಮರ, ಕಲ್ಲು, ಲೋಹ ಮತ್ತು ಸಂಕೀರ್ಣ ಮಾಧ್ಯಮಗಳು ಎಂದು ವಿಂಗಡಿಸಬಹುದು. ಮರವು ನಿಸರ್ಗದ ಹವಾಮಾನದ ಬದಲಾವಣೆಗೆ ಬೇಗ ಶಿಥಿಲಗೊಳ್ಳುತ್ತದೆ. ಆದ್ದರಿಂದ ಮರ ಮಾಧ್ಯಮದ ದೀಪಸ್ತಂಭಗಳು ದೊರೆಯುವುದು ತೀರಾ ಕಡಿಮೆ. ದಕ್ಷಿಣ ಕರ್ನಾಟಕದಲ್ಲಿ ಏಕಶಿಲಾ ಸ್ತಂಭಗಳು ಹೆಚ್ಚಾಗಿ ದೊರೆಯುತ್ತವೆ. ಲೋಹ ಮಾಧ್ಯಮದ ದೀಪಸ್ತಂಭಗಳಲ್ಲಿ ಹೆಚ್ಚಾಗಿ ಕಂಚಿನಿಂದ ತಯಾರು ಮಾಡಿರುವ ದೀಪಸ್ತಂಭಗಳು ದೊರೆಯುತ್ತವೆ.

ಕಂಚಿನ ದೀಪಸ್ತಂಭಗಳನ್ನು ಎರಡು ವಿಧದ ರಚನಾ ಶೈಲಿಯಲ್ಲಿ ಗುರುತಿಸಬಹುದು. ಲೋಹದ ಎರಕ ಹೊಯ್ಯುವ ವಿಧಾನ ಒಂದಾದರೆ ಇನ್ನೊಂದು ಲೋಹದ ತಗಡನ್ನು ಉಪಯೋಗಿಸಿ ಕಲಾತ್ಮಕವಾದ ಚಿತ್ತಾರವನ್ನು ಮೂಡಿಸುವುದಾಗಿದೆ. ಈ ಮಾಧ್ಯಮಗಳಲ್ಲಿ ಇನ್ನೊಂದು ವಿಧವೆಂದರೆ ಸಂಕೀರ್ಣ ಮಾಧ್ಯಮ. ಸಂಕೀರ್ಣ ಮಾಧ್ಯಮದ ದೀಪಸ್ತಂಭಗಳಲ್ಲಿ ಗಾರೆ, ಇಟ್ಟಿಗೆ, ಕಲ್ಲು, ಲೋಹ ಮುಂತಾದ ಎರಡು ಅಥವಾ ಮೂರು ಮಾಧ್ಯಮಗಳನ್ನು ಉಪಯೋಗಿಸಿ ನಿರ್ಮಾಣ ಮಾಡುವುದಾಗಿದೆ. ಸಂಕೀರ್ಣ ಮಾಧ್ಯಮದ ದೀಪಸ್ತಂಭಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುತ್ತವೆ. ಈ ರೀತಿಯಾಗಿ ಬೇರೆ ಬೇರೆ ಮಾಧ್ಯಮಗಳನ್ನು ಬಳಸಿಕೊಂಡು ಒಂದು ಸ್ತಂಭವನ್ನು ನಿರ್ಮಿಸಿದ ಪಕ್ಷದಲ್ಲಿ ಅದನ್ನು ಸಂಕೀರ್ಣ ಮಾಧ್ಯಮದ ದೀಪಸ್ತಂಭವೆಂದು ಗುರುತಿಸಲಾಗುತ್ತದೆ. ಈ ಅಧ್ಯಯನವು ವಿವಿಧ ಮಾಧ್ಯಮದ ದೀಪಸ್ತಂಭಗಳು ಹಾಗೂ ಅವುಗಳ ರಚನಾ ಶೈಲಿಗಳನ್ನು ಕುರಿತು ಹೇಳುವುದಾಗಿದೆ.

ಮೇಲಿನ ಅಧ್ಯಾಯಗಳಲ್ಲಿ ದೀಪಸ್ತಂಭಗಳ ವಾಸ್ತು ರಚನಾ ವಿಧಿವಿಧಾನಗಳಾದರೆ ದೀಪಸ್ತಂಭಗಳ ಮೇಲೆ ಕಲಾತ್ಮಕವಾಗಿ ನಿರ್ಮಿಸಲಾಗಿರುವ ಉಬ್ಬು ಶಿಲ್ಪಗಳನ್ನು ಕುರಿತು ಈ ಅಧ್ಯಾಯವು ಹೇಳುತ್ತದೆ. ಭಾರತೀಯರ ಧಾರ್ಮಿಕ ಹಿನ್ನೆಲೆಯನ್ನು ಹೊತ್ತಂತಹ ಕಲೆಯು ನೈಜತೆಯನ್ನು ಪ್ರತಿಬಿಂಬಿಸುವುದಕ್ಕಿಂತ ಹೆಚ್ಚಾಗಿ ಸಾಂಕೇತಿಕತೆಯನ್ನು ಪ್ರತಿನಿಧಿಸುತ್ತವೆ[೫] ಎಂಬುವುದು ಸತ್ಯದ ಮಾತು. ಜೀವನಕ್ಕೆ ಬೇಕಾಗಿರುವ ವಸ್ತು, ಸ್ಥಿತಿಗಳನ್ನು ಧಾರ್ಮಿಕ ಹಿನ್ನೆಲೆಯಲ್ಲಿ ಸಂಕೇತಗಳ ಮೂಲಕ ಮಾನವನು ಪ್ರತಿನಿಧಿಸಿರುವುದು ತೋರುತ್ತದೆ.

ಭಾರತೀಯರ ಧರ್ಮಾಚರಣೆಯಲ್ಲಾಗಲೀ, ಸಾಂಪ್ರದಾಯಿಕ ಚೌಕಟ್ಟಿನ ವಿಷಯಗಳಲ್ಲಿ ಬಳಸಲ್ಪಟ್ಟಿರುವ ಯಾವುದೇ ವಸ್ತು ವಿಷಯ, ಆಚರಣಾ ಪದ್ಧತಿಗಳ ಹಿಂದೆ ಅವುಗಳದ್ದೇ ಆದ ವಿಶೇಷವಾದ ಅರ್ಥ ಹಾಗೂ ಉದ್ದೇಶಗಳು ಇರುವುದು ಕಂಡು ಬರುತ್ತದೆ. ಕಲ್ಪನಾ ಶಕ್ತಿಯು ಮಾನವನು ಸೃಷ್ಟಿಯಾದಂದಿನಿಂದ ಜೊತೆಗಿರುವಂತಹುದು ಎಂದರೆ ತಪ್ಪಾಗಲಾರದು. ತನ್ನ ಕಲ್ಪನಾ ಶಕ್ತಿಯ ಸಾಮರ್ಥ್ಯಕ್ಕೆ ಅನುಗುಣವಾಗಿ ತನ್ನ ಜೀವನದ ಶೈಲಿಯಲ್ಲಿ ಬದಲಾವಣೆಗಳನ್ನು ಕಂಡು ಕೊಂಡಿರುವುದು ಕಾಣುತ್ತದೆ. ಇವುಗಳ ಆಧಾರದ ಮೇಲೆಯೇ ಅವನ ಬೆಳವಣಿಗೆಯಾಗಿದೆ.

ಸತ್ಯದ ಅನ್ವೇಷಣೆಯ ಹಿನ್ನೆಲೆಯಲ್ಲಿ ಮಾನವನ ಮಾನಸಿಕ ಪ್ರವೃತ್ತಿಯು ಸಹಕಾರಿಯಾಗಿದೆ. ಆತ್ಮ ಮತ್ತು ಮೃತ್ಯುವಿನಲ್ಲಿ ಇರುವ ನಿಗೂಢ ಸತ್ಯದ ಅನ್ವೇಷಣೆಯನ್ನು ಅವನು ತನ್ನ ಜ್ಞಾನದ, ತನ್ನ ಅರಿವಿನ ಪರಿಧಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಹುಡುಕಾಟವನ್ನು ಮುಂದುವರೆಸಿರುವುದು ಇಂದಿಗೂ ಕಾಣುತ್ತದೆ. ಮಾನವನು

---

೫. Indian art aims at the symblolic and not at the realistic image ....
G.S. Amur,
Ananda coomaraswamy centenatry essays, ಪುಟ–೫೮.

ಕಾಲಕ್ಕೆ ಹೆದರುತ್ತಾನೆ[೬]. ಕಾಲವೆನ್ನುವುದು ಚಕ್ರದಂತೆ ಉರುಳುತ್ತಿರುತ್ತದೆ. ಅದನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಕಾಲ ಚಕ್ರ ಉರುಳುತ್ತಿದ್ದಂತೆ ಮೃತ್ಯು ಸಮೀಪಿಸುತ್ತಿದೆ ಎಂದು ಅವನ ಅರೆ ಚೇತನ ಮನಸ್ಸು ಹೆದರಿಸುತ್ತದೆ. ಈ ಹೆದರಿಕೆಯ ಹಿನ್ನೆಲೆಯಲ್ಲಿ ಪ್ರಾರಂಭವಾದುದು ಪೂಜೆ ಪುನಸ್ಕಾರಗಳು. ಆದ್ದರಿಂದಲೇ ಹೇಳುವುದು ಧರ್ಮಕ್ಕೆ ಭಯವೇ ಮೂಲ[೭] ಎಂದು.

ಈ ರೀತಿಯಾಗಿ ಬೆಳೆದ ಧರ್ಮವನ್ನು ಒಳಗೊಂಡಿರುವ ಆಚರಣೆಗಳು ತನ್ನಲ್ಲಿರುವ ಭಯವನ್ನು ಹೋಗಲಾಡಿಸುವ ಸಲುವಾಗಿ ಸೃಷ್ಟಿಗೊಂಡವುಗಳು. ಈ ಆಚರಣೆಗಳಲ್ಲಿ ತನ್ನ ಜೀವನದ ಮೌಲ್ಯಗಳನ್ನು ಸಾಂಕೇತಿಕವಾಗಿ ಗುರುತಿಸಿ ಅವುಗಳಿಗೂ ಆರಾಧನೆಯನ್ನು ಮಾಡಿದುದು ವಾಸ್ತವದ ಸಂಗತಿ. ಇದೇ ಉದ್ದೇಶದ ಹಿನ್ನೆಲೆಯಲ್ಲಿ ಮಾಡಿದಂತಹವು ಸಂಕೇತಗಳು ಎಂದು ತಿಳಿದುಬರುತ್ತದೆ. ಹಿಂದೂ ಧರ್ಮವಾಗಲೀ ಇನ್ನಿತರೆ ಯವುದೇ ಧರ್ಮವಾಗಲೀ ಸಂಕೇತಗಳನ್ನು ಅವಲಂಬಿಸಿರುವುದನ್ನು ನೋಡಬಹುದು.

ಸಂಕೇತಗಳು ಚಿಕ್ಕದಾಗಿದ್ದರೂ ಅವುಗಳ ಉದ್ದೇಶ ಸ್ವರೂಪಗಳು ವಿಶಾಲವಾದುದು. ಭಾರತೀಯ ಧರ್ಮಾಚರಣೆಯಲ್ಲಿ ದೊರೆಯುವ ಸಂಕೇತಗಳೂ ಕೂಡ ಆಧ್ಯಾತ್ಮಿಕವಾಗಿ ವಿಶಾಲತೆಯನ್ನು ಹೊಂದಿರುವುದು ಕಾಣುತ್ತದೆ. ಈ ಸಂಕೇತಗಳು ತಮ್ಮದೇ ಆದ ವಿಶಿಷ್ಟವಾದ ಅರ್ಥ ಹಾಗೂ ಉದ್ದೇಶಗಳನ್ನು ಒಳಗೊಂಡಿರುತ್ತವೆ. ದೇವಾಲಯಗಳ ದೀಪಸ್ತಂಭಗಳಲ್ಲಿ ಇರುವ ಸಾಂಕೇತಿಕತೆಯನ್ನು ಪ್ರತಿಬಿಂಬಿಸುವ ಉಬ್ಬು ಶಿಲ್ಪಗಳೂ ಇದಕ್ಕೆ ಹೊರತೇನಲ್ಲ. ಭಾರತದ ದೇವಾಲಯಗಳಲ್ಲಿರುವ ಚಿತ್ರಕಲೆ, ಶಿಲ್ಪಕಲೆಗಳು ಆಧ್ಯಾತ್ಮಿಕತೆಯನ್ನು ಪ್ರತಿಬಿಂಬಿಸುವ ಹಿನ್ನೆಲೆಯಲ್ಲಿ ರೂಪುಗೊಂಡಿವೆ ಎಂದು ಹೇಳಬಹುದು. ಭಾರತದ ಪೂರ್ವಿಕರು ಆತ್ಮ ಪರಮಾತ್ಮನನ್ನು ಕುರಿತು ಆಳವಾಗಿ ವಿವೇಚಿಸಿದ್ದರು ಎಂಬುವುದಕ್ಕೆ ಅವರು ನಿರ್ಮಿಸಿರುವ ದೇವಾಲಯಗಳೇ ಸಾಕ್ಷಿ ಎಂದು ಹೇಳಬಹುದು.

ಕರ್ನಾಟಕದಲ್ಲಿ ವಿಶೇಷವಾಗಿ ಮೂರು ಪ್ರಮುಖ ಧರ್ಮಗಳು ಆಚರಣೆಯಲ್ಲಿವೆ. ಅವನ್ನು ಶೈವ, ವೈಷ್ಣವ ಮತ್ತು ಶಾಕ್ತ ಎಂದು ಹೆಸರಿಸಬಹುದು. ಈ ಮೂರೂ ಧರ್ಮಗಳಲ್ಲಿ ಆಯಾ ಧರ್ಮಗಳಿಗೆ ತಕ್ಕಂತೆ ದೇವಾಲಯಗಳಲ್ಲಿ ಶಿಲ್ಪಗಳು ಇರುವುದು ಕಾಣುತ್ತದೆ. ದೇವಾಲಯದ ಗರ್ಭಗುಡಿಯಲ್ಲಿನ ಮೂರ್ತಿಗಳಿಗೆ ತಕ್ಕಂತೆ ದೀಪಸ್ತಂಭಗಳ ಮೇಲಿನ ಶಿಲ್ಪಗಳೂ ಸಹಜವಾಗಿ ಭಿನ್ನತೆಯಿಂದ ಕೂಡಿರುವುದು ತಿಳಿಯುತ್ತದೆ. ಶೈವ, ವೈಷ್ಣವ ಮತ್ತು ಶಾಕ್ತ ಸಂಪ್ರದಾಯಗಳ ಅಡಿಯಲ್ಲಿ ನಿರ್ಮಾಣಗೊಂಡಿರುವ ದೀಪಸ್ತಂಭಗಳನ್ನು ಕುರಿತು ತಿಳಿಯಬೇಕಾಗಿದೆ.

---

೬. One thing that man is afraid of is time.....
K.B. Krishna Rao,
Ananda coomaraswamy centenatry essays, ಪುಟ-28.

೭. ಪ್ರೊ. ಎಸ್.ಕೆ. ರಾಮಚಂದ್ರರಾವ್: ಭಾರತದ ದೇವಾಲಯ ನೆಲೆ-ಹಿನ್ನೆಲೆ, ಪುಟ-೨

ಶೈವ ಧರ್ಮದ ಆಚರಣೆಯಲ್ಲಿರುವ ದೀಪಸ್ತಂಭಗಳಲ್ಲಿ ನಂದಿ, ಲಿಂಗ, ಗಣೇಶ, ತ್ರಿಶೂಲ ಹೀಗೆ ಇನ್ನೂ ಮುಂತಾದ ಶಿವನಿಗೆ ಸಂಬಂಧಿಸಿರುವ ಸಂಕೇತಗಳ ಉಬ್ಬು ಶಿಲ್ಪಗಳನ್ನು ನೋಡಬಹುದು. ವೈಷ್ಣವ ಧರ್ಮದ ಹಿನ್ನೆಲೆಯಲ್ಲಿ ನಿರ್ಮಾಣಗೊಂಡಿರುವ ದೀಪಸ್ತಂಭಗಳಲ್ಲಿ ವಿಷ್ಣುವಿನ ದಶಾವತಾರ, ವಿಷ್ಣುವಿನ ವಾಹನವಾದ ಗರುಡ, ಶ್ರೀರಾಮನ ಬಂಟನಾದ ಹನುಮಂತ, ವಿಷ್ಣುವಿನ ಆಯುಧಗಳಾದ ಶಂಕ, ಚಕ್ರ, ಹೀಗೆ ಇನ್ನೂ ಇತರೆ ಸಂಕೇತಗಳು ಇರುವುದನ್ನು ಗಮನಿಸಬಹುದು.

ಶಾಕ್ತ ಧರ್ಮದ ಸಂಪ್ರದಾಯದ ಹಿನ್ನೆಲೆಯನ್ನು ಹೊತ್ತಂತ ದೀಪಸ್ತಂಭಗಳು ಸ್ತ್ರೀ ದೇವತೆಯರ ಉಬ್ಬು ಶಿಲ್ಪಗಳನ್ನು ಹೊಂದಿರುವುದನ್ನು ನೋಡಬಹುದು. ಶೈವ ಧರ್ಮ, ವೈಷ್ಣವ ಧರ್ಮ ಮತ್ತು ಶಾಕ್ತ ಧರ್ಮಗಳ ದೇವಾಲಯದ ಎದುರಿಗಿರುವ ದೀಪಸ್ತಂಭಗಳು, ಹಾಗೂ ಅವುಗಳಲ್ಲಿ ಕಂಡು ಬರುವ ಉಬ್ಬುಶಿಲ್ಪಗಳು, ಅವುಗಳ ಸಾಂಕೇತಿಕ ಪ್ರಾತಿನಿಧ್ಯವನ್ನು ಕುರಿತು ಅಧ್ಯಯನದಲ್ಲಿ ಹೇಳಲಾಗಿದೆ.

ಕರ್ನಾಟಕವು ವಾಸ್ತುಶಿಲ್ಪ, ಶಿಲ್ಪಕಲೆ, ಚಿತ್ರಕಲೆಗೆ ಹೆಸರು ಪಡೆದಿದೆ. ಇಲ್ಲಿನ ವಾಸ್ತು ವಿನ್ಯಾಸಗಳು ವಿಶಿಷ್ಟವಾದ ರೀತಿಯಲ್ಲಿ ಇರುವುದು ಕಂಡು ಬರುತ್ತದೆ. ದೇವಾಲಯಗಳು ಚಿತ್ರಕಲೆ, ಶಿಲ್ಪಕಲೆಯ ಬೆಳವಣಿಗೆಗೆ ಮೂಲಸ್ಥಾನವಾಗಿದೆ. ದೇವಾಲಯದಲ್ಲಿರುವ ಚಿತ್ರಕಲೆಯಾಗಲೀ ಶಿಲ್ಪಕಲೆಯಾಗಲೀ ಆಯಾ ದೇವಾಲಯಗಳ ಸಂಪ್ರದಾಯ, ಧರ್ಮದ ನಿಟ್ಟಿನಲ್ಲಿ ಮೂಡಿರುವುದು ಕಾಣುತ್ತದೆ. ಮಾನವನು ತನ್ನ ಜೀವನದ ಆಗುಹೋಗುಗಳಲ್ಲಿ ಬರುವ ಕೆಲವು ಚಟುವಟಿಕೆಗಳ ಚಿತ್ರಣವನ್ನು ಮೂಡಿಸಲು ದೇವಾಲಯಗಳ ಆವರಣವನ್ನು ಬಳಸಿಕೊಂಡಿರುವುದು ಕಂಡು ಬರುತ್ತದೆ.

ದೃಶ್ಯಕಲಾ ಕ್ಷೇತ್ರದಲ್ಲಿ ಇದುವರೆಗೂ ನಡೆದಿರುವ ಅಧ್ಯಯನಗಳು

ಚಿತ್ರಕಲೆ ಹಾಗೂ ಶಿಲ್ಪಕಲೆ ಎಂಬ ಎರಡು ಕ್ಷೇತ್ರಗಳಲ್ಲಿ ಸಂಶೋಧನೆಗಳು ನಡೆಯುತ್ತಿರುವುದರಿಂದ ಇವನ್ನು ದೃಶ್ಯಕಲಾ ಸಂಶೋಧನೆಗಳು ಎಂದು ಗುರುತಿಸಬಹುದಾಗಿದೆ. ಇತರೆ ಕ್ಷೇತ್ರಗಳ ಸಂಶೋಧನೆಗಿಂತ ದೃಶ್ಯಕಲಾ ಕ್ಷೇತ್ರದ ಸಂಶೋಧನೆಯು ವಿಭಿನ್ನವಾದುದು. ಅವುಗಳ ಸ್ವರೂಪವೇ ಬೇರೆ.

ಸುಮಾರು ೮೦ರ ದಶಕದವರೆಗೂ ದೃಶ್ಯಕಲೆಯನ್ನು ಕುರಿತು ಅಧ್ಯಯನಗಳು ನಡೆದೇ ಇಲ್ಲವೆಂದು ಹೇಳಬಹುದು. ೯೦ ರ ದಶಕದಲ್ಲಿ ಪ್ರಾರಂಭಗೊಂಡಿರುವ ದೃಶ್ಯಕಲಾ ಸಂಶೋಧನೆಗಳು ಪ್ರಸ್ತುತದ ದಿನಗಳಲ್ಲಿ ಅತಿ ತೀವ್ರ ವೇಗದಲ್ಲಿ ಸಾಗಿ ಬರುತ್ತಿರುವುದನ್ನು ನೋಡಬಹುದು. ಆದರೂ ದೃಶ್ಯಕಲೆಯಲ್ಲಿ ಸಂಶೋಧನೆಗಳು ಇತರೆ ಕ್ಷೇತ್ರದಲ್ಲಿ ನಡೆಯುತ್ತಿರುವ ಸಂಶೋಧನೆಗಳಿಗಿಂತ ತೀರಾ ಕಡಿಮೆ ಪ್ರಮಾಣದ್ದಾಗಿದೆ. ದೃಶ್ಯಕಲಾ ಕ್ಷೇತ್ರವು ವಿಶಾಲವಾದುದು ಮತ್ತು ವಿಭಿನ್ನವಾದುದಾಗಿದೆ. ಆದ್ದರಿಂದ ಈ ಕ್ಷೇತ್ರದಲ್ಲಿ ಸಂಶೋಧನೆ ಮಾಡಲು ಬಹಳಷ್ಟು ವಿಷಯಗಳು ದೊರೆಯುತ್ತವೆ.

ದೃಶ್ಯಕಲಾ ಸಂಶೋಧನೆಗಳು ಇತರೆ ಸಂಶೋಧನೆಗಳಲ್ಲಿ ಒಂದು ಭಾಗವಾಗಿ ಮಾತ್ರ ನಡೆದು ಬಂದಿರುವುದನ್ನು ಕಾಣುತ್ತೇವೆ. ಪುರಾತತ್ವಕ್ಕೆ ಸಂಬಂಧಪಟ್ಟ ಸಂಶೋಧನೆಗಳಲ್ಲಿ ಪ್ರಾಚೀನ ಕಾಲದ ಚಿತ್ರಕಲೆಯನ್ನು ಅಧ್ಯಯನದ ಒಂದು ಭಾಗವನ್ನಾಗಿ ತೆಗೆದುಕೊಂಡಿರುವುದು ಕಂಡು ಬರುತ್ತದೆ. ಕರ್ನಾಟಕದ ಚರಿತ್ರೆಯನ್ನು ಕುರಿತು ನಡೆದಿರುವ ಸಂಶೋಧನೆಗಳಲ್ಲಿ ರಾಜಮಹಾರಾಜರ ಕಲಾಸಕ್ತಿಯನ್ನು ಗುರುತಿಸುವ ಹಿನ್ನೆಲೆಯಲ್ಲಿ ಅವರು ಚಿತ್ರಕಲೆ ಹಾಗೂ ಶಿಲ್ಪಕಲೆಯನ್ನು ಪ್ರೋತ್ಸಾಹಿಸಿದ ಉಲ್ಲೇಖಗಳು ದೊರೆಯುತ್ತವೆ. ಹೀಗೆ ಇತರೆ ಕ್ಷೇತ್ರಗಳ ಜೊತೆಗೆ ಸಂಶೋಧನೆಯ ಒಂದು ಭಾಗವಾಗಿ ದೃಶ್ಯಕಲೆಯು ಇರವುದನ್ನು ಕಾಣಬಹುದು. ನಂತರದ ದಿನಗಳಲ್ಲಿ ದೃಶ್ಯಕಲೆಯು ಸಂಶೋಧನೆಯ ಕ್ಷೇತ್ರದಲ್ಲಿ ತನ್ನದೇ ಆದ ಅಸ್ತಿತ್ವವನ್ನು ಪಡೆಯಿತು.

ಕರ್ನಾಟಕದಲ್ಲಿ ಪ್ರಪ್ರಥಮವಾಗಿ ೧೯೮೦ರ ಅಂತ್ಯದಲ್ಲಿ ದೃಶ್ಯಕಲಾ ಕ್ಷೇತ್ರದಲ್ಲಿ ಚಿತ್ರಕಲೆಯನ್ನು ಕುರಿತು ಸಂಶೋಧನೆಗಳು ನಡೆದಿರುವುದನ್ನು ನೋಡಬಹುದು. ಕರ್ನಾಟಕದಲ್ಲಿ ದೃಶ್ಯಕಲಾ ಸಂಶೋಧನೆಯ ನಿಟ್ಟಿನಲ್ಲಿ ಮೊಟ್ಟಮೊದಲು ಕಿರುಪ್ರಬಂಧದ ಮೂಲಕ ಪ್ರಾರಂಭಿಸಿದ ಹೆಮ್ಮೆ ಡಾ. ಎಸ್.ಸಿ. ಪಾಟೀಲರಿಗೆ ಸೇರುತ್ತದೆ. ಇವರು ೧೯೮೩ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿರುವ **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ – ಒಂದು ಅಧ್ಯಯನ**[೮] ಎಂಬ ಕಿರು ಪ್ರಬಂಧವು ದೃಶ್ಯಕಲಾ ಕ್ಷೇತ್ರದ ಅಧ್ಯಯನದ ಪ್ರಥಮ ಸಂಶೋಧನಾ ಅಧ್ಯಯನ ಎಂದು ಗುರುತಿಸಲಾಗಿದೆ. ೧೯೮೭ ರಲ್ಲಿ **ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ**[೯] ಎಂಬ ಶೀರ್ಷಿಕೆಯ ಅಡಿಯಲ್ಲಿ ಡಾ. ಬಿ.ಕೆ. ಹಿರೇಮಠರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಹೆಚ್.ಡಿ. ಮಹಾಪ್ರಬಂಧವಾಗಿದೆ. ಹಸ್ತಪ್ರತಿಯಲ್ಲಿ ರಚಿಸಲ್ಪಟ್ಟಿರುವ ಚಿತ್ರಕಲೆಯನ್ನು ಕುರಿತು ಕೆಲವು ಅಧ್ಯಾಯಗಳು ಮೀಸಲಾಗಿರುವ ಸಲುವಾಗಿ ಇದನ್ನು ದೃಶ್ಯಕಲಾ ಕ್ಷೇತ್ರದ ಸಂಶೋಧನೆಯ ಪೂರಕ ಅಧ್ಯಯನವೆಂದು ಪರಿಗಣಿಸಲಾಗುತ್ತದೆ.

ಡಾ. ಎಸ್.ಸಿ. ಪಾಟೀಲರು ಕರ್ನಾಟಕದಲ್ಲಿರುವ ಜನಪದ ಕಲೆಯಲ್ಲಿ ಸಂಶೋಧನೆಯನ್ನು ಮಾಡಿ ೧೯೯೧ ರಲ್ಲಿ **ಕರ್ನಾಟಕದ ಜನಪದ ಚಿತ್ರಕಲೆ**[೧೦] ಎಂಬ ಪಿಹೆಚ್.ಡಿ. ಮಹಾಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದರು. ಕರ್ನಾಟಕದ ದೃಶ್ಯಕಲಾ ಕ್ಷೇತ್ರಕ್ಕೆ ಸಾದರ ಪಡಿಸಿದ ಪ್ರಥಮ ಮಹಾಪ್ರಬಂಧವು ಇದಾಗಿದೆ. ಡಾ. ಆ.ಲ. ನರಸಿಂಹನ್ ರವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ೧೯೯೫ ರಲ್ಲಿ ಮಂಡಿಸಿದ

---

೮. ಡಾ. ಎಸ್.ಸಿ. ಪಾಟೀಲ: **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ**, ಕರ್ನಾಟಕ ವಿ.ವಿ., 1983.

೯. ಡಾ. ಬಿ.ಕೆ. ಹಿರೇಮಠ: **ಕನ್ನಡ ಹಸ್ತಪ್ರತಿಗಳು**, ಪಿಹೆಚ್.ಡಿ. ಮ.ಪ್ರ., ಕರ್ನಾಟಕ ವಿ.ವಿ., 1987.

೧೦. ಡಾ. ಎಸ್.ಸಿ. ಪಾಟೀಲ: **ಕರ್ನಾಟಕದ ಜನಪದ ಚಿತ್ರಕಲೆ**, ಪಿಹೆಚ್.ಡಿ., ಮ.ಪ್ರ., 1991

ಮಹಾಪ್ರಬಂಧವು **ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು**[೧೧] ಎಂಬುದಾಗಿದೆ. ಈ ಮಹಾಪ್ರಬಂಧವು ಚಿತ್ರಕಲೆಯಲ್ಲಿ ಅಭಿವ್ಯಕ್ತಗೊಂಡಿರುವ ಸಾಂಸ್ಕೃತಿಕ ಹಿನ್ನೆಲೆಯನ್ನು ಕುರಿತು ತಿಳಿಸುತ್ತದೆ. ಡಾ. ಸಂಪದಾ ಭಟ್ ರವರು ಹಿಂದೂಸ್ಥಾನಿ ಸಂಗೀತದಲ್ಲಿ ಇರುವ ರಾಗಗಳನ್ನು ಆಧರಿಸಿ ಚಿತ್ರಿಸಲ್ಪಟ್ಟಿರುವ ರಾಗಮಾಲ ಚಿತ್ರಗಳನ್ನು ಕುರಿತು ೧೯೯೭ ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ **ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು**[೧೨] ಎಂಬ ಸಂಶೋಧನಾ ಮಹಾಪ್ರಬಂಧವನ್ನು ಮಂಡಿಸಿದ್ದಾರೆ.

೧೯೯೭ ರಲ್ಲಿ ವ್ಯಕ್ತಿ ಅಧ್ಯಯನವನ್ನು ನಡೆಸಲಾಗಿದೆ. ಇದು ಅನಿವಾಸಿ ಭಾರತೀಯ ಕಲಾವಿದನನ್ನು ಕುರಿತದ್ದಾಗಿದೆ. **ದಿ. ನಿಕೋಲಸ್ ರೋರಿಕ್‌ರ ಜೀವನ ಮತ್ತು ಕಲಾಕೃತಿಗಳು**[೧೩] ಎಂಬ ಸಂಶೋಧನಾ ಅಧ್ಯಯನವನ್ನು ಡಾ. ಪುಷ್ಪಾ ದ್ರಾವಿಡರವರು ಮಂಡಿಸಿದ್ದಾರೆ. ೨೦೦೧ ರಲ್ಲಿ ಡಾ. ಯಾದಪ್ಪ ಪರದೇಶಿಯವರು **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ – ಒಂದು ಅಧ್ಯಯನ**[೧೪] ಎಂಬ ಶೀರ್ಷಿಕೆಯಡಿಯಲ್ಲಿ ಉತ್ತರ ಕರ್ನಾಟಕದಲ್ಲಿ ದೊರೆತಿರುವ ಭಿತ್ತಿಚಿತ್ರಗಳನ್ನು ಕುರಿತು ಮಹಾಪ್ರಬಂಧವನ್ನು ಮಂಡಿಸಿದ್ದಾರೆ. ೨೦೦೨ ರಲ್ಲಿ ಡಾ. ಶಿವಾನಂದ ಬಂಟನೂರರು **ಕರ್ನಾಟಕ ಜನಪದ ಶಿಲ್ಪಕಲೆ**[೧೫] ಎಂಬ ಅಧ್ಯಯನವನ್ನು ಮಂಡಿಸಿ, ಅದರಲ್ಲಿ ಉತ್ತರ ಕರ್ನಾಟಕದ ಜನಪದ ಶಿಲ್ಪಕಲೆಯನ್ನು ಕುರಿತು ಸಂಶೋಧನೆಯನ್ನು ಮಾಡಿದ್ದಾರೆ. ೨೦೦೨ ರಲ್ಲಿ ಡಾ. ಗಿರೀಶ್ ಎಂಬುವವರು **ಬುಡಕಟ್ಟು ಚಿತ್ರಕಲೆ**[೧೬] ಎಂಬ ಸಂಶೋಧನೆಯನ್ನು ಹೊಂದಿರುವ ಮಹಾಪ್ರಬಂಧವನ್ನು ಮಂಡಿಸಿದ್ದಾರೆ. ಡಾ. ಲಕ್ಷ್ಮೀದೇವಿ ಗವಾಯಿಯವರು ವ್ಯಕ್ತಿ ಅಧ್ಯಯನವನ್ನು ಹೊಂದಿರುವ ೨೦೦೨ ರಲ್ಲಿ ಮಂಡಿಸಿದ **ಕಲಾವಿದ ಎಂ.ಎ. ಚೆಟ್ಟಿಯವರ ಜೀವನ, ಕಲಾಕೃತಿಗಳು ಒಂದು ಅಧ್ಯಯನ**[೧೭] ಎಂಬ ಮಹಾಪ್ರಬಂಧದ ಸಂಶೋಧಕರು. ೨೦೦೨ ರಲ್ಲಿ ಡಾ. ಶರಣಪ್ಪ ಕೋಲ್ಕಾರ ಎಂಬುವವರು **ಕೊಪ್ಪಳ–ಹಂಪಿ ಪ್ರದೇಶದ ಪ್ರಾಗಿತಿಹಾಸಿಕ ಕಾಲದ ಕಲೆ**[೧೮] ಎಂಬ ವಿಷಯವನ್ನು ಕುರಿತು ಸಂಶೋಧನಾ ಗ್ರಂಥವನ್ನು ಮಂಡಿಸಿದ್ದಾರೆ.

---

೧೧. ಡಾ. ಆ.ಲ. ನರಸಿಂಹನ್: **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು,** ಪಿಹೆಚ್.ಡಿ., ಮ.ಪ್ರ, ಬೆಂಗಳೂರು ವಿ. ವಿ.,೧೯೯೮

೧೨. ಡಾ. ಸಂಪದಾ ಭಟ್: **ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು,** ಪಿಹೆಚ್.ಡಿ. ಮ.ಪ್ರ., ಕನ್ನಡ ವಿ. ವಿ., ೧೯೯೭

೧೩. ಡಾ. ಪುಷ್ಪಾ ದ್ರಾವಿಡ್: **ಅನಿವಾಸಿ ಭಾರತೀಯ ಕಲಾವಿದ ದಿ. ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು,** ಪಿಹೆಚ್. ಡಿ., ಮ.ಪ್ರ., ಬೆಂಗಳೂರು ವಿ.ವಿ., ೧೯೯೭

೧೪. ಡಾ. ಯಾದಪ್ಪ ಪರದೇಶಿ: **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ– ಒಂದು ಅಧ್ಯಯನ,** ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ., ೨೦೦೦

೧೫. ಡಾ. ಶಿವಾನಂದ ಬಂಟನೂರು: **ಕರ್ನಾಟಕದ ಜನಪದ ಶಿಲ್ಪಕಲೆ– ಒಂದು ಅಧ್ಯಯನ,** ಪಿಹೆಚ್.ಡಿ. ಮ.ಪ್ರ., ೨೦೦೨

೧೬. ಡಾ. ಗಿರೀಶ್: **ಬುಡಕಟ್ಟು ಚಿತ್ರಕಲೆ,** ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ., ೨೦೦೨

೧೭. ಡಾ. ಲಕ್ಷ್ಮೀದೇವಿ ಗವಾಯಿ: **ಕಲಾವಿದ ಎಂ.ಎ. ಚೆಟ್ಟಿಯವರ ಜೀವನ, ಕಲಾಕೃತಿಗಳು ಒಂದು ಅಧ್ಯಯನ,** ಪಿಹೆಚ್.ಡಿ. ಮ.ಪ್ರ., ಕನ್ನಡ ವಿ.ವಿ., ೨೦೦೨

೧೮. ಡಾ. ಶರಣಪ್ಪ ಕೋಲ್ಕಾರ: **ಕೊಪ್ಪಳ–ಹಂಪಿ ಪ್ರದೇಶದ ಪ್ರಾಗಿತಿಹಾಸಿಕ ಕಾಲದ ಕಲೆ,** ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ., ೨೦೦೨

ಡಾ. ಸೌಮ್ಯರವರು **ಯಂತ್ರಾ ದಿ ವಿಝುಯಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಂಟೆಂಪೊರರಿ ತಾಂತ್ರಿಕ್ ಆರ್ಟಿಸ್ಟ್**[೧೯] ಎಂಬ ಸಂಶೋಧನೆಯನ್ನು ಮಹಾಪ್ರಬಂಧದಲ್ಲಿ ಮಂಡಿಸಿದ್ದಾರೆ. ೨೦೦೨ ರಲ್ಲಿ ಡಾ. ಪ್ರಮೀಳಾ ಲೋಚನ್‌ರವರ **ಮೈಂಡ್ ಮ್ಯೂಸಿಕ್ ಅಂಡ್ ಕಲರ್ ಎಕ್ಸ್ಪೋಸಸ್ ಅಂಡ್ ಡೆವೆಲಪ್ಮೆಂಟ್ ಆಫ್ ರಾಗಮಾಲಾ ಅಂಡ್ ಕಂಟೆಂಪೊರರಿ ಪೈಂಟಿಂಗ್**[೨೦] ಎಂಬ ಮಹಾಪ್ರಬಂಧವನ್ನು ಮಂಡಿಸಿದ್ದಾರೆ. ಡಾ. ವೀಣಾ ಶೇಖರನ್‌ರವರು **ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೈಂಟಿಂಗ್ ಆಫ್ ಕರ್ನಾಟಕ (೧೭೮೦-೧೮೨೦)**[೨೧] ಎಂಬ ಮಹಾಪ್ರಬಂಧವನ್ನು ಮಂಡಿಸಿದ್ದಾರೆ.

ದೃಶ್ಯಕಲಾ ವಿಭಾಗದಲ್ಲಿ ಚಿತ್ರಕಲಾವಿದರನ್ನು ಕುರಿತು ಅಧ್ಯಯನಗಳು ನಡೆದಿವೆ. ೨೦೦೩ ರಲ್ಲಿ ಮಂಡಿಸಲ್ಪಟ್ಟಿರುವ ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ್‌ರವರ **ಕಲಾವಿದ ಆರ್.ಎಂ. ಹಡಪದ್, ಒಂದು ಅಧ್ಯಯನ**[೨೨] ಎಂಬ ವಿಷಯವನ್ನು ಕುರಿತದ್ದಾಗಿದೆ. ಡಾ. ಎಸ್.ಸಿ. ಪಾಟೀಲರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ೨೦೦೩ ರಲ್ಲಿ **ಎ ಕ್ರಿಟಿಕಲ್ ಅನಾಲಿಸಿಸ್ ಆಫ್ ಆರ್ಟ್ ಎಜುಕೇಷನ್ ಅಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ರೆಫೆರೆನ್ಸ್ ಟು ಡ್ರಾಯಿಂಗ್ ಅಂಡ್ ಪೈಂಟಿಂಗ್**[೨೩] ಎಂಬ ಮಹಾಪ್ರಬಂಧವನ್ನು ಮಂಡಿಸಿದ್ದಾರೆ.

೨೦೦೪ ರಲ್ಲಿ ಡಾ. ವಿ.ಎಂ. ಬಾಗಾಯತ್ ರವರು **ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಒಂದು ಅಧ್ಯಯನ (೧೪೦೦-೧೮೦೦)**[೨೪] ಎಂಬ ಮಹಾಪ್ರಬಂಧದಲ್ಲಿ ಮುಸ್ಲಿಂ ಅರಸರ ಕಾಲದ ಚಿತ್ರಕಲೆಯನ್ನು ಕುರಿತು ಸಂಶೋಧನೆಯನ್ನು ಮಾಡಿ ಮಹಾಪ್ರಬಂಧವನ್ನು ಮಂಡಿಸಿದ್ದಾರೆ. ೨೦೦೪ ರಲ್ಲಿ ಡಾ. ಶಿವಕುಮಾರ್ ಎ.ಓ. ರವರ ಮಹಾಪ್ರಬಂಧ **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು**[೨೫] ಎಂಬುದಾಗಿದೆ. ೨೦೦೨ ರಲ್ಲಿ ಮಲ್ಲಿಕಾರ್ಜುನ

೧೯. ಡಾ. ಸೌಮ್ಯ: **ಯಂತ್ರಾ ದಿ ವಿಝುಯಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಂಟೆಂಪೊರರಿ ತಾಂತ್ರಿಕ್ ಆರ್ಟಿಸ್ಟ್,** ಪಿಹೆಚ್.ಡಿ., ಮ.ಪ್ರ., ಬೆಂಗಳೂರು ವಿ.ವಿ., ೨೦೦೨

೨೦. ಡಾ. ಪ್ರಮೀಳಾ ಲೋಚನ: **ಮೈಂಡ್ ಮ್ಯೂಸಿಕ್ ಅಂಡ್ ಕಲರ್ ಎಕ್ಸ್ಪೋಸಸ್ ಅಂಡ್ ಡೆವೆಲಪ್ಮೆಂಟ್ ಆಫ್ ರಾಗಮಾಲಾ ಅಂಡ್ ಕಂಟೆಂಪೊರರಿ ಪೈಂಟಿಂಗ್**, ಪಿಹೆಚ್.ಡಿ., ಮ.ಪ್ರ., ಬೆಂಗಳೂರು ವಿ.ವಿ., ೨೦೦೨

೨೧. ಡಾ. ವೀಣಾ ಶೇಖರ್: **ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೈಂಟಿಂಗ್ ಆಫ್ ಕರ್ನಾಟಕ (೧೭೮೦-೧೮೨೦)**, ಪಿಹೆಚ್.ಡಿ., ಮ.ಪ್ರ., ಬೆಂಗಳೂರು ವಿ.ವಿ., ೨೦೦೩

೨೨. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ: **ಕಲಾವಿದ ಆರ್.ಎಂ. ಹಡಪದ ಒಂದುಅಧ್ಯಯನ**, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ., ೨೦೦೩

೨೩. ಡಾ. ಎಸ್.ಸಿ. ಪಾಟೀಲ: **ಎ ಕ್ರಿಟಿಕಲ್ ಅನಾಲಿಸಿಸ್ ಆಫ್ ಆರ್ಟ್ ಎಜುಕೇಷನ್ ಅಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ರೆಫೆರೆನ್ಸ್ ಟು ಡ್ರಾಯಿಂಗ್ ಅಂಡ್ ಪೈಂಟಿಂಗ್**, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ., ೨೦೦೩

೨೪. ಡಾ. ವಿ.ಎಂ. ಬಾಗಾಯತ್: **ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ ಒಂದು ಅಧ್ಯಯನ (೧೪೦೦-೧೮೦೦)**, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ., ೨೦೦೪

೨೫. ಡಾ. ಶಿವಕುಮಾರ ಎ.ಓ: **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು,** ಪಿಹೆಚ್.ಡಿ., ಮ.ಪ್ರ., ಗು.ವಿ. ಗು. ೨೦೦೪

ಬಾಗೋಡಿಯವರು ಎಂ.ಫಿಲ್. ಪದವಿಗಾಗಿ **ಚಿತ್ರಕಲಾವಿದ ಜೆ.ಎಸ್. ಖಂಡೇರಾವ್, ಒಂದು ಅಧ್ಯಯನ**[೨೬] ಎಂಬ ಪ್ರಬಂಧವನ್ನು ಮಂಡಿಸಿದ್ದಾರೆ.

೨೦೦೩ ರಲ್ಲಿ ಎ.ಎಸ್. ವಿಶ್ವನಾಥ್‌ರವರು **ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣ**[೨೭] ಎಂಬ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಮಂಡಿಸಿದ್ದಾರೆ. ೨೦೦೫ ರಲ್ಲಿ ಶಂಕರ ಕುಂದಗೋಳ ಅವರು **ಕಲಾವಿದ ಡಿ.ವಿ. ಹಾಲಭಾವಿಯವರ ಕಲೆ ಮತ್ತು ಜೀವನ**[೨೮] ಎಂಬ ಕಿರು ಪ್ರಬಂಧವನ್ನು, ೨೦೦೫ ರಲ್ಲಿ ಸಿ.ಡಿ. ಜಟ್ಟೆಣ್ಣನವರು **ಕಲಾವಿದ ಎಂ.ವಿ. ಮಿಣಜಗಿಯವರ ಕಲೆ ಮತ್ತು ಜೀವನ**[೨೯] ಎಂಬ ಕಿರು ಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಮಂಡಿಸಿದ್ದಾರೆ.

೨೦೦೫ರಲ್ಲಿ ಡಾ. ಉಪಾಧ್ಯಾಯರವರು **ದೃಶ್ಯಕಲೆಯಲ್ಲಿ ತೌಲನಿಕ ಅಧ್ಯಯನ**[೩೦] ಎಂಬ ವಿಷಯವನ್ನು ಕುರಿತು ಮಾಡಿದ ಮಹಾಪ್ರಬಂಧವನ್ನು ಡಿ.ಲಿಟ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ್ದರೆ. ೨೦೦೫ರಲ್ಲಿ ಆನಂದ ಪೂಜಾರ ಅವರು ಡಿ.ಲಿಟ್. ಪದವಿಗಾಗಿ **ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ**[೩೧] ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಿದ್ದಾರೆ. ಇದರಲ್ಲಿ ಕರ್ನಾಟಕದ ಕರಾವಳಿಯಲ್ಲಿ ರಚಿಸುವ ಕಾವಿ ಚಿತ್ರಕಲೆಯನ್ನು ಕುರಿತು ವಿವರವಾಗಿ ಅಧ್ಯಯನವನ್ನು ಮಾಡಲಾಗಿದೆ. ೨೦೦೫ ರಲ್ಲಿ ಡಾ. ಶಿವಪ್ರಕಾಶ. ಎಲ್. ತುಕ್ಕಣ್ಣವರ ಇವರು ಪಿಹೆಚ್.ಡಿ. ಪದವಿಗಾಗಿ **ಕರ್ನಾಟಕ ರಥಶಿಲ್ಪಕಲೆ**[೩೨] ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಿದ್ದಾರೆ. ಈ ಮಹಾಪ್ರಬಂಧವು ಉತ್ತರ ಕರ್ನಾಟಕದ ರಥ ಶಿಲ್ಪಕಲೆಯನ್ನು ಕುರಿತು, ಅದರ ರಚನಾ ವಿಧಾನಗಳನ್ನು ಕುರಿತು ವಿವರವಾಗಿ ತಿಳಿಸುತ್ತದೆ.

ಡಾ. ಶಶಿಕಲಾ ಹೂಗಾರ್‌ರವರು **ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ**[೩೩] ಎಂಬ ವಿಷಯವನ್ನು ಕುರಿತು ಮಾಡಿದ ಮಹಾಪ್ರಬಂಧವನ್ನು ಪಿಹೆಚ್. ಡಿ. ಪದವಿಗಾಗಿ

---

೨೬. ಮಲ್ಲಿಕಾರ್ಜುನ ಬಾಗೋಡಿ: **ಚಿತ್ರಕಲಾವಿದ ಜೆ.ಎಸ್. ಖಂಡೇರಾವ್ ಒಂದು ಅಧ್ಯಯನ**, ಎಂ.ಫಿಲ್., ಸಂ.ಪ್ರ., ಕನ್ನಡ ವಿ.ವಿ., ೨೦೦೨

೨೭. ಎ.ಎಸ್. ವಿಶ್ವನಾಥ: **ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣ**, ಎಂ.ಫಿಲ್., ಸಂ.ಪ್ರ., ಕನ್ನಡ ವಿ.ವಿ., ೨೦೦೩

೨೮. ಎಸ್. ಕುಂದಗೋಳ: **ಕಲಾವಿದ ಡಿ.ವಿ. ಹಾಲಭಾವಿಯವರ ಕಲೆ ಮತ್ತು ಜೀವನ**, ಎಂ.ಫಿಲ್., ಸಂ.ಪ್ರ., ಕನ್ನಡ ವಿ.ವಿ., ೨೦೦೫

೨೯. ಎ.ಡಿ. ಜಟ್ಟೆಣ್ಣನವರ್: **ಕಲಾವಿದ ಎಂ.ವಿ. ಮಿಣಜಗಿಯವರ ಕಲೆ ಮತ್ತು ಜೀವನ**, ಎಂ.ಫಿಲ್., ಸಂ.ಪ್ರ., ಕನ್ನಡ ವಿ.ವಿ., ೨೦೦೫

೩೦. ಡಾ. ಉಪಾಧ್ಯಾಯ: **ದೃಶ್ಯಕಲೆಯಲ್ಲಿ ತೌಲನಿಕ ಅಧ್ಯಯನ**, ಡಿ.ಲಿಟ್., ಮ.ಪ್ರ., ಕನ್ನಡ ವಿ.ವಿ., ೨೦೦೫

೩೧. ಡಾ. ಆನಂದ ಪೂಜಾರಿ: **ದಕ್ಷಿಣ ಕರಾವಳಿಯ ಕಾವಿ ಕಲೆ**, ಡಿ.ಲಿಟ್., ಮ.ಪ್ರ., ಕನ್ನಡ ವಿ.ವಿ., ೨೦೦೫

೩೨. ಡಾ. ಶಿವಪ್ರಕಾಶ ಎಲ್. ತುಕ್ಕಣ್ಣವರ: **ಕರ್ನಾಟಕ ರಥಶಿಲ್ಪಕಲೆ**, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ, ೨೦೦೫

೩೩. ಡಾ. ಶಶಿಕಲಾ ಹೂಗಾರ್: **ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ**, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ, ೨೦೦೫

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ್ದಾರೆ. ಡಾ. ಹೆಚ್.ಎನ್. ಚಿತ್ರಗಾರ್‌ರವರು **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ**[೩೪] ಎಂಬ ವಿಷಯವನ್ನು ಕುರಿತು ಮಾಡಿದ ಮಹಾಪ್ರಬಂಧವನ್ನು ಪಿಹೆಚ್. ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ್ದಾರೆ. ಡಾ ವಿಶ್ವೇಶ್ವರಿ ತಿವಾರಿರವರು **ರಂಗೋಲಿ ಕಲೆ**[೩೫] ಎಂಬ ವಿಷಯುವನ್ನು ಕುರಿತು ಮಾಡಿದ ಮಹಾಪ್ರಬಂಧವನ್ನು ಪಿಹೆಚ್. ಡಿ. ಪದಪಿಗಾಗಿ ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ್ದಾರೆ.

ದೃಶ್ಯಕಲೆಯಲ್ಲಿ ವಿವಿಧ ಆಯಾಮಗಳು, ವಿವಿಧ ಉದ್ದೇಶ ಮತ್ತು ವಿವಿಧ ಸ್ವರೂಪಗಳನ್ನು ಹೊತ್ತಿರುವ ವಿಷಯಗಳು ಇರುವುದು ತಿಳಿದು ಬರುತ್ತದೆ. ದೃಶ್ಯಕಲೆಯು ವಿಶಾಲವಾದುದಾಗಿದ್ದು, ಇದರಲ್ಲಿ ಕಲೆಯ ಜೊತೆಗೆ ವಿವಿಧ ಸಂಸ್ಕೃತಿ, ಧರ್ಮ, ಮನೋಧರ್ಮವೂ ಸೇರುತ್ತವೆ. ದೃಶ್ಯಕಲೆಯು ಕೇವಲ ಭೌತಿಕವಾದುದಷ್ಟೇ ಅಲ್ಲ ಇದರಲ್ಲಿ ಆಧ್ಯಾತ್ಮಿಕತೆಯು ಇರುವುದು ಇದರ ವಿಶೇಷತೆಗೆ ಕಾರಣವಾಗಿದೆ. ಆದಕಾರಣ ಇನ್ನೂ ಹೆಚ್ಚಿನ ಸಂಶೋಧನೆಯ ಕಾರ್ಯಗಳು ಈ ಕ್ಷೇತ್ರದಲ್ಲಿ ನಡೆಯಬೇಕಾಗಿದೆ. ಕಲೆಯು ಲೌಕಿಕತೆ ಮತ್ತು ಅಲೌಕಿಕತೆ ಎರಡನ್ನೂ ಒಂದೆಡೆ ಸೇರಿಸುತ್ತದೆ. ಇದೇ ಕಲೆಯ ವಿಶೇಷತೆಯಾಗಿದೆ ಎಂದರೆ ತಪ್ಪಾಗಲಾರದು.

ದೀಪಸ್ತಂಭಗಳ ಬಗೆಗೆ ಇಲ್ಲಿಯವರೆಗು ನಡೆದಿರುವ ಅಧ್ಯಯನದ ಸಮೀಕ್ಷೆ:

ದೇವಾಲಯದ ಆವರಣದಲ್ಲಿ ಇರುವ ದೀಪಸ್ತಂಭಗಳನ್ನು ಕುರಿತು ವಿಶೇಷವಾಗಿ ಮಾಡಿರುವ ಅಧ್ಯಯನಗಳು ಹೆಚ್ಚಾಗಿ ದೊರೆಯುವುದಿಲ್ಲ. ದೇವಾಲಯದ ವಾಸ್ತುಶಿಲ್ಪಗಳನ್ನು ಕುರಿತು ಇರುವ ಅಧ್ಯಯನಗಳಲ್ಲಿ ದೀಪಸ್ತಂಭವನ್ನು ಕುರಿತಾದ ಕೆಲವೇ ಕೆಲವು ಉಲ್ಲೇಖಗಳು ಇರುವುದು ಕಾಣುತ್ತದೆ. ಇದೇ ಉದ್ದೇಶದ ಹಿನ್ನೆಲೆಯಲ್ಲಿ ದೀಪಸ್ತಂಭವನ್ನು ಈ ಅಧ್ಯಯನದಲ್ಲಿ ವಸ್ತುವಿಷಯವನ್ನಾಗಿ ತೆಗೆದುಕೊಳ್ಳಲಾಗಿದೆ.

ತಿರುಮಲೆ ಶ್ರೀ ರಂಗಾಚಾರ್ಯರವರು ಮಲ್ಲಾರ ಎಂಬ ಮಾಸ ಪತ್ರಿಕೆಗೆ **ಸ್ತಂಭಮಾಲಾ, ಸ್ತಂಭಪುರಾಣ** ಎಂಬ ಶೀರ್ಷಿಕೆಯಡಿಯಲ್ಲಿ ಸ್ತಂಭಗಳು, ಅವುಗಳ ಉಗಮ, ದೀಪಸ್ತಂಭಗಳು, ದೀಪಮಾಲೆಗಂಬಗಳು ಕುರಿತು ಲೇಖನಗಳನ್ನು ಬರೆದಿದ್ದಾರೆ[೩೬]. ದೇವಾಲಯಗಳ ವಾಸ್ತುಶಿಲ್ಪವನ್ನು ಹೇಳುವ ಹಿನ್ನೆಲೆಯಲ್ಲಿ ದೀಪಸ್ತಂಭಗಳನ್ನು ಕುರಿತು ಹೇಳಿರುವ ಉಲ್ಲೇಖಗಳು ದೊರೆಯುತ್ತವೆ. ಕರ್ಮವೀರ ಮಾಸಪತ್ರಿಕೆಯಲ್ಲಿ ಪ್ರಕಟವಾಗಿರುವ **ಚೆನ್ನಕೇಶವನ ಬೇಲೂರು ಶಿಲ್ಪಕಲೆಯ ತವರೂರು** ಎಂಬ ಲೇಖನದಲ್ಲಿ ಬೇಲೂರಿನಲ್ಲಿ

---

೩೪. ಡಾ. ಹೆಚ್.ಎನ್.ಚಿತ್ರಗಾತ: **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ**, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ., ೨೦೦೫

೩೫. ಡಾ. ವಿಶ್ವೇಶ್ವರಿ ತಿವಾರಿ: **ರಂಗೋಲಿ ಕಲೆ**, ಪಿಹೆಚ್.ಡಿ., ಮ.ಪ್ರ., ಗುಲ್ಬರ್ಗ ವಿ.ವಿ., ೨೦೦೬

೩೬. ತಿರುಮಲೆ ಶ್ರೀ ರಂಗಾಚಾರ್ಯ: ಲೇಖನ: **ಸ್ತಂಭ ಮಾಲಾ, ಸ್ತಂಭಪುರಾಣ**, ಮಲ್ಲಾರ ಮಾಸಪತ್ರಿಕೆ

ಇರುವ ದೀಪಸ್ತಂಭದ ವಿಶೇಷತೆಯನ್ನು ಕುರಿತು ಹೇಳಲಾಗಿದೆ[೩೭].

ಕಾಕೋಳು ರಾಘವೇಂದ್ರ ಮತ್ತು ಬೆ.ಗೋ. ರಮೇಶ್‌ರವರು ನಿರೂಪಣೆ ಮಾಡಿರುವ **ಕರ್ನಾಟಕದ ದೇವಾಲಯಗಳು** ಎಂಬ ಪುಸ್ತಕದಲ್ಲಿ ಕರ್ನಾಟಕದ ದೇವಾಲಯಗಳ ಸ್ಥಳ ವಿವರಗಳನ್ನು ನೀಡುವುದರ ಜೊತೆಗೆ ಅಲ್ಲಿ ಇರುವ ಕೆಲವು ವಿಶೇಷವಾದ ದೀಪಸ್ತಂಭಗಳನ್ನು ಕುರಿತು ಉಲ್ಲೇಖಗಳನ್ನು ನೀಡಲಾಗಿದೆ[೩೮]. ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವ **ಕರ್ನಾಟಕದ ದೇವಾಲಯ ಕೋಶ–ಹಾವೇರಿ ಜಿಲ್ಲೆ**[೩೯], **ಕರ್ನಾಟಕದ ದೇವಾಲಯ ಕೋಶ–ಬಳ್ಳಾರಿ ಜಿಲ್ಲೆ**[೪೦] ಎಂಬ ಗ್ರಂಥಗಳಲ್ಲಿ ದೇವಾಲಯಗಳನ್ನು ಕುರಿತು ಹೇಳುತ್ತಾ ಅಲ್ಲಿರುವ ದೀಪಸ್ತಂಭಗಳನ್ನು ಕುರಿತು ಕೆಲವು ಉಲ್ಲೇಖಗಳು ದೊರೆಯುತ್ತವೆ.

ಹಾಸನದ ಪಂಡಿತ್ ವೆಂಕಟ್ ರಾವ್‌ರವರು ಅನುವಾದಿಸಿರುವ **ಶಿವ ಮಹಾಪುರಾಣಂ** ಎಂಬ ಗ್ರಂಥದಿಂದ ಮಹಾ ಅಗ್ನಿಸ್ತಂಭವನ್ನು ಕುರಿತು ಪುರಾಣವು ಇರುವುದು ತಿಳಿದು ಬರುತ್ತದೆ[೪೧]. ಡಾ. ಬಿಕೆ. ಹಿರೇಮಠ ಅಭಿನಂದನಾ ಗ್ರಂಥವಾದ **ನಿಜದ ನೆಲೆ**ಯಲ್ಲಿ ಡಾ. ಶಿವಪ್ರಕಾಶ ತುಕ್ಕಣ್ಣವರ್ ರವರ **ದೀಪಸ್ತಂಭಗಳು– ಪ್ರತಿಷ್ಠಾಪನಾಕಲೆ** ಎಂಬ ಲೇಖನದಲ್ಲಿ ಸಮಕಾಲೀನ ಕಲೆಯಲ್ಲಿ ದೀಪಸ್ತಂಭಗಳ ಪಾತ್ರವನ್ನು ಕುರಿತು ವಿಶ್ಲೇಷಿಸಿದ್ದಾರೆ[೪೨].

ಪ್ರೊಫೆಸರ್ ಎಸ್.ಕೆ. ರಾಮಚಂದ್ರರಾವ್ ರವರ **ದಿ ಆರ್ಟ್ ಅಂಡ್ ಆರ್ಕಿಟೆಕ್ಚರ್ ಆಫ್ ಇಂಡಿಯನ್ ಟೆಂಪಲ್ಸ್** ಎಂಬ ಗ್ರಂಥದ ಮೂರನೆಯ ಸಂಪುಟದಲ್ಲಿ ಕರ್ನಾಟಕದ ದೇವಾಲಯಗಳ ಸ್ಥಳ ವಿವರ ಮತ್ತು ಅವುಗಳ ಚಾರಿತ್ರಿಕ ಹಿನ್ನೆಲೆಯನ್ನು ಹೇಳುತ್ತಾ ಅಲ್ಲಿ ಇರುವ ವಿಶೇಷವಾದ ದೀಪಸ್ತಂಭಗಳ ಎತ್ತರವನ್ನು ಮಾತ್ರ ವಿಶೇಷವಾಗಿ ಉಲ್ಲೇಖಿಸಲಾಗಿದೆ[೪೩].

---

೩೭. **ಚೆನ್ನಕೇಶವನ ಬೇಲೂರು ಶಿಲ್ಪಕಲೆಯ ತವರೂರು,**
ಕರ್ಮವೀರ ಯುಗಾದಿ ವಿಶೇಷಾಂಕ, ೨೦೦೩

೩೮. ನಿ: ಕಾಕೋಳು ರಾಘವೇಂದ್ರ, ಬೆ.ಗೋ. ರಮೇಶ್, ಸಂ: ಸು. ರಂಗಸ್ವಾಮಿ.
ಕರ್ನಾಟಕದ ದೇವಾಲಯಗಳು, ಹಂಸಧ್ವನಿ ಪ್ರಕಾಶನ, ೧೯೯೩

೩೯. ಡಾ. ಸಿ. ಮಹಾದೇವ, ಡಾ. ಸಿಎಸ್. ವಾಸುದೇವನ್, ರಮೇಶ ನಾಯಕ,
ಕರ್ನಾಟಕ ದೇವಾಲಯ ಕೋಶ– ಹಾವೇರಿ ಜಿಲ್ಲೆ, ಪ್ರಸಾರಾಂಗ, ಕ.ವಿ.ವಿ. ಹಂಪಿ, ೧೯೯೯

೪೦. ಡಾ. ಕೆ.ಎನ್. ಸುರೇಶ್, ವಾಸುದೇವ್ ಬಡಿಗೇರ್, ಮಾಡಲಗಿ ಕೊಟ್ರೇಶ್, ಎಸ್.ವೈ. ಸೋಮಶೇಖರ್,
ಕರ್ನಾಟಕ ದೇವಾಲಯ ಕೋಶ– ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕ.ವಿ.ವಿ. ಹಂಪಿ, ೧೯೯೯

೪೧. ಹಾಸನದ ಪಂಡಿತ್ ವೆಂಕಟ ರಾವ್: **ಶಿವ ಮಹಾಪುರಾಣಂ,**
ಶ್ರೀ ಚಾಮರಾಜೇಂದ್ರಗ್ರಂಥಮಾಲ, ಮೈಸೂರು– ೧೯೪೩

೪೨. ಡಾ. ಶಿವಪ್ರಕಾಶ ತುಕ್ಕಣ್ಣವರ: ಲೇಖನ: ದೀಪಸ್ತಂಭಗಳು–ಪ್ರತಿಷ್ಠಾಪನಾ ಕಲೆ,
ನಿಜದ ನೆಲೆ– ಡಾ. ಬಿ.ಕೆ. ಹಿರೇಮಠ ಅಭಿನಂದನಾ ಗ್ರಂಥ
ಸಂಪಾದಕರು: ಡಾ. ಎಸ್.ಸಿ. ಪಾಟೀಲ್: ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ.

೪೩. S.K.Ramachandra Rao: **The Art and Architecture of IndianTemples,**
Volume III, Kalpatharu research Academy, Bangalore

ಹಯವದನ ರಾವ್ ರವರ **ಮೈಸೂರು ಗೆಜೆಟಿಯರ್**‌ನ ಸಂಪುಟ ೨[೪೪] ಮತ್ತು ಸಂಪುಟ ೫[೪೫]ರಲ್ಲಿ ಮೈಸೂರು ರಾಜ್ಯ ಎಂದು ಗುರುತಿಸಿಕೊಳ್ಳುತ್ತಿದ್ದ ಕರ್ನಾಟಕದ ದೇವಾಲಯಗಳನ್ನು ಕುರಿತು ಹೇಳುತ್ತಾ ಆ ದೇವಾಲಯಗಳ ಆವರಣದಲ್ಲಿ ಇರುವ ದೀಪಸ್ತಂಭಗಳ ಬಗ್ಗೆ ಕೆಲವು ಉಲ್ಲೇಖಗಳು ಇರುವುದು ಕಾಣುತ್ತದೆ.

ಚೂಡಾಮಣಿ ನಂದಗೋಪಾಲ್ ಮತ್ತು ವತ್ಸಲಾ ಐಯ್ಯಂಗಾರ್‌ರವರ **ಟೆಂಪಲ್ ಟ್ರೆಷರ್ಸ್** ಎಂಬ ಗ್ರಂಥದಲ್ಲಿ ದೇವಾಲಯದ ಆಚರಣೆಯಲ್ಲಿ ಬಳಸಲಾಗುವ ಸಾಮಾಗ್ರಿಗಳು ಮತ್ತು ಅವುಗಳ ಆಚರಣಾ ವಿಧಿ ವಿಧಾನಗಳನ್ನು ವಿವರಿಸುತ್ತಾ ದೀಪಸ್ತಂಭವನ್ನು ಕುರಿತು ಹೇಳಲಾಗಿದೆ[೪೬]. ಡಿ.ಜಿ. ಕೆಲ್ಕರ್‌ರವರ **ಲ್ಯಾಂಪ್ಸ್ ಆಫ್ ಇಂಡಿಯಾ** ಎಂಬ ಗ್ರಂಥದಲ್ಲಿ ದೀಪಗಳು ಅವುಗಳ ವೈವಿಧ್ಯತೆಗಳನ್ನು ಕುರಿತು ವಿವರಿಸಿದ್ದಾರೆ[೪೭].

ದೇವಾಲಯದ ವಾಸ್ತುವಿನ್ಯಾಸ, ಅದರ ಚರಿತ್ರೆಯನ್ನು ಹೇಳುವ ಇಲ್ಲವೇ ದೀಪಸ್ತಂಭದಲ್ಲಿ ಇರುವ ಶಾಸನಗಳನ್ನು ಕುರಿತು ಹೇಳುವ ಸಂದರ್ಭದಲ್ಲಿ ದೇವಾಲಯದ ಆವರಣದಲ್ಲಿ ಇರುವ ದೀಪಸ್ತಂಭವನ್ನು ಕುರಿತು ಹೇಳಿರುವುದು ಕಂಡು ಬರುತ್ತದೆ. ದೇವಾಲಯದ ಆವರಣದಲ್ಲಿ ವಿಶೇಷವಾದ ಮಹತ್ವವನ್ನು ಹೊಂದಿರುವ ಈ ದೀಪಸ್ತಂಭಗಳನ್ನು ಕುರಿತು ಪ್ರತ್ಯೇಕವಾದ ಗ್ರಂಥಗಳು ರಚನೆಗೊಂಡಿಲ್ಲ. ದೀಪಸ್ತಂಭಗಳನ್ನು ಕುರಿತಾಗಿ ಹೆಚ್ಚಾಗಿ ಅಧ್ಯಯನವು ನಡೆದಿಲ್ಲವಾದ್ದರಿಂದ ಆ ಕೊರತೆಯನ್ನು ನೀಗಿಸುವ ಸಲುವಾಗಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಸಾಧ್ಯವಾದಷ್ಟು ಆಧಾರಗಳನ್ನು ಈ ಸಂಶೋಧನೆಯಲ್ಲಿ ಬಳಸಿಕೊಂಡು ಅಧ್ಯಯನವನ್ನು ಮಾಡಲಾಗಿದೆ.

* *** *

---

೪೪. Hayavadana Rao: **Mysore Gazetteer,** Volume II- Part I, B.R. Publishing Corporation, Delhi.

೪೫. S.K. Saraswathi: **Mysore Gazetteer,** Volume V, B.R. Publishing Corporation, Delhi.

೪೬. Choodamani Nandagopal and Vatsala Iyengar, **Temples Treasures**(Ritual Utensils), published by Craft Council of Karnataka, Bangalore-1

೪೭. D.G. Kelkar: Lamps of India, published by the Director, Publications division, Government of India, old secratariat, Delhi.

ಅಧ್ಯಯನದ ಸ್ವರೂಪ

ಕರ್ನಾಟಕದ ದೀಪಸ್ತಂಭಗಳು ಎಂಬ ಈ ಅಧ್ಯಾಯವನ್ನು ಏಳು ಪ್ರಮುಖ ಅಧ್ಯಾಯಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ. ಇಲ್ಲಿ ಇರುವ ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸಲ್ಪಟ್ಟಿರುವ ವಿಷಯಗಳನ್ನು ಸಂಕ್ಷಿಪ್ತವಾಗಿ ಈ ಕೆಳಗೆ ಹೇಳಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ಅಧ್ಯಯನವನ್ನು ಮಾಡಿದ ವಿಧಿ ವಿಧಾನಗಳನ್ನು ಕುರಿತು ಮಾಹಿತಿಯನ್ನು ಕೊಡಲಾಗಿದೆ.

ಎರಡನೆಯ ಅಧ್ಯಾಯವು ದೀಪಸ್ತಂಭಗಳ ಹಿನ್ನೆಲೆಯನ್ನು ಕುರಿತು ಹೇಳುತ್ತದೆ. ಈ ಅಧ್ಯಾಯದಲ್ಲಿ ದೀಪಸ್ತಂಭಗಳ ಪೌರಾಣಿಕ ಹಾಗೂ ಚಾರಿತ್ರಿಕವಾದ ಹಿನ್ನೆಲೆಯನ್ನು ಕುರಿತು ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ದೇವಾಲಯಗಳಲ್ಲಿ ದೀಪಸ್ತಂಭಗಳ ಹರವು ಎಂಬ ವಿಷಯವನ್ನು ಕುರಿತು ಹೇಳಲಾಗಿದೆ. ಈ ಅಧ್ಯಾಯದಲ್ಲಿ ದೇವಾಲಯದ ಒಳ ಆವರಣದಲ್ಲಿ ಬಳಸುವ ದೀಪಗಳ ವೈವಿಧ್ಯತೆಯನ್ನು ಕುರಿತು ಮಾಹಿತಿಯನ್ನು ನೀಡಲಾಗಿದೆ. ದೇವಾಲಯದ ಹೊರ ಆವರಣದಲ್ಲಿ ದೀಪಸ್ತಂಭಗಳ ಜೊತೆಗೆ ಇರುವ ಇನ್ನಿತರೆ ಸ್ತಂಭಗಳನ್ನು ಕುರಿತು ಸಹ ಈ ಅಧ್ಯಾಯದಲ್ಲಿ ವಿವರಣೆಯನ್ನು ಕೊಡಲಾಗಿದೆ.

ನಾಲ್ಕನೆಯ ಅಧ್ಯಾಯವು ದೇವಾಲಯದ ವಾಸ್ತುವಿನಲ್ಲಿ ದೀಪಸ್ತಂಭಗಳ ಪಾತ್ರವನ್ನು ಕುರಿತು ಮಾಹಿತಿಯನ್ನು ನೀಡುತ್ತದೆ. ಈ ಅಧ್ಯಾಯದಲ್ಲಿ ದೀಪಸ್ತಂಭಗಳ ರಚನಾ ಶೈಲಿಯನ್ನು ಕುರಿತು ಹೇಳಲಾಗಿದೆ.

ಐದನೆಯ ಅಧ್ಯಾಯದಲ್ಲಿ ಅಧ್ಯಯನದ ವ್ಯಾಪ್ತಿಯಲ್ಲಿ ದೊರೆಯುವ ದೀಪಸ್ತಂಭಗಳನ್ನು ವಿವಿಧ ಮಾಧ್ಯಮಗಳನ್ನಾಗಿ ವಿಂಗಡಿಸಿ ಚರ್ಚಿಸಲಾಗುತ್ತದೆ.

ಆರನೆಯ ಅಧ್ಯಾಯದಲ್ಲಿ ದೀಪಸ್ತಂಭಗಳ ರಚನೆಯಲ್ಲಿ ದೊರೆಯುವ ಶಿಲ್ಪಗಳ ಮತ್ತು ಸಂಕೇತಗಳ ಉದ್ದೇಶಗಳನ್ನು ಕುರಿತು ಹೇಳಲಾಗುತ್ತದೆ.

ಏಳನೆಯ ಅಧ್ಯಾಯ ಅಧ್ಯಾಯವು ಸಮಾರೋಪವಾಗಿದೆ. ಈ ಅಧ್ಯಾಯದಲ್ಲಿ ಉಳಿದ ಆರೂ ಅಧ್ಯಾಯಗಳನ್ನು ಕುರಿತು ಚರ್ಚಿಸುವಾಗ ದೊರೆಯುವ ಫಲಿತಗಳನ್ನು ಸಮೀಕರಿಸುವುದಾಗಿದೆ.

ಅಧ್ಯಯನದ ವ್ಯಾಪ್ತಿ

ಕರ್ನಾಟಕದ ದೀಪಸ್ತಂಭಗಳು ಎಂಬ ಈ ಅಧ್ಯಯನವು ವಿಶಾಲವಾದುದರಿಂದ ಇದರಲ್ಲಿ ಅಧ್ಯಯನದ ವ್ಯಾಪ್ತಿಯನ್ನು ಹಾಕಿಕೊಳ್ಳುವುದು ಅವಶ್ಯವಾಗಿದೆ. ಕರ್ನಾಟಕದಲ್ಲಿ ಒಟ್ಟು ಇಪತ್ತೇಳು ಜಿಲ್ಲೆಗಳಿವೆ. ಈ ಜಿಲ್ಲೆಗಳನ್ನು ಭೌಗೋಳಿಕವಾಗಿ ನಾಲ್ಕು ಪ್ರದೇಶಗಳನ್ನಾಗಿ ವಿಂಗಡಿಸಿದಾಗ ಉತ್ತರದ ಪ್ರದೇಶ, ಕರಾವಳಿ ಪ್ರದೇಶ, ಮಧ್ಯದ ಪ್ರದೇಶ ಹಾಗೂ ದಕ್ಷಿಣದ ಪ್ರದೇಶಗಳೆಂದು ಗುರುತಿಸಲಾಗುತ್ತದೆ.

ಕರ್ನಾಟಕದ ಉತ್ತರದ ಪ್ರದೇಶವು ಬೀದರ್, ಬಿಜಾಪುರ, ಬಾಗಲಕೋಟೆ, ಬೆಳಗಾಂ, ಗುಲ್ಬರ್ಗಾ, ರಾಯಚೂರು, ಕೊಪ್ಪಳ ಜಿಲ್ಲೆಗಳನ್ನು ಹೊಂದಿದೆ. ಕರಾವಳಿ ಪ್ರದೇಶದಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿವೆ. ಮಧ್ಯದ ಪ್ರದೇಶವು ಚಿಕ್ಕಮಗಳೂರು, ಬಳ್ಳಾರಿ, ಧಾರವಾಡ, ಹಾವೇರಿ, ಗದಗ, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳನ್ನು ಒಳಗೊಂಡಿದೆ. ಕರ್ನಾಟಕದ ದಕ್ಷಿಣದ ಪ್ರದೇಶವು ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ, ತುಮಕೂರು, ಹಾಸನ ಮತ್ತು ಕೋಲಾರ, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಜಿಲ್ಲೆಗಳನ್ನು ಹೊಂದಿದೆ.

ಈ ಸಂಶೋಧನೆಯಲ್ಲಿ ಕರ್ನಾಟಕದ ದಕ್ಷಿಣದ ಪ್ರದೇಶವನ್ನು ವಿಶೇಷವಾಗಿ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ. ಪ್ರತಿ ಜಿಲ್ಲೆಯಲ್ಲಿ ವಿಶೇಷವಾದ ಹಾಗೂ ಪ್ರಾಚೀನವಾದ ದೇವಾಲಯಗಳ ಕ್ಷೇತ್ರಕಾರ್ಯವನ್ನು ಮಾಡಿ ದೇವಾಲಯದ ಆವರಣದಲ್ಲಿ ದೊರೆಯುವ ದೀಪಸ್ತಂಭಗಳ ಅಧ್ಯಯನವನ್ನು ಮಾಡಲಾಗಿದೆ. ಕರ್ನಾಟಕದ ದಕ್ಷಿಣದ ಪ್ರದೇಶದಲ್ಲಿ ದೊರೆಯುವ ದೀಪಸ್ತಂಭಗಳ ಜೊತೆಗೆ ಕರ್ನಾಟಕದ ಉತ್ತರದ ಪ್ರದೇಶ, ಕರಾವಳಿ ಪ್ರದೇಶ ಹಾಗೂ ಮಧ್ಯದ ಪ್ರದೇಶಗಳಲ್ಲಿ ದೊರೆಯುವ ಪ್ರಸಿದ್ಧ ಹಾಗೂ ಪುರಾತನವಾದ ದೀಪಸ್ತಂಭಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ಪ್ರಸ್ತುತ ಕಾಲದಲ್ಲಿ ವಿದ್ಯುತ್ ದೀಪಗಳನ್ನು ಬಳಸುವುದರಿಂದ ರಾಜ್ಯದಲ್ಲಿ ಇರುವ ಎಲ್ಲಾ ದೇವಾಲಯಗಳ ಮುಂದೆ ದೀಪಸ್ತಂಭಗಳು ದೊರೆಯುವುದಿಲ್ಲ. ದೀಪಸ್ತಂಭಗಳು ಕೇವಲ ಬೆಳಕಿಗಾಗಿ ಎಂದು ತಿಳಿದುದರಿಂದ ಈ ಪರಿಸ್ಥಿತಿ ಇದೆ ಎಂದು ಕಾಣುತ್ತದೆ. ಒಂದು ಜಿಲ್ಲೆಯನ್ನು ಮಾತ್ರಾ ಅಧ್ಯಯನಕ್ಕೆ ಒಳಪಡಿಸಿಕೊಂಡರೆ ಅಲ್ಲಿ ದೊರೆಯುವ ದೀಪಸ್ತಂಭಗಳು ಬೆರಳೆಣಿಕೆಯಷ್ಟು ದೊರೆಯುತ್ತದೆ. ಆದ್ದರಿಂದ ಕರ್ನಾಟಕವನ್ನು ಭೌಗೋಳಿಕವಾಗಿ ನಾಲ್ಕು ಪ್ರಮುಖ ಭಾಗಗಳಾಗಿ ವಿಂಗಡಿಸಿ ಒಂದು ಭಾಗವನ್ನು ಮಾತ್ರ ಸಂಶೋಧನೆಗೆ ತೆಗೆದುಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ಮೈಸೂರು ವಿಭಾಗದ ಅದರಲ್ಲೂ ವಿಶೇಷವಾಗಿ ಮೈಸೂರು, ಚಾಮರಾಜ ನಗರ, ಮಂಡ್ಯ, ಕೊಡಗು, ಹಾಸನ ಜಿಲ್ಲೆಗಳ ಜೊತೆಗೆ ಆನುಷಂಗಿಕವಾಗಿ ಬೆಂಗಳೂರು, ತುಮಕೂರು ಮತ್ತು ಕೋಲಾರ ಜಿಲ್ಲೆಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಈ ವ್ಯಾಪ್ತಿಯಲ್ಲಿ ದೊರೆಯುವ ದೀಪಸ್ತಂಭಗಳ ಸಾಧ್ಯವಾದಷ್ಟು ನಮೂನೆಗಳನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಅಧ್ಯಯನದ ವಿಧಾನ

ದೀಪಸ್ತಂಭಗಳನ್ನು ಕುರಿತಾದ ಈ ಮಹಾಪ್ರಬಂಧವನ್ನು ರಚಿಸುವ ಸಲುವಾಗಿ ಪ್ರಮುಖವಾಗಿ ಎರಡು ರೀತಿಯಲ್ಲಿ ಆಕರ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ. ಈ ಅಧ್ಯಯನದ ಹಿನ್ನಲೆಯಲ್ಲಿ ಕ್ಷೇತ್ರಕಾರ್ಯ ಸಂದರ್ಶನಗಳು ಪ್ರಮುಖವಾದುದರಿಂದ ಅವುಗಳನ್ನು ಎರಡು ಮುಖ್ಯವಾದ ಆಕರ ಸಾಮಗ್ರಿಗಳೆಂದು ಗುರುತಿಸಲಾಗಿದೆ.

೧. ಮೂಲ ಆಕರ ಸಾಮಗ್ರಿ

೨. ಆನುಷಂಗಿಕ ಆಕರ ಸಾಮಗ್ರಿ

೧. ಮೂಲ ಆಕರ ಸಾಮಗ್ರಿ:

ದೀಪಸ್ತಂಭಗಳನ್ನು ಕುರಿತು ಅಧ್ಯಯನ ಮಾಡುವಾಗ ಅಧ್ಯಯನದ ಪರಿಧಿಗೆ ಒಳಪಟ್ಟಂತಹ ದೇವಾಲಯಗಳ, ದೀಪಸ್ತಂಭಗಳ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಗಿದೆ. ಈ ಕ್ಷೇತ್ರಕಾರ್ಯದ ವಿಧಾನದಲ್ಲಿ ಇತರೆ ಆಕರ ಸಾಮಗ್ರಿಗಳೂ ಒಳಗೊಂಡಿರುತ್ತವೆ.

೧. ಸಂದರ್ಶನ

೨. ಧ್ವನಿ ಮುದ್ರಣ

೩. ಛಾಯಾಗ್ರಹಣ

೪. ಸಂಗ್ರಹಿಸಿದ ವಿಷಯಗಳ ವಿಂಗಡಣೆ

೧. ಸಂದರ್ಶನ:

ಅಧ್ಯಯನದ ವ್ಯಾಪ್ತಿಗೆ ಒಳಪಡುವ ದೇವಾಲಯಗಳ ಕ್ಷೇತ್ರ ಕಾರ್ಯವನ್ನು ಕೈಗೊಳ್ಳಲಾಯಿತು. ಈ ರೀತಿಯಾಗಿ ಕ್ಷೇತ್ರಕಾರ್ಯವನ್ನು ಮಾಡುವಾಗ ಆಯಾ ದೇವಾಲಯಗಳ ಮಠಾಧಿಪತಿಗಳ, ಪುರೋಹಿತರ ಭೇಟಿಯ ಜೊತೆಗೆ ದೇವಾಲಯಕ್ಕೆ ಸಂಬಂಧಪಟ್ಟಂತಹ ಹಿರಿಯರನ್ನು ಭೇಟಿ ಮಾಡಲಾಯಿತು. ಈ ಸಂದರ್ಶನಗಳಲ್ಲಿ ದೀಪಗಳನ್ನು ಕುರಿತು, ದೀಪಸ್ತಂಭಗಳನ್ನು ಕುರಿತು ಅವರವರ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು. ಹಬ್ಬಹರಿದಿನಗಳಲ್ಲಿ ದೀಪಸ್ತಂಭಗಳ ಪಾತ್ರಗಳನ್ನು ಕುರಿತು ತಿಳಿಯುವಂತಾಯಿತು. ದೇವಾಲಯಗಳ ಹೊರ ಆವರಣದಲ್ಲಿ ದೀಪಸ್ತಂಭಗಳ ಜೊತೆಗೆ ಇನ್ನು ಇತರೆ ಪ್ರಾಕಾರಗಳಿರುವುದು ಕಾಣುತ್ತದೆ. ಹೊರ ಆವರಣದ ಈ ಪ್ರಾಕಾರಗಳನ್ನು ಕುರಿತು ಸಂದರ್ಶನದಲ್ಲಿ ಸಂಗ್ರಹಣೆಯನ್ನು ಮಾಡಲಾಯಿತು.

ದೇವಾಲಯದ ಹಿರಿಯರನ್ನಷ್ಟೇ ಅಲ್ಲದೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಿದಂತಹ ವಿದ್ವಾಂಸರನ್ನು ಸಂದರ್ಶಿಸಲಾಯಿತು. ಅವರಲ್ಲಿ ಕೆಲವರು ನಾಟಕಕಾರು, ಹಿರಿಯ ಲೇಖಕರು, ಸಂಸ್ಕೃತ ಪಂಡಿತರು, ಸಮಕಾಲೀನ ಶಿಲ್ಪಕಲಾವಿದರು, ಗರುಡಗಂಬ

ಶಿಲ್ಪಿಗಳು ಮುಂತಾದವರನ್ನು ಸಂದರ್ಶಿಸಲಾಗಿದೆ. ಇವರ ಸಂದರ್ಶನದಲ್ಲಿ ದೀಪ, ಹಾಗೂ ದೀಪಸ್ತಂಭಗಳ ಉಗಮವನ್ನು ಕುರಿತಾದ ಅವರ ಅಭಿಪ್ರಾಯಗಳನ್ನು ತಿಳಿಯಲಾಯಿತು. ದೀಪಸ್ತಂಭಗಳ ಉದ್ದೇಶ ಅವುಗಳ ವಿಶಿಷ್ಟತೆಯನ್ನು ಕೂಡಾ ಚರ್ಚಿಸಿ ಅವುಗಳ ಮಾಹಿತಿಯನ್ನು ಪಡೆಯಲಾಯಿತು.

೨. ಧ್ವನಿ ಮುದ್ರಣ:

ದೀಪಸ್ತಂಭಗಳನ್ನು ಕುರಿತು ತಿಳಿಯುವ ನಿಟ್ಟಿನಲ್ಲಿ ಮಾಡಿದ ಸಂದರ್ಶನಗಳಲ್ಲಿ ಕೆಲವನ್ನು ದಾಖಲು ಮಾಡಿ ಮತ್ತೆ ಮತ್ತೆ ಕೇಳಿ ಅರ್ಥೈಸಿಕೊಳ್ಳುವ ಸಲುವಾಗಿ ಧ್ವನಿ ಮುದ್ರಣವನ್ನು ಬಳಸಲಾಯಿತು. ಕೆಲವು ಸಂದರ್ಶನಗಳನ್ನು ಮತ್ತು ಸಂದರ್ಶಕರ ಮಾತುಗಳನ್ನು ವಿಶೇಷವಾಗಿ ತಿಳಿದುಕೊಳ್ಳಲು ಧ್ವನಿ ಮುದ್ರಣವು ಈ ಅಧ್ಯಯನದಲ್ಲಿ ಸಹಕಾರಿಯಾಗಿದೆ.

೩. ಛಾಯಾಗ್ರಹಣ:

ಕ್ಷೇತ್ರಕಾರ್ಯವೇ ಪ್ರಮುಖವಾದ ಈ ಅಧ್ಯಯನದಲ್ಲಿ ಛಾಯಾಗ್ರಹಣದ ಪಾತ್ರ ಮಹತ್ವದ್ದು. ಕ್ಷೇತ್ರಕಾರ್ಯದಲ್ಲಿ ಸಂದರ್ಶಿಸಿದ ಪ್ರತಿಯೊಂದು ದೇವಾಲಯಗಳ ದೀಪಸ್ತಂಭಗಳನ್ನು ಛಾಯಾ ಚಿತ್ರಗಳನ್ನು ತೆಗೆದುಕೊಳ್ಳಲಾಗಿದೆ. ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿ ಕೈಗೊಂಡ ಕ್ಷೇತ್ರಕಾರ್ಯಗಳಲ್ಲಿ ಮರ, ಶಿಲೆ, ಲೋಹ ಮತ್ತು ಸಂಕೀರ್ಣ ಮಾಧ್ಯಮದ ದೀಪಸ್ತಂಭಗಳ ಛಾಯಾ ಚಿತ್ರಣವನ್ನು ಮಾಡಲಾಗಿದೆ. ಅಷ್ಟೇ ಅಲ್ಲದೆ ದೀಪಸ್ತಂಭಗಳ ಭಾಗಗಳನ್ನು ಬಿಡಿ ಬಿಡಿಯಾಗಿಯೂ ಸಹ ಛಾಯಾ ಚಿತ್ರಣವನ್ನು ಮಾಡಲಾಗಿದೆ.

೪. ಸಂಗ್ರಹಿಸಿದ ವಿಷಯಗಳ ವಿಂಗಡಣೆ:

ಈ ಅಧ್ಯಯನಕ್ಕೆ ಒಳಪಡುವ ಕ್ಷೇತ್ರಕಾರ್ಯದಲ್ಲಿ ಕೈಗೊಳ್ಳುವ ಸಂದರ್ಶನ, ಧ್ವನಿ ಮುದ್ರಣ ಮತ್ತು ಛಾಯಾಗ್ರಹಣಗಳಿಂದ ದೊರೆಯುವ ವಿಷಯಗಳನ್ನು ಪ್ರತಿ ಅಧ್ಯಾಯಕ್ಕೆ ಅನುಗುಣವಾಗಿ ವಿಂಗಡಣೆ ಮಾಡಿಕೊಳ್ಳಲಾಗಿದೆ. ಇವುಗಳಿಂದ ದೊರೆಯುವ ವಿವರಗಳ ಆಧಾರದ ಮೇಲೆ ವಿಶ್ಲೇಷಿಸಲಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿ:

ಕ್ಷೇತ್ರಕಾರ್ಯದಲ್ಲಿ ಮಾಡುವ ಸಂದರ್ಶನ, ಧ್ವನಿ ಮುದ್ರಣ ಮತ್ತು ಛಾಯಾಗ್ರಹಣ ಈ ಅಧ್ಯಯನಕ್ಕೆ ಮೂಲ ಆಕರ ಸಾಮಗ್ರಿಯಾದರೆ ಅನುಷಂಗಿಕ ಆಕರ ಸಾಮಗ್ರಿಯಂತೆ ಸಹಕಾರಿಯಾಗುವ ರೀತಿಯಲ್ಲಿ ಪ್ರಕಟಿತ ಸಾಹಿತ್ಯ ಕೃತಿಗಳು, ಅಪ್ರಕಟಿತ ಸಾಹಿತ್ಯ ಕೃತಿಗಳು, ಶಾಸನ ಸಂಪುಟಗಳು, ಪಿಹೆಚ್.ಡಿ ಮಹಾಪ್ರಬಂಧಗಳು, ವಿಶ್ವಕೋಶಗಳು, ಗೆಜೆಟೀಯರ್‌ಗಳು, ಪುರಾಣ ಗ್ರಂಥಗಳು, ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಗೊಂಡಿರುವ ಗ್ರಂಥಗಳು, ನಿಘಂಟುಗಳು, ಲೇಖನಗಳು, ಮಾಸಪತ್ರಿಕೆಗಳು, ದಿನಪತ್ರಿಕೆಗಳು ಮುಂತಾದವುಗಳನ್ನು ಬಳಸಲಾಗಿದೆ.

ಅಧ್ಯಾಯ: ಎರಡು

ದೀಪಸ್ತಂಭಗಳ ನೆಲೆ–ಹಿನ್ನೆಲೆ

ದೀಪಸ್ತಂಭಗಳ ನೆಲೆ-ಹಿನ್ನೆಲೆ

ಭಾರತೀಯ ಸಂಪ್ರದಾಯದ ಆಚರಣೆಯಲ್ಲಿ ಯಾವುದೇ ವಸ್ತುವಿಷಯಗಳನ್ನು ಅವಲೋಕಿಸಿದರೆ ಅದಕ್ಕೆ ಪೌರಾಣಿಕವಾದ ಮಹತ್ವವಿರುವುದನ್ನು ಕಾಣುತ್ತೇವೆ. ಪುರಾಣಗಳು ಸಂಸ್ಕೃತಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುವುದನ್ನು ನೋಡಬಹುದು. ಪುರಾಣದ ಆಧಾರದ ಮೇಲೆ ಚಾರಿತ್ರಿಕವಾಗಿಯೂ ಬೆಳವಣಿಗೆಯು ಇರುವುದನ್ನು ಗಮನಿಸಬಹುದು. ದೇವಾಲಯದ ಭಾಗವಾಗಿ ಬೆಳೆದು ಬಂದಿರುವ ದೀಪಸ್ತಂಭಗಳು ಇದಕ್ಕೆ ಹೊರತೇನಲ್ಲ. ದೀಪಸ್ತಂಭಗಳು ಪೌರಾಣಿಕವಾದ ಉದ್ದೇಶಗಳನ್ನು ಹೊಂದಿರುವುದರ ಜೊತೆಗೆ ಚಾರಿತ್ರಿಕವಾಗಿಯೂ ಬೆಳೆದು ಬಂದಿರುವುದು ತಿಳಿದು ಬರುತ್ತದೆ. ದೀಪಸ್ತಂಭಗಳನ್ನು ಪ್ರಮುಖವಾಗಿ ಎರಡು ಹಿನ್ನೆಲೆಗಳಲ್ಲಿ ಅಧ್ಯಯನವನ್ನು ಮಾಡಲಾಗಿದೆ.

೧. ಪೌರಾಣಿಕ ಹಿನ್ನೆಲೆ

೨. ಚಾರಿತ್ರಿಕ ಹಿನ್ನೆಲೆ

೧. ಪೌರಾಣಿಕ ಹಿನ್ನೆಲೆ

ಭಾರತೀಯ ಸಂಪ್ರದಾಯವಾಗಲೀ ಬೇರೆ ಇನ್ನಾವುದೇ ಸಂಪ್ರದಾಯವಾಗಲೀ

ಪುರಾಣಗಳ ಆಧಾರದ ಮೇಲೆ ನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ. ಪುರಾಣಗಳ ಉಗಮವು ಬಿಡಿಸಲಾಗದ ಒಗಟಾಗಿದೆ. ಇದು ಮಾನವನ ಮನೋಧರ್ಮಕ್ಕೆ ಸಂಬಂಧಿಸಿರುವುದರಿಂದ ಇದನ್ನು ಕುರಿತು ವಿಶ್ಲೇಷಿಸುವುದು ಅಷ್ಟು ಸುಲಭದ ಕೆಲಸವಲ್ಲ. ನಮ್ಮ ವಿಶ್ವವು ಪಂಚಭೂತಗಳಿಂದ ಕೂಡಿರುವುದು ಎಲ್ಲರಿಗೂ ತಿಳಿದಂತಹ ವಿಷಯವಾಗಿದೆ. ಪಂಚಭೂತಗಳು ಭೂಮಿ, ಆಕಾಶ, ಜಲ, ವಾಯು ಮತ್ತು ಅಗ್ನಿಯಾಗಿದ್ದು, ಪುರಾಣಗಳಲ್ಲಿ ಈ ಎಲ್ಲಾ ಪಂಚಭೂತಗಳನ್ನು ವಿಶೇಷವಾಗಿ ಗುರುತಿಸಲಾಗುತ್ತದೆ. ಇವುಗಳಿಗೆ ರೂಪ ಆಕಾರಗಳನ್ನು ಕೊಟ್ಟಿರುವುದನ್ನು ಪುರಾಣಗಳಲ್ಲಿ ಕಾಣಬಹುದು. ಪುರಾಣಗಳಲ್ಲಿ ಪಂಚಭೂತಗಳಲ್ಲಿ ಅಗ್ನಿಗೆ ವಿಶೇಷವಾದ ಸ್ಥಾನವಿರುವುದು ತಿಳಿದು ಬರುತ್ತದೆ. ಅಗ್ನಿ ಮತ್ತು ಅಗ್ನಿಸ್ತಂಭಗಳನ್ನು ಕುರಿತು ಪುರಾಣಗಳ ಉಲ್ಲೇಖಗಳನ್ನು ತಿಳಿಯಬೇಕಾಗಿದೆ.

೧. ಅಗ್ನಿ ಮತ್ತು ದೀಪ

೨. ಅಗ್ನಿಸ್ತಂಭ

೧. ಅಗ್ನಿ ಮತ್ತು ದೀಪ:

ಅಗ್ನಿಯಿಂದ ದೊರೆಯುವ **ಬೆಳಕು** ಎಂಬ ಪದದಲ್ಲಿ ಕೇವಲ ಭೌತಿಕವಾದ ಅರ್ಥವಲ್ಲದೆ ಆಧ್ಯಾತ್ಮಿಕವಾದ ಅರ್ಥವೂ ಅಡಗಿದೆ. ಭೌತಿಕತೆ ಮತ್ತು ಆಧ್ಯಾತ್ಮಿಕತೆ ಎರಡನ್ನೂ ಪಡೆದಿರುವುದರಿಂದಲೇ ಪಂಚಭೂತಗಳಲ್ಲಿ ವಿಶೇಷವಾದ ಸ್ಥಾನವನ್ನು ಅಗ್ನಿಗೆ ಕಲ್ಪಿಸಲಾಗಿದೆ ಎಂದು ತೋರುತ್ತದೆ. ಭಾರತೀಯ ಧಾರ್ಮಿಕ ಪರಂಪರೆಯಲ್ಲಿಯೂ **ಅಗ್ನಿ** ಮತ್ತು **ಜ್ಯೋತಿ**ಗೆ ವಿಶೇಷವಾದ ಮಹತ್ವವನ್ನು ನೀಡಿರುವುದು ಕಂಡು ಬರುತ್ತದೆ.

ಅಗ್ನಿಯನ್ನು ಮಿತವಾಗಿ ಬಳಸಿ ಉಪಯೋಗಿಸಿಕೊಂಡಲ್ಲಿ ಮಾತ್ರ ಅದು **ದೀಪ** ಎನಿಸಿಕೊಳ್ಳುತ್ತದೆ. ಬೆಂಕಿಯ ಸಣ್ಣ ಕಿಡಿಯ ಭಾಗವನ್ನು ದೀಪವೆಂದು ಕರೆಯಲಾಗುತ್ತದೆ. ಮಾನವನಿಗೆ ದೀಪದ ಪರಿಕಲ್ಪನೆ ಬಂದಾಗಿನಿಂದ ನಾಗರೀಕತೆಗೆ ಆಧ್ಯಾತ್ಮಿಕ ಶಕ್ತಿ ಲಭಿಸಿತು ಎನ್ನಬಹುದು. ಬೆಳಕೇ ಮಾನವನಿಗೆ ಜ್ಞಾನದ ಮೂಲವಾಗಿದೆ ಎಂದರೆ ತಪ್ಪಾಗಲಾರದು. ಬೆಳಕನ್ನು ಜ್ಞಾನವೆಂದೂ ಅರ್ಥೈಸಿಕೊಳ್ಳುವುದೂ ಉಂಟು.

ಸಂಸ್ಕೃತದಲ್ಲಿ **ದೀಪ** ಎಂದರೆ ಅಂಧಕಾರವನ್ನು ತೊಲಗಿಸುವುದು ಎಂದು ಅರ್ಥ. ಅಂದರೆ ಇಲ್ಲಿ ನಮ್ಮ ಮನಸ್ಸಿನ ದುಃಖ, ದುಗುಡ, ದುಮ್ಮಾನಗಳಂತಹ ಇನ್ನಿತರೆ ಕೆಟ್ಟ ಆಲೋಚನೆಗಳನ್ನು ಕತ್ತಲಿಗೆ ಹೋಲಿಸಲಾಗಿದೆ. ಬೆಳಕು ಮತ್ತು ಕತ್ತಲು ಒಂದಕ್ಕೊಂದು ಸಂಬಂಧವನ್ನು ಹೊಂದಿರುವುದರಿಂದ ಭಾರತೀಯರು ಆರತಿ ಬೆಳಗುವಾಗ **ತಮಸೋಮ ಜ್ಯೋತಿರ್ಗಮಯ** ಎನ್ನುತ್ತಾರೆ.

ಭಾರತೀಯರ ಆಚಾರ ವಿಚಾರಗಳಲ್ಲಿ ಅಗ್ನಿಯು (ದೀಪ) ವಿಶೇಷವಾದ ಸ್ಥಾನವನ್ನು ಪಡೆದಿರುವುದು ಗಮನಕ್ಕೆ ಬರುತ್ತದೆ. ಭಾರತೀಯರು ತಮ್ಮ ಆಚಾರ ವಿಚಾರಗಳಲ್ಲಿ

ಜ್ಯೋತಿಷ್ಯಾಂ ಜ್ಯೋತಿರುತ್ತಮಂ[೧] ಎಂದು ತಿಳಿಯುತ್ತಾರೆ. **ಸ್ಕಂದ ಪುರಾಣ**ದಲ್ಲಿ ಬೆಂಕಿಯ ಬೆಳಕಿಗಿಂತ, ಸೂರ್ಯನ ಬೆಳಕಿಗಿಂತ, ಚಂದ್ರನ ಬೆಳಕಿಗಿಂತ ದೀಪದ ಬೆಳಕು ಅತ್ಯುತ್ತಮವಾದುದು ಎಂದು ಹೇಳಲಾಗಿದೆ[೨]. ಹಿಂದೂ ತತ್ವ ಹಾಗೂ ಆಧ್ಯಾತ್ಮದ ಪ್ರಕಾರ ನಿಸರ್ಗದಲ್ಲಿ ಸೂರ್ಯ ಮತ್ತು ಅಗ್ನಿಗೆ ಹೆಚ್ಚಿನ ಆದ್ಯತೆ ನೀಡಿರುವುದನ್ನು ಗಮನಿಸಬಹುದು.

ಅಗ್ನಿಯ ಬೆಳಕನ್ನು ಸೂರ್ಯನಿಗೆ, ಹಗಲಿಗೆ ಮತ್ತು ಸಂಜೆಗೆ ಹೋಲಿಸಲಾಗುತ್ತದೆ. ಅಗ್ನಿಯೇ ಬೆಳಕು, ಬೆಳಕೇ ಸೂರ್ಯ ಎಂಬ ತಾತ್ಪರ್ಯವನ್ನು **ತೈತಿರೀಯ ಬ್ರಾಹ್ಮಣ** ಎಂಬ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ[೩]. ಪುರಾಣಗಳಲ್ಲಿ ಅಗ್ನಿಯನ್ನು ಆತ್ಮ, ಪರಮಾತ್ಮನ ನಡುವೆ ಇರುವ ಮಧ್ಯವರ್ತಿ ಎಂದು ಭಾವಿಸಲಾಗುತ್ತದೆ. ಇದೇ ಕಲ್ಪನೆಯ ಹಿನ್ನೆಲೆಯಲ್ಲಿ ಪ್ರಾರಂಭವಾದದ್ದು ಯಜ್ಞಕುಂಡಗಳು ಎಂದು ಋಗ್ವೇದದಲ್ಲಿ ಹೇಳಲಾಗಿದೆ[೪]. ಯಜ್ಞಕುಂಡದ ವಿಧಿವಿಧಾನದಲ್ಲಿ ಬಳಸುವ ಅಗ್ನಿಯನ್ನು ಸಣ್ಣ ಪ್ರಮಾಣದಲ್ಲಿ ಉಪಯೋಗಿಸಿದಾಗ ಅದು ದೀಪ ಎಂದು ಗುರುತಿಸಿಕೊಂಡಿತು.

ಋಗ್ವೇದವು ಅಗ್ನಿಗೆ ಮಹತ್ವ ಕೊಡುವುದರ ಜೊತೆಗೆ ಅಗ್ನಿಯನ್ನು ಎಲ್ಲವನ್ನೂ ತಿಳಿದಿರುವ ಸರ್ವಜ್ಞನೆಂದೂ, ಕವಿಯೆಂದೂ, ಆತ್ಮ ಪರಮಾತ್ಮನ ಮಧ್ಯವರ್ತಿ ಎಂದೂ ಗುರುತಿಸುತ್ತದೆ. ದೀಪವು ಮನುಷ್ಯನ ಜೀವನವನ್ನು ನಾನಾ ರೀತಿಯಲ್ಲಿ ಬೆಳಗಿ, ಅವನ ಮನದಲ್ಲಿ ದೈವಿಕ ಜ್ಯೋತಿಯನ್ನು ಪ್ರಜ್ವಲಿಸಿದೆಯಲ್ಲದೆ, ಓರ್ವ ದಿವ್ಯ ಮಾನವ ಮತ್ತು ಒಂದು ದಿವ್ಯ ಸಮುದಾಯವನ್ನು ಕಲ್ಪಿಸುವಲ್ಲಿ ಜೀವನದ ಮೌಲ್ಯಗಳು ಮತ್ತು ಒಳ ದೃಷ್ಟಿಯನ್ನು ಪಡೆಯಲು ಸಹಕಾರಿಯಾಗಿದೆ. ಭಗವಾನ್ ಕೃಷ್ಣನು ಭಗವದ್ಗೀತೆಯಲ್ಲಿ ಸ್ಥಿತ ಪ್ರಜ್ಞವಾದ ಮನಸ್ಸಿನ ವೈಶಿಷ್ಟ್ಯಗಳನ್ನು ವಿವರಿಸುತ್ತಾ ಗಾಳಿ ಬೀಸಿದರೂ ಹೊಯ್ದಾಡದಂತಹ ದೀಪದ ಜ್ಯೋತಿಯಂತೆ ಮನಸ್ಸು ನಿಶ್ಚಲವಾಗಿರಬೇಕು ಎಂದು ಪ್ರತಿಪಾದಿಸಿರುವುದು ತಿಳಿದು ಬರುತ್ತದೆ.

ಡಿ.ಜಿ. ಕೆಲ್ಕರ್ ರವರು ತಮ್ಮ **ಲ್ಯಾಂಪ್ಸ್ ಆಫ್ ಇಂಡಿಯಾ** ಎಂಬ ಗ್ರಂಥದಲ್ಲಿ ದೀಪದ ಜ್ವಾಲೆಯನ್ನು ಆತ್ಮಕ್ಕೆ ಹೋಲಿಸಲಾಗುತ್ತದೆ ಎಂದೂ ಇತರರಿಗೆ ಜ್ಞಾನವನ್ನು ಕೊಡುವ ಪ್ರಯತ್ನದಲ್ಲಿ ದೀಪವನ್ನು ಬದುಕಿಗೆ ಹೋಲಿಸಲಾಗುತ್ತದೆ ಎನ್ನುತ್ತಾರೆ[೫]. ಪುರಾತನ ಗ್ರಂಥಗಳಲ್ಲಿ ಇವುಗಳನ್ನು ಕುರಿತು ಉಲ್ಲೇಖಗಳು ದೊರೆಯುತ್ತವೆ. ಈ ಗ್ರಂಥಗಳ ಪ್ರಕಾರ

---

೧. **ಕನ್ನಡ ವಿಶ್ವಕೋಶ,** ಸಂಪುಟ ೯, ಪುಟ- ೬೦೫

೨. Among the light of fire, the light of the sun, the light of the moon, this lamp is the best of lights (skandapurana)....
D.G. Kelkar. **The lamps of India,**

೩. Choodamani Nandagopal and Vatsala Iyengar, **Temple Treasures** (Utensils and Rituals), ಪುಟ-೧೧೩

೪. Choodamani Nandagopal and Vatsala Iyengar, **Temple Treasures** (Utensils and Rituals), ಪುಟ-೧೧೩

೫. D.G. Kelkar: **The lamps of India,**

ತನ್ನೊಳಿತಿಗಾಗಿ ಬದುಕುವುದನ್ನು ಪುಟ್ಟ ದೀಪಕ್ಕೆ ಹೋಲಿಸಿ ಅದನ್ನು **ತಾಮಸ ಧರ್ಮ** ಎನ್ನಲಾಗುತ್ತದೆ. ಬೇರೆಯವರಿಗಾಗಿ ತನ್ನ ಜೀವನವನ್ನು ಮುಡಿಪಾಗಿಡುವುದನ್ನು ದೀಪಮಾಲಗಂಬಕ್ಕೆ ಹೋಲಿಸಿ ಅದನ್ನು **ರಾಜಸ ಧರ್ಮ** ಎಂದೂ ಮತ್ತು ವಿಶ್ವದ ಒಳಿತಿಗಾಗಿ ಬದುಕನ್ನು ನಡೆಸುವುದನ್ನು **ಸಾತ್ವಿಕ ಧರ್ಮ**[೬] ಎಂದು ಕರೆಯುವುದನ್ನು ನೋಡಬಹುದು.

ಪುರಾತನ ಕಾಲದಲ್ಲಿಯೇ ಮಾನವನು ಜೀವನದ ಸೂತ್ರಗಳಲ್ಲಿ ತನ್ನ ಬದುಕಿನ ವಿಧಾನಗಳನ್ನು ಒಂದಲ್ಲ ಒಂದು ವಿಧದ ದೀಪಗಳಿಗೆ, ಅವುಗಳ ಬೆಳಕಿಗೆ ಹೋಲಿಸಿರುವುದನ್ನು ಕಾಣಬಹುದು. ಈ ರೀತಿಯಾಗಿ ದೀಪವು ಭಾರತೀಯರ ಜೀವನದಲ್ಲಿ ಸಾಂಕೇತಿಕವಾದ ಮಾದರಿಯಾಗಿ ಮಾರ್ಪಟ್ಟಿತು ಎಂದು ತೋರುತ್ತದೆ.

ಸೂರ್ಯ ಮತ್ತು ಅಗ್ನಿಯ ಸಂಕೇತವಾದ ದೀಪವನ್ನು ಮಂಗಳಕರವೆಂದು ಭಾವಿಸಲಾಗುತ್ತದೆ. **ಪ್ರಜ್ವಲಿತೋ ಜ್ಞಾನಮಯ ಪ್ರದೀಪಃ**[೭] ಎಂಬ ವೇದೋಕ್ತಿಯು **ಜ್ಞಾನ** ಎಂಬ ಬೆಳಕು ಪ್ರಕಾಶಿಸಲಿ ಎಂದರ್ಥವನ್ನು ಕೊಡುತ್ತದೆ. ಜ್ಞಾನ ಬೇರೆಯಲ್ಲ, ಅರಿವು ಬೇರೆಯಲ್ಲ ಎನ್ನುವಂತೆ ಬೆಳಕನ್ನು ಕೊಡುವ ದೀಪ ಬೇರೆಯಲ್ಲ, ಸೂರ್ಯ ಬೇರೆಯಲ್ಲ ಎಂಬುದು ಇದರ ತಾತ್ಪರ್ಯವಾಗಿದೆ.

ವೈದಿಕ ಸಾಹಿತ್ಯವು ಅಗ್ನಿಯನ್ನು ಕುರಿತಾದ ಅನೇಕ ಪ್ರಾರ್ಥನೆಗಳನ್ನು ಒಳಗೊಂಡಿರುವುದು ತಿಳಿದು ಬರುತ್ತದೆ. **ಹ್ವಯಾಮ್ಯಗ್ನಿಂ ಪ್ರಥಮಂ ಸ್ವಸ್ತಯೆ**[೮] ಸಮಸ್ತವೂ, ಸಮಸ್ತಕ್ಕೂ ಮಂಗಳಕರವಾಗಲಿ ಎಂದು ಅಗ್ನಿಯನ್ನು ಪ್ರಾರ್ಥಿಸುವುದಾಗಿದೆ. ಇನ್ನೊಂದು ಪ್ರಾರ್ಥನೆಯಲ್ಲಿ **ತ್ವಂನೋ ಅಗ್ನೇ ತವ ದೇವಪಾಯುಭಿರ್ಮಘೋನೋ ರಕ್ಷತನ್ವಶ್ಯ ವಂದ್ಯ**[೯] ಎಂಬ ಮಂತ್ರವನ್ನು ಪಠಿಸಲಾಗುತ್ತದೆ. ಅಗ್ನಿದೇವನಿಗೆ ವಂದಿಸುತ್ತಾ ತಮ್ಮ ಆರೋಗ್ಯವನ್ನು ಕಾಪಾಡು ಎನ್ನವುದರ ಜೊತೆಗೆ ತಮ್ಮನ್ನು ಧನವಂತರನ್ನಾಗಿಸು ಎಂದು ಬೇಡುವುದಾಗಿದೆ.

ಸಂಜೆ ಸೂರ್ಯಾಸ್ತದ ಸಮಯದಲ್ಲಿ ದೇವರ ಮುಂದೆ ದೀಪವನ್ನು ಬೆಳಗುತ್ತಾ **ಶುಭಂ ಕರೋತಿ ಕಲ್ಯಾಣಂ ಆರೋಗ್ಯಧನಂ ಸಂಪದಃ, ಶತ್ರುಬುದ್ಧಿ ವಿನಾಶಾಯ ದೀಪಜ್ಯೋತಿರ್ನಮೋಸ್ತುತೇ**[೧೦] ಎಂದು ಪ್ರಾರ್ಥಿಸಲಾಗುತ್ತದೆ. ದೀಪಜ್ಯೋತಿಯೇ ನೀನು

---

೬. To to leave for oneself, like a little lamp is the tamasa dharma, to live for others, like the deepa-mala, is rajasa dharma, and to live one's life is the contemplation of the universal power is sattvika dharma......
D.G. Kelkar: **The lamps of India,**

೭. ತಿರುಮಲೆ ಶ್ರೀ ರಂಗಾಚಾರ್ಯ: **ಸ್ತಂಭಮಾಲಾ,** ಮಲ್ಲಾರ ಮಾಸಪತ್ರಿಕೆ, ಆಗಸ್ಟ್ ೨೦೦೨, ಪುಟ- ೨೭

೮. **ಕರಕುಶಲಕಲೆಗಳು,** ಪುಟ- ೨೨೭

೯. **ಕರಕುಶಲಕಲೆಗಳು,** ಪುಟ- ೨೨೭

೧೦. ಜ್ಯೋತಿ: **ಪ್ರಾರ್ಥನೆಯ ಅಂತರಾತ್ಮ,** ಮಲ್ಲಾರ ಮಾಸಪತ್ರಿಕೆ, ಜೂನ್ ೨೦೦೪, ಪುಟ- ೧೬

ಒಳ್ಳೆಯದನ್ನು, ಕಲ್ಯಾಣವನ್ನು ಉಂಟು ಮಾಡುತ್ತೀಯ, ಆರೋಗ್ಯ ಧನ ಸಂಪತ್ತನ್ನು ನೀಡುತ್ತೀಯ, ಶತ್ರುಗಳ ಬುದ್ಧಿಯನ್ನು ವಿನಾಶ ಮಾಡಿ ನನ್ನನ್ನು ರಕ್ಷಿಸುತ್ತೀಯ ಆದ್ದರಿಂದ ನಿನಗೆ ನನ್ನ ನಮನಗಳು ಎಂದು ಹೇಳುವ ಪ್ರಾರ್ಥನೆ ಇದಾಗಿದೆ.

ಋಗ್ವೇದದಲ್ಲಿ ಯಜ್ಞಕುಂಡವು ಅಗ್ನಿ ಎಂದು ಹೇಳಿದರೆ, **ತೈತಿರೀಯ** ಸಂಹಿತೆಯಲ್ಲಿ **ಅಗ್ನಿರ್ದೇವಾನಾಂ ದೂತ ಅಸೀತ್**[೧೧] ದೇವರ ದೂತನಾದ ಅಗ್ನಿಯು ಯಜ್ಞಕುಂಡದಲ್ಲಿ ಇರುವನೆಂದು ಹೇಳಿರುವುದು ಕಾಣುತ್ತದೆ. ಅಗ್ನಿಯಿಂದ ಬೆಳಕು, ಬೆಳಕಿನಿಂದ ಬದುಕು ಎಂಬ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದ ವೈದಿಕ ಋಷಿಗಳು ಯಜ್ಞಕುಂಡವನ್ನು ಬಳಸುವ ಮುಖಾಂತರ ಅಗ್ನಿಗೆ ವಿಶೇಷವಾದ ಸ್ಥಾನವನ್ನು ನೀಡಿದರು ಎಂದರೆ ತಪ್ಪಾಗಲಾರದು.

ಮಹಾಗ್ರಂಥಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ದೀಪಗಳನ್ನು ಕುರಿತು ಇರುವ ಉಲ್ಲೇಖಗಳು ದೊರೆಯುತ್ತವೆ. ಇವುಗಳಲ್ಲಿ ದೀಪವು ಮಂಗಳವನ್ನು ಸಾಂಕೇತಿಸುತ್ತದೆ ಎಂದು ಹೇಳಲಾಗುತ್ತದೆ. ದೀಪದ ದರ್ಶನದಿಂದ ಕೀರ್ತಿಯನ್ನೂ ಉತ್ತಮವಾದ ಜ್ಞಾನದ ದೃಷ್ಟಿಯನ್ನೂ ಪಡೆಯುವನು[೧೨] ಎಂಬ ಉಲ್ಲೇಖಗಳು ಪುರಾಣಗಳಲ್ಲಿ ದೊರೆಯುತ್ತವೆ. ಅಗ್ನಿಗೂ ಐಶ್ವರ್ಯದ ಅಧಿದೇವತೆಯಾದ ಲಕ್ಷ್ಮಿಗೂ ಸಂಬಂಧವನ್ನು ಪುರಾಣಗಳಲ್ಲಿ ಶ್ಲೋಕಗಳಲ್ಲಿ ಹೇಳಲಾಗುತ್ತದೆ. ಋಗ್ವೇದದ ಖಿಲದ **ಶ್ರೀಸೂಕ್ತ**ದಲ್ಲಿಯೂ ಈ ರೀತಿಯ ಉಲ್ಲೇಖವಿರುವುದು ತಿಳಿಯುತ್ತದೆ[೧೩]. ಇದರಲ್ಲಿ ಐಶ್ವರ್ಯದ ಅಧಿದೇವತೆಯಾದ ಲಕ್ಷ್ಮಿಯನ್ನು ದೀಪದ ಬೆಳಕಿಗೆ ಹೋಲಿಸಲಾಗುತ್ತದೆ.

ಲಕ್ಷ್ಮಿಯು ದೀಪದ ಬೆಳಕಿನಿಂದ ಪ್ರಸನ್ನಳಾಗುವಳು ಎಂದು ಪುರಾಣದ ಕಥೆಯೊಂದು ಹೇಳುತ್ತದೆ. ಲಕ್ಷ್ಮೀದೇವಿಯು ಆಕಾಶ ಮಾರ್ಗದಲ್ಲಿ ಸಂಚರಿಸುತ್ತಿರುವಾಗ ಭೂಲೋಕದಲ್ಲಿ ಪುಟ್ಟದೊಂದು ಬೆಳಕನ್ನು ಕಂಡಳು. ಈ ಬೆಳಕನ್ನು ಹಿಂಬಾಲಿಸಿಕೊಂಡು ಲಕ್ಷ್ಮೀದೇವಿಯು ಹೊರಟಳು. ಆ ಬೆಳಕು ಪುಟ್ಟ ಗುಡಿಸಿಲಿನಲ್ಲಿ ಹಚ್ಚಿದ್ದ ದೀಪವೊಂದರಿಂದ ಬರುತಿತ್ತು. ತನ್ನನ್ನು ಒಲಿಸಿಕೊಳ್ಳಲು ದೀಪವನ್ನು ಹಚ್ಚಿರುವುದೆಂದು ತಿಳಿದು ಲಕ್ಷ್ಮೀದೇವಿಯು ಪ್ರಸನ್ನಗೊಂಡು ದೀಪವನ್ನು ಹಚ್ಚಿದಂತಹ ವ್ಯಕ್ತಿಗೆ ಧನಧಾನ್ಯಗಳನ್ನು ದಯಪಾಲಿಸಿದಳು ಎಂದು ಈ ಕಥೆ ಹೇಳುತ್ತದೆ. ದೀಪವು ಬೆಳಕನ್ನು ಕೊಡುವುದರ ಜೊತೆಗೆ ಮಂಗಳಕರವು ಎಂದು ತಿಳಿಯಲಾಗುತ್ತದೆ.

ದೀಪವು ಪ್ರಾಣವನ್ನೂ ಸಾಂಕೇತಿಸುತ್ತದೆ ಎನ್ನಲಾಗುತ್ತದೆ. ಯಾರಾದರೂ ದೈವಾಧೀನರಾದ ಸಂದರ್ಭದಲ್ಲಿ ದೀಪವನ್ನು ಹಚ್ಚುವುದು ವಾಡಿಕೆ. ಅವರು ಭವಬಂಧನದಿಂದ

೧೧. **ಕರಕುಶಲಕಲೆಗಳು**, ಪುಟ- ೨೨೭

೧೨. ಆಸ್ಥಾನ್ ವಿದ್ವಾನ್ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರೀ: **ಶ್ರೀ ಸ್ಕಾಂದ ಮಹಾಪುರಾಣಂ**, ಮಾಹೇಶ್ವರ ಖಂಡ-೧, ಪುಟ- ೧೭

೧೩. ಎಸ್.ಕೆ. ಹರಿಹರೇಶ್ವರ: **ಅಗ್ನಿ, ಲಕ್ಷ್ಮಿ, ಶುಕ್ರ ಮತ್ತು ದೀಪ**, ಮಲ್ಲಾರ ಮಾಸಪತ್ರಿಕೆ, ಮೇ ೨೦೦೫, ಪುಟ- ೧೬

ಮುಕ್ತರಾದರು ಎಂದು ಹೇಳುವುದು ಈ ದೀಪದ ಉದ್ದೇಶಗಳಲ್ಲಿ ಒಂದಾಗಿದೆ. ಇದಷ್ಟೇ ಅಲ್ಲದೆ ಸಾವಿನ ಅಧಿದೇವತೆ ಎಂದು ಹೇಳಲಾಗುವ ಯಮನನ್ನು ಶಾಂತಗೊಳಿಸುವ ಸಲುವಾಗಿಯೂ ದೀಪವನ್ನು ಹಚ್ಚಲಾಗುತ್ತದೆ ಎಂಬ ನಂಬಿಕೆಯೂ ಭಾರತೀಯರಲ್ಲಿ ಇರುವುದು ಕಾಣುತ್ತದೆ.

ಆರಿದ ದೀಪವನ್ನು ಭಾರತೀಯರು ಕೆಟ್ಟ ಶಕುನವೆಂದು ಪರಿಗಣಿಸುತ್ತಾರೆ. ಗಾಳಿಗೆ ದೀಪ ಆರಿದ ಪಕ್ಷದಲ್ಲಿ ಅಥವಾ ಕೈಜಾರಿ ದೀಪ ಕೆಳಗೆ ಬಿದ್ದ ಪಕ್ಷದಲ್ಲಿ ಅದನ್ನು ಅಪಶಕುನವೆಂದು ನಂಬಲಾಗುತ್ತದೆ. ಭಾರತೀಯರು ದೀಪವಷ್ಟೇ ಅಲ್ಲದೆ ದೀಪದಲ್ಲಿನ ಜ್ವಾಲೆಯ ಬಣ್ಣಗಳನ್ನು ಕುರಿತು ಅನೇಕ ನಂಬಿಕೆಗಳನ್ನು ಹೊಂದಿರುವುದನ್ನು ಕಾಣುತ್ತೇವೆ.

ದೀಪದಲ್ಲಿ ಬಿಳಿ ಜ್ವಾಲೆ ಇದ್ದರೆ ಭಾರತೀಯರ ದೃಷ್ಟಿಯಲ್ಲಿ ಅದು ಆಹಾರದ ಖರ್ಚನ್ನು ಸಾಂಕೇತಿಸುತ್ತದೆ ಎಂದೂ, ಇದರಂತೆ ಕೆಂಪು ಬಣ್ಣದ ಜ್ವಾಲೆಯು ಯುದ್ಧವನ್ನೂ, ಕಪ್ಪು ಬಣ್ಣದ ಜ್ವಾಲೆಯು ಇದ್ದರೆ ಅದು ಸಾವನ್ನು ಸಾಂಕೇತಿಸುತ್ತದೆ ಎಂಬ ನಂಬಿಕೆಯು ಇರುವುದು ಕಂಡು ಬರುತ್ತದೆ. ಬಣ್ಣ ಬಣ್ಣದ ಜ್ವಾಲೆಗಳು ಇದ್ದ ಪಕ್ಷದಲ್ಲಿ ಅದು ಐಶ್ವರ್ಯದ ಕೊರತೆಯನ್ನೂ, ಆಹಾರದ ಕೊರತೆಯನ್ನೂ, ಯುದ್ಧನ್ನೂ ಇಲ್ಲವೇ ಸಾವನ್ನು ಸೂಚಿಸುತ್ತದೆ ಎಂಬುದು ಇದರ ತಾತ್ಪರ್ಯವಾಗಿದೆ. ಒಟ್ಟಾರೆ ಹೇಳುವುದಾದರೆ ಕೇವಲ ಹಳದಿ ಬಣ್ಣದ ಜ್ವಾಲೆ ಮಂಗಳಕರದ ಸಂಕೇತವಾಗಿದೆ ಎಂಬ ಅಭಿಪ್ರಾಯ ಭಾರತೀಯರಲ್ಲಿ ಇರುವುದು ತಿಳಿದು ಬರುತ್ತದೆ.

೨. ಅಗ್ನಿಸ್ತಂಭ:

ಅಗ್ನಿಸ್ತಂಭವನ್ನು ಕುರಿತು ಪೌರಾಣದ ಆಧಾರದ ಮೇಲೆ ವಿಶ್ಲೇಷಿಸುವ ಹಿನ್ನೆಲೆಯಲ್ಲಿ ಸ್ತಂಭವನ್ನು ಕುರಿತು ಹೇಳುವುದು ಅವಶ್ಯಕವಾಗುತ್ತದೆ. ವೇದದಲ್ಲಿ ಸ್ತಂಭಗಳನ್ನು ಕುರಿತು ಉಲ್ಲೇಖಗಳು ದೊರೆಯುತ್ತವೆ. ವೇದವು ಕಂಬವನ್ನು **ಸ್ಕಂಭ – ಸ್ಥಂಭ** ಎಂದು ಕರೆಯುತ್ತದೆ[೧೪]. ವೇದವು ಅತ್ಯಂತ ಪ್ರಾಚಿನ ಕಾಲದಿಂದಲೂ ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದ ಗ್ರಂಥಗಳ ಸಮೂಹವಾಗಿದೆ. ಮಾನವನು ಜೀವನದ ಅನಭವಗಳಿಂದ ಜ್ಞಾನವನ್ನು ಪಡೆದು ಅವುಗಳನ್ನು **ವೇದಗಳು** ಎಂದು ಹೆಸರಿಸಿದನು. **ವೇದ್ಯವಾದ ಸತ್ಯದ ವಿಸ್ತಾರ ವಿವರವೇ ವೇದಗಳು**[೧೫] ಎಂದು ತಿರುಮಲೆ ಶ್ರೀ ರಂಗಾಚಾರ್ಯರು ತಮ್ಮ ಲೇಖನವೊಂದರಲ್ಲಿ ತಿಳಿಸಿರುವುದು ಒಪ್ಪವಂತಹುದೇ ಆಗಿದೆ.

ನಿಸರ್ಗದತ್ತವಾಗಿ ದೊರೆತಿರುವ ಎಲ್ಲಾ ವಸ್ತುಗಳಲ್ಲೂ ಅಂದರೆ ಸೂರ್ಯ, ಚಂದ್ರ, ಬೆಂಕಿ, ಆಕಾಶ, ನೀರು, ಭೂಮಿ, ಗಿಡ ಮರ ಹೀಗೆ ತಾನು ಕಂಡ ಪ್ರತಿಯೊಂದು

---

೧೪. ತಿರುಮಲೆ ಶ್ರೀ ರಂಗಾಚಾರ್ಯ: **ಸ್ತಂಭಮಾಲಾ,** ಮಲ್ಲಾರ ಮಾಸಪತ್ರಿಕೆ, ಮೇ ೨೦೦೨ ಪುಟ- ೨೧

೧೫. ತಿರುಮಲೆ ಶ್ರೀ ರಂಗಾಚಾರ್ಯ: **ಸ್ತಂಭಮಾಲಾ,** ಮಲ್ಲಾರ ಮಾಸಪತ್ರಿಕೆ, ಮೇ ೨೦೦೨ ಪುಟ- ೨೧

ವಸ್ತುವನ್ನು ದೈವವೆಂದು ಪ್ರಾಚೀನ ಮಾನವನು ಭಾವಿಸಿಕೊಂಡನು. ಆದ್ದರಿಂದ ಇವುಗಳನ್ನು ಪೂಜ್ಯ ಭಾವದಿಂದ ಕಂಡು ಆರಾಧಿಸಿದ ತೊಡಗಿದನು ಎಂದರೆ ತಪ್ಪಾಗಲಾರದು. ಇದೇ ಕಾರಣದಿಂದಲೇ ಪೂಜಾಕ್ರಮಗಳು ಪ್ರಾರಂಭವಾಗಿರಬೇಕು.

ಮಾನವನ ಮನಸ್ಸು ವಿಕಾಸಗೊಳ್ಳುತ್ತಾ ಹೋದಂತೆ ಚಿಂತನೆಗಳನ್ನು ಮೈಗೂಡಿಸಿಕೊಂಡು **ದೈವತ್ವದ** ಕಲ್ಪನೆಯನ್ನು ಬೆಳೆಸಿಕೊಂಡಿದ್ದಾನೆ. ನಿಸರ್ಗವು ತನ್ನ ಹಿಡಿತಕ್ಕೆ ಸಿಗದಿದ್ದಾಗ ಅದರಲ್ಲಿ ಯಾವುದೋ ಶಕ್ತಿ ಇದೆ ಎಂದು ಮಾನವನು ಕಲ್ಪಿಸಿಕೊಂಡನು. ತನ್ನ ಕಣ್ಣಿಗೆ ಕಾಣಿಸದ ಅಲೌಕಿಕವಾದ ದೈವಶಕ್ತಿಯೊಂದು ಇದ್ದು, ಇದು ಒಂದು ಕಂಬದ ಆಕಾರದಲ್ಲಿ ಇಡೀ ಬ್ರಹ್ಮಾಂಡವನ್ನು ಅಂದರೆ ಸೂರ್ಯ, ಚಂದ್ರ, ಆಕಾಶ, ನಕ್ಷತ್ರ ಹೀಗೆ ಪ್ರಕೃತಿ ಎಲ್ಲವನ್ನೂ ಎತ್ತಿ ಹಿಡಿದಿದೆ ಎಂದೂ ಈ ಶಕ್ತಿಯು ಮೂರೂ ಲೋಕಗಳನ್ನು ಆವರಿಸಿಕೊಂಡಿದೆ[೧೬] ಎಂದು ವೇದಮಂತ್ರವು ಹೇಳುವುದನ್ನು ನೋಡಬಹುದು. ಮಾನವನು ತನಗೆ ಗೋಚರಿಸದ ಈ ಶಕ್ತಿಯನ್ನು **ಚೈತನ್ಯ** ಎಂದು ಕರೆದು, ಈ ಚೈತನ್ಯವು ಸ್ತಂಭದ ರೂಪದಲ್ಲಿದೆ ಎಂದು ಭಾವಿಸಿದನು. ಈ ಚೈತನ್ಯ ಶಕ್ತಿಯಿಂದ ಕೂಡಿರುವ ಕಂಬವನ್ನು **ಚೈತನ್ಯ ಸ್ತಂಭ** ಎಂದು ಗುರುತಿಸಿದನು.

ತಾನು ವಾಸಿಸಲು ನಿರ್ಮಿಸಿಕೊಂಡ ಗುಡಿಸಲ ರಚನೆಯಲ್ಲಿ ಮೊದಲು ಅವನು ಬಳಸಿದ್ದು ಕಂಬವನ್ನು. ಈ ಗುಡಿಸಲ ರಚನೆಯಲ್ಲಿ ಮೂಲ ಆಧಾರವಾಗಿ ನಿಂತ ಸ್ತಂಭವು ಮಾನವನನ್ನು ಆಧ್ಯಾತ್ಮದ ಕಡೆಗೂ ಕೊಂಡೊಯ್ಯಿತು ಎಂದರೆ ತಪ್ಪಾಗಲಾರದು. ಕಂಬದ ರೂಪವು ಕೇವಲ ಭೌತಿಕವಾದುದಷ್ಟೇ ಅಲ್ಲದೆ ಚೈತನ್ಯ ರೂಪವೂ, ಮಹಾಚೈತನ್ಯ ರೂಪವೂ ಆಗಿದೆ ಎನ್ನುವ ನಂಬಿಕೆಯನ್ನು ಇವನು ತಳೆದನು. ಇವನು ಆಧ್ಯಾತ್ಮಿಕ ಚಿಂತನೆಯನ್ನು ನಡೆಸಲು ಈ ಸ್ತಂಭದ ಪರಿಕಲ್ಪನೆಯೂ ಸಹಕಾರಿಯಾಯಿತು ಎಂದು ತೋರುತ್ತದೆ.

ವೇದ ಮಂತ್ರಗಳು ಪಂಚಭೂತಗಳ ಅಸ್ತಿತ್ವವು ಮಹಾ ಚೈತನ್ಯದ ಶಕ್ತಿಯಿಂದ ಸೃಷ್ಟಿಯಾಗಿದೆ ಎಂದು ಹೇಳುತ್ತವೆ. ಪೃಥ್ವಿ, ನೀರು, ಬೆಂಕಿ, ವಾಯು ಮತ್ತು ಆಕಾಶ ಇವೆಲ್ಲದರ ಮೂಲ ಪರಮ ಚೈತನ್ಯವೇ ಆಗಿದೆ ಎನ್ನುವುದು ಇದರ ಅರ್ಥವಾಗಿದೆ. ಈ ಮಹಾಚೈತನ್ಯವನ್ನು ವೇದ ಮಂತ್ರವು **ಬ್ರಹ್ಮನ್** ಎಂದು ಗುರುತಿಸುತ್ತದೆ. ಇದೇ ಅರ್ಥವನ್ನು

---

೧೬. ಸ್ಕಂಭೇನೇಮೇಬಿಷ್ಟಭಿತೇ ದೌಷ್ಟಭೂವಿಷ್ಟ ತಿಷ್ಠತಿ
ಸ್ಕಂಭ ಇದಂ ಸರ್ವಮ ಯದಾತ್ಮನ್‌ವತ್ ಯತ್
ಪ್ರಾಣಂ ನಿಮಿಶಷ್ಚವತ್
ಅಥಃ ಸ್ಕಂಭ   ಸೂಕ್ತ ೧೦-೮-೨
ದೈವ ಅಮೂರ್ತ ಅಗೋಚರ ಮಹಾ ಚೈತನ್ಯ
ತಿರುಮಲೆ ಶ್ರೀ ರಂಗಾಚಾರ್ಯ: **ಸ್ತಂಭಮಾಲಾ,** ಮಲ್ಲಾರ ಮಾಸಪತ್ರಿಕೆ,
ಮೇ ೨೦೦೨ ಪುಟ- ೨೧

೧೭. ಯೋ ಭೂತಂಚ ಭವ್ಯಂಚ ಸರ್ವಮ ಯಶ್ಚಾಧಿ ತಿಷ್ಠತಿ
ಸ್ವರ್ಯಸ್ಯಚಕೇವಲಂ ತಸ್ಮೈ ಜ್ಯೆಷ್ಠಾಯ ಬ್ರಹ್ಮಣೇ ನಮಃ
ತಿರುಮಲೆ ಶ್ರೀ ರಂಗಾಚಾರ್ಯ: **ಸ್ತಂಭಮಾಲಾ,** ಮಲ್ಲಾರ ಮಾಸಪತ್ರಿಕೆ,
ಮೇ ೨೦೦೨ ಪುಟ- ೨೧

ಹೇಳುವ ಮಂತ್ರವು ಅಥರ್ವಣ ವೇದದಲ್ಲಿ ಇರುವುದು ಕಂಡು ಬರುತ್ತದೆ[೧೭]. ನಿತ್ಯ ಜೀವನದ ಅನುಭವದ ಆಧಾರದ ಮೇಲೆ ಪುರಾಣಗಳು ರಚನೆಗೊಂಡಿದೆಯೋ ಅಥವಾ ಜೀವನದ ಶೈಲಿ, ಪದ್ಧತಿಗಳು ಮತ್ತು ಅವುಗಳ ಬೆಳವಣಿಗೆಯು ಪುರಾಣದ ಕತೆಗಳನ್ನು ಅವಲಂಬಿಸಿದೆಯೋ ಹೇಳಲಾಗದು.

ಪುರಾಣ ಕತೆಗಳಲ್ಲಿ ಸ್ತಂಭದ ಪ್ರಸ್ತಾಪವು ಒಂದಲ್ಲ ಒಂದು ರೀತಿಯಲ್ಲಿ ಚಿತ್ರಿತವಾಗಿರುವುದನ್ನು ಕಾಣುತ್ತೇವೆ. ಭಕ್ತ ಪ್ರಹ್ಲಾದನ ಪುರಾಣ ಕತೆಯಲ್ಲಿ ಮಹಾವಿಷ್ಣು ನರಸಿಂಹಾವತರದಲ್ಲಿ ಕಂಬವೊಂದರಿಂದ ಹೊರಬಂದು ಹಿರಣ್ಯಕಶಿಪುವಿನ ವಧೆ ಮಾಡಿ ತನ್ನ ಭಕ್ತನಾದ ಪ್ರಹ್ಲಾದನನ್ನು ರಕ್ಷಿಸುತ್ತಾನೆ. **ಕ್ಷೀರ ಸಾಗರದ** ಮಂಥನದ ಸನ್ನಿವೇಶದಲ್ಲೂ **ಮಂದರ ಪರ್ವತ**ವೆಂಬ ಕಡೆಗೋಲನ್ನು **ಅನಂತ** ಎಂಬ ಹಾವನ್ನು ಹಗ್ಗವಾಗಿರಿಸಿ ಕಡೆದುದಾಗಿದೆ. ಈ ಪರ್ವತವು ಇಲ್ಲಿ ಸ್ತಂಭದ ಪಾತ್ರವನ್ನು ವಹಿಸುತ್ತದೆ.

ಪರ್ವತವನ್ನು ಕಡೆಯುವ ಸಂದರ್ಭದಲ್ಲಿ ಮೊದಲು ಹೊರಬಂದುದು **ಬ್ರಹ್ಮನ್** ಇದನ್ನು ಮಾನವನ ಭಯ ಮತ್ತು ಅಜ್ಞಾನಕ್ಕೆ ಹೋಲಿಸಲಾಗುತ್ತದೆ. ನಂತರ ಬಂದವುಗಳನ್ನು ಜೀವನದ ಸುಖ ಸಂತೋಷಕ್ಕೆ ಬೇಕಾಗುವ ಇನ್ನಿತರೆಗಳೆಂದು ಗುರುತಿಸಲಾಗುತ್ತದೆ. ಕೊನೆಯದಾಗಿ ಬಂದಂತಹ **ಅಮೃತವನ್ನು ಮೋಕ್ಷ** ಎಂದು ಹೇಳಲಾಗುತ್ತದೆ. ಹೀಗೆ ಮಾನವನ ಜೀವನ ಭಯ ಮತ್ತು ಅಜ್ಞಾನದಿಂದ ಪ್ರಾರಂಭವಾಗಿ ಜೀವನದ ಸುಖಗಳನ್ನೆಲ್ಲಾ ಪಡೆದು ನಂತರ **ಬ್ರಹ್ಮಾನಂದ**ವನ್ನು ಅಂದರೆ ಸಾಕ್ಷಾತ್ಕಾರವನ್ನು ಪಡೆಯುವುದು ಎಂದು ಹೇಳಲಾಗುತ್ತದೆ.

ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ

ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ[೧೮]

ಎಂಬ ಶ್ಲೋಕವು ಹಲವಾರು ಶಾಸನಗಳಲ್ಲಿ ಇರುವುದನ್ನು ಕಾಣುತ್ತೇವೆ. ಶಾಸನದ ಉದ್ದೇಶ, ವಿಷಯಗಳನ್ನು ವಿವರಿಸುವ ಮೊದಲು ಆರಂಭದ ಸಾಲಿನಲ್ಲಿ ಈ ಶ್ಲೋಕವು ಇರುತ್ತದೆ. ಈ ಶ್ಲೋಕದಲ್ಲಿ ಭಗವಂತನನ್ನು ಅಂದರೆ ದೈವದ ರೂಪ ಆಕಾರಗಳನ್ನು ವರ್ಣಿಸಿರುವುದನ್ನು ನೋಡಬಹುದು. ದೈವವು ಈ ಲೋಕದಲ್ಲಿ ಗಗನವನ್ನು ಮುಟ್ಟಿದಂತೆ ಎತ್ತರಕ್ಕೆ ನಿಂತಿದೆ ಎಂದೂ, ಮೂರೂ ಲೋಕಗಳನ್ನು ಆವರಿಸಿದಂತೆ ಇದೆ ಎಂದೂ ಮತ್ತು ಇದು ಮೂಲಸ್ತಂಭದ ರೂಪದಲ್ಲಿದೆ ಎಂಬ ಭಾವನೆಯು ಈ ಶ್ಲೋಕದಲ್ಲಿ ಇರುವುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. **ರುದ್ರಾಧ್ಯಾಯ**ದ ಧ್ಯಾನ ಶ್ಲೋಕವು ಕೂಡಾ ಇದನ್ನೇ ಪ್ರತಿಪಾದಿಸುತ್ತದೆ[೧೯] ಎಂದು ಮಲ್ಲಾರ ಎಂಬ ಮಾಸಪತ್ರಿಕೆಯಲ್ಲಿ ತಿರುಮಲೆ ಶ್ರೀ ರಂಗಾಚಾರ್ಯರು ತಿಳಿಸಿದ್ದಾರೆ.

---

೧೮. ತಿರುಮಲೆ ಶ್ರೀ ರಂಗಾಚಾರ್ಯ: **ಸ್ತಂಭಪುರಾಣ**, ಮಲ್ಲಾರ ಮಾಸಪತ್ರಿಕೆ, ಜೂನ್ ೨೦೦೨ ಪುಟ- ೧೫

೧೯. ತಿರುಮಲೆ ಶ್ರೀ ರಂಗಾಚಾರ್ಯ: **ಸ್ತಂಭಪುರಾಣ**, ಮಲ್ಲಾರ ಮಾಸಪತ್ರಿಕೆ, ಜೂನ್ ೨೦೦೨ ಪುಟ- ೧೫

ವೇದ ಪುರಾಣಗಳಲ್ಲಿ ಸ್ತಂಭವನ್ನು ಕುರಿತು ಈ ರೀತಿಯಾಗಿ ಉಲ್ಲೇಖಗಳು ದೊರೆತರೆ, ಅಗ್ನಿ, ಮತ್ತು ಅಗ್ನಿ ಸ್ತಂಭಗಳನ್ನೂ ಕುರಿತು ಉಲ್ಲೇಖಗಳೂ ದೊರೆಯುತ್ತವೆ. ವೈದಿಕ ಕಾಲದಲ್ಲಿ ಪಂಚಭೂತಗಳಿಗೆ ಪ್ರಾಶಸ್ತ್ಯ ನೀಡಿರುವ ಹಿನ್ನೆಲೆಯಲ್ಲಿ ಅಗ್ನಿಗೆ ಹೆಚ್ಚಿನ ಮಹತ್ವವಿರುವುದು ತಿಳಿದು ಬರುತ್ತದೆ. ಮೂರ್ತಿ ಪೂಜೆಯ ಪರಿಕಲ್ಪನೆ ಬರುವುದಕ್ಕೂ ಮುನ್ನಾ ಮಾನವನು ಅಗ್ನಿಕುಂಡ, ಯಜ್ಞಕುಂಡಗಳನ್ನು ಬಳಸಿ ಧರ್ಮಾಚರಣೆಯ ವಿಧಿಗಳನ್ನು ನಡೆಸುತ್ತಿದ್ದರು ಎಂದು ತಿಳಿದು ಬರುತ್ತದೆ. ಯಾವುದೇ ಪೂಜೆ ಪುನಸ್ಕಾರಗಳಲ್ಲಿ ಮೊದಲಿಗೆ ಯಜ್ಞಕುಂಡಗಳನ್ನು ಪೂಜಿಸಲಾಗುತ್ತಿತ್ತು. ಪ್ರಸ್ತುತ ದಿನಗಳಲ್ಲೂ ಯಾವುದೇ ಹೋಮವನ್ನು ಆಚರಿಸುವ ಸಂದರ್ಭದಲ್ಲಿ ಯಜ್ಞಕುಂಡಗಳನ್ನು ಬಳಸುವುದನ್ನು ನೋಡಬಹುದು.

ಋಗ್ವೇದದಲ್ಲಿ ಅಗ್ನಿಗೆ ಪ್ರಾಶಸ್ತ್ಯ ನೀಡಿರುವುದರ ಜೊತೆಗೆ ಅಗ್ನಿಯು ಇಂದ್ರನ ಅವಳಿ ಸಹೋದರನೆಂದು ಹೇಳಿದೆ[೨೦]. ಅಗ್ನಿಯು ಬೆಳಕನ್ನು ಕೊಡುವುದಷ್ಟೇ ಅಲ್ಲದೆ ದುಷ್ಟ ಶಕ್ತಿಗಳನ್ನು ಹೊಡೆದೋಡಿಸುವ ಶಕ್ತಿಯನ್ನು ಹೊಂದಿದೆ ಎಂದು ವಿವರಣೆ ಇರುವುದು ತಿಳಿಯುತ್ತದೆ. ಪುರಾಣಗಳಲ್ಲಿ ಅಗ್ನಿಯನ್ನು ದೇವ ಮಾನವರ ಮಧ್ಯವರ್ತಿ ಎಂದು ಹೇಳುವ ಕಥೆಯು ದೊರೆಯುತ್ತದೆ.

ಶ್ರೀ ಸ್ಕಾಂದ ಮಹಾಪುರಾಣಂ ಎಂಬ ಗ್ರಂಥದಲ್ಲಿ ಪಾರ್ವತಿಯು ಅಗ್ನಿಯು ಮಾಡಿದ ತಪ್ಪಿಗೆ ಶಿಕ್ಷಿಸುವ ಹಿನ್ನೆಲೆಯನ್ನು ವರ್ಣಿಸುತ್ತಾ ಅಗ್ನಿಯನ್ನು ಸರ್ವ ಭಕ್ಷಕನಾಗಲೆಂದೂ, ದೇವತೆಗಳೆಲ್ಲರೂ ಅವನಿಗೆ ಸಹಾಯ ಮಾಡಿದುದರಿಂದ ಅವರೆಲ್ಲರಿಗೂ ಸೇರಬೇಕಾದ ಹವಿಸ್ಸೆಲ್ಲವೂ ಅಗ್ನಿಯ ಮುಖದಿಂದಲೇ ಸೇರುತ್ತದೆ ಎಂದು ಶಪಿಸುತ್ತಾಳೆ ಎಂದು ಹೇಳಿರುವುದು ಕಂಡು ಬರುತ್ತದೆ[೨೧]. ಋಗ್ವೇದದಲ್ಲಿ ಅಗ್ನಿಯ ವರ್ಣನೆಯನ್ನು ಮಾಡುತ್ತಾ ಅಗ್ನಿಯು ಯಾಗ ಯಜ್ಞಗಳಲ್ಲಿ ಪೌರೋಹಿತ್ಯವನ್ನು ನಡೆಸುವವನು ಎಂದೂ ಸಹ ಹೇಳಿದೆ[೨೨]. ಯಜ್ಞಕುಂಡದಲ್ಲಿ ಅರ್ಪಿಸುವ ಹವಿಸ್ಸನ್ನು ದೇವರಿಗೆ ತಲುಪಿಸುತ್ತಾನೆ ಎಂದು ಹೇಳುವ ಅರ್ಥ ಇದಾಗಿದೆ.

---

೨೦. He is next only to indra, his twin brother. The terrestrial flame, the aerial flash and the celestial globe are the forms of Agni. Born of aranees i.e, igniting sticks, this god banishes darkness, frightens the demons and in vokes the light, He is the Supreme Counsellor, ancient but eternally young..........
D.G. Kelkar: **The lamps of India,**

೨೧. ಆಸ್ಥಾನ್ ವಿದ್ವಾನ್ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರೀ: **ಶ್ರೀ ಸ್ಕಾಂದ ಮಹಾಪುರಾಣಂ,** ಮಾಹೇಶ್ವರ ಖಂಡ-೧, ಪುಟ- ೪೫೮

೨೨. The Rigveda describes Agni as the only master of the house and village and of sacrifice. He has flaming teeth; ghee and wood are his food. He is omniscent (jatavedasa); a poet; an immortal mediator (duta) between man and the gods. He convey to them the yajna offerings and he upholds domestic life......
D.G. Kelkar: **The lamps of India,**

ಪಂಚಭೂತಗಳಲ್ಲಿ ಮೂರನೆಯ ಸ್ಥಾನವನ್ನು ಹೊಂದಿರುವ ಅಗ್ನಿಯ ವಾಹನವು ಟಗರು[೨೩]. ಕೆಲವು ಪುರಾಣಗಳಲ್ಲಿ ಅಗ್ನಿಯ ಜ್ವಾಲೆಯನ್ನು ಜ್ವಾಲಾಮುಖಿ ಎಂದು ಪ್ರಸಿದ್ಧಳಾಗಿರುವ ಪರಮೇಶ್ವರಿ ಎಂದೂ ಹೇಳುವುದಿದೆ[೨೪]. ಪುರಾಣಗಳಲ್ಲಿ ಅಗ್ನಿಯನ್ನು ಶಿವನಿಗೂ ಹೋಲಿಸಲಾಗುತ್ತದೆ. **ಪುರಾಣ ನಾಮ ಚೂಡಾಮಣಿ** ಎಂಬ ಗ್ರಂಥದಲ್ಲಿ ಈಶ್ವರನ ಅಷ್ಟಮೂರ್ತಿಯ ನಾಮಾಂತರಗಳನ್ನು ವಿವರಿಸುತ್ತಾ ಅದರಲ್ಲೊಂದು ಹೆಸರು ಪಶುಪತಿ ಎಂದು ಹೇಳಲಾಗಿದೆ. ಇಲ್ಲಿ ಪಶುಪತಿಯು ಅಗ್ನಿಯಲ್ಲಿರುವನು ಎಂದೂ ಸ್ವಾಹಾ ಅವನ ಪತ್ನಿ ಎಂದೂ ವಿವರಣೆ ಸಿಗುತ್ತದೆ. ಪುರಾಣಗಳ ಪ್ರಕಾರ ಸ್ವಾಹಾ ಅಗ್ನಿದೇವನ ಪತ್ನಿ ಎಂದು ದೊರೆಯುತ್ತದೆ[೨೫]. ಇದರ ಆಧಾರದ ಮೇಲೆ ಪಶುಪತಿ ಮತ್ತು ಅಗ್ನಿ ಎರಡೂ ಒಂದೇ ಎಂದು ಇಲ್ಲಿ ಅರ್ಥೈಸಿಕೊಳ್ಳಬಹುದು.

ಶಿವತತ್ತ್ವ ರತ್ನಾಕರ ಗ್ರಂಥದಲ್ಲಿ ಶಿವನ ಅಷ್ಟಮೂರ್ತಿಗಳನ್ನು ವಿವರಿಸುತ್ತಾ ಭೂಮಿಯಲ್ಲಿ ಭುವನೂ, ಜಲದಲ್ಲಿ ಶರ್ವನೂ, ಅಗ್ನಿಯಲ್ಲಿ ರುದ್ರನೂ, ವಾಯುವಿನಲ್ಲಿ ಭೀಮನೂ, ಆಕಾಶದಲ್ಲಿ ಮಹಾದೇವನು ಇರುವರು ಎನ್ನುವ ಜೊತೆಗೆ ಸೂರ್ಯನಲ್ಲಿ ಉಗ್ರನೂ, ಚಂದ್ರನಲ್ಲಿ ಸೋಮನೂ, ಜೀವಾತ್ಮನಲ್ಲಿ **ಮಹಾನ್** ಇರುವರು[೨೬] ಎಂದು ಹೇಳಲಾಗಿದೆ. ಪಶುಪತಿ ಶಿವನ ಎಂಟು ಮೂರ್ತಿಗಳೆಂದು ಹೆಸರಿಸುವಾಗ ಅಗ್ನಿಯು ರುದ್ರನ ಸ್ಥಾನವನ್ನು ಸಾಂಕೇತಿಸುತ್ತದೆ ಎಂದೂ ವಿವರಣೆ ದೊರೆಯುತ್ತದೆ.

ಶಿವತತ್ತ್ವ ರತ್ನಾಕರ ಗ್ರಂಥದ ಮತ್ತೊಂದು ಕಡೆ ಪಂಚ ಮಹಾಭೂತಗಳಿಂದ ಹುಟ್ಟುವ ಮನಸ್ಸಿಗೆ ಸಂಬಂಧಪಟ್ಟಂತಹ ವಿಷಯಗಳನ್ನು ಹೇಳುತ್ತಾ ತೇಜಸ್ಸಿನ ಅಂಶದಿಂದ ಬುದ್ಧಿಯು ಹುಟ್ಟುತ್ತದೆ ಎನ್ನಲಾಗುತ್ತದೆ[೨೭]. ಬುದ್ಧಿಯನ್ನು ಬೆಳಕು ಮತ್ತು ಜ್ಞಾನ ಎಂದೂ ಹೇಳುತ್ತಾರೆ. ಹರಪ್ಪಾ ಮೊಹೆಂಜೋದಾರೋಗಳ ಮುದ್ರೆಗಳಲ್ಲಿ ಶಿವನನ್ನು ಪಶುಪತಿಯನ್ನಾಗಿ ಬಳಸಿರುವ ಹಿನ್ನೆಲೆಯಿಂದ ನೋಡಿದರೆ ಅದೂ ಅಗ್ನಿಯ ಸಂಕೇತವಿರಬೇಕೆಂದು ತೋರುತ್ತದೆ. ಹರಪ್ಪಾ ಮೊಹೆಂಜೋದಾರೋ ನಾಗರೀಕತೆಯಲ್ಲಿ ಯಜ್ಞಕುಂಡಗಳನ್ನು ಬಳಸಿರುವ ಸಾಕ್ಷಿಗಳೂ ದೊರೆಯುತ್ತವೆ.

ಪುರಾಣಗಳಲ್ಲಿ ಅಗ್ನಿಯ ಸ್ತಂಭವನ್ನು ಈಶ್ವರನೆಂದು ಸಂಭೋಧಿಸಿರುವುದು ತಿಳಿದು ಬರುತ್ತದೆ. ಶಿವ ಮಹಾಪುರಾಣಂ ಎಂಬ ಗ್ರಂಥದಲ್ಲಿ ಜಗತ್ತಿನ ಸೃಷ್ಟಿಯ ಉಗಮವನ್ನು ಕುರಿತು ಹೇಳಲಾಗಿದೆ. ಇದರಲ್ಲಿ ಸಕಲ ಸೃಷ್ಟಿಗೆ ಕಾರಣಕರ್ತನಾದ

೨೩. ಬೆನಗಲ್ ರಾಮರಾವ್, ಪಾನ್ಯಂ ಸುಂದರ ಶಾಸ್ತ್ರೀ: **ಪುರಾಣನಾಮ ಚೂಡಾಮಣಿ** ಪುಟ- ೩

೨೪. ಹಾಸನದ ಪಂಡಿತ್ ವೆಂಕಟ್ ರಾವ್:
ಶ್ರೀ ವ್ಯಾಸ ಮಹರ್ಷಿ ಪ್ರಣೀತಂ- **ಶಿವ ಮಹಾಪುರಾಣಂ,** ಭಾಗ-೩, ಪುಟ- ೯

೨೫. ಬೆನಗಲ್ ರಾಮರಾವ್, ಪಾನ್ಯಂ ಸುಂದರ ಶಾಸ್ತ್ರೀ: **ಪುರಾಣನಾಮ ಚೂಡಾಮಣಿ** ಪುಟ- ೩೨

೨೬. ಸಂ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್:
ಕೆಳದಿ ಬಸವರಾಜ ಸಂಕಲಿಸಿದ **ಶಿವತತ್ತ್ವರತ್ನಾಕರ,** ಪುಟ- ೩೯

೨೭. ಸಂ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್:
ಕೆಳದಿ ಬಸವರಾಜ ಸಂಕಲಿಸಿದ **ಶಿವತತ್ತ್ವರತ್ನಾಕರ,** ಪುಟ- ೪೨

ಪರಮೇಶ್ವರನು ಮೊದಲಿಗೆ ಬ್ರಹ್ಮ ಮತ್ತು ವಿಷ್ಣು, ಇಬ್ಬರನ್ನೂ ಸೃಷ್ಟಿಸಿದನು ಎಂಬ ಹೇಳಿಕೆಯು ಪುರಾಣಗಳಲ್ಲಿ ದೊರೆಯುತ್ತದೆ. ಪುರಾಣದಲ್ಲಿ ವಿವರಿಸಿರುವಂತೆ ಒಮ್ಮೆ ಬ್ರಹ್ಮ ಮತ್ತು ವಿಷ್ಣು ಇಬ್ಬರೂ ತಾನು ಮೇಲು ತಾನು ಮೇಲು ಎಂದು ಜಗಳವಾಡಲು ತೊಡಗಿದರು. ಈ ಜಗಳವು ವಿಕೋಪಕ್ಕೆ ತಿರುಗಿ ಬ್ರಹ್ಮ, ವಿಷ್ಣು ಒಬ್ಬರ ಮೇಲೆ ಒಬ್ಬರು ಅಸ್ತ್ರಗಳನ್ನು ಪ್ರಯೋಗಿಸಲು ಮುಂದಾದರು. ಅವರು ಪ್ರಯೋಗಿಸಿದ ಅಸ್ತ್ರಗಳ ಜ್ವಾಲೆಯ ಶಕ್ತಿಯಿಂದ ಪರಮೇಶ್ವರನು ಸೃಷ್ಟಿಸಿದ ಮೂರೂ ಲೋಕಗಳು ನಾಶವಾಗತೊಡಗಿದವು.

ತಾನು ಪ್ರೀತಿಯಿಂದ ಸೃಷ್ಟಿಸಿದ ಜಗತ್ತು ನಾಶವಾಗುತ್ತಿರುವುದನ್ನು ಪರಮೇಶ್ವರನು ಕಂಡನು. ಅದರ ಜೊತೆಗೆ ತಾನು ಸೃಷ್ಟಿಸಿದ ಇವರಿಬ್ಬರ ಅಹಂಕಾರವನ್ನು ನೋಡಿದ ಪರಮೇಶ್ವರನು ಕೋಪಗೊಂಡನು. ಮಹಾ ಅಗ್ನಿರೂಪವನ್ನು ಹೊಂದಿರುವ ಸ್ತಂಭದ ರೂಪದಲ್ಲಿ ಬ್ರಹ್ಮ, ವಿಷ್ಣು ಇಬ್ಬರ ಮಧ್ಯದಲ್ಲಿ ಪರಮೇಶ್ವರನು ಅವಿರ್ಭವಿಸಿದನು[೨೮]. ಈ ರೀತಿಯಾಗಿ ಧಿಡೀರನೆ ಎದ್ದು ಬಂದ ಮಹಾಗ್ನಿಸ್ತಂಭವನ್ನು ಕಂಡು ಬ್ರಹ್ಮ, ವಿಷ್ಣುವಿಗೆ ಆಶ್ಚರ್ಯವಾಯಿತು. ಭಯಂಕರವಾದ ಜ್ವಾಲೆಯಿಂದ ಮೂರೂ ಲೋಕಗಳನ್ನು ನಾಶಗೊಳಿಸುತ್ತಿದ್ದ ಬ್ರಹ್ಮ ಮತ್ತು ವಿಷ್ಣುವಿನ ಮಾಹೇಶ್ವರಾಸ್ತ್ರ ಮತ್ತು ಪಾಶುಪತಾಸ್ತ್ರಗಳು ಮಹಾಗ್ನಿರೂಪವಾದ ಈ ಮಹಾಗ್ನಿ ಸ್ತಂಭದಲ್ಲಿ ಶಾಂತವಾಗಿ ಬೀಳತೊಡಗಿದವು.

ಈ ಅಗ್ನಿಸ್ತಂಭದ ತುದಿಯಾಗಲೀ ಕೆಳಭಾಗವಾಗಲೀ ಕಾಣಿಸದಷ್ಟು ಬೃಹದಾಕಾರವಾಗಿ ಸ್ತಂಭವು ನಿಂತಿರುವುದನ್ನು ಬ್ರಹ್ಮ, ವಿಷ್ಣು ಕಂಡು ದಿಗ್ಭ್ರಾಂತರಾದರು. ಈ ಸ್ತಂಭದ ಆದಿ, ಅಂತ್ಯಗಳಲ್ಲಿ ಯಾವುದಾದರೊಂದನ್ನು ಯಾರು ನೋಡಿ ಬರುತ್ತಾರೋ ಅವರು ಇನ್ನೊಬ್ಬರಿಗಿಂತ ಶ್ರೇಷ್ಠ ಎಂಬ ತೀರ್ಮಾನಕ್ಕೆ ಬಂದರು. ತಮ್ಮ ತಮ್ಮ ಸಾಮರ್ಥ್ಯದ ಮೇಲಿದ್ದ ಅಹಂಕಾರದಿಂದ ಆ ಸ್ತಂಭದ ಆದಿ ಮತ್ತು ಅಂತ್ಯಗಳನ್ನು ಪರೀಕ್ಷಿಸಲು ತಕ್ಷಣ ಅಲ್ಲಿಂದ ಇಬ್ಬರೂ ಹೊರಟರು. ವಿಷ್ಣುವು ತಳಭಾಗದ ಕಡೆ ಹೊರಟರೆ, ಬ್ರಹ್ಮನು ಮೇಲ್ತುದಿಯನ್ನು ಕಾಣಲು ಹೊರಟನು. ಅಗ್ನಿಸ್ತಂಭದ ತಳಭಾಗದ ಕಡೆಗೆ ಹೊರಟ ವಿಷ್ಣುವು ಭೂಮಿಯನ್ನು ಕೊರೆಯಲು ಅನುಕೂಲವಾಗುವಂತೆ ವರಾಹ ರೂಪವನ್ನು ತಾಳಿದನು. ಅದೇ ರೀತಿ ಬ್ರಹ್ಮನು ತುದಿಯನ್ನು ನೋಡುವ ಸಲುವಾಗಿ ಆಗಸದಲ್ಲಿ ಹಾರಲು ಅನುಕೂಲವಾಗುವ ಉದ್ದೇಶದಿಂದ ಹಂಸ ರೂಪವನ್ನು ತಾಳಿದನು.

ಇದನ್ನೆಲ್ಲಾ ವೀಕ್ಷಿಸುತ್ತಿದ್ದ ಅಗ್ನಿಸ್ತಂಭದ ರೂಪದಲ್ಲಿದ್ದ ಪರಮೇಶ್ವರನು ಜಗತ್ತನ್ನೇ ಸೃಷ್ಟಿಸಿದ ತನ್ನ ತುದಿ ಮೊದಲನ್ನು ಬ್ರಹ್ಮ, ವಿಷ್ಣು ಹುಡುಕುತ್ತಿರುವುದನ್ನು ಕಂಡು ನಕ್ಕನು. ಪರಮೇಶ್ವರನು ನಕ್ಕಾಗ ಅವನ ಶಿರಸ್ಸು ಅಲುಗಾಡಿತು. ಆ ಅಲುಗಾಡಿದ ಶಿರಸ್ಸಿನಲ್ಲಿದ್ದ ಪವಿತ್ರವಾದ ಕೇದಗೆ ಪುಷ್ಪವೊಂದು ಜಾರಿ ಕೆಳಗೆ ಬಿತ್ತು. ಈ ಕಡೆ ಸ್ತಂಭದ ತುದಿ ಮೊದಲನ್ನು ಹುಡುಕುತ್ತಾ ಹೊರಟ ಇಬ್ಬರಲ್ಲಿ ವರಾಹ ರೂಪವನ್ನು ಧರಿಸಿದ ಹರಿಯು

---

೨೮. ಹಾಸನದ ಪಂಡಿತ್ ವೆಂಕಟ್ ರಾವ್:
ಶ್ರೀ ವ್ಯಾಸ ಮಹರ್ಷಿ ಪ್ರಣೀತಂ- **ಶಿವ ಮಹಾಪುರಾಣಂ**, ಭಾಗ-೧, ಪುಟ- ೧೪೨

ಪಾತಾಳ ಲೋಕವನ್ನೂ ಭೇದಿಸಿ ಬಹಳಷ್ಟು ದೂರ ಸಾಗಿದನು. ಆದರೂ ಅಗ್ನಿಯಂತೆ ಹೊಳೆಯುತ್ತಿದ್ದ ತೇಜೋಮಯವಾದ ಈ ಸ್ತಂಭದ ನೆಲೆಯನ್ನು ಕಾಣಲು ಸಾಧ್ಯವಾಗಲಿಲ್ಲ. ಇದೇ ರೀತಿ ಮೇಲ್ತುದಿಯನ್ನು ಕಾಣಲು ಆಕಾಶಮಾರ್ಗದಲ್ಲಿ ಹೊರಟ ಹಂಸ ರೂಪಧಾರಿ ಬ್ರಹ್ಮನಿಗೆ ಇದರ ತುದಿಯ ದರ್ಶನವಾಗಲಿಲ್ಲ.

ಹಂಸರೂಪದಲ್ಲಿ ಬ್ರಹ್ಮನು ತುದಿಯನ್ನು ನೋಡಲು ಹೋಗುತ್ತಿರಲು ಕೇದಗೆ ಪುಷ್ಪವೊಂದು ಮೇಲಿಂದ ಕೆಳಕ್ಕೆ ಬೀಳುತ್ತಿರುವುದನ್ನು ಗಮನಿಸಿದನು. ಕಳಗೆ ಬೀಳುತ್ತಿರುವ ಕೇದಗೆ ಪುಷ್ಪವನ್ನು ನಿಲ್ಲಿಸಿ ಬ್ರಹ್ಮನು ಬೃಹದಾಕರವಾಗಿ ನಿಂತಿರುವ ಅಗ್ನಿಸ್ತಂಭದ ತುದಿಯನ್ನು ಕುರಿತು ಕೇಳಿದನು. ಇದಕ್ಕೆ ಕೇದಗೆ ಪುಷ್ಪವು ನಕ್ಕು ಈ ಕಂಬದ ತುದಿಯನ್ನು ನೋಡಲು ಯಾರಿಂದಲೂ ಸಾಧ್ಯವಿಲ್ಲ ಎಂದಿತು. ಅದರ ಮಾತಿನಿಂದ ನಿರಾಸೆಗೊಂಡ ಹಂಸರೂಪದ ಬ್ರಹ್ಮನು ತನ್ನ ಮತ್ತು ವಿಷ್ಣುವಿನ ನಡುವೆ ನಡೆದ ಪಂದ್ಯವನ್ನು ಕೇದಗೆ ಪುಷ್ಪಕ್ಕೆ ವಿವರಿಸಿದನು. ತಾನು ಈ ಸ್ತಂಭದ ತುದಿಯನ್ನು ನೋಡಿದುದಾಗಿ ವಿಷ್ಣುವಿಗೆ ಸುಳ್ಳನ್ನು ಹೇಳಲು ಬ್ರಹ್ಮನು ಕೇದಗೆ ಪುಷ್ಪವನ್ನು ಪ್ರೇರೇಪಿಸಿದನು. ಅದರಂತೆ ಕೇದಗೆ ಪುಷ್ಪವು ವಿಷ್ಣುವಿಗೆ ಸುಳ್ಳನ್ನು ಹೇಳಲು ಒಪ್ಪಿಕೊಂಡಿತು.

ಅಗ್ನಿಸ್ತಂಭದ ತಳವನ್ನು ಹುಡುಕಿಕೊಂಡು ಪಾತಾಳವನ್ನೂ ಭೇದಿಸಿ ಬಹಳಷ್ಟು ದೂರ ಪ್ರಯಾಣ ಮಾಡಿದ ವರಾಹ ರೂಪಧಾರಿ ವಿಷ್ಣುವು ಆಯಾಸಗೊಂಡು ಹಿಂದಿರುಗಿದನು. ಅಲ್ಲಿ ಬ್ರಹ್ಮನು ಕೇದಗೆ ಪುಷ್ಪದೊಂದಿಗೆ ಇರುವುದನ್ನು ನೋಡಿದನು. ಆಗ ಬ್ರಹ್ಮನು ಹೇಳಿಕೊಟ್ಟ ಹಾಗೆ ಕೇದಗೆ ಪುಷ್ಪವು ಬ್ರಹ್ಮನು ಅಗ್ನಿಸ್ತಂಭದ ತುದಿಯನ್ನು ಕಂಡನೆಂದೂ ತಾನೂ ಆ ಸಂದರ್ಭದಲ್ಲಿ ಅವನ ಜೊತೆಗೆ ಇತ್ತೆಂದು ಸುಳ್ಳು ಹೇಳಿತು. ಈ ಮಾತನ್ನು ವಿಷ್ಣುವು ಸ್ವಲ್ಪವೂ ಆಲೋಚಿಸದೆ ನಂಬಿದನು.

ಮಹಾ ಅಗ್ನಿಸ್ತಂಭದ ತುದಿಯನ್ನು ಬ್ರಹ್ಮನು ನೋಡಿದನೆಂದು ಅವನು ತನಗಿಂತ ಶ್ರೇಷ್ಠನೆಂದು ಒಪ್ಪಿದ ವಿಷ್ಣುವು ಬ್ರಹ್ಮನಿಗೆ ನಮಸ್ಕರಿಸಿ ಬ್ರಹ್ಮನನ್ನು ಪೂಜಿಸತೊಡಗಿದನು. ಇದನ್ನೆಲ್ಲಾ ವೀಕ್ಷಿಸುತ್ತಿದ್ದ ಪರಮೇಶ್ವರನು ಕೋಪಗೊಂಡು ವಿಷ್ಣುವಿಗೆ ಮೋಸ ಮಾಡಿದ ಬ್ರಹ್ಮನನ್ನು ಶಿಕ್ಷಿಸಲು ಆ ಅಗ್ನಿಮಯವಾದ ಸ್ತಂಭದಿಂದ ಅವಿರ್ಭವಿಸಿದನು[೨೯] ಎಂದು ಪುರಾಣವು ಹೇಳುತ್ತದೆ. ಈ ರೀತಿಯಾಗಿ ಅವಿರ್ಭವಿಸಿದ ಪರಮೇಶ್ವರನು ಸುಳ್ಳು ಹೇಳಿದ ಬ್ರಹ್ಮನಿಗೆ ಮತ್ತು ಕೇದಗೆ ಪುಷ್ಪಕ್ಕೆ ಶಾಪವನ್ನು ಕೊಟ್ಟನು. ಬ್ರಹ್ಮನಿಗೆ ಪ್ರಪಂಚದಲ್ಲಿ ಎಲ್ಲೂ ಪೂಜೆ ಆಗಬಾರದೆಂದೂ, ಇನ್ನು ಮುಂದೆ ಕೇದಗೆ ಪುಷ್ಪವು ಪೂಜೆಗೆ ಅರ್ಹವಾಗುವುದಿಲ್ಲ ಎಂದು ಶಾಪವಿತ್ತನು. ವಿಷ್ಣು ಸತ್ಯವನ್ನು ಹೇಳಿದುದರಿಂದ ಅವನು ತನ್ನಂತೆ ಪೂಜೆ ಪುನಸ್ಕಾರಗಳನ್ನು ಪಡೆಯುವನು ಎಂದು ಪರಮೇಶ್ವರನು ಹೇಳಿದನು.

ಶಿವ ಮಹಾಪುರಾಣಂ ಎಂಬ ಗ್ರಂಥದಲ್ಲಿ ಶಿವನನ್ನು ಮಹಾ ಅಗ್ನಿಸ್ತಂಭವೆಂದು

---

೨೯. ಹಾಸನದ ಪಂಡಿತ್ ವೆಂಕಟ್ ರಾವ್:
ಶ್ರೀ ವ್ಯಾಸ ಮಹರ್ಷಿ ಪ್ರಣೀತಂ– **ಶಿವ ಮಹಾಪುರಾಣಂ,** ಭಾಗ–೧, ಪುಟ– ೧೪೩

ಉಲ್ಲೇಖಿಸಿರುವ ಜೊತೆಗೆ ಲಿಂಗವೆಂದೂ ಉಲ್ಲೇಖಿಸಿರುವುದು ತಿಳಿದು ಬರುತ್ತದೆ. ಇದೇ ಕಥೆಯನ್ನು ಮತ್ತೊಂದು ಕಡೆ ಮುಂದುವರೆಸುತ್ತಾ ರುದ್ರ ಸಂಹಿತಾ- ಸೃಷ್ಟಿ ಖಂಡದಲ್ಲಿ ಊಹೆಗೂ ನಿಲುಕದ ಸ್ತಂಭವು ಬಳಿಕ ಲಿಂಗದ ರೂಪವನ್ನು ಪಡೆಯಿತು[೩೦] ಎನ್ನಲಾಗಿದೆ. ಈ ಪುರಾಣದ ಆಧಾರದ ಮೇಲೆ ಮಹಾ ಅಗ್ನಿಸ್ತಂಭವು ಪರಮೇಶ್ವರನನ್ನು ಪ್ರತಿನಿಧಿಸುತ್ತದೆ ಎಂದು ಹೇಳುವುದರ ಜೊತೆಗೆ ಪರಮೇಶ್ವರನು ಲಿಂಗದ ರೂಪದಲ್ಲಿಯೂ ಗುರುತಿಸಿಕೊಳ್ಳುತ್ತಾನೆ ಎಂದು ಹೇಳಿರುವುದು ತಿಳಿಯುತ್ತದೆ.

ಬ್ರಹ್ಮ, ವಿಷ್ಣು ಇಬ್ಬರ ಮಧ್ಯದಲ್ಲಿ ನಿರಾಕಾರವಾದ ದೊಡ್ಡಕಂಬದ ರೂಪವಾಗಿ ತನ್ನ ರೂಪವನ್ನು ಪರಮೇಶ್ವರನು ತೋರಿಸಿದನಲ್ಲದೆ ಬಳಿಕ ತನ್ನ ಸ್ವರೂಪವನ್ನು ನಿರ್ದೇಶಿಸು(ಗುರುತಿಸು)ವಂತಹ ಆ ಕಂಬದಿಂದ ಶಿವನು ನಿರಾಕಾರವಾದ ತನ್ನ ಲಿಂಗವನ್ನು ಜಗತ್ತಿನ ಕ್ಷೇಮಕ್ಕಾಗಿ ಪ್ರಕಟಿಸಿದನು[೩೧] ಎಂದು ಪುರಾಣಗಳಲ್ಲಿ ಹೇಳಿಕೆಗಳು ದೊರೆಯುತ್ತವೆ. ಈ ಮಹಾ ಅಗ್ನಿಸ್ತಂಭವು ಲಿಂಗದ ರೂಪವನ್ನು ತಾಳಿದೆ ಎಂದಾಗ ಮಹಾ ಅಗ್ನಿಸ್ತಂಭವನ್ನು ಲಿಂಗವೆಂದು ಗುರುತಿಸಬಹುದಾಗಿದೆ.

ಶಿವನನ್ನು ಲಿಂಗದ ರೂಪದಲ್ಲಿ ಪೂಜಿಸುವ ಹಿನ್ನೆಲೆಯಲ್ಲಿ ಮಹಾ ಅಗ್ನಿಸ್ತಂಭವು ಲಿಂಗವನ್ನು ಸಾಂಕೇತಿಸುತ್ತದೆ ಎಂದಾಗುತ್ತದೆ. ಅಗ್ನಿಸ್ತಂಭವು ಅಗ್ನಿಯ ಸ್ತಂಭವೇ ಆಗಿರುವುದರಿಂದ ಇದನ್ನು ದೀಪಸ್ತಂಭವೆಂದೂ ಕರೆಯಬಹುದಾಗಿದೆ. ಅಗ್ನಿಸ್ತಂಭವು ಮತ್ತು ಲಿಂಗ ಎರಡೂ ಒಂದೇ ಎಂದಾದ ಮೇಲೆ ದೀಪಸ್ತಂಭವೂ ಲಿಂಗವನ್ನು ಸಾಂಕೇತಿಸುತ್ತದೆ ಎನ್ನುವುದು ಸಮಂಜಸವಾದುದು. ಹಾಗಾದರೆ ಲಿಂಗ, ಪೀಠಗಳನ್ನು ಕುರಿತು ಪುರಾಣಗಳಲ್ಲಿ ಇರುವ ಉಲ್ಲೇಖಗಳನ್ನು ತಿಳಿಯುವುದು ಅವಶ್ಯಕವೆನಿಸುತ್ತದೆ.

ಲಿಂಗ, ಪೀಠ:

ಪುರಾಣಗಳಲ್ಲಿ ಲಿಂಗ ಮತ್ತು ಅಗ್ನಿಸ್ತಂಭಗಳು ಶಿವನನ್ನು ಪ್ರತಿನಿಧಿಸುತ್ತವೆ ಎಂದು ತಿಳಿಯುತ್ತೇವೆ. ಪ್ರಪಂಚದಲ್ಲಿರುವ ಸಮಸ್ತವೂ ಲಿಂಗವೆಂದು ಕರೆಯುವುದೂ ಉಂಟು. ಶಿವಲಿಂಗವನ್ನು **ಸ್ಥಾವರ** ಮತ್ತು **ಜಂಗಮ**ವೆಂದು ಎರಡು ವಿಧವೆಂದು ವಿಭಜಿಸಲಾಗುತ್ತದೆ. ಇದರ ಪ್ರಕಾರ ಮರ, ಪೊದರು ಮುಂತಾದವುಗಳನ್ನು **ಸ್ಥಾವರ ಲಿಂಗ**ಗಳೆಂದೂ, ಕ್ರಿಮಿ, ಕೀಟ ಮುಂತಾದ ಪ್ರಾಣವಿರುವ, ಚಲಿಸುವಂತಹವುಗಳನ್ನು **ಜಂಗಮ ಲಿಂಗ**ಗಳೆಂದು ಗುರುತಿಸಲಾಗುತ್ತದೆ. ಪುರಾಣಗಳಲ್ಲಿ ಈ ವಿಧಗಳನ್ನು ಹೇಳುತ್ತಾ ಸ್ಥಾವರ ಲಿಂಗವನ್ನು ಸೇವಿಸಬೇಕು ಜಂಗಮ ಲಿಂಗವನ್ನು ಆಯಾಯ ಸುಖದ

---

೩೦. ಹಾಸನದ ಪಂಡಿತ್ ವೆಂಕಟ್ ರಾವ್:
ಶ್ರೀ ವ್ಯಾಸ ಮಹರ್ಷಿ ಪ್ರಣೀತಂ- **ಶಿವ ಮಹಾಪುರಾಣಂ**, ಭಾಗ-೨, ಪುಟ- ೮೫

೩೧. ಹಾಸನದ ಪಂಡಿತ್ ವೆಂಕಟ್ ರಾವ್:
ಶ್ರೀ ವ್ಯಾಸ ಮಹರ್ಷಿ ಪ್ರಣೀತಂ- **ಶಿವ ಮಹಾಪುರಾಣಂ**, ಭಾಗ-೧, ಪುಟ- ೧೩೧

ಅನುರಾಗದಿಂದ ತೃಪ್ತಿಗೊಳಿಸಬೇಕು[೩೨] ಎಂದಿದೆ. ಎಲ್ಲಾ ಪ್ರಾಣಿಗಳೂ ಲೌಕಿಕವಾದ ಸಾಂಸಾರಿಕ ವಿಷಯಗಳಿಂದ ಮುಕ್ತಿಯನ್ನು ಯಾವುದರಿಂದ ಪಡೆದುಕೊಳುತ್ತವೆಯೋ ಅದನ್ನು **ಲಿಂಗ** ಎಂದು ಕರೆಯಲಾಗುತ್ತದೆ[೩೩] ಎಂದು ಡಾ. ಜಿ. ಜ್ಞಾನನಂದರವರು ತಮ್ಮ ಅನುವಾದಿತ ಕೃತಿ **ಶ್ರೀ ಕಾಶ್ಯಪ ಶಿಲ್ಪ ಶಾಸ್ತ್ರಂ** ಎಂಬ ಗ್ರಂಥದಲ್ಲಿ ತಿಳಿಸಿದ್ದಾರೆ.

ಸೃಷ್ಟಿಯ ಸಮಗ್ರವೂ ಲಿಂಗದಲ್ಲಿ ಐಕ್ಯವಾಗಿದೆ ಎಂದು ಪುರಾಣದಲ್ಲಿ ಹೇಳಲಾಗುತ್ತದೆ. ಸುಖವನ್ನು ಉಂಟು ಮಾಡುವ ಈ ಲಿಂಗವು ಭೋಗ ಮತ್ತು ಮೋಕ್ಷ ಇವೆರಡಕ್ಕೂ ಮುಖ್ಯವಾದ ಸಾಧನವು ಎಂದಿದೆ. ಈ ಲಿಂಗದ ದರ್ಶನ, ಸ್ಪರ್ಶನ ಮತ್ತು ಧ್ಯಾನ ಇವುಗಳಿಂದ ಪ್ರಾಣಿಗಳಿಗೆ ಸಂಸಾರ ಬಂಧನದಿಂದ ಬಿಡುಗಡೆಯಾಗಿ ಮುಕ್ತಿಯು ಲಭಿಸುವುದು[೩೪] ಎಂದು ಕೆಲವು ಪುರಾಣಗಳಲ್ಲಿ ಉಲ್ಲೇಖಗಳು ಇರುವುದನ್ನು ಕಾಣಬಹುದು.

ಶಿವನ ಲಿಂಗವಷ್ಟೇ ಅಲ್ಲ **ಶಿವ** ಎಂಬ ಪದದ ಅರ್ಥದ ವಿವರಣೆಯೂ ಪುರಾಣಗಳಲ್ಲಿ ದೊರೆಯುತ್ತದೆ. **ಶಿವ** ಎಂಬ ಪದದಲ್ಲಿ ಪುರುಷ ಮತ್ತು ಸ್ತ್ರೀಯನ್ನು ಗುರುತಿಸುವುದನ್ನು ಕಾಣುತ್ತೇವೆ. **ಶಿವ** ಎಂಬ ಪದದಲ್ಲಿ **ಶ** ಅಂದರೆ **ಸುಖವೂ, ಆನಂದವೂ** ಎಂಬ ಅರ್ಥವು ದೊರೆಯುತ್ತದೆ. **ಇ** ಎಂದರೆ **ಪುರುಷ** ಎಂದು ಅರ್ಥವಿದ್ದರೆ, **ವ** ಕಾರಕ್ಕೆ **ಶಕ್ತಿ** ಎಂದು ಅರ್ಥವಿದೆ ಮತ್ತು **ಅ** ಕಾರಕ್ಕೆ **ಅಮೃತ** ಎಂದು ಅರ್ಥವಿರುವುದು ತಿಳಿದು ಬರುತ್ತದೆ. ಒಟ್ಟಾರೆ ಹೇಳುವುದಾದರೆ **ಶಿವ** ಎಂಬ ಶಬ್ದವು ಆನಂದ ಸ್ವರೂಪ ಮತ್ತು ಸುಖ ಸ್ವರೂಪವಾದ **ಪುರುಷ** ಮತ್ತು ನಿತ್ಯವಾದ **ಶಕ್ತಿ** ಇವರೀರ್ವರ ಮಿಲನವನ್ನು ಬೋಧಿಸುವುದಾಗಿದೆ[೩೫]. **ಶಿವ** ಎನ್ನುವ ಶಬ್ದದ ಅರ್ಥದಲ್ಲಿ ಶಿವ-ಶಕ್ತಿಯನ್ನು ಹೇಗೆ ಹೇಳಲಾಗಿದೆಯೋ ಅದೇ ರೀತಿಯಾಗಿ ಶಿವಲಿಂಗದಲ್ಲೂ ಗುರುತಿಸುವುದನ್ನು ಕಾಣಬಹುದು.

ಶಿವಲಿಂಗವನ್ನು ಪುರುಷನ ಜನನೇಂದ್ರಿಯವನ್ನಾಗಿಯೂ ಅದಕ್ಕೆ ಹೊಂದಿಕೊಂಡಂತಹ ವೇದಿಕೆಯನ್ನು (ಪೀಠವನ್ನು) ಸ್ತ್ರೀಯ ಜನನೇಂದ್ರಿಯವನ್ನಾಗಿಯೂ ಪುರಾಣಗಳಲ್ಲಿ ಗುರುತಿಸುವುದನ್ನು ನೋಡಬಹುದು. ಶಿವಲಿಂಗದ ಪೀಠವು ಪಾರ್ವತೀ ಸ್ವರೂಪವಾದುದು, ಶಿವಲಿಂಗವು ಜ್ಞಾನ ಸ್ವರೂಪನಾದ ಈಶ್ವರ ಸ್ವರೂಪವಾದುದು[೩೬]

---

೩೨. ಹಾಸನದ ಪಂಡಿತ್ ವೆಂಕಟ್ ರಾವ್:
ಶ್ರೀ ವ್ಯಾಸ ಮಹರ್ಷಿ ಪ್ರಣೀತಂ- **ಶಿವ ಮಹಾಪುರಾಣಂ,** ಭಾಗ-೧, ಪುಟ- ೧೮೨

೩೩. ಅಥ ವಕ್ಷ್ಯೇ ವಿಶೇಷೇಣ ಶಿವಲಿಂಗಸ್ಯ ಲಕ್ಷಣಮ್
ಸಂಸಾರ ವಿಷಯೇ ಭೂತಾಃಲಯಂ ಗಚ್ಛಂತ್ಯ ಶೇಷತಃ
ಡಾ. ಜಿ. ಜ್ಞಾನಾನಂದ: **ಶ್ರೀ ಕಾಶ್ಯಪ ಶಿಲ್ಪಶಾಸ್ತ್ರಂ** (ಉತ್ತರಾರ್ಧ), ಪುಟ- ೧೨೦

೩೪. ಹಾಸನದ ಪಂಡಿತ್ ವೆಂಕಟ್ ರಾವ್:
ಶ್ರೀ ವ್ಯಾಸ ಮಹರ್ಷಿ ಪ್ರಣೀತಂ- **ಶಿವ ಮಹಾಪುರಾಣಂ,** ಭಾಗ-೧, ಪುಟ- ೧೫೯

೩೫. ಹಾಸನದ ಪಂಡಿತ್ ವೆಂಕಟ್ ರಾವ್:
ಶ್ರೀ ವ್ಯಾಸ ಮಹರ್ಷಿ ಪ್ರಣೀತಂ- **ಶಿವ ಮಹಾಪುರಾಣಂ,** ಭಾಗ-೧, ಪುಟ- ೩೧೪

೩೬. ಹಾಸನದ ಪಂಡಿತ್ ವೆಂಕಟ್ ರಾವ್:
ಶ್ರೀ ವ್ಯಾಸ ಮಹರ್ಷಿ ಪ್ರಣೀತಂ- **ಶಿವ ಮಹಾಪುರಾಣಂ,** ಭಾಗ-೧, ಪುಟ- ೧೮೨

ಎಂದು ಹೇಳಿದೆ. ಲಿಂಗದ ರಚನೆಯಲ್ಲಿ ಶಿವನ ಜೊತೆಗೆ ಪಾರ್ವತಿಯನ್ನು ಕೂಡಾ ಸಾಂಕೇತಿಸಲಾಗಿದೆ ಎಂದು ಇದರಿಂದ ತಿಳಿದು ಬರುತ್ತದೆ. ಶಿವಲಿಂಗಕ್ಕೆ ಇರುವಷ್ಟು ಪಾವಿತ್ರ್ಯತೆಯನ್ನು ಪೀಠವೂ ಹೊಂದಿರುವುದನ್ನು ಇಲ್ಲಿ ಗಮನಿಸಬಹುದು.

ಲಿಂಗದ ವೇದಿಕೆಯು ಮಹಾದೇವಿಯಾದ ಪಾರ್ವತಿ ಎಂದೂ ಲಿಂಗವು ಸಾಕ್ಷಾತ್ ಮಹೇಶ್ವರನೇ ಎಂದೂ, ಜಗತ್ತಿನ ಎಲ್ಲವೂ ಇದರಲ್ಲಿ ಲೀನವಾಗಿ ಹೋಗುವುದರಿಂದಲೇ ಇದಕ್ಕೆ ಲಿಂಗವೆಂಬ ಹೆಸರುಂಟಾಯಿತು[೩೭] ಎಂದು ಹಾಸನದ ಪಂಡಿತ್ ವೆಂಕಟರಾವ್‌ರವರು **ಶಿವ ಮಹಾಪುರಾಣಂ** ಎಂಬ ಗ್ರಂಥದಲ್ಲಿ ಹೇಳಿದ್ದಾರೆ. ನಾದವೇ ಲಿಂಗ ಬಿಂದುವೇ ಪೀಠ, ನಾದ ಬಿಂದುಗಳಿಂದ ಕೂಡಿದ ರೂಪವೇ ಲಿಂಗಾಕಾರ, ಶಕ್ತಿಯೇ ಬಿಂದು ಶಿವನೇ ನಾದ, ಶಿವಶಕ್ತಿಗಳ ಕೂಟವು ಜಗತ್ತಿನ ಸೃಷ್ಟಿಗೆ ಕಾರಣವಾಗಿದೆ, ಎಲ್ಲಾ ಹುಟ್ಟುಗಳಿಗೂ ಅವನೇ ಕಾರಣ[೩೮] ಎಂದು ಪುರಾಣ ಗ್ರಂಥಗಳು ತಿಳಿಸುತ್ತವೆ.

ಶಿವಲಿಂಗ ಮತ್ತು ಶಕ್ತಿಲಿಂಗಗಳನ್ನು ಒಂದಕ್ಕೆ ಮತ್ತೊಂದನ್ನು ಪೂರಕಗಳೆಂದು ಭಾವಿಸಲಾಗುತ್ತದೆ. ಭಕ್ತನಾಗಲೀ, ಭಕ್ತೆಯಾಗಲೀ ಪೂಜಿಸುವ ಸಮಯದಲ್ಲಿ ತನ್ನನ್ನೂ ಸಹ ಶಿವ ಶಕ್ತಿ ಎಂದೇ ಭಾವಿಸಬೇಕಾಗುತ್ತದೆ. ಶಿವಭಕ್ತಳಾದ ಸ್ತ್ರೀಯ ಸ್ವರೂಪವು ದೇವೀ ಸ್ವರೂಪವಾದುದು. ಮಂತ್ರವನ್ನು ಜಪಿಸುವವರೆಗೆ ದೇವಿಯ ಸಾನಿಧ್ಯವು ಶಿವಭಕ್ತಳ ಶರೀರದಲ್ಲಿರುವುದು. ಶಿವಭಕ್ತನು ಶಿವನ ಶಬ್ದ (ಶಿವೋಹಂ ಎಂಬ ಶಬ್ದ) ಮತ್ತು ರೂಪಗಳನ್ನು ಧರಿಸಿ ತಾನೂ ಶಿವನಾಗಿ (ಶಿವನೆಂದು ಭಾವಿಸಿಕೊಂಡು) ಪರಶಕ್ತಿಯನ್ನು ಪೂಜಿಸಬೇಕು ಎಂದು ಪುರಾಣಗಳಲ್ಲಿ ಹೇಳಲಾಗಿದೆ[೩೯].

ಪುರಾಣಗಳಲ್ಲಿ **ಸ್ತಂಭೇಶ್ವರ ಲಿಂಗ** ಎನ್ನುವ ಉಲ್ಲೇಖವಿರುವುದು ತಿಳಿದು ಬರುತ್ತದೆ[೪೦]. ಶಿವಲಿಂಗದ ರಚನೆಯನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿರುವುದು ಕಾಣುತ್ತದೆ. ಶಿವಲಿಂಗದಲ್ಲಿ ಬ್ರಹ್ಮಭಾಗ, ವಿಷ್ಣುಭಾಗ ಮತ್ತು ರುದ್ರಭಾಗಗಳೆಂದು ಹೆಸರಿಸಲಾಗುತ್ತದೆ. ಬ್ರಹ್ಮಭಾಗ, ವಿಷ್ಣುಭಾಗಗಳು ಪೀಠದ ಭಾಗದಲ್ಲಿ ಇರುತ್ತವೆ. ಆಧಾರ ಶಕ್ತಿ ಮತ್ತು ಅನಂತ ಇವರಿಬ್ಬರನ್ನು ಪೀಠದ ಕೆಳಭಾಗದಲ್ಲಿ ಪೂಜಿಸಬೇಕು[೪೧] ಎಂದು ಪುರಾಣಗಳು ಹೇಳುತ್ತವೆ. ಆಧಾರ ಶಕ್ತಿ ಎಂದರೆ ಬ್ರಹ್ಮಭಾಗ, ಅನಂತ ಎಂದರೆ ವಿಷ್ಣುಭಾಗವಾಗಿದೆ. ಈ ಎರಡೂ ಭಾಗಗಳನ್ನು ಪೀಠದ ಒಳಗೆ ಇರುವಂತೆ ರಚಿಸಬೇಕು ಎನ್ನುವ ಮಾತು ಪುರಾಣಗಳಲ್ಲಿ ಕೇಳಿ ಬರುತ್ತದೆ.

---

೩೭. ಹಾಸನದ ಪಂಡಿತ್ ವೆಂಕಟ್ ರಾವ್:
ಶ್ರೀ ವ್ಯಾಸ ಮಹರ್ಷಿ ಪ್ರಣೀತಂ- **ಶಿವ ಮಹಾಪುರಾಣಂ**, ಭಾಗ-೨, ಪುಟ- ೧೨೧

೩೮. ಸಂ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್,
ಕೆಳದಿ ಬಸವರಾಜ ಸಂಕಲಿಸಿದ **ಶಿವತತ್ತ್ವರತ್ನಾಕರ**, ಪುಟ-೨೮

೩೯. ಹಾಸನದ ಪಂಡಿತ್ ವೆಂಕಟ್ ರಾವ್:
ಶ್ರೀ ವ್ಯಾಸ ಮಹರ್ಷಿ ಪ್ರಣೀತಂ- **ಶಿವ ಮಹಾಪುರಾಣಂ**, ಭಾಗ-೧, ಪುಟ- ೨೯೫

೪೦. ಆಸ್ಥಾನ್ ವಿದ್ವಾನ್ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರೀ:
ಶ್ರೀ ಸ್ಕಾಂದ ಮಹಾಪುರಾಣಂ, ಮಾಹೇಶ್ವರ ಖಂಡ-೧, ಪುಟ- ೩೩

೪೧. ಹಾಸನದ ಪಂಡಿತ್ ವೆಂಕಟ್ ರಾವ್:
ಶ್ರೀ ವ್ಯಾಸ ಮಹರ್ಷಿ ಪ್ರಣೀತಂ- **ಶಿವ ಮಹಾಪುರಾಣಂ**, ಭಾಗ-೯, ಪುಟ- ೧೦೩

ಅಮೂರ್ತ ರೂಪದಲ್ಲಿ ಲಿಂಗವನ್ನು ಪೂಜಿಸುವುದು ಒಂದು ಪದ್ಧತಿಯಾದರೆ ಮೂರ್ತ ರೂಪದಲ್ಲಿ ಪೂಜಿಸುವುದು ಇನ್ನೊಂದು ಪದ್ಧತಿಯಾಗಿ ದೊರೆಯುತ್ತದೆ. ಮೂರ್ತ ರೂಪದ ಪೂಜೆಗಳಲ್ಲಿ ಶಿವನನ್ನು ಅರ್ಧನಾರೀಶ್ವರನನ್ನಾಗಿಯೋ ಇಲ್ಲವೆ ಹರಿ ಮತ್ತು ಹರರನ್ನು ಕೂಡಿಸಿ ನಿರ್ಮಿಸಲಾಗುವ ಮೂರ್ತಿಶಿಲ್ಪವನ್ನು ನೋಡಬಹುದು. ಹರಿ ಮತ್ತು ಹರರಿಬ್ಬರನ್ನು ಒಂದೇ ಶಿಲ್ಪದಲ್ಲಿ ಸಂಯೋಜಿಸಿದರೆ ಅದನ್ನು ಹರಿಹರ ಶಿಲ್ಪ ಎಂದು ಕರೆಯಲಾಗುತ್ತದೆ. ಹರಿಹರ ಮೂರ್ತಿಶಿಲ್ಪದಲ್ಲಿ ಶಿಲ್ಪದ ಬಲಭಾಗವು ಹರನ ಶೈಲಿಯನ್ನು ಹೊಂದಿದ್ದರೆ, ಎಡಭಾಗವು ಹರಿಯನ್ನೂ, ಅವನ ಆಯುಧ, ವೇಷಭೂಷಣಗಳನ್ನೂ ಹೊಂದಿರುತ್ತದೆ. ಹರಿಹರ ಶಿಲ್ಪವಾಗಲೀ ಅರ್ಧನಾರೀಶ್ವರ ಶಿಲ್ಪವಾಗಲೀ ಎರಡೂ ಶುಲ್ಪಗಳು ಒಂದೇ ಸ್ವರೂಪವನ್ನು ಹೊಂದಿರುವಂತಹವುಗಳು ಎಂಬ ವಿಷಯ ತಿಳಿದು ಬರುತ್ತದೆ.

ಭಾಗವತ ಪುರಾಣದಲ್ಲಿ ಬರುವ ಕಥೆಯಲ್ಲಿ ಅಮೃತವನ್ನು ಪಡೆಯಲು ದೇವದಾನವರು ನಡೆಸಿದ ಕ್ಷೀರಸಾಗರ ಮಂಥನದ ಸನ್ನಿವೇಶವು ಬರುತ್ತದೆ. ಈ ಸಮಯದಲ್ಲಿ ಸುರರಿಗೆ ಸಹಾಯ ಮಾಡಲು ವಿಷ್ಣುವು ಮೋಹಿನೀ ರೂಪವನ್ನು ಧರಿಸಿ ಬರುತ್ತಾನೆ. ಮೋಹಿನೀ ರೂಪದಲ್ಲಿ ಇದ್ದಂತಹ ವಿಷ್ಣುವನ್ನು ಶಿವನು ನೋಡಿ ಮೋಹಗೊಂಡನು. ಈ ಮೋಹದ ಕಾರಣದಿಂದಲೇ ಹರಿಹರ ಪುತ್ರನ ಜನನವಾಯಿತು ಎಂದು ಹೇಳಲಾಗುತ್ತದೆ. ಈ ಕಥೆಯ ಆಧಾರದ ಮೇಲೆ ಅರ್ಧನಾರೀಶ್ವರ ಶಿಲ್ಪ ಹಾಗೂ ಹರಿಹರ ಶಿಲ್ಪಗಳೆರಡರ ಕಲ್ಪನೆಗಳು ಬಂದವು ಎನ್ನಬಹುದು.

ಅರ್ಧನಾರೀಶ್ವರ ಶಿಲ್ಪವಾಗಲೀ, ಹರಿಹರ ಶಿಲ್ಪವಾಗಲೀ ಎರಡೂ ಕೂಡಾ ಪುರುಷ ಮತ್ತು ಸ್ತ್ರೀಯನ್ನು ಪ್ರತಿನಿಧಿಸುತ್ತವೆ[೪೨] ಎನ್ನುವುದು ಸಮಂಜಸವಾಗಿದೆ. ಅರ್ಧನಾರೀಶ್ವರ ಶಿಲ್ಪದಲ್ಲಿರುವ ನಾರಿಯು ವಿಷ್ಣುವು ಧರಿಸಿದ ಮೋಹಿನೀ ರೂಪದ ಸಂಕೇತವಾಗಿ ಬಳಸಲ್ಪಟ್ಟಿರುವುದು ತಿಳಿದು ಬರುತ್ತದೆ. ಶಿವನನ್ನು ಪ್ರತಿನಿಧಿಸುವ ಮೂರ್ತ ರೂಪವಾಗಲೀ, ಅಮೂರ್ತ ರೂಪವಾಗಲೀ ಅದು ವಿಶೇಷವಾಗಿ ಪುರುಷ ಮತ್ತು ಸ್ತ್ರೀಯರ ಮಿಲನವನ್ನು ಕುರಿತು ಹೇಳುವುದಾಗಿದೆ.

ದೇವನು ಇಡೀ ವಿಶ್ವವನ್ನು ಹೊಂದಿರುವನು ಎಂದು ಹೇಳುವ ಹಿನ್ನೆಲೆಯಲ್ಲಿ ವೇದಗಳು, ಪುರಾಣಗಳು ಹದಿನಾಲ್ಕು ಲೋಕಗಳು ಅವನ ದೇಹದಲ್ಲಿವೆ ಎಂದು ಹೇಳಲಾಗುತ್ತದೆ. ಅವನಿಂದಲೇ ಸೃಷ್ಟಿ ಅವನೇ ಎಲ್ಲಾ ಎನ್ನುವ ಪರಿ ಇದಾಗಿದೆ. ಶಂಭುವು ಮೂಲಮಂತ್ರ ಸ್ವರೂಪವಾಗಿಯೂ, ಮೂಲಸ್ತಂಭ ಸ್ವರೂಪವಾಗಿಯೂ ಇರವನು ಎಂದು

೪೨. Adhranarishwara and Harihara have both a basic male and female concept.....
K.V. Sundara rajan: **Lakulisa and Linga Polymorphism**, ಪುಟ-೧೧೬

ವೇದಮಂತ್ರಗಳು ಹೇಳುತ್ತವೆ[೪೩]. ಸರ್ವಸ್ವವೂ ಅವನೇ ಎನ್ನುವುದು ಇದರ ವಿಶೇಷ. ಶಿವನೇ ಬ್ರಹ್ಮ, ಶಕ್ತಿಯೇ ಅಂಗ ಎಂದು ಹೇಳುವ ಹಿನ್ನೆಲೆಯಲ್ಲಿ ಆ ಶಕ್ತಿಯ ಸಹಸ್ರಾಂಶದಿಂದ ಆದಿಶಕ್ತಿಯು ಉಂಟಾಗುತ್ತದೆ, ಆದಿಶಕ್ತಿಯ ಸಹಸ್ರಾಂಶದಿಂದ ಇಚ್ಛಾಶಕ್ತಿಯು ಉಂಟಾಗುತ್ತದೆ, ಇಚ್ಛಾಶಕ್ತಿಯ ಸಹಸ್ರಾಂಶದಿಂದ ಜ್ಞಾನಶಕ್ತಿಯೂ ಜ್ಞಾನಶಕ್ತಿಯ ಸಹಸ್ರಾಂಶದಿಂದ ಕ್ರಿಯಾಶಕ್ತಿಯು ಉಂಟಾಗುತ್ತದೆ[೪೪] ಎನ್ನಲಾಗುತ್ತದೆ.

ಪುರಾಣಗಳಲ್ಲಿ ಜ್ಯೋತಿಸ್ತಂಭ ಮತ್ತು ಲಿಂಗವನ್ನು ಕುರಿತು ಉಲ್ಲೇಖಗಳಿರುವುದನ್ನು ಕಾಣುತ್ತೇವೆ. ಪುರಾಣಗಳಲ್ಲಿ ಅಮೂರ್ತ ಆಕಾರವನ್ನು ಹೊಂದಿರುವಂತಹ ಲಿಂಗವು ಕೋಟಿ ಸೂರ್ಯರಿಗೆ ಸಮಾನವಾದ ಪ್ರಕಾಶವನ್ನು ಹೊಂದಿರುವ **ಜ್ಯೋತಿಸ್ತಂಭ**[೪೫] ಎಂದು ಹೇಳಲಾಗುವುದು. ಈ ದಿವ್ಯಲಿಂಗವು ಮೂಲಸ್ತಂಭವೆಂದೂ ಇದರಿಂದಲೇ ಜಗತ್ತು ಸೃಷ್ಟಿಯಾಗಿದೆ ಎಂದೂ ಭಾವಿಸಲಾಗುವುದು. ಪುರಾಣದಲ್ಲಿ ಇರುವ ಉಲ್ಲೇಖಗಳ ಆಧಾರದ ಮೇಲೆ ನೋಡಿದರೆ ಅಗ್ನಿಸ್ತಂಭ, ಲಿಂಗ ಎರಡೂ ಒಂದೇ ಆಗಿದೆ. ಈ ಎರಡೂ ಜ್ಯೋತಿಸ್ತಂಭದ ಪ್ರತೀಕಗಳಾಗಿವೆ ಎಂದು ಹೇಳಬಹುದು.

೨. ಚಾರಿತ್ರಿಕ ಹಿನ್ನೆಲೆ

ಕಲೆಯನ್ನು ಕುರಿತಾಗಿ ಯಾವುದೇ ಅಧ್ಯಯನವನ್ನು ಮಾಡುವಾಗ ಅದರ ಚರಿತ್ರೆಯು ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಪ್ರಾಚೀನ ಮಾನವನ ಬದುಕಿನ ಶೈಲಿ, ಅವನು ಪ್ರಕೃತಿಯಿಂದ ಪಡೆದಂತಹ ಅನುಭವಗಳು, ಆ ಅನುಭವದಿಂದ ಅವನು ತನ್ನ ಜೀವನಕ್ಕೆ ಅವಶ್ಯವಿರುವ ಸಾಮಗ್ರಿಗಳನ್ನು ಬಳಸಿಕೊಂಡ ವಿಧ, ಅವುಗಳ ಏಳಿಗೆ

---

೪೩. ನಾಲ್ಕು ವೇದಗಳು ಅವನ ಗರ್ಭ, ಪುರಾಣ ಅವನ ಸೊಂಟ, ಯೋಗಿಗಳು ಮತ್ತು ಮುನಿಗಳೆಲ್ಲಾ ಅವನ ಪಾದದಲ್ಲಿರುವರು. ಅವನ ಮೈಯಲ್ಲಿ ಹದಿನಾಲ್ಕು ಲೋಕಗಳು– ಕಾಲುಗಳಲ್ಲಿ ಅತಲವೂ, ಕಾಲುಗಳ ಮೇಲ್ಭಾಗದಲ್ಲಿ ವಿತಲವೂ ಉಂಟು, ಹಿಂಗಾಲುಗಳಲ್ಲಿ ಸುತಲವೂ, ಮೊಣಕಾಲುಗಳಲ್ಲಿ ಮಹಾತಲವೂ, ತೊಡೆಗಳಲ್ಲಿ ತಲಾತಲವೂ, ಗುಹ್ಯ ಸ್ಥಾನದಲ್ಲಿ ರಸಾತಲವೂ ಸೊಂಟದಲ್ಲಿ ಪಾತಾಳವೂ ಇವೆ. ಹೀಗೆ ಏಳೂ ಲೋಕಗಳಿರುವುವು. ಹೊಕ್ಕಳಿನಲ್ಲಿ ಭೂಲೋಕವೂ, ಹೊಟ್ಟೆಯಲ್ಲಿ ಭುವರ್ಲೋಕವೂ, ಎದೆಯಲ್ಲಿ ಸ್ವರ್ಗಲೋಕ, ಕತ್ತಿನಲ್ಲಿ ಜನಲೋಕ, ದವಣೆಯಲ್ಲಿ ತಪೋಲೋಕ, ಹಣೆಯಲ್ಲಿ ಸತ್ಯಲೋಕ, ನೆತ್ತಿಯ ಮೇಲೆ ಮಹರ್ಲೋಕವೂ ಇವೆ. ಇವು ಊರ್ಧ್ವ ಲೋಕಗಳು. ಅಂತೂ ೧೪ ಲೋಕಗಳು ಅವನಲ್ಲಿ ಅಡಗಿರುವವು.......
ಸಂ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್:
ಕೆಳದಿ ಬಸವರಾಜ ಸಂಕಲಿಸಿದ **ಶಿವತತ್ತ್ವರತ್ನಾಕರ**, ಪುಟ–೨೪

೪೪. ಸಂ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್:
ಕೆಳದಿ ಬಸವರಾಜ ಸಂಕಲಿಸಿದ **ಶಿವತತ್ತ್ವರತ್ನಾಕರ**, ಪುಟ–೨೮

೪೫. ಆದಿಶಕ್ತಿಯ ದಶಾಂಶದಿಂದ ಅಮೂರ್ತ ಹುಟ್ಟಿದೆ. ಆದಿಶಕ್ತಿಯು ಅಮೂರ್ತವಾಗಿರುವುದರಿಂದ ಇದೂ ಅಮೂರ್ತವೆನಿಸಿಕೊಳ್ಳುತ್ತದೆ. ಅಮೂರ್ತವಾಗಿರುವುದರಿಂದ ಅದೇ ಆಕಾರದ ಲಿಂಗವು ಕೋಟಿ ಸೂರ್ಯರಿಗೆ ಸಮಾನವಾದ ಪ್ರಕಾಶದ ಜ್ಯೋತಿಸ್ತಂಭದ ಆಕಾರವಾಗಿರುವುದು. ಅದರ ಮಧ್ಯದಲ್ಲಿರುವ ಮೂರ್ತಿಯು ಅಮೂರ್ತವಾಗಿರುವುದರಿಂದ ಅಗೋಚರವಾಗಿದೆ. ಈ ದಿವ್ಯಲಿಂಗವು ಮೂಲಸ್ತಂಭದಂತೆ ಇದೆ.ಮೂರ್ತವಾಗಿದ್ದರೂ ಅಮೂರ್ತವೆಂದೇ ಪ್ರಸಿದ್ಧವಾಗಿದೆ......
ಸಂ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್:
ಕೆಳದಿ ಬಸವರಾಜ ಸಂಕಲಿಸಿದ ಶಿವತತ್ತ್ವರತ್ನಾಕರ, ಪುಟ–೩೨

ಎಲ್ಲವೂ ಚಾರಿತ್ರಿಕ ಅಧ್ಯಯನದಲ್ಲಿ ಸೇರುತ್ತದೆ.

ಮೊದಲಿಗೆ ಗುಹೆಗಳಲ್ಲಿ ವಾಸಿಸುತ್ತಿದ್ದ ಪ್ರಾಚೀನ ಮಾನವನು ಪ್ರಕೃತಿದತ್ತವಾದ ಗುಹೆಗಳು ದೊರೆಯದಿದ್ದಾಗ ತನ್ನ ಬುದ್ಧಿಶಕ್ತಿಗೆ ಅನುಗುಣವಾಗಿ ಗುಹೆಗಳನ್ನು ನಿರ್ಮಿಸಿಕೊಂಡಿರುವುದು ತಿಳಿಯುತ್ತದೆ. ಬಿದಿರು, ಮರ, ಮಣ್ಣು ಹೀಗೆ ಹಲವಾರು ವಿಧದ ನೈಸರ್ಗಿಕ ಸಾಮಾಗ್ರಿಗಳನ್ನು ಗುಹೆಯ ನಿರ್ಮಾಣದಲ್ಲಿ ಬಳಸಲಾಗುತ್ತಿತ್ತೆಂದೂ ಸಹ ಚರಿತ್ರೆಯಲ್ಲಿ ತಿಳಿದು ಬರುತ್ತದೆ. ಗುಹೆಯ ನಿರ್ಮಾಣದಲ್ಲಿ ಮಾನವನು ಮೊದಲು ಬಳಸಿದ್ದು ಮರದ ಟೊಂಗೆಗಳನ್ನು. ಮರದ ಕೊಂಬೆ, ರೆಂಬೆಗಳನ್ನು ಬಳಸಿ ಬಿಡಾರಗಳನ್ನು ನಿರ್ಮಿಸಿದನು. ಇವನು ನಂತರದ ದಿನಗಳಲ್ಲಿ ಈ ಕೊಂಬೆಗಳನ್ನು ಕಂಬಗಳಂತೆ ಬಳಸಿಕೊಂಡು ವಾಸಿಸಲು ಅನುಕೂಲವನ್ನು ಮಾಡಿಕೊಂಡನು. ಈ ವಿಧವಾಗಿ ಬಳಕೆಗೊಂಡ ಕಂಬಗಳೇ ಅವನ ಮುಂದಿನ ನಾಗರೀಕತೆಯ ಅಭಿವೃದ್ಧಿಯಲ್ಲಿ ಆಧಾರಸ್ತಂಭಗಳಂತೆ ಪಾತ್ರವಹಿಸಿದವು ಎಂದರೆ ತಪ್ಪಾಗಲಾರದು.

ಪ್ರಾಚೀನ ಮಾನವನು ಕಾಡು ಮೇಡುಗಳಲ್ಲಿ ಅಲೆಮಾರಿಯಾಗಿ ಬದುಕುತ್ತಿದ್ದ ಸಂದರ್ಭದಲ್ಲಿ ರಾತಿಯ ವೇಳೆಯನ್ನೇ ಕಳೆಯುವುದೇ ಕಷ್ಟದ ಕೆಲಸವಾಗಿರುತ್ತಿತ್ತು. ಕೃತಕ ಬೆಳಕನ್ನು ಕಂಡರಿಯದ ಅವನಿಗೆ ರಾತ್ರಿ ಎಂದರೆ ಹೆದರಿಕೆಯುಂಟಾಗುತ್ತಿತ್ತು. ಕತ್ತಲು ಇವನಿಗೆ ರಾಕ್ಷಸನಂತೆ ಕಂಡರೆ ಬೆಳಕನ್ನು ಕೊಡುವ ಸೂರ್ಯನನ್ನು ಇವನು ದೇವರೆಂದು ನಂಬಿದನು[೪೭]. ಇದೇ ನಂಬಿಕೆಯ ಹಿನ್ನೆಲೆಯಲ್ಲಿಯೇ ಸೂರ್ಯನನ್ನು ಪೂಜಿಸಲು ತೊಡಗಿದ ಎನ್ನಬಹುದು. ಪ್ರಾಚೀನ ಮಾನವನಿಗೆ ಸೂರ್ಯನೇ ಮೊದಲ ಆರಾಧ್ಯ ದೈವವಾದನು ಎಂದರೆ ತಪ್ಪಾಗಲಾರದು.

ಮಾನವನು ತನ್ನ ಜೀವನದ ವಿಧಾನದಲ್ಲಿ ಪ್ರಗತಿಯನ್ನು ಹೊಂದಲು ಅವನಿಗೆ ದೊರೆತ ಆಕಸ್ಮಿಕ ಅನುಭವಗಳೇ ಕಾರಣ ಎಂದು ಹೇಳಬಹುದು. ಜೀವನದಲ್ಲಿ ಪಡೆದ ಆಕಸ್ಮಿಕವಾದ ಅನುಭವಗಳ ಸಹಾಯದಿಂದಲೇ ಬೆಳಕನ್ನು ಕೊಡುವ ಅಗ್ನಿಯನ್ನೂ ಸಹ ಕಂಡುಕೊಂಡಿದ್ದಾನೆ. ಈ ರೀತಿಯ ವಿಶೇಷ ಅನುಭವಗಳಿಂದ ಪಡೆದ ಜ್ಞಾನವು ಅವನ ಮುಂದಿನ ಜೀವನದ ಕ್ರಮಕ್ಕೆ ಅನುಕೂಲಕರವಾಗಿ ಸಹಕಾರಿಯಾಯಿತು ಎಂದು ತಿಳಿಯುತ್ತದೆ.

ಆಕಸ್ಮಿಕವಾಗಿ ಕಾಡಿನ ಕಿಚ್ಚು ಮರಗಿಡಗಳನ್ನು ಸುಡುತ್ತಿರುವುದನ್ನು ಪ್ರಾಚೀನ ಮಾನವನು ಕಂಡಿರುವ ಸಾಧ್ಯತೆಗಳಿವೆ[೪೮]. ಕಾಡ್ಗಿಚ್ಚಿನ ವೈಖರಿಯನ್ನು ರಾತ್ರಿಯ ಹೊತ್ತು ನೋಡಿದ ಮಾನವನು ಅದರಿಂದ ಪಡೆಯುವ ಬೆಳಕು ಹಾಗೂ ಬೆಂಕಿಯ ಕಾವನ್ನು

೪೭. D.G. Kelkar: **Lamps of India,**

೪೮. ತಿರುಮಲೆ ಶ್ರೀ ರಂಗಾಚಾರ್ಯ: **ಸ್ತಂಭಮಾಲಾ,** ಮಲ್ಲಾರ ಮಾಸಪತ್ರಿಕೆ, ಆಗಸ್ಟ್ ೨೦೦೨, ಪುಟ- ೨೬

ಅನುಭವಿಸಿದನು. ಬೆಂಕಿಯು ಬೆಳಕನ್ನು ಕೊಡುತ್ತದೆ ಎಂಬುವುದು ಅವನು ಪಡೆದ ಆಕಸ್ಮಿಕ ಅನುಭವಗಳಲ್ಲಿ ಒಂದು ಎನ್ನಬಹುದು.

ಕಾಡ್ಗಿಚ್ಚಿನಿಂದ ಉಂಟಾದ ಬೆಂಕಿಗೆ ಕಾಡಿನಲ್ಲಿ ಇದ್ದಂತಹ ಪ್ರಾಣಿಗಳು ಸಿಲುಕಿ ಸಾಯುವುದನ್ನೂ ಸಹ ಮಾನವನು ಕಂಡಿರುವ ಸಾಧ್ಯತೆಗಳಿವೆ. ಕಾಡ್ಗಿಚ್ಚು ಸಂಪೂರ್ಣವಾಗಿ ಶಾಂತವಾದರೂ ಕೂಡ ಸತ್ತ ಪ್ರಾಣಿಗಳ ದೇಹದಲ್ಲಿದ್ದ ಕೊಬ್ಬು ಕರಗಿ ಅಲ್ಲಲ್ಲಿ ಬೆಂಕಿಯು ಉರಿಯುತ್ತಿತ್ತು. ಕೊಬ್ಬಿನಾಂಶ, ಜಿಡ್ಡಿನಾಂಶ ಇದ್ದರೆ ಬೆಂಕಿಯು ಉರಿಯುತ್ತದೆ ಎಂಬುದನ್ನು ಮಾನವನು ಇದರಿಂದ ಅರಿತನು. ಕಾಡ್ಗಿಚ್ಚಿನ ಬೆಂಕಿಯೇ ಅವನು ಕಂಡಂತಹ ಬೆಂಕಿಯ ಪ್ರಥಮ ದರ್ಶನ ಎಂದು ತೋರುತ್ತದೆ.

ಕಾಡ್ಗಿಚ್ಚಿನಿಂದ ಪಡೆದ ಬೆಂಕಿಯನ್ನು ಹಾಗೂ ಇತರೆ ಅನುಭವದ ಆಧಾರದ ಮೇಲೆ ಕಂಡುಕೊಂಡ ಬೆಂಕಿಯನ್ನು ನಿರಂತರವಾಗಿ ಉಳಿಸಿಕೊಳ್ಳಲು ಮೊದಲಿಗೆ ಅವನು ಬಳಸಿದ್ದು ಪ್ರಾಣಿಗಳ ಕೊಬ್ಬು. ಸಸ್ಯಗಳಿಂದಲೂ ಎಣ್ಣೆಯನ್ನು ಪಡೆಯಬಹುದು ಎಂಬುದು ಅವನ ಆನಂತರದ ಅನುಭವದಿಂದ ಪಡೆದ ಜ್ಞಾನವಾಗಿದೆ[೪೮] ಎನ್ನಬಹುದು. ನಂತರದ ದಿನಗಳಲ್ಲಿ ಕಾಡುಪ್ರಾಣಿಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ಒರಟಾದ ಕಲ್ಲುಗಳಿಂದ ಮೊನಚಾದ ಆಯುಧಗಳನ್ನು ತಯಾರಿಸಿಕೊಂಡನು. ಕಲ್ಲಿನ ಆಯುಧಗಳನ್ನು ತಯಾರು ಮಾಡುವಾಗ ಇಲ್ಲವೇ ಬಂಡೆಗಳು ಉರುಳಿ ಕೆಳಗೆ ಬೀಳುವ ಸಂದರ್ಭದಲ್ಲಿ ಕಲ್ಲಿಗೆ ಕಲ್ಲು ಇಲ್ಲವೇ ಬಂಡೆಗೆ ಬಂಡೆ ತಾಗಿ ಕಿಡಿ ಬಂದಿರುವುದನ್ನು ಕಂಡಿರಬಹುದು. ಕಾಡ್ಗಿಚ್ಚಿನಿಂದ ಅಷ್ಟೇ ಅಲ್ಲದೆಯೂ ಬೇರೆ ವಿಧಾನದಲ್ಲೂ ಬೆಂಕಿಯನ್ನು ಪಡೆಯಬಹುದು ಎಂಬುವುದನ್ನು ಇವನು ಅರಿತನು. ಇದು ಅವನು ನೈಸರ್ಗಿಕವಾಗಿ ಅಲ್ಲದೆ ಕೃತಕವಾಗಿ ಪಡೆದ ಬೆಂಕಿಯಾಗಿದೆ.

ಕಾಡ್ಗಿಚ್ಚು ಇಡೀ ಅರಣ್ಯವನ್ನು ಆಕ್ರಮಿಸತೊಡಗಿದಾಗ ಅಲ್ಲಿದ್ದಂತಹ ಪ್ರಾಣಿಗಳು ಹೆದರಿ ಓಡತೊಡಗಿದವು. ಇದನ್ನು ಗಮನಿಸಿದ ಮಾನವನು ಬೆಂಕಿಯನ್ನು ಕಂಡರೆ ಪ್ರಾಣಿಗಳು ಹೆದರುತ್ತವೆ ಎಂದೂ ಸಹ ತಿಳಿದುಕೊಂಡನು. ಕಾಡು ಪ್ರಾಣಿಗಳು ಬಾರದಂತೆ ತಡೆಯಲು ತನ್ನ ಗುಹೆಯ ಬಳಿ ಬೆಂಕಿಯನ್ನು ಬಳಸಲು ಅವನ ಈ ಅನುಭವ ಸಹಕಾರಿಯಾಯಿತು. ಕಾಡ್ಗಿಚ್ಚಿನಲ್ಲಿ ಉರಿದು ಬೀಳುತ್ತಿದ್ದ ಕೊಳ್ಳಿಯೊಂದನ್ನು ತನ್ನ ಗುಹೆಯ ಕಡೆ ಕೊಂಡೊಯ್ದಾಗ ಅವನು ಹೋದ ದಾರಿಯುದ್ದಕ್ಕೂ ಮತ್ತು ಅವನ ಗುಹೆಯಲ್ಲಿ ಬೆಳಕು ಮೂಡಿದುದನ್ನು ಕಂಡು, ಆ ಕೊಳ್ಳಿಯನ್ನು ಅಲ್ಲೇ ನೆಲಕ್ಕೆ ನೆಟ್ಟು ನಿಲ್ಲಿಸಿರಬೇಕು[೪೯]. ಬೆಂಕಿಯು ಎತ್ತರದಲ್ಲಿದ್ದರೆ ಬೆಳಕು ಇನ್ನೂ ಹೆಚ್ಚು ಸ್ಥಳವನ್ನು ಆವರಿಸುತ್ತದೆ ಎಂಬುವುದನ್ನು ಇವನು ಅರಿತನು. ಈ ಅನುಭವದ ಜ್ಞಾನದಿಂದಲೇ ದೀಪದ ಕಂಬದ, ದೀಪಸ್ತಂಭದ ಉಗಮವಾಯಿತು ಎನ್ನಬಹುದು.

---

೪೮. ತಿರುಮಲೆ ಶ್ರೀ ರಂಗಾಚಾರ್ಯ: **ಸ್ತಂಭಮಾಲಾ**, ಮಲ್ಲಾರ ಮಾಸಪತ್ರಿಕೆ, ಆಗಸ್ಟ್ ೨೦೦೨, ಪುಟ- ೨೬

೪೯. ತಿರುಮಲೆ ಶ್ರೀ ರಂಗಾಚಾರ್ಯ: **ಸ್ತಂಭಮಾಲಾ**, ಮಲ್ಲಾರ ಮಾಸಪತ್ರಿಕೆ, ಆಗಸ್ಟ್ ೨೦೦೨, ಪುಟ- ೨೬

ಮಾನವನು ಮೊದಲಿಗೆ ಎತ್ತರದ ಜಾಗದಲ್ಲಿ ದೀಪಗಳನ್ನು ಇಡಲು ಮರದ ಕೊಂಬೆ ರೆಂಬೆಗಳನ್ನು ಬಳಸಿಕೊಂಡಿರಬೇಕು. ನೈಸರ್ಗಿಕವಾಗಿ ದೊರೆತ ಒಣಗಿದ ಮರದ ತುಂಡಿನ ಮೇಲೆ ದೀಪವನ್ನು ಇಡುತ್ತಿದ್ದನೆಂದು ತೋರುತ್ತದೆ. ಕಾಲ ಕ್ರಮೇಣ ಮರವನ್ನು ಕಡಿದು ದೀಪವನ್ನು ಇಡಲು ಅನುಕೂಲ ಮಾಡಿಕೊಂಡಿರಬೇಕು. ದಿನ ಕಳೆದಂತೆ ಮರದ ಕಂಬವು ಸುಂದರವಾಗಿ ಕಾಣಲು ಕುಶಲ ಕೆತ್ತನೆಯನ್ನು ಮಾಡಿದಂತೆ ತೋರುತ್ತದೆ.

ತನ್ನ ಗುಡಿಸಲನ್ನು ಮಾತ್ರ ಬೆಳಕಾಗಿಸುವ ದೃಷ್ಟಿಯಲ್ಲಿ ಪ್ರಾರಂಭಗೊಂಡ ದೀಪಗಳು ಮಾನವನು ಸಂಘ ಜೀವಿಯಾಗುತ್ತಿದ್ದಂತೆ ತನ್ನ ಇಡೀ ಗುಂಪಿಗೆ ಬೆಳಕನ್ನು ನೀಡುವ ಸಲುವಾಗಿ ಎತ್ತರದ ದೀಪಸ್ತಂಭವನ್ನು ನಿರ್ಮಿಸಿದನು ಎಂದು ತೋರುತ್ತದೆ. ಹೀಗೆ ಪ್ರಾರಂಭವಾಯಿತು ದೀಪದ ಕಂಬ, ದೀಪಸ್ತಂಭ ಎಂದು ಹೇಳಬಹುದು. ಮರದ ದೀಪಸ್ತಂಭದ ಬಳಕೆಯ ನಂತರ ದೀಪವನ್ನು ಇಡಲು ಕಲ್ಲಿನ ಸ್ತಂಭಗಳನ್ನು ಬಳಸಿಕೊಂಡಿರಬೇಕು. ಕಲ್ಲಿನ ಪುಟ್ಟ ಪುಟ್ಟ ದೀಪದ ಸ್ತಂಭಗಳು ಕೆಲವು ದೇವಾಲಯಗಳಲ್ಲಿ ಈಗಲೂ ದೊರೆಯುತ್ತವೆ. ಮೈಸೂರು ಜಿಲ್ಲೆಯ ತಲಕಾಡಿನಲ್ಲಿರುವ ವೈದ್ಯನಾಥ ದೇವಾಲಯದ ಆವರಣದಲ್ಲಿರುವ ಶಕ್ತಿ ಗಣಪತಿಯ ಮುಂದೆ ಕಲ್ಲಿನ ಪುಟ್ಟ ದೀಪದ ಸ್ತಂಭವಿದೆ (ಚಿತ್ರ ೧). ಇದರ ಎತ್ತರವು ಸುಮಾರು ಒಂದು ಅಡಿಯಾಗಿದೆ.

ಇವನು ಗುಡ್ಡಗಾಡಿನಲ್ಲಿ ವಾಸಿಸುತ್ತಿದ್ದನಾದ್ದರಿಂದ ರಾತ್ರಿಯ ಹೊತ್ತು ಕಾಡು ಪ್ರಾಣಿಗಳಿಂದ ತೊಂದರೆಯನ್ನು ಅನುಭವಿಸುತ್ತಿದ್ದನು. ಪ್ರಾಣಿಗಳು ಬೆಂಕಿಯನ್ನು ಕಂಡರೆ ಹೆದರುವುದನ್ನು ನೋಡಿದ್ದ ಇವನು ಬೆಂಕಿಯಿದ್ದರೆ ಕಾಡು ಪ್ರಾಣಿಗಳು ಸುಳಿಯುವುದಿಲ್ಲ ಎಂದು ಅರಿತು ಕತ್ತಲಲ್ಲಿ ವನ್ಯಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಊರಿನ ಸುತ್ತಲೂ ದೀಪದ ಕಂಬಗಳನ್ನು ನಿಲ್ಲಿಸಿಕೊಂಡನು.

ಕಾಡಿನಲ್ಲಿ ಸ್ಥಳದಿಂದ ಸ್ಥಳಕ್ಕೆ ತಿರುಗಾಡುವಾಗ ಜನರಿರುವ ಸ್ಥಳಗಳನ್ನು ಗುರುತಿಸಲು, ಹಾಗೂ ರಾತ್ರಿಯ ಹೊತ್ತು ಪ್ರಯಾಣಿಸುವ ಜನರು ದಾರಿ ತಪ್ಪದಿರಲು ಎತ್ತರದ ಸ್ಥಳಗಳಲ್ಲಿ ದೀಪಸ್ತಂಭಗಳನ್ನು ಬೆಳಗಿಸುತ್ತಿದ್ದರು ಎಂದು ತಿಳಿದು ಬರುತ್ತದೆ. ಬಾಗಲಕೋಟೆ ಜಿಲ್ಲೆಯ ಬನಶಂಕರಿಯಲ್ಲಿ ಎತ್ತರದಲ್ಲಿ ಇರುವ ದೀಪಸ್ತಂಭವು (ಚಿತ್ರ ೨) ಇದಕ್ಕೆ ಉತ್ತಮ ನಿದರ್ಶನವಾಗಿದೆ. ಮೊದಲಿಗೆ ಇದು ಕಾಡಾಗಿದ್ದರಿಂದ ಈ ರೀತಿಯ ಅನುಕೂಲವನ್ನು ಮಾಡಿಕೊಂಡಿರಬೇಕು. ಎತ್ತರದ ಕೊಠಡಿಯಂತೆ ನಿರ್ಮಿಸಿ ಅದರ ಮೇಲೆ ದೀಪಸ್ತಂಭವನ್ನು ನಿಲ್ಲಿಸಿರುವುದನ್ನು ನೋಡಬಹುದು. ಈ ಕೊಠಡಿಯಂತೆ ಇರುವ ರಚನೆಯ ನಾಲ್ಕೂ ಕಡೆಗಳಲ್ಲಿ ದೀಪಗಳನ್ನು ಬೆಳಗಲು ಅನುಕೂಲವನ್ನು ಮಾಡಲಾಗಿದೆ. ಇದನ್ನು ಮಂಗನಮಹಲು ಎಂದು ಕರೆಯುತ್ತಾರೆ. ಈ ರೀತಿಯಾಗಿ ರಾತ್ರಿಯಲ್ಲಿ ಸಂಚರಿಸುವಾಗ ಮಾರ್ಗವು ಗೋಚರಿಸಲು ಮತ್ತು ವನ್ಯಪ್ರಾಣಿಗಳ ಹಾವಳಿಯಿಂದ ರಕ್ಷಿಸಿಕೊಳ್ಳಲು ಬೆಂಕಿಯ ಕೊಳ್ಳಿಗಳನ್ನು ಹೊತ್ತು ತಿರುಗುತ್ತಿದ್ದುದೂ ಉಂಟು. ಹೀಗೆ ಕಂಡುಕೊಂಡ ದೀಪದ ಕಂಬವು ನಂತರದ ದಿನಗಳಲ್ಲಿ ದೇವಾಲಯದ ದೀಪಸ್ತಂಭವಾಗಿ ರೂಪಾಂತರಗೊಂಡಿದೆ ಎನ್ನಬಹುದು.



ಚಿತ್ರ ೧



ಚಿತ್ರ ೨



ಚಿತ್ರ ೩-೧



ಚಿತ್ರ ೩-೨



ಚಿತ್ರ ೪-೧

ಸೂರ್ಯನನ್ನು ದೇವರಂತೆ ಪೂಜಿಸುತ್ತಿದ್ದ ಮಾನವನು ಬೆಂಕಿಯನ್ನು ಕಂಡುಕೊಂಡ ನಂತರ ಬೆಂಕಿಯನ್ನು ಪೂಜಿಸತೊಡಗಿದ. ಬೆಂಕಿಯು ಮಾನವನ ಮನಸ್ಸಿನಲ್ಲಿ ಸೂರ್ಯನ ಪರ್ಯಾಯ ಸ್ಥಾನವನ್ನು ಪಡೆದುಕೊಂಡಿತು. ಸೂರ್ಯನಂತೆ ಬೆಂಕಿಯು ಬೆಳಕನ್ನು ಕೊಡುವುದೇ ಅವನಿಗೆ ವಿಶೇಷವಾಗಿ ಕಂಡಿತು. ಸೂರ್ಯನಿಲ್ಲದಾಗ ಬೆಂಕಿಯು ಅವನಿಗೆ ಆಸರೆಯಾಯಿತು. ಬೆಂಕಿಯ ಸಣ್ಣ ಕಿಡಿಯೇ ದೀಪದ ರೂಪವನ್ನು ಪಡೆಯಿತು. ಕಾಲಕ್ರಮೇಣ ಮಾನವನು ದೀಪವನ್ನು ಪೂಜಿಸತೊಡಗಿದನು.

ಬೆಳಕನ್ನು ಕೊಡುವ ದೀಪ, ಸೂರ್ಯ ಎರಡೂ ಒಂದೇ ಎಂದು ಅವನು ತಿಳಿದನು. ಸೂರ್ಯನು ನೈಸರ್ಗಿಕವಾಗಿ ಬೆಳಕನ್ನು ಕೊಡುವವನಾದರೆ ತನ್ನ ಅನುಭವದಿಂದ ಪಡೆದುಕೊಂಡ ದೀಪವು ಸೂರ್ಯನಿಲ್ಲದ ಸಮಯದಲ್ಲಿ ಬೆಳಕನ್ನು ಕೊಟ್ಟು ತನ್ನ ಅಜ್ಞಾನವನ್ನು ಓಡಿಸುವುದರಿಂದ ದೀಪಕ್ಕೆ ಮಾನವನು ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟನು ಎಂದು ತೋರುತ್ತದೆ. ದೀಪದ ಬೆಳಕಿನಿಂದ ಜ್ಞಾನವನ್ನು ಪಡೆಯಬಹುದು ಎಂದು ಮಾನವನು ಅರಿತನು. ತನ್ನೆಲ್ಲಾ ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳಲ್ಲಿ ದೈವತ್ವದ ಸಂಕೇತವಾಗಿ ದೀಪವನ್ನು ಬಳಸಿಕೊಂಡನು.

ಪ್ರಾಚೀನ ಭಾರತದ ಅವಶೇಷಗಳಲ್ಲಿ ಅದರಲ್ಲೂ ವಾಸ್ತುಶಿಲ್ಪ, ಶಾಸನ ಮುಂತಾದವುಗಳಲ್ಲಿ ದೀಪಗಳ ಉಲ್ಲೇಖಗಳಿರುವುದು ತಿಳಿದು ಬರುತ್ತದೆ. ಭಾರತದ ಪ್ರಾಚೀನ ನಾಗರೀಕತೆಯನ್ನು ಸಾರುವ ಹರಪ್ಪಾ ಮೊಹೆಂಜೋದಾರೋಗಳಲ್ಲಿ ನಡೆಸಿದ ಉತ್ಖನನಗಳಲ್ಲಿ ಸುಮಾರು ೫೦೦೦ ವರ್ಷಗಳ ಹಿಂದೆಯೇ ಬೀದಿ ದೀಪಗಳು ಇದ್ದವು[೫೦] ಎಂದು ಗೊತ್ತಾಗಿದೆ. ಹರಪ್ಪಾ ಮೊಹೆಂಜೋದಾರೋಗಳಲ್ಲಿ ದೇವಾಲಯಗಳು ದೊರೆಯದಿದ್ದರೂ ದೀಪಸ್ತಂಭಗಳ ಕುರುಹುಗಳು ದೊರೆತಿರುವುದನ್ನು ನೋಡಬಹುದು. ಇದರಿಂದ ದೀಪಸ್ತಂಭದ ಬಳಕೆಯು ದೇವಾಲಯದ ಕಲ್ಪನೆಗಿಂತ ಮುಂಚೆಯೇ ಇತ್ತು ಎಂದು ಸ್ಪಷ್ಟವಾಗಿ ತಿಳಿಯುತ್ತದೆ.

ಕೇವಲ ದೇವಾಲಯದ ಆವರಣದಲ್ಲಿ ಮಾತ್ರವಲ್ಲದೆ ನೀರಿನಕೊಳ, ದೇವಾಲಯದಲ್ಲಿರುವ ಕಲ್ಯಾಣಿಯ ಬಳಿಯೂ ದೀಪಸ್ತಂಭಗಳನ್ನು ನಿಲ್ಲಿಸಿರುವುದನ್ನು ನೋಡಬಹುದು. ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿರುವ ಕಲ್ಯಾಣಿಯ ಸುತ್ತಲೂ ಹತ್ತಕ್ಕೂ ಹೆಚ್ಚು ದೀಪಸ್ತಂಭಗಳನ್ನು ನಿಲ್ಲಿಸಿರುವುದು ಕಾಣುತ್ತದೆ (ಚಿತ್ರ ೩). ಈ ದೀಪಸ್ತಂಭಗಳು ಐದು ಅಡಿಯ ಎತ್ತರವನ್ನು ಹೊಂದಿವೆ. ಇವೆಲ್ಲಾ ಏಕಶಿಲೆಯಲ್ಲಿ ನಿರ್ಮಿಸಿದ ಸ್ತಂಭಗಳಾಗಿವೆ. ರಾತ್ರಿಯ ಹೊತ್ತು ನೀರು ತರಲು ಅನುಕೂಲವಾಗಲು ಮತ್ತು ಕಾಡುಪ್ರಾಣಿಗಳು ಹತ್ತಿರ ಸುಳಿಯದಿರಲು ಈ ರೀತಿಯ ವ್ಯವಸ್ಥೆಯನ್ನು ಮಾಡಿದ್ದರು ಎಂದು ತೋರುತ್ತದೆ.

---

೫೦. ಕನ್ನಡ ವಿಶ್ವಕೋಶ, ಸಂಪುಟ-೯, ಪುಟ- ೬೦೫

ಚರಿತ್ರೆಯಲ್ಲಿ ದೇವಾಲಯದ ಭಾಗವಾಗಿ ದೀಪಸ್ತಂಭಗಳು ಬೆಳೆದು ಬಂದಿರುವುದು ಕಾಣುತ್ತದೆ. ಈ ಹಿನ್ನೆಲೆಯಲ್ಲಿ ದೇವಾಲಯದ ಉಗಮವನ್ನು ಕುರಿತು ತಿಳಿಯುವುದು ಅವಶ್ಯಕವೆನಿಸುತ್ತದೆ. ಪ್ರಾಚೀನ ಕಾಲದಲ್ಲಿ ಮಾನವನು ಗುಹೆಗಳನ್ನು ವಾಸಸ್ಥಳಗಳನ್ನಾಗಿ ಬಳಸಿಕೊಂಡಿರುವುದು ತಿಳಿದು ಬರುತ್ತದೆ. ಇದರ ಆಧಾರದ ಮೇಲೆ ನೋಡಿದಾಗ ವಿಶ್ವದಲ್ಲಿ ತುಂಬಾ ಪ್ರಾಚೀನವಾದ ದೇವಾಲಯಗಳೆಂದರೆ ಗುಹೆಗಳೇ ಆಗಿರುವುದು ಗಮನಾರ್ಹದ ವಿಷಯ. ಪ್ರಾಚೀನ ಮಾನವನು ಗುಹೆಗಳನ್ನು ವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದನಷ್ಟೇ ಅಲ್ಲದೆ ಹೆಣವನ್ನಾಗಲೀ ಅಥವಾ ಕಳೇಬರದ ಅವಶೇಷಗಳನ್ನಾಗಲೀ ಇಡಲು ಸಹ ಉಪಯೋಗಿಸಿಕೊಂಡಿದ್ದಾನೆ.

ಪ್ರಾಚೀನ ಮಾನವನು ಪ್ರಕೃತಿಯಲ್ಲಿ ನಡೆಯುವ ಅನಿರೀಕ್ಷಿತವಾದ ಬದಲಾವಣೆಗಳಿಗೆ ಹೆದರಿದ್ದನು. ಪ್ರಕೃತಿಯಲ್ಲಿ ಸಂಭವಿಸುವ ಪ್ರಳಯಗಳನ್ನು ಕಂಡ ಮಾನವ ಅವುಗಳ ಭೀಕರತೆಯನ್ನು ಉಪಶಮನ ಮಾಡುವ ದಿಟ್ಟಿನಲ್ಲಿ ಆಲೋಚಿಸಿದನು. ಪ್ರಕೃತಿಯ ವಿಕೋಪಗಳಿಂದ ಇವನು ಹೆದರಿದ್ದನು. ಆದ್ದರಿಂದ ಇವನು ಪ್ರಕೃತಿಯನ್ನೇ ಪೂಜಿಸತೊಡಗಿದನು ಎಂದು ತೋರುತ್ತದೆ. ಇದರ ಹಿನ್ನೆಲೆಯಲ್ಲಿಯೇ ಗಿಡ, ಮರ, ಕಲ್ಲು ಮುಂತಾದ ವಸ್ತುಗಳ ಪೂಜೆಯು ಪ್ರಾರಂಭವಾಯಿತು ಎನ್ನಬಹುದು.

ಪರಮಶಕ್ತಿಯೊಂದು ಜಗತ್ತನ್ನು ಸೃಷ್ಟಿಸಿದೆ ಎಂದೂ, ಅದರ ಚೈತನ್ಯವು ತನಗೆ ಗೋಚರವಾಗುವ ವಸ್ತಗಳಲ್ಲಿದೆ ಎಂದೂ ಪ್ರಾಚೀನ ಮಾನವನು ನಂಬಿದನು. ಹೀಗೇ ಆಲೋಚಿಸಿದ ಮಾನವನಿಗೆ ನೆರಳನ್ನು, ಆಹಾರವನ್ನು ಕೊಡುವ ವೃಕ್ಷವು ಮಹತ್ವದ್ದಾಯಿತು. ಇದೇ ದೃಷ್ಟಿಯಿಂದಲೇ ಶುರುವಾದದ್ದು ವೃಕ್ಷಪೂಜೆ ಎಂದು ತೋರುತ್ತದೆ. ಹಿಂದೂ ಧರ್ಮದಲ್ಲಿ ವೃಕ್ಷಪೂಜೆಯು ಕೆಲವು ವಿಶೇಷವಾದ ಮರಗಳಿಗೆ ಸೀಮಿತವಾಗಿರುವುದನ್ನು ನೋಡಬಹುದು. ಕದಂಬ ಮರಗಳಲ್ಲಿ ಕಾರ್ತಿಕೇಯನಿರುವನೆಂದೂ, ಆಲದ ಮರದಲ್ಲಿ ಶಿವನಿರುವನೆಂದೂ, ಹೀಗೇ ಇತರೆ ಮರಗಳಲ್ಲಿಯೂ ಬೇರೆ ಬೇರೆ ದೇವರುಗಳು ವಾಸಿಸುವರು ಎಂಬ ನಂಬಿಕೆಗಳು ಹಿಂದೂ ಧರ್ಮದಲ್ಲಿ ಇರುವುದು ತಿಳಿಯುತ್ತದೆ.

ಭಾರತದ ಅತೀ ಪ್ರಾಚೀನ ನಾಗರೀಕತೆ ಎಂದಿರುವ ಸಿಂಧೂ ನದಿ ನಾಗರೀಕತೆಯನ್ನು ಸಾರುವ ಹರಪ್ಪಾ ಮತ್ತು ಮೊಹೆಂಜೊದಾರೋಗಳಲ್ಲಿ ವೃಕ್ಷಪೂಜೆ ಇತ್ತೆಂದು ಹೇಳುವ ಪುರಾವೆಗಳು ದೊರೆತಿವೆ[೫೧]. ಇದರಿಂದ ವೃಕ್ಷಪೂಜೆಯ ಪ್ರಾಚೀನತೆಯು ತಿಳಿದು ಬರುತ್ತದೆ.

ಬೌದ್ಧ ಧರ್ಮಕ್ಕೂ ಹಿಂದೆ ಅಸ್ತಿತ್ವದಲ್ಲಿ ಇದ್ದಂತಹ ವೈದಿಕ ಧರ್ಮದಲ್ಲೂ ವೃಕ್ಷ ಪೂಜೆಗಳು ನಡೆಯುತ್ತಿದ್ದವು. ವೃಕ್ಷಗಳನ್ನು ಪೂಜಿಸಿ ಮದುವೆಯಾಗಲು, ಮಕ್ಕಳಾಗಲು

---

೫೧. From archeological evidence, it would be clear that this conception of tree-worship is very ancient, dating back to the Harappan times.....
K.R. Shrinivasan: **Temples of South India,** ಪುಟ- ೭

ಹರಕೆಯನ್ನು ಹೊತ್ತುತ್ತಿದ್ದರು. ಪವಿತ್ರವೆನ್ನುವ ವೃಕ್ಷಗಳಿಗೆ ಕಟ್ಟೆಯನ್ನು ಕಟ್ಟಿ ಪೂಜೆ ಮಾಡುವ ಪದ್ಧತಿಯು ನಂತರದ ದಿನಗಳಲ್ಲಿ ಬೆಳೆದು ಬಂದಿದ್ದಿತು. ಕೆಲಕಾಲದ ನಂತರ ಮಾನವನು ಆ ವೃಕ್ಷಗಳಿಗೆ ಚಪ್ಪರವನ್ನು ಹಾಕಿ ಕೊಠಡಿಯಂತೆ ನಿರ್ಮಿಸಿ ಅದನ್ನು ದೇವಾಲಯವೆಂದು ಕರೆದನು ಎಂದು ತೋರುತ್ತದೆ. ಈ ರೀತಿಯಾದ ನಿರ್ಮಾಣದಲ್ಲಿ ಪೂಜಿಸಲ್ಪಡುತ್ತಿದ್ದ ಮರವು ಒಣಗಿ ಹೋದ ಸಂದರ್ಭದಲ್ಲಿ ಮರದ ಒಣಗಿದ ಉಳಿದ ಕಾಂಡವನ್ನೇ ಪೂಜಿಸತೊಡಗಿದನು. ಕಾಲಕ್ರಮೇಣ ಗರ್ಭಗುಡಿಯಲ್ಲಿನ ಮರವು ಸಂಪೂರ್ಣವಾಗಿ ಒಣಗಿ ಹೋದಾಗ ಅದರ ಜಾಗದಲ್ಲಿ ಮೂರ್ತಿಗಳನ್ನು ಇರಿಸುವ ಪದ್ಧತಿಯು ಪ್ರಾರಂಭವಾಗಿರಬಹುದು.

ಪ್ರಾಚೀನ ಕಾಲದಲ್ಲಿ ದೇಗುಲಗಳಂತೆ ಬಳಸುತ್ತಿದ್ದ ಗುಹೆಗಳಲ್ಲಿ ಹೆಣಗಳನ್ನು ಇರಿಸಲಾಗುತ್ತಿತ್ತು. ಹೆಣವು ಬಹುಕಾಲ ಕೆಡದೆ ಇರಲು ಗುಹೆಗಳನ್ನು ಬಳಸಿಕೊಂಡಿರಬೇಕು. ಪ್ರಾಚೀನ ದೇವಾಲಯಗಳ ಹಿನ್ನೆಲೆಯಲ್ಲಿ ಇಂದಿಗೂ ಉಳಿದು ಬಂದಿರುವ ಕಟ್ಟಡಗಳೆಂದರೆ ಸ್ತೂಪಗಳೇ ಆಗಿವೆ. ಇವನ್ನು ಬುದ್ಧನ ಸಮಾಧಿ ಸ್ಥಳಗಳೆಂದು ತಿಳಿಯಲಾಗುತ್ತದೆ. ಬುದ್ಧಗಯಾ, ಬಾರ್ಹುತ್, ಸಾಂಚಿ, ಸಾರನಾಥ ಮೊದಲಾದ ಕಡೆಗಳಲ್ಲಿ ಇರುವ ಸ್ತೂಪಗಳು ಪ್ರಾಚೀನ ಸ್ತೂಪದ ಪ್ರತಿನಿಧಿಗಳಾಗಿವೆ. ಇವೆಲ್ಲಾ ಕ್ರಿಸ್ತ ಪೂರ್ವ ೧ರಿಂದ ೩ನೆಯ ಶತಮಾನಗಳ ನಡುವೆ ಸಿದ್ಧವಾದವುಗಳು[೫೨]. ಕ್ರಿಸ್ತ ಪೂರ್ವ ೩ ಅಥವಾ ೪ ನೆಯ ಶತಮಾನಕ್ಕೂ ಹಿಂದೆ ನಿರ್ಮಿಸಿದ್ದಂತಹ ಗುಡಿಯಾಗಲೀ ದೇವಾಲಯವಾಗಲೀ ದೊರೆಯುವುದಿಲ್ಲ. ಆ ಕಾಲದಲ್ಲಿ ದೇವಾಲಯಗಳಿದ್ದವು ಆದರೆ ಅವು ಹೆಚ್ಚಾಗಿ ಮರದಲ್ಲಿ ನಿರ್ಮಾಣಗೊಂಡಂತೆ ತೋರುತ್ತದೆ ಆದಕಾರಣ ಅವುಗಳ ಅಳಿವಿಗೆ ಕಾರಣವಾಗಿದೆ ಎನ್ನಬಹುದು.

ಪ್ರಾಚೀನ ಕಾಲದಲ್ಲಿ ದೇವಾಲಯದ ಕಲ್ಪನೆ ಬರುವುದಕ್ಕೂ ಮುನ್ನಾ ದೈವತ್ವದ ಸಂಕೇತವನ್ನಾಗಿ ಯಜ್ಞಕುಂಡಗಳನ್ನು ಬಳಸುತ್ತಿದ್ದರು. ಹರಪ್ಪಾ ಮೊಹೆಜೋದರೋಗಳಲ್ಲಿ ಕೂಡಾ ಯಜ್ಞಕುಂಡಗಳನ್ನು ಉಪಯೋಗಿಸುತ್ತಿದ್ದರು ಎಂದು ತಿಳಿದು ಬರುತ್ತದೆ. ಇಲ್ಲಿ ಬಳಸಿರುವ ಯಜ್ಞಕುಂಡಗಳು ಆಯತಾಕಾರವನ್ನು ಹೊಂದಿರುತ್ತಿತ್ತು. ಇದನ್ನು ಸುಟ್ಟ ಮಣ್ಣಿನ ಇಟ್ಟಿಗೆಗಳನ್ನು ಉಪಯೋಗಿಸಿ ತಯಾರಿಸುತ್ತಿದ್ದರು. ಪ್ರಾಣಿಗಳ ರಕ್ಷಕನೆಂದು ಪೂಜಿಸಲ್ಪಡುವ ಪಶುಪತಿಯ ಚಿಹ್ನೆಗಳನ್ನು ಹೊಂದಿದ ಮುದ್ರೆಗಳನ್ನು ಹರಪ್ಪಾ ಮೊಹೆಂಜೋದರೋ ಜನರು ಉಪಯೋಗಿಸುತ್ತಿದ್ದರು. ಈ ಪಶುಪತಿಯ ಸಾಂಕೇತಿಕ ಚಿಹ್ನೆಯನ್ನಾಗಿ ನಂತರದ ಸಮಯದಲ್ಲಿ ಲಿಂಗವನ್ನು ಪೂಜಿಸಲಾಯಿತು ಎಂದು ಹೇಳಲಾಗುತ್ತದೆ. ಹಾಗೆ ನೋಡಿದರೆ ಶೈವ ಸಂಪ್ರದಾಯವು ಇತರೆ ಸಂಪ್ರದಾಯಕ್ಕಿಂತ ಅತ್ಯಧಿಕ ಪ್ರಾಚೀನತೆಯನ್ನು ಹೊಂದಿದೆ ಎನ್ನಬಹುದು. ಭಾರತದ ಶಾಸ್ತ್ರೀಯ ನಾಗರೀಕತೆಯ ಬೆಳವಣಿಗೆಯನ್ನು ವೇದಕಾಲದಲ್ಲಿ ಗುರುತಿಸಲಾಗುತ್ತದೆ. ಈ ವೇದಗಳನ್ನು ಪರಿಚಯಿಸಿದವರು

---

೫೨. ಪ್ರೊ. ಎಸ್.ಕೆ. ರಾಮಚಂದ್ರ ರಾವ್: ಭಾರತದ ದೇವಾಲಯ ನೆಲೆ-ಹಿನ್ನೆಲೆ, ಪುಟ-೧೮

ಆರ್ಯನ್ನರು. ಇವರು ಭಾರತಕ್ಕೆ ಕ್ರಿಸ್ತ ಪೂರ್ವ ೧೫೦೦ರಲ್ಲಿ ವಲಸೆ ಬಂದರು[೫೩].

ಮೌರ್ಯರ ಆಳ್ವಿಕೆಯ ಸಮಯದಲ್ಲಿ ಬೌದ್ಧ ಧರ್ಮಕ್ಕೆ ಹೆಚ್ಚು ಪ್ರಚಾರ ದೊರೆತಿತ್ತು. ಬೌದ್ಧ ಧರ್ಮದ ಪ್ರತಿಪಾದಕ ಎಂದೆನಿಸಿಕೊಂಡಿದ್ದ ಮೌರ್ಯರ ಚಕ್ರವರ್ತಿಯಾದ ಅಶೋಕನ ಕಾಲಾನಂತರ ಬೌದ್ಧ ಧರ್ಮ ನಶಿಸುವಂತಾಯಿತು. ನಂತರ ಏಳನೆಯ ಶತಮಾನದ ಮಧ್ಯದಲ್ಲಿ ಹಿಂದೂ ಧರ್ಮ ತನ್ನ ಅಸ್ತಿತ್ವವನ್ನು ಪಡೆಯಿತು ಎಂದು ತಿಳಿದು ಬರುತ್ತದೆ[೫೪]. ಬೆಸ್ನಗರದಲ್ಲಿರುವ ಹಿಲಿಯೋಡೋರಸ್‌ನ ಶಿಲಾಸ್ತಂಭದಿಂದ ವಿಷ್ಣುವಿನ ಆರಾಧನೆಯು ಸುಮಾರು ಕ್ರಿಸ್ತ ಪೂರ್ವ ಎರಡನೆಯ ಶತಮಾನದ್ದೆಂದು ತಿಳಿದು ಬರುತ್ತದೆ. ವೈಷ್ಣವ ಧರ್ಮವನ್ನು ಪ್ರತಿನಿಧಿಸುವ ಇದಕ್ಕೂ ಹಿಂದಿನ ಪುರಾವೆಗಳು ಯಾವುವೂ ದೊರೆತಿಲ್ಲ. ಸುಮಾರು ಕ್ರಿಸ್ತ ಶಕ ೫ನೆಯ ಶತಮಾನದ ಹೊತ್ತಿಗೆ ಭಾರತದಲ್ಲಿ ವೈಷ್ಣವ ಧರ್ಮ ಮತ್ತು ಶೈವ ಧರ್ಮಗಳೆರಡೂ ಪ್ರಗತಿಯನ್ನು ಹೊಂದಿದ್ದವು[೫೫] ಎಂದು ತಿಳಿದು ಬರುತ್ತದೆ.

ಆರಾಧನೆಯ ಸ್ಥಳಗಳಲ್ಲಿ ದೀಪಗಳ ಪಾತ್ರವು ಅತ್ಯಂತ ಪುರಾತನ ಸಂಪ್ರದಾಯವನ್ನು ಹೊಂದಿದೆ ಎಂಬುದನ್ನು ಬೌದ್ಧ ಧರ್ಮದ ಸ್ತೂಪಗಳು, ಹಿಂದೂ ಧರ್ಮದ ದೇವಾಲಯಗಳು ಹಾಗೂ ಜೈನ ಧರ್ಮದ ಬಸದಿಗಳು ತೋರಿಸಿಕೊಡುತ್ತವೆ. ದೀಪಗಳು, ಅವುಗಳ ವೈವಿಧ್ಯತೆಗಳು ಹಿಂದೂ ಧರ್ಮದ ಆಚರಣೆಗಳಲ್ಲಿ ಹೆಚ್ಚಾಗಿ ದೊರೆಯುವುದನ್ನು ಕಾಣಬಹುದು. ಹಿಂದೂ ಧರ್ಮದ ದೀಪಗಳು ಅಷ್ಟೇ ಕಲಾತ್ಮಕತೆಯಿಂದ ಕೂಡಿರುವುದು ಸಹ ಗಮನಕ್ಕೆ ಬರುತ್ತದೆ. ದಕ್ಷಿಣ ಭಾರತದ ದೀಪಗಳು ಇದಕ್ಕೆ ನಿದರ್ಶನವಾಗಿ ನಿಂತಿವೆ.

ಕಿಸ್ತಶಕ ಏಳನೆಯ ಶತಮಾನದಲ್ಲಿ ದೇವಾಲಯದ ನಿರ್ಮಾಣದ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳೂ ಅಸ್ತಿತ್ವಕ್ಕೆ ಬಂದವು[೫೬]. ಬಾಳಿನ ಅಂಧಕಾರದಲ್ಲಿ ಮೋಕ್ಷದ ಮಾರ್ಗವನ್ನು ತೋರಿಸುವ ರೀತಿಯಲ್ಲಿ ದೇವಾಲಯದ ಮುಂದೆ ದೀಪಸ್ತಂಭವು ದಾರಿದೀಪವಾಯಿತು[೫೭] ಎಂದರೆ ತಪ್ಪಾಗಲಾರದು. ದೇವಾಲಯದ ಸಾಂಸ್ಕೃತಿಕ ಚಟುವಟಿಕೆಯಲ್ಲಿಯೂ ದೀಪಸ್ತಂಭಗಳು ಪ್ರಮುಖ ಪಾತ್ರವನ್ನು ವಹಿಸಿರುವುದನ್ನು ಕಾಣುತ್ತೇವೆ.

ಪ್ರಾರಂಭದ ಕಾಲದಲ್ಲಿ ಸ್ತಂಭಗಳನ್ನು ದೇವರೆಂದು ಪೂಜಿಸುತ್ತಿದ್ದುದೂ ಉಂಟು. ಶಿಲಾಸ್ತಂಭಗಳು ನಂತರದ ಕಾಲಕ್ಕೆ ಅನುಗುಣವಾಗಿ ಆಕಾರದಲ್ಲೂ, ಆಧ್ಯಾತ್ಮಿಕವಾಗಿಯೂ,

---

೫೩. Burrow: **A Cultural History of India**,
Edited by A.L. Basham, ಪುಟ- ೨೦

೫೪. Percy Brown:
Indian Architecture- (Buddhist and Hindu Temples), ಪುಟ- ೬೨

೫೫. C. Hayavadana Rao: **Mysore Gazetter**, Volume2, part1, ಪುಟ- ೧೩೨

೫೬ ವತ್ಸಲಾ ಐಯ್ಯಂಗಾರ್: ಲೇಖನ- ದೀಪಗಳು, **ಕರಕುಶಲ ಕಲೆಗಳು**, ಪುಟ- ೨೨೮

೫೭ ವತ್ಸಲಾ ಐಯ್ಯಂಗಾರ್: ಲೇಖನ- ದೀಪಗಳು, **ಕರಕುಶಲ ಕಲೆಗಳು**, ಪುಟ- ೨೨೮

ಸಾಮಾಜಿಕವಾಗಿಯೂ ಬದಲಾವಣೆಗಳನ್ನು ಪಡೆದುಕೊಂಡವು. ಅಶೋಕನ ಕಾಲದ ಸ್ತೂಪಗಳು ಉತ್ತರ ಕರ್ನಾಟಕದಲ್ಲಿ ಕ್ರಿಸ್ತ ಶಕ ಸುಮಾರು ಎರಡನೆಯ ಶತಮಾನದಲ್ಲಿ ಇತ್ತು ಎಂದು ಈಗಷ್ಟೇ ಬೆಳಕಿಗೆ ಬಂದಿದೆ. ಅವುಗಳ ಅವಶೇಷಗಳ ಮೇಲೆ ಇನ್ನೂ ಅಧ್ಯಯನಗಳು ನಡೆಯುತ್ತಲಿವೆ. ಕಾಲ ಬದಲಾದಂತೆ ಪ್ರಚಾರಕ್ಕೆ ಬಂದಂತಹ ವೈದಿಕ ಧರ್ಮ ಮತ್ತು ಜೈನ ಧರ್ಮಗಳಲ್ಲೂ ಸ್ತಂಭಗಳು ನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ.

ಪುರಾತನ ಕಾಲದಲ್ಲಿ ದೇವಾಲಯಗಳು ಹಳ್ಳಿಗಳ ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಸಂಜೆಯಿಂದ ಮಧ್ಯರಾತ್ರಿಯವರೆಗೂ ದೇವಾಲಯಗಳಲ್ಲಿ ಕಾರ್ಯಕ್ರಮಗಳು ಜರುಗುತ್ತಿದ್ದವು. ಜನರ ಸಮೂಹವೇ ಈ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರು. ಕೆಲವರು ದೀಪಕ್ಕೆ ತುಪ್ಪವನ್ನು ತರುವ ಕೆಲಸವನ್ನೂ, ಕೆಲವರು ಹೂವು, ಹಣ್ಣು, ಕಾಯಿಗಳನ್ನು ತರುವ ಕೆಲಸವನ್ನೂ ಮತ್ತೆ ಕೆಲವರು ಇನ್ನೂ ಅನೇಕ ಇನ್ನಿತರೆ ಸಾಮಗ್ರಿಗಳನ್ನು ತರುವ, ವಿನಿಯೋಗಿಸುವ ಜವಾಬ್ದಾರಿಯನ್ನು ಹೊತ್ತಿರುತ್ತಿದ್ದರು. ಈ ರೀತಿಯ ಒಪ್ಪಂದದ ಕೆಲಸ ಕಾರ್ಯಗಳನ್ನು ಕುರಿತು ಶಾಸನಗಳು ದೊರೆತಿವೆ[೫೮]. ದಾನಿಗಳು ಮೃತರಾದ ಪಕ್ಷದಲ್ಲಿ ಅವನ ದಾನವನ್ನು ತಾವು ಮುಂದುವರೆಸುವುದಾಗಿ ಮತ್ತು ಸೂರ್ಯ ಚಂದ್ರರಿರುವವರೆಗೂ ದೀಪಕ್ಕೆ ಕೊಡುವ ದಾನವನ್ನು ಕೈ ಬಿಡುವುದಿಲ್ಲ ಎಂದೂ ಶಾಸನಗಳನ್ನು ಬರೆಸಿರುವುದನ್ನು ನೋಡುತ್ತೇವೆ.

ಹನ್ನೆರಡನೆಯ ಶತಮಾನದ ಶಾಸನವೊಂದರಲ್ಲಿ ದಕ್ಷಿಣ ಭಾರತದ ಚೆಂಗಲ್‌ಪಟ್ ಎಂಬಲ್ಲಿ ದೇವಾಲಯದ ಆವರಣದಲ್ಲಿ ದೊಡ್ಡದೊಂದು ಆಸ್ಪತ್ರೆ ಇತ್ತೆಂದೂ ಅಲ್ಲಿ ರೋಗಿಗಳಿಗೆ ಹಾಸಿಗೆಗಳೂ, ಅವರಿಗೆ ಆರೈಕೆ ನೀಡಲು ಆಯಾಗಳೂ, ಔಷಧವನ್ನು ತಂದು ತೊಡಲು ಜನರೂ, ಉತ್ತಮವಾದ ಚಿಕಿತ್ಸೆ ನೀಡಲು ವೈದ್ಯರೂ, ಅಡಿಗೆಯವರೂ ಇದ್ದರೆಂದು ತಿಳಿದು ಬರುತ್ತದೆ[೫೯]. ದಕ್ಷಿಣ ಭಾರತದ ದೇವಾಲಯಗಳಲ್ಲಿ ನವರಂಗ. ರಂಗಮಂಟಪಗಳು ಇರುವುದನ್ನು ಈಗಲೂ ಗಮನಿಸಬಹುದು. ಇಲ್ಲಿ ಹೆಚ್ಚೂ ಕಡಿಮೆ ಎಲ್ಲಾ ದಿನಗಳಲ್ಲೂ ನೃತ್ಯವನ್ನು ಅಭ್ಯಸಿಸಲಾಗುತ್ತಿತ್ತು. ಕೆಲವು ವಿಶೇಷ ಸಂದರ್ಭಗಳಲ್ಲಿ ನಾಟಕಗಳನ್ನೂ ಪ್ರದರ್ಶಿಸಲಾಗುತ್ತಿತ್ತು ಎಂದು ತಿಳಿದು ಬರುತ್ತದೆ.

ಕೆಲವು ಶಾಸನಗಳ ಪ್ರಕಾರ ದೇವಾಲಯಗಳು ವಿದ್ಯಾಶಾಲೆಗಳಾಗಿಯೂ ಕಾರ್ಯ ನಿರ್ವಹಿಸುತ್ತಿದ್ದವು. ಈ ದೇವಾಲಯಗಳು ಸಾಮಾಜಿಕ, ಧಾರ್ಮಿಕ ಆಚರಣೆಗಳ ಉದ್ದೇಶವಾಗಿಯಷ್ಟೇ ಅಲ್ಲದೆ ವಿಧ್ಯಾಭ್ಯಾಸದ ಚಟುವಟಿಕೆಗಳನ್ನೂ ಹೊಂದಿದ್ದವು ಎಂದು ಇದರಿಂದ ತಿಳಿದು ಬರುತ್ತದೆ. ಸರಿಯಾದ ವಿಧ್ಯಾಭ್ಯಾಸವನ್ನು ಹೊಂದದೆ ಇದ್ದರೆ ಯಾವ

---

೫೮. If he (the donee) dies, absconds or get into prison, fetters or chains, we all these a fore said persons (surities of the donee) are bound to supply ghee for burning the holy lamp as long as the sun and the moon endure...
P.V. Jagadish Ayyar: **South Indian Shrines,** ಪುಟ- ೧೭

೫೯. P.V. Jagadish Ayyar: **South Indian Shrines,** ಪುಟ- ೧೮

ಧರ್ಮವೂ ತನ್ನ ಅಸ್ತಿತ್ವವನ್ನು ಪಡೆಯುವುದು ಕಷ್ಟಸಾಧ್ಯವಾದುದು. ಇದೇ ಉದ್ದೇಶದಿಂದಲೇ ದೇವಾಲಯಗಳು ವಿದ್ಯಾಕೇಂದ್ರಗಳಾಗಿದ್ದವು ಎಂದೆನಿಸುತ್ತದೆ.

ದೇವಾಲಯಗಳಲ್ಲಿ ರಾತ್ರಿಯ ಹೊತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದರಿಂದ ದೀಪ ಹಾಗೂ ದೀಪಸ್ತಂಭಗಳನ್ನು ಬಳಸಿಕೊಳ್ಳಲಾಗುತ್ತಿತ್ತು. ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದಾಗ ದೀಪಸ್ತಂಭಗಳನ್ನು ಬೆಳಗಿಸಿ ಅವುಗಳ ಬೆಳಕಿನಲ್ಲಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಬಾದಾಮಿಯ ಬನಶಂಕರಿ ದೇವಾಲಯದ ಆವರಣದಲ್ಲಿ ಮೂರು ದೀಪದ ಕಂಬಗಳಿವೆ. ಈ ದೀಪಸ್ತಂಭಗಳನ್ನು ಹಬ್ಬಹರಿದಿನಗಳಲ್ಲಿ ಈಗಲೂ ಬೆಳಗಿಸುವರು. ಈ ಸ್ತಂಭಗಳನ್ನು ಬೆಳಗುವುದರಿಂದ ದೇವಾಲಯದ ಇಡೀ ಪ್ರಾಕಾರವು ಬೆಳಕಿನಿಂದ ಪ್ರಜ್ವಲಿಸುವುದನ್ನು ಈಗಲೂ ಕಾಣಬಹುದು (ಚಿತ್ರ ೪). ಮೊದಲಿಗೆ ಬೆಳಕಿಗಷ್ಟೇ ದೀಪಸ್ತಂಭಗಳನ್ನು ಉಪಯೋಗಿಸುತ್ತಿದ್ದರು.

ದೇವಾಲಯದ ಆವರಣಗಳನ್ನು ಚಿತ್ರ, ಶಿಲ್ಪಗಳಿಂದ ಅಲಂಕೃತಗೊಳಿಸುತ್ತಿದ್ದಂತೆ ಅವು ಮತ್ತಷ್ಟು ಸುಂದರವಾಗಿ ಕಾಣಲು ವಿವಿಧ ಮಾದರಿಯ ದೀಪ ಹಾಗೂ ದೀಪಸ್ತಂಭಗಳನ್ನು ಅಳವಡಿಸಿಕೊಂಡರು. ದೇವಾಲಯದ ಆವರಣವನ್ನಷ್ಟೇ ಅಲ್ಲದೆ ಅಲ್ಲಿ ಬಳಸಲ್ಪಡುವ ದೀಪಸ್ತಂಭಗಳ ರಚನೆಯಲ್ಲಿಯೂ ವಿವಿಧ ರೀತಿಯ ವಿನ್ಯಾಸಗಳು ಸೇರ್ಪಡೆಯಾದವು. ಈ ವಿನ್ಯಾಸಗಳು ದೇವಾಲಯದಲ್ಲಿರುವ ಮೂಲ ಮೂರ್ತಿಯನ್ನು ಆಧರಿಸಿ ರಚಿಸಲ್ಪಟ್ಟವು.

ಶೈವ ದೇವಾಲಯದ ಎದುರಿಗಿರುವ ದೀಪಸ್ತಂಭಗಳು ಶೈವ ಧರ್ಮವನ್ನು ಪ್ರತಿಬಿಂಬಿಸುವ ಶಿವನ ಪುರಾಣಗಳನ್ನು ಆಧರಿಸಿ ರಚಿಸಲ್ಪಟ್ಟಿರುವುದು ಕಾಣುತ್ತವೆ. ವೈಷ್ಣವ ಧರ್ಮದ ಆರಾಧ್ಯ ದೈವವಾದ ವಿಷ್ಣುವಿನ ದೇವಾಲಯದ ಆವರಣದಲ್ಲಿ ದೊರೆಯುವ ದೀಪಸ್ತಂಭವನ್ನು ಗರುಡಗಂಬ ಎಂದೂ ಕರೆಯುತ್ತಾರೆ. ಈ ಕಂಬದಲ್ಲಿ ವಿಷ್ಣುವಿನ ವಾಹನವಾದ ಗರುಡನ ಶಿಲ್ಪವು ಇರುವುದರಿಂದ ಇದನ್ನು ಗರುಡಗಂಬ ಎಂದು ಗುರುತಿಸುತ್ತಾರೆ.

ಜೈನ ಧರ್ಮದಲ್ಲಿಯೂ ದೀಪಸ್ತಂಭದ ಬಳಕೆ ಇರುವುದನ್ನು ಕಾಣುತ್ತೇವೆ. ಕ್ರಿಸ್ತ ಪೂರ್ವ ಮುನ್ನೂರರಲ್ಲಿ ಉತ್ತರ ದಿಕ್ಕಿನಿಂದ ದಕ್ಷಿಣಕ್ಕೆ ಬಂದ ಭದ್ರಬಾಹು ಮತ್ತು ಚಂದ್ರಗುಪ್ತರು ನೂರಾರು ಶಿಷ್ಯರೊಂದಿಗೆ ಆಗಮಿಸಿ ದಕ್ಷಿಣದಲ್ಲಿ ಜೈನ ಧರ್ಮ ಅಸ್ತಿತ್ವಕ್ಕೆ ಬರಲು ಕಾರಣಕರ್ತರಾದರು. ನೂರಾರು ಶಿಷ್ಯರೊಂದಿಗೆ ಬಂದಂತಹ ಅವರು ಶ್ರವಣಬೆಳಗೊಳದಲ್ಲಿ ನೆಲೆಸಿದರು. ಶ್ರವಣಬೆಳಗೊಳದಲ್ಲಿ ಹೊಯ್ಸಳ ಮಂತ್ರಿಯಾದ ಚಾವುಂಡರಾಯನು ನಿರ್ಮಿಸಿರುವ ಗೊಮ್ಮಟೇಶ್ವರನ ವಿಗ್ರಹವು ಇದಕ್ಕೆ ಸಾಕ್ಷಿಯಾಗಿ ನಿಂತಿದೆ. ಈ ಧರ್ಮವು ಕ್ರಿಸ್ತ ಶಕ ನಾಲ್ಕರ ಹೊತ್ತಿಗೆ ಪಾಂಡ್ಯ, ಚೋಳ, ಚೇರ ಇನ್ನೂ ಮುಂತಾದ ರಾಜ್ಯಗಳಲ್ಲಿ ಸ್ಥಿರತೆಯನ್ನು ಹೊಂದಿತ್ತು. ತಲಕಾಡನ್ನು ರಾಜಧಾನಿಯನ್ನಾಗಿಸಿ ಗಂಗಾವತಿಯನ್ನು ಆಳಿದ ಪಶ್ಚಿಮದ ಗಂಗರು(ಕ್ರಿಸ್ತ ಶಕ ೪೫೦-೯೮೫), ಜೈನ ಧರ್ಮದ



ಚಿತ್ರ ೪-೨



ಚಿತ್ರ ೫



ಚಿತ್ರ ೬



ಚಿತ್ರ ೭

ಅನುಯಾಯಿಗಳಾಗಿದ್ದರು[೬೦]. ಹೊಯ್ಸಳರ ದೊರೆಯಾದ ವಿಷ್ಣುವರ್ಧನನ ಕಾಲದಲ್ಲಿ ಜೈನ ಧರ್ಮವು ಕ್ಷೀಣಿಸತೊಡಗಿತು.

ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದಂತಹ ಶ್ರೀ ರಾಮಾನುಜಾಚಾರ್ಯರಿಂದ ರಾಜಾ ವಿಷ್ಣುವರ್ಧನನು ಪ್ರಭಾವಗೊಂಡು ವೈಷ್ಣವ ಧರ್ಮವನ್ನು ಅನುಸರಿಸಿದನು. ಆದರೆ ಇವನ ಪತ್ನಿ ಶಾಂತಲೆ ಮಾತ್ರ ಜೈನ ಧರ್ಮದಲ್ಲೇ ಉಳಿದಳು. ವಿಷ್ಣುವರ್ಧನನ ನಂತರ ರಾಜ್ಯವನ್ನಾಳಿದ ನರಸಿಂಹ ಮತ್ತು ವೀರಬಲ್ಲಾಳರು ವೈಷ್ಣವ ಧರ್ಮದಲ್ಲಿ ನಂಬಿಕೆಯನ್ನು ಇಟ್ಟಿದ್ದರೂ ಸಹಾ ಜೈನ ದೇವಾಲಯಗಳ ಜೀರ್ಣೋದ್ಧಾರದ ಕೆಲಸವನ್ನು ಬಿಡಲಿಲ್ಲ. ವಿಜಯನಗರದ ಅರಸರೂ ಕೂಡಾ ಜೈನ ಮತ್ತು ವೈಷ್ಣವ ಧರ್ಮಗಳೆರಡನ್ನೂ ಪ್ರೋತ್ಸಾಹಿಸಿದರು. ಇದೇ ಸಮಯದಲ್ಲಿ ಉತ್ತರ ಕರ್ನಾಟಕದಲ್ಲಿ ಬಸವಣ್ಣನವರಿಂದ ಶೈವ ಧರ್ಮವು ಪ್ರಬಲವಾಗತೊಡಗಿತು. ಇವೆರಡು ಧರ್ಮಗಳ ಹೆಚ್ಚುತ್ತಿದ್ದ ಜನಪ್ರಿಯತೆಯಿಂದ ಜೈನ ಧರ್ಮವು ಕ್ಷೀಣಿಸಲು ಪ್ರಮುಖ ಪಾತ್ರವಾಯಿತು.

ಜೈನರ ಮಹಾವೀರನು ಬೌದ್ಧ ಧರ್ಮದ ಗೌತಮ ಬುದ್ಧನ ಸಮಕಾಲೀನ. ಸುಮಾರು ಮೂವತ್ತು ವರ್ಷಗಳ ಕಾಲ ಭೋದನೆಯನ್ನು ಕೊಟ್ಟಂತಹ ಮಹಾವೀರನು ತನ್ನ ೭೨ನೆಯ ವಯಸ್ಸಿನಲ್ಲಿ ಕ್ರಿಸ್ತ ಪೂರ್ವ ೫೨೭ರಲ್ಲಿ ಅಸುನೀಗಿದನು[೬೧]. ಕಾರ್ತಿಕ ಬಹುಳ ಚತುರ್ದಶಿಯ ರಾತ್ರಿ ಎಂದರೆ ಅಮಾವಾಸ್ಯೆಯ ಪ್ರಾತಃ ಕಾಲದಲ್ಲಿ ಮಹಾವೀರನು ಮುಕ್ತಿಯನ್ನು ಪಡೆದನು[೬೨] ಎಂದು ಜೈನರು ಭಾವಿಸುತ್ತಾರೆ. ಮಹಾವೀರನು ನಿರ್ವಾಣವನ್ನು ಪಡೆದ ಎನ್ನಲಾಗುವ ಈ ದಿನವನ್ನು ದೀಪಗಳ ಹಬ್ಬವನ್ನಾಗಿ ಆಚರಿಸಲಾಗುತ್ತದೆ. ಪ್ರಸ್ತುತ ಅಂದು ದೀಪಾವಳಿ, ಇದು ಹಿಂದೂ ಧರ್ಮದಲ್ಲಿ ಆಚರಿಸುವ ದೀಪಗಳ ಹಬ್ಬವು ಆಗಿರುವುದೇ ವಿಶೇಷ.

ಹಿಂದೂಗಳ ಹಬ್ಬದ ಎರಡನೆಯ ದಿನದಂದು ಸೂರ್ಯ ಮುಳುಗಿ ಕತ್ತಲು ಆವರಿಸುತ್ತಿರುವಾಗಲೇ ಹೊಲ ಗದ್ದೆಗಳ ಅಂಚುಗಳಲ್ಲಿ ಕೋಲುದೀಪಗಳು ಬೆಳಗುತ್ತವೆ[೬೩]. ಇಲ್ಲಿ ಸಾಲಾಗಿ ಹಣತೆಯನ್ನು ಇರಿಸಲಾಗುತ್ತದೆ. ಮನೆಯ ಮುಂದಿನ ತುಳಸೀ ಕಟ್ಟೆಯಲ್ಲಿಯ ಗೂಡಿನಲ್ಲಿಯೂ ದೀಪವನ್ನು ಬೆಳಗುತ್ತಾರೆ.

ಕರ್ನಾಟಕದ ರಾಜ್ಯವನ್ನು ಅನೇಕ ರಾಜಮಹಾರಾಜರು ಆಳಿದ್ದಾರೆ. ಅವರು ನಿರ್ಮಿಸಿದ ವಾಸ್ತುಶಿಲ್ಪದ ಶೈಲಿಗಳಲ್ಲಿ ವೈವಿಧ್ಯತೆಗಳು ಇರುವುದು ಕಂಡು ಬರುತ್ತದೆ. ಅವುಗಳನ್ನು ಕುರಿತು ವಿಶೇಷವಾದ ಅಧ್ಯಯನವನ್ನು ಇಲ್ಲಿ ಮಾಡಬೇಕಾಗುತ್ತದೆ.

೬೦. The great tradition- **Indian Bronzes Master pieces**, ಪುಟ-೭೧

೬೧. A.N. Upadhye: **A Cultural History of India**, Edited by A.L. Basham, ಪುಟ- ೧೦೧

೬೨. ಎಸ್ಸೆಮ್ಮೆ: **ಜೈನಧರ್ಮ** - ಒಂದು ಇಣುಕು ನೋಟ, ಮಲ್ಲಾರ ಮಾಸಪತ್ರಿಕೆ, ಏಪ್ರಿಲ್ ೨೦೦೨, ಪುಟ- ೧೫

೬೩. ಸಂ: ಹಿ.ಚಿ. ಬೋರಲಿಂಗಯ್ಯ, **ಕರ್ನಾಟಕ ಜನಪದ ಕಲೆಗಳ ಕೋಶ**, ಪುಟ- ೧೪೪.

ಕರ್ನಾಟಕದ ಹಿಂದೂ ದೇವಾಲಯಗಳ ವಾಸ್ತುಶಿಲ್ಪವನ್ನು ಪ್ರಧಾನವಾಗಿ ನಾಲ್ಕು ಹಂತಗಳನ್ನಾಗಿ ವಿಂಗಡಿಸಬಹುದು[೬೪].

೧. ಚಾಲುಕ್ಯ ಪೂರ್ವ ಯುಗ-ಕ್ರಿ.ಶ. ಸುಮಾರು ೫ನೆಯ ಶತಮಾನದವರೆಗೆ

೨. ಚಾಲುಕ್ಯ ಯುಗ-ಕ್ರಿ.ಶ. ಸುಮಾರು ೬ರಿಂದ ೧೦ನೆಯ ಶತಮಾನದವರೆಗೆ ರಾಷ್ಟ್ರಕೂಟರ ಯುಗವೂ ಇದರಲ್ಲೇ ಸಮಾವೇಶಗೊಳ್ಳುತ್ತದೆ.

೩. ಹೊಯ್ಸಳ ಯುಗ-ಕ್ರಿ.ಶ. ಸುಮಾರು ೧೧ರಿಂದ ೧೩ನೆಯ ಶತಮಾನದವರೆಗೆ

೪. ವಿಜಯನಗರ ಕಾಲ- ಕ್ರಿ.ಶ. ೧೪ನೆಯ ಶತಮಾನದಿಂದ ಇತ್ತೀಚಿನವರೆಗೆ

ಚಾಲುಕ್ಯ ಪೂರ್ವ ಯುಗದಲ್ಲಿ ನಿರ್ಮಾಣವಾಗಿದ್ದಂತಹ ದೀಪಸ್ತಂಭಗಳ ಅವಶೇಷಗಳು ದೊರೆತಿಲ್ಲ. ಕದಂಬರ ಕಾಲದಲ್ಲಿ (ಸುಮಾರು ೪ ರಿಂದ ೬ನೆಯ ಶತಮಾನ) ಶಿಲ್ಪ ಮತ್ತು ವಾಸ್ತುಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿಲ್ಲ[೬೫]. ಕದಂಬರ ಕಾಲದಲ್ಲಿ ವಾಸ್ತುಶಿಲ್ಪಗಳನ್ನು ಮರ ಇಲ್ಲವೇ ಇಟ್ಟಿಗೆಯನ್ನು ಬಳಸಿ ನಿರ್ಮಾಣ ಮಾಡುತ್ತಿದ್ದರು ಎಂದು ತೋರುತ್ತದೆ. ಅದರಿಂದಲೇ ಅವರ ವಾಸ್ತುಶಿಲ್ಪಗಳು ಕೂಡಾ ದೊರಯುತ್ತಿಲ್ಲ ಎಂದು ತಿಳಿದು ಬರುತ್ತದೆ. ಚಾಲುಕ್ಯ ಯುಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುವುದಿಲ್ಲ. ಪಟ್ಟದಕಲ್ಲಿನಲ್ಲಿ ಇರುವ ಆಂಜನೇಯ ದೇವಾಲಯದ ಎದುರು ಕಲ್ಲಿನ ದೀಪಸ್ತಂಭವಿದೆ. ಇದು ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ದೀಪಸ್ತಂಭ. ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಬಾದಾಮಿಯ ಮಹಾಕೂಟೇಶ್ವರ ದೇವಾಲಯದ ಎದುರು ದೀಪಸ್ತಂಭವು ಇರುವುದು ಕಾಣುತ್ತದೆ. ವಿಜಯನಗರ ಅರಸರು ದೇವಾಲಯಕ್ಕೆ ಪ್ರಾಕಾರಗಳನ್ನು ನಿರ್ಮಿಸಿದ ಸಂದರ್ಭದಲ್ಲಿ ನಿರ್ಮಾಣವಾದುದು ಎಂದು ತಿಳಿದು ಬರುತ್ತದೆ.

ಹೊಯ್ಸಳರ ಕಾಲದಲ್ಲಿ ದೀಪಸ್ತಂಭಗಳ ಬಳಕೆಯು ಇತ್ತು ಎಂಬುವುದಕ್ಕೆ ಬೇಲೂರಿನ ಚೆನ್ನಕೇಶವ ದೇವಾಲಯದ ಆವರಣದಲ್ಲಿ ಇರುವ ದೀಪಸ್ತಂಭವೇ ಸಾಕ್ಷಿಯಾಗಿದೆ. ವಿಜಯನಗರ ಕಾಲದಲ್ಲಿ ವಾಸ್ತುಶಿಲ್ಪ ಉತ್ತುಂಗಕ್ಕೆ ಏರಿತ್ತು ಎಂದರೆ ತಪ್ಪಾಗಲಾರದು. ವಿಜಯನಗರ ಕಾಲದ ದೇವಾಲಯಗಳು ಆಯಾ ಸ್ಥಳದ ಧರ್ಮ, ಕಲೆ, ಸಂಸ್ಕೃತಿ, ಸಾಮಾಜಿಕ ನಡುವಳಿಕೆಗಾಗಿ ಅಲ್ಲದೆ ಜೊತೆಗೆ ವಿದ್ಯಾಭ್ಯಾಸ, ಊರೊಟ್ಟಿಗಿನ ಕರ್ತವ್ಯಗಳು, ಮುಂತಾದವುಗಳ ಕೇಂದ್ರ ಬಿಂದುವಾಗಿ ಬೆಳೆದುದರಿಂದಾಗಿ ದೇವಾಲಯಗಳ ಪ್ರಾಮುಖ್ಯತೆ ಹೆಚ್ಚಾಯಿತು[೬೬]. ಇದೇ ಉದ್ದೇಶದಿಂದಲೇ ಇವರು ನಿರ್ಮಿಸಿದ ದೇವಾಲಯಗಳು ದೊಡ್ಡದಾದ ಪ್ರಾಕಾರಗಳನ್ನು ಹೊಂದಿರುತ್ತಿದ್ದವು. ಇವರು ನಿರ್ಮಿಸಿದ

---

೬೪. ಡಾ. ಹೆಚ್. ತಿಪ್ಪೇರುದ್ರಸ್ವಾಮಿ: **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಪುಟ- ೫೩೨

೬೫. ಜೆ.ಟಿ. ಜಯರಾಮಯ್ಯ: ಲೇಖನ- ಕದಂಬರ ಕಲೆ, **ಕಲಾಕೋಶ**, ಪ್ರಧಾನ ಸಂಪಾದಕರು: ಪಿ.ಆರ್. ತಿಪ್ಪೇಸ್ವಾಮಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಪುಟ- ೬೩

೬೬. ಜೆ.ಟಿ. ಜಯರಾಮಯ್ಯ: ಲೇಖನ- ವಿಜಯನಗರ ಕಾಲದ ವಾಸ್ತುಶಿಲ್ಪ, **ಕಲಾಕೋಶ**, ಪ್ರಧಾನ ಸಂಪಾದಕರು: ಪಿ.ಆರ್. ತಿಪ್ಪೇಸ್ವಾಮಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಪುಟ- ೩೦೬

ದೇವಾಲಯವಷ್ಟೇ ಅಲ್ಲದೆ ತಮ್ಮ ಆಳ್ವಿಕೆಗೆ ಬಂದಂತಹ ಇತರೆ ರಾಜ್ಯಗಳಲ್ಲಿನ ದೇವಾಲಯಗಳಿಗೆ ದೊಡ್ಡ ದೊಡ್ಡ ಪ್ರಾಕಾರಗಳನ್ನು ನಿರ್ಮಿಸಿದರು.

ಕರ್ನಾಟಕದಲ್ಲಿ ಸುಮಾರು ಎಂಟನೆಯ ಶತಮಾನದಿಂದ ಈಚೆಗೆ ನಿರ್ಮಾಣವಾದ ದೀಪಸ್ತಂಭಗಳು ದೊರೆಯುತ್ತವೆ. ಸುಮಾರು ಹತ್ತನೆಯ ಶತಮಾನದಿಂದ ಈಚೆಗೆ ನಿರ್ಮಾಣವಾದ ದೀಪಸ್ತಂಭಗಳಲ್ಲಿ ಉಬ್ಬುಶಿಲ್ಪಗಳು ಇರುವುದನ್ನು ನೋಡಬಹುದು. ಇದಕ್ಕೂ ಹಿಂದೆ ಉಬ್ಬುಶಿಲ್ಪಗಳ ನಿರ್ಮಾಣವು ಇರಲಿಲ್ಲ ಎಂದು ತಿಳಿದು ಬರುತ್ತದೆ.

ಅಧ್ಯಯನದ ವ್ಯಾಪ್ತಿಗೆ ಬರುವ ಎಂಟು ಜಿಲ್ಲೆಗಳನ್ನು ಆಳಿದ ಪ್ರಮುಖ ರಾಜರುಗಳು ಮತ್ತು ಅವರು ನಿರ್ಮಿಸಿರುವ ದೇವಾಲಯಗಳನ್ನು ಕುರಿತು ಇಲ್ಲಿ ಹೇಳಲಾಗಿದೆ. ಈ ದೇವಾಲಯಗಳ ಮುಂದಿನ ದೀಪಸ್ತಂಭಗಳು ಮತ್ತು ಅವುಗಳ ಶೈಲಿಯನ್ನು ಮುಂದಿನ ಅಧ್ಯಾಯಗಳಲ್ಲಿ ವಿವರವಾಗಿ ತಿಳಿಸಲಾಗುತ್ತದೆ. ಪ್ರಸ್ತುತ ಇಲ್ಲಿ ಈ ಕೆಳಗಿನ ಜಿಲ್ಲೆಗಳನ್ನು ಕುರಿತು ಅಧ್ಯಯನವನ್ನು ಮಾಡಲಾಗಿದೆ.

ಮೈಸೂರು ಜಿಲ್ಲೆ:

ಮೈಸೂರು ಜಿಲ್ಲೆಯ ಚರಿತ್ರೆಯು ಮಂಡ್ಯ ಜಿಲ್ಲೆಯನ್ನು ಹೋಲುತ್ತದೆ. ಕ್ರಿಸ್ತ ಶಕ ೪ನೆಯ ಶತಮಾನದಿಂದ ೧೧ನೆಯ ಶತಮಾನದವರೆಗೆ ಗಂಗರೂ, ಅದರ ನಂತರ ಚೋಳರು, ಹೊಯ್ಸಳರು, ವಿಜಯನಗರ ಅರಸರ ಪಾಳೆಯಗಾರರು, ಕಳಲೆ ಮುಂತಾದವರು ಒಬ್ಬೊಬ್ಬರಾಗಿ ರಾಜ್ಯಭಾರವನ್ನು ಮಾಡಿರುವುದರ ಬಗ್ಗೆ ತಿಳಿದು ಬರುತ್ತದೆ[೬೭]. ಕೊನೆಯದಾಗಿ ಈ ಸ್ಥಳವನ್ನು ಆಳಿದವರೆಂದರೆ ಮೈಸೂರಿನ ಒಡೆಯರ್‌ರವರು.

ಚಾಮರಾಜನಗರ ಜಿಲ್ಲೆ:

ಈ ಜಿಲ್ಲೆಯ ಚರಿತ್ರೆಯು ಮೈಸೂರು ಜಿಲ್ಲೆಯ ಚರಿತ್ರೆಯನ್ನು ಸಂಪೂರ್ಣವಾಗಿ ಹೋಲುತ್ತದೆ. ಮೊದಲಿಗೆ ಇದು ಮೈಸೂರು ಜಿಲ್ಲೆಯ ಭಾಗವಾಗಿತ್ತು. ಪ್ರಸ್ತುತ ಇದು ಪ್ರತ್ಯೇಕವಾದ ಜಿಲ್ಲೆಯಾಗಿದೆ.

ಮಂಡ್ಯ ಜಿಲ್ಲೆ:

ಗಂಗ ರಾಜರು ಮಂಡ್ಯ ಜಿಲ್ಲೆಯನ್ನು ಮೊದಲಿಗೆ ಆಳುತ್ತಿದ್ದರು. ಕ್ರಿಸ್ತ ಶಕ ೧೦೦೦ದಲ್ಲಿ ಚೋಳರು ಈ ಸ್ಥಳವನ್ನು ಆಕ್ರಮಿಸಿಕೊಂಡು ಸುಮಾರು ನೂರು ವರ್ಷಗಳ ಕಾಲ ರಾಜ್ಯಭಾರವನ್ನು ಮಾಡಿದರು[೬೮]. ನಂತರ ಬಂದಂತಹ ಹೊಯ್ಸಳರು ದೇವಾಲಯಗಳಲ್ಲಿ ನವರಂಗಗಳನ್ನು ನಿರ್ಮಿಸಿದರು. ವಿಜಯನಗರದ ಅರಸರು ಸುಮಾರು

---

೬೭ S.K. Ramachandra Rao:
Art and Architecture of Indian Temples, Volume III, ಪುಟ-೨೯೧

೬೮. S.K. Ramachandra Rao:
Art and Architecture of Indian Temples, Volume III, ಪುಟ-೨೭೯

ಕ್ರಿಸ್ತ ಶಕ ೧೪೯೫ರಲ್ಲಿ ಶ್ರೀರಂಗಪಟ್ಟಣವನ್ನು ಅಧೀನಕ್ಕೆ ಒಳಪಡಿಸಿಕೊಂಡರು[೬೯]. ನಂತರ ಈ ಸ್ಥಳವು ಪಾಳೆಯಗಾರರ ವಶವಾಯಿತು. ಸುಮಾರು ೧೫೫೦ರಲ್ಲಿ ಮೈಸೂರಿನ ಒಡೆಯರ್‌ರವರು ಶ್ರೀರಂಗಪಟ್ಟಣವನ್ನು ಆಕ್ರಮಿಸಿಕೊಂಡರು. ಶ್ರೀರಂಗಪಟ್ಟಣವು ಒಡೆಯರ್ ಅರಸರ ರಾಜಧಾನಿಯಾಗಿತ್ತು. ನಂತರ ಮೈಸೂರನ್ನು ರಾಜಧಾನಿಯನ್ನಾಗಿ ಮಾಡಲಾಯಿತು.

ಕೊಡಗು ಜಿಲ್ಲೆ:

ಕೊಡಗು ಜಿಲ್ಲೆಯನ್ನು ಕರ್ನಾಟಕದ ಪ್ರಮುಖ ರಾಜರು ರಾಜ್ಯಭಾರ ಮಾಡಲಿಲ್ಲ. ಈ ಸ್ಥಳವನ್ನು ಹೆಚ್ಚಾಗಿ ಇಲ್ಲಿನ ಸ್ಥಳೀಯ ಪಾಳೆಯಗಾರರು ಆಳಿರುವುದನ್ನು ಕಾಣುತ್ತೇವೆ. ಚೆಂಗಲ್ವರವರು ಗಂಗರ ಅಧೀನದಲ್ಲಿದ್ದು ಇವರು ದಕ್ಷಿಣದ ಭಾಗವನ್ನು ಆಳಿದರೆ, ಕೊಂಕಲ್ವರು ಚೋಳರ ಆಧೀನದಲ್ಲಿದ್ದರು. ಇವರು ಉತ್ತರದ ಭಾಗವನ್ನು ಆಳಿದರು. ಇಡೀ ಪ್ರದೇಶವು ಹೊಯ್ಸಳ, ಇಕ್ಕೇರಿ ನಾಯಕರೊಂದಿಗೆ ರಾಜಕೀಯ ಸಂಬಂಧಗಳನ್ನು ಇರಿಸಿಕೊಂಡಿತ್ತು. ಹಾಲೇರಿ ರಾಜಮನೆತನದವರು ಸುಮಾರು ಕ್ರಿಸ್ತ ಶಕ ೧೬೩೦ರಲ್ಲಿ ಕೊಡಗು ಜಿಲ್ಲೆಯನ್ನು ಆಕ್ರಮಿಸಿಕೊಂಡರು[೨೦]. ಕೊಡಗು ಜಿಲ್ಲೆಯು ಗುಡ್ಡಗಾಡು ಪ್ರದೇಶವಾದ್ದರಿಂದ ಮತ್ತು ಕರ್ನಾಟಕದ ಪ್ರಮುಖ ರಾಜರು ಅಲ್ಲಿ ಆಡಳಿತವನ್ನು ಮಾಡದ ಕಾರಣ ದೇವಾಲಯಗಳಂತಹ ಕಟ್ಟಡಗಳು ದೊರೆಯುವುದು ತೀರಾ ಕಡಿಮೆ.

ಕೊಡಗಿನ ಜನರು ನಿಸರ್ಗವನ್ನು ಪೂಜಿಸುವವರು. ಇವರು ಬೆಟ್ಟಗುಡ್ಡಗಳ, ನದಿಗಳ, ಭೂತ ಶಕ್ತಿಗಳ, ಪಿತೃಗಳ ಆರಾಧಕರಾಗಿದ್ದರು. ಪ್ರಸ್ತುತ ಕಾಲದಲ್ಲೂ ಇವರು ಅವನ್ನೇ ಪೂಜಿಸುತ್ತಿರುವುದು ಕಂಡು ಬರುತ್ತದೆ. ಚೆಂಗಲ್ವರು ಸುಮಾರು ೧೧ನೆಯ ಶತಮಾನದಲ್ಲಿ ಶೈವ ಸಂಪ್ರದಾಯವನ್ನು ಆಚರಣೆಗೆ ತಂದರು. ಅದೇ ಸಂದರ್ಭದಲ್ಲಿ ಕೊಂಗಲ್ವರು ಕಾವೇರಿ ಮಾತೆಯನ್ನು ಪೂಜಿಸುತ್ತಿದ್ದರು. ಇಕ್ಕೇರಿ ನಾಯಕರು ಲಿಂಗಾಯಿತರಾಗಿದ್ದ ಕಾರಣ ವೀರಶೈವ ಸಂಪ್ರದಾಯವೂ ಅಸ್ತಿತ್ವಕ್ಕೆ ಬಂದಿತ್ತು ಎನ್ನುವುದು ತಿಳಿದು ಬರುತ್ತದೆ.

ಭಾಗಮಂಡಲದ ಭಗಂಡೇಶ್ವರ ದೇವಾಲಯದ ಎದುರು ಇರುವ ದೀಪಸ್ತಂಭವು ಲೋಹದ ದೀಪಸ್ತಂಭವಾಗಿದೆ. ಇದರ ಮೇಲೆ ಶಾಸನವಿದ್ದು ಇದರ ಕಾಲವು ಕ್ರಿಸ್ತ ಶಕ ೧೮೮೧ ಎಂದು ಹೇಳಲಾಗುತ್ತದೆ. ಈ ಶಾಸನದಲ್ಲಿ ಮಣವಟ್ಟ ಬೆಳ್ಳಿಯಪ್ಪನೆಂಬ ಭಕ್ತನು ಚಿನ್ನಪ್ಪನೆಂಬುವನ ಮೇಲ್ವಿಚಾರಣೆಯಲ್ಲಿ ತಯಾರಿಸಿದ ದೀಪಸ್ತಂಭವನ್ನು ಭಗಂಡೇಶ್ವರ ದೇವಾಲಯಕ್ಕೆ ಮಾಡಿಸಿಕೊಟ್ಟನು ಎಂದು ಹೇಳಲಾಗಿದೆ[೨೧].

---

೬೯. S.K. Ramachandra Rao:
Art and Architecture of Indian Temples, Volume III, ಪುಟ-೨೬೯

೨೦. S.K. Ramachandra Rao:
Art and Architecture of Indian Temples, Volume III, ಪುಟ-೨೫೧

೨೧. **ಎಪಿಗ್ರಾಫಿಯ ಕರ್ನಾಟಿಕ,** ಕೊಡಗು ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಪುಟ- ೨೧

ಹಾಸನ ಜಿಲ್ಲೆ:

ಈ ಜಿಲ್ಲೆಯನ್ನು ಸುಮಾರು ೫ನೆಯ ಶತಮಾನದವರೆಗೆ ಕದಂಬ ರಾಜರು ಆಳುತ್ತಿದ್ದರು. ನಂತರ ಕೆಲವು ಸಮಯ ಗಂಗರು ಆಳಿದರು. ಇದೇ ಸಮಯದಲ್ಲಿ ಜೈನ ಧರ್ಮದದ ಬೆಳವಣಿಗೆಯಾಯಿತು ಎನ್ನಬಹುದು. ಸುಮಾರು ೧೦೦೪ನೆಯ ಶತಮಾನದಲ್ಲಿ ಈ ಜಿಲ್ಲೆಯಲ್ಲಿ ಹೊಯ್ಸಳರ ಆಳ್ವಿಕೆ ಪ್ರಬಲಗೊಂಡು ೧೧೩೧ರಲ್ಲಿ ದೇವಾಲಯ ನಿರ್ಮಾಣ ವಿಜೃಂಭಣೆಯಿಂದ ಆಯಿತು. ಸುಮಾರು ೧೧೭೩ ಮತ್ತು ೧೨೩೫ರಲ್ಲಿ ದೇವಾಲಯಗಳ ನಿರ್ಮಾಣವು ಉನ್ನತ ಸ್ಥಾನವನ್ನು ಪಡೆದವು[೭೨]. ವಿಜಯನಗರ ಸಾಮ್ರಾಜ್ಯದ ಅಸ್ಥಿತ್ವ ಬರುತ್ತಿದ್ದಂತೆ ಹೊಯ್ಸಳರ ದೇವಾಲಯಗಳ ನಿರ್ಮಾಣವು ಕಡಿಮೆಯಾಯಿತು. ಆ ಸಮಯದಲ್ಲಿ ನಿರ್ಮಾಣಗೊಂಡ ದೇವಾಲಯಗಳು ವಿಜಯನಗರ ಅರಸರ ಅಧೀನದಲ್ಲಿದ್ದಂತಹ ಪಾಳೆಯಗಾರರಿಗೆ ಸೇರಿದಂತಹವು. ವಿಜಯನಗರ ದೇವಾಲಯಗಳು ಹೊಯ್ಸಳ ಅಥವಾ ಚಾಲುಕ್ಯರ ಶೈಲಿಯನ್ನು ಹೋಲದೆ ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಳ್ಳುತ್ತಿದ್ದವು.

ತುಮಕೂರು ಜಿಲ್ಲೆ:

ಈ ಜಿಲ್ಲೆಯು ಸುಮಾರು ೪೦೦ರಿಂದ ೧೦೨೫ರವರೆಗೆ ಗಂಗರ ಆಳ್ವಿಕೆಯಲ್ಲಿತ್ತು. ನಂತರ ೧೨೦೦ರವರೆಗೆ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತು. ಕ್ರಿಸ್ತ ಶಕ ೧೦೦೦ದಿಂದ ೧೦೭೦ರವರೆಗೆ ಚೋಳರು, ನಂತರ ಹೊಯ್ಸಳರು, ಅವರ ನಂತರ ವಿಜಯನಗರದ ಅರಸರು ಆಡಳಿತವನ್ನು ನಡೆಸಿದರು. ಈ ಜಿಲ್ಲೆಯಲ್ಲಿ ಸುಮಾರು ೮೪೩ರಿಂದ ೯೭೪ರವರೆಗೆ ರಾಜ್ಯಭಾರವನ್ನು ಮಾಡಿದ ನೊಳಂಬರ ಶೈಲಿಯ ದೇವಾಲಯಗಳು ಹೆಚ್ಚಾಗಿ ದೊರೆಯುತ್ತವೆ. ಸಾಧಾರಣವಾಗಿ ಇಲ್ಲಿನ ಎಲ್ಲಾ ದೇವಾಲಯಗಳಲ್ಲೂ ದೀಪಸ್ತಂಭಗಳು ಇರುವುದನ್ನು ನೋಡಬಹುದು.

ಬೆಂಗಳೂರು ಜಿಲ್ಲೆ:

ಬೆಂಗಳೂರು ಜಿಲ್ಲೆಗೆ ಕ್ರಿಸ್ತ ಶಕ ೪೩೦ರಿಂದ ಇತಿಹಾಸ ಇರುವುದು ತಿಳಿದು ಬರುತ್ತದೆ. ಗಂಗರ ರಾಜಧಾನಿಯೂ ಇಲ್ಲಿದ್ದಂತಹ ಪುರಾವೆಗಳು ದೊರೆಯುತ್ತವೆ. ಸುಮಾರು ಹನ್ನೊಂದನೆಯ ಶತಮಾನದಲ್ಲಿ ಚೋಳರು ಈ ಸ್ಥಳವನ್ನು ಆಕ್ರಮಿಸಿಕೊಂಡರು. ಇಲ್ಲಿನ ಹೆಚ್ಚು ದೇವಾಲಯಗಳು ಚೋಳರ ಪ್ರಭಾವವನ್ನು ಹೊಂದಿರುವುದಲ್ಲದೆ. ಕೆಲವು ತಮಿಳುಭಾಷೆಯ ಶಾಸನಗಳನ್ನೂ ಹೊಂದಿವೆ. ನಂತರ ವಿಜಯನಗರ ಅರಸರ ಆಳ್ವಿಕೆಯನ್ನೂ ಈ ಜಿಲ್ಲೆ ಹೊಂದಿತ್ತು ಎಂಬುವುದನ್ನು ಕಾಣುತ್ತೇವೆ. ಸುಮಾರು ೧೪೧೮ ರಿಂದ ೧೭೦೦ವರೆಗೆ ನಿರ್ಮಾಣಗೊಂಡಿರುವ ದೇವಾಲಯಗಳು ಶಿವ ಮತ್ತು ವಿಷ್ಣುವನ್ನು

---

೭೨. S.K. Ramachandra Rao:
Art and Architecture of Indian Temples, Volume III, ಪುಟ-೨೨೬

ಪ್ರತಿನಿಧಿಸುತ್ತವೆ[೭೩]. ಇಲ್ಲಿನ ಹೆಚ್ಚು ದೇವಾಲಯಗಳನ್ನು ಪಾಂಡವರು ನಿರ್ಮಿಸುದೆಂದೂ ಇಲ್ಲವೇ ರಾಮ ಪ್ರತಿಷ್ಠಾಪಿಸಿದುದು ಎಂದು ಹೇಳುವುದನ್ನು ಕೇಳುತ್ತೇವೆ.

ಕೊನೆಯದಾಗಿ ಕೆಂಪೇಗೌಡನು ಈ ಜಿಲ್ಲೆಯನ್ನು ಆಳಿದುದರ ಜೊತೆಗೆ ಹೆಚ್ಚು ದೇವಾಲಯಗಳನ್ನು ನಿರ್ಮಿಸಿರುವುದು ಕಂಡು ಬರುತ್ತದೆ. ಬೆಂಗಳೂರು ಜಿಲ್ಲೆಯ ಶಿವಗಂಗೆ ವೀರಭದ್ರಸ್ವಾಮಿ ದೇವಾಲಯದ ಪಕ್ಕದಲ್ಲಿ ಎರಡು ದೀಪದ ಕಂಬಗಳಿವೆ. ಇಲ್ಲಿನ ದೀಪಸ್ತಂಭವು ಹೊಯ್ಸಳರ ರಾಜ ಮೊದಲನೆಯ ನರಸಿಂಹನ ಆಳ್ವಿಕೆಯಲ್ಲಿ ಕೂಸು ಬಸವಣ್ಣ ಎಂಬುವವನಿಂದ ನಿರ್ಮಿಸಲ್ಪಟ್ಟಿತ್ತೆಂದು ಗಂಗಾಧರೇಶ್ವರ ದೇವಸ್ಥಾನದ ಒಂದು ಶಿಲಾ ಶಾಸನದಿಂದ ತಿಳಿದು ಬರುತ್ತದೆ[೭೪].

ಕೋಲಾರ ಜಿಲ್ಲೆ:

ಕೋಲಾರ ಜಿಲ್ಲೆಯನ್ನು ಅತಿ ಪ್ರಾಚೀನರಾದ ಮಹಾವಲಿ-ಬಾಣರು ಆಳುತ್ತಿದ್ದರೆಂದು ಶಾಸನಗಳು ದೊರೆಯುತ್ತವೆ. ನಂತರ ರಾಷ್ಟ್ರಕೂಟರ ಆಳ್ವಿಕೆಯ ಅಧೀನದಲ್ಲಿಯೂ ಈ ಜಿಲ್ಲೆಯು ಇದ್ದಿದ್ದು ತಿಳಿದು ಬರುತ್ತದೆ. ಈ ಜಿಲ್ಲೆಯ ಕೆಲವು ಭಾಗಗಳನ್ನು ಗಂಗರು, ನೊಳಂಬರು ಮತ್ತು ವೈಡುಂಬರು ಸುಮಾರು ಕ್ರಿಸ್ತ ಶಕ ೧೦೦೦ರವರೆಗೆ ಆಳಿರುವುದು ತಿಳಿದು ಬರುತ್ತದೆ. ಕ್ರಿಸ್ತ ಶಕ ೧೦೦೦ರಲ್ಲಿ ಅಸ್ತಿತ್ವವನ್ನು ಪಡೆದುಕೊಂಡ ಚೋಳರ ಸಾಮ್ರಾಜ್ಯದವರು ನಂತರದ ದಿನಗಳಲ್ಲಿ ಸಂಪೂರ್ಣ ಅಧಿಕಾರವನ್ನು ಚಲಾಯಿಸಿದರು[೭೫]. ಚೋಳರ ಸಾಮ್ರಾಜ್ಯ ಕ್ಷೀಣಿಸುತ್ತಿದ್ದಂತೆ ಹೊಯ್ಸಳರ ಪ್ರಭಾವವು ಹೆಚ್ಚಾಗತೊಡಗಿತು. ಆದರೆ ದೇವಾಲಯಗಳ ರಚನೆಯಲ್ಲಿ ವಿಶೇಷವಾದ ಬದಲಾವಣೆಗಳು ಆಗಲಿಲ್ಲ. ಸುಮಾರು ಕ್ರಿಸ್ತ ಶಕ ೧೩೪೪ರ ನಂತರ ವಿಜಯನಗರ ಸಾಮ್ರಾಜ್ಯವು ಆಳ್ವಿಕೆಯನ್ನು ಪಡೆಯಿತು[೭೬]. ವಿಜಯನಗರ ಶೈಲಿಯ ದೇವಾಲಯಗಳು ಈ ಪ್ರದೇಶಗಳಲ್ಲಿ ತಮ್ಮ ಛಾಪು ಮೂಡಿಸುದುದನ್ನು ಕಾಣಬಹುದು.

ಚೋಳರ ಅರಸರ ಕಾಲದಲ್ಲಿ ನಂದಾದೀಪಗಳನ್ನು ಜೈನಮಂದಿರಗಳಿಗೆ ದಾನ ನೀಡಿದ ಉಲ್ಲೇಖಗಳು ದೊರೆಯುತ್ತವೆ[೭೭]. ಐಹೊಳೆಯು ಜೈನ ಧರ್ಮದ

---

೭೩. S.K. Ramachandra Rao:
Art and Architecture of Indian Temples, Volume III, ಪುಟ-೨೧೩

೭೪. ಸಂ: ಸು. ರಂಗಸ್ವಾಮಿ: **ಕರ್ನಾಟಕದ ದೇವಾಲಯಗಳು,** ಪುಟ- ೧೦೦

೭೫. S.K. Ramachandra Rao:
Art and Architecture of Indian Temples, Volume III, ಪುಟ-೨೬೫

೭೬ S.K. Ramachandra Rao:
Art and Architecture of Indian Temples, Volume III, ಪುಟ-೨೬೫

೭೭ In the time of Rajashekhar in about his time at Sirramur is a record of provision of a lamp in the mandapa of the temple of Parshvanatha, Simi larly in the 7th year of Rajaraja two lamps were endowed in the large monastry Pallich-Chandam in South Arcot district.....
C. Shivarama murty: **Panorama of Jain art**- South India, ಪುಟ- ೯೨

ಕೇಂದ್ರವಾಗಿದ್ದಂತಹ ಪುರಾವೆಗಳೂ ದೊರೆಯುತ್ತವೆ[೨೮]. ಮಹಾವೀರನ ಕಾಲದಲ್ಲಿ ಯಜ್ಞ ಯಾಗಾದಿಗಳಿಗೆ ಪಶುಬಲಿ ಕೊಡುತ್ತಿದ್ದರು[೨೯] ಎನ್ನಲಾಗುತ್ತದೆ. ಅಗ್ನಿಕುಂಡಗಳನ್ನು ಜೈನ ಧರ್ಮದವರೂ ಬಳಸುತ್ತಿದ್ದರು ಎಂದು ಇದರಿಂದ ತಿಳಿದು ಬರುತ್ತದೆ. **ಜಿನ** ಎಂಬ ಪದದಿಂದ **ಜೈನ** ಎಂಬ ಪದವು ಹುಟ್ಟಿದೆ. **ಜಿನ** ಎಂದರೆ ತನ್ನ ಮನಸ್ಸನ್ನು ಗೆದ್ದವನು ಎಂದರ್ಥ. ಭವಬಂಧನವನ್ನು ಮೀರಿ ಮುಕ್ತಿಯನ್ನು ಪಡೆದವನನ್ನು ಜಿನ ಎನ್ನಲಾಗುವುದು. **ಜಿನ** ದ ತತ್ತ್ವಗಳನ್ನು ಆಚರಿಸುವವರನ್ನು ಜೈನರು ಎಂದು ಕರೆಯಲಾಗುತ್ತದೆ.

ಎಲ್ಲಾ ಧರ್ಮದ ಆವರಣದಲ್ಲಿ ದೀಪಸ್ತಂಭಗಳು ಇರುವುದನ್ನು ಕಾಣುತ್ತೇವೆ. ಮೊದಲಿಗೆ ವಿದ್ಯತ್ ಇಲ್ಲದ ಕಾರಣ ರಾತ್ರಿಯ ಹೊತ್ತು ಸಹಾಯ ಮಾಡುವ ಬೆಳಕು ಎಲ್ಲಾ ಧರ್ಮದವರ ಮನ ಗೆದ್ದಿತು ಎಂದರೆ ತಪ್ಪಾಗಲಾರದು. ವಿಜ್ಞಾನ ಲೋಕವು ಮುಂದುವರೆಯುತ್ತಿದ್ದಂತೆ ಜಗತ್ತಿಗೆ ವಿದ್ಯತ್ ಬೆಳಕಿನ ಆಗಮನವಾಯಿತು. ವಿದ್ಯುತ್ ಬೆಳಕು ಬರುತ್ತಿದ್ದಂತೆ ದೇವಾಲಯಗಳಲ್ಲಿನ ದೀಪಸ್ತಂಭಗಳು ತಮ್ಮ ಅಸ್ಥಿತ್ವವನ್ನು ಕಳೆದುಕೊಂಡವು ಎಂದರೆ ತಪ್ಪಾಗಲಾರದು.

ದೇವಾಲಯದ ಆವರಣದಲ್ಲಿ ಪ್ರತಿನಿತ್ಯವೂ ನಿರಂತರವಾಗಿ ಬೆಳಗುತ್ತಿದ್ದ ದೀಪಸ್ತಂಭಗಳು ಹಬ್ಬಹರಿದಿನಗಳಲ್ಲಿ, ವಿಶೇಷವಾದ ಉತ್ಸವ ಆಚರಣೆಗಳಲ್ಲಿ ಮಾತ್ರ ಬೆಳಗುವಂತಾಯಿತು. ಕೆಲವು ದೀಪಸ್ತಂಭಗಳಲ್ಲಿ ವಿದ್ಯತ್ ದೀಪಗಳನ್ನು ಅಳವಡಿಸಿರುವುದನ್ನು ಕಾಣಬಹುದು. ಗದಗ ಜಿಲ್ಲೆ ಮೈಲಾರ ಲಿಂಗೇಶ್ವರ ದೇವಾಲಯದಲ್ಲಿ ಇರುವ ದೀಪಸ್ತಂಭದ ತುದಿಯಲ್ಲಿ ವಿದ್ಯತ್ ದೀಪವನ್ನು ಅಳವಡಿಸಿರುವುದನ್ನು ನೋಡಬಹುದು (ಚಿತ್ರ ೫). ಮೈಸೂರಿನ ಅರಮನೆ ಆವರಣಕ್ಕೆ ಅಂಟಿಕೊಂಡಂತೆ ಇರುವ ಶ್ರೀ ಆಂಜನೇಯ ದೇವಾಲಯದ ಎದುರು ಇರುವ ದೀಪಸ್ತಂಭದಲ್ಲಿ ಐದು ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ (ಚಿತ್ರ ೬). ದೀಪಸ್ತಂಭಗಳು ಎತ್ತರವಾಗಿ ಇರುವುದರಿಂದ ಮತ್ತು ವಿದ್ಯುತ್ ದೀಪಗಳು ಪ್ರಚಲಿತದಲ್ಲಿ ಇರುವುದರಿಂದ ಕೆಲವು ದೀಪಸ್ತಂಭಗಳಲ್ಲಿ ದೀಪಗಳನ್ನು ಪ್ರಸ್ತುತ ದಿನಗಳಲ್ಲಿ ಬೆಳಗದೆ ಇರುವುದು ಕಾಣುತ್ತದೆ. ಪ್ರಸ್ತುತ ದಿನಗಳಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಿರುವಂತಹ ದೀಪಸ್ತಂಭಗಳು ಹೆಚ್ಚಾಗಿ ದೊರೆಯುತ್ತವೆ.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೊಲ್ಲೂರು ಮೂಕಾಂಬಿಕಾ ದೇವಾಲಯದ ಎದುರು ದೀಪಸ್ತಂಭವಿದೆ. ಈ ದೀಪಸ್ತಂಭವು ನಲವತ್ತು ಅಡಿಯ ಎತ್ತರದ ಲೋಹದ ಸ್ತಂಭವಾಗಿದೆ(ಚಿತ್ರ ೭). ಹಬ್ಬಹರಿದಿನಗಳಲ್ಲಿ ದೀಪಸ್ತಂಭದಲ್ಲಿನ ಹಣತೆಗಳಲ್ಲಿ ದೀಪವನ್ನು ಬೆಳಗದೆ ದೀಪಸ್ತಂಭದಲ್ಲಿ ಇರುವ ಪೀಠದ ಮೇಲೆ ದೀಪಗಳನ್ನು ಇಟ್ಟು ಬೆಳಗುತ್ತಿರುವುದು ಕಂಡು ಬರುತ್ತದೆ. ದೇವಾಲಯದ ಇಡೀ ಪ್ರಾಕಾರವನ್ನು

---

೨೮. C. Shivarama murty: **Panorama of Jain art**- South India, ಪುಟ- ೯೪

೨೯. ಎಸ್ಸೆಮ್ಕೆ: ಜೈನಧರ್ಮ - ಒಂದು ಇಣುಕು ನೋಟ, ಮಲ್ಲಾರ ಮಾಸಪತ್ರಿಕೆ, ಏಪ್ರಿಲ್ ೨೦೦೨, ಪುಟ- ೧೪

ಬೆಳಗಿಸಲು ವಿದ್ಯುತ್ ದೀಪಗಳನ್ನು ಬಳಸಿಕೊಂಡಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಪ್ರಸ್ತುತ ಸಮಯದಲ್ಲಿ ಹೆಚ್ಚಿನ ದೇವಾಲಯಗಳ ಆವರಣದಲ್ಲಿ ದೀಪಸ್ತಂಭಗಳಿಲ್ಲದೆ ಇರುವುದನ್ನು ನೋಡಬಹುದು. ಮೊದಲು ಇದ್ದಂತಹ ದೀಪಸ್ತಂಭಗಳು ಗಾಳಿ ಮಳೆಗೆ ಬಿದ್ದಿರುವ ಸಾಧ್ಯತೆಗಳಿವೆ. ಕೆಲವು ದೀಪಸ್ತಂಭಗಳು ಮರದ ದೀಪಸ್ತಂಭಗಳೂ ಆಗಿದ್ದಿರಬೇಕು. ಇವು ಶಿಥಿಲಗೊಂಡ ನಂತರ ಅವುಗಳ ಆಧ್ಯಾತ್ಮಿಕವಾದ, ಧಾರ್ಮಿಕವಾದ ಮಹತ್ವವನ್ನು ಅರಿಯದೆ ದೀಪಸ್ತಂಭಗಳು ಕೇವಲ ಬೆಳಗಿಗಾಗಿ ಎಂದು ತಿಳಿದು ಜನರು ಅವುಗಳನ್ನು ನಿರ್ಲಕ್ಷೆ ಮಾಡಿರುವಂತೆ ತೋರುತ್ತದೆ.

* *** *

ಅಧ್ಯಾಯ: ಮೂರು

ದೀಪ ಮತ್ತು ಸ್ತಂಭಗಳು

ದೀಪ ಮತ್ತು ಸ್ತಂಭಗಳು

ದೇವಾಲಯದ ಆವರಣದಲ್ಲಿ ವೈವಿಧ್ಯಮಯವಾದ ದೀಪಗಳು ದೊರೆಯುತ್ತವೆ. ಅಷ್ಟೇ ಅಲ್ಲದೆ ಅನೇಕ ವಿಧದ ಸ್ತಂಭಗಳು ಇರುವುದನ್ನು ಸಹ ಕಾಣಬಹುದು. ದೀಪದ ಸ್ತಂಭವನ್ನು ಕುರಿತಾದ ಅಧ್ಯಯನವು ಇದಾದ್ದರಿಂದ ದೀಪಗಳನ್ನು ಕುರಿತು ತಿಳಿಯುವುದು ಮುಖ್ಯವೆನಿಸುತ್ತದೆ. ದೇವಾಲಯದ ಆವರಣದಲ್ಲಿ ವೈವಿಧ್ಯಮಯವಾದ ದೀಪಸ್ತಂಭಗಳು ದೊರೆಯುತ್ತವೆ. ದೀಪಸ್ತಂಭದಲ್ಲಿ ದೀಪವು ಸ್ತಂಭದ ಮೇಲೆ ಇರುವುದರಿಂದ ದೇವಾಲಯದ ಆವರಣದಲ್ಲಿ ಇರುವ ಇತರೆ ಸ್ತಂಭಗಳು, ಅವುಗಳ ಉದ್ದೇಶಗಳನ್ನು ವಿವರಿಸುವುದು ಇಲ್ಲಿ ಬಹು ಮುಖ್ಯ ಪಾತ್ರವಾಗುತ್ತದೆ.

ದೇವಾಲಯದ ಆವರಣದಲ್ಲಿ ಇರುವ ಇತರೆ ಸ್ತಂಭಗಳನ್ನು ಅರಿತರೆ ಅವುಗಳಿಗೂ ದೀಪಸ್ತಂಭಕ್ಕೂ ಇರುವ ಸಾಮ್ಯ ಮತ್ತು ಅಂತರಗಳನ್ನು ತಿಳಿಯುವುದು ಸುಲಭವಾಗುತ್ತದೆ. ಈ ಅಧ್ಯಾಯವನ್ನು ಎರಡು ಭಾಗಗಳನ್ನು ವಿಂಗಡಿಸಿ ಅಧ್ಯಯನವನ್ನು ಮಾಡಲಾಗಿದೆ.

೧. ದೀಪಗಳು ಮತ್ತು ಅವುಗಳ ವೈವಿಧ್ಯತೆ

೨. ಸ್ತಂಭಗಳು

೧. ದೀಪಗಳು ಮತ್ತು ಅವುಗಳ ವೈವಿಧ್ಯತೆ

ದೇವಾಲಯದ ಒಳ ಆವರಣದಲ್ಲಿ ದೀಪಗಳನ್ನು ನೋಡಬಹುದು. ದೀಪಗಳನ್ನು ಹೊತ್ತಂತಹ ಬಟ್ಟಲುಗಳು ಅಲಂಕರಣಾ ಸಾಧನಗಳನ್ನು ಹೊಂದಿರುವುದು ವಿಶೇಷವಾಗಿ ಕಾಣುತ್ತದೆ. ಈ ಅಲಂಕೃತವಾದ ದೀಪಗಳಲ್ಲಿ ವಿವಿಧ ಪ್ರಾಣಿ ಪಕ್ಷಿಗಳ ಶಿಲ್ಪಗಳಿರುವುದು ಗಮನಕ್ಕೆ ಬರುತ್ತದೆ. ಇಲ್ಲಿ ರಚಿಸಲ್ಪಡುವ ಶಿಲ್ಪಗಳಲ್ಲೂ ಒಂದು ರೀತಿಯ ವಿಶೇಷತೆ ಇರುವುದು ಗಮನಿಸಬೇಕಾದ ವಿಷಯ. ಪುಟ್ಟ ಕಲ್ಲು ಕಂಬದ ಮೇಲೆ ದೀಪವನ್ನು ಬಳಸಿ ತನ್ನ ಗುಹೆಯನ್ನು ಬೆಳಗಿಸುತ್ತಿದ್ದ ಆದಿಮಾನವನು ತನ್ನ ದೈನಂದಿನ ಚಟುವಟಿಕೆಗಳಲ್ಲಿ ಉಪಯೋಗಿಸುವ ಪದಾರ್ಥಗಳನ್ನು ಹೇಗೆ ಕಲಾತ್ಮಕವಾಗಿ ರಚಿಸತೊಡಗಿದನೋ ಅದೇ ರೀತಿ ದೀಪಗಳ ಬಟ್ಟಲುಗಳನ್ನೂ ಕಲಾತ್ಮಕವಾಗಿ ರಚಿಸಿ ಅದರ ಸೌಂದರ್ಯವನ್ನು ಹೆಚ್ಚಿಸಿದನು.

ದೀಪಗಳು ಧಾರ್ಮಿಕತೆಯನ್ನು ಪಡೆಯುವುದರ ಜೊತೆಗೆ ಅದರಲ್ಲಿನ ಶಿಲ್ಪಗಳು ಧಾರ್ಮಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ರಚನೆಗೊಂಡವು ಎಂದರೆ ತಪ್ಪಾಗಲಾರದು. ಅಲಂಕರಣಾ ಸಾಮಗ್ರಿಯನ್ನು ದೀಪಕ್ಕೆ ಜೋಡಿಸುವ ಮೊದಲನೆಯ ಹಂತದಲ್ಲಿ ನಾಗಶಿಲ್ಪಗಳನ್ನು ಬಳಸಿ ದೀಪಗಳನ್ನು ತಯಾರಿಸಿದನು. ನಂತರ ಇದರಲ್ಲಿ ಪಕ್ಷಿಗಳನ್ನೂ, ಪಕ್ಷಿಗಳ ತರುವಾಯ ಪ್ರಾಣಿಗಳನ್ನೂ ಮತ್ತು ಕೊನೆಯದಾಗಿ ಮಾನವನ ಶಿಲ್ಪಗಳನ್ನು ಅಳವಡಿಸಿದಂತೆ ತೋರುತ್ತದೆ. ಜಲಚರ ಪ್ರಾಣಿಗಳಿಂದ ಮೊದಲುಗೊಂಡು ಮಾನವನವರೆವಿಗೂ ಇರುವ ಸೃಷ್ಟಿಯ ಹಂತಗಳನ್ನು ಪ್ರತಿಬಿಂಬಿಸುವ ಶಿಲ್ಪಗಳನ್ನು ದೀಪದ ಬಟ್ಟಲಿನ ಜೊತೆಯಲ್ಲಿ ಸಮೀಕರಿಸಿದಂತೆ ತೋರುತ್ತದೆ[೧]. ಈ ರೀತಿಯಾಗಿ ಪ್ರತಿನಿಧಿಸಲ್ಪಡುವ ಶಿಲ್ಪಗಳಿಗೆ ಅವುಗಳದ್ದೇ ಆದ ಹೆಸರು ಇರುವುದು ತಿಳಿದು ಬರುತ್ತದೆ.

ಹಾವಿನ ಶಿಲ್ಪವನ್ನು ಬಳಸಿಕೊಂಡು ದೀಪವನ್ನು ಮಾಡಿದ್ದಲ್ಲಿ ಅದನ್ನು **ನಾಗ ದೀಪ** ಎಂದು ಕರೆಯುತ್ತಾರೆ. ಪಕ್ಷಿಗಳ ಶಿಲ್ಪವನ್ನು ಹೊಂದಿರುವ ದೀಪವನ್ನು **ಪಕ್ಷಿ ದೀಪ** ಎನ್ನಲಾಗುತ್ತದೆ. ಇವುಗಳಲ್ಲಿ ಹಂಸ, ನವಿಲಿನ ಶಿಲ್ಪಗಳೇ ಹೆಚ್ಚಾಗಿ ದೊರೆಯುತ್ತವೆ. **ಮೃಗ ದೀಪಂ** ಎನ್ನುವ ದೀಪದ ಆಕಾರದಲ್ಲಿ ಕಾಡು ಮೃಗಗಳ, ಸಾಕು ಪ್ರಾಣಿಗಳ ಶಿಲ್ಪಗಳಿರುತ್ತವೆ. ಚಿತ್ರ ೮ರಲ್ಲಿ ಇರುವ ದೀಪವು ಮೃಗದೀಪದ ಒಂದು ಮಾದರಿಯಾಗಿದೆ. ಈ ದೀಪದಲ್ಲಿ ಎರಡು ಹಸುವಿನ ಶಿಲ್ಪಗಳಿವೆ. ಈ ಹಸುಗಳನ್ನು ಒಂದಕ್ಕೊಂದು ಅಂಟಿಕೊಂಡಂತೆ ರಚಿಸಲಾಗಿದ್ದು ಇವುಗಳ ಬೆನ್ನ ಮೇಲೆ ದೀಪದ ಬಟ್ಟಲನ್ನು ಇರಿಸಲಾಗಿದೆ. ಈ ದೀಪಕ್ಕೆ ನಾಲ್ಕು ಚಕ್ರಗಳನ್ನೂ ಅಳವಡಿಸಲಾಗಿದೆ. ದಕ್ಷಿಣ ಭಾರತದಲ್ಲಿ ತಯಾರಾದ **ಈ ದೀಪವು**

---


೧. From the world of creation the man has represented snake (reptiles) then bird, after that animal and next the form in between animal and human being and as later representation he took the form of human being .....
ಸಂದರ್ಶನ: ವಿಜಯ ವೆಲ್ಲೂರು, ಶಿಲ್ಪಿ ಹಾಗೂ ಶಿಲ್ಪಕಲಾ ಕಾರ್ಯಾಗಾರದ ಮೇಲ್ವಿಚಾರಕರು, ಲಲಿತಕಲಾ ಅಕಾಡೆಮಿ, ಚೆನ್ನೈ.



ಚಿತ್ರ ೮



ಚಿತ್ರ ೯




ಚಿತ್ರ ೧೦



ಚಿತ್ರ ೧೧



ಚಿತ್ರ ೧೨




ಚಿತ್ರ ೧೩



ಚಿತ್ರ ೧೪



ಚಿತ್ರ ೧೫



ಚಿತ್ರ ೧೬

ಕ್ರಿಸ್ತ ಶಕ ಸುಮಾರು ೧೮ನೆಯ ಶತಮಾನಕ್ಕೆ ಸೇರಿದುದಾಗಿದೆ. ಈ ರೀತಿಯಾಗಿ ಮೃಗದೀಪಗಳಲ್ಲಿ ವಿವಿಧ ವಿನ್ಯಾಸಗಳು ಇರುವುದನ್ನು ಕಾಣಬಹುದು.

ಪುರುಷ ಮೃಗದೀಪಂ ಎನ್ನುವ ದೀಪದ ಶಿಲ್ಪವು ಪುರುಷನ ತಲೆಯನ್ನು ಹೊಂದಿದ್ದರೆ ಪ್ರಾಣಿಯ ದೇಹವನ್ನು ಹೊಂದಿರುತ್ತದೆ, ಇಲ್ಲದಿದ್ದರೆ ಪುರುಷನ ದೇಹವನ್ನು ಹೊಂದಿದ್ದು ಪ್ರಾಣಿಯ ತಲೆಯನ್ನು ಈ ದೀಪದ ಬಟ್ಟಲಿಗೆ ಜೋಡಿಸಲಾಗಿರುತ್ತದೆ. **ಪುರುಷ ದೀಪಂ** ಎಂಬ ದೀಪದಲ್ಲಿ ಪುರುಷನ ಆಕೃತಿಯು ದೀಪವನ್ನು ಹಿಡಿದು ನಿಂತಂತೆ ಶಿಲ್ಪವನ್ನು ರಚಿಸಿರುತ್ತಾರೆ.

ಪುರುಷದೀಪಂ ಎನ್ನುವ ಶೈಲಿಯಲ್ಲಿ **ದೀಪದ** ಮಲ್ಲಿಯೂ ಸೇರಿರುತ್ತದೆ. ಇದರಲ್ಲಿ ಹೆಣ್ಣಿನ ಶಿಲ್ಪವೊಂದನ್ನು ದೀಪದ ಜೊತೆಯಲ್ಲಿ ಅಳವಡಿಸಿರುತ್ತಾರೆ. ಈ ರೀತಿಯ ದೀಪಗಳು ಹೆಚ್ಚಾಗಿ ದಕ್ಷಿಣ ಭಾರತದಲ್ಲಿ ದೊರೆಯುತ್ತವೆ. ಚಿತ್ರ ೯ರಲ್ಲಿ ದೀಪದೊಂದಿಗೆ ಇರುವ ಹೆಣ್ಣಿನ ಶಿಲ್ಪವಿದೆ. ದಕ್ಷಿಣ ಭಾರತದ ದೀಪವು ಇದಾಗಿದ್ದು ಇದನ್ನು ಕ್ರಿಸ್ತ ಶಕ ಸುಮಾರು ೧೨ನೆಯ ಶತಮಾನದಲ್ಲಿ ನಿರ್ಮಿಸಲಾಗಿದೆ. ಈ ದೀಪದಲ್ಲಿ ಹೆಣ್ಣಿನ ಶಿಲ್ಪವು ಕುಳಿತಿದ್ದಂತೆ ಚಿತ್ರಿಸಲಾಗಿದೆ. ಅವಳ ತೊಡೆಯ ಮೇಲೆ ದೀಪದ ಬಟ್ಟಲನ್ನು ಇಟ್ಟುಕೊಂಡಿರುವಂತೆ ಶಿಲ್ಪ ರಚನೆಯನ್ನು ಮಾಡಲಾಗಿದೆ.

ಭಾರತೀಯ ಜನಪದರಲ್ಲೂ ದೀಪರಾಣಿಯನ್ನು ಕುರಿತು ಕೇಳುತ್ತೇವೆ[೨]. ದೀಪರಾಣಿ ಎನ್ನುವ ದೀಪದ ಬೆಳಕಿನಲ್ಲಿ ದುಷ್ಟಶಕ್ತಿಗಳ ಚಟುವಟಿಕೆಗಳು ಕಾಣುತ್ತವೆ ಎಂದೂ ಮತ್ತು ದೀಪರಾಣಿಯು ಮನೆಯನ್ನು ದುಷ್ಟಶಕ್ತಿಗಳಿಂದ ರಕ್ಷಿಸಿ ಅಂಧಕಾರವನ್ನು ಹೊಡೆದು ಓಡಿಸುತ್ತದೆ ಎಂಬ ನಂಬಿಕೆಯು ಜನಪದರಲ್ಲಿ ಇರುವುದು ಗಮನಕ್ಕೆ ಬರುತ್ತದೆ.

ಮೊದಲಿಗೆ ಬಳಸಿದ ದೀಪದ ಬಟ್ಟಲು ಪಾತ್ರೆಯ ಆಕಾರವನ್ನು ಹೊಂದಿರುತ್ತಿತ್ತು. ನಂತರ ಅದಕ್ಕೆ ಬತ್ತಿ ಇಡುವ ಸಲುವಾಗಿ ಕೊಕ್ಕಿನಾಕಾರದ ರಚನೆಯನ್ನು ಸೇರಿಸಲಾಯಿತು. ಅದರ ಜೊತೆಗೆ ಅಲಂಕಾರವನ್ನಾಗಿ ಪೀಠವನ್ನು ಅಳವಡಿಸಲಾಯಿತು. ದೀಪವನ್ನಿಡಲು ಮರದ ಇಲ್ಲವೇ ಕಲ್ಲಿನ ಪೀಠಗಳನ್ನು ಮೊದಲಿಗೆ ಉಪಯೋಗಿಸುತ್ತಿದ್ದುದು ತಿಳಿದು ಬರುತ್ತದೆ. ವೃತ್ತಾಕಾರ ಅಥವಾ ಚೌಕಾಕಾರದ ಪೀಠವನ್ನು ಹೊಂದಿರುತ್ತಿದ್ದ ದೀಪಗಳು ನಂತರದ ದಿನಗಳಲ್ಲಿ ಕಲಾವಿದನ ಕಲಾಕೌಶಲ್ಯಕ್ಕೆ ಅನುಗುಣವಾಗಿ ಅಲಂಕೃತವಾದುದನ್ನು ಗಮನಿಸಬಹುದು. ಈ ಪೀಠಗಳು ಮರದ್ದಾದರೂ, ಕಲ್ಲಿನದ್ದಾದರೂ, ಲೋಹದ್ದಾದರೂ ಅಲಂಕೃತ ಪೀಠಗಳಾಗಿ ಮಾರ್ಪಟ್ಟವು. ದಿನ ಕಳೆದಂತೆ ದೀಪವನ್ನು ಇಡುತ್ತಿದ್ದ ಪೀಠಕ್ಕೂ ಮಹತ್ವದ ಸ್ಥಾನ ದೊರೆಯಿತು.

---

೨. In Indian folklore, too,the king and queen of lamps especially the queen; deepa rani has a prominent place.....
D.G. Kelkar: **Lamps of India,**

ದೇವಾಲಯದ ಒಳ ಆವರಣದಲ್ಲಿ ಬಳಸುವ ದೀಪಗಳ ಹಲವಾರು ಮಾದರಿಗಳಲ್ಲಿ ನೋಡಲು ದೊರೆಯುತ್ತವೆ. ಅವುಗಳನ್ನು ಮತ್ತು ಅವುಗಳ ಜೊತೆಗೆ ಬಳಸಲ್ಪಡುವ ಇತರೆ ಸಾಮಗ್ರಿಗಳನ್ನು ಈ ಕೆಳಗಿನಂತೆ ಹೆಸರಿಸಬಹುದು.

೧. ಆರತಿ ದೀಪ

೨. ಕಾಲು ದೀಪ

೩. ವೃಕ್ಷ ದೀಪ

೪. ದೀಪದಮಲ್ಲಿ

೫. ತೂಗು ದೀಪ

೬. ನಂದಾ ದೀಪ

೭. ತೋರಣದೀಪ

೮. ಸಾಲು ದೀಪ

೯. ದೀವಟಿಗೆಗಳು

೧೦. ಎಣ್ಣೆಯನ್ನು ಹಾಕುವ ಸಾಧನ

೧. ಆರತಿ ದೀಪ:

ಬೆಳಕು ಕತ್ತಲು ಒಂದಕ್ಕೊಂದು ಸಂಬಂಧವನ್ನು ಹೊಂದಿರುವ ಹಿನ್ನೆಲೆಯಲ್ಲಿ ದೇವರಿಗೆ ಆರತಿ ಎತ್ತುವಾಗ **ತಮಸೋಮ ಜ್ಯೋತಿರ್ಗಮಯ** ಎನ್ನುತ್ತೇವೆ. ಆರತಿ ದೀಪವನ್ನು **ಧಾರ್ಮಿಕ ದೀಪ** ಎಂದೂ ಕರೆಯಲಾಗುತ್ತದೆ. ಆರತಿ ದೀಪವನ್ನು ಬೆಳಗುತ್ತಾ ಭಕ್ತನು ದೇವಾನುದೇವತೆಗಳಿಗೆ ಶರಣು ಹೇಳುತ್ತಾನೆ. ಕೊಟ್ಯಾನುಕೋಟಿ ಸೂರ್ಯರಿಗೆ ಸರಿ ಸಮಾನವಾದ ಜ್ಯೋತಿಯನ್ನು ದೇವರಿಗೆ ಅರ್ಪಿಸುತ್ತಿದ್ದೇನೆ ಎಂದು ಭಕ್ತನು ಪ್ರಾರ್ಥಿಸುತ್ತಾನೆ. ಆರತಿ ಅಥವಾ ಅರ್ಪಣೆಯ ದೀಪವೆಂದು ಕರೆಸಿಕೊಳ್ಳುವ ಈ ದೀಪವು ತಾತ್ವಿಕ ಹಾಗೂ ಧಾರ್ಮಿಕವಾದ ಮಹತ್ವವನ್ನು ಹೊಂದಿದೆ. ಡಿ.ಜಿ. ಕೆಲ್ಕರ್ ಎಂಬುವವರು ತಮ್ಮ **ಲ್ಯಾಂಪ್ಸ್ ಆಫ್ ಇಂಡಿಯಾ** ಎಂಬ ಗ್ರಂಥದಲ್ಲಿ ಆರತಿಯನ್ನು ಕುರಿತು ಹೇಳುತ್ತಾ ಆರತಿ ಎನ್ನುವುದು ಭಗವಂತನಿಗೆ ಅರ್ಪಿಸುವ ಭಕ್ತನ ಆತ್ಮವನ್ನು ಪ್ರತಿನಿಧಿಸುತ್ತದೆ[೩] ಎಂದು ಹೇಳಿದ್ದಾರೆ. ಇದು ಭಾರತೀಯರ ಧಾರ್ಮಿಕ ಚಿಂತನೆಗಳಲ್ಲಿ ಮಹತ್ವವಾದ ಪಾತ್ರವನ್ನು ವಹಿಸುತ್ತದೆ.

---

೩. In the act of consecration, the flame in the Arathi, represents the soul of the devotee which is offered to the diety. It is rekindled with devine light of the creator, preserver and destroyer. The devotee integrates self with the Supreme being. Such surrender is the core of the prayer. To forget the self in the sacred invocation of heavenly power, to be one with it, is the quitessence of Arathi as of Bakthi.....
D.G. Kelkar: **The Lamps of India**,

ಆಗಮಗಳಲ್ಲಿ ದೀಪದ ಆರತಿಯನ್ನು ಕುರಿತು ತಿಳಿಸಲಾಗಿದೆ[೪]. ಇದರಲ್ಲಿ ಉರಿಯುತ್ತಿರುವ ದೀಪವು ದೈವತ್ವದ ಸಂಕೇತವಾಗಿದೆ ಎನ್ನಲಾಗುತ್ತದೆ. ದೀಪದಲ್ಲಿನ ಬೆಂಕಿಯು ಅಗ್ನಿಯನ್ನು ಪ್ರತಿನಿಧಿಸಿದರೆ, ದೀಪದ ಮಧ್ಯ ಭಾಗವು ಈಶ್ವರನನ್ನು ಮತ್ತು ಅದರ ತಳ ಭಾಗವು ಪ್ರಜಾಪತಿಯನ್ನು ಪ್ರತಿನಿಧಿಸುತ್ತದೆ[೫] ಎಂದು ಹೇಳಲಾಗುತ್ತದೆ. ದೀಪದಲ್ಲಿ ಮಾಡುವ ಆರತಿಯು ಸೂರ್ಯ ಮತ್ತು ಬೆಂಕಿಯನ್ನು ಸಾಂಕೇತಿಸುವುದು ಎಂದು ಅರ್ಥೈಸಿಕೊಳ್ಳಲಾಗುವುದು.

ಆರತಿ ದೀಪಗಳು ಒಂದು ದೀಪ, ಮೂರು ದೀಪ, ಐದು ದೀಪ, ಏಳು ದೀಪಗಳಿಂದ ಸುಮಾರು ಇನ್ನೂರ ಐವತ್ತೊಂದು ದೀಪಗಳನ್ನೂ ಹೊಂದಿರುತ್ತದೆ. ದೇವಾಲಯದ ಧಾರ್ಮಿಕ ಚಟುವಟಿಕೆಗಳಲ್ಲಿ ಸುಮಾರು ಇಪ್ಪತ್ತೇಳು ತರಹದ ದೀಪಗಳಿರುವುದು ತಿಳಿದು ಬರುತ್ತದೆ. ದೇವಮೂರ್ತಿಯ ಮುಂದೆ ಆರತಿ ಎತ್ತುವುದನ್ನು ದೀಪ, ನಿರಂಜನ, ಆರತಿ, ಹೀಗೆ ಇನ್ನೂ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ.

ಆರತಿ ದೀಪದಲ್ಲಿನ ದೀಪದ ಬಟ್ಟಲಿನ ಸಂಖ್ಯೆಯ ಆಧಾರದ ಮೇಲೆ ಈ ರೀತಿಯಾಗಿ ಪ್ರತಿಬಿಂಬಿಸಲ್ಪಡುತ್ತವೆ. ಏಕಾರತಿ ಎಂದರೆ **ಮಹೇಶನೆಂದೂ**, ದ್ವಿ ಆರತಿ (ಎರಡು ದೀಪದ ಬಟ್ಟಲು)ಯನ್ನು **ಉಮಾ** ಮತ್ತು **ಮಹೇಶರೆಂದೂ**, ತ್ರಿ ಆರತಿಯನ್ನು ತ್ರಿಮೂರ್ತಿಯರಾದ **ಬ್ರಹ್ಮ, ವಿಷ್ಣು, ಮಹೇಶ್ವರ**ರೆಂದೂ ಇಲ್ಲವೇ ಮೂರು ತತ್ವಗಳೆಂದು ತಿಳಿಯಲಾಗುತ್ತದೆ. ಪಂಚಾರತಿಯು **ಪಂಚ ಮಹಾಭೂತಗಳ**ನ್ನು ಪ್ರತಿನಿಧಿಸುತ್ತದೆ. ಸಪ್ತ ಆರತಿಯನ್ನು **ಸಪ್ತ ಮಹರ್ಷಿಗಳು**[೬] ಇಲ್ಲವೇ **ಸಪ್ತಮಾತೃಕೆಯರು** ಎಂದು ತಿಳಿಯಲಾಗುತ್ತದೆ. ಅಷ್ಟ ದೀಪಾರತಿಯು **ಅಷ್ಟ ವಿದ್ಯೆಗಳನ್ನು** ಅಥವಾ ಈಶ್ವರನ **ಅಷ್ಟ ಮೂರ್ತಿ**ಗಳನ್ನು ಪ್ರತಿನಿಧಿಸುತ್ತದೆ ಎನ್ನಲಾಗುತ್ತದೆ. ಭೂಮಿ, ಅಗ್ನಿ, ಬ್ರಾಹ್ಮಣ (ಪುರೋಹಿತ), ಸೂರ್ಯ, ಜಲ, ವಾಯು, ಚಂದ್ರ ಮತ್ತು ಆಕಾಶಗಳನ್ನು ಶಿವನ ಅಷ್ಟ ಮೂರ್ತಿಗಳು ಎಂದು ಪುರಾಣಗಳಲ್ಲಿ ವಿವರಣೆ ದೊರೆಯುತ್ತದೆ[೭].

ನವ ದೀಪಗಳನ್ನು **ನವಗ್ರಹಗಳು** ಎಂದು ಅಜಿತಾಗಮದಲ್ಲಿ ತಿಳಿಸಿದರೆ **ನವ ಶಕ್ತಿ**ಗಳೆಂದು ಕರ್ಣಾಗಮವು ತಿಳಿಸುತ್ತದೆ. ದಶ ದೀಪಗಳನ್ನು **ದಶ ದಿಕ್ಪಾಲಕರು** ಎಂದೂ ಅದರಂತೆ ನಾಗ ದೀಪವನ್ನು **ವಾಸುಕಿ**, ರಥ ದೀಪವನ್ನು **ಸದಾಶಿವ**, ಮೇರು **ದೀಪವನ್ನು**

---

೪. The ritualistic practice of waving the light in front of the deity has been prescribed by the Agamic texts.....
Choodamani Nandagopal and Vatsala Iyengar:
Temple treasures, Volume 1, Utensils and Ritual, ಪುಟ–೧೩೭

೫. Choodamani Nandagopal and Vatsala Iyengar:
Temple treasures, Volume 1, Utensils and Ritual, ಪುಟ–೧೩೭

೬. ಕಶ್ಯಪ, ಅತ್ರಿ, ಭರಧ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ವಸಿಷ್ಠ (ಭಾರ ಶಲ್ಯ ೪೯), ಮರೀಚಿ, ಅತ್ರಿ, ಅಂಗಿರಸು, ಪುಲಸ್ತ್ಯ, ಕ್ರತು, ವಸಿಷ್ಠ (ಶಾಂತಿ ೩೪೩).....
ಬೆನಗಲ್ ರಾಮರಾವ್, ಪಾನ್ಯ ಸುಂದರಂ ಶಾಸ್ತ್ರೀ: ಪುರಾಣ ನಾಮ ಚೂಡಾಮಣಿ, ಪುಟ–೫೯೦

೭ Stella kramrisch: **The Hindu temple,** Volume I, ಪುಟ–೧೦೨

ಬ್ರಹ್ಮ, ವೃಷಭ ದೀಪವನ್ನು **ವೃಷಭ**, ಪುರುಷ ದೀಪವನ್ನು **ಸರ್ವೇಶ**, ಪಂಚಮ ಬ್ರಹ್ಮ ದೀಪವನ್ನು **ಶಿವನ ಐದು ರೂಪಗಳು** (ಈಶ್ವರ, ವಾಮನ, ಸದ್ಯೋಜಾತ, ಅಘೋರ, ತತ್ಪುರುಷ) ಮುಂತಾದವುಗಳಾಗಿ ದೀಪಗಳು ಪ್ರತಿನಿಧಿಸುವುದನ್ನು ಕಾಣುತ್ತೇವೆ[೮].

ದಕ್ಷಿಣ ಭಾರತದಲ್ಲಿ ನಿರ್ಮಿಸಲಾದ ಏಕಾರತಿಯೊಂದರ (ಚಿತ್ರ ೧೦) ರಚನೆಯು ಸರಳವಾದ ವಿನ್ಯಾಸವನ್ನು ಹೊಂದಿದ್ದು ಇದಕ್ಕೆ ಎರಡು ಕಾಲುಗಳನ್ನು ಅಳವಡಿಸಲಾಗಿದೆ. ಇದರ ಎತ್ತರವು ಸುಮಾರು ಹನ್ನೆರಡು ಸೆಂಟೀ ಮೀಟರಾಗಿದ್ದು ಇದನ್ನು ಕ್ರಿಸ್ತ ಶಕ ಸುಮಾರು ಹದಿನೇಳನೆಯ ಶತಮಾನದಲ್ಲಿ ರಚಿಸಲಾಗಿದೆ.

ಧಾರ್ಮಿಕ ದೀಪವೊಂದರಲ್ಲಿ ಸುಮಾರು ನೂರ ಒಂದು ದೀಪಗಳನ್ನು ಬೆಳಗುವ ಅನುಕೂಲವನ್ನು ಮಾಡಿರುವುದು ಚಿತ್ರ ೧೧ರಲ್ಲಿ ಕಾಣುತ್ತದೆ. ಈ ದೀಪದಲ್ಲಿ ಹಂತ ಹಂತಗಳಲ್ಲಿ ದೀಪದ ಬಟ್ಟಲುಗಳನ್ನು ಅಳವಡಿಸಲಾಗಿದೆ. ಕ್ರಿಸ್ತಶಕ ಸುಮಾರು ಹದಿನೆಂಟನೆಯ ಶತಮಾನದಲ್ಲಿ ಈ ದೀಪವನ್ನು ತಯಾರಿಸಲಾಗಿದೆ. ಕ್ರಿಸ್ತ ಶಕ ಸುಮಾರು ಹದಿನೈದನೆಯ ಶತಮಾನದಲ್ಲಿ ನಿರ್ಮಾಣವಾದ ಪಂಚಾರತಿಯು ವಿಶೇಷವಾದ ವಿನ್ಯಾಸವನ್ನು ಹೊಂದಿರುವುದನ್ನು ಚಿತ್ರ ೧೨ರಲ್ಲಿ ಕಾಣಬಹುದು.

ದೇವರಿಗೆ ಆರತಿಯನ್ನು ಎತ್ತುವಾಗ **ಸೃಷ್ಟಿಕರ್ತನೇ ಕೋಟಿ ಸೂರ್ಯನಿಗೆ ಸರಿಸಮವಾದ ದೀಪವನ್ನು ನಿನಗೆ ಅರ್ಪಿಸುತ್ತಿದ್ದೇನೆ, ಅದನ್ನು ಸ್ವೀಕರಿಸು** ಎಂದು ಭಕ್ತನು ಪ್ರಾರ್ಥಿಸುತ್ತಾನೆ. ಜೈನರು ಅಖಂಡ ದೀಪವನ್ನು ಪೂಜೆಯ ಕೊನೆಯ ಹಂತದಲ್ಲಿ ಬಳಸುತ್ತಾರೆ[೯]. ಆರತಿಯಲ್ಲಿನ ಜ್ವಾಲೆಯು ಭಕ್ತನ ಆತ್ಮವನ್ನು ಪ್ರತಿನಿಧಿಸುತ್ತದೆ ಎಂಬ ಹಿನ್ನೆಲೆಯಲ್ಲಿ ಭಕ್ತನು ದೀಪದಲ್ಲಿನ ಜ್ಯೋತಿಯು ಪರಮಾತ್ಮನಲ್ಲಿ ಲೀನಗೊಳ್ಳುವಂತೆ ತಾನೂ ಪರಮಾತ್ಮನಲ್ಲಿ ಲೀನಗೊಳ್ಳುವುದಾಗಿ ಪ್ರಾರ್ಥನೆಯನ್ನು ಸಲ್ಲಿಸುತ್ತಾನೆ. ಪ್ರೊಫೆಸರ್ ಎಸ್.ಕೆ. ರಾಮಚಂದ್ರ ರಾವ್‌ರವರ ಪ್ರಕಾರ ಪೂಜೆಯ ಸಮಯದಲ್ಲಿ ಒಂಬತ್ತು ದೀಪಗಳನ್ನು ಬೆಳಗುವುದು ಅತ್ಯುತ್ತಮವಾದುದು[೧೦]. ಇವುಗಳ ನಂತರದ ಸ್ಥಾನ ಐದು ದೀಪಗಳಿಗೆ ದೊರೆಯುತ್ತದೆ.

ಶಾಸ್ತ್ರಗ್ರಂಥಗಳು ಆರತಿ ದೀಪಗಳನ್ನು ಕುರಿತು ಹೇಳುವುದರ ಜೊತೆಗೆ

---

೮. Choodamani Nandagopal and Vatsala Iyengar:
Temple treasures, Volume 1, Utensils and Ritual, ಪುಟ-೧೩೯

೯. Choodamani Nandagopal and Vatsala Iyengar:
Temple treasures, Volume 1, Utensils and Ritual, ಪುಟ-೧೩೭

೧೦. The light considered best to have nine lights during the worship, Five lights sre the next best, There must in any case atleast one light and the light must be consecrated by ashtamantra.....
Choodamani Nandagopal and Vatsala Iyengar: ಪುಟ-೧೩೮
Temple treasures, Volume 1, Utensils and Ritual,
(**Agama Kosha**, S.K. Ramachandra Rao- Volume VII, Page- 131)

ದೇವಾಲಯಗಳಲ್ಲಿ ಅವುಗಳನ್ನು ಬಳಸುವ ವಿಧಿವಿಧಾನಗಳನ್ನು ಕುರಿತು ತಿಳಿಸುತ್ತವೆ. **ಕಾಮಿಕಾಗಮ** ಎಂಬ ಗ್ರಂಥದಲ್ಲಿ ದೇವರ ಮುಂದೆ ಆರತಿಯನ್ನು ಬೆಳಗುವ ವಿಧಾನವನ್ನು ಹೇಳಲಾಗಿದೆ[೧೧]. ಇದರಲ್ಲಿ ಆರತಿಯನ್ನು ಬೆಳಗುವಾಗ ಮೊದಲನೆಯ ಸುತ್ತು ದೇವಮೂರ್ತಿಯ ತಲೆಯಿಂದ ಪಾದದವರೆಗೆ ಇರಬೇಕು, ಎರಡನೆಯ ಸುತ್ತಿನಲ್ಲಿ ಮುಖದಿಂದ ಮೊಣಕಾಲಿನವರೆಗೆ ಇರಬೇಕು, ಮೂರನೆಯ ಸುತ್ತಿನಲ್ಲಿ ಕತ್ತಿನಿಂದ ಸೊಂಟದವರೆಗೆ ಇರಬೇಕು ಎಂದಿದೆ.

ಆರತಿ ದೀಪಗಳಲ್ಲಿ ಇರುವ ಶಿಲ್ಪಗಳ ಆಕೃತಿಗಳೂ ಇಲ್ಲವೇ ಉದ್ದೇಶದ ಆಧಾರದ ಮೇಲೆ ಹೆಸರು ಇರುವುದನ್ನು ನೋಡಬಹುದು. ಅವುಗಳನ್ನು ಈ ಕೆಳಗಿನಂತೆ ಹೆಸರಿಸಲಾಗುತ್ತದೆ.

೧. ನಾಗಾರತಿ,

೨. ಕೂರ್ಮಾರತಿ,

೩. ರಥಾರತಿ,

೪. ಚಂದ್ರದೀಪ,

೫. ಕುಂಭಾರತಿ,

೬. ಕೈತಾಲಿ,

೭. ಧೂಪಾರತಿ,

೮. ಕರ್ಪೂರಾರತಿ

ಈ ಆರತಿಗಳನ್ನು ಮಾಡುವುದರಿಂದ ದೇವರ ಮೇಲೆ ಯಾವುದೇ ಕೆಟ್ಟ ದೃಷ್ಟಿ ಬೀಳುವುದಿಲ್ಲ ಎಂಬ ನಂಬಿಕೆಯೂ ಹಿಂದೂ ಸಂಪ್ರದಾಯದಲ್ಲಿ ಇರುವುದು ಕಾಣುತ್ತದೆ.

೧. ನಾಗಾರತಿ:

ಶೈವ ದೇವಾಲಯಗಳಲ್ಲಿ ಬಳಸುವ ಪಂಚಾರತಿಯಲ್ಲಿ ಐದು ತಲೆಯ ನಾಗಶಿಲ್ಪದ ಆಕೃತಿ ಇರುವುದು ಕಾಣುತ್ತದೆ. ಆರತಿ ದೀಪದಲ್ಲಿ ಒಂದು ತಲೆಯ ಸರ್ಪವನ್ನು **ರಾಹು**ವೆಂದೂ, ಐದು ತಲೆಯ ಸರ್ಪವಾದರೆ ಅದನ್ನು **ಕೇತು** ಎಂದೂ ತಿಳಿಯಬೇಕು. ಈ ರೀತಿಯ ಪಂಚಾರತಿಯನ್ನು **ನಾಗ ಪಂಚಾರತಿ** ಎಂದೂ ಅಥವಾ **ನಾಗಾರತಿ** ಎಂದೂ ಅಥವಾ **ನಾಗ ದೀಪ** ಎಂದೂ ಕರೆಯುವುದುಂಟು.

---

೧೧. Choodamani Nandagopal and Vatsala Iyengar:

Temple treasures, Volume 1, Utensils and Ritual, ಪುಟ–೧೩೯

ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯದಲ್ಲಿ ಇರುವ ಪಂಚಾರತಿಯ ಮೇಲೆ ದಾನ ಮಾಡಿದವರನ್ನು ಕುರಿತು ಈ ರೀತಿಯಾಗಿ ಬರೆಯಲಾಗಿದೆ.

೧. ಕಳಲೆ ಕಾಂತಯ್ಯನ ಶೀವ

೨. ದಂಡಿಸಹಾ ತೂಕ ಗು ೧೬೭.೦೦

೩. ಟಿಪ್ಪೂಸುಲ್ತಾನ್ ಪಾಛಾರವರ ಧರ್ಮ[೧೨]

ಈ ರೀತಿಯಾಗಿ ದೇವಾಲಯಗಳಿಗೆ ದಾನ ನೀಡಿದಂತಹ ಪೂಜಾ ಸಾಮಗ್ರಿಗಳ ಮೇಲೆ ಹೆಸರನ್ನು ಬರೆಸಲಾಗುತ್ತದೆ.

ಒಂದು ತಲೆಯ ನಾಗಾರತಿಯ ದೀಪದ ರಚನೆಯನ್ನು ಚಿತ್ರ ೧೩ರಲ್ಲಿ ನೋಡಬಹುದು. ಈ ದೀಪದಲ್ಲಿ ಪಂಚಾರತಿಯನ್ನು ಬೆಳಗುವ ಅವಕಾಶವನ್ನು ಮಾಡಲಾಗಿದೆ. ಇನ್ನೊಂದು ನಾಗದೀಪವು (ಚಿತ್ರ ೧೪) ಪಂಚಾರತಿಯನ್ನು ಮಾಡಲು ಐದು ದೀಪಗಳನ್ನು ಹೊಂದಿರುವುದರ ಜೊತೆಗೆ ಪ್ರತಿಯೊಂದು ದೀಪದ ಮೇಲೆ ಹಾವಿನ ಹೆಡೆ ಇರುವಂತೆ ಚಿತ್ರಿಸಲಾಗಿದೆ. ಇದನ್ನು ಕ್ರಿಸ್ತ ಶಕ ಸುಮಾರು ಹದಿನೇಳನೆಯ ಶತಮಾನದಲ್ಲಿ ನಿರ್ಮಿಸಲಾಗಿದೆ.

೨. ಕೂರ್ಮಾರತಿ:

ಆರತಿಯ ದೀಪವು ಕೂರ್ಮದ ಅಂದರೆ ಆಮೆಯ ಆಕಾರದ ಶಿಲ್ಪವನ್ನು ಹೊಂದಿರುವುದರಿಂದ ಈ ಆರತಿಗೆ **ಕೂರ್ಮಾರತಿ** ಎಂದು ಹೆಸರು. ಇದನ್ನು ಹೆಚ್ಚಾಗಿ ಬೆಳ್ಳಿಯ ಲೋಹದಲ್ಲಿ ಮಾಡಿರುತ್ತಾರೆ. ಕೂರ್ಮಾಕಾರದಲ್ಲಿ ಇರುವ ನಾಲ್ಕು ಕಾಲುಗಳು ದೀಪವು ನಿಲ್ಲಲು ಆಧಾರವಾಗಿ ಉಪಯೋಗಿಸಲ್ಪಡುತ್ತವೆ. ಕೂರ್ಮಾರತಿಯಲ್ಲಿ ಆರತಿಯನ್ನು ಬೆಳಗಲು ಹಿಡಿಯಿದ್ದು ಅದು ಅಲಂಕಾರಯುತವಾಗಿರುತ್ತದೆ.

೩. ರಥಾರತಿ:

ರಥಾರತಿಯನ್ನು ರಥದಂತೆ ನಿರ್ಮಿಸಲಾಗಿರುತ್ತದೆ. ಇದು ದೇವಾಲಯದ ಗೋಪುರವನ್ನು ಹೋಲುವುದರಿಂದ **ಗೋಪುರಾರತಿ** ಎಂದೂ ಕರೆಸಿಕೊಳ್ಳುತ್ತದೆ. ಗೋಪುರಾರತಿಯಲ್ಲಿ ಕನಿಷ್ಠವಾಗಿ ಮೂರು ಹಂತಗಳಿರುತ್ತವೆ. ಮೂರಕ್ಕಿಂತ ಹೆಚ್ಚು ಹಂತಗಳು ಗೋಪುರಾರತಿಯಲ್ಲಿ ಇರುವುದೂ ಕಾಣುತ್ತದೆ. ಗೋಪುರಾಕೃತಿಯಲ್ಲಿ ಪ್ರತಿಯೊಂದು ಹಂತದಲ್ಲೂ ದೀಪಗಳ ಸಾಲು ಇರುತ್ತದೆ. ಆರತಿಯನ್ನು ಮಾಡಲು ಇದಕ್ಕೆ ಹಿಡಿಯನ್ನೂ ಸಹ ಅಳವಡಿಸಲಾಗಿರುತ್ತದೆ.

---

೧೨. Choodamani Nandagopal and Vatsala Iyengar:
Temple treasures, Volume 1, Utensils and Ritual, ಪುಟ–೧೪೦

೪. ಚಂದ್ರದೀಪ:

ಕರಾವಳಿಯ ಪ್ರದೇಶಗಳಲ್ಲಿ ಚಂದ್ರದೀಪಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ. ಚಂದ್ರದೀಪವು ಅರ್ಧ ಚಂದ್ರಾಕೃತಿಯ ರೂಪದಲ್ಲಿ ರಚಿಸಲ್ಪಟ್ಟಿರುವುದರಿಂದ ಇದಕ್ಕೆ **ಚಂದ್ರದೀಪ** ಎಂದು ಹೆಸರು. ಧಾರ್ಮಿಕ ಆಚರಣೆಗಳ ವಿಶೇಷ ಸಂದರ್ಭಗಳಲ್ಲಿ ಮಾತ್ರ ಇದನ್ನು ಬಳಸುತ್ತಾರೆ.

೫. ಕುಂಭಾರತಿ:

ಆರತಿಯ ಬಟ್ಟಲು ಕುಂಭದ (ಬಿಂದಿಗೆ) ಆಕಾರವನ್ನು ಹೊಂದಿದ್ದರೆ ಅದನ್ನು **ಕುಂಭಾರತಿ** ಎಂದು ಕರೆಯಲಾಗುತ್ತದೆ. ಭಾರತೀಯ ಸಂಪ್ರದಾಯದಲ್ಲಿ ಕುಂಭವು ಮಂಗಳಕರದ ಸಂಕೇತವಾಗಿದೆ. ಕುಂಭವು ಕಳಶವನ್ನೂ ಸಾಂಕೇತಿಸುತ್ತದೆ. ಚಿನ್ನ ಅಥವಾ ಬೆಳ್ಳಿಯಲ್ಲಿ ರಚಿಸಿರುವ ಕುಂಭಾರತಿಯು ಕರ್ನಾಟಕದ ಶೈವ ಮತ್ತು ವೈಷ್ಣವ ಸಂಪ್ರದಾಯದ ದೇವಾಲಯಗಳೆರಡರಲ್ಲೂ ದೊರೆಯುತ್ತವೆ. ಕುಂಭದ ಆಕಾರವನ್ನು ಹೊಂದಿರುವ ಈ ಆರತಿ ದೀಪಕ್ಕೆ ಮುಚ್ಚಳವೂ ಇರುತ್ತದೆ. ಇದರ ಕುಂಭದಲ್ಲಿ ಎಣ್ಣೆಯನ್ನು ಹಾಕಲಾಗಿರುತ್ತದೆ. ಇದರ ಮುಚ್ಚಳದಲ್ಲಿ ದೀಪವನ್ನಿಡಲು ಅನುಕೂಲವನ್ನು ಮಾಡಿರಲಾಗುತ್ತದೆ. ಚಿತ್ರ ೧೫ರಲ್ಲಿ ಇರುವ ಆರತಿಯ ರಚನೆಯು ಕುಂಭಾರತಿಯಾಗಿದೆ.

೬. ಕೈತಾಲಿ:

ಕೇರಳದಲ್ಲಿ ಕೈತಾಲಿಗಳು ಹೆಚ್ಚು ಬಳಕೆಯಲ್ಲಿವೆ. ಕೇರಳದ ಶೈಲಿಯಿಂದ ಕರ್ನಾಟಕದ ಕರಾವಳಿ ಪ್ರದೇಶವು ಪ್ರಭಾವಗೊಂಡಿರುವುದರಿಂದ ಈ ರೀತಿಯ ಕೈತಾಲಿಗಳು ಕರ್ನಾಟಕದಲ್ಲೂ ಬಳಕೆಯಲ್ಲಿರುವುದನ್ನು ನೋಡಬಹುದು. ಕೈತಾಲಿಯ ಮಧ್ಯದಲ್ಲಿ ಎಣ್ಣೆಯನ್ನು ಹಾಕಲು ಮಧ್ಯದಲ್ಲಿ ಜಾಗವಿರುತ್ತದೆ. ಸರ್ಪದ ತಲೆಯಾಕಾರದ ಹಿಡಿಯು ಇದಕ್ಕಿರುತ್ತದೆ. ಕೈತಾಲಿಗಳನ್ನು ದೀಪ ಹಚ್ಚುವುದರ ಜೊತೆಗೆ ಇತರೆ ದೀಪಗಳಿಗೆ ಎಣ್ಣೆ ಹಾಕಲು ಸಹಾ ಇದನ್ನು ಉಪಯೋಗಿಸಲಾಗುತ್ತದೆ. ಈ ರೀತಿಯ ದೀಪಗಳು ಕರ್ನಾಟಕದ ಕರಾವಳಿ ಪ್ರದೇಶಗಳಲ್ಲಿ ಬಳಸಲ್ಪಡುವುದನ್ನು ನೋಡಬಹುದು.

೭. ಧೂಪಾರತಿ:

ದೈವದ ಆರಾಧನೆಯಲ್ಲಿ ಧೂಪವನ್ನು ಹಾಕಿ ಪೂಜೆ ಸಲ್ಲಿಸುವುದು ದೇವಾಲಯಗಳ ಆಗಮ ಪದ್ಧತಿಗಳಲ್ಲಿ ಪ್ರಮುಖವಾದುದಾಗಿದೆ. ದೇವರಿಗೆ ದೀಪವನ್ನು ಬೆಳಗುವ ಮೊದಲು ದೇವಾಲಯದಲ್ಲಿ ಧೂಪವನ್ನು ಹಾಕಲಾಗುತ್ತದೆ. ಇದರಲ್ಲಿ ಧೂಪ ಮತ್ತು ದೀಪ ಎರಡೂ ಒಟ್ಟಿಗೆ ಇರುತ್ತವೆ. ಇದೇ ಕಾರಣದಿಂದ ಈ ಆರತಿಯನ್ನು **ಧೂಪಾರತಿ** ಅಥವಾ **ಧೂಪ-ದೀಪ ಸೇವೆ** ಎಂದೂ ಕರೆಯಲಾಗುತ್ತದೆ. ಧೂಪಾರತಿಯು ಕರ್ಪೂರಾರತಿಯಲ್ಲಿರುವ ರಚನೆಯನ್ನು ಹೋಲುತ್ತದೆ. ಇದರ ಬಟ್ಟಲು ಕರ್ಪೂರಾರತಿಯ ಬಟ್ಟಲಿಗಿಂತ ಹಿರಿದಾಗಿಯೂ ಅಗಲವಾಗಿಯೂ ಇರುತ್ತದೆ.

೮. ಕರ್ಪೂರಾರತಿ:

ಕರ್ಪೂರದ ಆರತಿಯನ್ನು ದೇವರಿಗೆ ಮಾಡುವುದು ಹಿಂದೂ ಧರ್ಮದ ಸಂಪ್ರದಾಯಗಳಲ್ಲಿ ಒಂದು. ಕರ್ಪೂರಾರತಿಯನ್ನು ಪೂಜೆಗೆ ಮೊದಲು ಮತ್ತು ಪೂಜೆಯ ನಂತರ ಮಾಡಲಾಗುತ್ತದೆ. ಕರ್ಪೂರವನ್ನು ಬೆಳಗಿ ಇದರಲ್ಲಿ ಆರತಿಯನ್ನು ಮಾಡುವುದರಿಂದ ಇದಕ್ಕೆ **ಕರ್ಪೂರಾರತಿ** ಎಂದು ಹೆಸರು. ಕ್ರಿಸ್ತ ಶಕ ಸುಮಾರು ಹದಿನೇಳನೆಯ ಶತಮಾನದಲ್ಲಿ ನಿರ್ಮಾಣವಾದ ಕರ್ಪೂರವನ್ನು ಬೆಳಗಿಸಿ ಆರತಿ ಮಾಡುವ ದೀಪವು ಚಿತ್ರ ೧೬ರಲ್ಲಿದೆ. ಇದರಲ್ಲಿ ಕರ್ಪೂರವನ್ನು ಇಡಲು ಬಟ್ಟಲು ಇದೆ. ಕರ್ಪೂರವನ್ನು ಬೆಳಗಿಸಿ ಆರತಿಯನ್ನು ಮಾಡಲು ಹಿಡಿಯೂ ಇದಕ್ಕಿರುತ್ತದೆ.

೨. ಕಾಲುದೀಪ:

ಕಾಲು ದೀಪಗಳು ಎಲ್ಲಾ ದೇವಾಲಯಗಳಲ್ಲೂ ಹೆಚ್ಚಾಗಿ ಬಳಸುವುದನ್ನು ನೋಡಬಹುದು. ಈ ಕಾಲುದೀಪಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸುಲಭವಾಗಿ ಕೊಂಡೊಯ್ಯಲು ಸಾಧ್ಯವಾಗುವಂತೆ ರಚಿಸಲಾಗಿರುತ್ತದೆ. ಇದರ ಕಂಬವನ್ನು ಕಾಲು ಎಂದು ಗುರುತಿಸಲಾಗುತ್ತದೆ. ಇದು ಪುಟ್ಟ ಕಂಬದ ಮೇಲಿರುವ ದೀಪವಾಗಿದೆ. ಕಂಬದ ಮೇಲಿನ ದೀಪದ ಬೆಳಕು ಹೆಚ್ಚು ಜಾಗವನ್ನು ಆವರಿಸುವುದು. ಇದೇ ಉದ್ದೇಶದಿಂದ ದೇವಾಲಯಗಳಲ್ಲಿ ಕಾಲುದೀಪಗಳನ್ನು ಹೆಚ್ಚಾಗಿ ಬಳಸುತ್ತಾರೆಂದು ತೋರುತ್ತದೆ. ಪ್ರಾಚೀನ ಕಾಲದಲ್ಲಿ ಬಹಳಷ್ಟು ದೀಪಗಳನ್ನು ಹೊಂದಿರುವ ಕಾಲುದೀಪಗಳನ್ನು ದೇವಾಲಯದ ನವರಂಗದಲ್ಲಿ ಇಡುತ್ತಿದ್ದರು. ಈ ಕಾಲುದೀಪವು ಮೂಲವಾಗಿ ನಂದಾದೀಪದಂತೆ ಉಪಯೋಗಿಸಲ್ಪಡುತ್ತಿತ್ತು ಎಂದು ತಿಳಿದು ಬರುತ್ತದೆ.

ಪ್ರಾಚೀನ ಕಾಲದಲ್ಲಿ ಕಾಲುದೀಪಕ್ಕೆ ಪುಟ್ಟ ದೀಪವಿರುತ್ತಿತ್ತು. ದೀಪವನ್ನು ಇಡುವ ಪಾತ್ರೆಯು ಬಟ್ಟಲಿನ ಆಕಾರವನ್ನು ಹೊಂದಿರುತ್ತಿತ್ತು. ಮೊದಲು ಕಲ್ಲಿನ ಪೀಠವನ್ನು ಹೊಂದಿರುತ್ತಿದ್ದ ಕಾಲುದೀಪವು ಕಾಲಕ್ರಮೇಣ ಮರದ ಪೀಠವನ್ನು ಅಳವಡಿಸಲಾಯಿತು. ಚಿತ್ರ ೧೭ರಲ್ಲಿ ಇರುವ ಕಾಲುದೀಪವು ದಕ್ಷಿಣ ಭಾರತದಲ್ಲಿ ಕ್ರಿಸ್ತ ಶಕ ಹತ್ತೊಂಬತ್ತನೆಯ ಶತಮಾನದಲ್ಲಿ ನಿರ್ಮಾಣವಾದುದು. ಈ ದೀಪದ ಕಾಲನ್ನು ಮರದಲ್ಲಿ ನಿರ್ಮಿಸಲಾಗಿದೆ. ಮೊದಲಿಗೆ ದೀಪಕ್ಕೆ ಅಳವಡಿಸುತ್ತಿದ್ದ ಪೀಠವು (ಕಂಬವು) ಆಯತಾಕಾರ, ಚೌಕಾಕಾರವನ್ನು ಇಲ್ಲವೇ ವೃತ್ತಾಕಾರವನ್ನು ಪಡೆದುಕೊಂಡಿರುತ್ತಿದ್ದವು.


ನಂತರದ ದಿನಗಳಲ್ಲಿ ಕಾಲುದೀಪದಲ್ಲಿರುವ ಕಂಬವನ್ನು ಇನ್ನೂ ಎತ್ತರ ಮಾಡಲಾಯಿತು. ಹೀಗೆ ಎತ್ತರಕ್ಕೆ ನಿರ್ಮಿಸಲಾದ ಕಂಬಗಳಿಗೆ ಅಲಂಕರಣಾ ಪ್ರಾಕಾರಗಳು ಸೇರಿಕೊಂಡವು. ಕಾಲುದೀಪದ ಕಂಬಗಳಿಗೆ ಗಂಟೆಯಕಾರದ ಇಲ್ಲವೇ ಆನೆ ಅಥವಾ ಸಿಂಹದ ಆಕಾರದ ಪೀಠಗಳನ್ನು ಅಳವಡಿಸಲಾಯಿತು. ಕಾಲುದೀಪದ ಕಂಬದ ಮೇಲಿನ ಸುತ್ತಳತೆಯು ಕಡಿಮೆಯಾಗಿರುತ್ತದೆ. ತುದಿಯಲ್ಲಿ ಒಂದು ದೀಪದ ಬಟ್ಟಲನ್ನು ಇಡಲು



ಚಿತ್ರ ೧೭



ಚಿತ್ರ ೧೮




ಚಿತ್ರ ೧೯



ಚಿತ್ರ ೨೦



ಚಿತ್ರ ೨೧



ಚಿತ್ರ ೨೨

ಮಾತ್ರ ಸ್ಥಳಾವಕಾಶ ಇರುತ್ತದೆ. ಲೋಹದಲ್ಲಿಯೂ ಕಾಲುದೀಪಗಳು ಇರುವುದನ್ನು ಕಾಣಬಹುದು. ಪ್ರಸ್ತುತ ಕಾಲದಲ್ಲಿ ಲೋಹದ ಕಾಲುದೀಪಗಳೇ ಹೆಚ್ಚಾಗಿ ಬಳಕೆಯಲ್ಲಿ ಇರುವುದನ್ನು ನೋಡಬಹುದು.

ದಕ್ಷಿಣ ಭಾರತದಲ್ಲಿ ಸುಮಾರು ಹದಿನೇಳನೆಯ ಶತಮಾನದಲ್ಲಿ ನಿರ್ಮಾಣವಾದ ಕಾಲುದೀಪವನ್ನು ಲೋಹದಲ್ಲಿ ತಯಾರಿಸಲಾಗಿದೆ (ಚಿತ್ರ ೧೮). ಈ ಕಾಲುದೀಪದಲ್ಲಿ ಒಂದು ದೀಪದ ಬಟ್ಟಲಿದ್ದು ಇದರಲ್ಲಿ ಐದು ದೀಪಗಳನ್ನು ಬೆಳಗಲು ಕೊಕ್ಕಿನ ರೀತಿಯ ರಚನೆಯನ್ನು ಮಾಡಲಾಗಿದೆ. ದೀಪದ ಮೇಲೆ ಹಂಸದ ಶಿಲ್ಪವಿದೆ. ಈ ಮಾದರಿಯಲ್ಲಿ ರಚನೆಗೊಂಡಿರುವ ಕಾಲುದೀಪಗಳು ಪ್ರಸ್ತುತ ದಿನಗಳಲ್ಲಿ ಇರುವುದು ಗಮನಕ್ಕೆ ಬರುತ್ತದೆ. ಇದೇ ರೀತಿಯ ಮತ್ತೊಂದು ಕಾಲುದೀಪದ (ಚಿತ್ರ ೧೯) ತುದಿಯಲ್ಲಿ ಇರುವ ಶಿಲ್ಪವು ವಿಶೇಷವಾಗಿ ರಚನೆಗೊಂಡಿದೆ. ಇದರಲ್ಲಿ ಅರ್ಧ ಭಾಗವು ಸ್ತ್ರೀಯನ್ನು ಹೊಂದಿದ್ದರೆ ಉಳಿದ ಅರ್ಧ ಹಂಸದಂತೆ ಶಿಲ್ಪ ರಚನೆಯು ಇರುವುದನ್ನು ನೋಡಬಹುದು. ಇದು ಕ್ರಿಸ್ತ ಶಕ ಸುಮಾರು ಹದಿನೆಂಟನೆಯ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ನಿರ್ಮಾಣವಾದ ಕಾಲುದೀಪವೊಂದರ ಮಾದರಿಯಾಗಿದೆ.

ಕೆಲವು ಕಾಲುದೀಪಗಳನ್ನು ಗಜಲಕ್ಷ್ಮಿ ದೀಪ ಎಂದೂ ಕರೆಯುತ್ತಾರೆ. ಕಾಲುದೀಪದಲ್ಲಿ ಗಜಲಕ್ಷ್ಮಿಯ ಶಿಲ್ಪವಿದ್ದರೆ ಅದು ಗಜಲಕ್ಷ್ಮಿ ದೀಪವಾಗುತ್ತದೆ. ಕ್ರಿಸ್ತ ಶಕ ಸುಮಾರು ಹದಿನೇಳನೆಯ ಶತಮಾನದಲ್ಲಿ ರಚಿಸಲ್ಪಟ್ಟ ಗಜಲಕ್ಷ್ಮಿ ದೀಪವು ಚಿತ್ರ ೨೦ರಲ್ಲಿ ಇರುವುದು. ಈ ದೀಪದಲ್ಲಿ ಕೆಳಗೆ ಪೀಠವಿದೆ. ಪೀಠದ ಮೇಲೆ ಆನೆಯ ಶಿಲ್ಪ ಇರುವುದನ್ನು ನೋಡಬಹುದು. ಆನೆಯ ಬೆನ್ನ ಮೇಲೆ ಕಾಲುದೀಪದ ಕಂಬದ ಭಾಗವಿದೆ. ಆನೆಯು ಈ ಕಾಲುದೀಪವನ್ನು ಬೆನ್ನ ಮೇಲೆ ಹೊತ್ತುಕೊಂಡಂತೆ ರಚನೆಯನ್ನು ಮಾಡಲಾಗಿದೆ. ಇದರ ಮೇಲೆ ಕಂಬದ ಸುತ್ತಲೂ ದೀಪವನ್ನು ಬೆಳಗಲು ಬಟ್ಟಲುಗಳನ್ನು ಜೋಡಿಸಲಾಗಿದೆ. ಇವುಗಳ ಮಧ್ಯದಲ್ಲಿ ಸ್ತ್ರೀಯ ಶಿಲ್ಪವಿದ್ದು ಇದರ ಮೇಲೆ ಒಂದು ದೀಪದ ಬಟ್ಟಲು ಮತ್ತು ಅದರ ಮಧ್ಯದಲ್ಲಿ ಪಕ್ಷಿಯ ಶಿಲ್ಪ ಇರುವುದನ್ನು ನೋಡಬಹುದು. ಇಂತಹ ಕಾಲುದೀಪಗಳು ಕ್ರಿಸ್ತ ಶಕ ಸುಮಾರು ಹದಿನೇಳನೆಯ ಶತಮಾನದ್ದಾಗಿವೆ. ಕಾಲುದೀಪದಲ್ಲಿ ಬಳಸಿದಂತೆ ಆನೆಯ ಶಿಲ್ಪಗಳನ್ನು ದೀಪಸ್ತಂಭಗಳಲ್ಲೂ ಅದರಲ್ಲು ಲೋಹದ ದೀಪಸ್ತಂಭಗಳಲ್ಲಿ ಬಳಸಿರುವುದನ್ನು ನೋಡಬಹುದು.

ಚಿತ್ರ ೨೧ರಲ್ಲಿ ಇರುವ ಕಾಲುದೀಪದಲ್ಲಿ ಆನೆಯ ಶಿಲ್ಪವಿದ್ದು ಆನೆಯ ಮೇಲೆ ಪುಟ್ಟ ಕಂಬವಿದೆ. ಈ ಕಂಬದ ಮೇಲೆ ದೀಪದ ಬಟಲು ಇರುವುದನ್ನು ನೋಡಬಹುದು. ಇದರ ಮಧ್ಯದಲ್ಲಿ ಪಕ್ಷಿಯೊಂದರ ಶಿಲ್ಪ ಇರುವಂತೆ ರಚಿಸಿರುವುದು ಕಾಣುತ್ತದೆ. ಈ ರೀತಿಯ ಕಾಲುದೀಪಗಳು ಕ್ರಿಸ್ತ ಶಕ ಹದಿನೆಂಟನೆಯ ಶತಮಾನದಲ್ಲಿ ನಿರ್ಮಿಸಲಾಗಿವೆ. ಚಿತ್ರ ೨೨ರಲ್ಲಿ ಇರುವ ಕಾಲುದೀಪದಲ್ಲಿ ಆನೆಯ ಶಿಲ್ಪವಿದ್ದು ಆನೆಯ ಮೇಲೆ ಚೌಕಾಕಾರದ

ಪುಟ್ಟ ಕಂಬವಿದೆ. ಇದರ ಮೇಲೆ ಗಣಪತಿಯ ಶಿಲ್ಪವು ಇರುವುದು ಕಾಣುತ್ತದೆ. ಗಣಪತಿಯ ಜೊತೆಗೆ ಲಿಂಗ ಮತ್ತು ನಾಗನ ಶಿಲ್ಪಗಳು ಸಹ ಇರುವುದನ್ನು ಕಾಣಬಹುದು. ಈ ಕಾಲುದೀಪದಲ್ಲಿ ಇರುವ ಆನೆಯ ಸೊಂಡಲಿನಲ್ಲಿ ಒಂದು ದೀಪದ ಬಟ್ಟಲು ಇದೆ.

ಇದೇ ಮಾದರಿಯಲ್ಲಿ ತಯಾರಾದ ಕಾಲುದೀಪಗಳನ್ನು ದಕ್ಷಿಣ ಭಾರತದಲ್ಲಿ ಕ್ರಿಸ್ತ ಶಕ ಹದಿನೇಳನೆಯ ಶತಮಾನದಲ್ಲಿ ನಿರ್ಮಿಸಿರುವುದು ತಿಳಿದು ಬರುತ್ತದೆ. ಇದರಂತೆ ಆನೆಯ ಶಿಲ್ಪದ ಮೇಲೆ ದೀಪವನ್ನು ಇರಿಸುವ ಪದ್ಧತಿಯು ಉತ್ತರ ಭಾರತದಲ್ಲಿಯೂ ಇರುವುದನ್ನು ನೋಡಬಹುದು. ಚಿತ್ರ ೨೩ ರಲ್ಲಿ ಇರುವ ಕಾಲುದೀಪವು ಉತ್ತರ ಭಾರತದ ಛತ್ತೀಸ್‌ಘಡ್‌ನಲ್ಲಿ ಬಳಸಲ್ಪಡುವ ಕಾಲುದೀಪದ ಮಾದರಿಗಳಲ್ಲೊಂದು. ಈ ಕಾಲುದೀಪದಲ್ಲಿಯೂ ವೃತ್ತಾಕಾರದ ಪೀಠದ ಮೇಲೆ ಆನೆಯ ಶಿಲ್ಪವಿದೆ. ಈ ಆನೆಯ ಮೇಲೆ ಎರಡು ಪಕ್ಷಿಗಳು ಇದ್ದು ಅವು ಒಂದರ ಮೇಲೆ ಒಂದು ನಿಂತಂತೆ ಶಿಲ್ಪ ರಚನೆಯನ್ನು ಮಾಡಲಾಗಿದೆ. ಈ ಕಾಲುದೀಪದ ತುದಿಯಲ್ಲಿ ದೀಪವನ್ನು ಬೆಳಗಲು ಅಲಂಕಾರದ ಬಟ್ಟಲನ್ನು ಜೋಡಿಸಿರುವುದನ್ನು ನೋಡಬಹುದು.

ಬಹಳಷ್ಟು ಲೋಹದ ಕಾಲುದೀಪಗಳಲ್ಲಿ ಹಂತಗಳಿದ್ದೂ ಪ್ರತಿ ಹಂತದಲ್ಲೂ ಕಮಲದ ಆಕಾರವನ್ನು ಹೊಂದಿರುವ ಬಟ್ಟಲುಗಳು ಇರುತ್ತವೆ. ಕಮಲದ ಪ್ರತಿ ದಳಗಳಲ್ಲೂ ಬತ್ತಿಯನ್ನು ಇಡಲು ಅನುಕೂಲ ಮಾಡಲಾಗಿರುತ್ತದೆ. ಕೆಲವು ಬಟ್ಟಲುಗಳನ್ನು ೨೫೦ ಗ್ರಾಂ ಗಿಂತಲೂ ಹೆಚ್ಚು ಎಣ್ಣೆ ಅಥವಾ ತುಪ್ಪವನ್ನು ಹೊಂದುವಂತೆ ರಚಿಸಲಾಗಿರುತ್ತದೆ[೧೩]. ಕೆಲವು ಕಾಲುದೀಪಗಳ ತುದಿಯಲ್ಲಿ ಕಳಸ ಇದ್ದರೆ ಕೆಲವು ಕಾಲುದೀಪಗಳಲ್ಲಿ ನವಿಲು, ಹಂಸದ ಶಿಲ್ಪಗಳಿರುತ್ತವೆ. ಚಿತ್ರ ೨೪ ರಲ್ಲಿ ಇರುವ ಕಾಲುದೀಪದಲ್ಲಿ ಕಮಲದ ಆಕಾರದ ಹಂತಗಳ ಜೊತೆಗೆ ತುದಿಯಲ್ಲಿ ಪಕ್ಷಿಯೊಂದರ ಶಿಲ್ಪವು ಇರುವುದನ್ನು ಕಾಣಬಹುದು.

ಕಮಲದ ಹಂತಗಳನ್ನು ಹೊಂದಿರುವ ಲೋಹದ ದೀಪಸ್ತಂಭಗಳು ದೊರೆಯುತ್ತವೆ. ಕಾಲುದೀಪ ಮತ್ತು ದೀಪಸ್ತಂಭಗಳಲ್ಲಿನ ಕೆಳಗೆ ಇರುವ ಕಮಲದ ರಚನೆಯು ಅಗಲವಾಗಿ ಇರುತ್ತದೆ. ಈ ರಚನೆಯನ್ನು ಕಂಬದ ಎತ್ತರಕ್ಕೂ ಹಂತಗಳಲ್ಲಿ ನಿರ್ಮಿಸಲಾಗಿದ್ದು ಮೇಲೆ ಹೋದಂತೆ ಕಮಲದ ವಿನ್ಯಾಸವು ಕಿರಿದಾಗುತ್ತಾ ಹೋಗುತ್ತದೆ.

ಕೆಲವು ಕಾಲುದೀಪಗಳಲ್ಲಿ ಮರದ ಕಂಬಗಳಿದ್ದು ಕಂಬದ ತುದಿಯಲ್ಲಿ ದೀಪಗಳನ್ನು ಬೆಳಗಲು ಲೋಹದ ರಚನೆಯನ್ನು ಮಾಡಿರುತ್ತಾರೆ. ಚಿತ್ರ ೨೫ರಲ್ಲಿ ಇರುವ ಕಾಲುದೀಪದಲ್ಲಿ ದೀಪದ ಬಟ್ಟಲುಗಳು ಇರುವಂತೆ ರಚಿಸಿರುವುದನ್ನು ನೋಡಬಹುದು. ಇದರ ಕಂಬವು ಮರದ ಚೌಕಾಕಾರದ ರಚನೆಯಾಗಿದ್ದು ಕಂಬದ ತುದಿಯಲ್ಲಿ ದೀಪವನ್ನು ಬೆಳಗಲು ಅಲಂಕೃತವಾದ ರಚನೆಯು ಇರುವುದು ಕಾಣುತ್ತದೆ. ಇದನ್ನು ಪುಟ್ಟ ಪುಟ್ಟ ಮನುಷ್ಯಾಕೃತಿಗಳನ್ನು ಬಳಸಿ ರಚಿಸಲಾಗಿದೆ.

---

೧೩. Choodamani Nandagopal and Vatsala Iyengar:
Temple treasures, Volume 1, Utensils and Ritual, ಪುಟ–೧೨೪




ಚಿತ್ರ ೨೩-೧




ಚಿತ್ರ ೨೩-೨



ಚಿತ್ರ ೨೪



ಚಿತ್ರ ೨೫



ಚಿತ್ರ ೨೬



ಚಿತ್ರ ೨೭

೩. ವೃಕ್ಷದೀಪ:

ಕಾಲುದೀಪದಲ್ಲಿ ಬಂದ ನಂತರದ ಕಲಾತ್ಮಕ ಬೆಳವಣಿಗೆಯ ಸ್ವರೂಪವು ವೃಕ್ಷದೀಪ ಎಂದು ಹೇಳಬಹುದು. ವೃಕ್ಷದೀಪವು ವಿಶೇಷವಾಗಿ ಲೋಹದಲ್ಲಿ ನಿರ್ಮಿಸಿದ್ದಾಗಿರುತ್ತದೆ. **ವೃಕ್ಷದೀಪ** ಎಂದರೆ ದೀಪಗಳ ವೃಕ್ಷ ಎಂದು ಅರ್ಥ. ದೇವಾಲಯಗಳಲ್ಲಿ ಇದನ್ನು ಅಲಂಕಾರಕ್ಕಾಗಿ ಬಳಸಲಾಗುತ್ತದೆ. ಮರದಲ್ಲಿ ಕೊಂಬೆಗಳಿರುವಂತೆ ವೃಕ್ಷದೀಪದಲ್ಲೂ ಕೊಂಬೆ ರೆಂಬೆಗಳಿರುತ್ತವೆ. ಪ್ರತಿ ಕೊಂಬೆಯಲ್ಲೂ ದೀಪವನ್ನು ಬೆಳಗಲು ವ್ಯವಸ್ಥೆಯನ್ನು ಮಾಡಿರುತ್ತಾರೆ. ಈ ರೀತಿಯ ವೃಕ್ಷ ದೀಪವನ್ನು ಚಿತ್ರ ೨೬ರಲ್ಲಿ ನೋಡಬಹುದಾಗಿದೆ. ಈ ವೃಕ್ಷ ದೀಪದ ಮಾದರಿಗಳು ಕ್ರಿಸ್ತ ಶಕ ಸುಮಾರು ಹದಿನೆಂಟನೆಯ ಶತಮಾನದಲ್ಲಿ ತಯಾರಾದವುಗಳಾಗಿವೆ. ಪ್ರಸ್ತುತ ದಿನಗಳಲ್ಲೂ ದೇವಾಲಯದ ಆವರಣದಲ್ಲಿ ವೃಕ್ಷದೀಪಗಳು ಬಳಕೆಯಲ್ಲಿ ಇರುವುದು ಕಾಣುತ್ತದೆ.

ಒಂದು ವಿಶಿಷ್ಟವಾದ ವೃಕ್ಷದೀಪದಲ್ಲಿ ಆನೆಯ ಶಿಲ್ಪವು ತನ್ನ ಸೊಂಡಿಲಿನಲ್ಲಿ ದೀಪಗಳನ್ನು ಎತ್ತಿ ಹಿಡಿದಂತೆ ಚಿತ್ರಿಸಲಾಗಿದೆ. ಆನೆಯ ಮೇಲೆ ಮಾಹುತ ಕುಳಿತಿದ್ದಾನೆ. ಕೊಂಬೆಗಳನ್ನೆಲ್ಲಾ ರಥದಂತೆ ನಿರ್ಮಿಸಿ ಈ ಕೊಂಬೆಗಳ ಮೇಲೆ ನವಿಲುಗಳು ಕುಳಿತಂತೆ ಚಿತ್ರಿಸಲಾಗಿದೆ. ಇನ್ನೊಂದು ವೃಕ್ಷದೀಪದ ಪ್ರತಿ ಹಂತದಲ್ಲಿ ಆರು ಕೊಂಬೆಗಳಿವೆ. ಅವುಗಳಲ್ಲಿ ಒಂದೊಂದು ದೀಪವನ್ನು ಇರಿಸಲು ಅವಕಾಶವನ್ನು ಮಾಡಲಾಗಿದೆ. ಇದರ ತುದಿಯಲ್ಲಿ ಕಮಲಾಕಾರದ ಬಟ್ಟಲು ಇದ್ದು ಇದರಲ್ಲಿ ದೀಪವನ್ನು ಹಿಡಿದು ನಿಂತಿರುವ ಕಿನ್ನರಿಯ ಶಿಲ್ಪವಿದೆ. ಈ ವೃಕ್ಷದೀಪವು ನಂಜನಗೂಡಿನ ನಂಜುಂಡೇಶ್ವರ ದೇವಾಲಯದಲ್ಲಿದೆ. ಇದು ಸುಮಾರು ೮ ಅಡಿ ಎತ್ತರವನ್ನು ಹೊಂದಿದೆ. ಹೀಗೆ ವೃಕ್ಷದೀಪಗಳಲ್ಲೂ ವೈವಿಧ್ಯಮಯವಾದ ರಚನೆಗಳು ದೊರೆಯುತ್ತವೆ.

೪. ದೀಪದಮಲ್ಲಿ:

ದೀಪವನ್ನು ಹಿಡಿದು ನಿಂತ ಹೆಣ್ಣಿನ ಆಕೃತಿಯನ್ನು ಹೊಂದಿರುವ ಶಿಲ್ಪಕ್ಕೆ **ದೀಪದಮಲ್ಲಿ** ಎಂದು ಹೆಸರು. ಇದನ್ನು ದೀಪಲಕ್ಷ್ಮಿ ಎಂದು ಕೂಡಾ ಕರೆಯುತ್ತಾರೆ. ಭಾರತದಲ್ಲಿ ನೆಲೆಸಿದ್ದ ರೋಮನ್ನರಾದ ಯವನರು ಕ್ರಿಸ್ತ ಶಕದ ಆರಂಭದಲ್ಲಿ ಮಾನವಾಕೃತಿಯಲ್ಲಿ ತಯಾರಿಸುತ್ತಿದ್ದ ದೀಪವು ಈ ದೀಪಲಕ್ಷ್ಮಿಯ ಕಲ್ಪನೆಗೆ ಮೂಲವಾಯಿತು[೧೪] ಎಂದು ತಿಳಿದು ಬರುತ್ತದೆ. ಇದನ್ನು ಕಂಡ ದಕ್ಷಿಣ ಭಾರತದ ಕುಶಲಕರ್ಮಿಗಳು ಈ ಶಿಲ್ಪಕ್ಕೆ ತಮ್ಮ ಸಾಂಪ್ರದಾಯಿಕ ಶೈಲಿಯ ಕೌಶಲ್ಯದ ಮೆರಗನ್ನು ನೀಡಿ ಇದರ ಅಂದವನ್ನು ಮತ್ತಷ್ಟು ಹೆಚ್ಚಿಸಿದರು ಎಂದರೆ ತಪ್ಪಾಗಲಾರದು.

ಸುಂದರ ದೇಹದ ಜೊತೆಗೆ ಅದರಲ್ಲಿ ಮುಗುಳು ನಗೆಯೊಂದಿಗೆ ಒಡವೆ

---

೧೪. ವತ್ಸಲಾ ಐಯ್ಯಂಗಾರ್: ಲೇಖನ– ದೀಪಗಳು, **ಕರಕುಶಲ ಕಲೆಗಳು**,
ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೨, ಪುಟ–೨೨೯

ವೈಢೂರ್ಯಗಳಿಂದ ಕೂಡಿದ ದೀಪದಮಲ್ಲಿ ಇನ್ನಷ್ಟು ಸುಂದರವಾಗಿ ಇರುವುದು ಕಾಣುತ್ತದೆ. ಅಲಂಕಾರಗಳಿಂದ ಕೂಡಿದ ಸುಂದರ ಶಿಲ್ಪವು ಇದಾಗಿದೆ. ಹೀಗೆ ರಚಿಸುವಾಗ ಕುಶಲಕರ್ಮಿಯು ತನ್ನ ಕೌಶಲ್ಯದ ಸಾಮರ್ಥ್ಯಕ್ಕೆ ತಕ್ಕಂತೆ ತನ್ನ ಪರಿಸರ, ತನ್ನ ಸಂಸ್ಕೃತಿಗೆ ತಕ್ಕಂತೆ ಈ ಶಿಲ್ಪದ ಮುಖ, ಕೇಶ ಶೈಲಿ, ದೇಹದ ರಚನೆ, ವಸ್ತ್ರವಿನ್ಯಾಸಗಳನ್ನು ಬದಲಾಯಿಸಿಕೊಂಡಿರುವುದು ತಿಳಿದು ಬರುತ್ತದೆ.

ಕೆಲವು ದೀಪದಮಲ್ಲಿ ಶಿಲ್ಪದಲ್ಲಿ ಸ್ತ್ರೀ ಶಿಲ್ಪವು ದೀಪವನ್ನು ದಾನ ಮಾಡುತ್ತಿರುವಂತೆಯೂ ಚಿತ್ರಿಸಲ್ಪಟ್ಟಿರುತ್ತದೆ. ಕೆಲವು ದೀಪದಮಲ್ಲಿಗಳಲ್ಲಿ ಜೈನರ ವಸ್ತ್ರಾಲಂಕಾರವು ಇರುವುದನ್ನು ನೋಡಬಹುದು. ಅದರಲ್ಲಿರುವ ಒಡವೆಗಳು, ವಸ್ತ್ರದ ನಿರಿಗೆಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಇಂತಹ ದೀಪದಮಲ್ಲಿಯನ್ನು ನೋಡಿದಾಗ ಇದನ್ನು ಮಾಡಿದ ಕುಶಲಕರ್ಮಿಯು ಜೈನಧರ್ಮಕ್ಕೆ ಸೇರಿದವನಿರಬೇಕೆಂದು ಸ್ಪಷ್ಟವಾಗಿ ತಿಳಿಯುತ್ತದೆ.

ಇತಿಹಾಸದಲ್ಲಿ ಆದ ಬದಲಾವಣೆಗೆ ತಕ್ಕಂತೆ ದೀಪದಮಲ್ಲಿಯ ಶೈಲಿ, ವಸ್ತ್ರ ವಿನ್ಯಾಸಗಳಲ್ಲಿ ಬದಲಾವಣೆಗಳು ಇರುವುದು ಕಂಡು ಬರುತ್ತದೆ. ಚಾಲುಕ್ಯರ ಕಾಲದ ದೀಪದಮಲ್ಲಿಯು ಸರಳತೆಯನ್ನು ಹೊಂದಿದ್ದು ಮುಖಭಾವಗಳು ಸುಂದರವಾಗಿ ರಚಿಸಲ್ಪಟ್ಟಿವೆ. ದೀಪಲಕ್ಷ್ಮಿಯ ಒಡವೆ ವೈಡೂರ್ಯಗಳಲ್ಲೂ ಆಯಾ ಕಾಲಕ್ಕೆ ತಕ್ಕಂತೆ ಬದಲಾವಣೆಗಳು ಇರುವುದು ಗಮನಕ್ಕೆ ಬರುತ್ತದೆ. ಬಾದಾಮಿ ಚಾಲುಕ್ಯರ ಕಾಲದಲ್ಲಿದ್ದಂತಹ ಕಂಠಹಾರ ಮತ್ತಿತರೆ ಆಭರಣಗಳು ಆಗ ನಿರ್ಮಾಣಗೊಂಡಂತಹ ದೀಪದಮಲ್ಲಿಯಲ್ಲಿ ಇರುವುದನ್ನು ನೋಡಬಹುದು. ಈ ಸಮಯದಲ್ಲಿ ರಚಿಸಿರುವ ದೀಪದಮಲ್ಲಿಗಳು ದುಂಡನೆಯ ಮುಖವನ್ನು ಹೊಂದಿದ್ದರೆ, ವಿಜಯನಗರ ಕಾಲದ ದೀಪದಮಲ್ಲಿಯು ಚೂಪಾದ ಗಲ್ಲ, ಕೋಲು ಮುಖ, ಚೂಪಾದ ಮೂಗನ್ನು ಹೊಂದಿದ್ದು ವಸ್ತ್ರ ವಿನ್ಯಾಸವು ವಿಜಯನಗರ ಕಾಲದ ಶೈಲಿಯನ್ನು ಹೋಲುತ್ತದೆ.

ಕೆಲವು ದೀಪದಮಲ್ಲಿ ಶಿಲ್ಪದಲ್ಲಿನ ಸ್ತ್ರೀಯು ಒಂದು ಕೈಯಲ್ಲಿ ದೀಪವನ್ನು ಹಿಡಿದಿದ್ದು ಮತ್ತೊಂದು ಕೈಯಲ್ಲಿ ಹಿಡಿದಿರುವ ಪಾತ್ರೆಯಿಂದ ಆ ದೀಪಕ್ಕೆ ಎಣ್ಣೆಯನ್ನು ಸುರಿಯುತ್ತಿರುವಂತೆ ರಚನೆಗೊಂಡಿರುವುದನ್ನು ನೋಡಬಹುದು. ಚಿತ್ರ ೨೭ರಲ್ಲಿ ಇರುವ ದೀಪದಮಲ್ಲಿಯ ಶಿಲ್ಪದಲ್ಲಿ ಕೆಳಗೆ ತೆಳ್ಳನೆಯ ಪೀಠವಿದೆ. ಪೀಠದ ಮೇಲೆ ಊರ್ಧ್ವ ಪದ್ಮದ ರಚನೆಯು ಇದೆ. ಇದರ ಮೇಲೆ ವಿಶೇಷವಾದ ಶಿಲ್ಪವಿದೆ. ಈ ಶಿಲ್ಪದಲ್ಲಿ ಇರುವ ಮುಖವು ಸಿಂಹದ ಮುಖವನ್ನು ಹೋಲುತ್ತಿದ್ದರೆ ಇದರ ಉಳಿದ ಭಾಗವು ಪಕ್ಷಿಯಂತೆ ರಚನೆಯಾಗಿರುವುದನ್ನು ನೋಡಬಹುದು. ಈ ಶಿಲ್ಪದ ಮೇಲೆ ದೀಪವನ್ನು ಹಿಡಿದಿರುವ ಸ್ತ್ರೀಯ ಶಿಲ್ಪವಿದೆ. ಇವಳ ಬಲ ಭುಜದ ಮೆಲೆ ಗಿಳಿಯೊಂದು ಕುಳಿತಂತೆ ಶಿಲ್ಪ ರಚನೆಯನ್ನು ಮಾಡಲಾಗಿದೆ. ಇದರಂತೆ ದೀಪದಮಲ್ಲಿಯ ಶಿಲ್ಪಗಳು ವಿಧ ವಿಧವಾದ ವಿನ್ಯಾಸಗಳೊಂದಿಗೆ ರಚನೆಗೊಂಡಿರುವುದನ್ನು ಕಾಣುತ್ತೇವೆ.

೫. ತೂಗುದೀಪ:

ದೇವಾಲಯದ ಮೇಲ್ಛಾವಣಿಯಿಂದ ತೂಗುಬಿಡಲು ಸಾಧ್ಯವಾಗುವಂತೆ ಸರಪಳಿಗಳನ್ನು ಹೊಂದಿರುವ ದೀಪಗಳು **ತೂಗುದೀಪಗಳು**. ಈ ದೀಪಗಳು ಭಾರತದ ಬಹುತೇಕ ಎಲ್ಲಾ ಧರ್ಮದ ದೇವಾಲಯಗಳಲ್ಲೂ ನೋಡಲು ಸಿಗುತ್ತದೆ. ಕ್ರಿಸ್ತ ಶಕ ಸುಮಾರು ೯ರಿಂದ ೧೦ನೆಯ ಶತಮಾನಕ್ಕೆ ಸೇರುವ ಕಂಚಿನ ತೂಗುದೀಪದಲ್ಲಿ ನೃತ್ಯ ಭಂಗಿಯಲ್ಲಿರುವ ಪುರುಷ ಮತ್ತು ಸ್ತ್ರೀಯರ ಶಿಲ್ಪಗಳು ಇವೆ[೧೫]. ತೂಗುದೀಪದ ಪ್ರಾಚೀನತೆಯನ್ನು ಸಾರುವ ಶಾತವಾಹನರ ಕಾಲದಲ್ಲಿ ನಿರ್ಮಾಣಗೊಂಡಿರುವ ಅನೇಕ ತೂಗುದೀಪಗಳು ಮಹಾರಾಷ್ಟ್ರದಲ್ಲಿ ದೊರೆತಿರುವುದು ತಿಳಿದು ಬರುತ್ತದೆ.

ಮುಂಬೈನ ಪ್ರಿನ್ಸ್ ಆಫ್ ವೇಲ್ಸ್ ಮ್ಯಾಸಿಯಂನ ಜೋಗೇಶ್ವರಿ ಗುಹೆಯಲ್ಲಿರುವ ತೂಗುದೀಪವನ್ನು ಚಾಲುಕ್ಯರು ಕ್ರಿಸ್ತ ಶಕ ೧೨ರಲ್ಲಿ ನಿರ್ಮಿಸಿದ್ದಾರೆ ಎಂದು ತಿಳಿದು ಬರುತ್ತದೆ[೧೬]. ಈ ತೂಗುದೀಪದಲ್ಲಿ ರಾಜಕುಮಾರನೊಬ್ಬನು ಆನೆಯ ಮೇಲೆ ಸವಾರಿ ಮಾಡುತ್ತಿದ್ದಾನೆ. ಇವನಿಗೆ ಚಾಮರವನ್ನು ಬೀಸುತ್ತಿರುವ ಹೆಣ್ಣು ಶಿಲ್ಪವೊಂದು ಇದೆ. ಅದರ ಮೇಲೆ ಸರಪಳಿ, ಸರಪಳಿಯ ಉದ್ದಕ್ಕೂ ಅಲ್ಲಲ್ಲಿ ವಾದ್ಯವನ್ನು ನುಡಿಸುತ್ತಿರುವವರು ಮತ್ತು ನರ್ತಕಿಯರ ಶಿಲ್ಪಗಳು ಇರುವುದು ಕಾಣುತ್ತದೆ. ಈ ದೀಪದಲ್ಲಿನ ಆನೆಯ ಟೊಳ್ಳು ದೇಹದಿಂದ ದೀಪಕ್ಕೆ ಹನಿ ಹನಿಯಾಗಿ ಎಣ್ಣೆಯು ಬೀಳುವಂತೆ ವ್ಯವಸ್ಥೆಯನ್ನು ಮಾಡಲಾಗಿದೆ.

ಹೊಯ್ಸಳರ ಕಾಲದಲ್ಲಿಯೂ ಕಂಚಿನ ಶಿಲ್ಪಗಳನ್ನು ತಯಾರಿಸುತ್ತಿದ್ದರು. ಶೈವ ಸಂಪ್ರದಾಯದ ದೇವಾಲಯಗಳಲ್ಲಿ ಶಿವನ ವಾಹನವಾದ ನಂದಿಯ ಶಿಲ್ಪವನ್ನು ತೂಗುದೀಪಗಳಲ್ಲಿ ಬಳಸಿರುವುದನ್ನು ನೋಡಬಹುದು. ಈ ರೀತಿಯ ತೂಗುದೀಪಗಳಲ್ಲಿ ನಂದಿಯ ಆಕಾರವನ್ನು ಎಣ್ಣೆಯ ಬಟ್ಟಲಿನಂತೆ ಬಳಸಿಕೊಳ್ಳಲಾಗುತ್ತದೆ. ಇನ್ನೂ ಅನೇಕ ಶಿಲ್ಪಗಳನ್ನು ಹೊಂದಿರುವ ವಿವಿಧ ಮಾದರಿಯ ತೂಗುದೀಪಗಳನ್ನು ನೋಡಬಹುದು. ಇವುಗಳಲ್ಲಿ ಹಂಸ, ನವಿಲು, ನಂದಿ, ಗಜಲಕ್ಷ್ಮಿ, ಓಂ ಚಿಹ್ನೆ ಮುಂತಾದ ಹಿಂದೂ ಸಂಪ್ರದಾಯಕ್ಕೆ ಸೇರಿದಂತಹ ಇನ್ನಿತರೆ ಪ್ರಾಣಿ ಪಕ್ಷಿಗಳನ್ನು, ದೇವಾನುದೇವತೆಗಳನ್ನು ಪ್ರತಿಬಿಂಬಿಸುವ ಶಿಲ್ಪಗಳು ತೂಗುದೀಪದ ರಚನೆಯಲ್ಲಿ ಇರುತ್ತವೆ.

ತೂಗುದೀಪವು ನಂದಾದೀಪದಂತೆ ಬಳಸಲ್ಪಡುವ ಸಂದರ್ಭದಲ್ಲಿ ತೂಗುದೀಪದಲ್ಲಿ ಒಂದು ದೀಪವನ್ನು ಇಡಲು ಮಾತ್ರ ಅವಕಾಶವಿರುತ್ತದೆ. ಅಲಂಕಾರಕ್ಕಾಗಿ ಬಳಸುವ ತೂಗುದೀಪಗಳಲ್ಲಿ ಅದರ ಸರಪಳಿಯ ಉದ್ದಕ್ಕೂ ದೀಪಗಳನ್ನು ಅಳವಡಿಸಲಾಗಿರುತ್ತದೆ. ನಂದಾದೀಪದಂತಹ ತೂಗುದೀಪದಲ್ಲಿ ಹನಿ ಹನಿಯಾಗಿ ಎಣ್ಣೆ ಅಥವಾ ತುಪ್ಪ ಬೀಳುವ ವ್ಯವಸ್ಥೆಯನ್ನು ಮಾಡಿರುತ್ತಾರೆ.

---

೧೫. ವತ್ಸಲಾ ಐಯ್ಯಂಗಾರ್: ಲೇಖನ- ದೀಪಗಳು, **ಕರಕುಶಲ ಕಲೆಗಳು**, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೨, ಪುಟ-೨೨೯

೧೬. The great tradition- **Indian Bronzes Master pieces**, ಪುಟ-೭೨

ಕಲಾವಿದನ ಕಲಾ ಕೌಶಲ್ಯಕ್ಕೆ ತಕ್ಕಂತೆ ತೂಗುದೀಪದ ಮಾದರಿಗಳಲ್ಲಿ ಬದಲಾವಣೆಗಳನ್ನು ನೋಡಬಹುದು. ಅವು ಆಯತಾಕಾರ, ವೃತ್ತಾಕಾರ ಮುಂತಾದ ಆಕಾರಗಳನ್ನು ಹೊಂದಿರುವುದರ ಜೊತೆಗೆ ಅಲಂಕಾರದಿಂದ ಕೂಡಿರುತ್ತದೆ. ತೂಗುದೀಪದಲ್ಲಿ ದೀಪದ ಮೇಲೆ ಸರಪಳಿಗಳನ್ನು ಅಳವಡಿಸಿರುತ್ತಾರೆ. ಕೆಲವು ತೂಗುದೀಪಗಳಲ್ಲಿ ಸರಪಳಿಯ ಬದಲು ಹಿತ್ತಾಳೆಯ ದಂಡ (ಕೋಲು)ವನ್ನು ಅಳವಡಿಸಿರುತ್ತಾರೆ.


ಚಿತ್ರ ೨೮ರಲ್ಲಿ ಇರುವ ತೂಗುದೀಪದಲ್ಲಿ ದೀಪದ ಬಟ್ಟಲು ಇದ್ದು ಇದರ ಮೇಲೆ ಕುಂಭದಂತಹ ರಚನೆಯು ಇರುವುದು ಕಾಣುತ್ತದೆ. ಕುಂಭದ ಮೆಲೆ ಹಂಸದ ಶಿಲ್ಪವಿದೆ. ಇದನ್ನು ತೂಗು ಬಿಡಲು ಅನುಕೂಲವಾಗುವಂತೆ ಸರಪಳಿಯನ್ನು ಅಳವಡಿಸಲಾಗಿದೆ. ಹನಿ ಹನಿಯಾಗಿ ಎಣ್ಣೆ ಅಥವಾ ತುಪ್ಪ ದೀಪದ ಬಟ್ಟಲಿಗೆ ಬೀಳಲು ಕುಂಭವು ಇಲ್ಲಿ ಸಹಕಾರಿಯಾಗುತ್ತದೆ. ಈ ದೀಪಗಳನ್ನು ನಂದಾ ದೀಪದಂತೆ ಬಳಸಲಾಗುತ್ತದೆ. ಚಿತ್ರ ೨೯ರಲ್ಲಿ ಇರುವ ತೂಗುದೀಪದಲ್ಲಿ ದೀಪದ ಬಟ್ಟಲನ್ನು ಶಂಖದ ರೀತಿ ವಿನ್ಯಾಸವನ್ನು ಮಾಡಲಾಗಿದೆ. ಇದರಲ್ಲಿ ಎಣ್ಣೆಯನ್ನು ಇಡಲು ಅವಕಾಶವನ್ನು ಮಾಡಿರುವುದು ಕಾಣುತ್ತದೆ. ಇದರ ಮೇಲೆ ಸರಪಳಿಯಿದ್ದು ಅಲ್ಲಿ ಮತ್ತೊಂದು ದೀಪವನ್ನು ಬೆಳಗಲು ಅನುಕೂಲವನ್ನು ಮಾಡಲಾಗಿದೆ. ಈ ಮಾದರಿಯ ತೂಗುದೀಪಗಳು ಕ್ರಿಸ್ತ ಶಕ ಸುಮಾರು ಹದಿನೇಳನೆಯ ಶತಮಾನಕ್ಕೆ ಸೇರುತ್ತವೆ.

ಕೆಲವು ತೂಗುದೀಪಗಳನ್ನು ಕಮಲದೀಪ ಎಂದೂ ಕರೆಯುತ್ತಾರೆ. ಈ ತೂಗುದೀಪಗಳಲ್ಲಿ ದೀಪದ ಬಟ್ಟಲುಗಳು ಕಮಲದ ದಳಗಳಂತೆ ರಚನೆಗೊಂಡಿರುವುದನ್ನು ಕಾಣುತ್ತೇವೆ. ಚಿತ್ರ ೩೦ ರಲ್ಲಿ ಇರುವ ತೂಗುದೀಪವೂ ಕಮಲದೀಪವಾಗಿದೆ. ಈ ತೂಗುದೀಪದಲ್ಲಿ ಕಮಲದ ಆಕಾರವನ್ನು ಹೊಂದಿರುವ ಬಟ್ಟಲು ಇದೆ. ಇದು ಆರು ದಳವನ್ನು ಹೊಂದಿರುವ ಕಮಲದ ರಚನೆಯಾಗಿದೆ. ಪ್ರತಿ ದಳಗಳಲ್ಲೂ ದೀಪವನ್ನು ಬೆಳಗಲು ಅವಕಾಶವನ್ನು ಮಾಡಲಾಗಿದೆ. ಇದರ ಮಧ್ಯದಲ್ಲಿ ಪಕ್ಷಿಯ ಶಿಲ್ಪವಿದ್ದು ದೀಪವನ್ನು ತೂಗುಬಿಡಲು ಇದರ ಮೇಲೆ ಸರಪಳಿಯನ್ನು ಹಾಕಲಾಗಿದೆ. ಈ ರೀತಿಯ ತೂಗುದೀಪಗಳು ಕ್ರಿಸ್ತ ಶಕ ಸುಮಾರು ಹದಿನೇಳನೆಯ ಶತಮಾನದ ರಚನೆಗಳಲ್ಲಿ ಒಂದಾಗಿದೆ.


ಕೆಲವು ತೂಗುದೀಪಗಳಲ್ಲಿ ಸರಪಳಿಯ ಉದ್ದಕ್ಕೂ ಶಿಲ್ಪಗಳನ್ನು ಅಲಂಕಾರಿಕವಾಗಿ ಬಳಸಲಾಗಿರುತ್ತದೆ. ಕೊಡಗು ಜಿಲ್ಲೆಯ ಭಾಗಮಂಡಲದ ಭಗಂಡೇಶ್ವರ ದೇವಾಲಯದ ಆವರಣದಲ್ಲಿ ಇರುವ ಸುಬ್ರಹ್ಮಣ್ಯ ಮತ್ತು ವಿಷ್ಣುವಿನ ದೇವಾಲಯಗಳ ದ್ವಾರದ ಎರಡೂ ಬದಿಗಳಲ್ಲಿ ತೂಗುದೀಪಗಳಿವೆ (ಚಿತ್ರ ೩೧). ಈ ತೂಗುದೀಪಗಳ ಸರಪಳಿಯ ಉದ್ದಕ್ಕೂ ದೀಪಗಳನ್ನು ಬೆಳಗಲು ರಚನೆಯನ್ನು ಮಾಡಿರುವುದು ಕಾಣುತ್ತದೆ.



ಚಿತ್ರ ೨೮



ಚಿತ್ರ ೨೯



ಚಿತ್ರ ೩೦



ಚಿತ್ರ ೩೧



ಚಿತ್ರ ೩೨



ಚಿತ್ರ ೩೩

೬. ನಂದಾದೀಪ:

ಮೊದಲು ಮನೆಯಲ್ಲಿ ಪ್ರತಿದಿನವೂ ಯಜ್ಞ ಹೋಮಗಳು ನಡೆಯುತ್ತಿದ್ದರಿಂದ ನಿರಂತರವಾಗಿ ಉರಿಯುತ್ತಿರುವ ಯಜ್ಞಕುಂಡಗಳಿರುತ್ತಿದ್ದವು. ಯಜ್ಞಕುಂಡದ ಸಂಕೇತವಾಗಿ ಅದರ ಬದಲು ಎಂದೂ ಆರದ ನಂದಾದೀಪವನ್ನು ಬೆಳಗುವ ಪರಿಪಾಠವಾಯಿತು[೧೭]. ಅಗ್ನಿಯ ಮುಖಾಂತರ ಐಶ್ವರ್ಯದ ಅಧಿದೇವತೆಯಾದ ಲಕ್ಷ್ಮಿಯನ್ನು ಆರಾಧಿಸುವುದೂ ಒಂದು ಉದ್ದೇಶ. ಅಗ್ನಿಯು ಬ್ರಹ್ಮ, ವಿಷ್ಣು, ಈಶ್ವರರ ಸ್ವರೂಪವಾಗಿದೆ[೧೮] ಎಂಬ ನಂಬಿಕೆಯು ಭಾರತೀಯರಲ್ಲಿ ಇದೆ.

ಕೆಲವು ನಂದಾದೀಪಗಳಲ್ಲಿ ದೇವಾನುದೇವತೆಯರ ಶಿಲ್ಪಗಳನ್ನು ಅಳವಡಿಸಿರುವುದನ್ನು ಕಾಣುತ್ತೇವೆ. ನಂದಾದೀಪದಲ್ಲಿ ವಿಶೇಷವಾದ ದೀಪ ಎಂದರೆ ಗಜಲಕ್ಷ್ಮಿ ದೀಪ. ಚಿತ್ರ ೩೨ ರಲ್ಲಿ ಗಜಲಕ್ಷ್ಮಿ ದೀಪವಿದೆ. ಈ ದೀಪದಲ್ಲಿ ದೊಡ್ಡ ಬಟ್ಟಲಿದ್ದು ದೀಪದ ಹಿಂದೆ ಗಜಲಕ್ಷ್ಮಿಯ ಶಿಲ್ಪವು ಇರುವುದನ್ನು ಕಾಣಬಹುದು. ಗಜಲಕ್ಷ್ಮಿಯ ಶಿಲ್ಪದ ಎರಡೂ ಬದಿಗಳಲ್ಲಿ ಆನೆಯ ಶಿಲ್ಪಗಳಿದ್ದು ಇವು ಗಜಲಕ್ಷ್ಮಿಗೆ ನಮಸ್ಕರಿಸುತ್ತಿದ್ದಂತೆ ರಚಿಸಿರುವುದು ಕಾಣುತ್ತದೆ. ಉಬ್ಬುಶಿಲ್ಪದಂತೆ ಇದರ ರಚನೆಯನ್ನು ಮಾಡಲಾಗಿದೆ. ಗಜಲಕ್ಷ್ಮಿಯ ಸುತ್ತಲೂ ಪ್ರಭಾವಳಿಯಂತೆ ರಚನೆ ಇದ್ದು ಇದರ ಮಧ್ಯದಲ್ಲಿ ಕೀರ್ತಿಮುಖದ ಶಿಲ್ಪ ರಚನೆಯು ಇದೆ.

ದೇವಾಲಯಗಳಲ್ಲಿರುವ ತೂಗುದೀಪ, ದೀಪದಮಲ್ಲಿ ಹಾಗೂ ಕಾಲುದೀಪಗಳು ಕೆಲವೊಮ್ಮೆ ನಂದಾದೀಪದಂತೆ ಕಾರ್ಯನಿರ್ವಹಿಸುತ್ತವೆ. ನಂದಾ ದೀಪವೆಂದರೆ ಎಂದೂ ನಂದದ, ಆರದ ದೀಪ ಎಂದು ಅರ್ಥ. ಒಮ್ಮೆ ಹೊತ್ತಿಸಿದ ದೀಪವು ಸೂರ್ಯ ಚಂದ್ರರಿರುವವರೆಗೂ ಬೆಳಗುತ್ತಲೇ ಇರಬೇಕೆಂಬ ಉದ್ದೇಶದಿಂದ ನಂದಾದೀಪವನ್ನು ಬೆಳಗುತ್ತಾರೆ. ಈ ದೀಪವು ಹಗಲೂ ರಾತ್ರಿ ನಿರಂತರವಾಗಿ ಬೆಳಗುತ್ತಲೇ ಇರುತ್ತದೆ. ನಂದಾದೀಪವನ್ನು ಹರಕೆಯ ದೀಪ ಎಂದೂ ಹೇಳುತ್ತೇವೆ. ಭಕ್ತಾದಿಗಳು ಯಾವುದೋ ಒಂದು ಕಾರ್ಯ ಕೈಗೂಡುವ ಸಲುವಾಗಿ ನಂದಾದೀಪವು ಎಂದೆಂದೂ ಆರದಂತಿರಲು ಅದಕ್ಕೆ ಎಣ್ಣೆಯನ್ನೋ ಅಥವಾ ತುಪ್ಪವನ್ನೋ ದಾನ ಮಾಡುವುದಾಗಿ ದೇವರಿಗೆ ಹರಕೆಯನ್ನು ಹೊತ್ತಿರುತ್ತಾರೆ. ಅದರಂತೆ ಕಾರ್ಯ ಸಾಧನೆಯಾದ ಪಕ್ಷದಲ್ಲಿ ತಾವು ಅಂದುಕೊಂಡಂತೆ ದಾನವನ್ನು ಮಾಡುವುದು ಪದ್ಧತಿಯಾಗಿದೆ.

ಪ್ರಾಚೀನ ಇತಿಹಾಸದ ಕಾಲದಲ್ಲಿ ನಂದಾದೀಪಕ್ಕೆ ದಾನವಾಗಿ ನೀಡಿದಂತಹ ರಾಜಮಹಾರಾಜರನ್ನು ಕುರಿತು ಶಾಸನಗಳು ದೊರೆಯುತ್ತವೆ. ಸೂರ್ಯೋದಯದಿಂದ

---

೧೭. ಎಸ್.ಕೆ. ಹರಿಹರೇಶ್ವರ: ಲೇಖನ– **ಅಗ್ನಿ, ಲಕ್ಷ್ಮಿ, ಶುಕ್ರ ಮತ್ತು ದೀಪ,** ಮಲ್ಲಾರ ಮಾಸಪತ್ರಿಕೆ, ಮೇ ೨೦೦೫, ಪುಟ–೧೬


೧೮. ಎಸ್.ಕೆ. ಹರಿಹರೇಶ್ವರ: ಲೇಖನ– **ಅಗ್ನಿ, ಲಕ್ಷ್ಮಿ, ಶುಕ್ರ ಮತ್ತು ದೀಪ,** ಮಲ್ಲಾರ ಮಾಸಪತ್ರಿಕೆ, ಮೇ ೨೦೦೫, ಪುಟ–೧೭



ಚಿತ್ರ ೩೪-೧



ಚಿತ್ರ ೩೪-೨



ಚಿತ್ರ ೩೫

೯. ದೀವಟಿಗೆಗಳು:

ಭಾರತೀಯ ದೇವಾಲಯಗಳು ಕೇವಲ ಧಾರ್ಮಿಕ ಆಚರಣೆಗೆ ಅಷ್ಟೇ ಅಲ್ಲದೆ ಸಾಮಾಜಿಕ ಒಂದುಗೂಡುವಿಕೆಗೂ ಕೇಂದ್ರ ಬಿಂದುವಾಗಿರುತ್ತಿತ್ತು. ಆದಕಾರಣ ಬೆಳಕಿನ ಅವಶ್ಯಕತೆಯು ದೇವಾಲಯಗಳ ಆವರಣದಲ್ಲಿ ಇದ್ದುದರಿಂದ ಬೆಳಕನ್ನು ಕೊಡುವ ದೀಪಗಳು ಪ್ರಮುಖ ಪಾತ್ರವನ್ನು ಪಡೆಯಿತು. ಹಿಂದಿನ ಕಾಲದಲ್ಲಿ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳಲು ರಾಜಮಹಾರಾಜರು ಆಗಮಿಸುತ್ತಿದ್ದರು. ಅವರಿಗೆ ದಾರಿದೀಪವನ್ನಾಗಿ ದೀವಟಿಗೆಗಳನ್ನು ಉಪಯೋಗಿಸುತ್ತಿದ್ದರು. ಮೊದಲಿಗೆ ಮರದ ಕೋಲಿಗೆ ಬಟ್ಟೆಯನ್ನು ಸುತ್ತಿ ಅದನ್ನು ಎಣ್ಣೆಯಲ್ಲಿ ಅಥವಾ ತುಪ್ಪದಲ್ಲಿ ಅದ್ದಿ ತೆಗೆದು ಬೆಂಕಿಯನ್ನು ಹಚ್ಚಿ ಬೆಳಕಿಗಾಗಿ ಉಪಯೋಗಿಸುತ್ತಿದ್ದರು. ಇದು ಬಹಳ ಸಮಯ ಬೆಳಕನ್ನು ನೀಡುತ್ತಿತ್ತು.

ಕಾಲಕ್ರಮೇಣ ಮರದ ನೀಳ ಕೋಲಿಗೆ ಬದಲಾಗಿ ಕಲಾತ್ಮಕವಾದ ಮರದ ಕೆತ್ತನೆಯನ್ನು ಹೊಂದಿದ ದೀವಟಿಗೆಗಳು ಪ್ರಚಲಿತಕ್ಕೆ ಬಂದವು. ದೀವಟಿಗೆಯಲ್ಲಿ ವಿಶೇಷವಾದುದು ಎಂದರೆ ಪಂಚದೀವಟಿಗೆ[೨೦]. ಇದಕ್ಕೆ ತ್ರಿಶೂಲದ ರೀತಿ ಐದು ಶಿಖೆಗಳಿರುತ್ತವೆ. ದೇವರ ಮೆರವಣಿಗೆಯನ್ನು ಮಾಡುವಾಗಲೂ ದೀವಟಿಗೆಗಳನ್ನು ಬಳಸಲಾಗುತ್ತದೆ. ಈ ಮೆರವಣಿಗೆಯು ದೇವಾಲಯದ ಆವರಣ, ಊರಿನ ಪ್ರಮುಖ ರಸ್ತೆಗಳಲ್ಲಿ ನಡೆಯುತ್ತದೆ. ಇಲ್ಲಿ ಬಳಸುವ ದೀವಟಿಗೆಗಳು ಹೆಚ್ಚಾಗಿ ಮರದ್ದಾಗಿರುತ್ತವೆ.

ಕೆಲವು ದೀವಟಿಗೆಗಳನ್ನು ಪಂಜು ಎಂದು ಕರೆಯುತ್ತಾರೆ. ಈ ಪಂಜಿನ ತುದಿಯಲ್ಲಿ ಬೆಂಕಿಯನ್ನು ಇಡಲು ಬಟ್ಟಲಿನ ಆಕಾರದ ರಚನೆಯು ಇರುತ್ತದೆ. ಚಿತ್ರ ೩೩ರಲ್ಲಿ ಇರುವ ಪಂಜಿನ ಮಾದರಿಗಳನ್ನು ಹೆಚ್ಚಾಗಿ ಲೋಹದಲ್ಲಿ ತಯಾರಿಸಲಾಗಿರುತ್ತದೆ. ಕೆಲವು ದೇವಾಲಯಗಳ ಆವರಣದಲ್ಲಿ ದೇವ ಮೂರ್ತಿಯನ್ನು ಮೆರವಣಿಗೆ ಮಾಡುವ ಸಂದರ್ಭದಲ್ಲಿ ಈಗಲೂ ಪಂಜನ್ನು ಬಳಸುತ್ತಾರೆ. ಕೇವಲ ರಾತ್ರಿಯ ಹೊತ್ತು ಮಾತ್ರವಲ್ಲ ಹಗಲಿನಲ್ಲೂ ಪಂಜನ್ನು ಬಳಸುವುದನ್ನು ದೇವಾಲಯಗಳ ಉತ್ಸವಗಳಲ್ಲಿ ನೋಡಬಹುದು.

ಭಾರತದಲ್ಲಿ ಸಾಂಪ್ರದಾಯಿಕ ದೀಪಗಳು ವಿವಿಧ ಮಾದರಿಗಳಲ್ಲಿ ವಿವಿಧ ಹೆಸರುಗಳಿಂದ ಗುರುತಿಸಲ್ಪಡುತ್ತವೆ. ಹಿಂದೂ ಧರ್ಮದ ದೀಪಗಳ ಹಬ್ಬವಾದ ದೀಪಾವಳಿಯಂದು ಆಕಾಶ-ದೀಪವನ್ನು ತೂಗುಬಿಡುವುದನ್ನು ಈಗಲೂ ನೋಡಬಹುದು. ಶ್ರಾವಣ ಮಾಸದ ಶುಕ್ರವಾರಗಳಂದು ಹಿಟ್ಟಿನಿಂದ ಮಾಡಿದ ದೀಪಗಳನ್ನು ಹಚ್ಚುತ್ತಾರೆ. ಆಶಾಡ ಮಾಸದ ಅಮಾವಾಸ್ಯೆಯಂದು ವರ್ಷ ಪೂರ್ತಿ ಬೆಳಗಿಸಿದ್ದ ದೀಪಗಳಿಗೆ ದೀಪವನ್ನು ಬೆಳಗುವ ಮುಖಾಂತರ ಗೌರವವನ್ನು ಸೂಚಿಸಲಾಗುತ್ತದೆ. ಇದನ್ನು ರಾತ್ರಿಯಲ್ಲಿ ಮಾತ್ರ ಹಚ್ಚುತ್ತಾರೆ.

---

೨೦. They are five- pronged and are called Pancha Divatige.....
Choodamani Nandagopal and Vatsala Iyengar:
Temple treasures, Volume 1, Utensils and Ritual, ಪುಟ-೧೩೪

೧೦. ಎಣ್ಣೆಯನ್ನು ಹಾಕುವ ಸಾಧನ:

ದೇವಾಲಯದ ಆವರಣದಲ್ಲಿರುವ ದೀಪಗಳಿಗೆ ಎಣ್ಣೆಯನ್ನು ಹಾಕಲು ಹೂಜಿಯಂತಹ ಸಾಧನವು ದೇವಾಲಯಗಳಲ್ಲಿ ಬಳಸುವುದನ್ನು ನೋಡಬಹುದು. ಈ ಸಾಧನವನ್ನು ಮರ ಅಥವಾ ಲೋಹದಲ್ಲಿ ತಯಾರಿಸಿರುತ್ತಾರೆ. ಈ ಹೂಜಿಯು ಎಣ್ಣೆಯನ್ನು ಇಡಲು ಕುಂಭದಂತಹ ರಚನೆಯನ್ನು ಹೊಂದಿರುತ್ತದೆ. ಇದರ ಮೇಲೆ ಕೋನದಂತಹ ರಚನೆ ಇದ್ದು ಇದರ ತುದಿಯಲ್ಲಿ ಸಣ್ಣದಾದ ಬಾಯಿಯಂತಹ ರಚನೆಯು ಇರುತ್ತದೆ. ಇದಕ್ಕೆ ಎರಡು ಹಿಡಿಗಳನ್ನೂ ಅಳವಡಿಸಿರುತ್ತಾರೆ. ಚಿತ್ರ ೩೫ರಲ್ಲಿ ಇದರ ಚಿತ್ರಣವನ್ನು ನೀಡಲಾಗಿದೆ.

ಪ್ರತಿಯೊಂದು ಧಾರ್ಮಿಕ ಆಚರಣೆಯಲ್ಲೂ ಒಂದು ದೀಪವನ್ನು ಹಚ್ಚುವುದು ಪದ್ಧತಿ. ಇದನ್ನು ಸಾಕ್ಷಿದೀಪ ಎಂದು ಕರೆಯುತ್ತಾರೆ. ಬಹಳ ದೀಪಗಳನ್ನು ಹೊತ್ತಂತಹ ವೃಕ್ಷದೀಪಗಳು ದೇವಾಲಯದ ಆವರಣವನ್ನು ಬೆಳಗಿದರೆ, ತೂಗುದೀಪಗಳು ದೇವಾಲಯದಲ್ಲಿನ ಮೂರ್ತಿಯನ್ನು ಬೆಳಗಿಸುತ್ತವೆ. ದೇವಾಲಯದ ಆವರಣದಲ್ಲಿನ ಸಾಲುದೀಪಗಳು ಭಕ್ತರ ಮನಸ್ಸಿನಲ್ಲಿ ಭಕ್ತಿ ಭಾವಗಳು ತುಂಬಲು ಸಹಕರಿಸುತ್ತವೆ. ಇದೇ ಉದ್ದೇಶದ ಹಿನ್ನೆಲೆಯಲ್ಲಿ ಆದದ್ದು ದೀಪೋತ್ಸವ, ದೀಪಾರಾಧನೆ, ಕೃತಿಕೋತ್ಸವ, ಕಾರ್ತಿಕ ದೀಪೋತ್ಸವ ಮುಂತಾದವು. ಭಕ್ತರ ಅನುಕೂಲಕ್ಕಾಗಿ ದೇವಾಲಯದ ಆವರಣದಲ್ಲಿ ದೀಪಗಳನ್ನಿಡಲು ಗೂಡುಗಳನ್ನು ಸಹ ನಿರ್ಮಿಸಿರುತ್ತಾರೆ.

ಕೆಲವು ದೇವಾಲಯಗಳಲ್ಲಿ ಗರ್ಭಗುಡಿಯ ಸುತ್ತಲೂ ಹಿತ್ತಾಳೆಯ ದೀಪದ ಬಟ್ಟಲುಗಳನ್ನು ಇರಿಸಿರುತ್ತಾರೆ. ಮರದಿಂದ ಮಾಡಿದ ಪೀಠವು ಹಗುರವಾಗಿ ಇರುವುದರಿಂದ ದೀಪವನ್ನು ಇಡಲು ದೇವಾಲಯದಲ್ಲಿ ಇದನ್ನು ಹೆಚ್ಚಾಗಿ ಬಳಸಿಕೊಳ್ಳುವುದು ಕಂಡು ಬರುತ್ತದೆ. ಗರ್ಭಗುಡಿಯ ಬಾಗಿಲಿನ ಚೌಕಟ್ಟಿನ ಮೇಲೆಯೂ ದೀಪಗಳನ್ನು ಇಡಲು ಅವಕಾಶವನ್ನು ಮಾಡಿರುತ್ತಾರೆ.

ದೇವರ ಹರಕೆಗೆ ಇನ್ನೂ ಎರಡು ವಿಧವಾದ ದೀಪಗಳನ್ನು ರಚಿಸುವುದನ್ನು ಕಾಣುತ್ತೇವೆ. ಒಂದು ವಿಧದ ದೀಪವು ಹಿಟ್ಟಿನ ದೀಪವಾಗಿರುತ್ತದೆ. ಅಕ್ಕಿ ಹಿಟ್ಟಿಗೆ ಬೆಲ್ಲ ಹಾಗೂ ತುರಿದ ತೆಂಗಿನ ಕಾಯಿಯನ್ನು ಕಲಿಸಿ, ಅದನ್ನು ಗೋಳಾಕಾರವನ್ನಾಗಿ ಮಾಡಿ ಹಣತೆಯನ್ನು ರಚಿಸಿ, ಎಣ್ಣೆ ಹಾಕಿ ಆ ಹಿಟ್ಟು ಬೇಯುವವರೆಗೂ ದೀಪವನ್ನು ಉರಿಸಲಾಗುತ್ತದೆ. ಇದನ್ನು **ತಂಬಿಟ್ಟಿನ ದೀಪ** ಎಂದು ಕರೆಯುತ್ತಾರೆ. ಈ ದೀಪವನ್ನು ಹೆಂಗಸರು ವಿಶೇಷವಾಗಿ ಆಶಾಢ– ಶ್ರಾವಣ ಮಾಸದ ಐದು ಶುಕ್ರವಾರಗಳಲ್ಲೂ ಹಚ್ಚುತ್ತಾರೆ. ಇನ್ನೊಂದು ಬಗೆಯ ಹರಕೆಯ ದೀಪವು ನಿಂಬೆ ಹಣ್ಣಿನದು. ನಿಂಬೆ ಹಣ್ಣನ್ನು ಅರ್ಧಕ್ಕೆ ತುಂಡರಿಸಿ, ಅದರಲ್ಲಿರುವ ತಿರುಳನ್ನು ತೆಗೆದು ಬಟ್ಟಲಿನಾಕಾರದ ಭಾಗಕ್ಕೆ ಎಣ್ಣೆಯನ್ನು ಹಾಕಿ ಬತ್ತಿಯನ್ನು ಇಟ್ಟು ದೀಪವನ್ನು ಹಚ್ಚಲಾಗುತ್ತದೆ. ಇದರಲ್ಲಿ ೫, ೭, ೯, ೧೧ ಅಥವಾ ೨೧ ದೀಪಗಳನ್ನು ಬೆಳಗಿಸುವುದು ವಿಶೇಷವಾಗಿ ನೋಡಲು ಸಿಗುತ್ತದೆ.

ದೀಪದಾನ ಎನ್ನುವುದು ಭಾರತೀಯ ಪರಂಪರೆಯಲ್ಲಿ ಬೇರೂರಿರುವ ಪದ್ಧತಿಯಾಗಿದೆ. ತೀರ್ಥಯಾತ್ರೆ ಮಾಡುವವರಿಗೆ ಆಧ್ಯಾತ್ಮಿಕ ಪ್ರಪಂಚದ ಮಾರ್ಗದರ್ಶನದ ಸಹಾಯದ ಸಂಕೇತವನ್ನಾಗಿ ದೀಪವನ್ನು ದಾನ ಮಾಡಲಾಗುತ್ತದೆ. ದಕ್ಷಿಣ ಭಾರತದಲ್ಲಿ ಸುಮಾರು ಹದಿನಾರು ವಿಧದ ದೀಪದಾನಗಳನ್ನು ಮಾಡಲಾಗುತ್ತದೆ[೨೧]. ದೀಪಕ್ಕೆ ಎಣ್ಣೆ ದಾನ ಮಾಡುವುದು, ಎಣ್ಣೆಯ ಬದಲು ತುಪ್ಪಕ್ಕಾಗಿ ಹಸುಗಳನ್ನು ದಾನ ಮಾಡುವುದು, ಆ ಹಸುಗಳಿಗೆ ಆಹಾರವನ್ನು ದಾನ ಮಾಡುವುದು, ಅವುಗಳ ಆಹಾರಕ್ಕಾಗಿ ಹೊಲಗದ್ದೆಗಳನ್ನು ದಾನ ಮಾಡುವುದು ಹೀಗೆ ಇನ್ನೂ ಮುಂತಾದವುಗಳು ಈ ದೀಪದಾನದಲ್ಲಿ ಸೇರುತ್ತವೆ.

ಭಕ್ತರು ತಮ್ಮ ತಮ್ಮ ವ್ಯಾಪಾರದಲ್ಲಿ ಪಡೆದಂತಹ ಹಣದಲ್ಲಿ ಸ್ವಲ್ಪ ಭಾಗವನ್ನು ದೇವಾಲಯಕ್ಕೆ ದಾನವನ್ನು ಮಾಡುತ್ತಾರೆ. ವ್ಯಾಪಾರಸ್ಥರು ವ್ಯಾಪಾರದಿಂದ ತಾವು ಪಡೆಯುತ್ತಿದ್ದ ಸುಂಕದ ಹಣವನ್ನು ನಂದಾದೀವಿಗೆಗೆ ದಾನ ಮಾಡಿದ ಉಲ್ಲೇಖಗಳಿವೆ[೨೨]. ಹಗರಿ ಬೊಮ್ಮನ ಹಳ್ಳಿಯ ಮುಂದೆ ಇರುವ ಶಾಸನದಲ್ಲಿ ಜಗದೇಕ ಮಲ್ಲನ ಆಳ್ವಿಕೆಯ ಸಂದರ್ಭದಲ್ಲಿ ಕ್ರಿಸ್ತ ಶಕ ೧೧೪೬ರಲ್ಲಿ ಗಾಣಿಗರು ದೇವರ ನಂದಾ ದೀವಿಗೆಗೆ ಎಣ್ಣೆಯನ್ನು ನೀಡಿದುದನ್ನು ಕುರಿತು ತಿಳಿಸಲಾಗಿದೆ[೨೩]. ಹೀಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ನಂದಾದೀಪಕ್ಕೆ ದಾನವನ್ನು ಮಾಡುವುದು ಪದ್ಧತಿಯಾಗಿದೆ.

ಆದಿವಾಸಿಯರಲ್ಲಿಯೂ ದೀಪಾರಾಧನೆ ಇರುವುದು ಕಂಡು ಬರುತ್ತದೆ. ಆದಿವಾಸಿಯ ತಾಯಂದಿರು ಪೂಜಾರಾಧನೆಯಲ್ಲಿ ದೀಪವನ್ನು ಬೆಳಗುತ್ತಾರೆ. ಅವರು ಬೆಳಗಿಸುವ ದೀಪದ ಬಟ್ಟಲುಗಳು ಮಣ್ಣಿನದಲ್ಲ, ಅವನ್ನು ಕಬ್ಬಿಣದಲ್ಲಿ ಮಾಡಲಾಗಿರುತ್ತದೆ[೨೪]. ಬುಡಕಟ್ಟು ಜನಾಂಗದವರು ಬೆಳಗಿಸುವ ದೀಪಗಳಲ್ಲಿ ಕುದುರೆ, ಆನೆ ಇಲ್ಲವೇ ನವಿಲಿನ ಆಕಾರದ ಬಟ್ಟಲುಗಳನ್ನು ಉಪಯೋಗಿಸುತ್ತಾರೆ. ಈ ದೀಪಗಳನ್ನು ಅವರ ಆರಾಧ್ಯ ದೈವದ ಮೂರ್ತಿಯ ಎದುರಲ್ಲಿ ಇರಿಸಲಾಗಿರುತ್ತದೆ.

ದೀಪವನ್ನು ಕುರಿತಾದ ಅನೇಕ ಶಾಸ್ತ್ರ ಗ್ರಂಥಗಳು ದೊರೆಯುತ್ತವೆ. ಅದರಲ್ಲಿ **ದೀಪ–ಶಾಸ್ತ್ರ** ಎಂಬುದು ಪ್ರಮುಖವಾದುದು[೨೫]. ಈ ಶಾಸ್ತ್ರಗ್ರಂಥದಲ್ಲಿ ದೇವರಿಗೆ ದೀಪವನ್ನು ಬೆಳಗುವ ವಿಧಿ ವಿಧಾನಗಳು, ದೀಪಕ್ಕೆ ಯಾವ ಎಣ್ಣೆಯನ್ನು ಬಳಸಬೇಕು, ಎಣ್ಣೆ ಅಥವಾ ತುಪ್ಪವನ್ನು ಯಾವಾಗ ಮತ್ತು ಹೇಗೆ ಹಾಕಬೇಕು ಎನ್ನುವುದರ ಮಾಹಿತಿ ದೊರೆಯುತ್ತದೆ.

---

೨೧. In Southern India there are 16 traditional way of deepa-dana.....
D.G. Kelkar: **The Lamps of India,**

೨೨. ಕನ್ನಡವಿಶ್ವವಿದ್ಯಾಲಯ ಶಾಸನ ಸಂಪುಟ– ೧, ಬಳ್ಳಾರಿ ಜಿಲ್ಲೆ, ಪುಟ–೪೮೪

೨೩. ಕನ್ನಡವಿಶ್ವವಿದ್ಯಾಲಯ ಶಾಸನ ಸಂಪುಟ– ೧, ಬಳ್ಳಾರಿ ಜಿಲ್ಲೆ, ಪುಟ–೨೭೯

೨೪. The mother of house lights lamps made of iron not of clay.....
D.G. Kelkar: **The Lamps of India,**

೨೫. The Deepa-Shastra lays dosn the right method to light the lamp
D.G. Kelkar: **The Lamps of India,**

ಈ ಶಾಸ್ತ್ರದ ಪ್ರಕಾರ ಹಸುವಿನ ಹಾಲಿನಿಂದ ತಯಾರಿಸಿದ ತುಪ್ಪವು ಅತಿ ಶ್ರೇಷ್ಠವಾದುದು. ತುಪ್ಪ ದೊರೆಯದಿದ್ದ ಪಕ್ಷದಲ್ಲಿ ಸಾಸಿವೆ ಎಣ್ಣೆಯನ್ನು ಬಳಸುವುದು ಸೂಕ್ತವಾದುದಾಗಿದೆ.

ದೀಪದ ಬತ್ತಿಯನ್ನು ಹತ್ತಿಯಿಂದ ತಯಾರಿಸಬೇಕು ಮತ್ತು ಅದನ್ನು ಕೈಯಿಂದಲೇ ಮಾಡಬೇಕು ಎನ್ನುವ ಮುಂತಾದ ವಿವರಣೆಗಳನ್ನು ಈ ಶಾಸ್ತ್ರಗ್ರಂಥವು ಹೊಂದಿದೆ. ಡಿ.ಜಿ. ಕೆಲ್ಕರ್ ಅವರು ತಮ್ಮ **ಲ್ಯಾಂಪ್ಸ್ ಆಫ್ ಇಂಡಿಯಾ** ಎಂಬ ಗ್ರಂಥದಲ್ಲಿ ಪ್ರಸ್ತುತ ದಿನಗಳಲ್ಲಿರುವ ಭಾರತದ ದೀಪಗಳ ಶೈಲಿಗಳನ್ನು ಐದು ಪ್ರಮುಖ ಸಂಪ್ರದಾಯಕ್ಕೆ ಅನುಗುಣವಾಗಿ ನಿರ್ಮಿಸಲಾಗಿದೆ ಎಂದು ಹೇಳುತ್ತಾರೆ. ಅವುಗಳನ್ನು **ಶೈವ, ವೈಷ್ಣವ, ಗಣಪತಾಯ, ಸೌರ** ಮತ್ತು **ಶಾಕ್ತ** ಎಂದು ಹೆಸರಿಸುತ್ತಾರೆ.

ಶೈವ ಸಂಪ್ರದಾಯಗಳಲ್ಲಿ ನಂದಿ, ನಾಗ ಮತ್ತು ಕೆಲವು ಕಡೆ ಕೀರ್ತಿಮುಖಗಳನ್ನು ಬಳಸಲಾಗಿದೆ ಎನ್ನತ್ತಾರೆ. ವೈಷ್ಣವ ಧರ್ಮದ ಸಂಪ್ರದಾಯದ ದೀಪಗಳಲ್ಲಿ ವಿಷ್ಣುವಿಗೆ ಸಂಬಂಧಿಸಿದ ಸಂಕೇತಗಳು ಅದರಲ್ಲೂ ವಿಶೇಷವಾಗಿ ಶಂಖ, ಚಕ್ರ, ಗದೆ, ಪದ್ಮ, ಗರುಡ ಮುಂತಾದವುಗಳು ಇರುತ್ತವೆ. ಲಕ್ಷ್ಮಿಯು ವಿಷ್ಣುವಿನ ಹೆಂಡತಿಯಾದ್ದರಿಂದ ವೈಷ್ಣವ ಸಂಪ್ರದಾಯದ ಪ್ರಮುಖ ದೇವತೆಯಾಗಿದ್ದಾಳೆ. ಅವಳನ್ನು ಪ್ರತಿನಿಧಿಸುವ ಹಿನ್ನೆಲೆಯಲ್ಲಿ ಗಜಲಕ್ಷ್ಮಿ ದೀಪಗಳು ನಿರ್ಮಾಣಗೊಂಡಿರುವುದು ಕಾಣುತ್ತದೆ.

ಗಣಪತಾಯ ಸಂಪ್ರದಾಯದ ದೀಪಗಳು ಮೂಲವಾಗಿ ಗಣೇಶನನ್ನು ಸಾಂಕೇತಿಸುತ್ತದೆ ಅಲ್ಲದೆ ಜೊತೆಗೆ ಆನೆ, ಮೂಷಿಕ, ಸರ್ಪ, ಶಿವಲಿಂಗ, ಸಿದ್ಧಿ ಬುದ್ಧಿಯರ ಶಿಲ್ಪಗಳನ್ನೂ ಒಳಗೊಂಡಿರುತ್ತವೆ. ಸೌರ ಸಂಪ್ರದಾಯದವರಿಗೆ ಸೂರ್ಯನು ಪ್ರಮುಖ ದೇವನಾದ್ದರಿಂದ ಸೂರ್ಯನನ್ನು ಪೂಜಿಸುತ್ತಾರೆ. ಅವರ ದೀಪಗಳು ಒರಿಸ್ಸಾದ ಕೊನಾರ್ಕ್ ದೇವಾಲಯವಾದ ಸೂರ್ಯ ದೇವಾಲಯದಂತೆ ಭವ್ಯವಾಗಿ ವಿಜೃಂಭಣೆಯಿಂದ ಕೂಡಿರುತ್ತವೆ. ಶಾಕ್ತ ಸಂಪ್ರದಾಯದವರು ಶಕ್ತಿಯ ಆರಾಧಕರು, ಸ್ತ್ರೀ ದೇವತೆಯನ್ನು ಮೂಲ ದೇವರಂತೆ ಪೂಜಿಸುವ ಇವರು ಕಾಳಿ, ಭೈರವಿಯಂತಹ ದೇವತೆಗಳನ್ನು ಆರಾಧಿಸುತ್ತಾರೆ. ಇವರ ದೀಪಗಳಲ್ಲಿ ಆಯಾ ದೇವತೆಯರಿಗೆ ಸಂಬಂಧಿಸಿದ ಶಿಲ್ಪಗಳನ್ನು ದೀಪಗಳಲ್ಲಿ ಅಳವಡಿಸಿರುವುದನ್ನು ನೋಡಬಹುದು.

ಕರ್ನಾಟಕದಲ್ಲಿ ಪ್ರಮುಖವಾಗಿ ಮೂರು ಹಿಂದೂ ಸಂಪ್ರದಾಯಗಳನ್ನು ಹೆಸರಿಸಬಹುದು. **ಶೈವ, ವೈಷ್ಣವ** ಮತ್ತು **ಶಾಕ್ತ** ಎಂಬ ಸಂಪ್ರದಾಯಗಳು ಕರ್ನಾಟಕದಲ್ಲಿ ವಿಶೇಷವಾಗಿ ಇರುವುದು ತಿಳಿದು ಬರುತ್ತದೆ. ಕರ್ನಾಟಕದಲ್ಲಿ ಶೈವ ಸಂಪ್ರದಾಯದ ಅಡಿಯಲ್ಲಿಯೇ ಗಣಪತಾಯ ಸಂಪ್ರದಾಯವು ಸೇರಿರುವುದನ್ನು ನೋಡಬಹುದು. ಸೌರ ಸಂಪ್ರದಾಯವು ಕರ್ನಾಟಕದಲ್ಲಿ ಹೆಚ್ಚಾಗಿ ಕಾಣಲು ಸಿಗುವುದಿಲ್ಲ. ದಕ್ಷಿಣ ಭಾರತದವರು ಆರತಿಯನ್ನು ಬೆಳಗುವುದು ಎಂದರೆ ಉತ್ತರ ಭಾರತದವರು ಆರತಿಯನ್ನು ಇಳಿಸುವುದು

ಎನ್ನುತ್ತಾರೆ. ತಾವೇ ದೀಪವನ್ನು ತಂದು ದೇವರ ಸನ್ನಿಧಿಯಲ್ಲಿ ಬೆಳಗುವುದೂ ಸಹಾ ದಕ್ಷಿಣ ಭಾರತದಲ್ಲಿ ಕಂಡು ಬರುತ್ತದೆ.

೨. ಸ್ತಂಭಗಳು:

ಪ್ರಾಚೀನ ಮಾನವನು ತನಗೆ ಆಶ್ರಯವನ್ನು ನೀಡಿದ ಮರಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಂತೆ ತೋರುತ್ತದೆ. ಮರದ ಕೊಂಬೆ ರೆಂಬೆಗಳನ್ನು ಬಳಸಿ ಬಿಡಾರಗಳನ್ನು ನಿರ್ಮಿಸಿಕೊಂಡ ಮಾನವನು ನಂತರದ ದಿನಗಳಲ್ಲಿ ಈ ಕೊಂಬೆಗಳನ್ನು ಕಂಬಗಳಂತೆ ಬಳಸಿಕೊಂಡು ವಾಸಸ್ಥಳಗಳನ್ನು ನಿರ್ಮಿಸಿದ್ದಿರಬೇಕು. ಈ ರೀತಿಯಾಗಿ ಬಳಕೆಗೊಂಡ ಕಂಬಗಳೇ ಅವನ ಮುಂದಿನ ನಾಗರೀಕತೆಯ ಅಭಿವೃದ್ಧಿಯಲ್ಲಿ ಆಧಾರ ಸ್ತಂಭಗಳಂತೆ ಪಾತ್ರವಹಿಸಿದವು ಎಂದರೆ ತಪ್ಪಾಗಲಾರದು.

ವಿಶ್ವದ ಪ್ರಾಚೀನ ಕಾಲದ ಕಲೆಗಳಲ್ಲಿ ಈಜಿಪ್ಟಿನ ಕಲೆಯು ಬಹಳ ಮುಖ್ಯವಾದ ಸ್ಥಾನವನ್ನು ಪಡೆದಿದೆ. ಇಲ್ಲಿನ ವಾಸ್ತುಶಿಲ್ಪವು ಅತ್ಯಂತ ಪುರಾತನವಾದುದೂ ಹೌದು. ಈ ವಾಸ್ತುಶಿಲ್ಪಗಳು ಕೇವಲ ದೇವರಿಗಾಗಿ ನಿರ್ಮಿಸಿದ ದೇವಾಲಯಗಳಷ್ಟೇ ಅಲ್ಲದೆ ಪೂರ್ವಜರ ಗೋರಿಗಳೂ ಆಗಿವೆ. ಇವುಗಳು ಹೆಚ್ಚಾಗಿ ಸುಣ್ಣದ ಕಲ್ಲಿನಿಂದ ನಿರ್ಮಾಣಗೊಂಡಿವೆ.

ಹೇಲಿಯೋಪೋಲಿಸ್ ದೇವಾಲಯದ ಅಳಿದುಳಿದ ಅವಶೇಷಗಳಲ್ಲಿ ದೊರೆತಿರುವ ಶಾಸನ ಸ್ತಂಭವೊಂದು ತನ್ನ ಅಸ್ತಿತ್ವವನ್ನು ಪ್ರತ್ಯೇಕವಾಗಿ ಎತ್ತಿ ತೋರಿಸುತ್ತದೆ. ಈ ಸ್ತಂಭವು ಚಚೌಕಾಕಾರವನ್ನು ಹೊಂದಿದೆ. ಇದು ಏಕಶಿಲಾಸ್ತಂಭವಾಗಿದ್ದು ಸುಮಾರು ೨೦ ಮೀಟರ್ ಎತ್ತರದ್ದಾಗಿದೆ. ಕಂಬವು ಮೇಲೆ ಹೋದಂತೆ ಮೊನಚಾಗುತ್ತಾ ಹೋಗಿದೆ. ಕಂಬದ ತುದಿಯು ಪಿರಮಿಡ್‌ನ ರೂಪದಲ್ಲಿರುವುದು ಕಾಣುತ್ತದೆ. ಇದರ ನಾಲ್ಕೂ ಕಡೆಗಳಲ್ಲಿ ಹೈರೋ-ಗ್ಲೈಫಿಕ್ ಲಿಪಿಯ ಬರವಣಿಗೆಯು ಇರುವುದು ಕಂಡು ಬರುತ್ತದೆ[೨೬]. ಈ ಸ್ತಂಭವನ್ನು ಈಜಿಪ್ಟನ್ನು ಆಳಿದ ೧೨ನೆಯ ರಾಜಮನೆತನದ ಒಂದನೆಯ ಉಸರ್ಟೆಸನ್ (Usertesen I) ಸ್ಥಾಪಿಸಿರುವುದು[೨೭] ಎಂದು ಇದರ ಮೇಲಿರುವ ಶಾಸನದಿಂದ ತಿಳಿದು ಬರುತ್ತದೆ. ಈ ಶಾಸನವಿರುವ ಸ್ತಂಭವನ್ನು ಓಬೆಲಿಸ್ಕ್ (Obelisk) ಎಂದು ಕರೆಯುತ್ತಾರೆ.

ಕಾಲಕ್ರಮೇಣ ಈ ಸ್ತಂಭಗಳು ಅತಿ ಎತ್ತರದ ನಿರ್ಮಾಣಗಳನ್ನು ಹೊಂದಿದವು. ಇವು ಸುಮಾರು ೨೫ ಮೀಟರ್‌ಗಳಿಂದ ಹಿಡಿದು ೩೩ ಮೀಟರ್ ಎತ್ತರವನ್ನು ಹೊಂದಿರುವುದು ಕಾಣುತ್ತದೆ. ಇವು ಸುಮಾರು ಕ್ರಿಸ್ತ ಪೂರ್ವ ೨೫೦೦ರಿಂದ ೧೮೦೦ರವರೆಗೆ ಹೆಚ್ಚಾಗಿ ನಿರ್ಮಾಣಗೊಂಡಿರುವಂತಹವು.

---

೨೬. Its four four faces are coverd with heiroglyphic inscriptions.....
Dr. Carrotti: **A. History of Art** (Ancient Art), Volume 1, ಪುಟ-೧೭

೨೭. Those of the obelisk of Heliopolis commemorate the pharaoh who set it up, Utertesen I of the 12th dynasty.....
Dr. Carrotti: **A. History of Art** (Ancient Art), Volume 1, ಪುಟ-೧೭

ಏಜಿಯೆನ್ನರ ವಾಸ್ತುಶಿಲ್ಪದಲ್ಲಿ ಟ್ರಾಝುನ್ (Trajan) ಎಂಬ ಸ್ತಂಭವು ಇರುವುದು ತಿಳಿದು ಬರುತ್ತದೆ. ಈ ಸ್ತಂಭವು ಟ್ರಾಝುನ್ ಎಂಬ ಚಕ್ರವರ್ತಿಯಿಂದ ಕ್ರಿಸ್ತ ಶಕ ಸುಮಾರು ೧೧೩ರಲ್ಲಿ ಸ್ಥಾಪಿಸಲಾಗಿದೆ[೨೮]. ಅವನು ಸ್ಥಾಪಿಸಿದ ಸ್ತಂಭವಾದ್ದರಿಂದ ಇದನ್ನು ಟ್ರಾಝುನ್ ಸ್ತಂಭವೆಂದು ಕರೆಯುತ್ತಾರೆ. ಕ್ರಿಸ್ತ ಶಕ ಸುಮಾರು ೧೬೬ರಲ್ಲಿ ಮಾರ್ಕಸ್ ಔರೆಲಿಯಸ್ (Marcus Aurelius) ಎಂಬ ರಾಜನ ಶಾಸನ ಸ್ತಂಭವೊಂದನ್ನು ನಿರ್ಮಿಸಲಾಗಿದೆ.

ನಂತರದ ದಿನಗಳಲ್ಲಿ ಟ್ರಾಝುನ್ ಸ್ತಂಭದ ಮೇಲೆ ಮತ್ತು ಮಾರ್ಕಸ್ ಔರೆಲಿಯಸ್ ಸ್ತಂಭದ ಮೇಲೆ ಸಂತರ ಶಿಲ್ಪಗಳನ್ನು ಇರಿಸಲಾಗಿದೆ. ಸ್ತಂಭಗಳ ಮೇಲೆ ಶಿಲ್ಪಗಳನ್ನು ಸ್ಥಾಪಿಸುವ ಕ್ರಮವು ಕಾನ್ಸ್ಟಂಟೈನ್‌ನ (Constantine) ಕಾಲದಲ್ಲಿ ಹೆಚ್ಚಾಗಿ ರೂಢಿಯಲ್ಲಿತ್ತು[೨೯]. ಕ್ರಿಸ್ತ ಶಕ ೬೦೦ನೆಯ ಶತಮಾನದ ಸುಮಾರಿಗೆ ಶಿಲ್ಪಗಳನ್ನು ಇಡಲೆಂದೇ ಸ್ತಂಭಗಳನ್ನು ನಿರ್ಮಿಸಿರುವುದು ಕಂಡು ಬರುತ್ತದೆ. ಕ್ರಿಸ್ತ ಶಕ ೬೦೮ರಲ್ಲಿ ಫೋಕಸ್ (Phocas) ಎಂಬ ರಾಜನ ನೆನಪಿಗಾಗಿ ಶಿಲ್ಪವಿರುವ ಸ್ತಂಭವನ್ನು ಸ್ಥಾಪಿಸಿರುವುದು ತಿಳಿದು ಬರುತ್ತದೆ.

ಭಾರತದ ವಾಸ್ತುಶಿಲ್ಪಗಳಲ್ಲಿ ನಮಗೆ ದೊರೆತಿರುವ ಅತಿ ಪುರಾತನವಾದವುಗಳು ಎಂದರೆ ಮೌರ್ಯರ ಕಾಲದ ಏಕಶಿಲಾ ಸ್ತಂಭಗಳು. ಕಲೆ ಮತ್ತು ವಾಸ್ತುಶಿಲ್ಪಕ್ಕೆ ಮೌರ್ಯರು ಆರು ವಿಧವಾದ ಪ್ರಮುಖ ಕೊಡುಗೆಗಳನ್ನಿತ್ತಿದ್ದಾರೆ[೩೦]. ಅವು ಶಿಲಾಶಾಸನಗಳು, ಅಸಂಖ್ಯಾತ ಸ್ತೂಪಗಳು, ಏಕಶಿಲಾ ಸ್ತಂಭಗಳು, ಅಳಿದುಳಿದ ಅರಮನೆಗಳು, ಏಕಶಿಲೆಯಲ್ಲಿ ಕೆತ್ತಿದ ಪವಿತ್ರ ಸ್ಥಳಗಳು ಹಾಗೂ ಶಿಲೆಯನ್ನು ಕೆತ್ತಿ ಮಾಡಿದಂತಹ ಕೋಣೆಗಳು. ಸ್ತಂಭಗಳು ಹೆಚ್ಚಾಗಿ ಮೌರ್ಯರ ಕಾಲದಲ್ಲಿ ನಿರ್ಮಾಣಗೊಂಡಿರುವುದು ಕಂಡು ಬರುತ್ತದೆ. ಈ ಸ್ತಂಭಗಳಲ್ಲಿ ಶಾಸನಗಳು ಇರುವುದು ಕಾಣುತ್ತದೆ.

ಶಾಸನದ ಉಗಮಕ್ಕೆ ಧರ್ಮವೇ ಪ್ರಧಾನ ಶಕ್ತಿ ಎಂದರೆ ತಪ್ಪಾಗಲಾರದು. ಅಶೋಕನ ಸ್ತಂಭಗಳು ಇತರೇ ಯಾವುದೇ ಕಟ್ಟಡದ ಜೊತೆಗಿರದೆ ವಿಶೇಷವಾಗಿ ಪ್ರತ್ಯೇಕವಾದ ಸ್ಮಾರಕಗಳಂತೆ ಕಂಡು ಬರುತ್ತದೆ. ಬೌದ್ಧ ಧರ್ಮವನ್ನು ಸಾರಲೆಂದೇ ನಿರ್ಮಿಸಿರುವ ಸ್ಮಾರಕಗಳು ಈ ಸ್ತಂಭಗಳು. ಅಶೋಕನ ಸ್ತಂಭಗಳಲ್ಲಿ ಈಗಲೂ ಅಸ್ತಿತ್ವದಲ್ಲಿರುವ ಸ್ತಂಭವೊಂದು ಬಿಹಾರ್ ರಾಜ್ಯದ ಲೌರಿಯಾನಂದ ಘರ್‌ನಲ್ಲಿದೆ. ಸುಮಾರು ೩೨ ಅಡಿ

---

೨೮. The column of Trajan which stands solitary in the midst of the remains of apart of the Forum erected by that emporer, dates back to the year A.D. 113; it is 100 Roman feet in hight from the base to the Abacus of the capital, and about 11 feet in diameter.....
Dr. Carrotti: **A. History of Art** (Ancient Art), Volume 1, ಪುಟ-೨೭೨

೨೯. Dr. Carrotti: **A. History of Art** (Ancient Art), Volume 1, ಪುಟ-೨೭೮

೩೦. Percy Brown:
Indian Architecture (Buddhist and Hindu periods), ಪುಟ- ೭

ಎತ್ತರವಿರುವ ಈ ಸ್ತಂಭದ ಕಾಲವು ಕ್ರಿಸ್ತ ಪೂರ್ವ ಸುಮಾರು ೨೪೨/೨೪೧ ಎಂದು ಹೇಳಲಾಗುತ್ತದೆ[೩೧]. ಕ್ರಿಸ್ತ ಪೂರ್ವ ಎರಡನೆಯ ಶತಮಾನದಲ್ಲಿ ತಕ್ಷಶಿಲೆಯಲ್ಲಿ ವಾಸಿಸುತ್ತಿದ್ದ ಇಂಡೋಗ್ರೀಕ್ ರಾಯಭಾರಿ ಹಿಲಿಯೋಡೋರಸ್ (ದಿಯಾನನ ಮಗ) ವಿಷ್ಣುಭಕ್ತನಾಗಿದ್ದ, ಅವನು ದೇವನಾದ ವಾಸುದೇವನಿಗಾಗಿ ಶಿಲಾಸ್ತಂಭವನ್ನು ನಿರ್ಮಿಸಿದ ಉಲ್ಲೇಖಗಳು ದೊರೆಯುತ್ತವೆ[೩೨].

ದೇವಾಲಯದ ಹೊರ ಆವರಣದಲ್ಲಿ ಸ್ತಂಭಗಳು ನಿಂತಿರುವುದನ್ನು ನೋಡಬಹುದು. ಜೈನ, ಬೌದ್ಧ, ಹಿಂದೂ ಧರ್ಮಗಳ ದೇವಾಲಯಗಳಲ್ಲಿ ತಮ್ಮದೇ ಆದ ವಿಶೇಷತೆಯಿಂದ ಕೂಡಿದ ಸ್ತಂಭಗಳು ದೊರೆಯುತ್ತವೆ. ದೇವಾಲಯದ ಆವರಣದಲ್ಲಿ ಸ್ತಂಭಗಳಲ್ಲಿ ಹಲವು ವಿಧದ ಸ್ತಂಭಗಳಿರುವುದು ಕಾಣುತ್ತದೆ. ಅವುಗಳನ್ನು ಈ ರೀತಿಯಾಗಿ

೧. ಯೂಪಸ್ತಂಭ,

೨. ಗರುಡರ ಕಂಬ,

೩. ಜಯಸ್ತಂಭ,

೪. ಉಯ್ಯಾಲೆ ಕಂಬ,

೫. ಗಂಟೆಯ ಕಂಬ,

೬. ತೋರಣ ಕಂಬ,

೭. ತುಳಸೀ ಕಟ್ಟೆ,

೮. ನವಗ್ರಹ ಸ್ತಂಭ, ಮುಂತಾದವು.

೧. ಯೂಪಸ್ತಂಭ:

ಆರ್ಯನ್ನರು ಸೋಮಯಾಗವನ್ನು ಮಾಡುತ್ತಿರುವಾಗ ಪಶುಗಳನ್ನು ಬಲಿ ಕೊಡುವ ಪದ್ಧತಿ ಇತ್ತೆಂದು ತಿಳಿದು ಬರುತ್ತದೆ. ಅದಕ್ಕಾಗಿ ಬಲಿಗಾಗಿ ತಂದ ಪಶುಗಳನ್ನು ಕಟ್ಟಿ ಹಾಕಲು ಕಂಬಗಳನ್ನು ನೆಡುತ್ತಿದ್ದರು. ಈ ಯಾಗಗಳು ಹೆಚ್ಚಾಗಿ ದೇವಾಲಯದ ಹೊರ ಆವರಣದಲ್ಲಿ ನಡೆಯುತ್ತಿದ್ದರಿಂದ ಯೂಪಸ್ತಂಭವು ದೇವಾಲಯದ ಆವರಣದಲ್ಲಿ ದೊರೆಯುತ್ತವೆ. ವೇದಕಾಲದಲ್ಲಿ ಯೂಪಸ್ತಂಭಗಳನ್ನು ಮರದಿಂದಲೇ ರಚಿಸಲಾಗುತ್ತಿತ್ತು. ಮರದಲ್ಲಿ ರಚಿಸಲ್ಪಟ್ಟಂತಹ ಯೂಪಗಳನ್ನು ಕುರಿತು ಗ್ರಂಥಗಳಲ್ಲಿ ಉಲ್ಲೇಖಗಳು ದೊರೆಯುತ್ತವೆ[೩೩]. ನಂತರದ ದಿನಗಳಲ್ಲಿ ಕಲ್ಲಿನ ಯೂಪಗಳು ನಿರ್ಮಾಣಗೊಂಡವು.

---

೩೧. Roy C. Craven: **Indian Art,** ಪುಟ- ೪೦

೩೨. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ,** ಪುಟ- ೪೩

೩೩. ಎಸ್.ಡಿ. ಶೆಟ್ಟಿ: ಲೇಖನ- ಬಲಿಗಂಬ, **ಕರಕುಶಲ ಕಲೆಗಳು,** ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨, ಪುಟ-೨೩೩

ಚಿತ್ರ ೩೬ರಲ್ಲಿ ಯೂಪಸ್ತಂಭದ ಚಿತ್ರವು ಇರುವುದನ್ನು ನೋಡಬಹುದು. ಈ ಸ್ತಂಭಕ್ಕೆ ಪ್ರಾಣಿಯನ್ನು ಕಟ್ಟಲು ಸರಪಳಿಯನ್ನು ಅಥವಾ ಹಗ್ಗವನ್ನು ಬಳಸಲಾಗುತ್ತದೆ.

ಯೂಪಸ್ತಂಭಗಳು ಎಂಟು ಮೂಲೆಯನ್ನು ಹೊಂದಿರುವುದಲ್ಲದೇ ಮೇಲೆ ಹೋಗುತ್ತಿದ್ದಂತೇ ಮೊನಚಾಗುತ್ತಾ ಹೋಗುತ್ತದೆ. ಇದರ ತುದಿಯಲ್ಲಿರುವ ದುಂಡನೆಯ ಕಲಶ ರೂಪದ ರಚನೆಯನ್ನು **ಚಷಾಲ** ಎಂದು ಕರೆಯುತ್ತಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಹಿರೇಮಗಳೂರು ಎಂಬ ಗ್ರಾಮದ ಯೂಪಸ್ತಂಭವು ಬಹಳ ಪ್ರಾಚೀನವಾದುದಾಗಿದೆ. ಇದರ ಮೇಲಿರುವ ಶಾಸನವು ಕ್ರಿಸ್ತ ಶಕ ಸುಮಾರು ೨ರಿಂದ ಮೂರನೆಯ ಶತಕವಿರಬಹುದು ಎಂದು ತಜ್ಞರ ಅಭಿಪ್ರಾಯ[೩೪]. ಜನಮೇಜಯ ರಾಜನು ಸರ್ಪಯಾಗವನ್ನು ಮಾಡುವ ಸಂದರ್ಭದಲ್ಲಿ ಯೂಪಸ್ತಂಭವನ್ನು ನಿಲ್ಲಿಸಿದನು ಎಂಬ ಸ್ಥಳಪುರಾಣವು ದೊರೆಯುತ್ತದೆ.

ಇಲ್ಲಿನ ಶಾಸನದ ಪ್ರಕಾರ ಯೂಪಸ್ತಂಭವನ್ನು ಅಶ್ವಯೂಪ ಎಂದೂ ಕರೆಯುತ್ತಾರೆಂದು ಉಲ್ಲೇಖವಿರುವುದು ತಿಳಿದು ಬರುತ್ತದೆ. ಇದು ಸುಮಾರು ೯ ಅಡಿ ಎತ್ತರ ಇದೆ. ಇದರಲ್ಲಿನ ಅಷ್ಟ ಮೂಲೆಗಳು ಗಾಯಿತ್ರಿದೇವಿಯ ಪ್ರತೀಕ ಎಂದು ಹೇಳಲಾಗುತ್ತದೆ. ಗಾಯಿತ್ರಿಯಲ್ಲಿ ಎಂಟು ಅಕ್ಷರಗಳಿವೆ ಎಂದೂ ಗಾಯಿತ್ರಿಯು ಯಜ್ಞದ ಅಗ್ರ ಭಾಗವೆಂದೂ ಅದರಂತೆ ಯೂಪವೂ ಯಜ್ಞದ ಅಗ್ರ ಭಾಗವಾಗಿರುವುದರಿಂದ[೩೫] ಯೂಪದಲ್ಲಿ ಎಂಟು ಮೂಲೆಗಳಿವೆ ಎಂದು ಹೇಳಲಾಗುತ್ತದೆ.

ಯೂಪಸ್ತಂಭವನ್ನು ಅಗ್ನಿಸ್ತಂಭವನ್ನಾಗಿ ಅರ್ಥೈಸಿಕೊಳ್ಳುವುದೂ ಉಂಟು. ವಾಸ್ತು ಸೂತ್ರೋಪನಿಷತ್ತಿನಲ್ಲಿ **ಯೂಪಮಿದಂ ಜ್ಯೋತಿಃ** ಎಂದು ಹೇಳಲಾಗಿದೆ[೩೬]. ಹಿಂದಿನ ಕಾಲದಲ್ಲಿ ಮಾನವನು ದೈವವನ್ನು ಒಂದು ಬೆಳಕನ್ನಾಗಿ ಕಂಡನೆಂದೂ ಆ ಬೆಳಕು ಮಾಯವಾಗದೆ ಸ್ತಂಭದ ರೂಪ ತಾಳಿತು ಎಂದೂ ಅದನ್ನೇ ಯೂಪವೆಂದು ಕರೆಯುತ್ತಾರೆ ಎನ್ನಲಾಗುತ್ತದೆ.

ವೇದಗಳಲ್ಲಿ ಯೂಪದ ಸ್ಥಾಪನೆ ಆಚಾರ ವಿಚಾರಗಳನ್ನು ಕುರಿತು ತಿಳಿಸಲಾಗಿದೆ. ಯೂಪ ಸ್ಥಾಪನೆಯನ್ನು ಮಾಡುವಾಗ ಯೂಪದ ಮೇಲ್ಭಾಗವನ್ನು (ಶಿರಸ್ಸನ್ನು) ವಿಶ್ವವೆಂದೂ, ದಂಡವು ಕರ್ಮವೆಂದೂ ಹೇಳಿ ಇಡೀ ಸ್ತಂಭವು ವಿಶ್ವಕರ್ಮನ ಪ್ರತಿನಿಧಿಯೆಂದು ಗುರುತಿಸಲಾಗುತ್ತದೆ[೩೭]. ಇದೇ ಯೂಪದಿಂದ ಇಡೀ ವಿಶ್ವವು ಸೃಷ್ಟಿಯಾಗಿದೆ ಎಂಬುವುದು ಕೆಲವರ ಮತ. ಈ ರೀತಿಯಾಗಿ ಯಾಗ ಯಜ್ಞಗಳಲ್ಲಿ ಬಳಸಲ್ಪಡುತ್ತಿದ್ದ ಬಲಿಗಂಬಗಳು ದೇವಾಲಯದ ಹೊರ ಆವರಣದಲ್ಲಿ ನಿರ್ಮಾಣಗೊಂಡಿರುವುದನ್ನು ನೋಡುತ್ತೇವೆ.


---

೩೪. ಎಂ.ಪಿ. ಮಂಜಪ್ಪ ಶೆಟ್ಟಿ ಮಸಗಲಿ: ಲೇಖನ- ಶೃಂಗೇರಿ ಜಾಗೀರಿನ ಬಗ್ಗೆ, **ಚಿಕ್ಕಮಗಳೂರು ಜಿಲ್ಲಾದರ್ಶನ**, ಪುಟ- ೨೦

೩೫. ಎಸ್.ಡಿ. ಶೆಟ್ಟಿ: ಲೇಖನ- ಬಲಿಗಂಬ, **ಕರಕುಶಲ ಕಲೆಗಳು**, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨, ಪುಟ-೨೩೩

೩೬. ಎನ್.ಬಿ. ಚಂದ್ರಶೇಖರಾಚಾರ್ಯ- **ವಾಸ್ತು ಸೂತ್ರೋಪನಿಷತ್**,ಪುಟ- ೯

೩೭. ಎನ್.ಬಿ. ಚಂದ್ರಶೇಖರಾಚಾರ್ಯ- **ವಾಸ್ತು ಸೂತ್ರೋಪನಿಷತ್**, ಪುಟ- ೧೦



ಚಿತ್ರ ೩೬



ಚಿತ್ರ ೩೭-೧



ಚಿತ್ರ ೩೭-೨



ಚಿತ್ರ ೩೮

೨. ಗರುಡರ ಕಂಬ:

ವಿಷ್ಣುವಿನ ವಾಹನವಾದ ಗರುಡನಂತೆ ಭಾರತೀಯ ರಾಜ ಮಹಾರಾಜರುಗಳಿಗೆ ಗರುಡರು ಇರುತ್ತಿದ್ದರು. ಕನ್ನಡ ನಾಡಿನಲ್ಲಿ ವಿಶೇಷವಾಗಿ ಹೊಯ್ಸಳರ ಕಾಲದಲ್ಲಿ ಗರುಡರು ವಿಫುಲವಾಗಿ ಇರುತ್ತಿದ್ದುದು ತಿಳಿದು ಬರುತ್ತದೆ. ಗರುಡರು ರಾಜರಿಗೆ ಪ್ರಿಯ ಬಂಟರಾಗಿ, ತಮ್ಮ ರಾಜರಿಗಾಗಿ ಪ್ರಾಣವನ್ನೇ ಮುಡಿಪಾಗಿಟ್ಟು ಅವರನ್ನು ಕಾಯುತ್ತಿದ್ದರು. ಅಷ್ಟೇ ಅಲ್ಲದೆ ತಮ್ಮ ರಾಜರು ಮೃತರಾದಾಗ ತಮ್ಮ ಆತ್ಮವನ್ನೂ ಈ ಬಂಟರು ಅರ್ಪಣೆ ಮಾಡುತ್ತಿದ್ದರು. ಇಂತಹವರನ್ನು ಗರುಡರು ಎಂದು ಕರೆಯಲಾಗುತ್ತಿತ್ತು.

ಕ್ರಿಸ್ತ ಶಕ ೧೨೨೦ನೆಯ ಶತಮಾನದಲ್ಲಿ ಕುವರ ಲಕ್ಷ್ಮನು ಹೊಯ್ಸಳ ದೊರೆಯಾದ ವೀರ ಬಲ್ಲಾಳನಿಗೆ ತಾನು ಗರುಡನಾಗಲು ಪ್ರತಿಜ್ಞೆ ಮಾಡಿದುದಲ್ಲದೆ ಅವನ ಪತ್ನಿ ಮತ್ತು ಅವನ ಕೈಕೆಳಗಿದ್ದಂತಹ ಒಂದು ಸಾವಿರ ವೀರರು ಗರುಡರಾಗಲು ಪ್ರತಿಜ್ಞೆಯನ್ನು ಮಾಡಿದ್ದರು[೩೮]. ವೀರ ಬಲ್ಲಾಳನ ಸಾವಿನ ನಂತರ ಇವರೆಲ್ಲಾ ಪ್ರಾಣ ತ್ಯಾಗವನ್ನು ಮಾಡಿರುವುದು ತಿಳಿದು ಬರುತ್ತದೆ.

ಮಂಡ್ಯ ಜಿಲ್ಲೆಯ ಅಗ್ರಹಾರ ಬಾಚಹಳ್ಳಿಯಲ್ಲಿರುವ ಹುಣಸೇಶ್ವರ ದೇವಾಲಯದ ಆವರಣದ ಒಂದು ಬದಿಗೆ ಮೂರು ಗರುಡರ ಕಂಬಗಳಿವೆ (ಚಿತ್ರ ೩.೭). ಇವನ್ನು ಗರುಡಗಂಬ ಎಂದೂ ಕರೆಯುತ್ತಾರೆ. ಸುಮಾರು ೧೨ ಅಡಿ ಎತ್ತರವಿರುವ ಈ ಸ್ತಂಭಗಳು ವೃತ್ತಾಕಾರವನ್ನು ಹೊಂದಿವೆ. ಇವುಗಳ ತುದಿಯಲ್ಲಿ ಆನೆಗಳ ಶಿಲ್ಪವಿದೆ. ಇವು ಸುಮಾರು ೨ ಅಡಿ ಎತ್ತರವಿದ್ದು ಉತ್ತರ ದಿಕ್ಕಿಗೆ ಮುಖ ಮಾಡಿವೆ. ಪ್ರತಿ ಆನೆಯ ತಲೆಯ ಮೇಲೆ ಗರುಡ ಶಿಲ್ಪವಿದ್ದು ಅದರ ಎದುರಿಗಿರುವ ಪುರುಷಾಕೃತಿಯ ಶಿಲ್ಪದೊಂದಿಗೆ ಯುದ್ಧ ಮಾಡುತ್ತಿರುವಂತೆ ಕೆತ್ತಲಾಗಿದೆ. ಪುರುಷ ಶಿಲ್ಪದ ಹಿಂದೆ ಹೆಣ್ಣಿನ ಶಿಲ್ಪಗಳಿದ್ದು ಅವು ಕೂಡಾ ಯುದ್ಧ ಮಾಡಲು ಅಣಿಯಾಗಿರುವಂತೆ ಶಿಲ್ಪವನ್ನು ಕೆತ್ತಿದ್ದಾರೆ.

ಒಂದು ಕಂಬದಲ್ಲಿ ಪುರುಷನ ಹಿಂದೆ ಒಂದು ಹೆಣ್ಣಿನ ಶಿಲ್ಪವಿದ್ದರೆ, ಉಳಿದೆರಡು ಕಂಬಗಳಲ್ಲಿ ಮೂರು ಮೂರು ಶಿಲ್ಪಗಳಿರುವುದು ಕಂಡು ಬರುತ್ತದೆ. ಇವು ಸುಮಾರು ೧೩ನೆಯ ಶತಮಾನದ ಸ್ತಂಭಗಳಾಗಿವೆ. ಹೊಯ್ಸಳ ರಾಜರಿಗೆ ಗರುಡರಾಗಿದ್ದವರ ಶಿಲ್ಪಗಳು ಇವಾಗಿವೆ. ಇವರು ತಾವು ಗರುಡಕ್ಕೆ ಸರಿಸಮಾನರು ಎಂದು ಭಾವಿಸುತ್ತಿದ್ದರು. ವಿಷ್ಣುವಿನ ಸೇವಕನಾದ ಗರುಡನಂತೆ ತಾವೂ ಕೂಡ ರಾಜರಿಗೆ ಸೇವಕರೆಂದು ತಿಳಿದಿದ್ದರು. ಗರುಡರಂತೆ ಜೀವಿಸುತ್ತಿದ್ದ ಇವರ ವೀರ ಮರಣದ ಸಂಕೇತವಾಗಿ ಈ ಸ್ತಂಭಗಳು ನಿಂತಿವೆ. ಇವು ವೀರಗಲ್ಲುಗಳೇ ಆಗಿವೆ ಎಂದರೆ ತಪ್ಪಾಗಲಾರದು.

---

೩೮. ಎಸ್.ಡಿ. ಶೆಟ್ಟಿ: ಲೇಖನ– ಬಲಿಗಂಬ, ಕರಕುಶಲ ಕಲೆಗಳು,
ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ–೨ ಪುಟ–೨೩೭

೩. ಜಯಸ್ತಂಭ:

ಜಯಸ್ತಂಭಗಳನ್ನು ವಿಜಯಸ್ತಂಭಗಳು ಎಂದೂ ಕರೆಯುತ್ತಾರೆ. ಜಯಸ್ತಂಭಗಳು ಪುರಾತನ ದೇವಾಲಯಗಳ ಹೊರ ಆವರಣದಲ್ಲಿ ಇರುವುದನ್ನು ನೋಡಬಹುದು. ರಾಜರು ಯುದ್ಧಕ್ಕೆ ಹೋಗಿ ಅಲ್ಲಿ ಗೆಲುವನ್ನು ಸಾಧಿಸಿದ ಸಂದರ್ಭದಲ್ಲಿ ಅದರ ಸವಿ ನೆನಪಿಗಾಗಿ ಜಯಸ್ತಂಭಗಳನ್ನು ಸ್ಥಾಪಿಸುವ ಸಂಪ್ರದಾಯವು ಭಾರತೀಯರಲ್ಲಿ ಇತ್ತು.

ಸುಮಾರು ೧೩ನೆಯ ಶತಮಾನದ ಕೊನೆಯಲ್ಲಿ ಆಗಿನ ರಾಜರು ಆಗಿನ ೫೬ ರಾಜ್ಯಗಳಲ್ಲೂ ಒಂದೊಂದು ಜಯಸ್ತಂಭಗಳನ್ನು ಸ್ಥಾಪಿಸಿದುದನ್ನು ಚರಿತ್ರೆಯಲ್ಲಿ ಕಾಣುತ್ತೇವೆ[೩೯]. ಈ ರೀತಿಯಾಗಿ ಸ್ಥಾಪನೆಗೊಂಡಿರುವಂತಹ ಜಯಸ್ತಂಭಗಳಲ್ಲಿ ಕರ್ನಾಟಕದ ಪಟ್ಟದಕಲ್ಲಿನಲ್ಲಿ ಇರುವ ರಾಣಿ ತ್ರೈಲೋಕೇಶ್ವರಿ ನಿರ್ಮಿಸಿರುವುದು ಎನ್ನಲಾಗುವ ಮಲ್ಲಿಕಾರ್ಜುನ ದೇವಾಲಯದ ಎದುರು ಇರುವ ಜಯಸ್ತಂಭವು ಉತ್ತಮ ನಿದರ್ಶನವಾಗಿದೆ (ಚಿತ್ರ ೩೮). ಈ ಸ್ತಂಭದಲ್ಲಿ ಶಾಸನವು ಇರುವುದನ್ನು ನೋಡಬಹುದು.

೪. ಉಯ್ಯಾಲೆಗಂಬ:

ಕೆಲವು ದೇವಾಲಯಗಳ ಹೊರ ಆವರಣದಲ್ಲಿ ಉಯ್ಯಾಲೆಗಂಬಗಳು ಇರುವುದನ್ನು ನೋಡುತ್ತೇವೆ. ಇವು ಸುಮಾರು ಹನ್ನೆರಡು ಅಡಿಯಿಂದ ಇಪ್ಪತ್ತು ಅಡಿ ಎತ್ತರದ ಕಂಬಗಳಾಗಿರುತ್ತವೆ. ಎರಡೂ ಕಂಬಗಳ ಆಧಾರದ ಮೇಲೆ ಮತ್ತೊಂದು ಚಪ್ಪಡಿಯನ್ನು ಇಟ್ಟು ಇದಕ್ಕೆ ಸರಪಳಿಯನ್ನು ಹೊಂದಿದ ಉಯ್ಯಾಲೆಯನ್ನು ತೂಗುಬಿಟ್ಟಿರುತ್ತಾರೆ. ದೇವಾಲಯಗಳ ವಿಶೇಷವಾದ ಹಬ್ಬಹರಿದಿನಗಳ ಸಂದರ್ಭದಲ್ಲಿ ಉಯ್ಯಾಲೆಯಲ್ಲಿ ದೇವಮೂರ್ತಿಯನ್ನು ಕೂಡಿಸಿ ಆಡಿಸುವ ಪದ್ಧತಿಯು ಭಾರತೀಯ ಸಂಪ್ರದಾಯದಲ್ಲಿ ಇರುವುದು ಕಾಣುತ್ತದೆ.

ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿನ ಸಾವನದುರ್ಗದಲ್ಲಿ ಶ್ರೀ ವೀರಭದ್ರೇಶ್ವರ ದೇವಾಲಯವಿದೆ. ಈ ದೇವಾಲಯದ ಹೊರ ಆವರಣದಲ್ಲಿ ಉಯ್ಯಾಲೆಗಂಬವು ಇದೆ (ಚಿತ್ರ ೩೯). ಈ ಉಯ್ಯಾಲೆಗಂಬವು ಕಲ್ಲಿನದಾಗಿದ್ದು ಉತ್ಸವಗಳಲ್ಲಿ ದೇವಮೂರ್ತಿಯನ್ನು ತೂಗಲು ಸರಪಳಿಯನ್ನು ಅಳವಡಿಸಲಾಗಿದೆ. ಸುಮಾರು ಇಪ್ಪತ್ತು ಅಡಿ ಎತ್ತರದ ಉಯ್ಯಾಲೆಗಂಬವು ಇದಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿರುವ ಏಕನಾಥೇಶ್ವರ ದೇವಾಲಯದ ಎದುರಿಗೆ ಉಯ್ಯಾಲೆ ಕಂಬವೊಂದಿದೆ. ಈ ಕಂಬವನ್ನು ಬಳಸಿಕೊಂಡು ದೀಪಸ್ತಂಭಕ್ಕೆ ದೀಪವನ್ನು ಬೆಳಗುವುದು ಇಲ್ಲಿನ ವಿಶೇಷವಾಗಿದೆ. ವಿಶೇಷವಾದ ಉತ್ಸವಗಳಲ್ಲಿ ಉಯ್ಯಾಲೆ ಕಂಬದ ಮೇಲೆ ನಿಂತು ತೂಗುತ್ತಾ ಎದುರಿಗಿರುವ ದೀಪಸ್ತಂಭಕ್ಕೆ ದೀಪವನ್ನು ಹಚ್ಚುವುದು ಪದ್ಧತಿ ಇರುವುದು ಸಹ ತಿಳಿದು ಬರುತ್ತದೆ.

---

೩೯. In 1397 A.D Pillars of Victory appear to have been planted by the then king in all the 56 states into which India was divided then.....
P.V. Jagadish Ayyar, **South Indian shrines** , ಪುಟ-೫೫೪



ಚಿತ್ರ ೩೯



ಚಿತ್ರ ೪೦



ಚಿತ್ರ ೪೧



ಚಿತ್ರ ೪೨

೫. ಗಂಟೆಯಕಂಬ:

ದೇವಾಲಯದ ಒಳ ಆವರಣದಲ್ಲಿ ದೇವರಿಗೆ ಆರತಿಯನ್ನು ಬೆಳಗುವಾಗ ಗಂಟೆಯನ್ನು ಬಳಸುವುದು ಹಿಂದೂ ಸಂಪ್ರದಾಯದಲ್ಲಿ ಪದ್ಧತಿಯಾಗಿದೆ. ದೇವಾಲಯದ ಹೊರ ಆವರಣದಲ್ಲಿ ದೊಡ್ಡದಾದ ಗಂಟೆಯನ್ನು ಹಾಕಲು ಕಂಬಗಳನ್ನು ನಿಲ್ಲಿಸಿರುತ್ತಾರೆ. ಇದನ್ನು ಮಹಾಗಂಟೆ ಎಂದು ಕರೆಯುತ್ತಾರೆ. ಗಂಟೆಯ ನಾದವು ಓಂಕಾರ ನಾದದಂತೆ ಇರುವುದರಿಂದ ಇದಕ್ಕೆ ಮಹತ್ವ ಬಂದಿದೆ ಎಂದು ತೋರುತ್ತದೆ.

ದೇವಾಲಯದ ಪೂಜಾವಿಧಾನದಲ್ಲಿ ಗಂಟೆಯ ನಾದಕ್ಕೆ ವಿಶೇಷವಾದ ಸ್ಥಾನವಿರುವುದು ಕಂಡು ಬರುತ್ತದೆ. ಆಗಮ ಶಾಸ್ತ್ರದ ರೀತ್ಯ ದೇವಸ್ಥಾನದಲ್ಲಿ ಗಂಟಾ ಸೇವೆ ಅತ್ಯವಶ್ಯಕವಾದುದು[೪೦] ಎಂದು ತಿಳಿದು ಬರುತ್ತದೆ. ಗಂಟೆಯ ನಾದವನ್ನು ಕೇಳಿದೊಡನೆ ಮನಸ್ಸಿನ ದುಗುಡ ದುಮ್ಮಾನಗಳು ದೂರವಾಗಿ ಮನಸ್ಸು ನಿರ್ಮಲವಾಗುತ್ತದೆ ಎಂಬ ಭಾವನೆಯು ಹಿಂದೂ ಧರ್ಮದಲ್ಲಿದೆ. ಗಂಟೆಯು ವಿಘ್ನವನ್ನು ನಿವಾರಿಸುತ್ತದೆ ಮತ್ತು ಶಾಂತಿಯ ನಾಂದಿಯನ್ನು ಹಾಕುತ್ತದೆ ಎಂದೂ ಭಾವಿಸಲಾಗುತ್ತದೆ.

ಗಂಟೆಯನ್ನು ಭಾರಿಸುತ್ತಿದ್ದಂತೆ ಭಕ್ತನು ಲೌಕಿಕವಾದ ಭವಬಂಧನದಿಂದ ಮುಕ್ತನಾಗಿ ಭಗವಂತನಲ್ಲಿ ಮಾನಸಿಕವಾಗಿ ಸಂಪೂರ್ಣವಾಗಿ ಕ್ಷಣಕಾಲವಾದರೂ ಸೇರುತ್ತಾನೆ ಮತ್ತು ಭಗವಂತನ ಇರುವಿಕೆಯನ್ನು ಅನುಭವಿಸುತ್ತಾನೆ ಎಂಬ ಉದ್ದೇಶವು ಇರುವುದರಿಂದ ದೇವಾಲಯಗಳ ಆವರಣದಲ್ಲಿ ಗಂಟೆಯ ಸ್ತಂಭವನ್ನು ನಿಲ್ಲಿಸಿರಬಹುದು. ತಾನು ದೇವಾಲಯದ ಸಾಮಿಪ್ಯದಲ್ಲಿ ಇರುವನೆಂದೂ ತನ್ನನ್ನು ಯಾವ ದುಷ್ಟಶಕ್ತಿಗಳೂ ಏನೂ ಮಾಡಲಾರವು ಎಂಬ ಭರವಸೆಯನ್ನು ಭಕ್ತನು ಹೊಂದುತ್ತಾನೆ ಎಂಬ ನಂಬಿಕೆ ಇರುವುದರಿಂದ ದೇವಾಲಯದ ಆವರಣದಲ್ಲಿ ಗಂಟೆಯ ಸ್ತಂಭಕ್ಕೆ ವಿಶೇಷವಾದ ಮಾನ್ಯತೆ ದೊರೆತಿದೆ ಎನ್ನಬಹುದು.

ದೇವರಿಗೆ ನೈವೇದ್ಯವನ್ನು ಅರ್ಪಿಸುವ ಸಮಯದಿಂದ ಹಿಡಿದು ಮಹಾ ಮಂಗಳಾರತಿ ನಡೆಯುವವರೆಗೂ ಮಹಾಗಂಟೆಯನ್ನು ಭಾರಿಸಲಾಗುತ್ತದೆ. ದೇವಾಲಯದಲ್ಲಿ ಪೂಜೆಯು ನಡೆಯುತ್ತಿರುವುದನ್ನು ಸಾಂಕೇತಿಕವಾಗಿ ತಿಳಿಸುವ ಸಲುವಾಗಿಯೂ ಗಂಟೆಯ ಶಬ್ದವನ್ನು ಬಳಸಲಾಗುತ್ತದೆ. ಬೇರೆ ಬೇರೆ ಸಮಯದಲ್ಲಿ ನಡೆಯುವ ವಿವಿಧ ಪೂಜೆಗಳನ್ನು ಸೂಚಿಸುವ ಸಲುವಾಗಿ ವಿಭಿನ್ನ ನಾದಗಳನ್ನು ಹೊಂದಿರುವ ಗಂಟೆಗಳನ್ನೂ ದೇವಾಲಯದ ಆವರಣದಲ್ಲಿ ಬಳಸುತ್ತಾರೆ.

ದೇವಾಲಯಗಳಿಗೆ ಮಹಾಗಂಟೆಯನ್ನು ದಾನ ಮಾಡಿ ಶಾಸನಗಳನ್ನೂ ಬರೆಸಿರುವುದನ್ನು ಕಾಣಬಹುದು. ಗಂಟೆಗಳು ಹೆಚ್ಚಾಗಿ ಕಂಚಿನದ್ದಾಗಿರುತ್ತವೆ. ಶಿವಗಂಗೆಯ

---

೪೦. ವತ್ಸಲಾ ಐಯ್ಯಂಗಾರ್: ಲೇಖನ- ಗಂಟೆಗಳು, ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨, ಪುಟ-೨೩೧

ಗಂಗಾಧರೇಶ್ವರ ದೇವಸ್ಥಾನದಲ್ಲಿರುವ ಮಹಾಗಂಟೆಯು ೮೦ ಮಣಗಳ ತೂಕವನ್ನು ಹೊಂದಿದೆ. ದಕ್ಷಿಣ ಭಾರತದ ದೇವಾಲಯದ ಆವರಣದಲ್ಲಿ ಇರುವ ಮಹಾಗಂಟೆಗಳು ಎರಡು ಅಡಿಯಿಂದ ಹಿಡಿದು ಸುಮಾರು ಐದು ಅಡಿಗಳ ಎತ್ತರವನ್ನು ಹೊಂದಿರುವುದು ಕಾಣುತ್ತದೆ.

ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಆಲಂಬಗಿರಿಯ ವೆಂಕಟರಮಣ ದೇವಾಲಯದ ಆವರಣದಲ್ಲಿ ಗಂಟೆಯ ಸ್ತಂಭವಿದೆ (ಚಿತ್ರ ೪೦). ಲೋಹದ ಚೌಕಟ್ಟನ್ನು ಮಾಡಿ ಅದರ ಮಧ್ಯದಲ್ಲಿ ಎರಡು ಅಡಿ ಎತ್ತರದ ಗಂಟೆಯನ್ನು ತೂಗಿಬಿಡಲಾಗಿದೆ. ಇದು ಇತ್ತೀಚಿನ ಕಾಲದಲ್ಲಿ ತಯಾರಾದ ಗಂಟೆಯ ಸ್ತಂಭ. ಮೊದಲಿಗೆ ಉಯ್ಯಾಲೆಗಂಬದಂತೆ ಕಲ್ಲಿನ ರಚನೆಯನ್ನು ಮಾಡಿ ಅದರ ಮಧ್ಯದಲ್ಲಿ ಗಂಟೆಯನ್ನು ತೂಗಿಬಿಡಲಾಗುತ್ತಿತ್ತು. ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಇರುವ ಶ್ರೀ ಚೆಲುವ ನಾರಾಯಣ ದೇವಾಲಯದ ಎದುರು ಇರುವ ದೀಪಸ್ತಂಭಕ್ಕೆ ಅಂಟಿಕೊಂಡಂತೆ ಗಂಟೆಯ ಸ್ತಂಭವನ್ನು ನಿರ್ಮಿಸಲಾಗಿದೆ.

೬. ತೋರಣಗಂಬ:

ದೇವಾಲಯದ ಮುಖ್ಯದ್ವಾರಕ್ಕೆ ಎದುರಾಗಿ ತೋರಣಗಂಬಗಳಿರುತ್ತವೆ. ಬೌದ್ಧರ ಸ್ತೂಪಗಳ ಮುಂದೆಯೂ ತೋರಣಗಂಬ ಇರುವುದನ್ನು ಕಾಣುತ್ತೇವೆ. ಪ್ರತಿ ದೇವಾಲಯದ ಬಾಗಿಲ ಮೇಲೆ ಭಿತ್ತಿ ತೋರಣ ಇರುವುದನ್ನು ಕಾಣುತ್ತೇವೆ. ಇದರ ಮೇಲೆ ಹೂವು, ಬಳ್ಳಿ, ಹಣ್ಣು ಕಾಯಿಗಳನ್ನು ಬಳಸಿದ ಅಲಂಕಾರಿಕ ರಚನೆಯು ಇರುತ್ತದೆ. ಹಿಂದೂ ಧರ್ಮದ ಹಬ್ಬಹರಿದಿನಗಳಲ್ಲಿ ಮನೆಯ ಮುಖ್ಯದ್ವಾರಕ್ಕೆ ಮಾವಿನ ಎಲೆಗಳ ತಳಿರು ತೋರಣವನ್ನು ಕಟ್ಟುವುದು ಪದ್ಧತಿ. ಅದು ಶುಭದ ಸಂಕೇತವೂ ಆಗಿದೆ.

ಹಬ್ಬಹರಿದಿನಗಳಲ್ಲಿ ಅಷ್ಟೇ ಅಲ್ಲದೆ ಶುಭ ಸಮಾರಂಭಗಳಲ್ಲಿಯೂ ಮನೆಯ ಮುಂದೆ ಬಿದಿರು ಬೊಂಬುಗಳನ್ನು ನಿಲ್ಲಿಸಿ ತೆಂಗಿನ ಗರಿಯ ಚಪ್ಪರವನ್ನು ಕಟ್ಟಲಾಗುತ್ತದೆ. ದೇವಾಲಯದ ಹೊರ ಆವರಣದಲ್ಲಿ ತೋರಣವನ್ನು ಕಟ್ಟಲು ವಿಶೇಷವಾದ ಸ್ತಂಭವಿರುವುದು ಕಂಡು ಬರುತ್ತದೆ. ಎರಡು ಕಂಬಗಳನ್ನು ನಿಲ್ಲಿಸಿ ಅದರ ಮೇಲೆ ಅವೆರಡೂ ಕೂಡುವಂತೆ ರಚನೆಯನ್ನು ಮಾಡಲಾಗಿರುತ್ತದೆ. ತೋರಣಗಂಬವು ಅಳತೆಯಲ್ಲಿ ಮುಖ್ಯದ್ವಾರಕ್ಕಿಂತ ಹಿರಿದಾದ ರಚನೆಯನ್ನು ಹೊಂದಿರುತ್ತದೆ. ಇದನ್ನು ಮುಖ್ಯದ್ವಾರಕ್ಕೆ ಎದುರು ಸ್ಥಾಪಿಸಲಾಗಿರುತ್ತದೆ.

ಗದಗ ಜಿಲ್ಲೆಯಲ್ಲಿ ಇರುವ ಮೈಲಾರ ಲಿಂಗೇಶ್ವರ ದೇವಾಲಯದ ಆವರಣದಲ್ಲಿ ಪುಟ್ಟದಾದ ತೋರಣಗಂಬವು ಇರುವುದನ್ನು ನೋಡಬಹುದು (ಚಿತ್ರ ೪೧). ತೋರಣಗಂಬದ ಮೇಲೆ ತ್ರಿಶೂಲದ ರಚನೆಯನ್ನು ಮಾಡಲಾಗಿದೆ. ಈ ತೋರಣಗಂಬವು ನಾಲ್ಕು ಅಡಿ ಎತ್ತರವನ್ನು ಹೊಂದಿದೆ.

ಕೆಲವು ತೋರಣಗಂಬದ ಎರಡೂ ಕಂಬಗಳ ಮೇಲೆ ದೀಪಸ್ತಂಭಗಳನ್ನು ಇರಿಸಲಾಗಿರುವುದು ಕಂಡು ಬರುತ್ತದೆ. ಮೈಸೂರು ಜಿಲ್ಲೆಯ ತಿರುಮಕೂಡನಲ್ಲಿರುವ ಅಗಸ್ತ್ಯೇಶ್ವರ ದೇವಾಲಯದ ಎದುರಿಗೆ ತೋರಣಗಂಬವಿದೆ. ಈ ತೋರಣಗಂಬ ಮೇಲೆ ಎರಡು ದೀಪಸ್ತಂಭಗಳು ಇರುವುದನ್ನು ಚಿತ್ರ ೪೨ರಲ್ಲಿ ನೋಡಬಹುದು. ಈ ದೀಪಸ್ತಂಭಗಳು ಸುಮಾರು ಎಂಟು ಅಡಿಯ ಎತ್ತರವನ್ನು ಹೊಂದಿದೆ. ಸ್ತಂಭದ ತುದಿಯಲ್ಲಿ ಲೋಹದಲ್ಲಿ ಮಾಡಿದ ಚೌಕಟ್ಟಿರುವುದನ್ನು ನೋಡಬಹುದು. ಹಬ್ಬ ಹರಿದಿನಗಳಲ್ಲಿ ಈ ದೀಪಸ್ತಂಭಗಳಲ್ಲಿಯೂ ದಿಪಗಳನ್ನು ಬೆಳಗಲಾಗುವುದು. ಇದು ವಿಶೇಷವಾದ ತೋರಣಗಂಬವಾಗಿದೆ.

೭. ತುಳಸಿ ಕಟ್ಟೆ:

ವೈಷ್ಣವ ಧರ್ಮದ ದೇವಾಲಯಗಳ ಹೊರ ಆವರಣದಲ್ಲಿ ತುಳಸಿ ಕಟ್ಟೆ ಇರುವುದು ಕಂಡು ಬರುತ್ತದೆ. ತುಳಸಿ ಕಟ್ಟೆಯನ್ನು ಲಕ್ಷ್ಮಿ ಎಂದೂ ಕೃಷ್ಣನಿರುವ ಸ್ಥಳ ಎಂದೂ ಈ ಧರ್ಮದಲ್ಲಿರುವ ನಂಬಿಕೆಯಾಗಿದೆ. ಸುಮಾರು ಮೂರು ಅಡಿ ಎತ್ತರವನ್ನು ಈ ಕಟ್ಟೆಯು ಹೊಂದಿರುತ್ತದೆ. ಈ ಕಟ್ಟೆಯ ಮೇಲೆ ತುಳಸಿ ಗಿಡವನ್ನು ಬೆಳೆಸಲಾಗಿರುತ್ತದೆ.

ದೇವರಿಗೆ ಪೂಜೆ ಮಾಡುವ ಸಂದರ್ಭದಲ್ಲಿ ತುಳಸಿ ಕಟ್ಟೆಗೂ ಪೂಜೆ ಮಾಡುವುದು ವಾಡಿಕೆ. ಮನೆಯ ಅಂಗಳದಲ್ಲಿ ತುಳಸಿ ಕಟ್ಟೆಯಿದ್ದರೆ ಅದು ಯಮದೂತರನ್ನು ದೂರವಿರಿಸುತ್ತದೆ ಎಂಬ ನಂಬಿಕೆಯೂ ಹಿಂದೂ ಧರ್ಮದಲ್ಲಿದೆ[೪೧].

ವಿಜಯನಗರ ಅರಸರ ಕಾಲದಲ್ಲಿ ನಿರ್ಮಾಣಗೊಂಡಿರುವ ಹಂಪಿಯ ವಿಜಯವಿಠಲ ದೇವಾಲಯದ ಹೊರ ಆವರಣದಲ್ಲಿ ಇರುವ ತುಳಸಿ ಕಟ್ಟೆಯು ಅತ್ಯಂತ ಪ್ರಾಚೀನವಾದುದಾಗಿದೆ (ಚಿತ್ರ ೪೩). ಶಾಕ್ತ ಸಂಪ್ರದಾಯದ ಕೆಲವು ದೇವಾಲಯಗಳ ಆವರಣದಲ್ಲೂ ತುಳಸಿ ಕಟ್ಟೆಗಳು ಇರುವುದು ಕಾಣುತ್ತದೆ. ಮಂಗಳೂರಿನ ಕೊಡ್ಯಾಡ್ಕದಲ್ಲಿರುವ ಶ್ರೀ ಅನ್ನಪೂರ್ಣೇಶ್ವರಿ ದೇವಾಲಯದ ಆವರಣದಲ್ಲಿ ತುಳಸಿ ಕಟ್ಟೆ ಇದೆ (ಚಿತ್ರ ೪೪). ಆಮೆಯ ಶಿಲ್ಪವೊಂದು ತನ್ನ ಬೆನ್ನ ಮೇಲೆ ತುಳಸಿ ಕಟ್ಟೆಯನ್ನು ಹೊತ್ತುಕೊಂಡಿರುವಂತೆ ಇಲ್ಲಿ ರಚನೆಯನ್ನು ಮಾಡಲಾಗಿದೆ.

ಪುರಾಣದಲ್ಲಿ ಇರುವ ಕತೆಯಲ್ಲಿ ಮಂದಾರ ಪರ್ವತವನ್ನು ಕೂರ್ಮವು ಹೊತ್ತುಕೊಂಡಿತ್ತು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಆಮೆಯ ಮೇಲಿರುವ ಈ ತುಳಸಿ ಕಟ್ಟೆಯ ಎಂಟು ದಿಕ್ಕುಗಳಲ್ಲಿ ಶಿಲ್ಪಗಳನ್ನು ಕೆತ್ತಲಾಗಿದೆ. ಇವುಗಳಲ್ಲಿ ಅಷ್ಟ ಲಕ್ಷ್ಮಿಯ ಶಿಲ್ಪಗಳಿವೆ. ಇದು ಇತ್ತೀಚಿನ ಕಾಲದಲ್ಲಿ ನಿರ್ಮಾಣಗೊಂಡ ತುಳಸಿ ಕಟ್ಟೆಯಾದರೂ

---

೪೧. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ- ಧರ್ಮ,
ಲೇಖನ- ಜಾಗತಿಕ ಧರ್ಮದ ಮುಖ್ಯ ಸಂಕೇತಗಳು, ಪುಟ- ೪೭೭



ಚಿತ್ರ ೪೩



ಚಿತ್ರ ೪೪



ಚಿತ್ರ ೫೫



ಚಿತ್ರ ೪೬-೧



ಚಿತ್ರ ೪೬-೨

ಸುಂದರವಾದ ಕಲಾಕೌಶಲ್ಯದೊಂದಿಗೆ ನಿರ್ಮಿಸಿರುವುದನ್ನು ಕಾಣಬಹುದು.

೮. ನವಗ್ರಹ ಕಂಬ:

ಭಾರತೀಯ ಸಂಸ್ಕೃತಿಯಲ್ಲಿ ನವಗ್ರಹಗಳಿಗೆ ಆರಾಧನೆಯನ್ನು ಮಾಡುವುದು ವಿಶೇಷವಾಗಿದೆ. ಸೂರ್ಯ, ಚಂದ್ರ, ಮಂಗಳ, ಬುಧ, ಗುರು, ಶುಕ್ರ ಹಾಗೂ ಶನಿ ಎಂಬ ನವ ಗ್ರಹಗಳನ್ನು ಗುರುತಿಸಲಾಗುತ್ತದೆ. ದೇವಾಲಯದ ಹೊರ ಆವರಣದಲ್ಲಿ ನವಗ್ರಹಗಳಿಗೆ ತಮ್ಮದೇ ಆದ ವಿಶೇಷ ಸ್ಥಾನವು ಇರುತ್ತದೆ. ಕೆಲವು ದೇವಾಲಯದ ಎದುರು ನವಗ್ರಹ ಸ್ತಂಭ (ಪೀಠ)ಗಳು ಎಂದೇ ವಿಶೇಷವಾಗಿ ದೊರೆಯುತ್ತದೆ. ಹಂಪಿಯಲ್ಲಿರುವ ವಿಜಯವಿಠಲ ದೇವಾಲಯದ ಎದುರು ನವಗ್ರಹ ಸ್ತಂಭವಿತ್ತೆಂದು ಹೇಳಲಾಗುತ್ತದೆ. ಈಗ ಅದರ ಎತ್ತರದ ಪೀಠ ಮಾತ್ರ ಉಳಿದಿರುವುದನ್ನು ನೋಡಬಹುದು(ಚಿತ್ರ ೪೫). ಪ್ರಸ್ತುತ ಕಾಲದಲ್ಲಿಯೂ ದೇವಾಲಯದ ಆವರಣದ ಒಂದು ಬದಿಯಲ್ಲಿ ನಬಗ್ರಹಗಳನ್ನು ಸ್ಥಾಪಿಸಿರುವುದು ಕಂಡು ಬರುತ್ತದೆ. ಕೆಲವು ನವಗ್ರಹ ಕಂಬಗಳಿಗೆ ಮಂಟಪಗಳನ್ನೂ ಅಳವಡಿಸಲಾಗಿರುತ್ತದೆ.

ಕೆಲವು ದೇವಾಲಯುಗಳ ಆವರಣದಲ್ಲಿ ತ್ರಿಶೂಲ ಸ್ತಂಭ, ಡಮರುಗದ ಸ್ತಂಭಗಳಿರುವುದನ್ನು ನೋಡಬಹುದು. ಬೆಂಗಳೂರು ಜಿಲ್ಲೆಯ ಗವಿಪುರದ ಗವಿಗಂಗಾಧರೇಶ್ವರ ದೇವಾಲಯದ ಆವರಣದಲ್ಲಿ ಈ ತ್ರಿಶೂಲ, ಡಮರುಗಗಳ ರಚನೆಯನ್ನು ಹೊತ್ತಂತಹ ಸ್ತಂಭಗಳು ದೊರೆಯುತ್ತವೆ (ಚಿತ್ರ ೪೬). ಗಂಗರ ಕಾಲದಲ್ಲಿ ರೂಪ ತಾಳಿದ ಕಲ್ಲಿನ ಡಮರುಗ, ತ್ರಿಶೂಲಗಳು ತಮ್ಮ ಬೃಹತ್ ಗಾತ್ರದಿಂದಾಗಿ ಭವ್ಯವಾಗಿ ಆಕರ್ಷಕವಾಗಿ ಕಾಣಿಸುತ್ತವೆ[೪೨].

ಹಂಪಿಯ ವಿರೂಪಾಕ್ಷ ದೇವಾಲಯದ ಆವರಣದಲ್ಲಿ ಪುಟ್ಟ ಪೀಠದಂತೆ ಒಂದು ರಚನೆಯು ಇರುವುದನ್ನು ನೋಡಬಹುದು. ಇದನ್ನು **ಪ್ರಶ್ನೆ ಕಂಬ** ಎಂದು ಕರೆಯುತ್ತಾರೆ(ಚಿತ್ರ ೪೭). ಮನಸ್ಸಿನಲ್ಲಿ ತಮ್ಮ ಆಸೆಯು ನೆರವೇರುತ್ತದೆಯೋ ಇಲ್ಲವೋ ಎಂದು ಪ್ರಶ್ನಿಸಿಕೊಂಡು ಪ್ರಶ್ನೆ ಕಲ್ಲಿನ ಮಧ್ಯದಲ್ಲಿ ಇರುವ ಗೋಳಾಕಾರದ ರಚನೆಯನ್ನು ಎರಡೂ ಕೈಗಳಲ್ಲಿ ಅದುಮಿ ಹಿಡಿದುಕೊಳ್ಳಲಾಗುತ್ತದೆ. ಹೀಗೆ ಹಿಡಿದುಕೊಂಡ ಐದು ಹತ್ತು ನಿಮಿಷಗಳಲ್ಲಿ ಎರಡೂ ಕೈಗಳು ಕೂಡಿದರೆ ತಮ್ಮ ಆಸೆಯು ಈಡೇರುತ್ತದೆ ಎಂದೂ ಇಲ್ಲವಾದರೆ ಈಡೇರುವುದಿಲ್ಲ ಎಂದು ನಂಬಲಾಗುತ್ತದೆ.

ಗಣಪತಿಯ ದೇವಾಲಯದ ಎದುರಿಗೆ ಇಲಿಯ ಶಿಲ್ಪವನ್ನು ಹೊತ್ತಂತಹ ಸ್ತಂಭಗಳು ಇರುವುದನ್ನು ನೋಡಬಹುದು. ಶಿವನ ಮುಂದೆ ನಂದಿಯಾದರೆ ಗಣಪತಿಯ ಮುಂದೆ ಗಣಪತಿಯ ವಾಹನವಾದ ಇಲಿಯನ್ನು ಹೊತ್ತಿರುವಂತಹ ಸ್ತಂಭಗಳು

---

೪೨. ದೇವು ಪತ್ತಾರ: ಲೇಖನ– **ಗವಿ ಗಂಗಾಧರೇಶ್ವರನಿಗೆ ನಗರೀಕರಣದ ಒತ್ತಡ,**
ಸುಧಾ ಮಾಸಪತ್ರಿಕೆ, ಫೆಬ್ರವರಿ ೧೯, ೨೦೦೪, ಪುಟ– ೧೬

ದೊರೆಯುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯ ಇಡಗುಂಜಿ ಗಣಪತಿಯ ದೇವಾಲಯದ ಎದುರು ಇರುವ ಸ್ತಂಭದಲ್ಲಿ ಗಣಪತಿಯ ವಾಹನವಾದ ಇಲಿಯ ಶಿಲ್ಪವು ಇರುವುದು ಕಾಣುತ್ತದೆ. ಈ ಸ್ತಂಭವನ್ನು ಧ್ವಜಸ್ತಂಭ ಎಂದೂ ಕರೆಯುತ್ತಾರೆ.

ಇದರಂತೆ ಅನೇಕ ರೀತಿಯ ಸ್ತಂಭಗಳು ದೇವಾಲಯದ ಆವರಣದಲ್ಲಿ ದೊರೆಯುತ್ತವೆ. ಇವುಗಳಲ್ಲಿ ನಂದಿಗಂಬ, ಗರುಡಗಂಬ, ದೀಪಸ್ತಂಭ, ಧ್ವಜಸ್ತಂಭ, ಮತ್ತು ಬಲಿಪೀಠಗಳು ದೇವಾಲಯದ ಆವರಣದ ವಾಸ್ತುರಚನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ವಾಸ್ತುರಚನೆಯಲ್ಲಿ ಪ್ರಮುಖವಾಗಿರುವ ಸ್ತಂಭಗಳು

೧. ನಂದಿಗಂಬ

೨. ಧ್ವಜಸ್ತಂಭ

೩. ಬಲಿಪೀಠ

೪. ಗರುಡಗಂಬ

೫. ಸಪ್ತಮಾತೃಕೆಯರ ಪೀಠ

೧. ನಂದಿಕಂಬ:

ನಂದಿಕಂಬದ ತುದಿಯಲ್ಲಿ ಬಸವನ ಮೂರ್ತಿಶಿಲ್ಪವು ಇರುವುದು ಕಾಣಲು ಸಿಗುತ್ತದೆ. ನಂದಿಯನ್ನು ಹೊತ್ತಿರುವ ಕಂಬವಾದ್ದರಿಂದ ಇದನ್ನು **ನಂದಿಗಂಬ** ಎಂದು ಕರೆಯುತ್ತೇವೆ. ನಂದಿಯು ಶಿವನ ವಾಹನ. ಆದ್ದರಿಂದ ಶೈವ ಧರ್ಮದ ದೇವಾಲಯಗಳ ಹೊರ ಆವರಣದಲ್ಲಿ ನಂದಿಗಂಬವನ್ನು ಸ್ಥಾಪಿಸಲಾಗಿರುತ್ತದೆ. ನಂದಿಗಂಬದಲ್ಲಿನ ನಂದಿಯನ್ನು ಶಿವನ(ಮೂಲ ವಿಗ್ರಹ) ಶಿಲ್ಪದ ಎದುರು ಅಭಿಮುಖವಾಗಿ ಇರಿಸಲಾಗುತ್ತದೆ. ನಂದಿಕಂಬಗಳು ಸುಮಾರು ಎರಡೂವರೆ ಅಡಿ ಎತ್ತರದಿಂದ ನಲವತ್ತು ಅಡಿ ಎತ್ತರವನ್ನು ಹೊಂದಿರುತ್ತವೆ. ಶೈವದ ಧರ್ಮದ ದೇವಾಲಯಗಳಲ್ಲಿ ದೇವಮೂರ್ತಿಗೆ ಎದುರಾಗಿ ನಂದಿಗಂಬಗಳನ್ನು ಸ್ಥಾಪಿಸಿರುತ್ತಾರೆ. ಉಳಿದ ಇನ್ನಿತರೆ ಕಂಬಗಳನ್ನು ನಂದಿಕಂಬದ ನಂತರ ಸ್ಥಾಪಿಸಿರಲಾಗಿರುತ್ತದೆ.


ಮೈಸೂರು ಜಿಲ್ಲೆಯ ಮುಡುಕುತೊರೆ ಶ್ರೀ ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿ ನಂದಿಗಂಬವಿದೆ (ಚಿತ್ರ ೪೮). ಈ ನಂದಿಗಂಬದ ಎತ್ತರವು ಮೂರು ಅಡಿಗಳಾಗಿವೆ. ವೃತ್ತಾಕಾರದ ಸ್ತಂಭದ ಮೇಲೆ ನಂಡಿಯ ಸುಂದರವಾದ ಶಿಲ್ಪವನ್ನು ಕೆತ್ತಲಾಗಿದೆ. ಇದರ ನಂತರದ ಸ್ಥಳದಲ್ಲಿ ಧ್ವಜಸ್ತಂಭವು ಇರುವುದನ್ನು ನೋಡಬಹುದು.




ಚಿತ್ರ ೪೭




ಚಿತ್ರ ೪೮




ಚಿತ್ರ ೪೯



ಚಿತ್ರ ೫೦-೧



ಚಿತ್ರ ೫೦-೨



ಚಿತ್ರ ೫೦-೩

ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದಲ್ಲಿ ಇರುವ ಶ್ರೀ ಮಹಾಬಲೇಶ್ವರ ದೇವಾಲಯದ ಆವರಣದಲ್ಲಿ ನಂದಿಗಂಬವಿದೆ (ಚಿತ್ರ ೪೯). ಈ ನಂದಿಗಂಬವು ಏಕಶಿಲಾ ರಚನೆಯಾಗಿದ್ದು ಸ್ತಂಭದ ತುದಿಯಲ್ಲಿ ನಂದಿಯ ಶಿಲ್ಪವು ಇರುವುದು ಕಾಣುತ್ತದೆ. ಈ ನಂದಿಗಂಬವು ನಲವತ್ತು ಅಡಿ ಎತ್ತರವನ್ನು ಹೊಂದಿದ್ದೂ ಅತಿ ಎತ್ತರದ ನಂದಿಗಂಬವು ಇದಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಕಳಸೇಶ್ವರ ದೇವಾಲಯದ ಆವರಣದಲ್ಲಿ ನಂದಿಗಂಬವಿದೆ. ಇದನ್ನು ಧ್ವಜಸ್ತಂಭ ಎಂದೂ ಕರೆಯುತ್ತಾರೆ. ಲೋಹದ ತಗಡನ್ನು ಬಳಸಿ ಸ್ತಂಭವನ್ನು ನಿರ್ಮಿಸಲಾಗಿದೆ. ಸ್ತಂಭದ ತುದಿಯಲ್ಲಿ ನಂದಿಯ ಶಿಲ್ಪವಿದೆ. ಇದರ ಮೇಲೆ ಛತ್ರಿಯಾಕಾರದ ರಚನೆಯನ್ನು ಮಾಡಲಾಗಿದೆ. ಇದರ ಎತ್ತರವು ಸುಮಾರು ಮೂವತ್ತೈದು ಅಡಿಯಾಗಿದೆ.

೨. ಧ್ವಜಸ್ತಂಭ:

ಭಾರತೀಯ ಸಂಪ್ರದಾಯದ ಪ್ರಕಾರ ಧ್ವಜ ಎಂದರೆ ಸಂಕಲ್ಪ ಎಂದು ಅರ್ಥ. ಯಾವುದಾದರೊಂದು ಕೆಲಸ ಕಾರ್ಯವನ್ನು ಕೈಗೊಂಡು ಅಲ್ಲಿ ಗೆಲುವನ್ನು ಸಾಧಿಸಿದ ಸಮಯದಲ್ಲಿ ಜಯದ ಸಂಕೇತವಾಗಿ ಬಾವುಟವನ್ನು ಹಾರಿಸುವುದು ಒಂದು ಪದ್ಧತಿ. ಭಕ್ತನು ಗುಡಿಯೊಳಗೆ ಬರುವುದೆಂದರೆ ತನ್ನಲ್ಲಿನ ಕೆಟ್ಟದಾದ ಶಕ್ತಿಗಳನ್ನು ಜಯಿಸಲು, ಈ ದುಷ್ಟ ಶಕ್ತಿಗಳೊಂದಿಗೆ ಕಾದಾಡುವ ಉದ್ದೇಶವಾಗಿರುತ್ತದೆ. ಈ ಸಂಕಲ್ಪವನ್ನು ಧ್ವಜಸ್ತಂಭವು ನೆನಪು ಮಾಡಿಕೊಡುವ ಸಲುವಾಗಿ ದೇವಾಲಯದ ಹೊರ ಆವರಣದಲ್ಲಿ ಸ್ಥಾಪಿಸಲಾಗಿರುತ್ತದೆ. ಧ್ವಜ ಎಂದರೆ ಎದ್ದು ನಿಲ್ಲುವುದು[೪೩] ಎಂದರ್ಥವಾಗಿರುವುದೂ ತಿಳಿಯುತ್ತದೆ. ಇಲ್ಲಿ ಎದ್ದು ನಿಲ್ಲುವುದು ಎಂದರೆ ಜಾಗರೂಕನಾಗುವುದು, ಚೇತರಿಸಿಕೊಳ್ಳುವುದು, ಎಚ್ಚೆತ್ತುಕೊಳ್ಳುವುದು ಎಂದು ಅರ್ಥವಾಗಿದೆ.

ಮನುಷ್ಯನನ್ನು ಸಾದಾರಣ ನೆಲೆಯಿಂದ ಮೇಲಿನ ಯಾವುದಾದರೊಂದು ನೆಲೆಗೆ ಎತ್ತುವ ಎಲ್ಲವೂ **ಧ್ವಜವೇ** ಎಂದು ಪ್ರೊಫೆಸರ್ ಎಸ್.ಕೆ. ರಾಮಚಂಚ್ರ ರಾವ್‌ರವರು ತಮ್ಮ **ಭಾರತದ ದೇವಾಲಯ ನೆಲೆ-ಹಿನ್ನೆಲೆ** ಎಂಬ ಗ್ರಂಥದಲ್ಲಿ ಹೇಳಿದ್ದಾರೆ. ಇಲ್ಲಿ ಯಾವುದಾದರೊಂದು ನೆಲೆಗೆ ಎನ್ನುವುದಕ್ಕಿಂತ ಯಾವುದಾದರೊಂದು ಉತ್ತಮ ನೆಲೆಗೆ ಎಂದು ಹೇಳುವುದು ಸೂಕ್ತವೆನಿಸುತ್ತದೆ. ಮನುಷ್ಯನನ್ನು ತನ್ನ ಸಾಧಾರಣವಾದ ನೆಲೆಯಿಂದ ಆಧ್ಯಾತ್ಮಿಕವಾಗಿಯಾಗಲೀ ಅಥವಾ ಭೌತಿಕವಾಗಿಯಾಗಲೀ ಯಾವುದಾದರೂ ಉತ್ತಮ ನೆಲೆಗೆ ಎತ್ತುವ ಎಲ್ಲವೂ ಧ್ವಜವೇ ಆಗಿದೆ.

ಮಹಾಭಾರತದಲ್ಲಿನ ಧ್ವಜದ ತಾತ್ಪರ್ಯದಲ್ಲಿ **ದೇವರು ನಮ್ಮೆಲ್ಲರಿಗಿಂತ ಮೇಲಿರುವನು** ಎಂದು ಧ್ವಜವು ಸೂಚಿಸುತ್ತದೆ[೪೪] ಎನ್ನಲಾಗಿದೆ. ಭಕ್ತನು ಗುಡಿಯ ಧ್ವಜವನ್ನು ನೋಡಿದ

---

೪೩. ಪ್ರೊ, ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ,** ಪುಟ- ೧೦೧
೪೪. ಪ್ರೊ, ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ,** ಪುಟ- ೧೦೧

ತಕ್ಷಣ ಅದಕ್ಕೆ ತಲೆಯನ್ನು ಬಾಗಿ ತನ್ನಲ್ಲಿನ ಸಂಕಲ್ಪವನ್ನು ದೃಢಪಡಿಸಿಕೊಳ್ಳಬೇಕು ಎಂಬುದು ಧ್ವಜದ ಅರ್ಥವಾಗಿದೆ. ಪ್ರಾಸಾದ ಮಂಡನ ಎಂಬ ಗ್ರಂಥದಲ್ಲಿ ಗುಡಿಯ ಎದುರು ಧ್ವಜಸ್ತಂಭವಿರಬೇಕು. ಈ ಧ್ವಜಸ್ತಂಭದಿಂದ ದೇವತೆಗಳಿಗೂ, ಪಿತೃಗಳಿಗೂ ತೃಪ್ತಿ ದೊರೆಯುವುದು. ಅವರು ಧ್ವಜಸ್ತಂಭದಲ್ಲಿ ಸಂತೋಷದಿಂದ ನೆಲೆಸುವರು ಎಂದು ಹೇಳಲಾಗುತ್ತದೆ.

ಗುಡಿಯ ಎದುರು ಧ್ವಜವಿರದಿದ್ದರೆ ದುಷ್ಟ ಶಕ್ತಿಗಳು ಗುಡಿಯೊಳಗೆ ಧಾವಿಸುತ್ತವೆ ಎಂಬ ಮಾತು ಹೇಳಲಾಗುತ್ತದೆ. ಪಂಚರಾತ್ರ ಸಂಪ್ರದಾಯದ ಹಯಶೀರ್ಷ ಸಂಹಿತೆಯು ಧ್ವಜವಿರದ ಪ್ರಾಸಾದವು ವ್ಯರ್ಥವೆಂದು ಹೇಳಿದೆ. ಈ **ಧ್ವಜಸ್ತಂಭವು ಸರ್ವಕಾಮದ** ಎಂದು ಅಲ್ಲಿ ಬರುವ ವಿವರಣೆ. ಶಿವ ಸರ್ವಸ್ವ ಎಂಬ ಇನ್ನೊಂದು ಗ್ರಂಥದ ಪ್ರಕಾರ ಧ್ವಜವು ದೇವರ ಚಿಹ್ನೆಯನ್ನು ಹೊಂದಿರಬೇಕು ಅಥವಾ ಧ್ವಜದ ಮೇಲೆ ಗುಡಿಯ ದೇವರ ವಾಹನದ ಚಿತ್ರವಿರಬೇಕು[೪೫] ಎಂದಿದೆ.

ಧ್ವಜಸ್ತಂಭದಲ್ಲಿ ತ್ರಿಮೂರ್ತಿಯರು ನೆಲೆಸುವರೆಂದೂ ಹೇಳಿಕೆ ಇರುವುದು ತಿಳಿದು ಬರುತ್ತದೆ. ಧ್ವಜಸ್ತಂಭದ ಕೆಳಭಾಗದಲ್ಲಿ ಶಿವನೂ, ನಡುವೆ ಬ್ರಹ್ಮನೂ, ಮೇಲ್ಭಾಗದಲ್ಲಿ ವಿಷ್ಣುವೂ ಇರುವರೆಂದು ಪ್ರತೀತಿ[೪೬] ಇದೆ. ಸನ್ಯಾಸಿಗಳು ಕೈಯಲ್ಲಿ ಹಿಡಿದು ಸಾಗುವ ತ್ರಿದಂಡವೂ ಒಂದು ಧ್ವಜದ ದಂಡವೇ[೪೭] ಆಗಿದೆ. ಸಾಮಾನ್ಯವಾಗಿ ಆಂಜನೇಯ ದೇವಸ್ಥಾನದ ಮುಂದೆ ಧ್ವಜಸ್ತಂಭ ಇರುವುದಿಲ್ಲ. ಹನುಮಂತನು ಪರಮಾತ್ಮನ ಸೇವಕನಾದ್ದರಿಂದ ಧ್ವಜಸ್ತಂಭವನ್ನು ದೇವಾಲಯದ ಮುಂದೆ ಸ್ಥಾಪಿಸಬಾರದು ಎಂದು ಹೇಳುತ್ತಾರೆ.

ಸ್ವಾಮಿ ಹರ್ಷಾನಂದರವರು ತಮ್ಮ **ನಮ್ಮ ದೇವಾಲಯಗಳು** ಎಂಬ ಪುಸ್ತಕದಲ್ಲಿ ಧ್ವಜಸ್ತಂಭವನ್ನು ಚಕ್ರವರ್ತಿಗಳ ಅರಮನೆಯಲ್ಲಿ ನಿಲ್ಲಿಸುತ್ತಾರೆ ಎಂದೂ ಭಗವಂತನು ಚಕ್ರವರ್ತಿಗಳ ಚಕ್ರವರ್ತಿಯಾದ್ದರಿಂದ, ದೇವಾಲಯವು ಅವನ ಅರಮನೆಯಾದ್ದರಿಂದ ಧ್ವಸ್ತಂಭವಿರಬೇಕು ಎಂದು ಅಭಿಪ್ರಾಯ ಪಡುತ್ತಾರೆ. ಧ್ವಜಸ್ತಂಭಗಳು ಇರುವಂತಹ ಜಾಗವು ಪವಿತ್ರವಾದ ಪೂಜೆಗೆ ತಕ್ಕ ಸ್ಥಳಗಳು ಎಂದು ಜನರಿಗೆ ತಿಳಿಯ ಹೇಳುವುದೇ ಧ್ವಜಗಳ, ಧ್ವಜಸ್ತಂಭದ ಉದ್ದೇಶವಾಗಿದೆ[೪೮] ಎಂಬ ವಿವರಣೆಯೂ ಕೇಳಿ ಬರುತ್ತದೆ.

ಮೊದಲಿಗೆ ಬರೀ ನೀಳ ಕಂಬವನ್ನು ಕಲ್ಲಿನ ಪೀಠದ ಮೇಲೆ ನಿಲ್ಲಿಸಲಾಗುತ್ತಿತ್ತು ಇವನ್ನು ಹಬ್ಬಹರಿದಿನಗಳಲ್ಲಿ ಮತ್ತು ಉತ್ಸವಗಳು ಪ್ರಾರಂಭವಾಗುವ ಮುನ್ನ ಬಾವುಟವನ್ನು ಹಾರಿಸುವ ಪದ್ಧತಿಯು ಇರುತ್ತಿತ್ತೆಂದು ತೋರುತ್ತದೆ. ಬಾವುಟವಿಲ್ಲದ ಸ್ತಂಭಗಳು ಉತ್ಸವದ ಸಂದರ್ಭಗಳಲ್ಲಿ ಮಾತ್ರ ಬಾವುಟವನ್ನು ಹೊಂದಿರುತ್ತಿದ್ದವು. ಕಾಲ ಕಳೆದಂತೆ ಧ್ವಜಸ್ತಂಭಕ್ಕೆ

---

೪೫. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ**, ಪುಟ- ೯೫

೪೬ ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ**, ಪುಟ- ೧೦೧

೪೭ ತಿರುಮಲೆ ಶ್ರೀ ರಂಗಾಚಾರ್ಯ: ಲೇಖನ- **ಸ್ತಂಭಮಾಲಾ** (ಧ್ವಜಸ್ತಂಭ). ಮಲ್ಲಾರ ಮಾಸಪತ್ರಿಕೆ, ಫೆಬ್ರವರಿ-೨೦೦೪, ಪುಟ- ೧೮

೪೮. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ**, ಪುಟ- ೯೪

ಮಹತ್ವ ಬಂದು ಅದನ್ನು ದೇವಾಲಯದ ಒಂದು ಮುಖ್ಯವಾದ ಭಾಗವನ್ನಾಗಿ ಪರಿಗಣಿಸಲಾಯಿತು. ಧ್ವಜಸ್ತಂಭದ ಪೀಠವು ಕಲ್ಲಿನದಾಗಿದ್ದರೂ ಉಳಿದ ಭಾಗವು ಮರದ್ದೋ ಇಲ್ಲವೇ ಲೋಹದ ತಗಡಿನಲ್ಲಿ ರಚಿಸಿರುವುದನ್ನು ನೋಡಬಹುದು.

ದೇವಾಲಯದ ವಾಸ್ತುರಚನೆಯು ಪುರುಷಾಕೃತಿಯನ್ನು ಹೊಂದಿದೆ ಎಂದೂ ಗರ್ಭಗುಡಿಯು ಪುರುಷಾಕೃತಿಯ ತಲೆಯ ಭಾಗ ಎಂದು ಹೇಳುವುದರ ಜೊತೆಗೆ ಧ್ವಜಸ್ತಂಭವು ವಾಸ್ತುಪುರುಷನ ಪಾದ[೪೯] ಎಂದು ಕೆ.ಆರ್. ಶ್ರೀನಿವಾಸ್ ರವರು ತಮ್ಮ ಗ್ರಂಥವೊಂದರಲ್ಲಿ ಹೇಳಿದ್ದಾರೆ. ಈ ಹೇಳಿಕೆಯು ಅಷ್ಟಾಗಿ ಸಮಂಜಸವಲ್ಲವೆಂದು ತೋರಿ ಬರುತ್ತದೆ. ಹೆಚ್ಚಿನ ದೇವಾಲಯಗಳಲ್ಲಿ ಬಲಿಪೀಠಕ್ಕೂ ಗರ್ಭಗುಡಿಗೂ ಮಧ್ಯದಲ್ಲಿ ಧ್ವಜಸ್ತಂಭ ಇರುವುದು ಇದಕ್ಕೆ ಕಾರಣವಾಗಿದೆ.

ಧ್ವಜಸ್ತಂಭವು ಲೋಹದ್ದಾದರೆ – ಹಿತ್ತಾಳೆಯ, ತಾಮ್ರದ್ದಾಗಿದ್ದರೆ ಬೆಳ್ಳಿ ಅಥವಾ ಬಂಗಾರದ ಲೇಪನದ ಕವಚವನ್ನು ಹೊಂದಿರುತ್ತದೆ. ಇದರ ತುದಿಯಲ್ಲಿ ಗರ್ಭಗೃಹಕ್ಕೆ ಮುಖ ಮಾಡಿದಂತೆ ಮೂರು ಕಡ್ಡಿಗಳನ್ನು ಅಳವಡಿಸಿರುತ್ತಾರೆ. ಈ ಮೂರು ಕಡ್ಡಿಗಳು ತ್ರಿಮೂರ್ತಿಯರಾದ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಸಾಂಕೇತಿಸುತ್ತವೆ ಎಂದು ಒಂದು ವಿವರಣೆ ದೊರೆತರೆ, ಧರ್ಮ, ಕೀರ್ತಿ ಹಾಗೂ ಸಮಯಗಳನ್ನು ಸೂಚಿಸುವುದು ಎಂದು ಇನ್ನೊಂದು ವಿವರಣೆಯಲ್ಲಿ ದೊರೆಯುತ್ತದೆ[೫೦]. ಇವುಗಳು ಸೇರುವಂತೆ ಲಂಬವಾಗಿ ಮೂರು ಕಡ್ಡಿಗಳನ್ನು ಸೇರಿಸಿ ಇದರಿಂದ ದೊರೆಯುವ ಚೌಕಗಳಲ್ಲಿ ಗಂಟೆಗಳನ್ನು ತೂಗಿಬಿಡುತ್ತಿದ್ದರು.

ಕೆಲವು ಧ್ವಜಸ್ತಂಭಗಳು ಆ ದೇವಾಲಯವನ್ನು ನಿರ್ಮಿಸಿದವರ ಇಲ್ಲವೇ ಅದರ ನಿರ್ಮಾಣದ ಸಮಯದಲ್ಲಿ ಆಡಳಿತವನ್ನು ನಡೆಸುತ್ತಿದ್ದ ರಾಜರ ಗೌರವ ಚಿಹ್ನೆಗಳನ್ನು ಹೊಂದಿರುತ್ತವೆ. ಊರಿಗೆ ರಾಜನಾದ ದೇವರ ವಾಸಸ್ಥಾನವಾದ ದೇವಾಲಯದ ಎದುರು ಧ್ವಜಸ್ತಂಭವನ್ನು ಅಳವಡಿಸಿರುವುದು ಸಹಜವೇ ಆಗಿದೆ.

ಪ್ರಾಚೀನ ಕಾಲದಲ್ಲಿ ಬೇಟೆಗಾರರು ತಮ್ಮ ಪಂಗಡದವರನ್ನು ಗುರುತಿಸಲು ಧ್ವಜವನ್ನು ಹಿಡಿದುಕೊಂಡು ಹೋಗುತ್ತಿದ್ದರು. ಒಂದು ಕೋಲಿನ ತುದಿಗೆ ಏನನ್ನಾದರೂ ಕಟ್ಟುತ್ತಿದ್ದರು. ಅವುಗಳಲ್ಲಿ ಪ್ರಾಣಿಯ ಚರ್ಮವೋ ಇಲ್ಲವೇ ಮರದ ಎಲೆ, ಗರಿಗಳನ್ನು ಕಟ್ಟಲಾಗುತ್ತಿತ್ತು. ಧ್ವಜದಲ್ಲಿರುವ ಸಂಕೇತಗಳ ಸಹಾಯದಿಂದ ಮಿತ್ರರು, ಶತ್ರುಗಳು ಎಂದು ಗುರುತಿಸುತ್ತಿದ್ದರು. ನಂತರದ ದಿನಗಳಲ್ಲಿ ರಾಜರ ಯೋಧರು ತಮ್ಮ ತಮ್ಮ ಗುರುತಿನ ಸಂಕೇತವನ್ನಾಗಿ ಧ್ವಜವನ್ನು ಬಳಸಿದರು.

ಒಂದು ರಾಷ್ಟ್ರದ, ರಾಜ್ಯದ, ರಾಜವಂಶದ, ಸಮುದಾಯದ, ಪಡೆಯ, ಸಂಸ್ಥೆಯ

---

೪೯. K.R. Shrinivasan: **Indian Art and Architecture**, ಪುಟ– ೪೭

೫೦. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ–ಹಿನ್ನೆಲೆ**, ಪುಟ– ೯೭

ಇಲ್ಲವೇ ಒಬ್ಬ ಅಧಿಕಾರಿಯ ಲಾಂಛನವಾಗಿ ಅಥವಾ ಸಂಜ್ಞೆಗಳ, ಅಲಂಕಾರದ ಇಲವೇ ಪ್ರದರ್ಶನದ ಸಾಧನವಾಗಿ ಉಪಯೋಗಿಸಲ್ಪಡುತ್ತಿರುವ ಬಟ್ಟೆಯ ಇಲ್ಲವೇ ಅಂತಹುದೇ ವಸ್ತುವಿನ ತುಂಡನ್ನು ಬಳಸಲಾಗುತ್ತಿತ್ತು. ಇದು ಗಾಳಿಯಲ್ಲಿ ನಿರಾತಂಕವಾಗಿ ಹಾರಾಡಲು ಸಾಧ್ಯವಾಗುವಂತೆ ಇದರ ಒಂದು ಬದಿಯನ್ನು ಒಂದು ಸ್ತಂಭಕ್ಕಾಗಲೀ. ದಂಡಕ್ಕಾಗಲೀ, ಹುರಿಗಾಗಲೀ ಕಟ್ಟಿರುತ್ತಾರೆ[೫೧].

ಪ್ರಾಚೀನ ದೇವಾಲಯಗಳಲ್ಲಿ ಧ್ವಜಸ್ತಂಭವು ದೇವಾಲಯದ ಆವರಣದಲ್ಲಿ ಶಾಶ್ವತವಾಗಿ ಇರಲು ವ್ಯವಸ್ಥೆ ಇರುತ್ತಿರಲಿಲ್ಲ. ದೇವಾಲಯದಲ್ಲಿ ಉತ್ಸವ ನಡೆಯುವಾಗ ಮಾತ್ರ ಧ್ವಜವನ್ನೇರಿಸಲೆಂದು ಕಂಬವನ್ನು ನಿಲ್ಲಿಸುತ್ತಿದ್ದರು[೫೨]. ಕಾಲಕ್ರಮೇಣ ದೇವಾಲಯದಲ್ಲಿ ಸಾಂಸ್ಕೃತಿಕ ಉತ್ಸವಗಳು ಹೆಚ್ಚಾದಂತೆ ಧ್ವಜಸ್ತಂಭವು ದೇವಾಲಯದ ಹೊರ ಆವರಣದಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದವೆಂದು ತೋರುತ್ತದೆ. ನಂತರದ ದಿನಗಳಲ್ಲಿ ಅದಕ್ಕೆ ಬಾವುಟದಂತೆ ಒಂದು ರಚನೆಯನ್ನು ಅಳವಡಿಸಲಾಯಿತು. ಧ್ವಜಸ್ತಂಭದಲ್ಲಿ ಸಿಲುಕಿಸಲಾಗುವ ಕಿರುಗಂಟೆಗಳನ್ನು ಕಿಂಕಿಣಿ ಎಂದು ಕರೆಯುತ್ತಾರೆ[೫೩].

ಶಾಸ್ತ್ರಗ್ರಂಥಗಳಲ್ಲಿ ಧ್ವಜಸ್ತಂಭವನ್ನು ಮರದಿಂದ ಮಾಡಬೇಕು ಎಂದು ಉಲ್ಲೇಖಗಳು ದೊರೆಯುತ್ತವೆ. ಮರವು ದೊರೆಯದಿದ್ದ ಪಕ್ಷದಲ್ಲಿ ಬಿದಿರು ಬೊಂಬುಗಳನ್ನು ಧ್ವಜಸ್ತಂಭಕ್ಕೆ ಬಳಸಬಹುದಾಗಿದೆ. ಮರದ ಧ್ವಜಸ್ತಂಭಕ್ಕೆ ಲೋಹದ ಕವಚವನ್ನು ಹಾಕಲೇಬೇಕು ಎಂಬ ನಿಯಮಗಳು ಶಾಸ್ತ್ರಗ್ರಂಥಗಳಲ್ಲಿ ಇಲ್ಲ. ದಾನಿಗಳ ಇಚ್ಛಾ ಶಕ್ತಿಗೆ ಅನುಸಾರವಾಗಿ ಲೋಹದ ಕವಚವನ್ನು ಮಾಡಿಸಬಹುದಾಗಿದೆ. ರಾಮಾಯಣ ಮಹಾಭಾರತಗಳಲ್ಲಿ ಧ್ವಜವನ್ನು ರಾಜರು ಬಳಸುತ್ತಿದ್ದು ತಮ್ಮ ತಮ್ಮ ಸಂಕೇತಗಳನ್ನು ಧ್ವಜಗಳಲ್ಲಿ ಚಿತ್ರಿಸಿಕೊಂಡ ಉಲ್ಲೇಖಗಳು ದೊರೆಯುತ್ತವೆ. ಕೃಪಾಚಾರ್ಯರು ತನ್ನ ರಥದ ಧ್ವಜದಲ್ಲಿ ಗೂಳಿಯ ಆಕಾರವನ್ನು ಚಿತ್ರಿಸಿಕೊಂಡಿದ್ದರು[೫೪].

ದಕ್ಷಿಣ ಭಾರತದಲ್ಲಿ ದೇವಾಲಯದ ಉತ್ಸವಗಳ ಸಂದರ್ಭದಲ್ಲಿ ಮಾತ್ರ ಧ್ವಜವನ್ನು ಹಾರಿಸುವುದು ಪದ್ಧತಿಯಾದರೆ ಉತ್ತರ ಭಾರತದ ದೇವಾಲಯಗಳಲ್ಲಿ ಧ್ವಜವು ಸಾಮನ್ಯವಾಗಿ ಕಾಣಲು ದೊರೆಯುತ್ತದೆ. ಉತ್ತರ ಭಾರತದಲ್ಲಿ ಧ್ವಜಸ್ತಂಭದ ಎತ್ತರಕ್ಕೆ ಸಮನಾಗಿ ಧ್ವಜವು ಇರುತ್ತದೆ. ಈ ಧ್ವಜಸ್ತಂಭವು ಗರ್ಭಗುಡಿಯ ಮೇಲಿನ ಶಿಖರದ ಮೇಲ್ಭಾಗದಲ್ಲಿ ಅಳವಡಿಸಿರುವುದು ವಿಶೇಷವಾಗಿ ಕಾಣುತ್ತದೆ. ಆದರೆ ದಕ್ಷಿಣ ಭಾರತದ ದೇವಾಲಯಗಳ ವಿಮಾನಗಳಲ್ಲಿ ಧ್ವಜವನ್ನು ಇರಿಸಲು ಅನುಕೂಲವಿರುವುದಿಲ್ಲ. ಇಲ್ಲಿ ಧ್ವಜವು ತನ್ನದೇ ಆದ ವಿಶೇಷ ಸ್ಥಾನವನ್ನು ಹೊಂದಿರುವುದು ಕಂಡು ಬರುತ್ತದೆ.

---

೫೧. **ಕನ್ನಡ ವಿಶ್ವಕೋಶ**, ಸಂಪುಟ-೯, ಮೈಸೂರು ವಿಶ್ವವಿದ್ಯಾನಿಲಯ, ಪುಟ-೯೫೨

೫೨. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ**,ಪುಟ- ೯೫

೫೩. ವತ್ಸಲಾ ಐಯ್ಯಂಗಾರ್: ಲೇಖನ- ಗಂಟೆಗಳು, **ಕರಕುಶಲ ಕಲೆಗಳು**,
ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨, ಪುಟ-೨೩೧

೫೪. ಬೆಸಗಲ್ ರಾಮರಾವ್, ಪಾನ್ಯಂ ಸುಂದರ ಶಾಸ್ತ್ರಿ: **ಪುರಾಣನಾಮ ಚೂಡಾಮಣಿ**, ಪುಟ-೧೮೬



ಚಿತ್ರ ೫೧-೧



ಚಿತ್ರ ೫೧-೨



ಚಿತ್ರ ೫೨



ಚಿತ್ರ ೫೩

ಕರ್ನಾಟಕದ ಅತ್ಯಂತ ಪ್ರಾಚೀನವಾದ ಧ್ವಜಸ್ತಂಭವು ಬಾಗಲಕೋಟೆ ಜಿಲ್ಲೆಯ ಐಹೊಳೆಯಲ್ಲಿ ಇರುವ ರಾವಲ್ಪಿಂಡಿ ಗುಹೆ ಎದುರು ಇದೆ (ಚಿತ್ರ ೫೦). ರಾವಲ್ಪಿಂಡಿ ಗುಹೆಯ ಎದುರು ಇರುವ ಈ ಧ್ವಜಸ್ತಂಭವನ್ನು ರಾಷ್ಟ್ರ ಧ್ವಜಸ್ತಂಭ ಎಂದೂ ಕರೆಯುತ್ತಾರೆ. ಈ ಸ್ತಂಭವನ್ನು ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಸುಮಾರು ಹದಿನೈದು ಅಡಿ ಎತ್ತರದ ಸ್ತಂಭದ ಭಾಗವು ಈಗ ಉಳಿದಿದೆ. ಈ ಸ್ತಂಭಕ್ಕೆ ಲಂಬವಾಗಿ ಹದಿನಾರು ಪಟ್ಟಿಕೆಗಳಂತೆ ರಚಿಸಲಾಗಿದೆ. ಸ್ತಂಭದ ಕೆಲವು ಭಾಗಗಳು ಪಕ್ಕದಲ್ಲಿ ಬಿದ್ದಿರುವುದನ್ನು ಕಾಣಬಹುದು.

ಬಳ್ಳಾರಿ ಜಿಲ್ಲೆಯ ಹಂಪಿಯ ವಿರೂಪಾಕ್ಷ ದೇವಾಲಯದ ಆವರಣದಲ್ಲಿ ಮರದ ಧ್ವಜಸ್ತಂಭವಿದೆ (ಚಿತ್ರ ೫೧). ಇಡೀ ಧ್ವಜಸ್ತಂಭವು ಹೂವು ಬಳ್ಳಿಗಳ ಕೆತ್ತನೆಯಿಂದ ಕೂಡಿದ್ದು ಇದನ್ನು ಸುಂದರವಾಗಿ ನಿರ್ಮಿಸಲಾಗಿದೆ. ಇದರಲ್ಲಿ ಉಬ್ಬುಶಿಲ್ಪಗಳು ಇರುವುದನ್ನು ನೋಡಬಹುದು. ಸ್ತಂಭದ ತುದಿಯಲ್ಲಿ ಮರದ ಮೂರು ಪಟ್ಟಿಗಳು ಇವೆ. ಬಾದಾಮಿಯ ಬನಶಂಕರಿಯಲ್ಲಿ ಇರುವ ಧ್ವಜಸ್ತಂಭವನ್ನು ಸರಳವಾಗಿ ನಿರ್ಮಿಸಲಾಗಿದೆ(ಚಿತ್ರ ೫೨). ಈ ಸ್ತಂಭವು ಮರದ ರಚನೆಯನ್ನು ಹೊಂದಿದ್ದು ಇದರ ತುದಿಯಲ್ಲಿ ಲೋಹದಲ್ಲಿ ರಚಿಸಿರುವ ಕಲಶವನ್ನು ಅಳವಡಿಸಲಾಗಿದೆ. ಸ್ತಂಭದ ಮಧ್ಯದಲ್ಲಿ ನಾಲ್ಕು ದಿಕ್ಕುಗಳಲ್ಲಿ ಕೀರ್ತಿಮುಖದ ಉಬ್ಬುಶಿಲ್ಪವನ್ನು ರಚಿಸಿದ್ದು ಇದನ್ನು ಲೋಹದ ತಗಡಿನಲ್ಲಿ ನಿರ್ಮಿಸಲಾಗಿದೆ.

ಮೈಸೂರು ಅರಮನೆಯಲ್ಲಿ ಇರುವ ಶ್ರೀ ವರಾಹಸ್ವಾಮಿ ದೇವಾಲಯದ ಎದುರು ಇಪ್ಪತ್ತೈದು ಅಡಿ ಎತ್ತರದ ಧ್ವಜಸ್ತಂಭವಿದೆ (ಚಿತ್ರ ೫೩). ಈ ಸ್ತಂಭದ ಪೀಠವು ಕಲ್ಲಿನದಾಗಿದೆ. ಪೀಠದ ಮೇಲಿನ ಸ್ತಂಭದ ಭಾಗವು ತಾಮ್ರದ ಕವಚವನ್ನು ಹೊಂದಿದೆ. ಸ್ತಂಭದ ತುದಿಯಲ್ಲಿ ಅಡ್ಡಲಾಗಿ ಮೂರು ಕಡ್ಡಿಗಳನ್ನು ಅಳವಡಿಸಿದ್ದಾರೆ. ಮೊದಲಿಗೆ ಇಲ್ಲಿ ಗಂಟೆಗಳನ್ನು ಕಟ್ಟಿರುತ್ತಿದ್ದರು ಪ್ರಸ್ತುತ ಅವು ಕಾಣೆಯಾಗಿವೆ. ಇದರ ಮೇಲೆ ಕಲಶದಂತಹ ರಚನೆಯು ಇರುವುದು ಕಾಣುತ್ತದೆ. ದೇವಾಲಯದ ಆವರಣದ ದೀಪಸ್ತಂಭದಲ್ಲಿ ಇರುವ ಉಬ್ಬುಶಿಲ್ಪಗಳನ್ನು ಧ್ವಜಸ್ತಂಭದಲ್ಲೂ ರಚಿಸಿರುವುದನ್ನು ಕಾಣಬಹುದು. ಚಾಮುಂಡಿ ಬೆಟ್ಟದಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಾಲಯದ ಆವರಣದಲ್ಲಿ ಬೆಳ್ಳಿಯ ಕವಚವನ್ನು ಹೊಂದಿರುವ ಧ್ವಜಸ್ತಂಭವು ದೊರೆಯುತ್ತದೆ. ಈ ಧ್ವಜಸ್ತಂಭದಲ್ಲಿ ಗಣಪತಿ, ಮುಖಲಿಂಗ, ತ್ರಿಶೂಲ ಮತ್ತು ನಂದಿಯ ಉಬ್ಬುಶಿಲ್ಪಗಳನ್ನು ರಚಿಸಲಾಗಿದೆ.


ಉತ್ತರ ಕನ್ನಡ ಜಿಲ್ಲೆಯ ಮುರುಡೇಶ್ವರದಲ್ಲಿ ಕಂಚಿನಲ್ಲಿ ನಿರ್ಮಿಸಿದ ಸುಂದರವಾದ ಧ್ವಜಸ್ತಂಭವಿದೆ. ಉಡುಪಿ ಜಿಲ್ಲೆಯ ಕೊಲ್ಲೂರು ಮೂಕಾಂಬಿಕಾ ದೇವಾಲಯದ ಎದುರು ಸುಂದರವಾದ ಧ್ವಜಸ್ತಂಭವಿದೆ (ಚಿತ್ರ ೫೪). ಈ ದೀಪಸ್ತಂಭವನ್ನು ಚಿನ್ನದ ತಗಡಿನಿಂದ ನಿರ್ಮಿಸಲಾಗಿದೆ. ಸ್ತಂಭದ ಚೌಕಾಕಾರದ ಭಾಗದಲ್ಲಿ ಉಬ್ಬುಶಿಲ್ಪಗಳನ್ನು ಸುಂದರವಾಗಿ ಕೆತ್ತಿರುವುದು ಕಾಣುತ್ತದೆ.



ಚಿತ್ರ ೫೪



ಚಿತ್ರ ೫೫



ಚಿತ್ರ ೫೬



ಚಿತ್ರ ೫೭

ಕೋಲಾರ ಜಿಲ್ಲೆಯ ರಂಗಸ್ಥಳದ ಶ್ರೀ ರಂಗನಾಥ ದೇವಾಲಯದ ಆವರಣದಲ್ಲಿ ಧ್ವಜಸ್ತಂಭವಿದೆ (ಚಿತ್ರ ೫೫). ಈ ಧ್ವಜಸ್ತಂಭಕ್ಕೆ ಕಲ್ಲಿನ ಪೀಠವಿದ್ದು ಸ್ತಂಭದ ಭಾಗವು ಮರದಲ್ಲಿ ರಚಿಸಲಾಗಿದೆ. ಧ್ವಜಸ್ತಂಭದ ಪೀಠವನ್ನು ಬಹಳ ಸುಂದರವಾಗಿ ನಿರ್ಮಿಸಿರುವುದನ್ನು ಕಾಣಬಹುದು. ಇದು ಪರಿಮಂಡಲ ಪೀಠದ ರಚನೆಯನ್ನು ಹೊಂದಿದೆ. ಪೀಠದ ಕೆಳಗೆ ಅಷ್ಟಭುಜದ ರಚನೆ ಇದ್ದು ಮೇಲೆ ಹೋದಂತೆ ಪೀಠವು ವೃತ್ತಾಕಾರವನ್ನು ಪಡೆದು ಕೊಳ್ಳುತ್ತದೆ. ಸ್ತಂಭದ ತುದಿಯಲ್ಲಿ ಇರುವ ರಚನೆಯಲ್ಲಿ ಪುಟ್ಟ ಪುಟ್ಟ ಗಂಟೆಗಳು ತೂಗುತ್ತಿರುವುದನ್ನು ನೋಡಬಹುದು.

ಕೆಲವು ದೇವಾಲಯಗಳ ಆವರಣದಲ್ಲಿ ಧ್ವಜಸ್ತಂಭವು ಶಿಥಿಲಗೊಂಡಿದ್ದರೆ ಅವುಗಳ ಸ್ಥಳದಲ್ಲಿ ತಾತ್ಕಾಲಿಕವಾಗಿ ಅಡಿಕೆಯ ಮರದ ಅಥವಾ ಬಿದಿರಿನ ಮರವನ್ನು ಇಡುವ ಪದ್ಧತಿ ಇರುವುದು ಕಾಣುತ್ತದೆ. ಮೈಸೂರು ಅರಮನೆಯ ಆವರಣದಲ್ಲಿ ಇರುವ ಶ್ರೀ ಲಕ್ಷ್ಮೀರಮಣ ದೇವಾಲಯದ ಎದುರು ಇದ್ದಂತಹ ಧ್ವಜಸ್ತಂಭವು ಹಾಳಾದುದರಿಂದ ಈ ಧ್ವಜಸ್ತಂಭದ ಸ್ಥಳದಲ್ಲಿ ಅಡಿಕೆಯ ಮರವನ್ನು ಇಟ್ಟು ಪೂಜೆಯನ್ನು ಮಾಡಲಾಗುತ್ತದೆ (ಚಿತ್ರ ೫೬). ಮೈಸೂರು ಜಿಲ್ಲೆಯ ತಲಕಾಡಿನಲ್ಲಿರುವ ಶ್ರೀ ವೈದ್ಯನಾಥ ದೇವಾಲಯದ ಧ್ವಜಸ್ತಂಭವು ಶಿಥಿಲಗೊಂಡಿದೆ. ಅದರಿಂದ ತಾತ್ಕಾಲಿಕವಾಗಿ ಇದರ ಸ್ಥಳದಲ್ಲಿ ಬಿದಿರಿನ ಮರವನ್ನು ಧ್ವಜಸ್ತಂಭದ ಸ್ಥಳದಲ್ಲಿ ಇರಿಸಿ ಪೂಜೆಯನ್ನು ಸಲ್ಲಿಸಲ್ಲಿಸುತ್ತಿರುವುದು ಕಂಡು ಬರುತ್ತದೆ (ಚಿತ್ರ ೫೭).

ಹಿಂದೂ ದೇವಾಲಯಗಳಲ್ಲಿ ದೊರೆಯುವ ಧ್ವಜಸ್ತಂಭಗಳಂತೆ ಜೈನಧರ್ಮದ ಬಸದಿಗಳ ಎದುರು ಧ್ವಜಸ್ತಂಭಗಳು ಇರುವುದು ಕಾಣುತ್ತದೆ. ಉಡುಪಿ ಜಿಲ್ಲೆಯಲ್ಲಿ ಇರುವ ಮೂಡುಬಿದ್ರೆಯ ಬಸದಿಯ ಆವರಣದಲ್ಲಿ ಇರುವ ಧ್ವಜಸ್ತಂಭವೇ ಇದಕ್ಕೆ ಸಾಕ್ಷಿ (ಚಿತ್ರ ೫೮). ಈ ಬಸದಿಯ ಎದುರು ಸುಮಾರು ಮೂವತ್ತು ಅಡಿ ಎತ್ತರದ ಮರದಲ್ಲಿ ನಿರ್ಮಿಸಿದ ಧ್ವಜಸ್ತಂಭವಿದೆ. ಹಿಂದೂ ದೇವಾಲಯಗಳ ಧ್ವಜಸ್ತಂಭದಂತೆ ಇದರ ರಚನೆಯು ಇರುವುದನ್ನು ನೋಡಬಹುದು.

೩. ಬಲಿಪೀಠ:

ದೇವಾಲಯದ ವಾಸ್ತು ರಚನೆಯಲ್ಲಿ ಬಲಿಪೀಠದ ಪಾತ್ರವು ಮಹತ್ವದ್ದೇ ಆಗಿದೆ. ದೇವಾಲಯದ ಗರ್ಭಗುಡಿಯ ಮೇಲಿನ ವಿಮಾನದ ರಚನೆಯಲ್ಲೂ ಹಾಗೂ ಬಲಿಪೀಠದ ರಚನೆಯಲ್ಲಿಯೂ ಸಾಮ್ಯವಿರುವುದೂ ಕೂಡಾ ಅದರ ವಿಶೇಷತೆಯನ್ನು ತೋರುತ್ತದೆ. ಗರ್ಭಗುಡಿಯ ಮೇಲಿರುವ ವಿಮಾನವು ಗರ್ಭಗೃಹದ ಎದುರಿಗಿರುವ ಬಲಿಪೀಠವು ಒಂದೇ ಆಗಿದ್ದು ಈ ಎರಡರಲ್ಲೂ ದೇವತೆಗಳು ಕಲೆಯುತ್ತಾರೆ ಎಂಬ ಕಾರಣವು **ನಾರಾಯಣ ಸಂಹಿತೆ**ಯಲ್ಲಿ ದೊರೆಯುತ್ತದೆ[೫೫]. ಬಲಿಪೀಠವು ಗರ್ಭಗೃಹದ ಎದುರು ಹಾಗೂ ಧ್ವಜಸ್ತಂಭದ ನಂತರದ ಸ್ಥಾನದಲ್ಲಿ ಹೆಚ್ಚಾಗಿ ಇರಿಸಲಾಗಿರುತ್ತದೆ.

---

೫೫. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ**, ಪುಟ- ೯೪

ಭಕ್ತನ ಕಾರ್ಯೋನ್ಮುಖ ಮಾನುಷ ಚೈತನ್ಯ ಮತ್ತು ಮೂಲಬೇರದ ಸುಪ್ತ ದೈವೀ ಚೈತನ್ಯ ಎರಡೂ ಕಲೆಯುವುದು ಬಲಿಪೀಠದಲ್ಲಿ ಎಂದು ಪ್ರೊ. ಎಸ್.ಕೆ. ರಾಮಚಂದ್ರ ರಾವ್‌ರವರು ತಮ್ಮ **ಭಾರತದ ದೇವಾಲಯ ನೆಲೆ- ಹಿನ್ನೆಲೆ** ಎಂಬ ಗ್ರಂಥದಲ್ಲಿ ವಿವರಿಸಿದ್ದಾರೆ[೫೬].

ದೇವಾಲಯದ ರಚನೆಯು ಮನುಷ್ಯನ ರಚನೆಯನ್ನು ಹೋಲುವುದು ಎಂಬ ಹಿನ್ನೆಲೆಯಲ್ಲಿ ಬಲಿಪೀಠದ ಸ್ಥಾನವು ಹೊಕ್ಕುಳ ಸ್ಥಾನದಲ್ಲಿದೆ. ಹೊಕ್ಕಳು (ನಾಭಿ) ಹೇಗೆ ಮನುಷ್ಯನ ಭೌತಿಕ ಇರುವಿನ ಕೇಂದ್ರ ಸ್ಥಾನವೋ ಹಾಗೆಯೇ ಬಲಿಪೀಠವು ದೇವಾಲಯದ ಭೌತಿಕ ಸ್ವರೂಪದ ಕೇಂದ್ರ ಸ್ಥಾನವಾಗಿದೆ[೫೭] ಎಂದು ಹಿಂದೂ ಧರ್ಮದ ದೇವಾಲಯದ ಹಿನ್ನೆಲೆಯನ್ನು ಹೇಳುವ ಗ್ರಂಥಗಳಲ್ಲಿ ವಿವರಣೆ ಇರುವುದು ದೊರೆಯುತ್ತದೆ.

ದೇವಾಲಯದ ಅತಿ ಮುಖ್ಯವಾದ ಅವಿಭಾಜ್ಯ ಅಂಗವಾದ ಗರ್ಭಗುಡಿಗೂ ಬಲಿಪೀಠಕ್ಕೂ ಹತ್ತಿರವಾದ ಸಂಬಂಧವಿರುವುದು ಕಂಡು ಬರುತ್ತದೆ. ಬಲಿಪೀಠವು ಚಿಕ್ಕದಾದ ಕಲ್ಲಿನ ಕಂಬ. ಅತಿ ಪ್ರಾಚೀನವಾದ ಬಲಿಪೀಠಗಳು ಅತಿ ಒರಟು ಕಂಬಗಳು ಆಗಿರುವುದು ತಿಳಿದು ಬರುತ್ತದೆ. ಕಾಲಕಳೆದಂತೆ ಮಾನವನು ಅವನ ಇತರೆ ಸಾಮಗ್ರಿಗಳಿಗೆ ಅಲಂಕಾರವನ್ನು ಮಾಡುತ್ತಾ ಈ ಮಟ್ಟ ಕಂಬವನ್ನು ಇನ್ನೂ ಹೆಚ್ಚು ಅಲಂಕೃತವಾಗಿ ಕಾಣುವಂತೆ ಮಾಡಿದನು. ದೇವಾಲಯದ ಆವರಣದಲ್ಲಿ ಬಲಿಪೀಠಕ್ಕೆ ನಿರ್ದಿಷ್ಟ ಸ್ಥಾನವಿರುವುದು ತಿಳಿದು ಬರುತ್ತದೆ.

ದೇವಾಲಯದ ಹೊರ ಆವರಣದಲ್ಲಿ ಒಂದು ಬಲಿಪೀಠದ ಜೊತೆಗೆ ಎಂಟು ಬಲಿಪೀಠಗಳು ಇರುವುದು ಕಾಣುತ್ತವೆ. ಗರ್ಭಗುಡಿಯ ಎದುರಿಗೆ ಇರುವ ಬಲಿಪೀಠವು ಶ್ರೇಷ್ಠವಾದುದು ಮತ್ತು ವಿಶೇಷವಾದ ಅಲಂಕಾರದಿಂದ ಕೂಡಿರುತ್ತದೆ. ಕೆಲವು ಪ್ರಮುಖ ದೇವಾಲಯಗಳಲ್ಲಿ ಗರ್ಭಗುಡಿಯ ಸುತ್ತಲೂ ಎಂಟು ದಿಕ್ಕುಗಳಿಗೂ ಒಂದೊಂದು ಬಲಿಪೀಠಗಳನ್ನು ನಿಲ್ಲಿಸಿರುವುದನ್ನು ನೋಡಬಹುದು.

ದೇವರ ನೈವೇದ್ಯವಾದ ಮೇಲೆ ಪರಿವಾರ ದೇವತೆಗಳಿಗೂ, ಭೂತಗಳಿಗೂ, ಪಿತೃಗಳಿಗೂ ಎಡೆಯಿಡುವ ಉದ್ದೇಶದಿಂದ ಬಲಿಪೀಠಗಳನ್ನು ನಿರ್ಮಿಸಲಾಗಿರುತ್ತದೆ. ಬಲಿಪೀಠವು ಅಗ್ನಿಯನ್ನು ಸಾಂಕೇತಿಸುತ್ತದೆ ಎಂದು ಕೆಲವು ಗ್ರಂಥಗಳಲ್ಲಿ ಹೇಳುತ್ತಾ ಆತ್ಮ ಪರಮಾತ್ಮನ ನಡುವೆ ಅಗ್ನಿಯು ಮಧ್ಯವರ್ತಿಯಂತೆ ಕೆಲಸ ನಿರ್ವಹಿಸುತ್ತದೆಯಾದ್ದರಿಂದ ಬಲಿಪೀಠದ ಮೇಲೆ ನೈವೇದ್ಯವನ್ನು ಇಡುವುದು ಎನ್ನಲಾಗುತ್ತದೆ. ಅಗ್ನಿಯು ಈ ನೈವೇದ್ಯವನ್ನು ಪರಿವಾರ ದೇವತೆಗಳಿಗೆ ತಲುಪಿಸುತ್ತಾನೆ ಎಂಬ ನಂಬಿಕೆಯು ಭಾರತೀಯರ ಧಾರ್ಮಿಕ ಆಚರಣೆಯಲ್ಲಿ ಇರುವುದು ಕಂಡು ಬರುತ್ತದೆ.

---

೫೬. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ**, ಪುಟ- ೯೪
೫೭. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ**, ಪುಟ- ೯೪

ಬಲಿಪೀಠಗಳನ್ನು ಹೆಚ್ಚಾಗಿ ಕಲ್ಲಿನಿಂದ ನಿರ್ಮಿಸಿರುತ್ತಾರೆ. ಕೆಲವು ಬಲಿಪೀಠಗಳನ್ನು ಗಾರೆಗಚ್ಚಿನಿಂದ ನಿರ್ಮಿಸಿರುವುದೂ ಉಂಟು. ಬಲಿಪೀಠ ಮರದ್ದಾಗಿದ್ದರೆ ಅದಕ್ಕೆ ಲೋಹದ ಕವಚವನ್ನು ತೊಡಿಸಬೇಕೆಂಬ ಹೇಳಿಕೆಯು ಗ್ರಂಥಗಳಲ್ಲಿ ಇರುವುದು ಕಂಡು ಬರುತ್ತದೆ[೫೮]. ಪ್ರಾಚೀನ ಕಾಲದಲ್ಲಿ ಮಣ್ಣಿನಿಂದಲೂ ಬಲಿಪೀಠಗಳನ್ನು ಮಾಡುತ್ತಿದ್ದರು ಎಂಬುವುದು **ಶಿಲ್ಪ ರತ್ನ** ಎಂಬ ಗ್ರಂಥದಿಂದ ತಿಳಿದು ಬರುತ್ತದೆ. ಗರ್ಭಗೃಹದ ಪ್ರಮಾಣಕ್ಕೆ ೧/೫, ೧/೭ ಅಥವಾ ೧/೮ ಭಾಗದಷ್ಟು ಬಲಿಪೀಠ ಇರುವುದರ ಜೊತೆಗೆ ಬಲಿಪೀಠಗಳ ಗಾತ್ರ ಹಾಗೂ ವಿನ್ಯಾಸಗಳಲ್ಲಿ ಶ್ರೀ ಬಂಧ, ಪದ್ಮ ಬಂಧ, ಶ್ರೀ ಭದ್ರ, ಸರ್ವತೋಭದ್ರ ಮೊದಲಾದ ವಿಭಾಗಗಳನ್ನು ಸೂಚಿಸಿರುತ್ತಾರೆ[೫೯].

ಮುಖಮಂಟಪಕ್ಕೆ ಮೊದಲು ಭಕ್ತನು ಬಲಿಪೀಠಕ್ಕೆ ಪ್ರದಕ್ಷಿಣೆ ಹಾಕಬೇಕೆಂಬ ಪದ್ಧತಿಯೂ ಇರುವುದು ಕಂಡು ಬರುತ್ತದೆ. ಗರ್ಭಗುಡಿಯ ಮೇಲಿರುವ ವಿಮಾನ ಹಾಗೂ ಬಲಿಪೀಠದ ರಚನೆಯಲ್ಲಿ ಒಂದು ವ್ಯತ್ಯಾಸವನ್ನು ನೋಡಬಹುದು. ಬಲಿಪೀಠದ ಮೇಲ್ಭಾಗವು ನೈವೇದ್ಯವನ್ನು ಇಡಲು ಕಮಲದ ವಿನ್ಯಾಸವನ್ನು ಹೊಂದಿದ್ದು ಅಧಃ ಪದ್ಮದ ರಚನೆಯನ್ನು ಹೊಂದಿರುತ್ತದೆ. ವಿಮಾನದ ಮೇಲ್ಭಾಗವು ಚಪ್ಪಟೆಯಾಗಿರದೆ ಶಿಖರದಂತೆ ಚೂಪಾಗಿ ಇರುತ್ತದೆ. ವಿಮಾನದ ಮೇಲೆ ಕಲಶವೂ ಇರುತ್ತದೆ. ಬಲಿಪೀಠದಲ್ಲಿ ಕಲಶದ ಭಾಗವು ಇರುವುದಿಲ್ಲ. ವಿಮಾನದ ರಚನೆಯ ವಿನ್ಯಾಸದಂತೆ ಬಲಿಪೀಠಗಳು ಸಹ ಚಚೌಕವಾಗಿ, ಬಹು ಭುಜಾಕೃತಿಯಾಗಿ ಇಲ್ಲವೇ ವೃತ್ತಾಕಾರದಲ್ಲಿ ಇರುವುದನ್ನು ನೋಡಬಹುದು. ಕೆಲವು ದೇವಾಲಯಗಳಲ್ಲಿ ಧ್ವಜಸ್ತಂಭಕ್ಕೆ ಅಂಟಿಕೊಂಡಂತೆ ಬಲಿಪೀಠಗಳನ್ನು ನಿರ್ಮಾಣ ಮಾಡಲಾಗಿರುತ್ತದೆ.

ಬಲಿಪೀಠ ಎಂಬ ಹೆಸರಿನ ಹಿನ್ನೆಲೆಯನ್ನು ನೋಡಿದರೆ ಇದು ಬಲಿ ಕೊಡುವ ಪೀಠ ಎಂದು ತಿಳಿದು ಬರುತ್ತದೆ. ಪ್ರಾಣಿ ಬಲಿಗಳನ್ನು ಉದ್ದೇಶಿಸಿ ಅನೇಕ ಗ್ರಂಥಗಳು ದೊರೆಯುತ್ತವೆ. ಇಷ್ಟದೇವರಿಗೆ ಪ್ರಾಣಿಗಳನ್ನು ಬಲಿಕೊಟ್ಟು ಅವರನ್ನು ತೃಪ್ತಿ ಪಡಿಸುವ ಪದ್ಧತಿಯು ಆರ್ಯ ಪೂರ್ವ ಕಾಲದಲ್ಲಿಯೂ ರೂಢಿಯಲ್ಲಿತ್ತು ಎಂದು ತಿಳಿದು ಬರುತ್ತದೆ[೬೦]. ಯಾಗಗಳಲ್ಲಿಯೂ ಪ್ರಾಣಿಗಳನ್ನು ಬಲಿಕೊಡುವ ಪದ್ಧತಿ ಇದ್ದುದು ತಿಳಿದು ಬರುತ್ತದೆ. ಅಶ್ವಮೇಧ ಯಾಗದ ಅಂತ್ಯದಲ್ಲಿ ಯಾಗಕ್ಕೆ ಬಿಟ್ಟ ಅಶ್ವವನ್ನು ಬಲಿಕೊಡಲಾಗುತ್ತಿತ್ತು. ನಂತರದ ಕಾಲದಲ್ಲಿ ಪ್ರಾಣಿಯ ಬಲಿಯನ್ನು ಕೊಡುವ ಬದಲಾಗಿ ನೈವೇದ್ಯವನ್ನು ಬಲಿಪೀಠದ ಮೇಲೆ ಇಡುವ ಪದ್ಧತಿಯು ಪ್ರಾರಂಭವಾಯಿತು ಎಂದು ತೋರುತ್ತದೆ.

---

೫೮. ಮರದ ಬಲಿಪೀಠವಾದರೆ ಲೋಹದ ಕವಚವನ್ನು ಕಾರಣಾಗಮ ಮೊದಲಾದ ಗ್ರಂಥಗಳು, ಒಂದು ಕಾಲಕ್ಕೆ ಮಣ್ಣಿನಿಂದ ಮಾಡಿದ ಬಲಿಪೀಠಗಳೇ ವಾಡಿಕೆಯಲ್ಲಿದ್ದುವೆಂದು ಶಿಲ್ಪರತ್ನದಿಂದ ತಿಳಿದುಬರುತ್ತದೆ.....
ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ,** ಪುಟ- ೯೧

೫೯. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ,** ಪುಟ- ೯೧

೬೦. ಪ್ರಾಣಿಬಲಿಯ ಉಲ್ಲೇಖವು ಋಗ್ವೇದದಲ್ಲಿ ಸೂಚಿತವಾಗಿದೆ. ಇಷ್ಟ-ದೇವರಿಗೆ ಬಲಿಕೊಟ್ಟು ಅವರನ್ನು ತೃಪ್ತಿ ಪಡಿಸುವ ಪದ್ಧತಿಯು ಆರ್ಯ ಪೂರ್ವದಲ್ಲೂ ಇತ್ತು.....
ಎಸ್.ಡಿ. ಶೆಟ್ಟಿ: ಲೇಖನ- ಬಲಿಗಂಬಗಳು, **ಕರಕುಶಲ ಕಲೆಗಳು,**
ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨, ಪುಟ-೨೩೩



ಚಿತ್ರ ೫೮



ಚಿತ್ರ ೫೯



ಚಿತ್ರ ೬೦



ಚಿತ್ರ ೬೧



ಚಿತ್ರ ೬೨



ಚಿತ್ರ ೬೩

ಮಂಡ್ಯ ಜಿಲ್ಲೆಯ ಹೊಸ ಹೊಳಲಿನಲ್ಲಿ ಇರುವ ಶ್ರೀ ಲಕ್ಷ್ಮೀನಾರಾಯಣ ದೇವಾಲಯದ ಆವರಣದಲ್ಲಿ ಪುಟ್ಟದಾದ ಬಲಿಪೀಠವಿದೆ (ಚಿತ್ರ ೫೯). ಇದರ ಮೇಲೆ ಇಟ್ಟಿರುವ ನೈವೇದ್ಯವನ್ನು ಕಾಗೆಯೊಂದು ತಿನ್ನುತ್ತಿದೆ. ಹಿಂದೂ ಧರ್ಮದಲ್ಲಿ ಪಿತೃಗಳು ಕಾಗೆಯ ರೂಪದಲ್ಲಿ ಬರುವರು ಎನ್ನುವ ನಂಬಿಕೆಯು ಇರುವುದು ಕಾಣುತ್ತದೆ.

ಬಳ್ಳಾರಿ ಜಿಲ್ಲೆಯ ಹಂಪಿಯಲ್ಲಿ ಇರುವ ಶ್ರೀ ವಿರೂಪಾಕ್ಷ ದೇವಾಲಯದ ಆವರಣದಲ್ಲಿ ಬಲಿಪೀಠವಿದೆ (ಚಿತ್ರ ೬೦). ಇದು ಸುಮಾರು ನಾಲ್ಕು ಅಡಿ ಎತ್ತರದ ಬಲಿಪೀಠವಾಗಿದೆ. ಹಜಾರ ರಾಮ ದೇವಾಲಯದ ಆವರಣದಲ್ಲಿ ಸುಂದರವಾದ ಬಲಿಪೀಠವು ಇರುವುದನ್ನು ನೋಡಬಹುದು (ಚಿತ್ರ ೬೧). ಈ ಬಲಿಪೀಠದ ಕೆಳಭಾಗದಲ್ಲಿ ನಾಲ್ಕೂ ಕಡೆಗಳಲ್ಲಿ ಕೀರ್ತಿಮುಖದ ಶಿಲ್ಪರಚನೆಗಳು ಇರುವುದು ಕಾಣುತ್ತದೆ. ಉದ್ಧಾನ ವೀರಭದ್ರ ದೇವಾಲಯದ ಆವರಣದಲ್ಲಿ ಎರಡೂವರೆ ಅಡಿ ಎತ್ತರದ ಪುಟ್ಟ ಬಲಿಪೀಠವಿದೆ (ಚಿತ್ರ ೬೨). ವಿಜಯವಿಠಲ ದೇವಾಲಯದ ಆವರಣದಲ್ಲಿ ಮೊದಲಿಗೆ ಬಲಿಪೀಠವಿತ್ತು. ಈಗ ಅದರ ಪೀಠದ ಭಾಗವು ಮಾತ್ರ ಉಳಿದಿರುವುದನ್ನು ಕಾಣಬಹುದು (ಚಿತ್ರ ೬೩). ಈ ಪೀಠದ ಭಾಗದಲ್ಲಿ ನಾಲ್ಕೂ ಕಡೆಗಳಲ್ಲಿ ಆನೆಯ ಶಿಲ್ಪಗಳನ್ನು ಕೆತ್ತಲಾಗಿದೆ.

ಚಾಮರಾಜನಗರ ಜಿಲ್ಲೆಯ ಶ್ರೀ ಲಕ್ಷ್ಮೀವರದರಾಜ ಸ್ವಾಮಿ ಆವರಣದಲ್ಲಿ ಸುಂದರವಾದ ಬಲಿಪೀಠವಿದೆ (ಚಿತ್ರ ೬೪). ಇದು ಸುಮಾರು ನಾಲ್ಕೂವರೆ ಅಡಿ ಎತ್ತರವನ್ನು ಹೊಂದಿದೆ. ಇದರ ಪೀಠವು ನಕ್ಷತ್ರಾಕಾರದ ರಚನೆಯನ್ನು ಹೊಂದಿರುವುದು ಕಾಣುತ್ತದೆ. ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಲ್ಲಿನ ವಿದ್ಯಾಶಂಕರ ದೇವಾಲಯದ ಎದುರು ನಾಲ್ಕು ಅಡಿ ಎತ್ತರದ ಬಲಿಪೀಠವಿದೆ (ಚಿತ್ರ ೬೫). ಗದಗ ಜಿಲ್ಲೆಯ ತ್ರಿಕೂಟೇಶ್ವರ ದೇವಾಲಯ (ಚಿತ್ರ ೬೬) ಮತ್ತು ವೀರನಾರಾಯಣ ದೇವಾಲಯಗಳ (ಚಿತ್ರ ೬೭) ಆವರಣದಲ್ಲಿ ಬಲಿಪೀಠಗಳು ಇವೆ.

ಮೈಸೂರು ಅರಮನೆಯ ಆವರಣದಲ್ಲಿ ಇರುವ ಶ್ರೀ ವರಾಹಸ್ವಾಮಿ ದೇವಾಲಯದ ಎದುರು ಬಲಿಪೀಠವಿದೆ (ಚಿತ್ರ ೬೮). ಇದು ಸುಮಾರು ಐದು ಅಡಿ ಎತ್ತರದ ಬಲಿಪೀಠವಾಗಿದೆ. ಅರಮನೆಯ ಆವರಣದಲ್ಲಿ ಇರುವ ಶ್ರೀ ಭುವನೇಶ್ವರಿ ದೇವಾಲಯದ ಎದುರು ಕಲ್ಲು ಮತ್ತು ಗಾರೆಯಲ್ಲಿ ನಿರ್ಮಿಸಿದ ಬಲಿಪೀಠವಿದೆ (ಚಿತ್ರ ೬೯). ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕಿನ ಮುಡುಕುತೊರೆಯಲ್ಲಿ ಇರುವ ಶ್ರೀ ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿ ಮೂರು ಅಡಿ ಎತ್ತರದ ಪುಟ್ಟ ಬಲಿಪೀಠವಿದೆ (ಚಿತ್ರ ೭೦).

ಮಡಿಕೇರಿ ಜಿಲ್ಲೆಯ ಓಂಕಾರೇಶ್ವರ ದೇವಾಲಯದ ಆವರಣದಲ್ಲಿ ಬಲಿಪೀಠವಿದೆ (ಚಿತ್ರ ೭೧). ಇದು ಸುಮಾರು ಐದು ಅಡಿ ಎತ್ತರವನ್ನು ಹೊಂದಿದೆ. ಚೌಕಾಕಾರದ ಪೀಠದ ಮೇಲೆ ಬಲಿಪೀಠವನ್ನು ಇರಿಸಲಾಗಿದೆ. ಈ ಪೀಠದಲ್ಲಿ ಬಲಿಪೀಠದ ಸುತ್ತಲೂ ಎಂಟು ದಿಕ್ಕುಗಳಲ್ಲಿಯೂ ಪುಟ್ಟ ಪುಟ್ಟ ಬಲಿಪೀಠಗಳನ್ನು ಇರಿಸಲಾಗಿದೆ.



ಚಿತ್ರ ೬೪



ಚಿತ್ರ ೬೫



ಚಿತ್ರ ೬೬



ಚಿತ್ರ ೬೭



ಚಿತ್ರ ೬೮



ಚಿತ್ರ ೬೯

ಬಲಿಪೀಠಗಳಲ್ಲಿ ಅತ್ಯಂತ ಸುಂದರವಾದ ಬಲಿಪೀಠವು ಕೋಲಾರದ ಸೋಮೇಶ್ವರ ದೇವಾಲಯದ ಆವರಣದಲ್ಲಿದೆ (ಚಿತ್ರ ೭೨). ಈ ಬಲಿಪೀಠವು ಚೌಕಾಕಾರದ ರಚನೆಯನ್ನು ಹೊಂದಿದ್ದು ಸುಂದರವಾದ ಕೆತ್ತನೆಯಿಂದ ಕೂಡಿದೆ. ಕೋಲಾರ ಜಿಲ್ಲೆಗೆ ಸೇರಿದ ಮತ್ತೊಂದು ಸುಂದರವಾದ ಬಲಿಪೀಠವು ಚಿಕ್ಕಬಳ್ಳಾಪುರ ತಾಲ್ಲೂಕಿನ ರಂಗಸ್ಥಳದಲ್ಲಿ ಇರುವ ಶ್ರೀ ರಂಗನಾಥ ದೇವಾಲಯದ ಆವರಣದಲ್ಲಿ ಇದೆ (ಚಿತ್ರ ೭೩). ಈ ಬಲಿಪೀಠದ ಕೆಳಗಿನ ರಚನೆಯು ಅಷ್ಟಭುಜಗಳನ್ನು ಹೊಂದಿದೆ. ಪೀಠವು ಮೇಲೆ ಹೋದಂತೆ ವೃತ್ತಾಕಾರವನ್ನು ಹೊಂದುತ್ತದೆ. ಈ ಬಲಿಪೀಠವನ್ನು ಸುಂದರವಾದ ಕೆತ್ತನೆಯಿಂದ ಅಲಂಕರಿಸಲಾಗಿದೆ. ಇದರ ಎತ್ತರವು ಸುಮಾರು ಐದು ಅಡಿಗಳಾಗಿವೆ.

ಹೊಯ್ಸಳರ ಕಾಲದಲ್ಲಿ ನಿರ್ಮಿಸಲಾದ ಬೇಲೂರಿನ ಶ್ರೀ ಚೆನ್ನಕೇಶವ ದೇವಾಲಯದ ಆವರಣದಲ್ಲಿ ಬಲಿಪೀಠವಿದೆ (ಚಿತ್ರ ೭೪). ಈ ಬಲಿಪೀಠದ ಎತ್ತರವು ನಾಲ್ಕು ಅಡಿಯಾಗಿದೆ. ಇದನ್ನು ಕೂಡಾ ಸುಂದರವಾದ ಬಲಿಪೀಠಗಳಲ್ಲಿ ಒಂದನ್ನಾಗಿ ಗುರುತಿಸಬಹುದಾಗಿದೆ.

ಕೆಲವು ದೇವಾಲಯಗಳ ಆವರಣದಲ್ಲಿ ದೇವಮೂರ್ತಿಗೆ ಅಭಿಮುಖವಾಗಿ ಬಲಿಪೀಠಗಳಿದ್ದು ದೇವಾಲಯದ ಸುತ್ತಲೂ ಸಣ್ಣ ಸಣ್ಣ ಬಲಿಪೀಠಗಳು ಇರುವುದು ಕಾಣುತ್ತದೆ. ಮೈಸೂರು ಜಿಲ್ಲೆಯ ವೈದ್ಯನಾಥ ದೇವಾಲಯದ ಆವರಣದಲ್ಲಿ ದೇವಾಲಯದ ಗರ್ಭಗುಡಿಯ ಸುತ್ತಲೂ ಎಂಟು ಮೂಲೆಗಳಲ್ಲೂ ಸಣ್ಣ ಸಣ್ಣ ಬಲಿಪೀಠಗಳು ಇರುವುದನ್ನು ನೋಡಬಹುದು (ಚಿತ್ರ ೭೫). ಈ ಬಲಿಪೀಠಗಳು ಕಲ್ಲಿನದಾಗಿದ್ದು ಕುಂಭದಂತೆ ರಚನೆಯನ್ನು ಹೊಂದಿವೆ.

ಚಿಕ್ಕಮಗಳೂರು ಮೂಡಿಗೆರೆಯಲ್ಲಿ ಇರುವ ಕಳಸೇಶ್ವರ ದೇವಾಲಯದ ಎದುರು ಧ್ವಜಸ್ತಂಭದ ನಂತರ ಬಲಿಪೀಠವಿದೆ (ಚಿತ್ರ ೭೬). ಇದರ ಜೊತೆಗೆ ದೇವಾಲಯದ ಗರ್ಭಗುಡಿಯ ಸುತ್ತಲೂ ಸಾಲು ಸಾಲಾಗಿ ಬಲಿಪೀಠಗಳು ಇರುವುದನ್ನು ನೋಡಬಹುದು (ಚಿತ್ರ ೭೭). ಚೌಕಾಕಾರದ ಪೀಠದ ಮೇಲೆ ಪುಟ್ಟ ಬಲಿಪೀಠವನ್ನು ಇರಿಸಲಾಗಿದೆ. ಈ ಪೀಠವು ಅಧಃ ಪದ್ಮದ ರಚನೆಯನ್ನು ಮಾತ್ರ ಹೊಂದಿರುವುದು ಕಾಣುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದಲ್ಲಿ ಇರುವ ಮಹಾಬಲೇಶ್ವರ ದೇವಾಲಯದ ಗರ್ಭಗುಡಿಯ ಎದುರು ಬಲಿಪೀಠವಿದೆ (ಚಿತ್ರ ೭೮). ಈ ಬಲಿಪೀಠದ ಸುತ್ತಲೂ ಎಂಟೂ ದಿಕ್ಕುಗಳಲ್ಲಿ ಪುಟ್ಟ ಪುಟ್ಟ ಬಲಿಪೀಠಗಳನ್ನು ಇರಿಸಲಾಗಿದೆ. ದೇವಾಲಯದ ಗರ್ಭಗುಡಿಯ ಸುತ್ತಲೂ ಎಂಟು ದಿಕ್ಕುಗಳಲ್ಲಿಯೂ ಕೂಡಾ ಬಲಿಪೀಠಗಳು ಇರುವುದನ್ನು ನೋಡಬಹುದು (ಚಿತ್ರ ೭೯). ಈ ಬಲಿಪೀಠಗಳಲ್ಲೂ ಅಧಃ ಪದ್ಮದ ರಚನೆಯು ಇರುವುದನ್ನು ಕಾಣುತ್ತೇವೆ. ಕೆಲವು ದೇವಾಲಯಗಳ ಗರ್ಭಗುಡಿಯ ಎದುರು ಇರುವ ಬಲಿಪೀಠಗಳು ಚಿಕ್ಕದಾಗಿರುತ್ತವೆ.



ಚಿತ್ರ ೨೦



ಚಿತ್ರ ೨೧



ಚಿತ್ರ ೨೨



ಚಿತ್ರ ೨೩



ಚಿತ್ರ ೨೪



ಚಿತ್ರ ೨೫

ಬೆಂಗಳೂರಿನ ಶ್ರೀ ವೀರಾಂಜನೇಯ ದೇವಾಲಯದ ಎದುರು ಇರುವ ಬಲಿಪೀಠವು ಸುಮಾರು ಒಂದೂವರೆ ಅಡಿಯ ಎತ್ತರವನ್ನು ಹೊಂದಿದೆ (ಚಿತ್ರ ೮೦). ಚಿತ್ರದಲ್ಲಿ ಈ ಪೀಠದ ಮೇಲೆ ನೈವೇದ್ಯವನ್ನು ಇಟ್ಟಿರುವುದು ಕಾಣುತ್ತದೆ. ಶ್ರೀ ಶ್ರೀನಿವಾಸ ದೇವಾಲಯದ ಎದುರು ಇರುವ ಬಲಿಪೀಠವು ಎರಡು ಅಡಿ ಎತ್ತರವನ್ನು ಹೊಂದಿದೆ (ಚಿತ್ರ ೮೧). ಈ ಬಲಿಪೀಠವು ಇತ್ತೀಚಿನ ರಚನೆಯಾಗಿದೆ. ಇದರ ಎರಡು ಕಡೆಗಳಲ್ಲಿ ಶಂಖ ಚಕ್ರದ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ.

೪. ಗರುಡಗಂಬ:

ದೇವಾಲಯಗಳ ಆವರಣದಲ್ಲಿ ಗರುಡಗಂಬಗಳು ಇರುವುದನ್ನು ನೋಡುತ್ತೇವೆ. ಈ ಗರುಡಗಂಬಗಳು ವೈಷ್ಣವ ಧರ್ಮದ ದೇವಾಲಯಗಳ ಆವರಣದಲ್ಲಿ ದೊರೆಯುತ್ತವೆ. ಶೈವ ಧರ್ಮದ ದೇವಾಲಯಗಳ ಎದುರು ನಂದಿಗಂಬವು ಇದ್ದಂತೆ ವೈಷ್ಣವ ಧರ್ಮದ ದೇವಾಲಯದಲ್ಲಿ ಗರುಡಗಂಬಗಳು ಇರುತ್ತವೆ. ಈ ಗರುಡಗಂಬಗಳಲ್ಲಿ ವಿಷ್ಣುವಿನ ವಾಹನವಾದ ಗರುಡನ ಶಿಲ್ಪಗಳನ್ನು ಸ್ಥಾಪಿಸಲಾಗಿರುತ್ತದೆ. ಗರುಡನ ಶಿಲ್ಪವನ್ನು ಮನುಷ್ಯನಂತೆ ರಚಿಸಲ್ಪಟ್ಟಿದ್ದು ಇದಕ್ಕೆ ರೆಕ್ಕೆಯನ್ನು ಜೋಡಿಸಿದಂತೆ ಶಿಲ್ಪ ರಚನೆಯನ್ನು ಮಾಡಲಾಗಿರುತ್ತದೆ. ಗರುಡನ ಶಿಲ್ಪವು ಕುಳಿತಂತೆ ಇಲ್ಲವೇ ನಿಂತಂತೆ ರಚಿಸಿದ್ದು ದೇವಾಲಯದ ಮೂಲದೇವರಿಗೆ ಕೈ ಜೋಡಿಸಿ ನಮಸ್ಕರಿಸುತ್ತಿರುವಂತೆ ಶಿಲ್ಪ ರಚನೆಯನ್ನು ಹೊಂದಿರುತ್ತದೆ. ಕೆಲವು ದೇವಾಲಯಗಳಲ್ಲಿ ಗರುಡನಿಗೆ ಮಂಟಪವನ್ನೂ ನಿರ್ಮಿಸಲಾಗಿರುತ್ತದೆ.

ಗದಗ ಜಿಲ್ಲೆಯ ಶ್ರೀ ವೀರನಾರಾಯಣ ದೇವಾಲಯದ ಎದುರು ಸುಮಾರು ನಲವತ್ತು ಅಡಿ ಎತ್ತರದ ಗರುಡಗಂಬವಿದೆ (ಚಿತ್ರ ೮೨). ಈ ಗರುಡಗಂಬದ ತುದಿಯಲ್ಲಿ ಪುಟ್ಟ ಮಂಟಪವಿದ್ದು ಇದರ ಮಧ್ಯದಲ್ಲಿ ದೇವಾಲಯದ ದೇವಮೂರ್ತಿಗೆ ಅಭಿಮುಖವಾಗಿ ಗರುಡನ ಶಿಲ್ಪವಿದೆ. ಹಂಪಿಯ ವಿಜಯವಿಠಲ ದೇವಾಲಯದ ಆವರಣದಲ್ಲಿ ಇರುವ ಕಲ್ಲಿನ ರಥವು ಗರುಡಗಂಬವಾಗಿದೆ (ಚಿತ್ರ ೮೩). ಈ ರಥದ ಒಳಗೆ ದೇವಾಲಯದ ಮೂರ್ತಿಗೆ ಅಭಿಮುಖವಾಗಿರುವಂತೆ ಗರುಡನ ಉಬ್ಬುಶಿಲ್ಪ ಇರುವುದನ್ನು ನೋಡಬಹುದು.

ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆಯಲ್ಲಿ ಇರುವ ಕೇದಾರೇಶ್ವರ ದೇವಾಲಯದ ಎದುರು ವಿಶೇಷವಾದ ಗರುಡಗಂಬವಿದೆ[೬೧]. ಈ ಗರುಡಗಂಬವು ವಿಶೇಷವಾದ ಕೆತ್ತನೆಯಿಂದ ಕೂಡಿದೆ. ಈ ಗರುಡಗಂಬದಲ್ಲಿ ಗರುಡನಿಗೆ ಎರಡು ತಲೆ ಇರುವುದನ್ನು ನೋಡಬಹುದು. ಗರುಡನ ಮುಖಗಳು ಪಕ್ಷಿಯ ಮುಖದಂತಿದ್ದು ದೇಹವು ಮಾನವನಂತೆ ಚಿತ್ರಿಸಲ್ಪಟ್ಟಿರುವುದನ್ನು ನೋಡಬಹುದು.

ಕೆಲವು ದೇವಾಲಯಗಳ ಆವರಣದಲ್ಲಿ ಗರುಡಗಂಬಗಳನ್ನು ನಿರ್ಮಿಸಿರದಿದ್ದರೆ ಅಲ್ಲಿ ಗರುಡನ ಶಿಲ್ಪವನ್ನು ಪೀಠದ ಮೇಲೆ ನಿರ್ಮಿಸಿ ದೇವಾಲಯದ ದೇವ ಮೂರ್ತಿಗೆ


೬೧. ಎಚ್.ಎಸ್. ಮಂಜುನಾಥ್: ಲೇಖನ– ದಕ್ಷಿಣದ ಕೇದಾರ ಬಳ್ಳಿಗಾವೆ, ಸುಧಾ ಮಾಸಪತ್ರಿಕೆ, ಫೆಬ್ರವರಿ ೧೯, ೨೦೦೪, ಪುಟ– ೨೧



ಚಿತ್ರ ೭೬



ಚಿತ್ರ ೭೭



ಚಿತ್ರ ೭೯



ಚಿತ್ರ ೭೮



ಚಿತ್ರ ೮೦



ಚಿತ್ರ ೮೧

ಅಭಿಮುಖವಾಗಿ ನಿಲ್ಲಿಸಿರಲಾಗಿರುತ್ತದೆ. ಹಾಸನ ಜಿಲ್ಲೆಯ ಬೇಲೂರಿನ ಶ್ರೀ ಚೆನ್ನಕೇಶವ ದೇವಾಲಯದ ಆವರಣದಲ್ಲಿ ಗರುಡನ ಶಿಲ್ಪವು ಇರುವುದು ಕಾಣುತ್ತದೆ (ಚಿತ್ರ ೮೪). ಈ ಗರುಡನ ಶಿಲ್ಪವನ್ನು ಸುಂದರವಾಗಿ ಕೆತ್ತಲಾಗಿದೆ. ಇದು ಸುಮಾರು ನಾಲ್ಕು ಅಡಿ ಎತ್ತರದ ಗರುಡನ ಮೂರ್ತಿಯಾಗಿದೆ. ದೇವಾಲಯದ ದೇವ ಮೂರ್ತಿಗೆ ಎದುರಾಗಿ ಈ ಶಿಲ್ಪವನ್ನು ಸ್ಥಾಪಿಸಲಾಗಿದೆ. ಈ ಮೂರ್ತಿಯು ಎರಡೂ ಕೈಗಳನ್ನು ಜೋಡಿಸಿ ದೇವಮೂರ್ತಿಗೆ ನಮಸ್ಕರಿಸುತ್ತಿರುವಂತೆ ಶಿಲ್ಪರಚನೆಯನ್ನು ಮಾಡಲಾಗಿದೆ.

ಕೆಲವು ದೇವಾಲಯಗಳ ಆವರಣಗಳಲ್ಲಿ ದೀಪಸ್ತಂಭಗಳನ್ನು ಸ್ಥಾಪಿಸಿ ಇದರಲ್ಲಿ ಗರುಡನ ಉಬ್ಬುಶಿಲ್ಪದ ರಚನೆಯನ್ನು ಮಾಡಿರುತ್ತಾರೆ. ಈ ದೀಪಸ್ತಂಭಗಳನ್ನು ಗರುಡಗಂಬಗಳು ಎಂದೂ ಕರೆಯಲಾಗುತ್ತದೆ. ಈ ಗರುಡಗಂಬಗಳ ಮೂಲವಾಗಿ ದೀಪಸ್ತಂಭಗಳೇ ಆಗಿವೆ. ನಂತರದ ದಿನಗಳಲ್ಲಿ ಈ ದೀಪಸ್ತಂಭಗಳಲ್ಲಿ ದೇವಮೂರ್ತಿಗೆ ಅಭಿಮುಖವಾಗಿ ಗರುಡನ ಉಬ್ಬುಶಿಲ್ಪವನ್ನು ರಚಿಸಿ ಇವನ್ನು ಗರುಡಗಂಬಗಳು ಎಂದು ಕರೆಯಲಾಯಿತು. ಗರುಡಗಂಬಗಳು ಎಂದು ಕರೆಸಿಕೊಳ್ಳುವ ದೀಪಸ್ತಂಭಗಳು ವೈಷ್ಣವ ಧರ್ಮದ ದೇವಾಲಯಗಳ ಆವರಣದಲ್ಲಿ ದೊರೆಯುತ್ತವೆ.

೫. ಸಪ್ತಮಾತೃಕೆಯರ ಪೀಠ:

ಇದನ್ನು ಕೆಲವರು ನಕ್ಷತ್ರ ಮಣಿ ಪೀಠ ಎಂದೂ ಕರೆಯುತ್ತಾರೆ. ಇದು ಸುಮಾರು ೬ ರಿಂದ ೧೨ ಇಂಚು ಅಗಲ, ಸುಮಾರು ಒಂದೂವರೆ ಅಡಿ ಉದ್ದವಿದ್ದು ಎತ್ತರ ಸುಮಾರು ೬ರಿಂದ ೧೨ ಅಡಿ ಇರುತ್ತದೆ. ಇದು ಬಹಳ ಪುಟ್ಟದಾದ ರಚನೆಯಾಗಿದೆ. ಈ ಪೀಠದ ಮೇಲೆ ಸಾಲಾಗಿ ಏಳು ಪುಟ್ಟ ಪುಟ್ಟ ಲಿಂಗಾಕಾರದ ರಚನೆಯು ಇರುತ್ತದೆ. ಈ ಸಾಲಿನ ಕೊನೆಯಲ್ಲಿ ಎರಡೂ ಕಡೆ ಒಂದೊಂದು ಲಿಂಗಾಕಾರದ ರಚನೆ ಇರುವುದನ್ನು ಕಾಣಬಹುದು. ಈ ಏಳು ರಚನೆಗಳು ಸಪ್ತಮಾತೃಕೆಯರನ್ನು ಸಂಕೇತಿಸುತ್ತದೆ. ಬ್ರಾಹ್ಮೀ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹೀ, ಇಂದ್ರಾಣಿ, ಚಾಮುಂಡಾ ಎಂಬುದಾಗಿ ಮಾತೃದೇವತೆಯರು ಏಳು ಮಂದಿ. ಇವರ ಬಲ ಮತ್ತು ಎಡ ಪಾರ್ಶ್ವಗಳಲ್ಲಿ ವೀರಭದ್ರ ಮತ್ತು ವಿನಾಯಕರು ಪರಸ್ಪರ ಅಭಿಮುಖರಾಗಿ ಇರುತ್ತಾರೆ.

ಮಾತೃದೇವತೆಯರು ಸದಾ ಉತ್ತರಾಭಿಮುಖರಾಗಿ ಇರುತ್ತಾರೆ[೬೨]. ಇದನ್ನು ಕೆಲವರು ನವಗ್ರಹಗಳೆಂದೂ ಗುರುತಿಸುವುದುಂಟು. ಆದರೆ ಇದು ನವಗ್ರಹ ಪೀಠವಾಗಲೀ, ನಕ್ಷತ್ರಮಣಿ ಪೀಠವಾಗಲಿ ಅಲ್ಲ. ಇದು ಸಪ್ತಮಾತೃಕೆಯರ ಪೀಠವಾಗಿದೆ. ಈ ಪೀಠವನ್ನು ದೇವಾಲಯದ ದಕ್ಷಿಣ ದಿಕ್ಕಿನ ಹೊರ ಆವರಣದಲ್ಲಿ ಸ್ಥಾಪಿಸಲಾಗಿರುತ್ತದೆ. ಈ ಪೀಠವು ಹೆಚ್ಚಾಗಿ ಶೈವ ದೇವಾಲಯದ ಆವರಣದಲ್ಲಿ ದೊರೆಯುತ್ತದೆ.

---

೬೨. ಡಾ. ಜಿ. ಜ್ಞಾನಾನಂದ: **ಶ್ರೀ ಕಾಶ್ಯಪ ಶಿಲ್ಪಶಾಸ್ತ್ರಂ,** ಪುಟ-೨೭



ಚಿತ್ರ ೮೧



ಚಿತ್ರ ೮೨



ಚಿತ್ರ ೮೩



ಚಿತ್ರ ೮೪



ಚಿತ್ರ ೮೫

ಮಡಿಕೇರಿ ಜಿಲ್ಲೆಯ ಭಾಗಮಂಡಲದಲ್ಲಿ ಇರುವ ಭಗಂಡೇಶ್ವರ ದೇವಾಲಯದ ಆವರಣದಲ್ಲಿ ಸಪ್ತಮಾತೃಕೆಯರ ಪೀಠವಿದೆ (ಚಿತ್ರ ೮೫). ಈ ಪೀಠದಲ್ಲಿ ಸಾಲಾಗಿ ಇರುವ ಏಳು ಪುಟ್ಟಪುಟ್ಟ ಲಿಂಗಾಕಾರದ ರಚನೆಯು ಇರುವುದನ್ನು ನೋಡಬಹುದು. ಇದರ ಎರಡೂ ಕಡೆಗಳಲ್ಲಿ ಒಂದೊಂದು ರಚನೆಯು ಇದೆ. ಗೋಕರ್ಣದ ಶ್ರೀ ಮಹಾಬಲೇಶ್ವರ ದೇವಾಲಯದ ಆವರಣದಲ್ಲಿಯೂ ಸಪ್ತಮಾತೃಕೆಯರ ಪೀಠವು ಇದೆ (ಚಿತ್ರ ೮೬). ಇಲ್ಲಿನ ಸಪ್ತಮಾತೃಕೆಯರ ಪೀಠಕ್ಕೆ ಎತ್ತರದ ಪೀಠವನ್ನು ಅಳವಡಿಸಿರುವುದು ಕಾಣುತ್ತದೆ.

ಇವಿಷ್ಟು ಹಿಂದೂ ಧರ್ಮದ ದೇವಾಲಯದ ಹೊರ ಆವರಣದಲ್ಲಿ ದೊರೆಯುವ ಸ್ತಂಭಗಳಾದರೆ ಜೈನ ಧರ್ಮದ ದೇವಾಲಯದ ಹೊರ ಆವರಣದಲ್ಲಿ ಬ್ರಹ್ಮ ಸ್ತಂಭ, ಮಾನಸ್ತಂಭಗಳೆಂಬ ಎರಡು ವಿಧದ ಸ್ತಂಭಗಳು ಇರುವುದು ಕಂಡು ಬರುತ್ತವೆ. ಜೈನ ಧರ್ಮದ ದೇವಾಲಯಗಳನ್ನು ಬಸದಿ ಎಂದು ಕರೆಯುತ್ತಾರೆ. ಬಸದಿ ಎಂದರೆ ವಾಸ ಮಾಡುವ ಸ್ಥಳ ಎಂದು ಅರ್ಥ. ಈ ಬಸದಿಗಳು ಜೈನರ ಪೂಜಾ ಮಂದಿರಗಳಾಗಿವೆ. ಈ ಬಸದಿಗಳ ಎದುರಿಗೆ ಒಂದು ವಿಶೇಷವಾದ ಸ್ತಂಭವಿರುವುದು ಕಾಣುತ್ತದೆ. ಇದನ್ನು ಮಾನಸ್ತಂಭ ಎಂದು ಕರೆಯುತ್ತಾರೆ.

ಜೈನರ ಆರಾಧ್ಯ ಮೂರ್ತಿಯಾದ ಗೊಮ್ಮಟ ಮೂರ್ತಿಯ ಎದುರೂ ಮಾನಸ್ತಂಭಗಳನ್ನು ಸ್ಥಾಪಿಸಿರುತ್ತಾರೆ. ಹಿಂದೂ ಧರ್ಮದ ಧ್ವಜಸ್ತಂಭದ ಉದ್ದೇಶವು ದೇವಾಲಯಕ್ಕೆ ಬರುವ ಭಕ್ತನು ತನ್ನ ಸಂಕಲ್ಪವನ್ನು ದೃಢೀಕರಿಸಿಕೊಂಡು ಎದ್ದು ನಿಲ್ಲುವಂತಾಗಲಿ ಎಂದಿದ್ದರೆ, ಬಸದಿಗೆ ಬರುವ ಭಕ್ತನ ಮಾನ ಅಂದರೆ ಅಹಂಕಾರ ಈ ಮಾನಸ್ತಂಭವನ್ನು ನೋಡಿದ ತಕ್ಷಣ ನಾಶವಾಗಲಿ ಎಂಬ ಉದ್ದೇಶವನ್ನು ಹೊಂದಿರುವುದು ತಿಳಿದು ಬರುತ್ತದೆ. ಅದೇ ಉದ್ದೇಶದಿಂದಲೇ ಈ ಮಾನಸ್ತಂಭಗಳನ್ನು ಆದಷ್ಟೂ ಉದ್ದವಾಗಿ, ಆದಷ್ಟು ಎತ್ತರದ ಪೀಠಗಳಲ್ಲಿ ಇಲ್ಲವೇ ಎತ್ತರದ ಜಾಗಗಳಲ್ಲಿ ಸ್ಥಾಪಿಸಲಾಗಿರುತ್ತದೆ ಎಂದು ತಿಳಿಯಬಹುದು.

ಕರ್ನಾಟಕದ ಅತಿ ಪ್ರಾಚೀನವಾದ ಹಾಗೂ ಹಿರಿದಾದ ಮಾನಸ್ತಂಭವು ಮೂಡಬಿದ್ರೆಯ ಚಂದ್ರನಾಥ ಬಸದಿಗೆ ಸೇರುತ್ತದೆ (ಚಿತ್ರ ೮೭). ಇದು ಸುಮಾರು ನಲವತ್ತು ಅಡಿ ಎತ್ತರವನ್ನು ಹೊಂದಿದೆ. ಈ ದೇವಾಲಯವನ್ನು ಕ್ರಿಸ್ತ ಶಕ ೧೪೩೦ರಲ್ಲಿ ನಿರ್ಮಿಸಲಾಯಿತು ಹಾಗೂ ಇಲ್ಲಿರುವ ಮಾನಸ್ತಂಭವನ್ನು ೧೪೯೧ರಲ್ಲಿ ನಿರ್ಮಿಸಲಾಗಿದೆ[೬೩]. ಈ ಬಸದಿಯನ್ನು ಸಾವಿರ ಕಂಬದ ಬಸದಿ ಎಂದೂ ಕರೆಯುತ್ತಾರೆ. ಮಾನಸ್ತಂಭದ ತುದಿಯಲ್ಲಿ ಮೇಲೆ ನಾಲ್ಕೂ ದಿಕ್ಕಿನಲ್ಲಿ ಜಿನಾಗಳನ್ನು ನಿಂತಂತೆ ಉಬ್ಬುಶಿಲ್ಪಗಳನ್ನು ರಚಿಸಲಾಗಿದೆ. ಇದರ ನಾಲ್ಕೂ ಕಡೆಗಳಲ್ಲಿ ಗಂಟೆಗಳನ್ನು ತೂಗುಬಿಡಲಾಗಿದೆ. ಬೆಳಗಾಂ ಜಿಲ್ಲೆಯ ಶ್ರೀ ೧೦೦೮ ನೇಮಿನಾಥ ದಿಗಂಬರ ಜೈನ ಬಸದಿಯಲ್ಲಿ ಮೂವತ್ತು ಅಡಿ

೬೩. Saryu Doshi: **Homage to Shravana Belagola**, ಪುಟ– ೯೩



ಚಿತ್ರ ೮೭



ಚಿತ್ರ ೮೮



ಚಿತ್ರ ೮೯

ಎತ್ತರದ ಮಾನಸ್ತಂಭವಿದೆ (ಚಿತ್ರ ೮೮). ಶ್ರವಣಬೆಳಗೊಳದ ಚಂದ್ರಗಿರಿಯಲ್ಲಿ ಮಾನಸ್ತಂಭಗಳು ಇರುವುದನ್ನು ಕಾಣಬಹುದು (ಚಿತ್ರ ೮೯). ಹಂಪಿಯಲ್ಲಿ ಇರುವ ಜೈನ ಬಸದಿಯ ಮುಂದಯೂ ಮಾನಸ್ತಂಭವಿದೆ.

ಜೈನ ದೇವಾಲಯದ ಆವರಣದಲ್ಲಿ ದೊರೆಯುವ ಮತ್ತೊಂದು ವಿಧದ ಸ್ತಂಭವೆಂದರೆ ಬ್ರಹ್ಮದೇವ ಸ್ತಂಭ. ಕರ್ನಾಟಕದಲ್ಲಿ ದೊರೆಯುವ ಬ್ರಹ್ಮದೇವ ಸ್ತಂಭಗಳಲ್ಲಿ ವಿಶೇಷವಾದ ಎರಡು ಸ್ತಂಭಗಳೆಂದರೆ ಕೂಗೆ ಬ್ರಹ್ಮದೇವ ಸ್ತಂಭ ಹಾಗೂ ತ್ಯಾಗದ ಬ್ರಹ್ಮದೇವ ಸ್ತಂಭ. ಬ್ರಹ್ಮಸ್ತಂಭದ ತುದಿಯಲ್ಲಿ ಕುಳಿತ ಬ್ರಹ್ಮದೇವನ ಮೂರ್ತಿ ಶಿಲ್ಪವು ಇರುತ್ತದೆ.ಇದು ಹಿಂದೂ ಧರ್ಮದಲ್ಲಿ ಬರುವ ಬ್ರಹ್ಮನನ್ನು ಪ್ರತಿನಿಧಿಸುವುದಿಲ್ಲ. ಈ ಬ್ರಹ್ಮನ ವಿಗ್ರಹವನ್ನು ಯಕ್ಷನೆಂದೂ ಗುರುತಿಸುತ್ತಾರೆ[೬೪]. ಹಾಸನ ಜಿಲ್ಲೆಯ ಶ್ರವಣಬೆಳಗೊಳದ ಚಂದ್ರಗಿರಿ ಬೆಟ್ಟದಲ್ಲಿರುವ ಕೂಗೆ ಬ್ರಹ್ಮದೇವ ಸ್ತಂಭವನ್ನು ಸುಮಾರು ಕ್ರಿಸ್ತ ಶಕ ೯೭೪ರಲ್ಲಿ ನಿರ್ಮಿಸಲಾಗಿದೆ[೬೫]. ಗಂಗರ ರಾಜನಾದ ಎರಡನೆಯ ಮಾರಸಿಂಹನ ಸ್ಮರಣಾರ್ಥದ ಅಂಗವಾಗಿ ಈ ಸ್ತಂಭವನ್ನು ನಿರ್ಮಿಸಲಾಗಿದೆ.

ಚಂದ್ರಗಿರಿ ಬೆಟ್ಟದ ಬುಡದಲ್ಲಿರುವ ದಕ್ಷಿಣ ದ್ವಾರದಲ್ಲಿ ಇನ್ನೊಂದು ಬ್ರಹ್ಮದೇವ ಸ್ತಂಭವಿದೆ. ಈ ಸ್ತಂಭವು ಸುಂದರವಾದ ಕೆತ್ತನೆಯಿಂದ ಕೂಡಿದೆ. ಇದನ್ನು ಸುಮಾರು ಕ್ರಿಸ್ತ ಶಕ ೯೮೩ರಲ್ಲಿ ನಿರ್ಮಿಸಲಾಗಿದೆ ಎಂದೂ ಈ ಸ್ತಂಭವನ್ನು ಚಾವುಂಡರಾಯನು ಸ್ಥಾಪಿಸಿದನೆಂದು ಹೇಳಲಾಗುತ್ತದೆ[೬೬]. ಈ ಸ್ತಂಭವನ್ನು ತ್ಯಾಗದ ಬ್ರಹ್ಮದೇವ ಸ್ತಂಭವೆಂದು ಕರೆಯುತ್ತಾರೆ (ಚಿತ್ರ ೯೦). ಈ ಬ್ರಹ್ಮಸ್ತಂಭಕ್ಕೆ ಮಂಟಪವನ್ನು ನಿರ್ಮಿಸಿದ್ದು ಸ್ತಂಭದ ತುದಿಯಲ್ಲಿ ಇರುವ ಗೂಡಿನಲ್ಲಿ ಬ್ರಹ್ಮನ ಶಿಲ್ಪವನ್ನು ಸ್ಥಾಪಿಸಲಾಗಿದೆ. ಧರ್ಮಸ್ಥಳದ ರತ್ನಗಿರಿಯಲ್ಲಿ ಇರುವ ಗೊಮ್ಮಟೇಶ್ವರನ ಎದುರು ಬ್ರಹ್ಮಸ್ತಂಭವಿದೆ (ಚಿತ್ರ ೯೧). ಇದು ಸುಮಾರು ಮೂವತ್ತೈದು ಅಡಿ ಎತ್ತರವನ್ನು ಹೊಂದಿದೆ. ಸ್ತಂಭದ ಚೌಕಾಕಾರದ ಭಾಗದಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಕಾರ್ಕಳದ ೩೯ ಅಡಿ ಎತ್ತರದ ಗೊಮ್ಮಟೇಶ್ವರನ ಮೂರ್ತಿಯ ಎದುರು ಬ್ರಹ್ಮಸ್ತಂಭವಿದೆ (ಚಿತ್ರ ೯೨). ಸುಮಾರು ಹದಿನಾರನೆಯ ಶತಮಾನದಲ್ಲಿ ಈ ಬ್ರಹ್ಮಸ್ತಂಭವನ್ನು ನಿರ್ಮಿಸಲಾಗಿರುವುದು ತಿಳಿದು ಬರುತ್ತದೆ.

---

೬೪. There are two very different pillar types known in the jain tradition in Karnataka. of these 1st type is the Brahmadeva pillar supporting the im age of Brahmadeva. Dr. S. Shettar has suggested that the yakshas which are found on these are actually representations of the Sarvahna Yaksha but the pillars are invariably named for Brahmadeva regardless of the accuracy of the identification.....

Saryu Doshi: **Homage to Shravana Belagola,** ಪುಟ– ೯೨

೬೫. C.Hayavadana Rao: **Mysore Gazetter,** Volume 2, Part 1, ಪುಟ– ೨೫೬

೬೬. C.Hayavadana Rao: **Mysore Gazetter,** Volume 2, Part 1, ಪುಟ– ೨೫೬



ಚಿತ್ರ ೯೦



ಚಿತ್ರ ೯೧



ಚಿತ್ರ ೯೨-೧



ಚಿತ್ರ ೯೨-೨

ಜೈನ ದೇವಾಲಯದ ಮುಂದೆ ಕೂಡಾ ಜಯಸ್ತಂಭವಿದ್ದಂತಹ ಪುರಾವೆಗಳು ದೊರೆತಿವೆ[೬೭]. ಆದರೆ ಅವೀಗ ಉಳಿದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಸುಮಾರು ದೇವಾಲಯಗಳು ಜೈನ ತೀರ್ಥಂಕರರದ್ದೇ ಆಗಿವೆ.

ಹೀಗೆ ದೇವಾಲಯದ ಆವರಣದಲ್ಲಿ ಹಲವಾರು ವಿಧದ ದೀಪಗಳು ಮತ್ತು ಸ್ತಂಭಗಳು ಇರುವುದು ಕಾಣುತ್ತದೆ. ದೇವಾಲಯದ ಆವರಣದ ಪ್ರಾಕಾರಗಳಲ್ಲಿ ಇರುವ ಮತ್ತು ಧಾರ್ಮಿಕ ಆಚರಣೆಯಲ್ಲಿ ಬಳಸಲ್ಪಡುವ ಪ್ರತಿಯೊಂದು ರಚನೆಯು ವಿವಿಧ ಉದ್ದೇಶಗಳಿಂದ ನಿರ್ಮಾಣಗೊಂಡಿರುವುದು ಗಮನಿಸಬೇಕಾದ ವಿಷಯ.

* *** *

೬೭ Percy Brown:
Indian Architecture (Buddhist and Hindu periods), ಪುಟ– ೧೨೩

ಅಧ್ಯಾಯ: ನಾಲ್ಕು

ದೀಪಸ್ತಂಭಗಳ ವಾಸ್ತುವಿನ್ಯಾಸ ಮತ್ತು ರಚನಾ ಶೈಲಿ

ದೀಪಸ್ತಂಭಗಳ ವಾಸ್ತುವಿನ್ಯಾಸ ಮತ್ತು ರಚನಾ ಶೈಲಿ

ಭಾರತದ ಪೂರ್ವಜರು ತಮ್ಮ ಜೀವನಕ್ಕೆ ಅವಶ್ಯವಿರುವ ಎಲ್ಲಾ ವಸ್ತು ವಿಷಯಗಳನ್ನು ಪ್ರತ್ಯೇಕವಾಗಿ ವಿಂಗಡಿಸಿಕೊಂಡು ಪ್ರತಿಯೊಂದಕ್ಕೂ ಒಂದೊಂದು ಶಾಸ್ತ್ರವನ್ನು ರಚಿಸಿರುವುದು ಕಂಡು ಬರುತ್ತದೆ. ಅದರಲ್ಲೊಂದು ಶಾಸ್ತ್ರ ವಾಸ್ತುಶಾಸ್ತ್ರವಾಗಿದೆ. ವಾಸ್ತು ಎಂದರೆ ವಾಸ ಮಾಡಲು ಉಪಯೋಗಿಸುವ ಭೂಮಿ, ಮನೆ ಎಂದರ್ಥ. ಭಾರತೀಯರು ತಮ್ಮ ಗೃಹ ನಿರ್ಮಾಣದ ಜೊತೆಗೆ ದೇವಾಲಯಗಳ ನಿರ್ಮಾಣದಲ್ಲಿ ವಾಸ್ತುವಿನ ಮಾನ, ಪ್ರಮಾಣಗಳನ್ನು ಬಳಸಿಕೊಂಡಿರುವುದು ಕಂಡು ಬರುತ್ತದೆ. ಈ ವಾಸ್ತುವನ್ನು ಅನುಸರಿಸಿ ನಿರ್ಮಿಸಲಾಗುವ ಕಟ್ಟಡಗಳ ಪ್ರಮಾಣ, ಅಳತೆ, ದಿಕ್ಕುಗಳು ಮುಂತಾದವುಗಳನ್ನು ಕುರಿತು ವಾಸ್ತುಶಾಸ್ತ್ರದಲ್ಲಿ ತಿಳಿಸಲಾಗಿದೆ.

ವಾಸ್ತುಶಾಸ್ತ್ರ ಎಂದರೆ ವಾಸ್ತುವಿನ ಗುಣ, ಲಕ್ಷಣ, ರೀತಿ ನೀತಿಗಳನ್ನು ತಿಳಿಸುವಂತಹ ಒಂದು ಶಾಸ್ತ್ರ. ದೇವಾಲಯವಾಗಲೀ, ಮನೆಯಾಗಲೀ ಅಥವಾ ಇತರೆ ಯಾವುದೇ ಕಟ್ಟಡವನ್ನು ನಿರ್ಮಿಸುವಾಗ ಅನುಸರಿಸಬೇಕಾದ ನಿಯಮಗಳನ್ನು ವಾಸ್ತುಶಾಸ್ತ್ರವು ತಿಳಿಸುತ್ತದೆ. ಇದನ್ನು ಅನುಸರಿಸಿ ಅದರಲ್ಲೂ ವಿಶೇಷವಾಗಿ ದೇವಾಲಯಗಳನ್ನು ನಿರ್ಮಿಸಲಾಗುತ್ತದೆ. ದೇವತೆಗಳು ಮತ್ತು ಮಾನವರು ವಾಸಗೊಳ್ಳುವ ಸ್ಥಳಗಳನ್ನು ವಾಸ್ತು ಎನ್ನಲಾಗುತ್ತದೆ ಎಂಬ ವಿವರಣೆಯೂ ಕೆಲವು ಕಡೆ ದೊರೆಯುತ್ತದೆ.

ವಾಸ್ತು ಎಂಬ ಪದವು ಭೂಮಿ, ಪ್ರಾಸಾದ, ಯಾನ ಮತ್ತು ಶಯನ ಎಂಬ ನಾಲ್ಕು ಅರ್ಥಗಳನ್ನು ಹೊಂದಿದೆ. ಹಾಗಾಗಿ ಭೂಮಿಯ ಮೇಲೆ ನಿರ್ಮಿಸಲ್ಪಡುವ ಮನೆ, ಸೌಧ, ಆಲಯ ಮುಂತಾದ ಕಟ್ಟಡಗಳನ್ನು ವಾಸ್ತು ಎಂದು ಹೆಸರಿಸಲಾಗುತ್ತದೆ ಎಂದು ತಿಳಿದು ಬರುತ್ತದೆ. ದೇವ, ಗಂಧರ್ವ ಮತ್ತು ಮನುಷ್ಯರ ವಾಸಸ್ಥಳಗಳು ಎಂದು ಕರೆಸಿಕೊಳ್ಳುವ ಕಟ್ಟಡಗಳನ್ನು ಗೃಹಗಳು ಎಂದು ಕರೆಯುತ್ತಾರೆ. ಕೋಟೆಗಳನ್ನು ದುರ್ಗಗಳೆಂದೂ, ದೇವಾಲಯದ ಹೊರ ಆವರಣದ ನೀರಿನ ಕೊಳವನ್ನು ಕಲ್ಯಾಣಿ ಎಂದೂ ಹೆಸರಿಸಲಾಗುತ್ತದೆ. ಈ ಶಾಸ್ತ್ರದಲ್ಲಿ ಯಾವ ದಿಕ್ಕಿಗೆ ಕಟ್ಟಡದ ಯಾವ ಭಾಗವಿರಬೇಕು, ಅವುಗಳ ಎತ್ತರ ಎಷ್ಟು ಇರಬೇಕು ಮತ್ತು ಇವುಗಳ ಪ್ರಮಾಣಗಳು ಎಷ್ಟಿದ್ದರೆ ಸೂಕ್ತ ಎಂದು ವಿಶೇಷವಾಗಿ ವಿವರಿಸಲಾಗಿರುತ್ತದೆ. ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ವಾಸ್ತುಪುರುಷ ಮಂಡಲದ ರೂಪಗಳು ವಿಭಿನ್ನವಾಗಿರುವುದು ತಿಳಿದು ಬರುತ್ತದೆ[೧].

ಮಾನಸಾರ, ಶಿಲ್ಪರತ್ನ, ವಾಸ್ತು ಚಂದ್ರಿಕ ಎಂಬ ಮೊದಲಾದ ಗ್ರಂಥಗಳೂ ಹಾಗೂ **ಸುಪ್ರಭೇದ, ಕಾಮಿಕ** ಮೊದಲಾದ ಆಗಮಗಳೂ, **ಮತ್ಸ್ಯಪುರಾಣ, ಗರುಡ ಪುರಾಣ, ಅಗ್ನಿ ಪುರಾಣ** ಇನ್ನೂ ಮುಂತಾವುಗಳ ನಿರೂಪಣೆಗಳೂ ವಾಸ್ತುಶಾಸ್ತ್ರ ಎಂಬ ಕಲೆಗೆ ದೈವಿಕವಾದ ಮೂಲವನ್ನೇ ಹೇಳಲು ಪ್ರಯತ್ನಿಸಿರುವುದರ ಜೊತೆಗೆ ವಾಸ್ತುಶಾಸ್ತ್ರಗಳ ಕೆಲವು ಅಧ್ಯಾಯಗಳನ್ನು ಒಳಗೊಂಡಿರುವುದು ತಿಳಿದು ಬರುತ್ತದೆ. ಸುಮಾರು ೧೦ನೆಯ ಶತಮಾನದ ವಾಸ್ತುಶಾಸ್ತ್ರ ಎಂಬ ಗ್ರಂಥವು ಸಂಪೂರ್ಣವಾಗಿ ಶೈವ ಮತ್ತು ವೈಷ್ಣವ ದೇವಾಲಯಗಳ ರಚನಾಶೈಲಿ ಮತ್ತು ಅವುಗಳಲ್ಲ ಇರುವ ಆಗಮಗಳ ವಿಧಿವಿಧಾನಗಳನ್ನು ಕುರಿತು ವಿವರವಾಗಿ ತಿಳಿಸುತ್ತದೆ. ಭೋಜರಾಜನಿಂದ ರಚಿಸಲ್ಪಟ್ಟ ೧೧ನೆಯ ಶತಮಾನದ **ಸಮರಾಂಗಣ ಸೂತ್ರಧಾರ, ಅಪರಾಜಿತ ಪೃಚ್ಛ** ಎಂಬ ಗ್ರಂಥಗಳು ವಾಸ್ತುಶಾಸ್ತ್ರದ ಗ್ರಂಥಗಳಾಗಿವೆ[೨]. ಇವುಗಳ ಜೊತೆಗೆ **ವಾಸ್ತುವಿದ್ಯಾ, ಶಾರದಾ ತಿಲಕ, ಬೃಹತ್ ಶಿಲ್ಪಶಾಸ್ತ್ರ, ಮನುಷ್ಯಾಲಯ ಚಂದ್ರಿಕ** ಮತ್ತು **ವಾಸ್ತು ರಾಜ ವಲ್ಲಭ** ಎಂಬ ಗ್ರಂಥಗಳು ಸುಮಾರು ೧೫ನೆಯ ಶತಮಾನದ ರಾಜಾಸ್ಥಾನದ ವಾಸ್ತುಶಿಲ್ಪಿಯಾಗಿದ್ದ **ಮಂಡನ** ಎಂಬುವವನ ಕೃತಿಗಳಾಗಿವೆ.

ಮಯಮತ, ಈಶಾನ ಶಿವ ಗುರುದೇವ ಪದ್ಧತಿ (೧೧ನೆಯ ಶತಮಾನ), **ಕಾಶ್ಯಪ ಶಿಲ್ಪಶಾಸ್ತ್ರ** (೧೫ನೆಯ ಶತಮಾನಕ್ಕಿಂತ ಮುಂಚೆ) **ಮಾನಸಾರ** (೧೫ನೆಯ ಶತಮಾನಕ್ಕಿಂತ ಮುಂಚೆ), ೧೫ನೆಯ ಶತಮಾನದ **ತಂತ್ರ ಸಮುಚ್ಚಯ**(೧೫ನೆಯ ಶತಮಾನ) ಮತ್ತು ೧೬ನೆಯ ಶತಮಾನದ ಕೇರಳ ರಾಜ್ಯದ **ಶ್ರೀಕುಮಾರನ ಶಿಲ್ಪರತ್ನ** ಎನ್ನುವ ಮುಂತಾದ

---

೧. ದೇವರ ಕೊಂಡಾರೆಡ್ಡಿ: ಲೇಖನ– ವಾಸ್ತುಪುರುಷ, **ಕಲಾಕೋಶ,** ಪ್ರಧಾನ ಸಂಪಾದಕರು: ಪಿ.ಆರ್. ತಿಪ್ಪೇಸ್ವಾಮಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಪುಟ–೧೬

೨. P.R. Shrinivasan: **The Indian Temple Art and Architecture,** ಪುಟ–೯

ವಾಸ್ತುಶಾಸ್ತ್ರದ ಗ್ರಂಥಗಳು ದೊರೆಯುತ್ತವೆ. ಈ ಗ್ರಂಥಗಳು ದೇವಾಲಯದ ಆಚರಣೆಗಳಲ್ಲಿ ಯೋಗ್ಯನಾದ ಪುರೋಹಿತನನ್ನು, ಮೂರ್ತಿಯನ್ನು ಕೆತ್ತಲು ಬೇಕಾದ ಶಿಲ್ಪಿಯನ್ನು ಆಯ್ಕೆ ಮಾಡುವುದರ ಜೊತೆಗೆ ವಾಸ್ತುವಿಗೆ ಬೇಕಾದ ಇತರೆ ಎಲ್ಲಾ ವಿಧಿವಿಧಾನಗಳ ವಿವರಣೆಗಳನ್ನು ಕೊಡುವುದಾಗಿವೆ.

ವಾಸ್ತುವನ್ನು ವಾಸ್ತು ಪುರುಷ ಇರುವ ಸ್ಥಳ ಎಂದು ಗುರುತಿಸಲಾಗುತ್ತದೆ. ಇದನ್ನು ಕುರಿತಾದ ಪುರಾಣಗಳೂ ದೊರೆಯುತ್ತವೆ. ಪುರಾಣಗಳಲ್ಲಿ **ಈಶ್ವರನು ಅಂಧಕ** ಎಂಬ ರಾಕ್ಷಸನ ಜೊತೆಗೆ ಯುದ್ಧ ಮಾಡುತ್ತಿದ್ದ ಸಂದರ್ಭವನ್ನು ವಿವರಿಸಲಾಗುತ್ತದೆ. ಈ ಸಂದರ್ಭದಲ್ಲಿ ಈಶ್ವರನ ಹಣೆಯಿಂದ ಬೆವರಿನ ಹನಿ ಭೂಮಿಗೆ ಅಪ್ಪಳಿಸಿತು. ಆಗ ಅದು ಅಸುರ ರೂಪವನ್ನು ಪಡೆಯಿತು. ಆ ಅಸುರನಿಗೆ ಎಂದೂ ನೀಗದ ಹಸಿವಿತ್ತು. ಆದ್ದರಿಂದ ಅವನು ಮೂರೂ ಲೋಕಗಳನ್ನು ನುಂಗಲು ಪ್ರಾರಂಭಿಸಿದನು. ಇದರಿಂದ ಭಯಗೊಂಡ ದೇವತೆಗಳೆಲ್ಲಾ ಒಟ್ಟಿಗೆ ಅವನ ಮೇಲೆ ಬಿದ್ದು ಅವನನ್ನು ಭೂಮಿಗೆ ಅಪ್ಪಳಿಸಿ ಅವನು ಮೇಲೆ ಏಳದಂತೆ ಅವನ ಅಂಗಗಳ ಮೇಲೆ ಕುಳಿತುಕೊಂಡರು. ದೇವತೆಗಳು ಅವನ ಮೇಲೆ ಇರುವುದರಿಂದ, ವಾಸಿಸತೊಡಗಿದರಿಂದ ಅಸುರನನ್ನು **ವಾಸ್ತುಪುರುಷ** ಎನ್ನಲಾಯಿತು[೩] ಎಂದು ಒಂದು ಪುರಾಣವು ಹೇಳುತ್ತದೆ.

ಇನ್ನೊಂದು ಪುರಾಣ ಕಥೆಯಲ್ಲಿ ವಾಸ್ತುಪುರುಷನು ಆಕಾಶದಿಂದ ಬಿದ್ದನೆಂದೂ ಅವನು ಬಿದ್ದಾಗ ವಾಸ್ತು ಮಂಡಲ ನಿರ್ಮಾಣವಾಯಿತು ಎಂದೂ ಅವನ ಹೃದಯದ ಜಾಗದಲ್ಲಿ ಬ್ರಹ್ಮನೂ ಸೇರಿದಂತೆ ಇತರೆ ಅಂಗಗಳಲ್ಲಿ ಎಲ್ಲಾ ದೇವತೆಗಳು ನೆಲೆಸಿದರು ಎಂದು ಹೇಳಲಾಗುತ್ತದೆ.

ದೇವಾಲಯಗಳು ಶಾಸ್ತ್ರಗ್ರಂಥಗಳಲ್ಲಿ **ರಥ**ವೆಂಬ ಆಲಯ ಪ್ರಾಕಾರಕ್ಕೆ ಸೇರಿದವುಗಳಾಗಿವೆ. ಶಾಸ್ತ್ರಗ್ರಂಥಗಳಲ್ಲಿ ನಾಲ್ಕು ವಿಧದ ರಥಗಳು ಇರುವುದು ತಿಳಿದು ಬರುತ್ತದೆ. ಅವು **ಚಂದೋಮಯ ರಥ, ದೇವಮಯ ರಥ, ವಾಹನಮಯ ರಥ** ಹಾಗೂ **ನಮ್ಮ ದೇಹ,** ನಮ್ಮ ದೇಹವೇ ಒಂದು **ರಥ.** ರಥಗಳು ಎಂದರೆ ಶಿಲ್ಪಿಗಳು ಕಟ್ಟಿದ ದೇವಾಲಯಗಳು[೪] ಎಂದರ್ಥವು ಇರುವುದು ತಿಳಿದು ಬರುತ್ತದೆ.

ಭಾರತೀಯ ಪ್ರಾಚೀನ ದೇವಾಲಯಗಳು ಎಂದರೆ ಸಮಾಧಿ ಮಂದಿರಗಳೇ ಆಗಿವೆ. ಮಧ್ಯ ಯುಗದಲ್ಲಿ ನಿರ್ಮಾಣಗೊಂಡಿರುವ ಕೆಲವು ಶೈವ ದೇವಾಲಯಗಳನ್ನು ಕುರಿತು ರಚಿಸಿರುವ ತಮಿಳು ಶಾಸನಗಳಲ್ಲಿ ಈ ರೀತಿಯ ಉಲ್ಲೇಖಗಳು ದೊರೆಯುತ್ತವೆ. **ಎಂದೂ ಏಳದ ನಿದ್ದೆಯಲ್ಲಿ ತೊಡಗಿರುವ**[೫] ಎಂದು ಹೇಳಿರುವ ಈ ಶಾಸನಗಳ ಪ್ರಕಾರ ನೋಡಿದರೆ ಆ ಮಂದಿರ ಇರುವ ಜಾಗವು ಸತ್ತವನನ್ನು ಹುದುಗಿರುವ ಜಾಗ ಎಂದು

---

೩. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ,** ಪುಟ-೧೨೩

೪. ಡಾ. ಎಂ. ಚಿದಾನಂದ ಮೂರ್ತಿ: ಲೇಖನ- **ಹಿಂದೂ ಎನ್ನಲು ಹೆಮ್ಮೆ ಪಡೋಣ,** ಕರ್ಮವೀರ ಮಾಸಪತ್ರಿಕೆ, ೨೩ ಮೇ ೨೦೦೪.

೫. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ,**ಪುಟ-೧೧

ತಿಳಿದು ಬರುತ್ತದೆ. ಇದಕ್ಕೆ ಇನ್ನೊಂದು ಪ್ರಮುಖವಾದ ಉದಾಹರಣೆ ಎಂದರೆ ಬುದ್ಧನ ಸಮಾಧಿಗಳು ಎಂದು ಗುರುತಿಸಲ್ಪಡುವ ಸ್ತೂಪಗಳು.

ಪ್ರಾಚೀನ ಯುಗದಲ್ಲಿ ಗುಹೆಗಳಲ್ಲಿ ವಾಸಿಸುತ್ತಿದ್ದ ಮಾನವನು ತನ್ನ ಜೊತೆಗಿನ ಮನುಷ್ಯನೊಬ್ಬ ಸತ್ತರೆ ಅವನ ಹೆಣವನ್ನು ಹೂಳಿ ಅದರ ಮೇಲೆ ದೊಡ್ಡದಾದ ಕಲ್ಲನ್ನು ಇಡುವ ಪದ್ಧತಿ ಇತ್ತೆಂದು ತಿಳಿದು ಬರುತ್ತದೆ. ಪ್ರಸ್ತುತ ದಿನಗಳಲ್ಲೂ ಕೆಲವು ಕಡೆ ಈ ಪದ್ಧತಿಯು ಇರುವುದು ಕಾಣುತ್ತದೆ. ಗುಹಾಯುಗದಲ್ಲಿ ಇದ್ದ ಮಾನವನು ಹೆಣವನ್ನು ಹೂತ ಮೇಲೆ ಅದರ ಹೃದಯ ಇರುವೆಡೆ ದೊಡ್ಡ ಕಲ್ಲು, ಕಾಲಿನ ಕಡೆ ಮತ್ತೊಂದು ಕಲ್ಲು, ಅಕ್ಕ ಪಕ್ಕಗಳಲ್ಲಿ ಸಣ್ಣ ಸಣ್ಣ ಕಲ್ಲುಗಳನ್ನು ಇಡುತ್ತಿದ್ದನು[೬]. ಈ ರೀತಿಯಾಗಿ ಇಟ್ಟಂತಹ ಕಲ್ಲುಗಳೇ ಮುಂದಿನ ವಾಸ್ತುಶಾಸ್ತ್ರದ ಕಲ್ಪನೆಗೆ ಆಧಾರವಾಗಿರಬಹುದು.

ತಮ್ಮ ಪೂರ್ವಜರ ಸಮಾಧಿಗಳನ್ನು ಪ್ರತಿನಿಧಿಸಲು ಮೊದಲಿಗೆ ಕಲ್ಲನ್ನು ಇಡುತ್ತಿದ್ದ ಮಾನವನು ನಂತರದ ದಿನಗಳಲ್ಲಿ ಮರವನ್ನು ನೆಟ್ಟು ಅದಕ್ಕೆ ಪೂಜಿಸಿದನು ಎಂದು ತಿಳಿದು ಬರುತ್ತದೆ. ಮರವು ಒಣಗಿದಾಗ ಆನಂತರದ ದಿನಗಳಲ್ಲಿ ಅದಕ್ಕೆ ಕಂಬಗಳನ್ನು, ಚಪ್ಪರಗಳನ್ನು ಹಾಕಿದುದು ದೇವಾಲಯದ ನಿರ್ಮಾಣದ ಕಡೆಗೆ ದಾರಿಯಾಯಿತು ಎಂದು ತೋರುತ್ತದೆ.

ವಾಸ್ತುಶಾಸ್ತ್ರದಲ್ಲಿ ಜ್ಯಾಮಿತಿಯ ಆಕಾರಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಲಾಗಿದೆ. ವಾಸ್ತುವಿನಲ್ಲಿ ಚೌಕಾಕಾರವು ದೇವರು ಮತ್ತು ಬ್ರಾಹ್ಮಣನನ್ನು ಪ್ರತಿನಿಧಿಸುತ್ತದೆ[೭] ಎಂದು ಸ್ಟೆಲ್ಲಾ ಕ್ರಮರಿಶ್ಚ್ ರವರು ತಮ್ಮ ಗ್ರಂಥವೊಂದರಲ್ಲಿ ತಿಳಿಸಿದ್ದಾರೆ. ಭಾರತೀಯ ವಾಸ್ತು ರಚನೆಯಲ್ಲಿ ಚೌಕಾಕಾರವು ಮೂಲಭೂತವಾದ ಆಕಾರವಾಗಿರುವುದು ತಿಳಿದು ಬರುತ್ತದೆ.

ವಾಸ್ತುಸಾಸ್ತ್ರದಲ್ಲಿ ವೃತ್ತವು ಪೂರ್ಣದ ಸಂಕೇತವಾದರೆ[೮], ಚೌಕಾಕಾರವು ಅದಕ್ಕಿಂತಲೂ ಪರಿಪೂರ್ಣವಾದುದು[೯] ಎಂದು ಹೇಳಲಾಗುತ್ತದೆ. ಚೌಕದಲ್ಲಿನ ನಾಲ್ಕೂ ಮೂಲೆಗಳನ್ನು ಕುರಿತು ವಾಸ್ತು ಶಾಸ್ತ್ರದಲ್ಲಿ ಹೇಳಲಾಗಿದೆ. ಇವನ್ನು ನಾಲ್ಕು ದಿಕ್ಕುಗಳೆಂದು ಅರ್ಥೈಸಿಕೊಳ್ಳಲಾಗುತ್ತದೆ[೧೦]. ವೃತ್ತ ಹಾಗೂ ವಕ್ರ ರೇಖೆಗಳು ಜೀವನದ ಬೆಳವಣಿಗೆ ಹಾಗೂ ಚಲನೆಯನ್ನು ಪ್ರತಿನಿಧಿಸುತ್ತವೆ. ಚೌಕವು ಜೀವನ ಹಾಗೂ ಸಾವಿನ

---

೬. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ,** ಪುಟ-೧೪

೭. The shape of the vastu for Gods and Brahmans is prescribed as square (Mayamatha III, 1) .....
Stella kramrisch: **The Hindu temple,** Volume I, ಪುಟ-೨೨

೮. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ,** ಪುಟ-೧೨೬

೯. In indian architectural symbolism; the square is greater significance than the circle.....
P.R. Shrinivasan: **The Indian Temple Art and Architecture,** ಪುಟ-೮

೧೦. Stella kramrisch: **The Hindu temple,** Volume I, ಪುಟ-೨೨

ಪರಿಪೂರ್ಣತೆಯನ್ನು ಮೀರಿ ನಿಂತಿರುವುದಾಗಿದೆ ಎಂದು ವಾಸ್ತು ಶಾಸ್ತ್ರದಲ್ಲಿ ವಿವರಣೆಗಳು ದೊರೆಯುತ್ತವೆ. ಚೌಕಾಕಾರ ಮತ್ತು ವೃತ್ತಾಕಾರಗಳು ವೈದಿಕ ಕಾಲದಲ್ಲಿಯೇ ಪ್ರಚಲಿತದಲ್ಲಿದ್ದವು ಎನ್ನುವುದಕ್ಕೆ ಅಂದು ಬಳಸುತ್ತಿದ್ದ ಯಜ್ಞಕುಂಡಗಳೇ ಸಾಕ್ಷಿಯಾಗಿವೆ. ಚೌಕಾಕಾರ ಮತ್ತು ವೃತ್ತಾಕಾರವು ವೈದಿಕ ಕಾಲದಲ್ಲಿ ಬಳಸುತ್ತಿದ್ದ ಅಗ್ನಿಕುಂಡಗಳ ಆಧಾರದ ಮೇಲೆ ನಿರ್ಮಾಣಗೊಂಡಿವೆ ಎಂದೂ ಹೇಳಲಾಗುತ್ತದೆ.

ವೈದಿಕ ಆಚರಣೆಯಲ್ಲಿ ಚೌಕ ಹಾಗೂ ವೃತ್ತದ ಆಕಾರಗಳನ್ನು ಬಳಸಿ ಮಾಡುವ ಪೂಜೆಗಳನ್ನು ಕ್ರಮವಾಗಿ **ಆಹವನೀಯ** ಮತ್ತು **ಗಾರ್ಹಪತ್ಯ** ಎಂದು ಕರೆಯಲಾಗುತ್ತದೆ[೧೧]. ಚೌಕ, ವೃತ್ತಗಳ ಜೊತೆಗೆ ಇನ್ನಿತರೆ ಅಂದರೆ ಅರ್ಧ ವೃತ್ತ, ತ್ರಿಕೋಣ, ಬಹು ಭುಜಾಕೃತಿ, ಮೊದಲಾದ ಜ್ಯಾಮಿತೀಯ ಆಕಾರಗಳು ಮಂಡಲ ನಿರೂಪಣೆಯಲ್ಲಿ ಸೇರಿಬಂದವುಗಳು. **ಯೋಗ ತತ್ತ್ವೋಪನಿಷತ್ತಿ**ನಲ್ಲಿ ಮಂಡಲ ಸಂಕೇತವನ್ನು ಪಂಚ ಮಹಾಭೂತಗಳ ಆಧಾರದ ಮೇಲೆ ವಿವರಿಸಲಾಗಿದೆ[೧೨]. **ಪೃಥ್ವೀತತ್ವ**ವನ್ನು ಚೌಕಾಕಾರವು ಪ್ರತಿನಿಧಿಸಿದರೆ, **ಆಪೋತತ್ವ**ವನ್ನು ಅರ್ಧವೃತ್ತ, **ತೇಜಸ್ಸಿನತತ್ವ**ದ ಸಂಕೇತವಾಗಿ ತ್ರಿಕೋಣ, **ವಾಯುತತ್ವ**ದ ಸಂಕೇತವಾಗಿ ಷಟ್ಕೋಣಗಳ ಆಕಾರ ಮತ್ತು **ಆಕಾಶ ತತ್ವ**ವನ್ನು ವೃತ್ತವು ಸಾಂಕೇತಿಸುವುದಾಗಿದೆ. ಉದ್ದ, ಅಗಲ, ಎತ್ತರ ಯಾವುದನ್ನೂ ಹೊಂದಿರದ ಬಿಂದು ಎಲ್ಲಾ ಶಕ್ತಿಗಳ **ಮೂಲಕೇಂದ್ರ**ವಾಗಿದೆ. ಈ ಮೇಲಿನ ಎಲ್ಲಾ ಆಕಾರಗಳು ಬಿಂದುವಿನಿಂದಲೇ ಹೊರಹೊಮ್ಮಿದುದಾಗಿದೆ ಎಂಬ ವಿವರಣೆ ವಾಸ್ತುಶಾಸ್ತ್ರದಲ್ಲಿ ದೊರೆಯುತ್ತದೆ.

ಸಾಂಪ್ರದಾಯಕ್ಕೆ ಅನುಗುಣವಾಗಿ ನಿರ್ಮಾಣಗೊಂಡಿರುವ ದೇವಾಲಯಗಳ ರಚನೆಯು ದೇವತೆಗಳ ವಾಸ್ತುಶಿಲ್ಪಿ ಎಂದು ಗುರುತಿಸಲ್ಪಡುವ **ವಿಶ್ವಕರ್ಮ**ನಿಂದ ಮೊದಲು ಪ್ರಾರಂಭವಾಯಿತು ಎಂಬ ಪ್ರತೀತಿ ಹಿಂದೂ ಧರ್ಮದಲ್ಲಿ ಇದೆ. ವಿಶ್ವಕರ್ಮನ ಐದು ಮುಖಗಳು, ಅವುಗಳು ಪ್ರತಿನಿಧಿಸುವ ದೇವರು, ಬಣ್ಣ, ಗುಣ ಮತ್ತು ಆಕಾರಗಳನ್ನು ಸೇರಿಸಿ ಮಂಡಲವನ್ನಾಗಿ ರಚಿಸಲಾಗುತ್ತದೆ. ಇದಕ್ಕೆ **ವಿಶ್ವಕರ್ಮ ಮಂಡಲ** ಎಂದು ಹೆಸರು[೧೩]. ದೇವಾಲಯದ ವಾಸ್ತುಶಿಲ್ಪ ರಚನೆಗೆ ಮತ್ತು ಅದರಲ್ಲಿನ ವಿನ್ಯಾಸಗಳಿಗೆ ವಿಶ್ವಕರ್ಮ ಮಂಡಲವೇ ಮೂಲಭೂತ ಎಂಬ ನಂಬಿಕೆಯು ಇರುವುದು ತಿಳಿದು ಬರುತ್ತದೆ.

ವಾಸ್ತುಶಾಸ್ತ್ರದಲ್ಲಿ ಎಂಟು ದಿಕ್ಕುಗಳಿವೆ. ಅವು ಆಗ್ನೇಯ, ದಕ್ಷಿಣ, ನೈರುತ್ಯ, ಪಶ್ಚಿಮ, ವಾಯವ್ಯ, ಉತ್ತರ, ಈಶಾನ್ಯ ಮತ್ತು ಪೂರ್ವ. ಈ ಎಂಟೂ ದಿಕ್ಕುಗಳು ವಾಸ್ತುಶಾಸ್ತ್ರದಲ್ಲಿ ತಮ್ಮದೇ ಆದ ವಿಶಿಷ್ಟವಾದ ಸ್ಥಾನಗಳನ್ನು ಹೊಂದಿರುವುದು ಕಾಣುತ್ತೇವೆ. ವಾಸ್ತುಮಂಡಲಗಳು ಈ ಅಷ್ಟ ದಿಕ್ಕುಗಳ ಆಧಾರದ ಮೇಲೆ ರಚನೆಗೊಂಡಿವೆ.

---

೧೧. P.R. Shrinivasan: **The Indian Temple Art and Architecture,** ಪುಟ-೧೧

೧೨. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ,** ಪುಟ-೧೧೮

೧೩. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ,** ಪುಟ-೧೨೦

ಈ ಎಂಟು ದಿಕ್ಕುಗಳ ಮಧ್ಯದಲ್ಲಿ ಬ್ರಹ್ಮನಿರುವನು ಎಂದೂ, ಅಷ್ಟ ದಿಕ್ಪಾಲಕರಿಂದ ಹಾಗೂ ಬ್ರಹ್ಮನಿಂದ ಕೂಡಿದ ಮಂಡಲವು ಇಡೀ ವಿಶ್ವನ್ನು ಪ್ರತಿನಿಧಿಸುತ್ತದೆ ಎಂದೂ ಹೇಳಲಾಗುತ್ತದೆ.

ಕಟ್ಟಡ ನಿರ್ಮಾಣಕ್ಕೆ ಆಯ್ದುಕೊಳ್ಳುವ ಜಾಗವು ದೇವತೆಗಳಿಂದ, ಭೂತಗಳಿಂದ ಕೂಡಿರುತ್ತದೆ ಎಂದೂ ಅಲ್ಲಿ ಕಟ್ಟಡ ನಿರ್ಮಾಣ ಮಾಡಲು ಮೊದಲು ಅವರಿಗೆ ಪೂಜೆ ಸಲ್ಲಿಸಿ ಅನುಮತಿಯನ್ನು ಪಡೆಯಬೇಕು ಎನ್ನುವ ನಂಬಿಕೆಯು ಹಿಂದೂ ಸಂಪ್ರದಾಯದಲ್ಲಿ ಇರುವುದು ಕಾಣುತ್ತದೆ. ದೇವಾಲಯದ ನಿರ್ಮಾಣಕ್ಕೆ ಮೊದಲು ನೆಲದ ಮೇಲೆ ವಾಸ್ತು ಮಂಡಲವನ್ನು ರಚಿಸಿಕೊಳ್ಳಬೇಕಾಗುತ್ತದೆ. ಇದರಲ್ಲಿ ದೇವರ ಅಂದರೆ ಗರ್ಭಗುಡಿಯ, ದ್ವಾರದ, ಮುಖಮಂಟಪಗಳ ಜಾಗಗಳನ್ನು ಗುರುತಿಸಿ ನಿಗದಿಪಡಿಸಲಾಗುತ್ತದೆ. ವಾಸ್ತು ಪುರುಷ ಮಂಡಲವನ್ನು ಹೆಚ್ಚಾಗಿ ಚೌಕಾಕಾರದಲ್ಲಿ ರಚಿಸಲಾಗುತ್ತದೆ. ಕೆಲವು ವಾಸ್ತು ಮಂಡಲಗಳು ವೃತ್ತಾಕಾರವನ್ನೂ ಹೊಂದಿರುತ್ತವೆ[೧೪]. ವಾಸ್ತುಶಾಸ್ತ್ರದ ಪ್ರಕಾರ ಚೌಕಾಕಾರದ ಮಂಡಲದ ನಾಲ್ಕೂ ಪಾರ್ಶ್ವಗಳಲ್ಲಿ ೩೨ ಕೋಣೆಯನ್ನು ರಚಿಸಿ ಒಂದೊಂದರಲ್ಲಿ ಒಂದೊಂದು ದೇವ-ದೇವತೆಯರನ್ನು ಆಹ್ವಾನಿಸಿಕೊಳ್ಳಲಾಗುತ್ತದೆ. ಅದರ ನಂತರ ಪೂಜೆಯನ್ನು ಮಾಡಲಾಗುತ್ತದೆ.

ದೇವರ ಗುಡಿಯನ್ನು ಮನುಷ್ಯನ ದೇಹಕ್ಕೆ ಹೋಲಿಸಲಾಗುತ್ತದೆ. ಮನುಷ್ಯನ ದೇಹದಲ್ಲಿ ಶಕ್ತಿಗಳ ಸಮೂಹವಿದೆ ಎಂದು ಹೇಗೆ ಗುರುತಿಸಲಾಗುತ್ತದೆಯೋ ಹಾಗೆಯೇ ದೇವಾಲಯದ ಮಂಡಲವನ್ನು ಶಕ್ತಿಗಳ ವ್ಯೂಹ ಎನ್ನಲಾಗುತ್ತದೆ. ಮಂಡಲವೆಂದರೆ ಶಕ್ತಿಗಳ ಸಮೂಹ ಎಂದು ಅರ್ಥ. ಮನುಷ್ಯ ದೇಹವು ತಿರುಗಾಡುವ ಮಂಡಲವಾದರೆ ದೇವಾಲಯವು ಸ್ಥಿರವಾಗಿ ನಿಲ್ಲುವ ಮಂಡಲದಂತೆ.

ಮನುಷ್ಯನ ದೇಹದಲ್ಲಿ ಅತಿ ಮುಖ್ಯವಾಗಿ ಗುರುತಿಸಿಕೊಳ್ಳುವ ಜೀವವು ಗುಡಿಯಲ್ಲಿನ ದೇವಮೂರ್ತಿಯ ಸಂಕೇತವಾಗಿದೆ. ತಂತ್ರದಲ್ಲಿ ಮನುಷ್ಯ ದೇಹದ ಮಂಡಲ ಮುಖ್ಯವಾದರೆ ಆಗಮದಲ್ಲಿ ದೈವೀಶಕ್ತಿಗಳ ಮಂಡಲ ಮುಖ್ಯವಾಗುತ್ತದೆ[೧೫]. ಮನುಷ್ಯನ ದೇಹದ ರಚನೆಗೂ ದೇವಾಲಯದ ವಾಸ್ತುರಚನೆಗೂ ನಿಕಟವಾದ ಸಂಬಂಧವಿರುವುದು ತಿಳಿದು ಬರುತ್ತದೆ. ಇವೆರಡರ ನಡುವೆ ಇರುವ ಸಾದೃಶ್ಯವನ್ನು **ವಿಷ್ಣುತಂತ್ರ, ಶಿಲ್ಪತಂತ್ರ, ವಾತುಲಾಗಮ, ಅಪರಾಜಿತ ಶಿಲ್ಪ** ಮೊದಲಾದ ಗ್ರಂಥಗಳಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದು[೧೬]. ಇವುಗಳಲ್ಲಿ ದೇವಾಲಯದಲ್ಲಿ ಇರುವ ಗರ್ಭಗೃಹವು ತಲೆ, ಶಿಖರವು ಶಿಖೆ, ಮಂಡಪಗಳು ದೇಹದ ನಡುವಿನ ಭಾಗಗಳು ಎನ್ನಲಾಗುತ್ತದೆ. ಇದರ ಜೊತೆಗೆ ಪ್ರಾಕಾರಗಳು ತೋಳುಗಳು, ಮಹಾದ್ವಾರವು ಕಾಲು ಎಂಬುದಾಗಿ ದೇವಾಲಯದ ಭಾಗಗಳನ್ನು ಗುರುತಿಸಲಾಗುತ್ತದೆ.

---

೧೪. P.R. Shrinivasan: **The Indian Temple Art and Architecture,** ಪುಟ-೧೧

೧೫. ಪ್ರೊ, ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ,** ಪುಟ-೧೧೭

೧೬. ಪ್ರೊ, ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ,** ಪುಟ-೬೯

ದೇವಾಲಯದ ರಚನೆಯಲ್ಲಿ ಗೋಪುರ, ಗರ್ಭಗೃಹಗಳಿರುವಷ್ಟೇ ಮಹತ್ವವು ದೇವಾಲಯದ ಹೊರ ಆವರಣದಲ್ಲಿರುವ ಪ್ರಾಕಾರಗಳಿಗೂ ಇರುತ್ತದೆ. ದೇವಾಲಯದ ವಾಸ್ತು ವಿನ್ಯಾಸವನ್ನು ಮನುಷ್ಯನ ದೇಹರಚನೆಗೆ ಹೋಲಿಸುತ್ತಾ - ದೇಹವೇ ದೇಗುಲ, ದೇಹದೊಳಗಿರುವ ಜೀವವೇ ದೇಗುಲದೊಳಗೆ ಇರುವ ದೇವರು[೧೭] ಎನ್ನುವ ಮಾತು ಶಿಲ್ಪಗ್ರಂಥಗಳಲ್ಲಿ ಇದೆ.


ದೇವಾಲಯದ ವಾಸ್ತುರಚನೆಯಲ್ಲಿ ಗರ್ಭಗುಡಿಗೆ ಎದುರು ಮೊದಲಿಗೆ ಧ್ವಜಸ್ತಂಭವಿರುತ್ತದೆ. ಧ್ವಜಸ್ತಂಭದ ನಂತರ ಬಲಿಪೀಠ, ಬಲಿಪೀಠದ ನಂತರ ದೀಪಸ್ತಂಭ ಇಲ್ಲವೇ ಗರುಡಗಂಬವಿರುತ್ತದೆ. ದೇವಾಲಯದ ಎಲ್ಲಾ ಪ್ರಾಕಾರಗಳ ನಂತರ ಮುಖ್ಯದ್ವಾರವು ಇರುವುದು ಕಾಣುತ್ತದೆ.

ಕೆಲವು ಗ್ರಂಥಗಳಲ್ಲಿ ದೇವಾಲಯದ ನಕ್ಷೆಯನ್ನು ಮಲಗಿರುವ ಮನುಷ್ಯನಂತೆ ಕಲ್ಪಿಸಿಕೊಂಡು, ಅವನ ಕಾಲುಗಳಿರುವ ಕಡೆ ದ್ವಾರಾಗೋಪುರ, ಅವನ ಜನನೇಂದ್ರಿಯ ಇರುವೆಡೆ ಧ್ವಜಸ್ತಂಭ, ಅವನ ಹೊಟ್ಟೆ ರಂಗಮಂಟಪ, ಹೃದಯ ಅಂತರಾಳ ಅಥವಾ ಸುಕನಾಸಿ, ತಲೆ ಗರ್ಭಗೃಹ, ಭ್ರೂಮಧ್ಯ (ಹುಬ್ಬುಗಳು ಕೂಡುವೆಡೆ) ಮೂಲ ಬೇರದ ಪೀಠ ಎಂದು ನಿರ್ದೇಶಿಸುತ್ತಾರೆ[೧೮] ಎಂದು ಪ್ರೊ. ಎಸ್.ಕೆ. ರಾಮಚಂದ್ರ ರಾವ್‌ರವರು ತಮ್ಮ ಭಾರತದ ದೇವಾಲಯ ನೆಲೆ-ಹಿನ್ನೆಲೆ ಎಂಬ ಗ್ರಂಥದಲ್ಲಿ ಹೇಳುತ್ತಾರೆ. ಇದೇ ಗ್ರಂಥದ ಮತ್ತೊಂದು ಪುಟದಲ್ಲಿ ಬಲಿಪೀಠವು ನಾಭಿಯ (ಹೊಕ್ಕಳಿನ) ಸ್ಥಾನದಲ್ಲಿದೆ ಎಂದು ಅಭಿಪ್ರಾಯಪಡುತ್ತಾರೆ.

ಕೆ.ಆರ್. ಶ್ರೀನಿವಾಸನ್‌ರವರು ತಮ್ಮ ಒಂದು ಗ್ರಂಥದಲ್ಲಿ ಭಾರತೀಯ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತು ಹೇಳುತ್ತಾ ದೇವಾಲಯದ ರಚನೆಯಲ್ಲಿ ವಾಸ್ತುಪುರುಷನು ಅಂಗಾತನಾಗಿ ಮಲಗಿರುವನು ಎಂದು ಹೇಳುತ್ತಾರೆ. ಇದರಲ್ಲಿ ಗರ್ಭಗೃಹದ ಮೂರ್ತಿಯ ಸ್ಥಳವು ಅವನ ತಲೆ, ಅಲ್ಲಿಂದ ಶುರುವಾಗಿ ದೇಹದ ಕೊನೆಯಾದ ಪಾದವು ಧ್ವಜಸ್ತಂಭ ಎಂದು ಹೇಳುತ್ತಾರೆ[೧೯]. ದೇವಾಲಯದ ವಾಸ್ತುರಚನೆಯಲ್ಲಿ ಮನುಷ್ಯನ ಅಂಗಾತ ಮಲಗಿದ ಚಿತ್ರವನ್ನು ಅನುಸರಿಸಿ ನೋಡಿದರೆ ಪ್ರೊ. ಎಸ್.ಕೆ. ರಾಮಚಂದ್ರ ರಾವ್‌ರವರ ಹೇಳಿಕೆ ಸ್ವಲ್ಪ ಮಟ್ಟಿಗೆ ಸರಿ ಹೊಂದುತ್ತದೆ ಎನ್ನಬಹುದು.

ಬಲಿಪೀಠವು ಹೊಕ್ಕುಳ ಸ್ಥಾನದಲ್ಲಿದೆ ಎನ್ನುವ ಹಿನ್ನೆಲೆಯಲ್ಲಿ ನೋಡಿದರೆ ಧ್ವಜಸ್ತಂಭವು ಹೆಚ್ಚಾಗಿ ಗರ್ಭಗುಡಿ ಹಾಗೂ ಬಲಿಪೀಠದ ಮಧ್ಯದಲ್ಲಿದ್ದು, ಅದು ಬಲಿಪೀಠಕ್ಕೆ ಅಂಟಿಕೊಂಡಂತೆ ನಿರ್ಮಿಸಿರುವುದನ್ನು ಕಾಣುತ್ತೇವೆ. ಈ ಕಾರಣದ ಆಧಾರದ ಮೇಲೆ ದೇವಾಲಯದ ವಾಸ್ತುವಿನಲ್ಲಿ ಜನನೇಂದ್ರಿಯ ಇರುವೆಡೆ ಧ್ವಜಸ್ತಂಭ ಇರುತ್ತದೆ ಎಂಬುವುದನ್ನು

೧೭. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ**, ಪುಟ-೯೦
೧೮. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ**, ಪುಟ-೯೧
೧೯. K.R. Shrinivasan: **The Indian Temple Art and Architecture**, ಪುಟ-೪೭



ಚಿತ್ರ ೬೪

ಒಪ್ಪಲಾಗುವುದಿಲ್ಲ. ಧ್ವಜಸ್ತಂಭವು ಕೇವಲ ದೇವರ ಇರುವಿಕೆಯನ್ನಷ್ಟೇ ಪ್ರತಿನಿಧಿಸುತ್ತದೆ ಎನ್ನಬಹುದು. ಸಾಮಾನ್ಯವಾಗಿ ದೇವಾಲಯದ ಹೊರ ಆವರಣದಲ್ಲಿ ಗರ್ಭಗುಡಿಗೆ ಎದುರಾಗಿ ಧ್ವಜಸ್ತಂಭ, ಬಲಿಪೀಠ ಹಾಗೂ ದೀಪಸ್ತಂಭಗಳು ಇರುತ್ತವೆ.

ದೇವಾಲಯದ ಮಹಾದ್ವಾರವನ್ನು ಕಾಲುಗಳೆಂದು ಗುರುತಿಸುವ ಹಿನ್ನೆಲೆಯಲ್ಲಿ ಬಲಿಪೀಠಕ್ಕೂ ಮಹಾದ್ವಾರಕ್ಕೂ ಮಧ್ಯದಲ್ಲಿ ದೀಪಸ್ತಂಭಗಳು ಇರುವುದು ಕಾಣುತ್ತದೆ. ಈ ದೀಪಸ್ತಂಭವು ಹೊಕ್ಕಳು ಎಂದು ಗುರುತಿಸಲಾಗುವ ಬಲಿಪೀಠ ಹಾಗೂ ಕಾಲುಗಳು ಎಂದು ಗುರುತಿಸಲಾಗುವ ಮುಖ್ಯದ್ವಾರದ ನಡುವೆ ಇರುತ್ತದೆ. ಆದ್ದರಿಂದ ದೇವಾಲಯದ ವಾಸ್ತುರಚನೆಯಲ್ಲಿ ಜನನೇಂದ್ರಿಯ ಸ್ಥಾನವನ್ನು ದೀಪಸ್ತಂಭವು ಸಾಂಕೇತಿಸುತ್ತದೆ ಎಂದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ದೇವಾಲಯದ ಮುಖ್ಯ ದ್ವಾರದ ಬಳಿ ದೀಪಸ್ತಂಭಗಳು ಇರುತ್ತವೆ. ದೇವಾಲಯದ ಗಾತ್ರಕ್ಕೆ ಅನುಗುಣವಾಗಿ ಸುಮಾರು ಇಪ್ಪತ್ತರಿಂದ ಐವತ್ತು ಅಡಿ ಎತ್ತರದ ದೀಪಸ್ತಂಭಗಳು ದೊರೆಯುತ್ತವೆ. ಈ ದೀಪಸ್ತಂಭಗಳು ಗರ್ಭಗುಡಿಯ ದ್ವಾರಕ್ಕಿಂತ ಎತ್ತರವಾದ ಮತ್ತು ಗರ್ಭಗೃಹದ ಮೇಲಿನ ವಿಮಾನಕ್ಕಿಂತ ಚಿಕ್ಕದಾದ ಎತ್ತರವನ್ನು ಹೊಂದಿರುತ್ತವೆ. ಇದನ್ನು ಸಷ್ಟವಾಗಿ ತಿಳಿಯಲು ಚಿತ್ರ ೯೩ ರಲ್ಲಿ ರೇಖಾ ಚಿತ್ರಣವನ್ನು ನೀಡಲಾಗಿದೆ.

ದೀಪಸ್ತಂಭಗಳ ವಾಸ್ತುರಚನೆ:

ಪ್ರಾಚೀನ ಮಾನವನು ನಿಸರ್ಗವನ್ನು ಪೂಜಿಸುವ ಸಮಯದಲ್ಲಿ ಮರಗಳಿಗೂ ಪೂಜಿಸುತ್ತಿದ್ದ ಎಂಬ ಹಿನ್ನೆಲೆಯಲ್ಲಿ ಮರಗಳನ್ನು ದೇವರೆಂದು ಭಾವಿಸಿ ಪೂಜಿಸುವ ಸಂಪ್ರದಾಯವು ಇಂದಿಗೂ ಆಚರಣೆಯಲ್ಲಿ ಇರುವುದು ಇದಕ್ಕೆ ಸಾಕ್ಷಿ ಎಂದು ಹೇಳಬಹುದು.

ಮೂಲತೋ ಬ್ರಹ್ಮರೂಪಾಯ

ಮಧ್ಯತೋ ವಿಷ್ಣುರೂಪಿಣೆ

ಅಗ್ರತೋ ರುದ್ರರೂಪಾಯ

ವೃಕ್ಷ ರಾಜಾಯತೇ ನಮಃ [೨೦]

ಈ ಶ್ಲೋಕವನ್ನು ಪ್ರಸ್ತುತ ದಿನಗಳ ಹಬ್ಬ ಹರಿದಿನಗಳಲ್ಲಿ ಅಶ್ವತ್ಥ ಮರಕ್ಕೆ ಪ್ರದಕ್ಷಿಣೆ ಹಾಕುವಾಗ ಜಪಿಸುವುದು ರೂಢಿಯಲ್ಲಿದೆ. ಮೂಲದಲ್ಲಿ ಅಂದರೆ ಬ್ರಹ್ಮದೇವನ ರೂಪವನ್ನು, ಮಧ್ಯದ ಕಾಂಡ ಭಾಗದಲ್ಲಿ ವಿಷ್ಣುವಿನ ರೂಪವನ್ನು ಹಾಗೂ ಅಗ್ರ ಭಾಗದಲ್ಲಿ, ತುದಿಯಲ್ಲಿ ರುದ್ರನ ರೂಪವನ್ನು ಹೊದಿರುವಂತಹ ವೃಕ್ಷ ರಾಜನಿಗೆ ನಮಸ್ಕರಿಸುತ್ತೇನೆ ಎಂಬುವುದು ಈ ಶ್ಲೋಕದ ತಾತ್ಪರ್ಯವಾಗಿದೆ. ಇದೇ ರೀತಿಯಾಗಿ ಶಂಕುವಿನ ರಚನೆಯಲ್ಲೂ **ಹೇಳಲಾಗುತ್ತದೆ.**

---

೨೦. **ಮೈಸೂರು ಪಂಚಾಂಗ–** ಒಂಟಿಕೊಪ್ಪಲ್ ಪಂಚಾಂಗ ಮಂದಿರ, ಪುಟ–೩೮

ದೇವಾಲಯಗಳ ರಚನೆಗಳು ನಡೆಯುವುದು ವಾಸ್ತುಶಾಸ್ತ್ರದ ಆಧಾರದ ಮೇಲೆ ಎನ್ನುವ ಹಿನ್ನೆಲೆಯಲ್ಲಿ ವಾಸ್ತು ಪೂಜೆಯೂ ಪ್ರಮುಖವಾದುದಾಗಿದೆ. ಯಾವುದೇ ಕಟ್ಟಡವನ್ನು ನಿರ್ಮಿಸುವ ಮೊದಲು ವಾಸ್ತು ಪೂಜೆಯನ್ನು ಮಾಡಲಾಗುತ್ತದೆ. ವಾಸ್ತು ಪೂಜೆಯಲ್ಲಿ ಶಂಕು ಸ್ಥಾಪನೆಯನ್ನು ಮಾಡುವುದು ಪದ್ಧತಿ. ಶಂಕು ಎಂದರೆ ಪುಟ್ಟ ಸ್ತಂಭ, ಶಂಕು ಸ್ಥಾಪನೆ ಎಂದರೆ ಪುಟ್ಟ ಸ್ತಂಭವನ್ನು ಸ್ಥಾಪಿಸಿ ಕಟ್ಟಡದ ಕಾರ್ಯವನ್ನು ಪ್ರಾರಂಭಿಸುವುದು ಎಂದರ್ಥ. ಶಂಕು ಸ್ಥಾಪನೆಯನ್ನು ಮಾಡುವಾಗ ಆಚರಿಸಬೇಕಾದ ವಿಧಿವಿಧಾನಗಳನ್ನು ಕುರಿತು ವಾಸ್ತುಶಾಸ್ತ್ರದಲ್ಲಿ ಹೇಳಿರುವುದು ತಿಳಿದು ಬರುತ್ತದೆ.

ಈ ಶಂಕು ಎರಡು ಅಥವಾ ಮೂರು ಅಡಿಗಳ ಮರದ ತುಂಡಾಗಿರುತ್ತದೆ. ಅದರ ಎತ್ತರವನ್ನು ಮೂರು ಸಮಭಾಗಗಳಾಗಿ ವಿಂಗಡಿಸಿರಲಾಗಿರುತ್ತದೆ. ಕೆಳಗಿನ ಭಾಗವು ಚೌಕವಾಗಿ, ಮಧ್ಯದ ಭಾಗವು ಎಂಟು ಮೂಲೆಗಳನ್ನು ಹೊಂದಿದ್ದೂ, ಮೇಲಿನ ಭಾಗವು ವೃತ್ತಾಕಾರವನ್ನು ಹೊಂದಿರುತ್ತದೆ. ಈ ಪುಟ್ಟ ಸ್ತಂಭವನ್ನು ಲಂಬವಾಗಿ ಸ್ಥಾಪನೆ ಮಾಡಲಾಗುತ್ತದೆ. ಇದು ತಾತ್ಕಾಲಿಕವಾಗಿ ಬಳಸುವ ಕಂಬವಾದರೂ ಮಹತ್ತರವಾದ ಪಾವಿತ್ರ್ಯವನ್ನು ಹೊಂದಿರುತ್ತದೆ. ಇದರ ರಚನೆಯ ಮಾದರಿಯು ಲಿಂಗದ ವಿವರಣೆಯಲ್ಲಿಯೂ ಇರುವುದನ್ನು ಕಾಣುತ್ತೇವೆ.

ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತು ಹೇಳುವ ಒಂದು ಗ್ರಂಥದಲ್ಲಿ ಲಿಂಗದ ವರ್ಣನೆಯು ದೊರೆಯುತ್ತದೆ. ಗ್ರಂಥದಲ್ಲಿ ಹೇಳಿರುವಂತೆ ಶಿವಲಿಂಗ ರಚನೆಯಲ್ಲಿ ಮೂರು ಪ್ರಮುಖವಾದ ರಚನೆಗಳು ಕಂಡು ಬರುತ್ತವೆ. ಇದನ್ನು **ಲಿಂಗ ಲಕ್ಷಣ** ಎಂದು ಕರೆಯುತ್ತಾರೆ[೨೧]. ಇವುಗಳಲ್ಲಿ ಕೆಳಗಡೆ ನಾಲ್ಕು ಮುಖವನ್ನು ಹೊಂದಿದ ಚೌಕಾಕಾರದ ರಚನೆಯನ್ನು **ಬ್ರಹ್ಮ ಭಾಗ** ಎಂದು ಕರೆಯುತ್ತಾರೆ. ನಂತರದಲ್ಲಿರುವ ಮಧ್ಯ ಭಾಗವು ಅಷ್ಟಮುಖಗಳನ್ನು ಹೊಂದಿರುತ್ತದೆ. ಅದನ್ನು **ವಿಷ್ಣು ಭಾಗ** ಎಂದು ಕರೆಯಲಾಗುತ್ತದೆ. ಇದರ ನಂತರ ಇರುವ ವೃತ್ತಾಕಾರದ ಮುಖಗಳಿಲ್ಲದ ಮೇಲಿರುವ ಭಾಗವನ್ನು **ರುದ್ರ ಭಾಗ** ಎಂದು ಕರೆಯುತ್ತಾರೆ. ಹೀಗೆ ಲಿಂಗವು ಚೌಕಾಕಾರದಿಂದ ಮೊದಲುಗೊಂಡು ಮಧ್ಯದಲ್ಲಿ ಅಷ್ಟಮುಖಗಳನ್ನು ಹೊಂದುತ್ತಾ ವೃತ್ತಾಕಾರದಲ್ಲಿ ಕೊನೆಗೊಳ್ಳುವುದನ್ನು ನೋಡಬಹುದು.

ಬಾಗಲಕೋಟೆ ತಾಲ್ಲೂಕಿನಲ್ಲಿ ಇರುವ ಚಾಲುಕ್ಯರ ಕಾಲದ ದೇವಾಲಯಗಳನ್ನು ಹೊಂದಿರುವ ಪಟ್ಟದಕಲ್ಲಿನಲ್ಲಿ ದೊರೆತಿರುವ ಶಿವಲಿಂಗಗಳ ಚಿತ್ರಣವನ್ನು ಇಲ್ಲಿ ನೋಡಬಹುದಾಗಿದೆ. ಚಿತ್ರ ೯೪ರಲ್ಲಿ ಲಿಂಗ ಮತ್ತು ಪೀಠದ ಚಿತ್ರಣವನ್ನು ನೀಡಲಾಗಿದೆ.

---

೨೧. Dr. D.V. Devaraj, Dr. Channabasappa:
Art and Architecture in Karnataka (papers presented at the National seminar on Archeology 1985), ಪುಟ-೧೭೬



ಚಿತ್ರ ೯೪



ಚಿತ್ರ ೯೫



ಚಿತ್ರ ೯೬



ಚಿತ್ರ ೯೭

ಚಿತ್ರ ೯೫ರಲ್ಲಿ ಪೀಠವು ಸ್ವಲ್ಪ ಹಾಳಾಗಿದೆ. ಇದರಲ್ಲಿ ಲಿಂಗದ ಪೀಠದಲ್ಲಿ ಇರುವ ಅಷ್ಟಸ್ರವನ್ನು ನೋಡಬಹುದು. ಚಿತ್ರ ೯೬ರಲ್ಲಿ ಪೀಠವು ಸಂಪೂರ್ಣವಾಗಿ ಹಾಳಾಗಿರುವುದರಿಂದ ಪೀಠದಲ್ಲಿ ಇದ್ದಂತಹ ಅಷ್ಟಸ್ರ ಮತ್ತು ಚೌಕಾಕಾರದ ಭಾಗವನ್ನು ನೋಡಬಹುದು. ಕೆಲವು ಲಿಂಗಗಳಲ್ಲಿ ಚೌಕಾಕಾರ, ಅಷ್ಟಭುಜದ ರಚನೆ ಮತ್ತು ವೃತ್ತಾಕಾರದ ರಚನೆಗಳು ಪೀಠದ ಮೇಲೆ ಇರುವುದನ್ನು ಗಮನಿಸಬಹುದು (ಚಿತ್ರ ೯೭).

ಲಿಂಗದ ಈ ಮೂರು ಹಂತದ ಪ್ರಮುಖ ರಚನೆಗಳು ದೀಪಸ್ತಂಭಗಳಲ್ಲೂ ಇರುವುದು ವಿಶೇಷವೇ ಸರಿ. ದೀಪಸ್ತಂಭಗಳಲ್ಲಿ ಚೌಕಾಕಾರದ ಮುಖಗಳಿಲ್ಲದ ಭಾಗಗಳು ಪೀಠದ ಮೇಲೆ ಇರುವುದು ಕಾಣುತ್ತದೆ. ಕಂಬದ ತುದಿಯಲ್ಲಿ ದೀಪವನ್ನು ಬೆಳಗಲೆಂದೇ ವಿಶೇಷವಾದ ರಚನೆಯನ್ನು ಮಾಡಲಾಗಿರುತ್ತದೆ.

ಲಿಂಗ, ದೀಪಸ್ತಂಭ, ಅಶ್ವತ್ಥ ಮರ, ಸೇರಿದಂತೆ ಶಂಕುಸ್ಥಾಪನೆಯಲ್ಲಿ ಬರುವ ಶಂಕುವಿನಲ್ಲೂ ಗುರುತಿಸುವ ಭಾಗಗಳನ್ನು ಶಿವಭಕ್ತನ ಶರೀರಕ್ಕೂ ಅನ್ವಯಿಸುವಂತೆ ಹೇಳಲಾಗುತ್ತದೆ. ನಾಭಿಯ ಕೆಳಗಿನ ಭಾಗವು ಬ್ರಹ್ಮ ಸ್ವರೂಪವಾದುದು, ನಾಭಿಯಿಂದ ಕತ್ತಿನವರೆಗೆ ಇರುವ ಭಾಗವು ವಿಷ್ಣು ಸ್ವರೂಪವಾದುದು, ಇವನ ಮುಖವು ಶಿವ ಸ್ವರೂಪವಾದುದು[೨೨] ಎಂಬ ವರ್ಣನೆಗಳು ಪುರಾಣಗಳಲ್ಲಿ ದೊರೆಯುತ್ತದೆ. ಹೀಗೆ ಶಿವಭಕ್ತನ ಶರೀರವು ತ್ರಿಮೂರ್ತಿ ಸ್ವರೂಪವಾದುದು ಎಂದು ಹೇಳುವುದನ್ನು ಇಲ್ಲಿ ಗಮನಿಸಬಹುದು.

ಭಾರತೀಯ ವಾಸ್ತುಶಿಲ್ಪದಲ್ಲಿ ಗೌತಮ ಬುದ್ಧನನ್ನು ಉಬ್ಬುಶಿಲ್ಪಗಳಲ್ಲಿ ಸಾಂಕೇತಿಕವಾಗಿ ತೋರಿಸಿರುವುದನ್ನು ಕಾಣುತ್ತೇವೆ. ಬುದ್ಧನನ್ನು ಸಾಂಕೇತಿಕವಾಗಿ ಪ್ರತಿಬಿಂಬಿಸುವ ಉಬ್ಬುಶಿಲ್ಪ ಒಂದರಲ್ಲಿ ಇರುವ ಕಮಲವನ್ನು ಬ್ರಹ್ಮನೆಂದೂ, ಅದರ ಮೇಲಿನ ಪಾದವನ್ನು ವಿಷ್ಣು ಎಂದೂ ಮತ್ತು ಇದರ ನಂತರ ಇರುವ ಅಗ್ನಿಸ್ತಂಭವನ್ನು ರುದ್ರನು ಎಂದು ಗುರುತಿಸಲಾಗುತ್ತದೆ[೨೩]. ಬೌದ್ಧ ಧರ್ಮದಲ್ಲಿಯೂ ಈ ರೀತಿಯ ವಿವರಣೆಯು ದೊರೆಯುವುದನ್ನು ನೋಡಬಹುದು.

ದೀಪಸ್ತಂಭಗಳಲ್ಲಿ ಬ್ರಹ್ಮಭಾಗ, ವಿಷ್ಣುಭಾಗ, ರುದ್ರಭಾಗಗಳಿದ್ದರೂ ಶಿವಲಿಂಗಕ್ಕೆ ಇರುವಂತೆ ಪಾರ್ವತೀ ಸ್ವರೂಪದ ಪೀಠ ಇರುವುದಿಲ್ಲ. ದೀಪಸ್ತಂಭವು ಶಿವಲಿಂಗದಂತೆ ಜ್ಞಾನ ಸ್ವರೂಪನಾದ ಈಶ್ವರನನ್ನು ಪ್ರತಿನಿಧಿಸುತ್ತದೆ ಎನ್ನಬಹುದು. ದೀಪಸ್ತಂಭವು ಇಲ್ಲಿ ಸೃಷ್ಟಿಯ ಸಂಕೇತವನ್ನು ಪ್ರತಿನಿಧಿಸುತ್ತದೆ ಎಂದು ಅರ್ಥೈಸಿಕೊಳ್ಳಬಹುದು.


ಕರ್ನಾಟಕದ ದೇವಾಲಯ ವಾಸ್ತುಶಿಲ್ಪಗಳಲ್ಲಿ ವಿಮಾನದ ರಚನೆಯಲ್ಲಿಯೂ ಕೂಡ ಅದರ ರಚನೆಯ ಆಧಾರದ ಮೇಲೆ ಪ್ರಮುಖವಾಗಿ ಮೂರು ವಿವಿಧ ಹಂತಗಳನ್ನು ವಿಂಗಡಿಸಬಹುದು[೨೪]. ಕೆಳಗಿನ ಭಾಗವು ಚೌಕವನ್ನು(ಸಮ ಚತುರಸ್ರ) ಇಲ್ಲವೇ

---

೨೨. ಹಾಸನದ ಪಂಡಿತ್ ವೆಂಕಟ ರಾವ್:
ಶಿವ ಮಹಾಪುರಾಣಂ, ಭಾಗ ೧, ವದ್ಯೇಶ್ವರ ಸಂಹಿತಾ, ಪುಟ-೨೯೬

೨೩. Calambur Shivarama murti, **The Art of India,** ಪುಟ-೭೭

೨೪. Dr. D.V. Devaraj, Dr. Channabasappa,
Art and Architecture in Karnataka (papers presented at the National seminar on Archeology 1985), ಪುಟ-೧೭೭



ಚಿತ್ರ ೯೮

ಆಯತಾಕಾರವನ್ನು(ಆಯತಸ್ರ) ಹೊಂದಿರುತ್ತದೆ. ಮಧ್ಯದ ಭಾಗವು ಎಂಟು ಮೂಲೆಗಳನ್ನು(ಅಷ್ಟಸ್ರ) ಇಲ್ಲವೇ ಹದಿನಾರು(ಶೋಡಷಸ್ರ) ಅಥವಾ ಇನ್ನೂ ಹೆಚ್ಚು ಮೂಲೆಗಳನ್ನು ಹೊಂದಿರುತ್ತದೆ. ನಂತರದ ರಚನೆಯು ವೃತ್ತಾಕಾರವಾಗಿಯೋ ಇಲ್ಲವೇ ಅಂಡಾಕೃತಿಯನ್ನು ಹೊಂದಿರುವುದು ಕಾಣುತ್ತದೆ.

ಶಂಕು ಸ್ಥಾಪನೆಯ ಶಂಕು, ಗರ್ಭಗುಡಿಯ ಮೇಲಿನ ವಿಮಾನ ಮತ್ತು ದೀಪಸ್ತಂಭಗಳ ರಚನೆಯು ಶಿವಲಿಂಗದ ರಚನೆಯನ್ನು ಹೋಲುವುದರಿಂದ ಲಿಂಗದ ರಚನಾ ಶೈಲಿಗಳನ್ನು ಇಲ್ಲಿ ತಿಳಿಯುವುದು ಅವಶ್ಯಕವೆನಿಸುತ್ತದೆ.


ಶಿವಲಿಂಗ:

ಶಿವಲಿಂಗದ ರಚನೆಯಲ್ಲಿ ಹಲವಾರು ವಿಧಗಳು ಇರುವುದನ್ನು ನೋಡಬಹುದು. ಅವುಗಳನ್ನು ಸರ್ವ ಸಮಲಿಂಗ, ವರ್ಧಮಾನ ಲಿಂಗ, ಶಿವಾಧಿಕ ಲಿಂಗ, ಎಂದು ಹೆಸರಿಸಲಾಗುತ್ತದೆ. ಚಿತ್ರ ೯೮ರಲ್ಲಿ ಇವುಗಳ ಅಳತೆಗಳನ್ನು ಕೂಡಾ ಕೊಡಲಾಗಿದೆ. ಮತ್ತೊಂದು ವಿಧದ ಲಿಂಗಗಳಲ್ಲಿ ಸರ್ವತೋಭದ್ರ, ಸಾರ್ವದೇಶಿ, ತ್ರೈರಾಶಿಕ ಮತ್ತು ಧಾರಾ ಲಿಂಗಗಳು ಎಂದು ಹೆಸರಿಸಲಾಗುತ್ತದೆ. ಈ ರೀತಿಯ ಲಿಂಗದ ರಚನೆಯ ರೇಖಾ ಚಿತ್ರವು ಚಿತ್ರ ೯೯ರಲ್ಲಿ ಇರುವುದು ಕಾಣುತ್ತದೆ. ಈ ಲಿಂಗಗಳ ಮೇಲ್ಭಾಗವು ಚಪ್ಪಟೆಯಾಗಿ ಇರುವುದನ್ನು ಕಾಣಬಹುದು. ಧಾರಾಲಿಂಗದಲ್ಲಿ ಮಾತ್ರ ಮೇಲಿನ ಭಾಗವು ಸ್ವಲ್ಪ ಉಬ್ಬಿರುವುದು ಕಾಣುತ್ತದೆ.

ಲಿಂಗದ ಒಟ್ಟು ಎತ್ತರವನ್ನು ಹತ್ತು ಸಮಭಾಗಗಳಾಗಿ ವಿಂಗಡಿಸಿ ಅವುಗಳಲ್ಲಿ ಚತುರಸ್ರವನ್ನು ಮೂರು ಭಾಗ, ಅಷ್ಟಾಸ್ರವನ್ನು ಮೂರು ಭಾಗ, ವೃತ್ತಾಕಾರವನ್ನು ನಾಲ್ಕು ಭಾಗವನ್ನಾಗಿ ಮಾಡಿ ನಿರ್ಮಿಸಿದರೆ ಅದು ಶಿವಾಧಿಕ ಲಿಂಗ ಎಂದು ಕರೆಸಿಕೊಳ್ಳುವುದು. ಶಿವಾಧಿಕ ಲಿಂಗವನ್ನು ನಾಲ್ಕು ಬಗೆಗಳಲ್ಲಿ ರೂಪಿಸಬಹುದು[೨೫].

ಕ್ರಮ	ದೇವಾಂಶ	ಒಂದು	ಎರಡು	ಮೂರು	ನಾಲ್ಕು
೧	ಚತುರಸ್ರ (ಬ್ರಹ್ಮ ಭಾಗ)	೩	೪	೫	೬
೨	ಅಷ್ಟಸ್ರ (ವಿಷ್ಣು ಭಾಗ)	೩	೪	೫	೬
೩	ವೃತ್ತಾಕಾರ (ರುದ್ರ ಭಾಗ)	೪	೫	೬	೭

೨೫. ಡಾ. ಜಿ. ಜ್ಞಾನಾನಂದ: ಶ್ರೀ ಕಾಸ್ಯಪ ಶಿಲ್ಪಶಾಸ್ತ್ರಂ (ಉತ್ತರಾರ್ಧ), ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಪುಟ-೧೧೬


ಸರ್ವತೋಭದ್ರ, ಸಾರ್ವದೇಶಿಕ,
ತ್ರೈರಾಶಿಕ ಮತ್ತು ಧಾರಾ ಲಿಂಗಗಳು
ಸ್ವಸ್ತಿಕ ಲಿಂಗ
ಸರ್ವತೋಭದ್ರ ಲಿಂಗ
ಸಾರ್ವದೇಶಿಕ ಲಿಂಗ
ತ್ರೈರಾಶಿಕ ಲಿಂಗ
ಧಾರೆಗಳು - 4, 8, 16, 32, 64......
ಧಾರಾಲಿಂಗ

ಚಿತ್ರ ೯೯

ಸಮಲಿಂಗದಲ್ಲಿ ಚತುರಸ್ರ ಭಾಗ, ಅಷ್ಟಸ್ರದ ಭಾಗ ಮತ್ತು ಹದಿನಾರು ಮೂಲೆಗಳಿರುವ ಇಲ್ಲವೇ ವೃತ್ತಾಕಾರವನ್ನು ಹೊಂದಿರುವ ಭಾಗವು ಸಮನಾದ ಎತ್ತರವನ್ನು ಹೊಂದಿರುತ್ತದೆ. ಸಮ ಲಿಂಗದಂತೆ ಬ್ರಹ್ಮ ಭಾಗ, ವಿಷ್ಣು ಭಾಗ ಮತ್ತು ರುದ್ರ ಭಾಗದ ರಚನೆಗಳು ದೀಪಸ್ತಂಭಗಳಲ್ಲೂ ಇರುವುದು ಕಾಣುತ್ತದೆ.


ಶಿವಲಿಂಗದಲ್ಲಿ ಪೂಜಾ ಭಾಗವು ಧಾರೆಗಳಿಂದ ಇದ್ದರೆ ಅದನ್ನು **ಧಾರಾಲಿಂಗ** ಎಂದು ಕರೆಯಲಾಗುತ್ತದೆ[೨೬]. ಧಾರೆಗಳು ಎಂದರೆ ಮೂಲೆಗಳನ್ನು ಹೊಂದಿರುವ ಲಂಬವಾದ ಪಟ್ಟಿಕೆಗಳು ಎಂದರ್ಥ. ಅಂದರೆ ಈ ಲಿಂಗರಚನೆಯಲ್ಲಿ ವೃತ್ತಾಕಾರವನ್ನು ಹೊಂದುವ ರುದ್ರಭಾಗದಲ್ಲಿ ಲಂಬವಾದ ಪಟ್ಟಿಕೆಗಳು ಇರುವುದನ್ನು ನೋಡಬಹುದು. ಈ ಪಟ್ಟಿಕೆಗಳು ಲಿಂಗದ ಆದಿಯಿಂದ ಅಂತ್ಯದವರೆಗೂ ರಚನೆಗೊಂಡಿರಬಹುದು ಎಂದು ಕೆಲವರ ಮತವಾಗಿದೆ. ಅಂದರೆ ಲಿಂಗದ ಬ್ರಹ್ಮ ಭಾಗ್ರ ಮತ್ತು ವಿಷ್ಣು ಭಾಗದ ಜೊತೆಗೆ ರುದ್ರ ಭಾಗದಲ್ಲೂ ಪಟ್ಟಿಕೆಗಳು ಇರಬಹುದು ಎಂದು ಹೇಳಲಾಗುತ್ತದೆ. ಪೂಜಾ ಭಾಗದಲ್ಲಿ ೪, ೮, ೧೬, ೩೨ ಇಲ್ಲವೇ ೬೪ ಪಟ್ಟಿಕೆಗಳಿರಬೇಕು ಎಂದು ಕೆಲವು ಶಾಸ್ತ್ರಕಾರರು ಹೇಳುತ್ತಾರೆ. ಧಾರಾಲಿಂಗದ ರಚನೆಯಲ್ಲಿ ಪ್ರಮುಖವಾಗಿ ಮೂರು ಬಗೆಗಳು ದೊರೆಯುತ್ತವೆ. ಇವನ್ನು ಪಟ್ಟಿಕೆಯ ರೂಪದಲ್ಲಿ ಕೆಳಗೆ ಕೊಡಲಾಗಿದೆ[೨೭].

ಕ್ರಮ	ದೇವಾಂಶ	ಒಂದು	ಎರಡು	ಮೂರು
೧	ಚತುರಸ್ರ (ಬ್ರಹ್ಮ ಭಾಗ)	೪	೪	೪
೨	ಅಷ್ಟಸ್ರ (ವಿಷ್ಣು ಭಾಗ)	೪	೮	೮
೩	ವೃತ್ತಾಕಾರ (ರುದ್ರ ಭಾಗ)	೪	೮	೧೬


ಕೆಲವು ಶಾಸ್ತ್ರ ಗ್ರಂಥಗಳಲ್ಲಿ ಅದರಲ್ಲೂ **ಕಾಮಿಕಾಗಮ**ದಲ್ಲಿ ನೂರು ಪಟ್ಟಿಕೆಗಳು ಇರಬಹುದು ಎಂದೂ ಬ್ರಹ್ಮ ಭಾಗ, ವಿಷ್ಣು ಭಾಗಗಳಲ್ಲೂ ಇದೇ ರೀತಿಯ ಪಟ್ಟಿಕೆಗಳು ಇರಬೇಕೆಂದು ತಿಳಿದು ಬರುತ್ತದೆ. ಇನ್ನೂ ಕೆಲವು ಗ್ರಂಥಗಳಲ್ಲಿ ಅದರಲ್ಲೂ **ದೀಪಾರ್ಣ**ದಲ್ಲಿ ಬ್ರಹ್ಮ ಭಾಗವು ಚತುರ್ಭುಜವನ್ನೂ, ವಿಷ್ಣು ಭಾಗವು ಅಷ್ಟ ಭುಜಗಳನ್ನೂ ಹಾಗೂ ರುದ್ರ

೨೬ ಡಾ. ಜಿ. ಜ್ಞಾನಾನಂದ: **ಶ್ರೀ ಕಾಸ್ಯಪ ಶಿಲ್ಪಶಾಸ್ತ್ರಂ** (ಉತ್ತರಾರ್ಧ), ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಪುಟ–೧೭೩


೨೭ ಡಾ. ಜಿ. ಜ್ಞಾನಾನಂದ: **ಶ್ರೀ ಕಾಸ್ಯಪ ಶಿಲ್ಪಶಾಸ್ತ್ರಂ** (ಉತ್ತರಾರ್ಧ), ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಪುಟ–೧೭೪




ಚಿತ್ರ ೧೦೦




ಚಿತ್ರ ೧೦೧




ಚಿತ್ರ ೧೦೨



ಚಿತ್ರ ೧೦೩



ಚಿತ್ರ ೧೦೪



ಚಿತ್ರ ೧೦೫

ಭಾಗವು ಧಾರೆಗಳನ್ನು ಹೊಂದಿರುತ್ತದೆ ಎಂದು ತಿಳಿದು ಬರುತ್ತದೆ. ದೀಪಸ್ತಂಭಗಳ ರಚನೆಯಲ್ಲಿ ದೀಪಾರ್ಣದಲ್ಲಿ ಹೇಳಿರುವಂತೆ ರಚನೆಗೊಂಡಿರುವುದನ್ನೂ ನೋಡಬಹುದು.

ಶಾಸ್ತ್ರಗ್ರಂಥಗಳಲ್ಲಿ ಆಯಾ ಭಾಗದಲ್ಲಿ ಸೂಚಿಸಿರುವ ಧಾರೆಗಳ (ಪಟ್ಟಿಕೆಗಳ) ಸಂಖ್ಯೆಗಳನ್ನು ಪಟ್ಟಿಕೆಯ ರೂಪದಲ್ಲಿ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ[೨೮].

ಕ್ರಮ	ದೇವ ಭಾಗ	ಪೂರ್ವಕಾರಣ ದೀಪಾರ್ಣವ	ಕಾಶ್ಯಪ ಶಿಲ್ಪ ಶಾಸ್ತ್ರಂ			ಶಿಲ್ಪರತ್ನಂ			ಮಯಮತಂ		
೧	ರುದ್ರ ಭಾಗ (ಪೂಜಾ ಭಾಗ)	೧೬	೪	೮	೧೬	೧೬	೭೨	೬೪	೧೬	೭೨	೬೪
೨	ವಿಷ್ಣು ಭಾಗ	೮	೪	೮	೮	೮	೮೬	೭೨	೮	೧೬	೭೨
೩	ಬ್ರಹ್ಮ ಭಾಗ	೪	೪	೪	೪	೪	೮	೧೬	೪	೮	೧೬

ಲಿಂಗದ ಈ ರೀತಿಯ ಧಾರೆಗಳನ್ನು ಕೆಲವು ದೀಪಸ್ತಂಭಗಳಲ್ಲೂ ಬಳಸಿರುವುದನ್ನು ನೋಡಬಹುದು. ಇದು ಲಿಂಗದ ರಚನೆಯನ್ನು ಕುರಿತು ಹೇಳುವುದಾದರೆ ಶಿವಲಿಂಗದಲ್ಲಿರುವ ಪೀಠದ ರಚನೆಯನ್ನೂ ಇಲ್ಲಿ ತಿಳಿಯುವುದು ಅವಶ್ಯಕವಾಗುತ್ತದೆ.

ಪೀಠದ ರಚನೆ:

ಶಿವಲಿಂಗದಲ್ಲಿ ಇರುವ ಪೀಠದ ರಚನೆ ಹಾಗೂ ದೀಪಸ್ತಂಭದಲ್ಲಿರುವ ಪೀಠದ ರಚನೆಯ ಸಾಮ್ಯವನ್ನು ಕುರಿತು ನೋಡಬೇಕಾಗಿದೆ. ಪೀಠಗಳಲ್ಲಿ ಅದರ ಎತ್ತರವನ್ನು ವಿಭಜಿಸಿಕೊಂಡು ಅಲಂಕರಣ ಪಟ್ಟಿಕೆಗಳನ್ನು ಮಾಡಲಾಗುತ್ತದೆ. ಪೀಠದಲ್ಲಿನ ಅಡಿಪಾಯದಲ್ಲಿ ಇರುವ ಪಟ್ಟಿಕೆಯ ರಚನೆಯನ್ನು ಉಪಾನ, ಪಾದುಕೆ ಎಂದು ಕರೆಯುತ್ತಾರೆ. ಅದರ ನಂತರ ಮೇಲಿನ ಭಾಗದಲ್ಲಿರುವ ಪಟ್ಟಿಕೆಯನ್ನು ಜಗತಿ ಎಂದು ಗುರುತಿಸಲಾಗುತ್ತದೆ.

ಶಿಲ್ಪ ರಚನೆಯಲ್ಲಿ ಕಮಲದ ದಳಗಳು ಕೆಳಗೆ ಮುಖ ಮಾಡಿದಂತೆ ರಚನೆಯು ಇದ್ದರೆ ಅದಕ್ಕೆ ಅಧಃ ಪದ್ಮ ಎಂದು ಹೆಸರು. ಕೆಲವು ಕಡೆ ಅಧಃ ಪದ್ಮದ ಬದಲು ಇರುವ ಪಟ್ಟಿಕೆಯು ದುಂಡನೆಯ ಮೂಲೆಯನ್ನು ಹೊಂದಿದ್ದರೆ ಅದನ್ನು ಕುಮುದ ಎಂದು ಕರೆಯುತ್ತಾರೆ. ಕುಮುದದ ನಂತರವಿರುವ ಸಣ್ಣನೆಯ ಪಟ್ಟಿಕೆಯನ್ನು ಕಂಪ ಎಂದು

೨೮. ಡಾ. ಜಿ. ಜ್ಞಾನಾನಂದ: ಶ್ರೀ ಕಾಸ್ಯಪ ಶಿಲ್ಪಶಾಸ್ತ್ರಂ (ಉತ್ತರಾರ್ಧ), ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಪುಟ-೧೭೪

ಹೆಸರಿಸಲಾಗುತ್ತದೆ. ಎರಡು ಕಂಪಗಳ ನಡುವಿನ ರಚನೆಯನ್ನು **ಕಂಠ** ಎಂದು ಕರೆಯುತ್ತಾರೆ.

ಪೀಠದಲ್ಲಿ ಇರುವ ಕಂಪದ ನಂತರ ಕಮಲದ ದಳಗಳ ಆಕಾರವು ಊರ್ಧ್ವ ದಿಕ್ಕಿನ ಕಡೆ ಮುಖ ಮಾಡಿದ್ದಂತೆ ರಚನೆಯು ಇದ್ದರೆ ಅದಕ್ಕೆ **ಊರ್ಧ್ವ ಪದ್ಮ** ಎಂದು ಹೆಸರು. ಈ ರೀತಿಯಾಗಿ ಪೀಠದ ಅಲಂಕಾರದಲ್ಲಿ ವಿಧವಾದ ರಚನೆಯನ್ನು ಹೊಂದಿರುವ ಭಾಗಗಳು ದೊರೆಯುತ್ತವೆ. ಚತುರಸ್ರ ಅಥವಾ ಸಮ ವೃತ್ತದ ಆಕಾರವನ್ನು ಹೊಂದಿರುವ ಪೀಠಗಳು ಶಿವಲಿಂಗದ ರಚನೆಯಲ್ಲಿ ಕಂಡು ಬರುತ್ತವೆ.

ಲಿಂಗದ ಪೀಠ ರಚನೆಯಲ್ಲಿ ನಾಲ್ಕು ವಿಧದ ಪೀಠಗಳನ್ನು ಗುರುತಿಸಬಹುದು. ಅವು **ಪದ್ಮಪೀಠ, ಭದ್ರಪೀಠ, ವೇದಿಕೆ** ಮತ್ತು **ಪರಿಮಂಡಲ** ಎಂಬುದಾಗಿವೆ[೨೯]. ವೃತ್ತಾಕಾರದ ರಚನೆಯನ್ನು ಪೀಠವು ಹೊಂದಿದ್ದರೆ ಅಂತಹ ಪೀಠವನ್ನು **ಪರಿಮಂಡಲ ಪೀಠ** ಎಂದು ಕರೆಯುತ್ತಾರೆ[೩೦]. ಈ ರೀತಿಯ ಪೀಠವು ದೀಪಸ್ತಂಭದ ರಚನೆಯಲ್ಲಿ ಹೆಚ್ಚಾಗಿ ದೊರೆಯುವುದಿಲ್ಲ.

ಪದ್ಮ ಪೀಠದ ಅಲಂಕಾರದಲ್ಲಿ ಪೀಠದ ಒಟ್ಟೂ ಎತ್ತರವನ್ನು ಹದಿನಾರು ಸಮ ಭಾಗಗಳಾಗಿ ವಿಭಜಿಸಿಕೊಳ್ಳಬೇಕಾಗುತ್ತದೆ (ಚಿತ್ರ ೧೦೦). ಇದನ್ನು ಉಪಾನ ಎರಡು ಭಾಗ, ಅಧಃ ಪದ್ಮ ಐದು ಭಾಗ, ಕಂಠ ಎರಡು ಭಾಗ, ಊರ್ಧ್ವ ಪದ್ಮ ನಾಲ್ಕು ಭಾಗ, ಪಟ್ಟಿಕೆ ಎರಡು ಭಾಗ, ಘೃತವಾರಿ ಒಂದು ಭಾಗ ಎಂದು ಹದಿನಾರು ಭಾಗಗಳನ್ನಾಗಿ ವಿಂಗಡಿಸಬೇಕು[೩೧].

ಭದ್ರ ಪೀಠದ ಅಲಂಕಾರವು ಈ ಕೆಳಗಿನಂತೆ ಇರುತ್ತದೆ. ಇದರಲ್ಲಿ ಪೀಠವನ್ನು ಒಟ್ಟು ಹದಿನಾರು ಭಾಗಗಳನ್ನಾಗಿ ವಿಭಾಗಿಸಿಕೊಳ್ಳಲಾಗುತ್ತದೆ (ಚಿತ್ರ ೧೦೧). ಇದರ ಒಂದು ಭಾಗದಿಂದ ಉಪಾನವನ್ನು, ನಾಲ್ಕು ಭಾಗದಿಂದ ಜಗತಿಯನ್ನು ಮೂರು ಭಾಗಗಳಿಂದ ಕುಮುದವನ್ನು, ಒಂದು ಭಾಗದಲ್ಲಿ ಕಂಪವನ್ನು (ಪಟ್ಟಿಕೆ), ಮೂರು ಭಾಗಗಳಲ್ಲಿ ಕಂಠವನ್ನೂ ಮಾಡಬೇಕು. ಅದರ ಮೇಲೆ ಕಂಪವು ಒಂದು ಭಾಗ, ಪಟ್ಟಿಕೆ ಎರಡು ಭಾಗ, ಘೃತವಾರಿ ಒಂದು ಭಾಗ (ಅಥವಾ ಎರಡು ಭಾಗ)[೩೨] ವನ್ನು ನಿರ್ಮಿಸಬೇಕು. ಈ ರೀತಿಯ ರಚನೆಯನ್ನು ಹೊಂದಿರುವ ಪೀಠವು **ಭದ್ರ ಪೀಠ** ಎನಿಸಿಕೊಳ್ಳುತ್ತದೆ.


---

೨೯. ಡಾ. ಜಿ. ಜ್ಞಾನಾನಂದ: **ಶ್ರೀ ಕಾಶ್ಯಪ ಶಿಲ್ಪಶಾಸ್ತ್ರಂ** (ಉತ್ತರಾರ್ಧ), ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಪುಟ-೧೯೯

೩೦. ಡಾ. ಜಿ. ಜ್ಞಾನಾನಂದ: **ಶ್ರೀ ಕಾಶ್ಯಪ ಶಿಲ್ಪಶಾಸ್ತ್ರಂ** (ಉತ್ತರಾರ್ಧ), ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಪುಟ-೨೦೪

೩೧. ಡಾ. ಜಿ. ಜ್ಞಾನಾನಂದ: **ಶ್ರೀ ಕಾಶ್ಯಪ ಶಿಲ್ಪಶಾಸ್ತ್ರಂ** (ಉತ್ತರಾರ್ಧ), ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಪುಟ-೨೦೦

೩೨. ಡಾ. ಜಿ. ಜ್ಞಾನಾನಂದ: **ಶ್ರೀ ಕಾಶ್ಯಪ ಶಿಲ್ಪಶಾಸ್ತ್ರಂ** (ಉತ್ತರಾರ್ಧ), ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಪುಟ-೨೦೧



Pillar (Bell Type)

Fig. 26

FILLAR AND PILASTER PARTS

ಚಿತ್ರ ೧೦೬

ಇನ್ನೊಂದು ವಿಧದ ಭದ್ರಪೀಠವು ಈ ರೀತಿ ಇದೆ (ಚಿತ್ರ ೧೦೨). ಪೀಠದ ಒಟ್ಟೂ ಎತ್ತರವನ್ನು ಹದಿನಾರು ಸಮಭಾಗಗಳಾಗಿ ವಿಂಗಡಿಸಿ ಪಾದುಕೆ ಭಾಗ ಎರಡು, ಜಗತಿ ಮೂರು ಭಾಗ, ಕುಮುದ ಮೂರು ಭಾಗ ಕಂಪ ಒಂದು ಭಾಗ, ಕಂಠ ಎರಡು ಭಾಗ, ಊರ್ಧ್ವ ಕಂಪ ಒಂದು ಭಾಗ, ಪಟ್ಟಿಕೆ ಮೂರು ಭಾಗ, ಘೃತವಾರಿ ಒಂದು ಭಾಗವಿರುವಂತೆ ಭದ್ರ ಪೀಠವನ್ನು ರೂಪಿಸಬಹುದು[೩೩].

ವೇದಿಕಾ ಭದ್ರಪೀಠದ ಒಂದು ರಚನೆಯಲ್ಲಿ ಪೀಠವನ್ನು ಹದಿನೈದು ಅಥವಾ ಹದಿಮೂರು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗುತ್ತದೆ (ಚಿತ್ರ ೧೦೩). ಅದರಲ್ಲಿ ಪಾದುಕೆ ಎರಡು ಅಥವಾ ಮೂರು ಭಾಗ, ಅಧಃ ಪದ್ಮ ಮೂರು ಅಥವಾ ಎರಡು ಭಾಗ, ಕಂಪ ಒಂದು ಭಾಗ, ಕಂಠ ಎರಡು ಭಾಗ, ಊರ್ಧ್ವ ಕಂಪ ಒಂದು ಭಾಗ, ಪದ್ಮ ಎರಡು ಭಾಗ, ಪಟ್ಟಿಕೆ ಎರಡು ಭಾಗ, ಘೃತವಾರಿ ಒಂದು ಭಾಗ ಬರುವಂತೆ ರಚಿಸಬೇಕು.

ವೇದಿಕಾ ಭದ್ರ ಪೀಠದ ಮತ್ತೊಂದು ರಚನೆಯಲ್ಲಿ ಪೀಠವನ್ನು ಎಂಟು ಭಾಗಗಳನ್ನಾಗಿ ವಿಂಗಡಿಸಿಕೊಳ್ಳಲಾಗುತ್ತದೆ (ಚಿತ್ರ ೧೦೪). ಉಪಾನ ಒಂದು ಭಾಗ, ಪಟ್ಟಿಕೆ ಎರಡು ಭಾಗ, ವೇದಿ ನಾಲ್ಕು ಭಾಗ, ಘೃತವಾರಿ ಒಂದು ಭಾಗಗಳನ್ನು ಹೊಂದಿರುತ್ತದೆ. ಶಿವಲಿಂಗ ರಚನೆಯಲ್ಲಿ ಕಂಡುಬರುವ ಈ ಪೀಠಗಳು ದೀಪಸ್ತಂಭದಲ್ಲೂ ಇರುವುದನ್ನು ನೋಡಬಹುದು. ಆದರೆ ಇಲ್ಲಿ ಘೃತವಾರಿಯನ್ನು ರಚಿಸದೆ. ಸಣ್ಣ ಪಟ್ಟಿಕೆಯಂತೆ ಬಳಸುವುದನ್ನು ಕಾಣುತ್ತೇವೆ.


ಸುಭದ್ರ ಪೀಠದ ಅಲಂಕಾರವು ಈ ಕೆಳಗಿನಂತೆ ಇರುತ್ತದೆ (ಚಿತ್ರ ೧೦೫). ಪೀಠವನ್ನು ಒಟ್ಟು ಇಪ್ಪತ್ತೊಂದು ಭಾಗಗಳನ್ನಾಗಿ ವಿಭಾಗಿಸಿಕೊಳ್ಳಲಾಗುತ್ತದೆ. ಇದರ ಎರಡು ಭಾಗದಿಂದ ಪಾದುಕೆಯನ್ನು, ಎರಡು ಭಾಗದಿಂದ ಪದ್ಮವನ್ನು ಒಂದು ಭಾಗದಿಂದ ಕಂಠವನ್ನು, ಒಂದು ಭಾಗದಿಂದ ಕ್ಷುದ್ರ ಪದ್ಮವನ್ನು, ಎರಡು ಭಾಗದಿಂದ ಮಹಾಪದ್ಮವನ್ನು, ಇದರ ನಂತರ ಒಂದು ಭಾಗದಿಂದ ಕ್ಷುದ್ರ ಪದ್ಮವನ್ನು ನಿರ್ಮಿಸಲಾಗುತ್ತದೆ.

ಕ್ಷುದ್ರ ಪದ್ಮದ ನಂತರ ಕಂಪದ ರಚನೆಯು ಇದ್ದು ಇದರ ಮೇಲೆ ಎಂಟು ಭಾಗದ ಕಂಠವನ್ನು ಮತ್ತು ಇದರ ಮೇಲೆ ಕಂಪ, ಪದ್ಮ ಮತ್ತು ಕಂಪಗಳನ್ನು ಕ್ರಮವಾಗಿ ಒಂದೊಂದು ಭಾಗವನ್ನಾಗಿ ನಿರ್ಮಿಸಲಾಗಿರುತ್ತದೆ.

ದೇವಾಲಯದ ವಾಸ್ತುಶಿಲ್ಪ ರಚನೆಯಲ್ಲಿ ಸ್ತಂಭಗಳು ಇರುತ್ತವೆ. ಇವು ವಾಸ್ತು ರಚನೆಯಲ್ಲಿ ಆಧಾರ ಸ್ತಂಭಗಳಂತೆ ಕಾರ್ಯ ನಿರ್ವಹಿಸುತ್ತವೆ (ಚಿತ್ರ ೧೦೬). ಈ ಆಧಾರ ಸ್ತಂಭಗಳ ವಿನ್ಯಾಸವನ್ನು ಪೀಠ, ಪಾದ, ದಂಡ ಮತ್ತು ಗ್ರೀವಗಳೆಂದು ನಾಲ್ಕು ಭಾಗಗಳಾಗಿ ವಿಂಗಡಿಸಲಾಗುತ್ತದೆ[೩೪]. ದೇವಾಲಯದ ಪ್ರಕಾರದ ಆಧಾರ ಸ್ತಂಭ ಇರುವ

೩೩. ಡಾ. ಜಿ. ಜ್ಞಾನಾನಂದ: **ಶ್ರೀ ಕಾಶ್ಯಪ ಶಿಲ್ಪಶಾಸ್ತ್ರಂ** (ಉತ್ತರಾರ್ಧ). ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಪುಟ-೨೦೨

೩೪. ಶ್ಯಾಮಲಾ ರತ್ನಕುಮಾರಿ: ಲೇಖನ- ಕಂಬಗಳು, **ಕಲಾಕೋಶ**, ಪ್ರಧಾನ ಸಂಪಾದಕರು: ಪಿ.ಆರ್. ತಿಪ್ಪೇಸ್ವಾಮಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಪುಟ-೧೬



ಚಿತ್ರ ೧೦೭

ಪಾದದ ಭಾಗದಲ್ಲಿ ಶಿಲ್ಪ ರಚನೆಯನ್ನು ಮಾಡಲಾಗಿರುತ್ತದೆ. ಈ ಶಿಲ್ಪದ ಮೇಲೆ ಸ್ತಂಭವು ನಿಂತಂತೆ ರಚನೆಯು ಇರುವುದನ್ನು ನೋಡಬಹುದು.


ದೇವಾಲಯದ ಆವರಣದಲ್ಲಿ ಆಧಾರಸ್ತಂಭಗಳಂತೆ ಕಾರ್ಯ ನಿರ್ವಹಿಸುವ ಸ್ತಂಭಗಳಲ್ಲಿನ ವಿನ್ಯಾಸದ ಆಧಾರದ ಮೇಲೆ ದೀಪಸ್ತಂಭಗಳಲ್ಲಿ ಇರುವ ರಚನೆಯನ್ನು **ಪೀಠ, ದಂಡ** ಮತ್ತು **ಗ್ರೀವ** ಎಂದು ಮೂರು ಭಾಗಗಳನ್ನಾಗಿ ವಿಭಜಿಸಿಕೊಳ್ಳಬಹುದಾಗಿದೆ. ದೇವಾಲಯದ ಒಳ ಪ್ರಾಕಾರಗಳ ಸ್ತಂಭಗಳಲ್ಲಿ ಇರುವಂತೆ ದೀಪಸ್ತಂಭಗಳಲ್ಲಿ ಪಾದದ ಭಾಗವು ಇರುವುದಿಲ್ಲ. ಸ್ತಂಭವನ್ನು ಕೆಳಗಿನಿಂದ ಹೆಸರಿಸಿದರೆ ಮೊದಲಿಗೆ ದೊರೆಯುವುದು ಪೀಠ. ಇದು ವೇದಿಕೆಯಂತೆ ಕಾರ್ಯ ನಿರ್ವಹಿಸುತ್ತದೆ. ನಂತರ ಬರುವ ದಂಡದ ಭಾಗವು ದೀಪಸ್ತಂಭಗಳಲ್ಲಿ ಇರುವ ಪ್ರಧಾನವಾದ ಭಾಗವಾಗಿದೆ. ಸ್ತಂಭದ ರೂಪ ವಿನ್ಯಾಸಗಳನ್ನು ಈ ಭಾಗದ ರಚನೆಯ ಮೇಲೆ ಆಧರಿಸಿಕೊಂಡು ಹೆಸರಿಸಲಾಗುತ್ತದೆ. ಇದರ ನಂತರದ ತುದಿಯಲ್ಲಿ ದೀಪವನ್ನು ಬೆಳಗಲು ಅಲಂಕೃತವಾದ ಗ್ರೀವದ ಭಾಗವು ಇರುತ್ತದೆ.

ದಂಡ:

ದಂಡದಲ್ಲಿ ನಾಲ್ಕು ಮುಖವಿರುವ ಭಾಗವನ್ನು ಬ್ರಹ್ಮಭಾಗವೆಂದು ಕರೆಯಲಾಗುತ್ತದೆ. ದೀಪಸ್ತಂಭಗಳಲ್ಲಿನ ಈ ಭಾಗದ ನಾಲ್ಕೂ ಕಡೆಗಳ ದೇವಾಲಯದ ಮೂಲ ಮೂರ್ತಿಯನ್ನು ಪ್ರತಿನಿಧಿಸುವ ಉಬ್ಬುಶಿಲ್ಪಗಳು ರಚನೆಗೊಂಡಿರುತ್ತವೆ. ಇದರ ನಂತರ ಇರುವ ಎಂಟು ಮುಖವನ್ನು ಹೊಂದಿರುವ ಭಾಗವು ವಿಷ್ಣುಭಾಗ ಎಂದು ಗುರುತಿಸಿ, ಎಂಟಕ್ಕಿಂತ ಹೆಚ್ಚು ಮುಖಗಳು ಇಲ್ಲವೇ ವೃತ್ತಾಕಾರವನ್ನು ಹೊಂದಿರುವ ಭಾಗವನ್ನು ರುದ್ರಭಾಗವೆಂದು ಕರೆಯಲಾಗುತ್ತದೆ. ಕೆಲವು ದೀಪಸ್ತಂಭಗಳ ದಂಡದ ಭಾಗದ ತುದಿಯಲ್ಲಿ ಮಾಲ, ಮಾಲಸ್ಥಾನ ಮತ್ತು ಲಶುನ ಎಂಬ ರಚನೆಗಳೂ ಇರುತ್ತವೆ.

ಗ್ರೀವ:

ದಂಡದ ಮೇಲೆ ಹೆಸರಿಸುವ ಗ್ರೀವ ಭಾಗವು ಒಂದರ ನಂತರ ಕ್ರಮವಾಗಿ ಕಲಶ (ಘಟ ಅಥವಾ ಕುಂಭ), ಕಂಠ, ಮಂಡಿ, ಫಲಕ, ವೀರಕಂಠ, ಪೋಟಿಕಾ ಮತ್ತು ಬಲಿಪೀಠವನ್ನು ಹೊಂದಿರುತ್ತದೆ. ಈ ರೀತಿಯ ದೀಪಸ್ತಂಭಗಳು ಚೋಳರ ಶೈಲಿಯ ಪ್ರಭಾವವನ್ನು ಹೊಂದಿರುವ ದೀಪಸ್ತಂಭಗಳಾಗಿವೆ (ಚಿತ್ರ ೧೦೭). ಕೆಲವು ದೀಪಸ್ತಂಭಗಳಲ್ಲಿ ದಂಡದ ಭಾಗದಲ್ಲಿ ಕ್ರಮವಾಗಿ ಬ್ರಹ್ಮಭಾಗ, ವಿಷ್ಣುಭಾಗ ಇರುತ್ತದೆ. ಇದರ ನಂತರ ಪಟ್ಟಿಕೆಯು ಇರುತ್ತದೆ. ಪಟ್ಟಿಕೆಯ ನಂತರ ರುದ್ರಭಾಗವಿದ್ದು ದಂಡದ ಮೇಲ್ಭಾಗದಲ್ಲಿ ಗ್ರೀವ ಎನ್ನುವ ಭಾಗವಿರುತ್ತದೆ. ಗ್ರೀವದ ಭಾಗವು ತಾಟಿ, ಘಟ, ವೀರಕಂಠ, ಮಂಡಿ, ಫಲಕಗಳನ್ನು ಹೊಂದಿರುತ್ತದೆ (ಚಿತ್ರ ೧೦೮). ಫಲಕದ ಮಧ್ಯದಲ್ಲಿ ದೀಪವನ್ನು ಬೆಳಗಲು ಅವಕಾಶವನ್ನು ಮಾಡಲಾಗಿರುತ್ತದೆ. ಈ ರೀತಿಯ ದೀಪಸ್ತಂಭಗಳು ಕರ್ನಾಟಕದಲ್ಲಿ ಹೆಚ್ಚಾಗಿ ದೊರೆಯುತ್ತವೆ. ಆದ್ದರಿಂದ ಇವನ್ನು ಕರ್ನಾಟಕದ ಶೈಲಿಯನ್ನು ಹೊಂದಿರುವ



ಚಿತ್ರ ೧೦೮

ದೀಪಸ್ತಂಭಗಳು ಎಂದು ತಿಳಿಯಬಹುದು. ಈ ದೀಪಸ್ತಂಭಗಳ ದಂಡದಲ್ಲಿ ಇರುವ ಚೌಕಾಕಾರದ ಭಾಗದ ಅಂತ್ಯದಲ್ಲಿ ನಾಲ್ಕೂ ಮೂಲೆಗಳಲ್ಲಿ ನಾಗಬಂಧವನ್ನು ನಿರ್ಮಿಸಿರುತ್ತಾರೆ.

ದೀಪಸ್ತಂಭಗಳಲ್ಲಿ ಇರುವ ಗ್ರೀವದ ಭಾಗಗಳು ಹೀಗಿವೆ.

೧. ಬಲಿಪೀಠ:

ದೀಪಸ್ತಂಭದ ತುದಿಯಲ್ಲಿ ಇರುವ ಭಾಗವನ್ನು ಬಲಿಪೀಠ ಎಂದು ಕರೆಯುತ್ತಾರೆ. ಈ ಪೀಠದಲ್ಲಿ ದೇವಾಲಯದ ಆವರಣದಲ್ಲಿ ಇರುವ ಬಲಿಪೀಠದಂತೆ ಅಧಃಪದ್ಮದ ರಚನೆಯು ಇರುವುದನ್ನು ನೋಡಬಹುದು. ಇದರ ಮೇಲೆ ದೀಪವನ್ನು ಬೆಳಗಲಾಗುತ್ತದೆ. ಕೆಲವು ದೀಪಸ್ತಂಭಗಳಲ್ಲಿ ಬಲಿಪೀಠದ ಬದಲಿಗೆ ಲಂಬವಾದ ಕಲ್ಲಿನ ಪುಟ್ಟ ರಚನೆಯು ಇರುವುದು ಕಾಣುತ್ತದೆ.

೨. ಪೋಟಿಕಾ:

ದೇವಾಲಯದ ವಾಸ್ತುಶಿಲ್ಪದಲ್ಲಿ ಇರುವ ಆಧಾರ ಸ್ತಂಭಗಳಲ್ಲಿಯೂ ಪೋಟಿಕದ ರಚನೆಯು ಇರುತ್ತದೆ. ಈ ರಚನೆಯು ಸ್ತಂಭವು ದೇವಾಲಯದ ಭಾರವನ್ನು ಎತ್ತಿ ಹಿಡಿಯಲು ಸಹಕಾರಿಯಾಗಿದೆ. ಇದು ಸ್ತಂಭದಿಂದ ಸ್ತಂಭಕ್ಕೆ ಇರುವ ಅಂತರವನ್ನು ಕಡಿಮೆ ಮಾಡುವುದರ ಜೊತೆಗೆ ಎಲ್ಲಾ ಸ್ತಂಭಗಳಿಗೂ ಭಾರವು ಸಮನಾಗಿ ಬೀಳುವಂತೆ ಸಹಕರಿಸುತ್ತದೆ. ಪೋಟಿಕಾ ಎಂಬ ರಚನೆಯಲ್ಲಿ ನಾಲ್ಕು ದಿಕ್ಕಿಗೂ ಹೊರಚಾಚಿದಂತಹ ರಚನೆಯು ಇರುವುದನ್ನು ನೋಡಬಹುದು. ಇದು ಏಕಶಿಲಾ ರಚನೆಯಾಗಿರುತ್ತದೆ. ಈ ಪೋಟಿಕಾದಂತಹ ರಚನೆಯು ದೀಪಸ್ತಂಭಗಳಲ್ಲೂ ಇದೆ.

೩. ಫಲಕ ಮತ್ತು ಮಂಡಿ:

ಪೋಟಿಕ ಎಂಬ ರಚನೆಯ ಕೆಳಗೆ ಚಪ್ಪಟೆಯಾದ ಹಲಗೆಯಂತಹ ರಚನೆಯು ಇರುವುದು ಕಾಣುತ್ತದೆ. ಇದನ್ನು ಫಲಕ ಎಂದು ಕರೆಯುತ್ತಾರೆ. ಕೆಲವು ದೇವಾಲಯದ ದೀಪಸ್ತಂಭಗಳಲ್ಲಿ ಪೋಟಿಕಾ ಮತ್ತು ಬಲಿಪೀಠದ ರಚನೆಯು ಇರುವುದಿಲ್ಲ. ಫಲಕದ ಮೇಲೆಯೇ ದೀಪವನ್ನು ಬೆಳಗಲಾಗುತ್ತದೆ. ಕೆಲವು ಫಲಕದ ಮೇಲೆ ಲಂಬವಾದ ರಚನೆಯು ಇರುವುದನ್ನು ನೋಡಬಹುದು. ಫಲಕದ ಕೆಳಗೆ ಇದಕ್ಕೆ ಅಂಟಿಕೊಂಡಂತೆ ಮಂಡಿಯ ರಚನೆಯು ಇರುತ್ತದೆ. ಇದು ಬಟ್ಟಲಿನ ಆಕಾರವನ್ನು ಹೊಂದಿರುತ್ತದೆ. ಕೆಲವು ಮಂಡಿಗಳು ಕಮಲ ಪುಷ್ಪದಂತೆ ರಚನೆಯನ್ನು ಹೊಂದಿರುತ್ತವೆ.

೪. ವೀರಕಂಠ:

ಪೋಟಿಕಾ ಮತ್ತು ಫಲಕದ ನಡುವೆ ಆಧಾರವಾಗಿರುವ ಸ್ತಂಭದ ಭಾಗವನ್ನು



ಚಿತ್ರ ೧೦೯



ಚಿತ್ರ ೧೧೦



ಚಿತ್ರ ೧೧೧

ವೀರಕಂಠ ಎಂದು ಕರೆಯುತ್ತಾರೆ. ಇದು ಕೇವಲ ಅಲಂಕಾರದ ದೃಷ್ಟಿಯನ್ನು ಹೊಂದಿದೆ. ಫಲಕದ ನಂತರವು ಸ್ತಂಭದಂತೆ ರಚನೆಯಿದ್ದು ಇದನ್ನು ಕಂಠ ಎಂದು ಕರೆಯುತ್ತಾರೆ.

೫. ಘಟ:

ಫಲಕ, ಮಂಡಿ ಮತ್ತು ಕಂಠದ ಕೆಳಗೆ ಘಟ ಎಂದು ಗುರುತಿಸಿಕೊಳ್ಳುವ ಭಾಗವಿರುತ್ತದೆ. ಘಟ ಎಂದರೆ ಕುಂಭ ಎಂದು. ಇದನ್ನು ಕುಮುದ ಎಂದೂ ಕರೆಯುತ್ತಾರೆ. ಕೆಲವು ಘಟಗಳು ನುಣುಪಾದ ಮೇಲ್ಮೈಯನ್ನು ಹೊಂದಿದ್ದರೆ ಕೆಲವು ಘಟದ ರಚನೆಯಲ್ಲಿ ಪಟ್ಟಿಕೆಗಳು ಇರುವುದು ಕಾಣುತ್ತದೆ. ಕೆಲವು ಘಟದ ರಚನೆಯು ಚಪ್ಪಟೆಯಾಗಿಯೂ ಇರುತ್ತದೆ. ಕರ್ನಾಟಕದ ದೀಪಸ್ತಂಭಗಳಲ್ಲಿ ಈ ರೀತಿಯ ರಚನೆಯು ಹೆಚ್ಚಾಗಿ ದೊರೆಯುತ್ತದೆ.

೬. ತಾಟಿ:

ಇದು ಸಣ್ಣದಾದ ಪಟ್ಟಿಕೆಯಂತಿರುವ ರಚನೆಯಾಗಿದೆ. ಇದು ಫಲಕ ಮತ್ತು ಮಂಡಿಯಂತೆ ಆಕಾರವನ್ನು ಹೊಂದಿದ್ದು ಅದಕ್ಕಿಂತ ಚಿಕ್ಕದಾದ ರಚನೆಯಾಗಿರುತ್ತದೆ.

೭. ಲಶುನ:

ತಾಟಿಯ ಭಾಗವು ಲಶುನದ ಮೇಲೆ ಕೂರುತ್ತದೆ. ಕೆಲವು ಕಡೆಗಳಲ್ಲಿ ಲಶುನದ ಭಾಗವು ಗಂಟೆಯ ಆಕಾರವನ್ನು ಹೊಂದಿರುತ್ತದೆ. ಕೆಲವು ಲಶುನಗಳು ಹೂಜಿಯ ಆಕಾರವನ್ನು ಹೊಂದಿರುವುದು ಕಾಣುತ್ತದೆ.

೮. ಮಾಲಸ್ಥಾನ:

ಸ್ತಂಭದಲ್ಲಿ ಇರುವ ಲಶುನದ ನಂತರ ಸಣ್ಣ ಸಣ್ಣ ಪಟ್ಟಿಕೆಗಳಂತಹ ರಚನೆಗಳಿದ್ದು ಇದರ ನಂತರ ಮಾಲಸ್ಥಾನವು ಇರುವುದು ಕಾಣುತ್ತದೆ. ಇದು ಸ್ತಂಭದ ಸುತ್ತಲೂ ಹೂವಿನ ಅಲಂಕಾರದ ಮಾಲೆಯನ್ನು ಹಾಕಿದಂತೆ ಕಾಣುವ ಕೆತ್ತನೆಯನ್ನು ಹೊಂದಿರುತ್ತದೆ. ಇದು ಕೆಲವು ದೀಪಸ್ತಂಭಗಳಲ್ಲಿ ಅಷ್ಟ ಭುಜದ ಭಾಗದಲ್ಲಿ ಮತ್ತು ಚೌಕಾಕಾರದ ಭಾಗದಲ್ಲಿ ಹೆಚ್ಚಾಗಿ ಇರುವುದು ಕಾಣುತ್ತದೆ.

೯. ನಾಗಬಂಧ:


ಸ್ತಂಭದ ದಂಡದ ಭಾಗದಲ್ಲಿ ನಾಗಬಂಧ ಎಂಬ ರಚನೆಯು ಇರುವುದು ಕಾಣುತ್ತದೆ. ಇದನ್ನು ಚೌಕಾಕಾರದ ನಾಲ್ಕೂ ಮೂಲೆಗಳಲ್ಲಿ ರಚಿಸಲಾಗಿರುತ್ತದೆ. ಇದು ನಾಗ ಶಿಲ್ಪದಂತೆ ಇದ್ದು ಹೆಡೆಯನ್ನು ಬಿಚ್ಚಿರುವಂತೆ ರಚನೆಯನ್ನು ಹೊಂದಿರುತ್ತದೆ. ಕೆಲವು ನಾಗಬಂಧದ ರಚನೆಯಲ್ಲಿ ಎಲೆಗಳಂತೆ ರಚನೆಗಳು ಇರುವುದು ಕಾಣುತ್ತದೆ.




ಚಿತ್ರ ೧೧೨



ಚಿತ್ರ ೧೧೩



ಚಿತ್ರ ೧೧೪



ಚಿತ್ರ ೧೧೬



ಚಿತ್ರ ೧೧೫

ದೀಪಸ್ತಂಭಗಳ ರಚನಾ ವಿಧಾನ:

ಲಿಂಗದ ರಚನೆಯನ್ನು ಹೊಂದಿರುವ ದೀಪಸ್ತಂಭದ ಎತ್ತರಕ್ಕೆ ಅನುಗುಣವಾಗಿ ಭಾಗಗಳನ್ನು ವಿಂಗಡಿಸಿಕೊಳ್ಳಲಾಗುತ್ತದೆ. ದಂಡವು ಪೀಠದಲ್ಲಿ ಕೂಡಲು ಕೆಳಗಡೆ ಪೀಠದ ಎತ್ತರಕ್ಕೆ ತಕ್ಕಂತೆ ಮತ್ತೂ ಕಂಬವನ್ನು ಇರಿಸಲು ಚೌಕಾಕಾರವಾಗಿ ಒರಟು ಕೆತ್ತನೆಯನ್ನು ಮಾಡಲಾಗುತ್ತದೆ.

ಒರಟು ಕೆತ್ತನೆಯ ಮೇಲಿನ ಭಾಗದಲ್ಲಿ ಚೌಕಾಕಾರದ ರಚನೆಯನ್ನು ಮಾಡಿಕೊಂಡು ದೇವಾಲಯದ ದೇವಮೂರ್ತಿಗೆ ಸಂಬಂಧಿಸಿದ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿರುತ್ತದೆ (ಚಿತ್ರ ೧೦೯). ಚೌಕಾಕಾರದ ಮೇಲೆ ಅಷ್ಟಾಸ್ರವು ಕೂಡುವ ಸ್ಥಳಗಳಲ್ಲಿ ನಾಲ್ಕೂ ಮೂಲೆಗಳಲ್ಲಿ ನಾಗಬಂಧವನ್ನು ಪ್ರತಿನಿಧಿಸುವ ರಚನೆಯಿರುತ್ತದೆ. ಅದರ ನಂತರ ಅಷ್ಟಾಸ್ರದ ರಚನೆ, ಅಷ್ಟಾಸ್ರ ರಚನೆಯು ಕೊನೆಗೊಳ್ಳುವಲ್ಲಿ ಅಲಂಕಾರಿಕವಾಗಿ ಮಾಲಸ್ಥಾನವನ್ನು ನಿರ್ಮಿಸಿ ಅದರ ಮೇಲೆ ಲಶುನದ ಭಾಗವನ್ನು ರಚಿಸಿರುತ್ತಾರೆ (ಚಿತ್ರ ೧೧೦). ಈ ಭಾಗವನ್ನು ಎದೆಕಟ್ಟು ಅಂತಲೂ ಶಿಲ್ಪಿಗಳು ಕರೆಯುತ್ತಾರೆ. ಈ ರೀತಿಯ ಕಂಬದ ಭಾಗವು ಏಕಶಿಲಾ ರಚನೆಯನ್ನು ಹೊಂದಿರುತ್ತದೆ.

ಏಕಶಿಲಾಸ್ತಂಭದ ನಂತರ ಬರುವ ಕುಂಭದ ರಚನೆಯನ್ನು ಬಿಡಿಯಾಗಿ ಮಾಡಿಕೊಳ್ಳಲಾಗುತ್ತದೆ (ಚಿತ್ರ ೧೧೧). ಇದನ್ನು ಘಟ ಎಂದೂ ಕರೆಯುತ್ತಾರೆ. ಕುಂಭದ ನಂತರ ಇರುವ ಊರ್ಧ್ವ ಪದ್ಮದ ರಚನೆಯನ್ನು ಹೊಂದಿರುವ ಮಂಡಿಯ ಭಾಗವನ್ನು ಕೂಡ ಬಿಡಿಯಾಗಿ ರಚಿಸಿಕೊಳ್ಳಲಾಗುತ್ತದೆ (ಚಿತ್ರ ೧೧೨). ಈ ರಚನೆಯಲ್ಲಿ ಫಲಕದ ಭಾಗವನ್ನೂ ಕೆತ್ತಲಾಗಿರುತ್ತದೆ.

ಊರ್ಧ್ವ ಪದ್ಮದ ಮೇಲೆ ಇರಿಸಲಾಗುವ ಪೋಟಿಕಾ ಎಂಬ ಭಾಗದ ರಚನೆ (ಚಿತ್ರ ೧೧೩) ಮತ್ತು ಆನಂತರ ಬರುವ ಬಲಿಪೀಠದ ರಚನೆಯನ್ನೂ ಸಹ ಬಿಡಿ ಬಿಡಿಯಾಗಿ ರಚಿಸಿಕೊಳ್ಳಲಾಗುತ್ತದೆ (ಚಿತ್ರ ೧೧೪). ಈ ಎಲ್ಲಾ ಬಿಡಿಯಾದ ರಚನೆಗಳನ್ನು ಒಂದರ ಮೇಲೊಂದರಂತೆ ಇರಿಸಲಾಗುತ್ತದೆ. ಹೀಗೆ ತಯಾರಿಸುವ ಬಿಡಿ ಭಾಗಗಳು ಭದ್ರವಾಗಿ ನಿಲ್ಲಲು ರಂಧ್ರಗಳನ್ನು ಕೊರೆಯಲಾಗುತ್ತದೆ (ಚಿತ್ರ ೧೧೫). ಈ ರಂಧ್ರಗಳಲ್ಲಿ ಕಬ್ಬಿಣದ ದಪ್ಪನೆಯ ತುಂಡುಗಳನ್ನು ಇರಿಸಿ ಭದ್ರ ಪಡಿಸಲಾಗುತ್ತದೆ. ರುದ್ರಭಾಗ, ವಿಷ್ಣುಭಾಗ ಮತ್ತು ಬ್ರಹ್ಮಭಾಗಗಳನ್ನು ಮಾತ್ರ ಏಕ ಶಿಲೆಯಲ್ಲಿ ನಿರ್ಮಿಸುವುದು ಪದ್ಧತಿ.

ಕೆಲವೊಂದು ಗ್ರೀವದ ಭಾಗದ ಕೊನೆಯಲ್ಲಿ ಅಧಃ ಪದ್ಮದ ಮಾದರಿಯ ರಚನೆಯು ಇರುವುದನ್ನು ಕಾಣುತ್ತೇವೆ. ಇದನ್ನು **ಬಲಿಪೀಠ** ಎಂದೂ ಕರೆಯುತ್ತಾರೆ. ಬಲಿಪೀಠದ ಸಂಕೇತವನ್ನು ಹೊಂದಿರುವ ಈ ಅಧಃ ಪದ್ಮದ ರಚನೆಯ ಆಕಾರವು ಬೆಂಕಿಯನ್ನು ಸಾಂಕೇತಿಸುತ್ತದೆ ಎನ್ನಬಹುದು. ಅಧಃ ಪದ್ಮವನ್ನು ಅಗ್ನಿ ಎಂದು ಹೇಳಲು ಒಂದು ಉತ್ತಮ ಉದಾಹರಣೆ ಶಿಲ್ಪಗಳಲ್ಲಿ ದೊರೆಯುವುದು.

ಮೈಸೂರು ಜಿಲ್ಲೆಯ ನಂಜನಗೂಡಿನಲ್ಲಿ ಇರುವ ನಂಜುಂಡೇಶ್ವರ ದೇವಾಲಯದ ಪ್ರಾಕಾರಗಳಲ್ಲಿ ಇರುವ ಶಿಲ್ಪಗಳಲ್ಲಿ ಗಿರಿಜಾ ಕಲ್ಯಾಣಮೂರ್ತಿಯ ಶಿಲ್ಪವು ದೊರೆಯುತ್ತದೆ. ಈ ಶಿಲ್ಪಗಳ ಸಂಯೋಜನೆಯಲ್ಲಿ ಶಿವ ಪಾರ್ವತಿಯರ ವಿವಾಹದ ಸಂದರ್ಭವನ್ನು ಚಿತ್ರಿಸಲಾಗಿದೆ. ಅವರ ಎದುರಿನಲ್ಲಿ ಕೆಳಗಡೆ ಅಗ್ನಿ ಕುಂಡದ ರಚನೆ ಇರುವುದು ಕಂಡು ಬರುತ್ತದೆ (ಚಿತ್ರ ೧೧೬). ಈ ಅಗ್ನಿಕುಂಡದಲ್ಲಿ ಉರಿಯುತ್ತಿರುವ ಅಗ್ನಿಯನ್ನು ತೋರಿಸುವ ಸ್ಥಳದಲ್ಲಿ ಅಧಃ ಪದ್ಮದ ಶಿಲ್ಪದ ರಚನೆಯಿರುವುದು ವಿಶೇಷವಾಗಿ ಗಮನ ಸೆಳೆಯುತ್ತದೆ. ಈ ಶಿಲ್ಪದ ಪ್ರಕಾರ ನೋಡಿದರೆ ಅಧಃ ಪದ್ಮ ಎಂದರೆ ಅಗ್ನಿಯ ಇರುವಿಕೆ ಎಂದು ಅರ್ಥೈಸಿಕೊಳ್ಳಬಹುದು ಎಂದು ತಿಳಿಯುತ್ತದೆ.

ಪುರಾಣಗಳಲ್ಲಿಯೂ ಬಲಿಪೀಠದಲ್ಲಿ ಅಗ್ನಿಯು ಇರುವನು ಎಂದೂ ಅಗ್ನಿಯು ಆತ್ಮ ಪರಮಾತ್ಮನ ಮಧ್ಯವರ್ತಿಯಾದ್ದರಿಂದ ಬಲಿಪೀಠದ ಮೇಲೆ ನೈವೇದ್ಯವನ್ನು ಇಡಾಲಾಗುತ್ತದೆ ಎಂದೂ ಉಲ್ಲೇಖಗಳು ಇರುವುದು ತಿಳಿಯುತ್ತದೆ. ಬಲಿಪೀಠದ ಮೇಲೆಯೂ ಅಧಃ ಪದ್ಮದ ರಚನೆಯು ಇರುವುದನ್ನು ಕಾಣುತ್ತೇವೆ. ಅದರಂತೆ ದೀಪಸ್ತಂಭದ ತುದಿಯಲ್ಲಿಯೂ ಅಧಃ ಪದ್ಮದ ರಚನೆಯು ಇರುವುದನ್ನು ನೋಡಬಹುದು.

ಕಮಲವು ಜ್ಞಾನ, ಸೃಷ್ಟಿ, ಪ್ರಕಾಶ ಮುಂತಾದುವುಗಳನ್ನು ಸಾಂಕೇತಿಸುತ್ತದೆ. ಸೂರ್ಯನ ಮೂರ್ತಿಶಿಲ್ಪಗಳಲ್ಲಿ ಸೂರ್ಯನು ಎರಡೂ ಕೈಯಲ್ಲಿ ಕಮಲವನ್ನು ಹಿಡಿದಿರುವುದನ್ನು ನೋಡಬಹುದು. ಕೆಲವು ದೀಪಸ್ತಂಭದ ತುದಿಯಲ್ಲಿ ಬಲಿಪೀಠದ ಬದಲಿಗೆ ಪುಟ್ಟದಾದ ಲಿಂಗದ ರೂಪವನ್ನು ಹೊಂದಿರುವ ರಚನೆಯು ಇರುತ್ತದೆ.

ಸ್ತಂಭದ ದಂಡ ಭಾಗದ ರಚನೆಯ ಆಧಾರದ ಮೇಲೆ ಸ್ತಂಭಗಳನ್ನು ಎರಡು ವಿಧಗಳಾಗಿ ಹೆಸರಿಸಲಾಗುತ್ತದೆ[೩೫]. ಅದರಲ್ಲಿ ಒಂದು ಸಾಮಾನ್ಯವಾದ ಸ್ತಂಭವಾದರೆ ಮತ್ತೊಂದು ಅಲಂಕಾರದಿಂದ ಕೂಡಿರುವುದನ್ನು ನೋಡಬಹುದು. ಸಾಮಾನ್ಯವಾದ ಸ್ತಂಭದಲ್ಲಿ ಇಡೀ ಸ್ತಂಭದ ರಚನೆಯು ನಾಲ್ಕು ಮೂಲೆಗಳನ್ನು, ಎಂಟು ಮೂಲೆಗಳನ್ನು, ಹದಿನಾರು ಮೂಲೆಗಳನ್ನು ಇಲ್ಲವೇ ವೃತ್ತಾಕಾರವನ್ನು ಹೊಂದಿರುತ್ತದೆ. ಇನ್ನೊಂದು ಸ್ತಂಭದಲ್ಲಿ ದಂಡದ ಭಾಗವು ಒಂದೇ ರೀತಿಯ ರಚನೆಯನ್ನು ಹೊಂದಿರುತ್ತದೆ.

ದೀಪಸ್ತಂಭಗಳಲ್ಲಿನ ದಂಡದ ರಚನೆಯ ಆಧಾರದ ಮೇಲೆ ವಿವಿಧ ಹೆಸರುಗಳಿಂದ ಇವನ್ನು ಗುರುತಿಸಲಾಗುತ್ತದೆ. ಇಡೀ ಕಂಬವು ಚೌಕಾಕಾರದ ರಚನೆಯ ಕಂಬವಾದರೆ ಅಂತಹ ಕಂಬಗಳನ್ನು **ಬ್ರಹ್ಮಕಾಂತ** ಎನ್ನಲಾಗುತ್ತದೆ. ಎಂಟು ಮೂಲೆಯ ರಚನೆಯನ್ನು ಇಡೀ ಕಂಬವು ಹೊಂದಿದ್ದರೆ ಅಂತಹ ಕಂಬಗಳನ್ನು **ವಿಷ್ಣುಕಾಂತ** ಎನ್ನುತ್ತಾರೆ. ಹದಿನಾರು ಮೂಲೆಗಳನ್ನು ಹೊಂದಿರುವಂತಹ ಕಂಬವನ್ನು **ರುದ್ರಕಾಂತ** ಎನ್ನಲಾಗುತ್ತದೆ[೩೬].

೩೫. P.R. Shrinivasan: **The Indian Temple Art and Architecture,** ಪುಟ-೩೮

೩೬. Dr. D.V. Devaraj: Dr. Channabasappa: **Art and Architecture in Karnataka** (papers presented at the National seminar on Archeology 1985), ಪುಟ-೧೭೭



ಚಿತ್ರ ೧೧೭



ಚಿತ್ರ ೧೧೮



ಚಿತ್ರ ೧೧೯

ಈ ರೀತಿಯ ಸ್ತಂಭಗಳು ಕರ್ನಾಟಕದ ದೇವಾಲಯಗಳಲ್ಲಿ ಇರುವುದನ್ನು ನೋಡಬಹುದು. ಮೈಸೂರು ಜಿಲ್ಲೆಯ ಶ್ರೀ ನಂಜುಂಡೇಶ್ವರ ದೇವಾಲಯದ ಆವರಣದಲ್ಲಿ ಇರುವ ದೀಪಸ್ತಂಭ ಮತ್ತು ಮಂಡ್ಯಾ ಜಿಲ್ಲೆಯ ಶ್ರೀರಂಗನಾಥ ದೇವಾಲಯದ ಆವರಣದಲ್ಲಿ ಇರುವ ದೀಪಸ್ತಂಭಗಳು ಇದಕ್ಕೆ ಉದಾಹರಣೆಯಾಗಿವೆ.

ದೀಪಸ್ತಂಭವು ದೇವಾಲಯದ ಆವರಣದಲ್ಲಿ ಬಲಿಪೀಠದ ನಂತರ ಇದ್ದರೆ ಅದು ವಾಸ್ತುಶಾಸ್ತ್ರದ ಆಧಾರದ ಮೇಲೆ ನಿರ್ಮಾಣಗೊಂಡಿರುವುದಾಗಿದೆ. ದೇವಾಲಯದ ಪ್ರಾಕಾರದ ಹೊರಗೆ ಅಥವಾ ಪಕ್ಕದಲ್ಲಿ ಇರುವ ದೀಪಸ್ತಂಭಗಳು ಕೇವಲ ಬೆಳಕಿಗಾಗಿ ನಿರ್ಮಾಣಗೊಂಡಿರುವಂತಹ ಸ್ತಂಭಗಳು ಎಂದು ಅರ್ಥೈಸಿಕೊಳ್ಳಬೇಕಾಗುತ್ತದೆ.

ವಾಸ್ತುಶಾಸ್ತ್ರದ ಆಧಾರದ ಮೇಲೆ ನಿರ್ಮಾಣಗೊಂಡಿರುವ ಕೆಲವು ದೇವಾಲಯಗಳು ಮತ್ತು ಅವುಗಳ ಮುಂದೆ ಇರುವ ದೀಪಸ್ತಂಭಗಳ ಸ್ಥಾನಗಳನ್ನು ಕುರಿತು ಇಲ್ಲಿ ವಿವರವಾಗಿ ಹೇಳಲಾಗುತ್ತದೆ.

ವಿರೂಪಾಕ್ಷ ದೇವಾಲಯ: ಬಳ್ಳಾರಿ ಜಿಲ್ಲೆ (ಚಿತ್ರ ೧೧೭)

ವಿರೂಪಾಕ್ಷ ದೇವಾಲಯದ ಗರ್ಭಗೃಹಕ್ಕೆ ಎದುರು ನಂದಿ ಮಂಟಪವಿದೆ. ನಂದಿ ಮಂಟಪದ ನಂತರದ ಸ್ಥಾನದಲ್ಲಿ ಧ್ವಜಸ್ತಂಭವಿದೆ. ಈ ಧ್ವಜಸ್ತಂಭವು ಮರದಿಂದ ರಚನೆಗೊಂಡಿದೆ. ಧ್ವಜಸ್ತಂಭದ ನಂತರದ ಸ್ಥಾನ ಬಲಿಪೀಠದ್ದು. ಬಲಿಪೀಠದ ನಂತರ ಪ್ರಶ್ನೆಕಲ್ಲು, ಇದರ ನಂತರ ಕಬ್ಬಿಣದಲ್ಲಿ ತಯಾರಿಸಿದ ದೀಪಸ್ತಂಭವು ಇಲ್ಲಿ ದೊರೆಯುತ್ತದೆ. ದೀಪಸ್ತಂಭದ ನಂತರ ಮುಖ್ಯದ್ವಾರವು ದೇವಾಲಯದ ಆವರಣದಲ್ಲಿ ಇರುವುದು ಕಾಣುತ್ತದೆ.

ಕಳಸೇಶ್ವರ ದೇವಾಲಯ: ಚಿಕ್ಕಮಗಳೂರು ಜಿಲ್ಲೆ (ಚಿತ್ರ ೧೧೮)

ಕಳಸೇಶ್ವರ ದೇವಾಲಯದ ಹೊರ ಆವರಣದಲ್ಲಿ ಗರ್ಭಗುಡಿಗೆ ಎದುರಾಗಿ ಮೊದಲಿಗೆ ಬಲಿಪೀಠವಿದೆ. ಬಲಿಪೀಠದ ನಂತರ ನಂದಿಕಂಬ, ನಂದಿಕಂಬದ ನಂತರದ ಸ್ಥಾನದಲ್ಲಿ ದೀಪಸ್ತಂಭವು ಇರುವುದು ಕಾಣುತ್ತದೆ. ದೀಪಸ್ತಂಭದ ನಂತರ ಮುಖ್ಯದ್ವಾರವಿದೆ.

ಶ್ರೀ ಕೋದಂಡರಾಮ ದೇವಾಲಯ: ಮೈಸೂರು ಜಿಲ್ಲೆ (ಚಿತ್ರ ೧೧೯)

ಕೆ. ಆರ್. ನಗರ ತಾಲ್ಲೂಕಿನ ಚುಂಚನಕಟ್ಟೆಯಲ್ಲಿರುವ ಶ್ರೀ ಕೋದಂಡರಾಮ ದೇವಾಲಯದ ಎದುರು ಮೊದಲಿಗೆ ಬಲಿಪೀಠವಿದೆ. ಬಲಿಪೀಠದ ನಂತರ ಧ್ವಜಸ್ತಂಭ, ಧ್ವಜಸ್ತಂಭದ ನಂತರ ಸುಮಾರು ೧೦ ಅಡಿ ಎತ್ತರದ ದೀಪಸ್ತಂಭವಿದೆ ದೀಪಸ್ತಂಭದ ನಂತರ ಮುಖ್ಯದ್ವಾರವಿರುವುದು ಕಾಣುತ್ತದೆ.

ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯ: ಹಾಸನ ಜಿಲ್ಲೆ (ಚಿತ್ರ ೧೨೦)

ಹಾಸನ ಜಿಲ್ಲೆಯ ಆಲೂರು ತಾಲ್ಲೂಕು ಗೋರೂರಿನ ಶ್ರೀ ಯೋಗಾನರಸಿಂಹಸ್ವಾಮಿ



ಚಿತ್ರ ೧೨೦



ಚಿತ್ರ ೧೨೩-೧



ಚಿತ್ರ ೧೨೧



ಚಿತ್ರ ೧೨೩-೨



ಚಿತ್ರ ೧೨೨

ದೇವಾಲಯ ಆವರಣವು ದೊಡ್ಡದಾಗಿದೆ. ಈ ದೇವಾಲಯದ ಎದುರು ಎತ್ತರದ ಮರದ ನೀಳವಾದ ಸ್ತಂಭವಿದ್ದು ಇದನ್ನು ಧ್ವಜಸ್ತಂಭ ಎಂದು ಕರೆಯುತ್ತಾರೆ. ಇದರ ನಂತರ ಪುಟ್ಟದಾದ ಬಲಿಪೀಠವಿದೆ. ಬಲಿಪೀಠದ ನಂತರದ ಸ್ಥಾನದಲ್ಲಿ ದೀಪಸ್ತಂಭವಿದ್ದು ದೀಪಸ್ತಂಭದ ನಂತರ ಮುಖ್ಯದ್ವಾರವು ಇರುವುದನ್ನು ನೋಡಬಹುದು.

ಸೋಮೇಶ್ವರ ದೇವಾಲಯ: ಕೋಲಾರ ಜಿಲ್ಲೆ (ಚಿತ್ರ ೧೨೧)

ಕೋಲಾರದಲ್ಲಿರುವ ಶ್ರೀ ಸೋಮೇಶ್ವರ ದೇವಾಲಯದ ಎದುರು ಮೊದಲಿಗೆ ಧ್ವಜಸ್ತಂಭವಿದೆ. ಧ್ವಜಸ್ತಂಭದ ನಂತರ ಬಹಳ ಸುಂದರವಾದ ಕೆತ್ತನೆಯಿಂದ ಕೂಡಿದ ಬಲಿಪೀಠವಿದೆ. ಬಲಿಪೀಠದ ನಂತರದ ಸ್ಥಾನದಲ್ಲಿ ದೀಪಸ್ತಂಭವು ಇದೆ. ದೀಪಸ್ತಂಭಕ್ಕೆ ಸ್ವಲ್ಪ ದೂರದಲ್ಲಿ ಮುಖ್ಯದ್ವಾರವಿರುವುದು ಕಾಣುತ್ತದೆ.

ಶ್ರೀ ವಿಜಯೇಂದ್ರ ದೇವಾಲಯ: ಕೋಲಾರ ಜಿಲ್ಲೆ (ಚಿತ್ರ ೧೨೨)

ಬಂಗಾರುಪೇಟೆ ತಾಲ್ಲೂಕಿನ ಬೇತಮಂಗಲದ ಶ್ರೀ ವಿಜಯೇಂದ್ರ ದೇವಾಲಯದ ಆವರಣವು ಹಿರಿದಾಗಿದೆ. ಈ ದೇವಾಲಯವು ಅತ್ಯಂತ ಪ್ರಾಚೀನವಾದುದು. ಇದರ ಮುಂದೆ ದೇವಾಲಯಕ್ಕೆ ಅಭಿಮುಖವಾಗಿ ಮೊದಲಿಗೆ ಧ್ವಜಸ್ತಂಭವಿದೆ. ಇದರ ನಂತರದ ಸ್ಥಾನವು ಬಲಿಪೀಠದ್ದು ಬಲಿಪೀಠದ ನಂತರ ದೀಪಸ್ತಂಭವು ಇದೆ.

ಇದೇ ರೀತಿಯಾಗಿ ಬಹುತೇಕ ದೇವಾಲಯಗಳ ಆವರಣದಲ್ಲಿ ಧ್ವಜಸ್ತಂಭ, ಬಲಿಪೀಠ, ದೀಪಸ್ತಂಭಗಳನ್ನು ಕ್ರಮವಾಗಿ ಸ್ಥಾಪಿಸಿರುವುದನ್ನು ಕಾಣುತ್ತೇವೆ. ಅವುಗಳಲ್ಲಿ ಮೈಸೂರು ಜಿಲ್ಲೆಯಲ್ಲಿರುವ ಶ್ರೀ ವರಾಹಸ್ವಾಮಿ ದೇವಾಲಯ, ನಂಜನಗೂಡು ತಾಲ್ಲೂಕಿನಲ್ಲಿರುವ ನಂಜುಂಡೇಶ್ವರ ದೇವಾಲಯಗಳೂ ಸೇರುತ್ತವೆ. ಅದರಂತೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಶ್ರೀ ರಂಗನಾಥ ದೇವಾಲಯವೂ ಸೇರುತ್ತದೆ.

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ರಾಮನಾಥಪುರದ ಶ್ರೀ ಸುಬ್ರಹ್ಮಣ್ಯೇಶ್ವರ ದೇವಾಲಯ, ಬೆಂಗಳೂರು ಜಿಲ್ಲೆಯ ಆನೇಕಲ್ಲು ತಾಲ್ಲೂಕಿನ ಬನ್ನೇರುಘಟ್ಟದಲ್ಲಿರುವ ಸಂಪಂಗಿರಾಮ ದೇವಾಲಯ, ಕನಕಪುರ ತಾಲ್ಲೂಕು ಹಾರೋಹಳ್ಳಿ ಅರುಣಾಚಲೇಶ್ವರ ದೇವಾಲಯ, ಗವಿಪುರದಲ್ಲಿರುವ ಗವಿಗಂಗಾಧರೇಶ್ವರ ದೇವಾಲಯ, ಚಿಕ್ಕಜಾಲದಲ್ಲಿರುವ ಶ್ರೀ ಚನ್ನಕೇಶವ ದೇವಾಲಯ, ಮಾಗಡಿ ತಾಲ್ಲೂಕಿನ ಸಾವನದುರ್ಗದಲ್ಲಿರುವ ಶ್ರೀ ಲಕ್ಷ್ಮೀನರಸಿಂಹ ದೇವಾಲಯಗಳನ್ನು ಇದರಲ್ಲಿ ಹೆಸರಿಸಬಹುದಾಗಿದೆ.

ತುಮಕೂರು ಜಿಲ್ಲೆಯ ತುರುವೇಕೆರೆಯ ಶಂಕ್ರಣ್ಣೇಶ್ವರ ದೇವಾಲಯ, ಕೋಲಾರ ಜಿಲ್ಲೆಯ ಕೋಲಾರಮ್ಮ ದೇವಾಲಯ, ಮಾಲೂರು ತಾಲ್ಲೂಕಿನ ಚಿಕ್ಕತಿರುಪತಿ ಶ್ರೀ ಪ್ರಸನ್ನ ವೆಂಕಟರಮಣ ದೇವಾಲಯ, ಚಿಂತಾಮಣಿ ತಾಲ್ಲೂಕು, ಕೈವಾರದಲ್ಲಿ ಇರುವ

ಶ್ರೀ ಭೀಮಲಿಂಗೇಶ್ವರ ದೇವಾಲಯ, ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಕೊಲ್ಲೂರು ಮೂಕಾಂಬಿಕೆ ದೇವಾಲಯಗಳಲ್ಲಿ ಇರುವ ದೀಪಸ್ತಂಭಗಳನ್ನು ದೇವಾಲಯದ ಆವರಣದಲ್ಲಿ ಧ್ವಜಸ್ತಂಭ ಮತ್ತು ಬಲಿಪೀಠದ ನಂತರ ನಿರ್ಮಿಸಲಾಗಿದೆ.

ದೀಪಸ್ತಂಭಗಳು ದೇವಾಲಯದ ಮೇಲ್ಛಾವಣಿಗಿಂತ ಎತ್ತರವಾಗಿಯೂ ಗರ್ಭಗುಡಿಯ ಮೇಲಿನ ವಿಮಾನದ ಎತ್ತರಕ್ಕಿಂತಲೂ ಗಿಡ್ಡದಾಗಿಯೂ ಇರುವುದನ್ನು ಗಮನಿಸಬಹುದು. ದೀಪಸ್ತಂಭಗಳಷ್ಟೇ ಅಲ್ಲದೆ ಇನ್ನಿತರೆ ಯಾವುದೇ ಸ್ತಂಭವನ್ನು ಇದೇ ರೀತಿಯಾಗಿ ದೇವಾಲಯದ ಆವರಣದಲ್ಲಿ ನಿರ್ಮಿಸಲಾಗಿರುತ್ತದೆ. ಇದೂ ಕೂಡಾ ದೇವಾಲಯದ ವಾಸ್ತು ರಚನೆಯಲ್ಲಿ ಇರುವ ಪ್ರಮುಖವಾದ ಅಂಶಗಳಲ್ಲಿ ಒಂದಾಗಿದೆ.

ಇನ್ನು ಕೆಲವು ದೇವಾಲಯಗಳಲ್ಲಿ ಎತ್ತರದ ದೀಪಸ್ತಂಭಗಳಿರುತ್ತವೆ. ಇಲ್ಲವೇ ಕೆಲವು ದೀಪಸ್ತಂಭಗಳನ್ನು ದೇವಾಲಯದ ಮುಖ್ಯದ್ವಾರಕ್ಕೂ ಹೊರಗೆ ಸ್ಥಾಪಿಸಲಾಗಿರುತ್ತದೆ. ಇನ್ನು ಕೆಲವು ದೀಪಸ್ತಂಭಗಳನ್ನು ದೇವಾಲಯದ ಎದುರಿಗೆ ಸ್ಥಾಪಿಸದೆ ಪಕ್ಕದಲ್ಲಿ ಸ್ಥಾಪಿಸಿರುವುದನ್ನು ನೋಡಬಹುದು.

ಮೈಸೂರು ಜಿಲ್ಲೆಯ ಮುಡುಕುತೊರೆ ಮಲ್ಲಿಕಾರ್ಜುನ ದೇವಾಲಯದ ಗರ್ಭಗೃಹದ ಎದುರು ನಂದಿಕಂಬ, ನಂತರ ಧ್ವಜಸ್ತಂಭ ಇದೆ. ಇದರ ನಂತರ ಬಲಿಪೀಠವಿರುವುದು ಕಾಣುತ್ತದೆ. ಇಲ್ಲಿ ಕೂಡಾ ದೀಪಸ್ತಂಭವಿದ್ದು ಇದು ಪ್ರಾಕಾರದ ಒಳಗೋಡೆಗೆ ಅಂಟಿಕೊಂಡಂತೆ ಪಕ್ಕದಲ್ಲಿ ಇರುವುದನ್ನು ನೋಡಬಹುದು. ಈ ದೀಪಸ್ತಂಭವನ್ನು ಬೆಳಕಿಗಾಗಿ ನಿರ್ಮಿಸಲಾಗಿದೆ ಎಂದರೆ ತಪ್ಪಾಗಲಾರದು.

ದೇವಾಲಯವು ಎತ್ತರದ ಗುಡ್ಡದ ಮೇಲಿದೆ. ಈ ಗುಡ್ಡದ ಸುತ್ತಲೂ ಗಿಡಮರಗಳಿದ್ದು ಮೊದಲಿಗೆ ಇದು ಅರಣ್ಯ ಪ್ರದೇಶವಾಗಿದ್ದಿರಬೇಕು. ಅಲ್ಲದೆ ಕಾಡುಪ್ರಾಣಿಗಳ ಹಾವಳಿಯು ಈ ಪ್ರದೇಶದಲ್ಲಿ ಇತ್ತೆಂದು ತೋರುತ್ತದೆ. ದೇವಾಲಯಕ್ಕೆ ಬರುವ ಭಕ್ತರಿಗೆ ಬೆಳಕಿನ ಅನುಕೂಲವಾಗಲೆಂದು ಈ ದೀಪಸ್ತಂಭವನ್ನು ಪ್ರಾಕಾರದ ಒಳಗೆ ಪಕ್ಕದಲ್ಲಿ ಸ್ಥಾಪಿಸಿರುವಂತೆ ತೋರುತ್ತದೆ. ದೇವಾಲಯದ ಮುಖ್ಯದ್ವಾರದ ಹೊರಗೆ ದೀಪಸ್ತಂಭವನ್ನು ಇಡಲು ಸ್ಥಳಾವಕಾಶವೂ ಇಲ್ಲದಿರುವುದು ಇದಕ್ಕೆ ಮತ್ತೊಂದು ಕಾರಣವಿರಬೇಕು.

ಸೋಮನಾಥಪುರದ ಶ್ರೀ ಪ್ರಸನ್ನ ಕೇಶವ ದೇವಾಲಯದ ಮುಖ್ಯದ್ವಾರಕ್ಕೂ ಹೊರಗೆ ದೇವಾಲಯಕ್ಕೆ ಎಡಭಾಗದಲ್ಲಿ ಎತ್ತರದ ದೀಪಸ್ತಂಭವಿದೆ. ಇಲ್ಲಿನ ಸ್ಥಳ ಪುರಾಣದಲ್ಲಿ ಈ ದೇವಾಲಯವು ಅತಿ ಸುಂದರವಾಗಿ ನಿರ್ಮಾಣವಾಗಿತ್ತು ಎಂದೂ ಇದನ್ನು ದೇವಾನುದೇವತೆಗಳು ಸ್ವರ್ಗಕ್ಕೆ ತೆಗೆದುಕೊಂಡು ಹೋಗಬೇಕೆಂದು ತಿರ್ಮಾನಿಸಿದರು ಎಂದು ಹೇಳಲಾಗುತ್ತದೆ. ಈ ವಿಷಯವು ಇದನ್ನು ನಿರ್ಮಿಸಿದ ಶಿಲ್ಪಿಗೆ ತಿಳಿಯಿತು.

ತಾನು ನಿರ್ಮಿಸಿದ ದೇವಾಲಯವನ್ನು ಎಲ್ಲಿಗೂ ತೆಗೆದುಕೊಂಡು ಹೋಗಬಾರದು ಎಂದು ಶಿಲ್ಪಿಯು ದೇವಾಲಯದಲ್ಲಿನ ಶಿಲ್ಪಗಳನ್ನು ತಾನೇ ತನ್ನ ಕೈಯಾರ ಭಗ್ನಗೊಳಿಸಿದನು

ಎಂದು ಹೇಳಲಾಗುತ್ತದೆ. ಹಾಗಾಗಿ ದೇವಾಲಯದ ಆವರಣದಲ್ಲಿರುವ ದೀಪಸ್ತಂಭವೂ ಸ್ಥಳಾಂತರಗೊಂಡಿದೆ ಎಂದು ಸ್ಥಳ ಪುರಾಣದಲ್ಲಿ ಹೇಳಲಾಗುವುದು. ಈ ದೇವಾಲಯವನ್ನು ಹೊಯ್ಸಳರ ದೊರೆಯಾದ ಮೂರನೆಯ ನರಸಿಂಹನ ಕಾಲದಲ್ಲಿ ನಿರ್ಮಿಸಲಾಗಿದೆ. ಇವನ ಕಾಲದಲ್ಲಿ ನಿರ್ಮಾಣವಾದ ಮತ್ತೊಂದು ದೇವಾಲಯ ಎಂದರೆ ತುಮಕೂರು ಜಿಲ್ಲೆಯ ಯೋಗಾ ಮಾಧವ ದೇವಾಲಯ. ಈ ದೇವಾಲಯದ ಮುಖ್ಯದ್ವಾರದ ಹೊರಗೆ ಇದೇ ರೀತಿಯಾಗಿ ಸ್ಥಾಪಿಸಲ್ಪಟ್ಟಿರುವ ದೀಪಸ್ತಂಭವಿರುವುದು ಕಾಣುತ್ತದೆ.

ಈ ದೀಪಸ್ತಂಭವನ್ನು ದೇವಾಲಯಕ್ಕೆ ಬಲಭಾಗದಲ್ಲಿ ಇರಿಸಲಾಗಿದೆ. ಈ ಎರಡೂ ದೇವಾಲಯಗಳು ಒಂದೇ ರಾಜನ ಆಳ್ವಿಕೆಯ ಸಮಯದಲ್ಲಿ ನಿರ್ಮಾಣಗೊಂಡಿರುವುದರ ಜೊತೆಗೆ ಇಲ್ಲಿರುವ ದೀಪಸ್ತಂಭಗಳನ್ನು ಸ್ಥಾಪಿಸಿರುವ ರೀತಿಯನ್ನು ಗಮನಿಸಿದರೆ ಇದರ ಉದ್ದೇಶವೇ ಬೇರೆ ಇರಬಹುದು ಎಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ದೇವಾಲಯಕ್ಕೆ ಹೋಗುವ ಭಕ್ತರಿಗೆ ದೂರದಿಂದಲೇ ದೇವಾಲಯದ ಮೂಲಮೂರ್ತಿಯ ದರ್ಶನವಾಗಲಿ ಎಂದು ದೀಪಸ್ತಂಭಗಳನ್ನು ಪಕ್ಕದಲ್ಲಿ ಸ್ಥಾಪಿಸಿದ್ದಾರೆ ಎಂದು ಇಲ್ಲಿನ ಸ್ಥಳೀಯರು ಹೇಳುತ್ತಾರೆ. ದೇವಾಲಯದ ಆವರಣದಲ್ಲಿ ದೇವಮೂರ್ತಿಗೆ ಎದುರಾಗಿ ಬೇರೆ ಯಾವುದೇ ಸ್ತಂಭಗಳು ಇಲ್ಲದಿರುವುದನ್ನು ಇಲ್ಲಿ ಗಮನಿಸಬಹುದು.

ದೇವಾಲಯದ ಆವರಣದ ಹೊರಗೆ ಇರಿಸುವ ದೀಪಸ್ತಂಭಗಳು ದೇವಾಲಯದ ಆವರಣದಲ್ಲಿರುವ ದೀಪಸ್ತಂಭದಷ್ಟೇ ಶ್ರೇಷ್ಠತೆಯನ್ನು ಹೊಂದಿದ್ದರೂ ಬೆಳಕನ್ನು ಕೊಡುವ ಉದ್ದೇಶವು ಇಲ್ಲಿ ವಿಶೇಷವಾಗಿರುವುದು ಸ್ಪಷ್ಟವಾಗಿ ಕಾಣುತ್ತದೆ. ಈ ದೀಪಸ್ತಂಭಗಳು ದೇವಾಲಯದ ಮುಖ್ಯದ್ವಾರದ ಮೇಲ್ಛಾವಣಿಗಿಂತ ಎತ್ತರವಾಗಿಯೂ ಇದರ ಮೇಲಿನ ವಿಮಾನದ ಎತ್ತರಕ್ಕಿಂತ ಕಡಿಮೆಯಾಗಿಯೂ ಇರುವುದನ್ನು ಗಮನಿಸಬಹುದು. ಈ ರೀತಿಯ ದೀಪಸ್ತಂಭಗಳ ಎತ್ತರವು ದೇವಾಲಯದ ಗರ್ಭಗೃಹದ ಮೇಲಿನ ವಿಮಾನದ ಎತ್ತರವನ್ನು ಅವಲಂಬಿಸಿರುವುದಿಲ್ಲ.

ಬಳ್ಳಾರಿ ಜಿಲ್ಲೆಯ ಹಂಪಿಯಲ್ಲಿರುವ ವಿಜಯವಿಠಲ ದೇವಾಲಯದ ಆವರಣದಲ್ಲಿ ಗರ್ಭಗೃಹಕ್ಕೆ ಎದುರಾಗಿ ಗರುಡಗಂಬವಿದೆ. ಇದು ರಥದ ಆಕಾರವನ್ನು ಹೊಂದಿದ್ದು, ಒಳಗಡೆ ಗರುಡನ ಉಬ್ಬುಶಿಲ್ಪವಿದೆ. ಇದರ ನಂತರ ಬಲಿಪೀಠ, ಬಲಿಪೀಠದ ನಂತರದ ಸ್ಥಾನದಲ್ಲಿ ನವಗ್ರಹಕಂಬ, ನವಗ್ರಹ ಕಂಬದ ನಂತರ ತುಳಸೀ ಕಟ್ಟೆ ಇರುವುದು ಕಂಡು ಬರುತ್ತದೆ. ಈ ದೇವಾಲಯದ ಮುಖ್ಯದ್ವಾರದ ಹೊರಗೆ ದೀಪಸ್ತಂಭವೊಂದು ಬಿದ್ದಿದೆ. ಇದು ಸುಮಾರು ೩೦ ಅಡಿಯನ್ನು ಹೊಂದಿದೆ. ಈ ದೀಪಸ್ತಂಭವು ದೇವಾಲಯದ ಪ್ರಾಕಾರಗಳ ಹೊರಗೆ ಇರುವುದನ್ನು ಗಮನಿಸಿದರೆ ಇದು ಬೆಳಕಿಗಾಗಿ ನಿಲ್ಲಿಸಿದಂತಹ ಕಂಬ ಎಂದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಮೈಸೂರು ಅರಮನೆಯಲ್ಲಿರುವ ಶ್ರೀ ಆಂಜನೇಯ ದೇವಾಲಯವು ಅರಮನೆಯ

ಪ್ರಾಕಾರದ ಹೊರ ಗೋಡೆಗೆ ಅಂಟಿಕೊಂಡಂತೆ ನಿರ್ಮಿಸಲಾಗಿದೆ. ಇಲ್ಲಿ ಬೆಳಕಿನ ಅವಶ್ಯಕತೆಯಿಂದಾಗಿ ಈ ದೇವಾಲಯದ ಎದುರು ಎತ್ತರದ ದೀಪಸ್ತಂಭವನ್ನು ಸ್ಥಾಪಿಸಲಾಗಿದೆ ಎನ್ನಬಹುದು.

ಟಿ.ನರಸೀಪುರ ತಾಲ್ಲೂಕಿನ ತಿರುಮಕೂಡಲಿನಲ್ಲಿರುವ ಶ್ರೀ ಅಗಸ್ತ್ಯೇಶ್ವರ ದೇವಾಲಯದ ಹೊರಗೆ ಎತ್ತರದ ದೀಪಸ್ತಂಭವಿದೆ. ಈ ದೇವಾಲಯವು ನದಿಯ ದಂಡೆಯ ಮೇಲಿದ್ದು ಮೊದಲಿಗೆ ಊರ ಹೊರಗೆ ಇದ್ದಿರಬೇಕು. ದೇವಾಲಯಕ್ಕೆ ಬರುವ ಭಕ್ತರಿಗೆ ದಾರಿ ತೋರಲು ಮತ್ತು ವನ್ಯಪ್ರಾಣಿಗಳು ಇಲ್ಲಿ ಸುಳಿಯದಿರಲು ದೀಪಸ್ತಂಭವನ್ನು ದೊಡ್ಡದಾಗಿ ನಿರ್ಮಿಸಲಾಗಿದೆ ಎಂದು ತೋರುತ್ತದೆ. ಪ್ರಸ್ತುತ ದೇವಾಲಯದ ಸುತ್ತಲೂ ಮನೆಗಳಾಗಿವೆ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿರುವ ಶ್ರೀ ಸೌಮ್ಯಕೇಶವ ದೇವಾಲಯದ ಎದುರು ಆವರಣದ ಹೊರಗೆ ಎತ್ತರದ ದೀಪಸ್ತಂಭವಿದೆ. ಇದರಂತೆ ಕೆ.ಆರ್. ಪೇಟೆ ತಾಲ್ಲೂಕಿನ ಸಾಸಲುನಲ್ಲಿರುವ ಶ್ರೀ ಸೋಮೇಶ್ವರ ದೇವಾಲಯ, ತೆಂಡೇಕೆರೆಯಲ್ಲಿರುವ ಶ್ರೀ ವೀರಭದ್ರೇಶ್ವರ ದೇವಾಲಯ, ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯಲ್ಲಿರುವ ಶ್ರೀ ಚೆಲುವನಾರಾಯಸ್ವಾಮಿ ದೇವಾಲಯ, ಚಾಮರಾಜನಗರ ಜಿಲ್ಲೆಯ ಚಾಮರಾಜೇಶ್ವರ ದೇವಾಲಯ, ಗುಂಡ್ಲುಪೇಟೆ ತಾಲ್ಲೂಕಿನ ತೆರಕಣಾಂಬಿಯಲ್ಲಿರುವ ಶ್ರೀ ಲಕ್ಷ್ಮೀ ವರದರಾಜಸ್ವಾಮಿ ದೇವಾಲಯ, ಕೊಡಗು ಜಿಲ್ಲೆಯ ಭಾಗಮಂಡಲದ ಭಗಂಡೇಶ್ವರ ದೇವಾಲಯ, ಹಾಸನ ಜಿಲ್ಲೆಯ ಬೇಲೂರಿನಲ್ಲಿರುವ ಶ್ರೀ ಚೆನ್ನಕೇಶವ ದೇವಾಲಯ, ಅರಕಲಗೂಡು ತಾಲ್ಲೂಕಿನ ರಾಮನಾಥಪುರದ ಶ್ರೀ ಪಟ್ಟಾಭಿರಾಮ ದೇವಾಲಯಗಳಲ್ಲಿ ಇರುವ ದೀಪಸ್ತಂಭಗಳನ್ನು ದೇವಾಲಯದ ಆವರಣದ ಹೊರಗೆ ನಿಲ್ಲಿಸಿರುವುದನ್ನು ಕಾಣುತ್ತೇವೆ.

ಇದೇ ರೀತಿ ತುಮಕೂರು ಜಿಲ್ಲೆಯ ಕೈದಾಳದಲ್ಲಿರುವ ಶ್ರೀ ಚೆನ್ನಕೇಶವ ದೇವಾಲಯ, ಸಿರಾ ತಾಲ್ಲೂಕಿನ ಬರಗೂರಿನಲ್ಲಿರುವ ಶ್ರೀ ಮಹೇಂದ್ರೇಶ್ವರ ದೇವಾಲಯ, ಗುಬ್ಬಿ ತಾಲ್ಲೂಕಿನ ಕಡಬದಲ್ಲಿರುವ ಶ್ರೀ ಲಕ್ಷ್ಮೀ ಜನಾರ್ಧನ ದೇವಾಲಯವು ಸೇರಿದಂತೆ ದೇವಾಲಯದ ಹೊರಗೆ ಎತ್ತರದ ದೀಪಸ್ತಂಭಗಳು ಇವೆ. ಕಡಬದಲ್ಲಿರುವ ಶ್ರೀ ಕೈಲಾಸೇಶ್ವರ ದೇವಾಲಯದ ಎದುರು ಎತ್ತರದ ದೀಪಸ್ತಂಭವಿತ್ತು ಎಂಬುದನ್ನು ದೇವಾಲಯದ ಪಕ್ಕದಲ್ಲಿ ಮುರಿದು ಬಿದ್ದಿರುವ ದೀಪಸ್ತಂಭವನ್ನು ನೋಡಿದರೆ ತಿಳಿಯುತ್ತದೆ. ಈ ದೇವಾಲಯವನ್ನು ಊರ ಹೊರಗೆ ನಿರ್ಮಿಸಲಾಗಿದೆ.

ಬೆಂಗಳೂರು ಜಿಲ್ಲೆಯ ಆನೇಕಲ್ಲು ತಾಲ್ಲೂಕಿನ ಬನ್ನೇರು ಘಟ್ಟದಲ್ಲಿರುವ ಸಂಪಂಗಿ ರಾಮ ದೇವಾಲಯದ ಎದುರಿಗೆ ಸುಮಾರು ನೂರು ಮೀಟರ್‌ಗಳ ದೂರದಲ್ಲಿ ಎತ್ತರದ ದೀಪಸ್ತಂಭವಿದೆ. ಆನೇಕಲ್ಲಿನಲ್ಲಿರುವ ಶ್ರೀ ಮಲ್ಲಿಕಾರ್ಜುನ ದೇವಾಲಯ, ಹೊಸಕೋಟೆಯ

ಶ್ರೀ ಅವಿಮುಕ್ತೇಶ್ವರ ದೇವಾಲಯ, ಚನ್ನಪಟ್ಟಣ ತಾಲ್ಲೂಕಿನ ದೊಡ್ಡ ಮಳೂರಿನಲ್ಲಿರುವ ಶ್ರೀ ರಾಮಾಪ್ರಮೇಯಸ್ವಾಮಿ ದೇವಾಲಯ, ಬಸವನಗುಡಿಯ ಬಸವಣ್ಣನ ಗುಡಿ, ಮಾಗಡಿ ತಾಲ್ಲೂಕಿನ ಸಾವನದುರ್ಗದ ಶ್ರೀ ವೀರಭದ್ರೇಶ್ವರ ದೇವಾಲಯ, ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಟೇಕಲ್‌ನಲ್ಲಿರುವ ಶ್ರೀ ವರದರಾಜಸ್ವಾಮಿ ದೇವಾಲಯ, ಚಿಕ್ಕಬಳ್ಳಾಪುರ ತಾಲ್ಲೂಕಿನ ಕಂದಾವರದ ಶ್ರೀ ಜ್ವರಹರೇಶ್ವರ ದೇವಾಲಯಗಳಲ್ಲಿನ ದೀಪಸ್ತಂಭಗಳು ದೇವಾಲಯದ ಆವರಣದ ಹೊರಗೆ ಇದ್ದು ಎತ್ತರವಾದ ರಚನೆಯನ್ನು ಹೊಂದಿವೆ.

ಕೆಲವು ದೇವಾಲಯಗಳ ಎದುರು ಎರಡು ದೀಪಸ್ತಂಭಗಳು ಇರುವುದು ಕಾಣುತ್ತದೆ. ಒಂದು ದೇವಾಲಯದ ಆವರಣದಲ್ಲಿ ಇದ್ದರೆ ಮತ್ತೊಂದು ದೇವಾಲಯದ ಮುಖ್ಯದ್ವಾರಕ್ಕೂ ಹೊರಗೆ ಇರಿಸಿರುವುದನ್ನು ನೋಡಬಹುದು. ಬೆಂಗಳೂರು ಜಿಲ್ಲೆಯ ಚಿಕ್ಕಜಾಲದಲ್ಲಿ ಇರುವ ಶ್ರೀ ಚೆನ್ನಕೇಶವ ದೇವಾಲಯ, ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಚಿಕ್ಕತಿರುಪತಿ ಶ್ರೀ ವೆಂಕಟರಮಣ ಸ್ವಾಮಿ ದೇವಾಲಯಗಳ ಆವರಣದಲ್ಲಿ ಎರಡೆರಡು ದೀಪಸ್ತಂಭಗಳು ಇವೆ.

ಕೆಲವು ದೇವಾಲಯಗಳ ಆವರಣದಲ್ಲಿ ಪುಟ್ಟದಾದ ದೀಪಸ್ತಂಭಗಳು ಇರುತ್ತವೆ. ಇವು ಸುಮಾರು ಎರಡು ಎರಡೂವರೆ ಅಡಿ ಎತ್ತರದಿಂದ ಐದು ಅಡಿ ಎತ್ತರವನ್ನು ಹೊಂದಿರುವುದನ್ನು ಕಾಣಬಹುದು. ದೇವಾಲಯಕ್ಕೆ ಬರುವ ಭಕ್ತರು ಪ್ರತಿದಿನವೂ ದೀಪವನ್ನು ಬೆಳಗಲು ಅನುಕೂಲವಾಗಲೆಂದು ಈ ರೀತಿಯ ಪುಟ್ಟ ದೀಪಸ್ತಂಭಗಳನ್ನು ನಿರ್ಮಿಸಲಾಗಿರುತ್ತದೆ ಎಂದು ತಿಳಿಯಬಹುದು.

ಬೆಂಗಳೂರು ಜಿಲ್ಲೆಯ ಶ್ರೀ ವೀರಾಂಜನೇಯ ದೇವಾಲಯದ ಆವರಣದಲ್ಲಿ ದೊಡ್ಡ ದೀಪಸ್ತಂಭದ ಎದುರಿಗೆ ಪುಟ್ಟದೊಂದು ದೀಪಸ್ತಂಭವಿದೆ (ಚಿತ್ರ ೧೨೩). ಈ ದೀಪಸ್ತಂಭವು ಚೌಕಾಕಾರದ ರಚನೆಯನ್ನು ಹೊಂದಿರುವ ಐದು ಅಡಿ ಎತ್ತರದ ಸ್ತಂಭವಾಗಿದೆ. ಈ ಸ್ತಂಭದ ತುದಿಯಲ್ಲಿ ಕಲ್ಲಿನಲ್ಲಿ ನಿರ್ಮಿಸಿದ ಬೋಗುಣಿಯಂತಿರುವ ರಚನೆಯು ಇರುವುದು ಕಾಣುತ್ತದೆ. ಭಕ್ತರು ಈ ಸ್ತಂಭದಲ್ಲಿ ದಿನ ನಿತ್ಯವೂ ದೀಪವನ್ನು ಬೆಳಗುತ್ತಾರೆ.

ಹರಳೆಣ್ಣೆ, ಒಳ್ಳೆಣ್ಣೆ ಮತ್ತು ರಾಳವನ್ನು ಮಿಶ್ರ ಮಾಡಿ ಕೆಲವು ದೀಪಸ್ತಂಭಗಳಲ್ಲಿ ಬಳಸಲಾಗುತ್ತದೆ. ಈ ಮಿಶ್ರಣಕ್ಕೆ ದೀಪ ಹಚ್ಚಿದಾಗ ರಾಳ ಸಿಡಿಯುತ್ತದೆ. ಆಗ ಅದರ ಸುತ್ತ ನಿಂತಂಹ ಜನರು ಚಪ್ಪಾಳೆ ಹಾಕಿ ಕುಣಿಯುವ ಪದ್ಧತಿಯು ಕೆಲವು ಕಡೆಗಳಲ್ಲಿ ಇರುವುದು ತಿಳಿದು ಬರುತ್ತದೆ.

ಕೆಲವು ದೀಪಸ್ತಂಭಗಳಲ್ಲಿ ಎಳ್ಳನ್ನು ಬಳಸಿಕೊಂಡು ದೀಪವನ್ನು ಬೆಳಗುವುದನ್ನು ಈಗಲೂ ನೋಡಬಹುದು. ವಿಷ್ಣುವಿನ ದೇಹದಿಂದ ಹೊರಬಂದಿದೆ ಎಂದು ನಂಬಲಾಗುವ ಎಳ್ಳು ಹಿಂದೂ ಸಂಪ್ರದಾಯದಲ್ಲಿ ಪರಮ ಪವಿತ್ರವೂ ಮತ್ತು ಅತಿ ಮುಖ್ಯವೂ ಎನಿಸಿದ

ಧಾನ್ಯ[೩೭]. ಕಾರ್ತಿಕ ಮಾಸದಲ್ಲಿ ಶಿವನು ತ್ರಿಪುರ ಸಂಹಾರ ಮಾಡಿದನೆನ್ನುವ ಹಿನ್ನೆಲೆಯಲ್ಲಿ ದೀಪೋತ್ಸವವನ್ನು ಆಚರಿಸಲಾಗುತ್ತದೆ[೩೮]. ಮಕರ ಸಂಕ್ರಾಂತಿ ಅಥವಾ ಲಕ್ಷ ದೀಪೋತ್ಸವಗಳಲ್ಲಿ ವಿಶೇಷವಾಗಿ ದೀಪಗಳನ್ನು ಬೆಳಗುವುದು ವಾಡಿಕೆ. ಈ ದೀಪಸ್ತಂಭದಲ್ಲಿನ ದೀಪಕ್ಕೆ ಅವಶ್ಯಕತೆಗೆ ತಕ್ಕಂತೆ ಎಣ್ಣೆಯನ್ನು ಬಳಸಲಾಗುತ್ತದೆ. ಈ ದೀಪವು ಸುಮಾರು ಎರಡು ಗಂಟೆಗಳ ಕಾಲ ಬೆಳಗುವ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ[೩೯].

ಹೀಗೆ ದೇವಾಲಯಗಳ ಆವರಣದಲ್ಲಿ ಇರುವ ದೀಪಸ್ತಂಭಗಳು ದೇವಾಲಯದ ವಾಸ್ತು ರಚನೆಯಲ್ಲಿ ತಮ್ಮದೇ ಆದ ವಿಶೇಷ ಸ್ಥಾನವನ್ನು ಪಡೆದಿವೆ. ಆಧುನಿಕ ಕಾಲದಲ್ಲಿ ಇವುಗಳ ಬಳಕೆಯು ಕಡಿಮೆಯಾದುದರಿಂದ ದೀಪಸ್ತಂಭಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡದಿರುವುದು ಕಾಣುತ್ತದೆ.

*****

---

೩೭. ಬೆನಗಲ್ ರಾಮರಾವ್, ಪಾನ್ಯಂ ಸುಂದರ ಶಾಸ್ತ್ರಿ: **ಪುರಾಣನಾಮ ಚೂಡಾಮಣಿ,** ಪ್ರಸಾರಾಂಗ, ಮೈಸೂರು ವಿಶ್ವ ವಿದ್ಯಾನಿಲಯ, ಪುಟ- ೨೪೯

೩೮. ತಾರಕನ ಆಯಸಪುರ, ವಿದ್ಯುನ್ಮಾಲಿಯ ರಜತಪುರ, ಮಯನ ಸುವರ್ಣಪುರವನ್ನು ಪ್ರವೇಶಿಸಿ ಶಿವನು ಒಂದೇ ಬಾಣದಿಂದಲೇ ಒಂದೇ ಇರಿತದಿಂದಲೇ ಸುಟ್ಟು ಹಾಳುಮಾಡಿದನು. ಅಂದು ಕಾರ್ತಿಕ ಶುಕ್ಲ ೧೫, ತ್ರಿಪುರ ಸಂಹಾರದ ಜ್ಞಾಪಕಾರ್ಥವಾಗಿಯೇ ದೀಪೋತ್ಸವ.....
ಬೆನಗಲ್ ರಾಮರಾವ್, ಪಾನ್ಯಂ ಸುಂದರ ಶಾಸ್ತ್ರಿ: **ಪುರಾಣನಾಮ ಚೂಡಾಮಣಿ** ಪ್ರಸಾರಾಂಗ, ಮೈಸೂರು ವಿಶ್ವ ವಿದ್ಯಾನಿಲಯ, ಪುಟ- ೨೫೭

೩೯. The wicks in the deepasthamba are expected to burn continuously for at least two hours, and in the prfocess, use up about one and half tonnes of gingili oil. The stone pillars are normally provided with decoratively carved niches to hold either the lamp cup or the wick.....
Choodamani Nandagopal, Vatsala Iyengar:
Temple treasures, Volume I, Temple Utensils and Rituals, ಪುಟ-೧೧೬

ಅಧ್ಯಾಯ: ಐದು

ವಿವಿಧ ಮಾಧ್ಯಮಗಳಲ್ಲಿ ದೀಪಸ್ತಂಭಗಳು

ವಿವಿಧ ಮಾಧ್ಯಮಗಳಲ್ಲಿ ದೀಪಸ್ತಂಭಗಳು

ದೀಪಸ್ತಂಭಗಳನ್ನು ವಿವಿಧ ಮಾಧ್ಯಮಗಳಲ್ಲಿ ನಿರ್ಮಿಸಿರುವುದನ್ನು ನೋಡುತ್ತೇವೆ. ಅವುಗಳನ್ನು ಮುಖ್ಯವಾಗಿ ಕಾಷ್ಠ, ಶಿಲೆ, ಲೋಹ ಮತ್ತು ಸಂಕೀರ್ಣ ಮಾಧ್ಯಮಗಳನ್ನಾಗಿ ವಿಂಗಡಿಸಬಹುದು. **ಈಶಾನ ಶಿವಗುರುದೇವ** ಪದ್ಧತಿಯಲ್ಲಿ ದೇವಾಲಯಗಳನ್ನು ಮಾಧ್ಯಮದ ಆಧಾರದ ಮೇಲೆ ಮೂರು ವಿಧಗಳನ್ನಾಗಿ ವಿಂಗಡಿಸಲಾಗುತ್ತದೆ. ಅವನ್ನು **ಸಂಚಿತಾ, ಅಸಂಚಿತಾ** ಮತ್ತು **ಉಪಸಂಚಿತಾ** ಎಂದು ಹೆಸರಿಸಲಾಗುತ್ತದೆ. ಇವನ್ನು ಕ್ರಮವಾಗಿ **ಪುರುಷ**, **ಸ್ತ್ರೀ** ಮತ್ತು **ನಪುಂಸಕ**ಗಳು ಎಂದು ಗುರುತಿಸಿ, ಮೊದಲನೆಯದು ಕಲ್ಲಿನಲ್ಲೂ ಎರಡನೆಯದನ್ನು ಇಟ್ಟಿಗೆ ಇಲ್ಲವೇ ಮರದಲ್ಲೂ ಮತ್ತು ಮೂರನೆಯದನ್ನು ಮರ ಮತ್ತು ಇಟ್ಟಿಗೆ ಎರಡನ್ನೂ ಬಳಸಿ ನಿರ್ಮಾಣ ಮಾಡುವುದು[೧] ಎಂದು ವಿವರಣೆ ದೊರೆಯುತ್ತದೆ.

ಶಿಲೆಯ ಮಾಧ್ಯಮದಿಂದ ನಿರ್ಮಾಣವಾದ ದೇವಾಲಯಗಳನ್ನು ಸಂಚಿತಾ ಎಂದೂ, ಮರ ಮಾಧ್ಯಮದ ದೇವಾಲಯಗಳನ್ನು ಅಸಂಚಿತಾ ಎಂದೂ ಮತ್ತು ಇಟ್ಟಿಗೆ ಮತ್ತು ಮರದಿಂದ ಕೂಡಿದ ಸಂಕೀರ್ಣ ಮಾಧ್ಯಮದ ದೇವಾಲಯಗಳನ್ನು

---

೧. Stella kramrisch: **The Hindu temple,** Volume I, ಪುಟ–೧೦೧

ಉಪಸಂಚಿತಾ ಎಂದು ಕರೆಯುವುದು ತಿಳಿಯುತ್ತದೆ. ವಾಸ್ತುಶಾಸ್ತ್ರಗಳಲ್ಲಿ ಇಟ್ಟಿಗೆಯನ್ನು ತಯಾರು ಮಾಡುವ ವಿಧಾನಗಳನ್ನು ಕುರಿತು ಉಲ್ಲೇಖಗಳು ದೊರೆಯುತ್ತವೆ.

ದೇವಾಲಯದ ಆವರಣದಲ್ಲಿ ಇರುವ ದೀಪಸ್ತಂಭಗಳನ್ನು ಅವುಗಳ ಮಾಧ್ಯಮದ ಆಧಾರದ ಮೇಲೆ ಈ ಕೆಳಗಿನಂತೆ ವಿಂಗಡಿಸಲಾಗಿದೆ.

೧. ಕಾಷ್ಠ ಮಾಧ್ಯಮದ ದೀಪಸ್ತಂಭಗಳು

೨. ಶಿಲಾ ಮಾಧ್ಯಮದ ದೀಪಸ್ತಂಭಗಳು

೩. ಲೋಹ ಮಾಧ್ಯಮದ ದೀಪಸ್ತಂಭಗಳು

೪. ಸಂಕೀರ್ಣ ಮಾಧ್ಯಮದ ದೀಪಸ್ತಂಭಗಳು

೧. ಕಾಷ್ಠ ಮಾಧ್ಯಮದ ದೀಪಸ್ತಂಭಗಳು:

ಕಾಷ್ಠ ಎಂದರೆ ಮರ, ಕಟ್ಟಿಗೆ ಎಂದರ್ಥ. ಶಿಲೆಯ ಜೊತೆಯಲ್ಲಿಯೇ ಮರವೂ ನಿಸರ್ಗದ ಒಂದು ವರದಾನವೆಂದೇ ಹೇಳಬಹುದು. ಶಿಲೆಯಂತೆ ಮರ ಘನವಾಗಿದ್ದರೂ ಬೆಳೆಯುವ ಗುಣವನ್ನು ಹೊಂದಿರುವುದು ಇದರ ವಿಶೇಷ. ಮರಗಳಲ್ಲಿ ಅನೇಕ ವಿಧಗಳಿವೆ. ಮರಗಳು ಮಾನವನಿಗೆ ಅನೇಕ ವಿಧದಲ್ಲಿ ಉಪಯುಕ್ತವಾಗಿವೆ. ಪ್ರಾಚೀನ ಮಾನವನು ಸಂಘ ಜೀವಿಯಾದ ನಂತರ ಆಹಾರಕ್ಕಾಗಿ ಒಂದೆಡೆ ನಿಲ್ಲದೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುತ್ತಿದ್ದನು. ಹೀಗಿರುವಾಗ ನಿಸರ್ಗದತ್ತವಾದ ಗುಹೆಗಳಿಲ್ಲದ ಕಾರಣ ವಾಸ ಮಾಡಲು ತಾನೇ ಗುಹೆಯಂತೆ ನಿರ್ಮಿಸುವುದು ಅನಿವಾರ್ಯವಾಯಿತು.

ಗುಹೆಯ ನಿರ್ಮಾಣದಲ್ಲಿ ನಿಸರ್ಗದಲ್ಲಿ ದೊರೆತ ಮರದ ಟೊಂಗೆ ರೆಂಬೆಗಳೇ ಅವನಿಗೆ ಮೂಲ ವಸ್ತುಗಳಾದವು. ಹೀಗೆ ಶುರುವಾದ ಮರದ ಬಳಕೆಯು ಬರಬರುತ್ತಾ ತನ್ನ ಜೀವನಕ್ಕೆ ಅವಶ್ಯವಿರುವ ಇತರೆ ಸಾಮಗ್ರಿಗಳಿಗೆ ಉಪಯುಕ್ತವಾಯಿತು. ವ್ಯವಸಾಯವನ್ನು ಕಂಡುಕೊಂಡ ಮಾನವನು ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವುದನ್ನು ಬಿಟ್ಟು ಬಿದಿರು ಬೊಂಬುಗಳನ್ನು ಉಪಯೋಗಿಸಿ ಶಾಶ್ವತವಾದ ಮರದ ಬಿಡಾರಗಳನ್ನು ಗುಹೆಗಳಂತೆ ನಿರ್ಮಿಸಿಕೊಂಡನು. ಮಾನವನು ತನ್ನ ಆತ್ಮ ರಕ್ಷಣೆಗೆ ಮೊದಲು ಕಲ್ಲಿನ ಆಯುಧಗಳನ್ನು ಉಪಯೋಗಿಸಿಕೊಂಡರೂ ವಸತಿಗಾಗಿ ಮಾತ್ರ ಮರವನ್ನು ಬಳಸಿಕೊಂಡಿರುವುದು ತಿಳಿದು ಬರುತ್ತದೆ. ತನ್ನ ಬಿಡಾರವು ಅಲಂಕೃತವಾಗಿರಲು ಮರದ ತುಂಡುಗಳ ಮೇಲೆ ಕೆತ್ತನೆಯನ್ನು ಮಾಡಿದನು. ಮರವು ಕಲ್ಲಿನಷ್ಟು ಗಟ್ಟಿಯಿಲ್ಲ ಮತ್ತು ಕೆತ್ತಲು ಕಲ್ಲಿಗಿಂತ ಮೃದು ಎಂದು ಅರಿತನು. ಹೀಗೆ ಶುರುವಾದದ್ದು ಮರಗೆತ್ತನೆ.

ಮರದಲ್ಲಿ ಮಾಡುವ ರಚನೆಯಲ್ಲಿ ಮರದ ಶಿಲ್ಪಗಳು, ಅರಗುಲೇಪಿತ ಕುಶಲಕಲೆ, ಮರದಗೊಂಬೆ ಮತ್ತು ಆಟಿಕೆ ಸಾಮಗ್ರಿಗಳು, ಬಿದಿರಿನ ಹೆಣಿಗೆ, ಹುಲ್ಲಿನ ಬುಟ್ಟಿ, ಚಾಪೆ

ಇನ್ನೂ ಮುಂತಾದವು ಗಿಡ ಮರಗಳಿಂದ ದೊರೆತ ವಿವಿಧ ಭಾಗಗಳನ್ನು ಉಪಯೋಗಿಸಿ ತಯಾರಿಸುವಂತಹವು. ಇವನ್ನು ಬಡಿಗಾರಿಕೆ ಎಂದೂ ಕರೆಯುತ್ತಾರೆ.

ಮಾನವನು ಮೊದಲು ಕಲಾಕೃತಿಯನ್ನು ಕೆತ್ತನೆ ಮಾಡಲು ಬಳಸಿದ ಮಾಧ್ಯಮ ಎಂದರೆ ಮರ. ಮೌರ್ಯರ ಕಾಲದ ಸ್ತೂಪವಾಗಲೀ, ಚೈತ್ಯಾ ಹಾಲ್ ಆಗಲೀ ಅಥವಾ ಬೌದ್ಧ ಬಿಕ್ಷುಗಳಿಗಾಗಿ ನಿರ್ಮಿಸಿದ ವಿಹಾರಗಳ ರಚನೆಯನ್ನಾಗಲೀ ಗಮನಿಸಿದರೆ ಶಿಲೆಯಲ್ಲಿ ಮರಗೆತ್ತನೆಯ ವಿನ್ಯಾಸ, ಶೈಲಿ, ವಿಧಾನಗಳನ್ನು ಬಳಸಿಕೊಂಡಿರುವುದು ಕಾಣುತ್ತದೆ. ಸ್ತೂಪದ ಸುತ್ತಲಿನ ಕಟಕಟೆಯಾಗಲೀ, ದ್ವಾರದ ಮೇಲಿನ ಅಲಂಕಾರಿಕ ಕೆತ್ತನೆಯಾಗಲೀ ಅಥವಾ ಸ್ತೂಪದ ಮೇಲಿನ ಛತ್ರಿಯಾಕಾರದ ರಚನೆಯನ್ನಾಗಲೀ ನೋಡಿದಾಗ ಇದರ ಅರಿವಾಗುತ್ತದೆ.

ಇವುಗಳ ರಚನಾ ಶೈಲಿಯು ಮರದ ಕೆತ್ತನೆಯನ್ನು ಹೋಲುತ್ತದೆ ಅಲ್ಲದೆ ಶಿಲೆಯ ತುಂಡುಗಳನ್ನು ಜೋಡಿಸಲು ಯಾವುದೇ ಗಾರೆಯನ್ನು ಬಳಸದೆ ಒಂದರೊಳಗೆ ಒಂದು ಭದ್ರವಾಗಿ ನಿಲ್ಲಲು ಮರದ ರಚನೆಯಲ್ಲಿ ಮಾಡುವ ಕೆತ್ತನೆಯಂತೆ ಗುಳಿಗಳನ್ನು ಮಾಡಿರುವುದು ತಿಳಿಯುತ್ತದೆ. ಈ ರೀತಿಯ ರಚನೆಯು ಮರದ ರಚನಾ ಶೈಲಿಗೆ ನೇರವಾಗಿ ಹೋಲುತ್ತದೆ. ಆದ್ದರಿಂದ ಎಲ್ಲಾ ಕೆತ್ತನೆಯ ಮೂಲದ ಕೆತ್ತನೆ ಮರದ್ದಾಗಿದೆ ಎನ್ನಬಹುದು. ಅಂದರೆ ನಮಗೆ ದೊರೆತಿರುವ ಶಿಲಾ ಮಾಧ್ಯಮದ ಸ್ಮಾರಕಗಳಿಗಿಂತ ಹಿಂದೆ ರಚಿಸಲ್ಪಟ್ಟಂತಹ ಕಟ್ಟಡಗಳು ಮರದಲ್ಲಿ ನಿರ್ಮಾಣಗೊಂಡಿದ್ದವು ಎಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಮರವು ಕಲ್ಲಿನಷ್ಟು ದೀರ್ಘ ಕಾಲ ಬಾಳಿಕೆ ಬರದ ಕಾರಣದಿಂದ ಅವುಗಳ ಅವಶೇಷಗಳೂ ನಮಗೆ ದೊರೆಯಲು ಸಾಧ್ಯವಿಲ್ಲವಾಗಿದೆ.

ಮಾನವನು ನೈಸರ್ಗಿಕವಾಗಿ ಹೇರಳವಾಗಿ ದೊರೆಯುವ ವಸ್ತುಗಳಿಂದ ತನ್ನ ಜೀವನಕ್ಕೆ ಬೇಕಾದವುಗಳನ್ನು ನಿರ್ಮಿಸಿಕೊಂಡನು. ಕಲ್ಲು ಹೆಚ್ಚಾಗಿ ದೊರೆಯುವ ಕಡೆ ಕಲ್ಲಿನ ಕಟ್ಟಡಗಳು ಇರುವುದನ್ನು ಕಾಣಬಹುದು. ಅದೇ ರೀತಿ ಮರಗಳು ಹೆಚ್ಚಾಗಿ ದೊರೆಯುವ ಕಡೆಗಳಲ್ಲಿ ಅದರಲ್ಲೂ ಗುಡ್ಡಗಾಡು ಪ್ರದೇಶಗಳಲ್ಲಿ ಮರಗಳನ್ನು ಬಳಸಿ ರಚಿಸಲ್ಪಟ್ಟಂತಹ ಕಟ್ಟಡಗಳು ದೊರೆಯುತ್ತವೆ.

ಕರಾವಳಿ ಪ್ರದೇಶಗಳಲ್ಲಿ, ಮಲೆನಾಡು ಪ್ರದೇಶಗಳಲ್ಲಿ ಮರ ಮಾಧ್ಯಮದ ಕಟ್ಟಡಗಳು ಇರುವುದು ಸರ್ವೇಸಾಮಾನ್ಯವಾದುದು. ಅಲ್ಲಿನ ಮನೆ, ಮಂದಿರಗಳ ನಿರ್ಮಾಣದಲ್ಲಿ ಹಲವಾರು ವಿವಿಧ ಜಾತಿಯ ಮರಗಳನ್ನು ಉಪಯೋಗಿಸಿಕೊಂಡಿರುವುದು ವಿಶೇಷವಾಗಿ ಕಾಣುತ್ತದೆ. ಕಿಟಕಿ, ಬಾಗಿಲುಗಳಿಗೆ ಬೆಟ್ಟದ ಹೊನ್ನೆ, ಅವುಗಳ ಚೌಕಟ್ಟಿಗೆ, ಮುಖ್ಯ ದ್ವಾರಕ್ಕೆ, ಕಂಬಕ್ಕೆ ಹಲಸಿನ ಮರ, ಹಲಗೆಗಳಿಗೆ ಹೆಬ್ಬಲಸಿನ ಮರ, ದೇವರ ಪೀಠಕ್ಕೆ ಬೀಟೆ, ಹಲಸು, ಕಾಯಿವಾಟೆ, ಶ್ರೀಗಂಧದ ಬಳಕೆಯ ಜೊತೆಗೆ ಕಟ್ಟಡದ ಭಾಗಗಳ ರಚನೆಯಲ್ಲಿ ಹುನಾಲು, ಭರಣಗಿ, ಮತ್ತಿ, ಪಕಾಸು, ನಂದಿ, ನೇರಲು, ಹಾಲು ಖೈರ,

ಸುರ ಹೊನ್ನೆ ಮತ್ತು ಮಂದಾರ ಎಂಬ ವಿವಿಧ ಮರಗಳನ್ನು ಉಪಯೋಗಿಸಿಕೊಂಡಿರುವುದು ಗಮನಕ್ಕೆ ಬರುತ್ತದೆ.

ಗುಡ್ಡಗಾಡು ಪ್ರದೇಶಗಳಲ್ಲಿ ಬಳಸಲ್ಪಡುವ ಮರಗಳಿಗೂ ಕರಾವಳಿ ಪ್ರದೇಶದಲ್ಲಿ ಉಪಯೋಗಿಸಲ್ಪಡುವ ಮರಗಳಿಗೂ ಪ್ರಾದೇಶಿಕವಾದ ಭಿನ್ನತೆ ಇರುವುದು ಕಂಡು ಬರುತ್ತದೆ. ಕಾಡಿನಲ್ಲಿ ದೊರೆಯುವ ಮರಗಳಿಗೂ ಅಲ್ಲಿ ನಿರ್ಮಿಸಲ್ಪಡುವ ಮನೆ ಮಂದಿರಗಳಿಗೂ ಒಂದಕ್ಕೊಂದು ಸಂಬಂಧವಿರುವುದು ಕಾಣುತ್ತದೆ. ಪ್ರಾದೇಶಿಕ ಪರಿಸರದ, ಜನಾಂಗದ ಸಂಪ್ರದಾಯದ ಹಾಗೂ ಅಲ್ಲಿನವರ ಜ್ಞಾನದ ಆಧಾರದ ಮೇಲೆ ವಿವಿಧ ಮರದ ಬಳಕೆಯು ಅವಲಂಬಿತವಾಗಿರುತ್ತದೆ. ಕಟ್ಟಿಗೆಯ ಗುಣವನ್ನು ಆಧರಿಸಿ ಅವುಗಳನ್ನು ಬಳಸಿಕೊಂಡಿರುವುದನ್ನು ನೋಡಬಹುದು.

ಭರಣಗಿ ಮರವು ಗಟ್ಟಿಯಾಗಿರುವುದಲ್ಲದೇ ಅದು ಕಹಿಯಾಗಿರುವುದರಿಂದ ಗೆದ್ದಲು ತಿನ್ನುವುದಿಲ್ಲ ಎಂಬ ಕಾರಣದಿಂದಲೇ ಅದನ್ನು ಮಹಡಿಯ ನಿರ್ಮಾಣದಲ್ಲಿ ಉಪಯೋಗಿಸುತ್ತಾರೆ. ಜಾಲಿ ಮರಕ್ಕೆ ಕೂಡಾ ಗೆದ್ದಲು ಹಿಡಿಯುವುದಿಲ್ಲ ಹಾಗೂ ಅದು ಬೆಂಕಿಗೆ ಬೇಗ ಆಹುತಿಯಾಗಲಾರದು ಎಂಬ ಉದ್ದೇಶದಿಂದ ಕೆಲವು ಪ್ರದೇಶಗಳಲ್ಲಿ ಮನೆ ನಿರ್ಮಿಸುವಲ್ಲಿ ಬಳಸಿರುವುದೂ ಕಾಣುತ್ತದೆ.

ಕಟ್ಟಿಗೆಯ ಗುಣವನ್ನು ಆಧರಿಸಿ ಮಾತ್ರವಲ್ಲದೆ ಧಾರ್ಮಿಕ ನಂಬಿಕೆಗಳನ್ನು ಆಧರಿಸಿ ಬಳಸಿರುವ ಮರಗಳ ರಚನೆಗಳೂ ದೊರೆಯುತ್ತವೆ. ಬಡಗಿಗಳು ಮತ್ತಿ ಮರವನ್ನು ಈಶ್ವರನ ಶಕ್ತಿಯೆಂದು ಭಾವಿಸುತ್ತಾರೆ. ನಂದಿ ಮರವನ್ನು ಶಿವನ ವಾಹನ ಎಂದು ಗುರುತಿಸುತ್ತಾರೆ. ಮತ್ತಿ ಮರದ ಮೇಲೆ ನಂದಿ ಮರದ ರಚನೆಯನ್ನು ಮಾಡಿದರೆ ಶಿವನ ಮೇಲೆ ನಂದಿಯನ್ನು ಕೂರಿಸಿದಂತೆ ಎಂಬುವುದು ಅವರ ಭಾವನೆ. ಆದ್ದರಿಂದ ಮತ್ತಿ ಮರದ ಮೇಲೆ ನಂದಿ ಮರದ ರಚನೆಯನ್ನು ಮಾಡುವುದಿಲ್ಲ. ಈ ರೀತಿಯ ಧಾರ್ಮಿಕ ನಂಬಿಕೆಗಳು ಜನರಲ್ಲಿ ಇರುವುದನ್ನು ಕಾಣುತ್ತೇವೆ.

ಧಾರ್ಮಿಕ ಹಿನ್ನೆಲೆಯಲ್ಲಿ ತಾರಿ ಮರವು ಶನಿ ದೇವರ ವಾಸಸ್ಥಳ ಎಂಬ ನಂಬಿಕೆ ಇದೆ. ಆದ್ದರಿಂದ ಈ ಮರದ ಕಟ್ಟಿಗೆಯನ್ನು ಮನೆ ಕಟ್ಟಲು ಉಪಯೋಗಿಸುವುದಿಲ್ಲ. ದೇವಸ್ಥಾನದ ರಥಗಳು, ಧ್ವಜಸ್ತಂಭಗಳು ಮುಂತಾದವುಗಳನ್ನು ನಿರ್ಮಿಸಲು ಕಾಯಿವಾಟೆ, ರಂಜಲು ಜಾತಿಯ ಮರಗಳನ್ನು ಬಳಸುವುದು ರೂಢಿ. ಹೀಗೆ ಸ್ಥಳದಿಂದ ಸ್ಥಳಕ್ಕೆ ಅಲ್ಲಿನ ಜನರ ಧಾರ್ಮಿಕ ಸಂಪ್ರದಾಯಕ್ಕೆ ಅನುಗುಣವಾಗಿ ಮನೆ ಮಂದಿರಗಳ ನಿರ್ಮಾಣದಲ್ಲಿ ಬೇರೆ ಬೇರೆ ಜಾತಿಯ ಮರಗಳನ್ನು ಬಳಸಿರುವುದನ್ನು ಕಾಣಬಹುದು.

ಕ್ರಿಸ್ತ ಪೂರ್ವ ಸುಮಾರು ಮೂರನೆಯ ಶತಮಾನದಿಂದಲೂ ಭಾರತವು ಮರದ ಕೆತ್ತನೆಗಳಿಗೆ ಪ್ರಸಿದ್ಧವಾಗಿರುವುದು[೨] ತಿಳಿದು ಬರುತ್ತದೆ. ಭಾರತದ ಮಹಾಕಾವ್ಯಗಳಾದ

೨. ಡಾ. ಪುರುಷೋತ್ತಮ ಬಿಳಿಮಲೆ: ಲೇಖನ– ಮರೆತುಹೋದ ಕಾಲ ಮರೆಯಲಾಗದ ಕುರುಹು, ಸುಧಾಮಾಸ ಪತ್ರಿಕೆ, ೨೭ ಫೆಬ್ರವರಿ ೨೦೦೩, ಪುಟ– ೧೭

ರಾಮಾಯಣ ಮತ್ತು ಮಹಾಭಾರತದಲ್ಲಿ ಮರದ ರಚನೆಯನ್ನು ಕುರಿತು ಉಲ್ಲೇಖಗಳು ದೊರೆಯುತ್ತವೆ. ರಾಮಾಯಣದಲ್ಲಿ ಹನುಮಂತನು ಲಂಕೆಯನ್ನು ಸುಟ್ಟಾಗ ಅಲ್ಲಿದ್ದ ಚೈತ್ರ ಪ್ರಾಸಾದವನ್ನು ಸುಟ್ಟನಂತೆ, ಹಲವು ತಜ್ಞರ ಪ್ರಕಾರ ಈ ಚೈತ್ರ ಪ್ರಾಸಾದವು ಅಪೂರ್ವವಾದ ಮರದ ಕೆತ್ತನೆಗಳಿಂದ ಕೂಡಿತ್ತು[೩] ಎಂಬುದಾಗಿದೆ. ಮಹಾಕಾವ್ಯಗಳಲ್ಲಿ ಇರುವ ಉಲ್ಲೇಖಗಳು ಹಾಗೂ ಮೌರ್ಯರ ವಾಸ್ತು ರಚನೆಯನ್ನು ನೋಡಿದರೆ ಮರಕೆತ್ತನೆಯು ಪುರಾತನವಾದುದು ಎಂದು ಸ್ಪಷ್ಟವಾಗಿ ತಿಳಿಯುತ್ತದೆ.

ಮೌರ್ಯರ ಕಾಲದಲ್ಲಿ ತೇಗದ ಮರವನ್ನು ಬಳಸುತ್ತಿದ್ದರು[೪] ಎಂದು ತಿಳಿದು ಬರುತ್ತದೆ. ಮೊದಲಿಗೆ ಭಾರತದಲ್ಲಿ ಸಾಗುವಾನಿ ಮರದ ಬಳಕೆ ಹೆಚ್ಚಾಗಿರಲಿಲ್ಲ. ಅವರು ಸಾಗುವಾನಿ ಮರದ ರಚನೆಯನ್ನು ಬಹಿಷ್ಕರಿಸಿದ್ದರು. ಆದರೆ ಟಿಪ್ಪುವಿನ ಕಾಲದಲ್ಲಿ ಸಾಗುವಾನಿ ಮರಕ್ಕೆ ವಿಶೇಷವಾದ ಮಾನ್ಯತೆ ಬಂದಿತು[೫]. ನಂತರ ಬಂದ ಬ್ರಿಟೀಷರ ಕಾಲದಲ್ಲೂ ಸಾಗುವಾನಿ ಮರಕ್ಕೆ ರಾಜವೃಕ್ಷದ ಸ್ಥಾನವು ಮುಂದುವರೆಯಿತು. ಸಾಗುವಾನಿ ಮರವು ಮೃದುವಾಗಿದ್ದು ಕೆತ್ತನೆಯನ್ನು ಮಾಡಲು ಯೋಗ್ಯವಾದುದಾಗಿದೆ. ಇದರಲ್ಲಿ ತೈಲಾಂಶ ಹೆಚ್ಚಾಗಿದ್ದು, ಹೆಚ್ಚು ವರ್ಷಗಳ ಕಾಲ ಬಾಳಿಕೆ ಬರುವ ಸಾಧ್ಯತೆ ಇರುವುದರಿಂದ ಪ್ರಸ್ತುತ ಜನಪ್ರಿಯವಾದ ಮರವು ಇದಾಗಿದೆ.

ಕಟ್ಟಡ ನಿರ್ಮಿಸುವ ಕಾರ್ಯವನ್ನು ಕೈಗೊಳ್ಳುವ ಮೊದಲು ಮಾಡುವ ಶಂಕು ಸ್ಥಾಪನೆ ಎಂಬ ಪೂಜೆಯಲ್ಲಿ ಮರದ ತುಂಡನ್ನು ಬಳಸಲಾಗುವುದು. ಇದಕ್ಕೆ ಅಶ್ವತ್ಥ, ಆಲ, ಅಗರಿ, ಕಗ್ಗಲಿ, ಶ್ರೀಗಂಧದ ಮರಗಳನ್ನು ಉಪಯೋಗಿಸುವುಂಟು. ವಾಸ್ತುಶಾಸ್ತ್ರವು ಬಿಳಿ ಮತ್ತಿ, ಕಾಂಚಾಳ, ಹೊಂಗೆ, ಬಿಲ್ವ ಪತ್ರೆ, ಕೆಮ್ಮತ್ತಿ, ಬೇವು, ಮುತ್ತುಗ ಹಾಗೂ ಬಿದಿರು ಮರಗಳನ್ನು ಬಳಸಬಹುದು ಎನ್ನುತ್ತದೆ[೬].

ಮರದ ದೀಪಸ್ತಂಭಗಳು ತೀರಾ ವಿರಳವಾಗಿ ದೊರೆಯುತ್ತವೆ. ಕರ್ನಾಟಕದಲ್ಲಿ ಅದರಲ್ಲೂ ಕರಾವಳಿ ಪ್ರದೇಶಗಳಲ್ಲಿ ಇಂದಿಗೂ ಕೆಲವು ಕಡೆ ಮರದ ದೀಪಸ್ತಂಭಗಳು ಇರುವುದನ್ನು ನೋಡಬಹುದು. ಈ ಪ್ರದೇಶಗಳ ಹೊರತಾಗಿ ಕರ್ನಾಟಕದ ಇನ್ನಾವುದೇ ಭಾಗದಲ್ಲಿ ಮರದ ದೀಪಸ್ತಂಭಗಳು ಇಲ್ಲದಿರುವುದು ತಿಳಿದು ಬರುತ್ತದೆ. ಪ್ರಾಚೀನ ಕಾಲದಲ್ಲಿ ಮರದ ದೀಪಸ್ತಂಭಗಳೇ ಇರುತ್ತಿತ್ತೆಂದು ತೋರುತ್ತದೆ. ಮರವು ಹವಾಮಾನದ ಬದಲಾವಣೆಗೆ ಬಹು ಬೇಗ ನಶಿಸುವುದರಿಂದ ಕಟ್ಟಡ ನಿರ್ಮಾಣದಲ್ಲಿ ಮಾನವನು


---

೩. ಡಾ. ಪುರುಷೋತ್ತಮ ಬಿಳಿಮಲೆ: ಲೇಖನ– **ಮರೆತುಹೋದಕಾಲ ಮರೆಯಲಾಗದ ಕುರುಹು**, ಸುಧಾಮಾಸ ಪತ್ರಿಕೆ, ೨೭ ಫೆಬ್ರವರಿ ೨೦೦೩, ಪುಟ– ೧೭

೪. ಡಾ. ಹೆಚ್. ತಿಪ್ಪೇರುದ್ರಸ್ವಾಮಿ: **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಪುಟ– ೧೯೩

೫. ಶಿವಾನಂದ ಕಳವೆ: ಲೇಖನ– **ಸಸ್ಯ ಸಂಪತ್ತು**, ಸುಧಾ ಮಾಸ ಪತ್ರಿಕೆ, ೨೫ ಮಾರ್ಚ್ ೨೦೦೪

೬ ತಿರುಮಲೆ ಶ್ರೀರಂಗಾಚಾರ್ಯ: ಲೇಖನ– **ಸ್ತಂಭ ಪುರಾಣ**, ಮಲ್ಲಾರ ಮಾಸಪತ್ರಿಕೆ, ಮಾರ್ಚ್ ೨೦೦೨, ಪುಟ-೧೧



ಚಿತ್ರ ೧೨೪

ಬೇರೆ ಮಾಧ್ಯಮವನ್ನು ನಂತರದ ದಿನಗಳಲ್ಲಿ ಬಳಸಿಕೊಳ್ಳಬೇಕಾಯಿತು. ಇದೇ ಕಾರಣದಿಂದ ಶಿಲಾ ಮಾಧ್ಯಮ, ಲೋಹ ಮಾಧ್ಯಮ ಮತ್ತು ಸಂಕೀರ್ಣ ಮಾಧ್ಯಮಗಳು ರೂಪ ತಾಳಿದವು ಎಂದು ತೋರುತ್ತದೆ.

ಮೈಸೂರು ಅರಮನೆಯ ಆವರಣದಲ್ಲಿರುವ ಲಕ್ಷ್ಮೀನಾರಾಯಣ ದೇವಾಲಯದ ಎದುರು ಧ್ವಜಸ್ತಂಭವೊಂದು ಶಿಥಿಲಗೊಂಡ ಹಿನ್ನೆಲೆಯಲ್ಲಿ ಪ್ರಸ್ತುತ ಅದರ ಸ್ಥಳದಲ್ಲಿ ಅಡಕೆ ಮರದ ಕಾಂಡವನ್ನು ಇರಿಸಲಾಗಿದೆ. ಅಡಿಕೆ ಮರವು ಶ್ರೇಷ್ಠ ಎಂದು ಅಲ್ಲಿನ ಪುರೋಹಿತರು ಹೇಳುತ್ತಾರೆ. ಧ್ವಜಸ್ತಂಭವು ಲೋಹದ್ದಾದಲ್ಲಿ ಒಳಗೆ ಆಧಾರವಾಗಿ ಮರದ ರಚನೆಯನ್ನು ಅಳವಡಿಸಲಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆ ಸುಳ್ಯಾ ತಾಲ್ಲೂಕು ಕುಕ್ಕೆಯಲ್ಲಿರುವ ಶ್ರೀ ಸುಬ್ರಹ್ಮಣ್ಯೇಶ್ವರ ದೇವಾಲಯವು ಅತ್ಯಂತ ಪುರಾತನವಾದ ದೇವಾಲಯವಾಗಿದೆ. ಈ ದೇವಾಲಯದ ಆವರಣದಲ್ಲಿ ಮರದ ದೀಪಸ್ತಂಭವಿದೆ (ಚಿತ್ರ ೧೨೪). ಮೊದಲಿಗೆ ದೀಪಾವಳಿಯ ದಿನದಂದು ದೀಪವನ್ನು ಬೆಳಗುವ ಪದ್ಧತಿ ಇತ್ತು. ಪ್ರಸ್ತುತ ಈ ದೀಪಸ್ತಂಭದಲ್ಲಿ ದೀಪವನ್ನು ಬೆಳಗಲಾಗುವುದಿಲ್ಲ. ಈ ದೀಪದ ಕಂಬವನ್ನು ಮಾವಿನ ಮರದಿಂದ ರಚಿಸಲಾಗಿರುತ್ತದೆ. ಮಾವಿನ ಮರದ ಈ ರಚನೆಯನ್ನು ಪ್ರತಿವರ್ಷವೂ ಬದಲಿಸಲಾಗುತ್ತದೆ. ಮಳೆಗಾಲದ ಸಮಯದಲ್ಲಿ ಹೊಸದಾದ ದೀಪದ ಕಂಬವನ್ನು ರಚಿಸಿ ಸ್ಥಾಪಿಸಲಾಗುತ್ತದೆ. ಈ ಸ್ತಂಭಕ್ಕೆ ಪೀಠವಿಲ್ಲ.

ದೀಪಸ್ತಂಭದ ಇಡೀ ದಂಡದ ಭಾಗವು ಅಷ್ಟಭುಜಗಳನ್ನು ಹೊಂದಿರುವುದನ್ನು ಕಾಣಬಹುದು. ಅಷ್ಟಭುಜದ ನಾಲ್ಕು ಕಡೆಗಳಲ್ಲಿ ಸ್ತಂಭದ ಉದ್ದಕ್ಕೂ ಅಲ್ಲಲ್ಲಿ ಹೊಚಾಚಿದಂತಹ ಮರದ ರಚನೆಗಳು ಇರುವುದನ್ನು ಕಾಣುತ್ತೇವೆ. ಸ್ತಂಭದ ತುದಿಯಲ್ಲಿ ಬಟ್ಟಲಿನಾಕಾರದ ರಚನೆ ಇದ್ದು ಅದರ ಮೇಲೆ ಫಲಕದಂತಹ ರಚನೆ ಇರುವುದನ್ನು ಕಾಣಬಹುದು. ಫಲಕದ ನಡುವೆ ಕಮಲದ ಮೊಗ್ಗಿನಂತಹ ರಚನೆಯು ಇರುವುದು ಕಾಣುತ್ತದೆ.

ಕಮಲವು ಸೃಷ್ಟಿ ಹಾಗೂ ಅಗ್ನಿಯ ಸಂಕೇತವಾದ್ದರಿಂದ ದೀಪಸ್ತಂಭದ ತುದಿಯಲ್ಲಿ ಇದನ್ನು ಬಳಸಿದ್ದಾರೆಂದು ತೋರುತ್ತದೆ. ಸ್ತಂಭದ ಸುತ್ತಲೂ ಮೂರೂವರೆ ಅಡಿ ಎತ್ತರದ ಚೌಕಟ್ಟು ಇರುವುದನ್ನು ನೋಡಬಹುದು. ಈ ಚೌಕಟ್ಟನ್ನು ಬಿದಿರಿನಲ್ಲಿ ನಿರ್ಮಿಸಲಾಗಿರುತ್ತದೆ. ಈ ದೀಪಸ್ತಂಭವು ಸುಮಾರು ಇಪ್ಪತ್ತು ಅಡಿ ಎತ್ತರವನ್ನು ಹೊಂದಿದೆ. ಈ ರೀತಿಯ ದೀಪಸ್ತಂಭಗಳು ಮಲೆನಾಡಿನ ಪ್ರದೇಶದಲ್ಲಿ ಮಾತ್ರ ಕಾಣಲು ಸಿಗುತ್ತದೆ.

೨. ಶಿಲಾ ಮಾಧ್ಯಮದ ದೀಪಸ್ತಂಭಗಳು:

ಶಿಲೆ ಎಂದರೆ ಕಲ್ಲು. ಕಟ್ಟಡಗಳನ್ನು ನಿರ್ಮಿಸಲು ದೊರೆಯುವ ಕಲ್ಲು ನಿಸರ್ಗವು

ಮಾನವನಿಗಿತ್ತ ವಿಶೇಷವಾದ ಕೊಡುಗೆ ಎಂದೇ ಹೇಳಬಹುದು. ರಾಸಾಯನಿಕ ಅಂಶಗಳಿಂದ ಸಂಯೋಜನೆಗೊಂಡಿರುವ ದೃಷ್ಟಿಯಲ್ಲಿ ಕಲ್ಲುಗಳನ್ನು ಎರಡು ಪ್ರಮುಖ ವಿಧವಾಗಿ ವಿಂಗಡಿಸಬಹುದು. ಭೂಗರ್ಭದ ರಚನೆಯಲ್ಲಿ ಪ್ರಮುಖವಾಗಿ ಮೂರು ಮಾದರಿಯ ಕಲ್ಲುಗಳು ದೊರೆಯುತ್ತವೆ. ಅವು ಅಗ್ನಿಜನ್ಯ ಕಲ್ಲು, ಜಲಜ ಕಲ್ಲು ಮತ್ತು ಪರಿವರ್ತಿತ ಕಲ್ಲುಗಳಾಗಿವೆ[೭]. ಅಗ್ನಿಜನ್ಯ ಕಲ್ಲುಗಳು ಅತಿ ಗಟ್ಟಿಯಾದ ಕಲ್ಲುಗಳು. ಈ ಕಲ್ಲುಗಳು ಮಳೆ ಬಿಸಿಲನ್ನು ಚೆನ್ನಾಗಿ ತಡೆಯುತ್ತವೆ. ಜಲಜ ಕಲ್ಲುಗಳು ಅಗ್ನಿಜನ್ಯ ಕಲ್ಲುಗಳಿಗಿಂತ ಮೃದುವಾಗಿರುತ್ತದೆ. ಪರಿವರ್ತಿತ ಕಲ್ಲುಗಳು ಇವೆರಡಕ್ಕಿಂತಲೂ ಹೆಚ್ಚು ಮೃದುವಾದುದು. ಈ ಮೂರು ವಿಧದ ಕಲ್ಲುಗಳ ರಚನೆಯು ಅಷ್ಟೇ ವಿಶೇಷವಾಗಿದೆ.

ಮಳೆ ಬಿಸಿಲಿನ ಪರಿಣಾಮಗಳು ಸಿಲಿಕ ಹೆಚ್ಚಾಗಿರುವ ಕಲ್ಲಿನ ಮೇಲೆ ಬೀಳುವುದಿಲ್ಲ. ಸಿಲಿಕಾನ್ ಡೈ ಆಕ್ಸೈಡ್ ಹೆಚ್ಚಾಗಿರುವುದು ಅಗ್ನಿಜನ್ಯ ಶಿಲೆಯಲ್ಲಿ ಮಾತ್ರ. ಗ್ರಾನೈಟ್ ಹಾಗೂ ಅಮೃತ ಶಿಲೆಗಳು ಅಗ್ನಿಜನ್ಯ ಶಿಲೆಗಳಾಗಿವೆ. ಪರಿವರ್ತಿತ ಕಲ್ಲುಗಳಲ್ಲಿ ಮಣ್ಣು ಹೆಚ್ಚಾಗಿರುವುದು ಕಾಣುತ್ತದೆ. ಸ್ಲೇಟ್ ಮತ್ತು ಲ್ಯಾಟರೈಟ್ ಎಂಬ ಕಲ್ಲುಗಳು ಪರಿವರ್ತಿತ ಕಲ್ಲುಗಳಾಗಿವೆ.

ಕಟ್ಟಡದ ನಿರ್ಮಾಣದಲ್ಲಿ ಬಳಸುವ ಕಲ್ಲನ್ನು ಸರಳವಾದ ಕಲ್ಲುಗಳು ಎಂದು ಕರೆಯಲಾಗುತ್ತದೆ. ಶಿಲ್ಪ ನಿರ್ಮಾಣದಲ್ಲಿ ಬಳಸಲ್ಪಡುವ ಕಲ್ಲು ಸಣ್ಣ ಕಣಗಳಿಂದ ಕೂಡಿರಬೇಕಾಗುತ್ತದೆ. ಈ ಕಲ್ಲು ನೀರನ್ನು ಹೆಚ್ಚಾಗಿ ಹೀರಬಾರದು. ಕಲ್ಲು ನೀರನ್ನು ಹೆಚ್ಚಾಗಿ ಹೀರಿದರೆ ಅದು ಸವೆಯುವ ಸಾಧ್ಯತೆಗಳು ಹೆಚ್ಚಿರುತ್ತದೆ. ಕೆಲವು ಕಲ್ಲುಗಳ ಹೊರ ಮೈ ಅಲಂಕಾರಿಕವಾಗಿರುತ್ತದೆ. ಇವುಗಳಲ್ಲಿ ಬಣ್ಣಗಳೇ ವಿಶಿಷ್ಟತೆಯನ್ನು ಹೊಂದಿರುತ್ತದೆ. ಕೆಲವು ವಿಧವಾದ ಕಲ್ಲುಗಳ ಮೇಲ್ಮೈಯನ್ನು ಉಜ್ಜಿದಾಗ ಹೊಳಪು ಬರುತ್ತದೆ. ಈ ಕಲ್ಲುಗಳನ್ನು ದೇವಾಲಯ ಹಾಗೂ ಅರಮನೆಯ ನಿರ್ಮಾಣದ ಕೆಲಸದಲ್ಲಿ ಹೆಚ್ಚಾಗಿ ಉಪಯೋಗಿಸಲಾಗುತ್ತದೆ.

ಭಾರತದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಬಣ್ಣಗಳ ಶಿಲೆಗಳು ದೊರೆಯುತ್ತವೆ. ಮಧ್ಯ ಭಾರತದ ದೇವಾಲಯಗಳಲ್ಲಿ ಬಳಪದ ಕಲ್ಲಿನ ಬಳಕೆ, ಪಶ್ಚಿಮದ ದೇವಾಲಯಗಳಲ್ಲಿ ಸುಣ್ಣದ ಕಲ್ಲಿನ ಅಥವಾ ಅಮೃತ ಶಿಲೆ, ದಖ್ಖನಿ ಪ್ರಸ್ಥಭೂಮಿಯಲ್ಲಿ ಕೃಷ್ಣ ಶಿಲೆ ಹೀಗೆ ಪ್ರದೇಶ ಬದಲಾದಂತೆ ಅಲ್ಲಿನ ವಾಸ್ತು ರಚನೆಯಲ್ಲಿ ಬಳಸುವ ಶಿಲೆಗಳು ಬದಲಾಗುತ್ತಾ ಹೋಗುತ್ತವೆ.

ಕರ್ನಾಟಕದ ಬೆಂಗಳೂರಿನ ಬಳಿ ಬೂದು ಬಣ್ಣದ ಗ್ರಾನೈಟ್, ಚಿತ್ರದುರ್ಗ, ಚಾಮುಂಡಿ ಬೆಟ್ಟ ಮತ್ತು ಶಿವಗಂಗೆ ಬೆಟ್ಟಗಳಲ್ಲಿ ಗುಲಾಬಿ ಬಣ್ಣದ ಗ್ರಾನೈಟ್, ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಸಿರು ಬಣ್ಣದ ಕಲ್ಲುಗಳು ಹಾಗೆ ತುರುವೇಕೆರೆ, ಬಾಣಸಂದ್ರ, ಮೈಸೂರುಗಳಲ್ಲಿ

೭ ಕನ್ನಡ ವಿಶ್ವಕೋಶ, ಸಂಪುಟ- ೪, ಮೈಸೂರು ವಿಶ್ವ ವಿದ್ಯಾನಿಲಯ, ಪುಟ- ೨೮೬

ಕಪ್ಪು ಬಣ್ಣದ ಕಲ್ಲುಗಳು ದೊರೆಯುತ್ತವೆ. ಹೀಗೆ ಆಯಾ ಪ್ರದೇಶದ ಹವಾಗುಣಕ್ಕೆ ತಕ್ಕಂತೆ ವಿವಿಧ ಬಣ್ಣಗಳ ಕಲ್ಲುಗಳು ದೊರೆಯುತ್ತವೆ.

ಪ್ರಾಚೀನ ಕಾಲದಲ್ಲಿ ಮಾನವನು ನೈಸರ್ಗಿಕವಾಗಿ ದೊರೆತಂತಹ ಮೊನಚಾದ ಕಲ್ಲುಗಳನ್ನು ಆಯುಧಗಳಂತೆ ಬಳಸಿ ಬೇಟೆಯಾಡುತ್ತಿದ್ದ. ಕಾಲಕ್ರಮೇಣ ನೈಸರ್ಗಿಕವಾಗಿ ದೊರೆತ ಒರಟು ಕಲ್ಲುಗಳಿಗೆ ತನಗೆ ಬೇಕಾದ ಆಕಾರವನ್ನು ಕೊಟ್ಟು ಆಯುಧಗಳನ್ನು ಸಿದ್ಧಪಡಿಸಿಕೊಂಡನು. ಪ್ರಾಚೀನ ಶಿಲಾ ಯುಗದಲ್ಲಿ ಶಿಲೆಗಳನ್ನು ಬಳಸಿಕೊಂಡು ಉಳಿ, ಕೊಡಲಿ, ಬಾಕು ಮುಂತಾದ ಆಯುಧಗಳನ್ನು ತಯಾರಿಸುತ್ತಿದ್ದ ಮಾನವನು ಅದರ ಜೊತೆಗೆ ಅಲಂಕಾರಿಕ ಸಾಮಗ್ರಿಗಳನ್ನೂ ಶಿಲೆಯಲ್ಲಿ ತಯಾರಿಸುತ್ತಿದ್ದುದು ಕಂಡುಬರುತ್ತದೆ. ಅವುಗಳಲ್ಲಿ ಆಭರಣಗಳೂ, ಮಣಿಗಳೂ ವಿಶೇಷವಾದುದಾಗಿವೆ. ವಿವಿಧ ರೀತಿಯ ಶಿಲೆಯ ಮುದ್ರೆಗಳನ್ನೂ ಕೂಡ ಪ್ರಾಗೈತಿಹಾಸದ ಕಾಲದಲ್ಲಿ ಬಳಸಿಕೊಂಡಿರುವುದನ್ನು ನೋಡಬಹುದು.

ಪ್ರಾಚೀನ ಮಾನವನು ಬಳಸಿದ ಕಲ್ಲಿನ ಕಂಬಗಳು ನೈಸರ್ಗಿಕವಾಗಿ ದೊರೆತಂತಹ ನೀಳವಾದ, ಚಪ್ಪಟೆಯಾದ, ಒರಟಾದ ಕಂಬಗಳಾಗಿವೆ. ಕಾಲಕ್ರಮೇಣ ಬಂಡೆಗಲ್ಲನ್ನು ಒಡೆದು ವಾಸಸ್ಥಳಕ್ಕಾಗಿ ತಾನೇ ಕಂಬಗಳನ್ನು ತಯಾರು ಮಾಡಿಕೊಂಡನು. ಚೌಕಾಕಾರದ ಸುತ್ತಳತೆಯನ್ನು ಹೊತ್ತಂತಹ ಕಂಬಗಳ ಮೂಲೆಗಳು ಚೂಪಾಗಿದ್ದರಿಂದ ಅವುಗಳನ್ನು ಕೆತ್ತಿ ಸಮ ಮಾಡಿದಾಗ ಎಂಟು ಮೂಲೆಯು ರೂಪ ತಾಳಿರಬೇಕು. ಆ ಎಂಟು ಮೂಲೆಗಳನ್ನು ಮತ್ತೆ ಕೆತ್ತಿದಾಗ ದುಂಡನೆಯ ಆಕಾರವು ಕಂಬದಲ್ಲಿ ನಿರ್ಮಾಣಗೊಂಡಿರುವ ಸಾಧ್ಯತೆ ಇದೆ. ಹೆಚ್ಚಿನ ಕಂಬಗಳು ಎಂಟು ಮೂಲೆಗಳನ್ನು ಹೊಂದಿರುವುದನ್ನು ಕಾಣುತ್ತೇವೆ.

ಭಾರತದ ಅತಿ ಪುರಾತನವಾದ ಹಾಗೂ ಈಗಲೂ ಅಸ್ತಿತ್ವದಲ್ಲಿ ಇರುವ ಶಿಲಾಸ್ತಂಭಗಳು ಅಶೋಕನ ಕಾಲದ್ದಾಗಿವೆ. ಅವುಗಳಲ್ಲಿ ಏಕಶಿಲೆಯಲ್ಲಿ ನಿರ್ಮಿಸಲಾದ ಸಿಂಹ ಹಾಗೂ ವೃಷಭದ ಶಿಲ್ಪಗಳನ್ನು ಹೊತ್ತಂತಹ ಸ್ತಂಭಗಳು ಹೆಚ್ಚಾಗಿ ದೊರೆಯುತ್ತವೆ. ನಂತರದ ಕಾಲದಲ್ಲಿ ನಿರ್ಮಿಸಲ್ಪಟ್ಟ ಬಾರ್ಹುತ್, ಬೋಧ್‌ಗಯಾ, ಸಾಂಚಿ ಹಾಗೂ ಅಮರಾವತಿಯ ಸ್ತೂಪಗಳಲ್ಲಿನ ಶಿಲ್ಪಗಳೂ ಶಿಲೆಯಿಂದ ರಚಿಸಲ್ಪಟ್ಟ ರಚನೆಗಳಿಗೆ ಉತ್ತಮ ನಿದರ್ಶನದಂತಿವೆ.

ಗುಪ್ತರ ಕಾಲದಲ್ಲೂ ಶಿಲೆಯಿಂದ ನಿರ್ಮಿಸಿದ ಶಿಲ್ಪಗಳನ್ನು ಹೆಚ್ಚಾಗಿ ನೋಡಬಹುದು. ಅಶೋಕನ ಸ್ತಂಭಗಳು ಬೌದ್ಧ ಕಲೆಯನ್ನು ಸಾರುವ ನಿಟ್ಟಿನಲ್ಲಿ ರಚಿಸಲ್ಪಟ್ಟಿರುವುದು ಕಾಣುತ್ತದೆ. ಅವುಗಳನ್ನು ಸ್ಫುಟವಾಗಿ ಚಿತ್ರಿಸಿರುವುದರ ಜೊತೆಗೆ ಪ್ರಮಾಣ ಬದ್ಧವಾಗಿಯೂ ರಚಿಸಲಾಗಿದೆ. ಈ ಶಿಲಾಸ್ತಂಭಗಳು ಯಾವುದೇ ಇತರೆ ಕಟ್ಟಡಗಳ ಜೊತೆಗೆ ಸೇರದಂತೆ ಪ್ರತ್ಯೇಕವಾದ, ವಿಶಿಷ್ಟವಾದ ಸ್ಮಾರಕಗಳಂತೆ ಗುರುತಿಸಲ್ಪಡುವುದೇ ಇದರ ವಿಶೇಷವಾಗಿದೆ. ಭಾರತೀಯತೆಯನ್ನು ಸಾಂಕೇತಿಸುವ ಮತ್ತು ಕಲ್ಪನಾತೀತವಾದ

ಹಾಗೂ ಆಧ್ಯಾತ್ಮಿಕ ಸಂದೇಶವನ್ನು ಸಾರುವ ನಿಟ್ಟಿನಲ್ಲಿ ರಚನೆಗೊಂಡಿರುವ ಈ ಶಿಲಾಸ್ತಂಭಗಳ ರಚನಾಕಾರರು ವಿದೇಶಿಯರಾಗಿದ್ದರು[೮] ಎಂಬುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಅಶೋಕನ ಸ್ತಂಭಗಳಲ್ಲಿ ಸುಮಾರು ಹತ್ತು ಏಕಶಿಲಾ ಸ್ತಂಭಗಳು ಮಾತ್ರ ಉಳಿದಿರುವುದು ಕಂಡು ಬರುತ್ತದೆ. ಇವುಗಳಲ್ಲಿ ಪ್ರಮುಖವಾದ ಎರಡು ವಿಧದ ಸ್ತಂಭಗಳಲ್ಲಿ ಒಂದು ಬಿಹಾರ್ ರಾಜ್ಯದ ಬಾಕ್ರಾದಲ್ಲಿರುವ ಸಿಂಹದ ಆಕೃತಿಯನ್ನು ಹೊತ್ತಿರುವ ಸ್ತಂಭ ಹಾಗೂ ಇನ್ನೊಂದು ಲೌರಿಯಾ ನಂದಘರ್‌ನಲ್ಲಿದೆ. ಪ್ರತಿಯೊಂದು ಸ್ತಂಭವು ಗೋಲಾಕಾರದ ರಚನೆಯನ್ನು ಹೊಂದಿದ್ದು ಮೇಲೆ ಹೋದಂತೆ ತಾಳೆಮರದ ಕಂಡದಂತೆ ಸಪೂರವಾಗುತ್ತಾ ಹೋಗುವುದನ್ನು ಕಾಣುತ್ತೇವೆ. ಸುಮಾರು ಮೂವತ್ತರಿಂದ ನಲವತ್ತು ಅಡಿ ಎತ್ತರವಿರುವ ಈ ಸ್ತಂಭಗಳಿಗೆ ಯಾವುದೇ ಪೀಠವಿಲ್ಲದಿರುವುದು ಇದರ ವಿಶೇಷವಾಗಿದೆ. ಇವು ನೆಲದಿಂದ ನೇರವಾಗಿ ಎದ್ದು ನಿಂತಂತೆ ಕಾಣುತ್ತದೆ.

ಕ್ರಿಸ್ತ ಪೂರ್ವ ಸುಮಾರು ೧೫೦ರಲ್ಲಿ ರಚಿಸಲ್ಪಟ್ಟ ತಾಳೆ ಎಲೆಗಳ ಆಕಾರದ ಕೆತ್ತನೆಯನ್ನು ಹೊಂದಿರುವ ಸ್ತಂಭವೊಂದು ವಿದೇಸಾ (ಬೆಸ್ನಗರ್)ದಲ್ಲಿದೆ[೯]. ಮೌರ್ಯರ ಕಾಲದ ಕೆಲವು ಶಿಲಾಸ್ತಂಭಗಳಿಗೆ ಅಲ್ಲಲ್ಲಿ ಬೋಲ್ಟುಗಳನ್ನು ಹಾಕಿರುವುದನ್ನು ಕಾಣುತ್ತೇವೆ. ಬೌದ್ಧ ಧರ್ಮವು ನಶಿಸುತ್ತಿದ್ದಂತೆ ವೈದಿಕ ಧರ್ಮ ಹಾಗೂ ಜೈನ ಧರ್ಮಗಳು ಅಸ್ತಿತ್ವವನ್ನು ಪಡೆದುಕೊಂಡವು. ವೈದಿಕ ಧರ್ಮ ಹಾಗೂ ಜೈನ ಧರ್ಮಗಳ ದೇವಾಲಯಗಳಲ್ಲೂ ಶಿಲಾ ಮಾಧ್ಯಮದ ಸ್ತಂಭಗಳು ಇರುವುದನ್ನು ಕಾಣುತ್ತೇವೆ.

ದೇವಾಲಯದ ರಚನೆಯನ್ನು ಕಲ್ಲಿನಲ್ಲಿ ನಿರ್ಮಾಣ ಮಾಡಬೇಕು, ಅದು ಶ್ರೇಷ್ಠವಾದುದು ಎಂಬ ಅಭಿಪ್ರಾಯ **ಅಗ್ನಿಪುರಾಣ**ದಲ್ಲಿ ಹೇಳಲಾಗಿದೆ[೧೦]. ಸಾಂಪ್ರದಾಯಿಕ ಶಿಲಾಶಿಲ್ಪ ರಚನೆಯಲ್ಲಿ ಕೆಲವು ವಿಧಿ ವಿಧಾನಗಳನ್ನು ಅಳವಡಿಸಿಕೊಳ್ಳಲಾಗುತ್ತದೆ. ದೇವಮೂರ್ತಿಯನ್ನು ಕೆತ್ತಲು ಒಂದು ವಿಧದ ಶಿಲೆಯನ್ನು ಬಳಸಲಾಗುತ್ತದೆ. ಅವುಗಳ ಪೀಠಗಳನ್ನು ಕೆತ್ತಲು ಇನ್ನೊಂದು ವಿಧದ ಶಿಲೆಯನ್ನು ಬಳಸಿಕೊಳ್ಳಲಾಗುತ್ತದೆ.

ಲಿಂಗ ಪೀಠಗಳ ರಚನೆಯಲ್ಲಿಯೂ ವಿವಿಧ ಶಿಲೆಗಳನ್ನು ಉಪಯೋಗಿಸುವುದು ಪದ್ಧತಿ. ಶಿಲೆಗಳಲ್ಲಿ **ಪುಂ ಶಿಲೆ, ಸ್ತ್ರೀ ಶಿಲೆ** ಹಾಗೂ **ನಪುಂಸಕ ಶಿಲೆ**ಗಳು ಎಂದು

---

೮. In Sharing the credit for these master pieces, it is felt that the symbolism and imagination, their spiritual message to speak, was supplied by the Indian mind, while most of the technical skill, together with certain deco rative elements, were the work of the imported craftsmen.....
Percy Brown:
Indian Architecture (Buddhist and Hindu periods), ಪುಟ– ೯

೯. Percy Brown:
Indian Architecture (Buddhist and Hindu periods), ಪುಟ– ೯

೧೦. Stella kramrisch: **The Hindu temple**, Volume I, ಪುಟ–೧೦೨

ಹೆಸರಿಸಲಾಗುವುದು[೧೧]. ಈ ರೀತಿಯಾಗಿ ಶಿಲೆಗಳನ್ನು ವಿಂಗಡಿಸಿಕೊಂಡು ಅವುಗಳಲ್ಲಿ ಮೂರ್ತಿಗಳನ್ನು ಕೆತ್ತಲಾಗುತ್ತದೆ. ಶಿಲೆಯನ್ನು ಕೆತ್ತಿದಾಗ ಹೊರ ಹೊಮ್ಮುವ ನಾದ, ಧ್ವನಿಯ ಆಧಾರದ ಮೇಲೆ ಹಾಗೂ ಅದರ ರಚನೆಯ ಆಧಾರದ ಮೇಲೆ ಪುಂ ಶಿಲೆ, ಸ್ತ್ರೀ ಶಿಲೆ ಮತ್ತು ನಪುಂಸಕ ಶಿಲೆ ಎಂದು ವಿಂಗಡಿಸಲಾಗುವುದು[೧೨].

ಸಾಂಪ್ರದಾಯಿಕ ದೃಷ್ಟಿಯಲ್ಲಿ ಪ್ರತಿಯೊಂದು ವಿಧದ ಬಣ್ಣದ ಶಿಲೆಗಳಲ್ಲಿ ಒಂದೊಂದು ದೇವತೆಗಳಿರುವರು ಎಂದು ಹೇಳಲಾಗುತ್ತದೆ[೧೩]. ಈ ದೃಷ್ಟಿಯಲ್ಲಿ ಬೆಳ್ಳಗಿರುವ ತಾವರೆಯಂತಿರುವ ಶಿಲೆಯನ್ನು **ಬ್ರಾಹ್ಮಣ ಶಿಲೆ** ಎಂದು ಕರೆಯಲಾಗುತ್ತದೆ. ಬ್ರಾಹ್ಮಣ ಶಿಲೆಗೆ ಚಂದ್ರನು ದೇವತೆ. ಕೆಂಪು ಬಣ್ಣದ ಹುರುಳಿಯ ಆಕಾರವನ್ನು ಹೊಂದಿರುವ ಶಿಲೆಯು **ಕ್ಷತ್ರಿಯ ಶಿಲೆ** ಎನಿಸಿಕೊಳ್ಳುತ್ತದೆ. ಕ್ಷತಿಯ ಶಿಲೆಗೆ ಇಂದ್ರನು ದೇವತೆ. ಹಳದಿ ಬಣ್ಣದ ಇಲ್ಲವೇ ಹಸಿರು ಬಣ್ಣದ ಶಿಲೆಯನ್ನು **ವೈಶ್ಯ ಶಿಲೆ** ಎಂದು ಗುರುತಿಸಲಾಗುತ್ತದೆ. ಭಗನು ಅದಕ್ಕೆ ದೇವತೆಯಾಗಿರುತ್ತಾನೆ. ಕಪ್ಪಗಿರುವ ಊದಿನ ಕಡ್ಡಿಯಂತಿರುವ ಶಿಲೆಯು **ಶೂದ್ರ ಶಿಲೆ** ಎಂದು ಕರೆಸಿಕೊಳ್ಳುತ್ತದೆ. ಶೂದ್ರ ಶಿಲೆಯಲ್ಲಿ ಅಶ್ವಿನಿ ದೇವತೆಯರು ಇರುವರೆಂಬ ನಂಬಿಕೆಯು ಸಂಪ್ರದಾಯದಲ್ಲಿ ಇದೆ.

ಕರ್ನಾಟಕದಲ್ಲಿ ಶಿಲಾ ಮಾಧ್ಯಮದ ದೀಪಸ್ತಂಭಗಳು ದೊರೆಯುತ್ತವೆ. ಅಧ್ಯಯನದ ವ್ಯಾಪ್ತಿಗೆ ಬರುವ ಜಿಲ್ಲೆಗಳಲ್ಲಿನ ದೇವಾಲಯಗಳ ಆವರಣದಲ್ಲಿ ದೊರೆಯುವ ಶಿಲಾ ಮಾಧ್ಯಮದ ದೀಪಸ್ತಂಭಗಳನ್ನು ಕುರಿತು ಇಲ್ಲಿ ವಿಶೇಷವಾಗಿ ವಿವರಿಸಲಾಗಿದೆ.

ಮೈಸೂರು ಜಿಲ್ಲೆಯಲ್ಲಿಯ ಒಂಟಿಕೊಪ್ಪಲಿನಲ್ಲಿರುವ ಶ್ರೀ ವೆಂಕಟರಮಣ ಸ್ವಾಮಿ ದೇವಾಲಯದ ಮುಂದೆ ಏಕಶಿಲೆಯಲ್ಲಿ ನಿರ್ಮಿಸಲಾದ ದೀಪಸ್ತಂಭವಿದೆ. ದೀಪಸ್ತಂಭದ ಪೀಠವು ಚೌಕಾಕಾರವನ್ನು ಹೊಂದಿದ್ದರೂ ಇತರೆ ಸಾಂಪ್ರದಾಯಿಕ ಪೀಠದ ರೀತಿಯಲ್ಲಿಲ್ಲ. ಇತರೆ ಸ್ತಂಭದ ಭಾಗದಲ್ಲಿರುವಂತೆ ಸ್ತಂಭದ ತಳಭಾಗವು ಚೌಕಾಕಾರವನ್ನು ಹೊಂದಿದೆ. ನಂತರದ ಭಾಗವು ಎಂಟು ಮೂಲೆಗಳನ್ನು ಹೊಂದಿದೆ. ಎಂಟು ಮೂಲೆಗಳ ರಚನೆಯ ನಂತರ ಹದಿನಾರು ಮೂಲೆಗಳನ್ನು ಹೊಂದಿರುವ ಭಾಗವನ್ನು ಕಾಣುತ್ತೇವೆ. ಕಂಬದ

---

೧೧. ಪುಂ ಶಿಲೆಯಿಂದ ಲಿಂಗವನ್ನೂ, ಸ್ತ್ರೀ ಶಿಲೆಯಿಂದ ಪೀಠವನ್ನೂ, ನಪುಂಸಕ ಶಿಲೆಯಿಂದ ಪಾದ ಶಿಲೆಯನ್ನೂ ಕೆತ್ತಬೇಕು.....
ಸಂ: ಮಲ್ಲೇಪುರಂ ಜಿ. ವೆಂಕಟೇಶ್: **ಶಿವತತ್ತ್ವ ರತ್ನಾಕರ,** ಕೆಳದಿ ಬಸವರಾಜ ಸಂಕಲನ, ಕನ್ನಡ ವಿಶ್ವವಿದ್ಯಾಲಯ, ಪುಟ–೨೯೬

೧೨. ಇವುಗಳ ಪೈಕಿ ಗಂಭೀರವಾದ ನಾದವನ್ನು ಕೊಡುವಂತಹ ಗಟ್ಟಿಯಾದ, ಲೋಹದಂತಹ, ದೊಡ್ಡದಾದ, ಹಿಪ್ಪಲೀ ಎಲೆಯಂತಹ ಮೇಲ್ಮೈಯುಳ್ಳ ಶಿಲೆಯು ಪುಂ ಶಿಲೆ, ಬಾಳೆ ಎಲೆಯಂತಿದ್ದು ಮೃದುವಾದ ಧ್ವನಿಯನ್ನು ಕೊಡುವ ಶಿಲೆಯು ಸ್ತ್ರೀ ಶಿಲೆ, ಧ್ವನಿ ಯಾವುದೂ ಬಾರದಿರುವುದು, ಸಡಿಲವಾದದ್ದು, ಎರಡೆರಡು ಸಲ ಏಟು ಹಾಕಬೇಕಾಗಿರುವಂತಹ ಶಿಲೆಯು ನಪುಂಸಕ ಶಿಲೆ.....
ಸಂ: ಮಲ್ಲೇಪುರಂ ಜಿ. ವೆಂಕಟೇಶ್: **ಶಿವತತ್ತ್ವ ರತ್ನಾಕರ,** ಕೆಳದಿ ಬಸವರಾಜ ಸಂಕಲನ, ಕನ್ನಡ ವಿಶ್ವವಿದ್ಯಾಲಯ, ಪುಟ–೨೯೬

೧೩. ಸಂ: ಮಲ್ಲೇಪುರಂ ಜಿ. ವೆಂಕಟೇಶ್: **ಶಿವತತ್ತ್ವ ರತ್ನಾಕರ,** ಕೆಳದಿ ಬಸವರಾಜ ಸಂಕಲನ, ಕನ್ನಡ ವಿಶ್ವವಿದ್ಯಾಲಯ, ಪುಟ–೨೯೫


ಚಿತ್ರ ೧೨೫-೧


ಚಿತ್ರ ೧೨೬


ಚಿತ್ರ ೧೨೫-೨


ಚಿತ್ರ ೧೨೫-೩

ತುದಿಯಲ್ಲಿರುವ ಭಾಗವನ್ನು ಪ್ರತ್ಯೇಕವಾಗಿ ಕೆತ್ತಿರುವಂತೆ ಕಾಣುತ್ತದೆ. ಸ್ತಂಭದ ಚೌಕಾಕಾರದ ಭಾಗದ ನಾಲ್ಕೂ ಕಡೆ ಉಬ್ಬುಶಿಲ್ಪಗಳಿವೆ. ಇದನ್ನು ಗರುಡಗಂಬ ಎಂದು ಕರೆಯುತ್ತಾರೆ. ಈ ಸ್ತಂಭವನ್ನು ದೇವಾಲಯದ ಹೊರ ಆವರಣದಲ್ಲಿ ಸ್ಥಾಪಿಸಲಾಗಿದೆ.

ಟಿ. ನರಸೀಪುರ ತಾಲ್ಲೂಕಿನಲ್ಲಿರುವ ಸೋಮನಾಥ ಪುರದಲ್ಲಿ ಶ್ರೀ ಪ್ರಸನ್ನ ಕೇಶವ ದೇವಾಲಯವಿದೆ. ಇದು ಕರ್ನಾಟಕದ ರಾಜರಾದ ಹೊಯ್ಸಳರ ಪ್ರಮುಖ ದೇವಾಲಯಗಳಲ್ಲಿ ಒಂದು. ಹೊಯ್ಸಳ ದೊರೆಯಾದ ಮೂರನೆಯ ನರಸಿಂಹನ ಮಂತ್ರಿ ಸೋಮನಾಥನಿಂದ ಕ್ರಿಸ್ತ ಶಕ ೧೨೬೮ ನಿರ್ಮಾಣಗೊಂಡ ದೇವಾಲಯವಾಗಿದೆ[೧೪]. ಈ ದೇವಾಲಯವನ್ನು ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದ ವಾಸ್ತುಶಿಲ್ಪಗಳಲ್ಲಿ ಅತ್ಯುತ್ತಮವಾದುದು ಎಂದು ಅನೇಕ ಜನ ವಿದ್ವಾಂಸರು ಹೇಳುತ್ತಾರೆ. ಈ ದೇವಾಲಯದ ಆವರಣದ ಹೊರಗೆ ದೀಪಸ್ತಂಭವಿದೆ (ಚಿತ್ರ ೧೨೫– ೧). ಇದರ ಪೀಠದ ಭಾಗವು ಬಹಳ ದೊಡ್ಡದಾದ ವಿಸ್ತೀರ್ಣವನ್ನು ಹೊಂದಿದೆ (ಚಿತ್ರ ೧೨೫– ೨). ಇದನ್ನು ಹಂತಗಳಂತೆ ರಚಿಸಲಾಗಿದೆ.

ಸ್ತಂಭದಲ್ಲಿನ ಚೌಕಾಕಾರದ ರಚನೆಯ ನಂತರ ಅಷ್ಟ ಭುಜದ ಭಾಗವನ್ನು ಸಣ್ಣ ಪಟ್ಟಿಕೆಯಂತೆ ಬಳಸಲಾಗಿದೆ. ಇದರ ಮೇಲೆ ಹದಿನಾರು ಭುಜಗಳನ್ನು ಹೊಂದಿದ ರಚನೆಯು ದಂಡದ ಭಾಗದಲ್ಲಿ ಕಾಣುತ್ತದೆ. ಸ್ತಂಭದ ತುದಿಯಲ್ಲಿ ಘಟದ ರಚನೆ ಮತ್ತು ಚೌಕಾಕಾರದ ಫಲಕದಂತಹ ರಚನೆ ಇರುವುದು ಕಾಣುತ್ತದೆ (ಚಿತ್ರ ೧೨೫– ೩). ಇದರ ತುದಿಯಲ್ಲಿ ಬಲಿಪೀಠದಂತಹ ರಚನೆಯು ಇರುವುದನ್ನು ನೋಡಬಹುದು. ದೇವಾಲಯದಷ್ಟು ವೈಭವಯುತವಾಗಿ ದೀಪಸ್ತಂಭವಿಲ್ಲ ಅಲ್ಲದೆ ಈ ದೀಪಸ್ತಂಭವನ್ನು ಮುಖ್ಯದ್ವಾರದ ಹೊರಗೆ ಮತ್ತು ಸ್ವಲ್ಪ ಪಕ್ಕದಲ್ಲಿ ಸ್ಥಾಪಿಸಲಾಗಿದೆ. ಇಲ್ಲಿನ ಸ್ಥಳ ಪುರಾಣವು ಈ ದೇವಾಲಯದ ವಿಶೇಷತೆಯನ್ನು ಕುರಿತು ಹೇಳುತ್ತದೆ.

ಟಿ. ನರಸೀಪುರ ತಾಲ್ಲೂಕಿನ ಮುಡುಕುತೊರೆಯ ಶ್ರೀ ಮಲ್ಲಿಕಾರ್ಜುನ ದೇವಾಲಯವು ಕೂಡಾ ಪ್ರಾಚೀನವಾದುದೇ ಆಗಿದೆ. ಈ ದೇವಾಲಯವು ಗುಡ್ಡದ ಮೇಲೆ ಇದೆ. ದೇವಾಲಯದ ಆವರಣದಲ್ಲಿ ದೀಪಸ್ತಂಭವನ್ನು ಮೂಲಮೂರ್ತಿಯ ಎದುರಿಗೆ ಇರಿಸದೆ ಪಕ್ಕದಲ್ಲಿ ಸ್ಥಾಪಿಸಿರುವುದನ್ನು ನೋಡಬಹುದು (ಚಿತ್ರ ೧೨೬).

ದೇವಾಲಯವು ಗುಡ್ಡದ ಮೇಲೆ ಇರುವುದರಿಂದ ಜನರಿಗೆ ರಾತ್ರಿಯ ಹೊತ್ತು ಗುಡ್ಡದ ದಾರಿ ಕಾಣುವ ಸಲುವಾಗಿ ದೀಪಸ್ತಂಭವನ್ನು ಪಕ್ಕದಲ್ಲಿ ಸ್ಥಾಪಿಸಿರಬೇಕು. ಈ ಸ್ತಂಭದಲ್ಲಿ ಚೌಕಾಕಾರದ ರಚನೆಯು ಪೀಠದ ಮೇಲೆ ಇದ್ದು ಇದರ ಮೇಲೆ ಅಷ್ಟಭುಜದ ರಚನೆಯು ಇರುವುದು ಕಾಣುತ್ತದೆ. ಸ್ತಂಭದಲ್ಲಿ ನಾಗಬಂಧದ ರಚನೆಯು ಇದೆ. ಸ್ತಂಭದ ಗ್ರೀವದ ಭಾಗದಲ್ಲಿ ಘಟ ಮತ್ತು ಫಲಕದ ಭಾಗಗಳು ಇವೆ. ಇದರ ಮೇಲೆ ಅಧಃ ಪದ್ಮದ ರಚನೆಯು ಇರುವುದು ಕಾಣುತ್ತದೆ.

---

೧೪. S.K. Ramachandra Rao:
The Art and Architecture of Indian Temples, volume III, ಪುಟ– ೩೦೪



ಚಿತ್ರ ೧೨೭



ಚಿತ್ರ ೧೨೮



ಚಿತ್ರ ೧೨೯



ಚಿತ್ರ ೧೩೦

ಕೆ.ಆರ್. ನಗರ ತಾಲ್ಲೂಕಿನ ಚುಂಚನ ಕಟ್ಟೆಯಲ್ಲಿ ಶ್ರೀ ಕೋದಂಡರಾಮ ದೇವಾಲಯವಿದೆ. ಈ ದೇವಾಲಯವು ಪುರಾತನವಾದುದು. ಇದರ ಹೊರ ಆವರಣವು ೧೭ನೆಯ ಶತಮಾನದಲ್ಲಿ ನಿರ್ಮಾಣವಾಗಿದೆ. ಇದರ ಮುಂದೆ ಸುಮಾರು ಹದಿನೈದು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೨೭). ಇದು ಬಹಳ ಸರಳವಾದ ದೀಪಸ್ತಂಭವಾಗಿದ್ದು ಇದನ್ನು ಗರುಡಗಂಬ ಎಂದೂ ಕರೆಯುತ್ತಾರೆ. ಇದರ ಪೀಠದ ನಂತರದ ಚೌಕಾಕಾರದ ರಚನೆಯಲ್ಲಿ ನಾಲ್ಕೂ ದಿಕ್ಕುಗಳಲ್ಲಿ ಉಬ್ಬುಶಿಲ್ಪಗಳನ್ನು ರಚಿಸಲಾಗಿದೆ. ಈ ದೀಪಸ್ತಂಭವನ್ನು ವರ್ಣಮಯವನ್ನಾಗಿಸಲಾಗಿದೆ.

ಕೆ.ಆರ್. ನಗರ ತಾಲ್ಲೂಕಿನಲ್ಲಿರುವ ಶ್ರೀ ಅರ್ಕೇಶ್ವರ ದೇವಾಲಯವು ಸುಮಾರು ಹನ್ನೊಂದನೆಯ ಶತಮಾನದಲ್ಲಿ ನಿರ್ಮಾಣವಾದುದಾಗಿದೆ. ಇಲ್ಲಿರುವ ದೀಪಸ್ತಂಭವು ದೇವಾಲಯದ ಮುಖ್ಯದ್ವಾರದ ಹೊರಗೆ ಇದೆ (ಚಿತ್ರ ೧೨೮). ಇದರ ಎತ್ತರವು ನಲವತ್ತು ಅಡಿಗಳು. ದೀಪಸ್ತಂಭದ ಪೀಠವು ಪುಟ್ಟದಾಗಿದೆ. ಇದರ ಮೇಲೆ ಚೌಕಾಕಾರದ ಸ್ತಂಭದ ಭಾಗ ಇರುವುದನ್ನು ನೋಡಬಹುದು ಇದರ ಎತ್ತರವು ಏಳು ಅಡಿಗಳು.

ಇದರ ಚೌಕಾಕಾರದ ಭಾಗದ ನಾಲ್ಕೂ ಕಡೆಗಳಲ್ಲಿ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಮತ್ತು ಅವುಗಳ ಮೇಲೆ ಕಮಲದ ಆಕಾರವನ್ನು ಹೊಂದಿದ ಉಬ್ಬುಶಿಲ್ಪಗಳೂ ಇವೆ. ಇದರ ನಂತರ ಹದಿನಾರು ಭುಜಗಳನ್ನು ಹೊಂದಿರುವ ರಚನೆ ಇದೆ. ಇವುಗಳ ನಡುವೆ ಅಷ್ಟಭುಜವನ್ನು ಹೊಂದಿರುವ ಪಟ್ಟಿಕೆ ಇರುವುದನ್ನು ನೋಡಬಹುದು. ಸ್ತಂಭದ ತುದಿಯಲ್ಲಿ ಘಟದ ಮತ್ತು ಚೌಕಾಕಾರದ ಫಲಕದ ರಚನೆಯು ಇರುವುದನ್ನು ಕಾಣುತ್ತೇವೆ. ಇಲ್ಲಿ ದೀಪವನ್ನು ಬೆಳಗಲು ಅವಕಾಶವನ್ನು ಮಾಡಲಾಗಿದೆ.

ಚಾಮರಾಜನಗರ ಜಿಲ್ಲೆಯ ನಗರದಲ್ಲಿರುವ ಶ್ರೀ ಚಾಮರಾಜೇಶ್ವರ ದೇವಾಲಯವನ್ನು ಕ್ರಿಸ್ತ ಶಕ ಸುಮಾರು ೧೮೨೬ರಲ್ಲಿ ತನ್ನ ತಂದೆ ಚಾಮರಾಜ ಒಡೆಯರ್‌ರ ಜ್ಞಾಪಕಾರ್ಥವಾಗಿ ಮೈಸೂರಿನ ಅರಸ ಮೂರನೆಯ ಕೃಷ್ಣದೇವರಾಯನು ನಿರ್ಮಿಸಿದ್ದಾನೆ[೧೫]. ಬೃಹದಾಕಾರವನ್ನು ಹೊಂದಿರುವ ದೇವಾಲಯದ ಎದುರು ಹೊರಗಡೆ ಮೂವತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೨೯). ಈ ದೀಪಸ್ತಂಭಕ್ಕೆ ಪೀಠದ ರಚನೆಯನ್ನು ಅಳವಡಿಸಿಲ್ಲ. ಸ್ತಂಭವು ಭೂಮಿ ಮೇಲೆ ನೇರವಾಗಿ ನಿಂತಿದೆ. ಈ ದೀಪಸ್ತಂಭವನ್ನು ನಂದಿಯ ಪುಟ್ಟ ಸ್ತಂಭಕ್ಕೆ ಅಂಟಿಕೊಂಡಂತೆ ಸ್ಥಾಪಿಸಲಾಗಿದೆ.

ಸ್ತಂಭದಲ್ಲಿ ನಾಲ್ಕು ಅಡಿ ಎತ್ತರದ ಚೌಕಾಕಾರದ ರಚನೆಯು ಇದೆ. ಇದರ ಅಗಲವು ಎರಡೂವರೆ ಅಡಿಗಳು. ಈ ಚೌಕಾಕಾರದ ರಚನೆಯಲ್ಲಿ ಒಂದು ಕಡೆ ಮಾತ್ರ

೧೫. S.K. Ramachandra Rao:
The Art and Architecture of Indian Temples, volume III, ಪುಟ– ೨೯೧



ಚಿತ್ರ ೧೩೧



ಚಿತ್ರ ೧೩೨



ಚಿತ್ರ ೧೩೩-೧



ಚಿತ್ರ ೧೩೩-೨

ಉಬ್ಬುಶಿಲ್ಪ ಇರುವುದನ್ನು ನೋಡಬಹುದು. ಚೌಕಾಕಾರದ ನಂತರ ನಾಗಬಂಧದ ರಚನೆ ಇದ್ದು ಅಷ್ಟಭುಜದ ರಚನೆಯು ಇದರ ನಂತರವಿದೆ. ಅಷ್ಟಭುಜದ ಎತ್ತರವು ಮೂರು ಅಡಿ. ಅಷ್ಟಭುಜದ ರಚನೆಯ ಮೇಲೆ ಹದಿನಾರು ಭುಜಗಳನ್ನು ಹೊಂದಿರುವ ಸ್ತಂಭದ ದಂಡ ಭಾಗವು ಇದೆ. ಸ್ತಂಭದ ತುದಿಯಲ್ಲಿ ಘಟದ ರಚನೆಯು ಇದ್ದು ಇದರ ಮೇಲೆ ಚೌಕಾಕಾರದಂತಹ ಫಲಕದ ರಚನೆಯು ಇದೆ. ಇದರ ಮೇಲೆ ಕಲ್ಲಿನ ಮತ್ತೊಂದು ಪುಟ್ಟ ರಚನೆ ಇರುವುದು ಕಾಣುತ್ತದೆ. ಇದರ ಮೇಲೆ ದೀಪವನ್ನು ಬೆಳಗಲಾಗುತ್ತದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಶ್ರೀರಂಗನಾಥ ದೇವಾಲಯವು ಗಂಗರ ಅರಸರು ನಿರ್ಮಿಸಿದ ದೇವಾಲಯವಾಗಿದೆ. ಇದನ್ನು ಗಂಗರ ಸಾಮಂತನಾದ ತಿರುಮಲ್ಲಯ್ಯ ಎಂಬುವವನು ಕ್ರಿಸ್ತ ಶಕ ೯೫೪ರಲ್ಲಿ ನಿರ್ಮಿಸಿದ್ದಾನೆ[೧೬]. ನಂತರ ಇದರ ಪ್ರಾಕಾರಗಳನ್ನು ಹೊಯ್ಸಳರು, ವಿಜಯನಗರ ಅರಸರು ನಿರ್ಮಿಸಿದ್ದಾರೆ ಎಂದು ತಿಳಿದು ಬರುತ್ತದೆ. ಈ ದೇವಾಲಯದ ಆವರಣದಲ್ಲಿ ದೀಪಸ್ತಂಭವಿದೆ. ಇದರಲ್ಲಿ ಸ್ತಂಭವು ಕೆಳಗಿನಿಂದಲೂ ಮೇಲಿನವರೆಗೆ ಹದಿನಾರು ಭುಜದ ರಚನೆಯನ್ನು ಹೊಂದಿರುವುದನ್ನು ಕಾಣುತ್ತೇವೆ. ಈ ದೀಪಸ್ತಂಭವು ದೇವಾಲಯದ ಪ್ರಾಕಾರದ ಮಧ್ಯದಲ್ಲಿದೆ. ಈ ಪ್ರಾಕಾರವನ್ನು ನಂತರದ ದಿನಗಳಲ್ಲಿ ವಿಜಯನಗರ ಅರಸರು ನಿರ್ಮಿಸಿದ್ದಾರೆ ಎಂದು ತಿಳಿದು ಬರುತ್ತದೆ.

ನಾಗಮಂಗಲ ತಾಲ್ಲೂಕಿನ ಶ್ರೀ ಭುವನೇಶ್ವರ ದೇವಾಲಯವು ಕ್ರಿಸ್ತ ಶಕ ೧೧೩೫ರಲ್ಲಿ ಹೊಯ್ಸಳ ರಾಜನಾದ ವಿಷ್ಣುವರ್ಧನನ ಹೆಂಡತಿ ಬಿಮ್ಮಲದೇವಿಯಿಂದ ನಿರ್ಮಾಣಗೊಂಡಿದೆ[೧೭] ಎಂದು ಹೇಳಲಾಗುತ್ತದೆ. ಈ ದೇವಾಲಯದ ಆವರಣದಲ್ಲಿ ಇರುವ ದೀಪಸ್ತಂಭವು ಸುಮಾರು ಇಪ್ಪತ್ತು ಅಡಿ ಎತ್ತರವಿದೆ (ಚಿತ್ರ ೧೩೦). ಇದರ ಪೀಠವು ಸರಳವಾಗಿದ್ದು ಪೀಠದ ನಂತರ ಚೌಕಾಕಾರದ ರಚನೆ ಇದೆ. ಇದರ ನಂತರ ಅಷ್ಟ ಭುಜದ ರಚನೆಯು ಇರುವುದನ್ನು ನೋಡಬಹುದು. ದೀಪಸ್ತಂಭದ ತುದಿಯಲ್ಲಿ ಲಿಂಗಾಕಾರದ ಪುಟ್ಟ ರಚನೆಯು ಇರುವುದನ್ನು ಕಾಣಬಹುದು. ದೀಪವನ್ನು ಬೆಳಗಲು ಅನುಕೂಲವಾಗಲೆಂದು ಈ ರಚನೆಯನ್ನು ಮಾಡಿರುತ್ತಾರೆ.

ಕೆ.ಆರ್. ಪೇಟೆ ತಾಲ್ಲೂಕಿನ ಸಾಸಲುನಲ್ಲಿ ಎರಡು ಪುರಾತನ ದೇವಾಲಯಗಳಿವೆ. ಒಂದು ಸೋಮೇಶ್ವರ ಮತ್ತೊಂದು ಶಂಭು ಲಿಂಗೇಶ್ವರ. ಶಂಭುಲಿಂಗೇಶ್ವರ ದೇವಾಲಯದ ದೀಪಸ್ತಂಭವು ಸುಮಾರು ಹತ್ತು ಅಡಿ ಎತ್ತರದ್ದಾಗಿದೆ (ಚಿತ್ರ ೧೩೧). ಸೋಮೇಶ್ವರ ದೇವಾಲಯದ ಹೊರ ಆವರಣದಲ್ಲಿ ಹತ್ತು ಅಡಿಯ ದೀಪಸ್ತಂಭ (ಚಿತ್ರ ೧೩೨) ಮತ್ತು ದೇವಾಲಯದ ಹೊರ ಆವರಣದಿಂದ ಸುಮಾರು ಇಪ್ಪತ್ತು ಅಡಿ ದೂರದಲ್ಲಿ ಸುಮಾರು

---

೧೬. S.K. Ramachandra Rao:
The Art and Architecture of Indian Temples, volume III, ಪುಟ-೨೮೮

೧೭. S.K. Ramachandra Rao:
The Art and Architecture of Indian Temples, volume III, ಪುಟ-೨೮೬



ಚಿತ್ರ ೧೩೪



ಚಿತ್ರ ೧೩೫



ಚಿತ್ರ ೧೩೬



ಚಿತ್ರ ೧೩೭

ಇಪ್ಪತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೩೩- ೧). ಈ ಸ್ತಂಭದ ತುದಿಯಲ್ಲಿ ಘಟ ಮತ್ತು ಫಲಕಗಳ ನಂತರ ಕಲ್ಲಿನಲ್ಲಿ ನಿರ್ಮಿಸಿದ ವಿಶೇಷವಾದ ರಚನೆಯು ಇರುವುದನ್ನು ಕಾಣಬಹುದು (ಚಿತ್ರ ೧೩೩- ೨).

ಪಾಂಡವ ಪುರ ತಾಲ್ಲೂಕಿನ ಮೇಲುಕೋಟೆಯಲ್ಲಿರುವ ಪೇಟೆ ಆಂಜನೇಯ ದೇವಾಲಯದ ಎದುರು ಸುಮಾರು ಇಪ್ಪತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೩೪). ಈ ದೀಪಸ್ತಂಭಕ್ಕೆ ಪೀಠವನ್ನು ರಚಿಸಲಾಗಿಲ್ಲ. ಸ್ತಂಭದ ಚೌಕಾಕಾರದ ಭಾಗದಲ್ಲಿ ಉಬ್ಬುಶಿಲ್ಪಕ್ಕೆ ಬದಲಾಗಿ ಅಲಂಕಾರಿಕ ವಿನ್ಯಾಸಗಳನ್ನು ಚಿತ್ರಿಸಲಾಗಿದೆ. ಚೌಕಾಕಾರವು ಒಂದೂವರೆ ಅಡಿ ಎತ್ತರವನ್ನೂ ಮತ್ತು ಒಂದೂವರೆ ಅಡಿ ಅಗಲವನ್ನೂ ಹೊಂದಿದೆ. ಇದರ ಮೇಲೆ ನಾಗಬಂಧವಿದ್ದು ನಂತರ ಎರಡು ಅಡಿ ಎತ್ತರದ ಅಷ್ಟಭುಜದ ರಚನೆಯನ್ನು ಹೊಂದಿದೆ. ಈ ಅಷ್ಟಭುಜದ ರಚನೆಯ ಮೇಲೆ ಹದಿನಾರು ಭುಜದ ರಚನೆಯನ್ನು ಹೊಂದಿದ್ದೂ ಅದು ಕೂಡಾ ಎರಡು ಅಡಿ ಎತ್ತರವನ್ನು ಹೊಂದಿದೆ.

ಸ್ತಂಭದ ಉಳಿದ ಲಂಬವಾದ ಭಾಗವು ತುದಿಯವರೆಗೂ ವೃತ್ತಾಕಾರವನ್ನು ಹೊಂದಿದ್ದು ಮೇಲೆ ತುದಿಯಲ್ಲಿ ಅಲಂಕಾರಿಕವಾದ ಲಂಬವಾದ ಪಟ್ಟಿಕೆಗಳನ್ನು ಹೊಂದಿದೆ. ಇದರ ನಂತರ ಘಟ ಮತ್ತು ಚೌಕಾಕಾರದ ಫಲಕವಿದ್ದು ಇದರ ಮೇಲೆ ಪುಟ್ಟದಾಗಿ ಲಂಬವಾದ ಕಲ್ಲಿನ ರಚನೆ ಇರುವುದು ಕಾಣುತ್ತದೆ. ಇದೊಂದು ವಿಶಿಷ್ಟವಾದ ದೀಪಸ್ತಂಭವಾಗಿದೆ.

ಪಾಂಡವ ಪುರ ತಾಲ್ಲೂಕಿನ ಮೇಲುಕೋಟೆಯ ಶ್ರೀ ಚೆಲುವ ನಾರಾಯಣಸ್ವಾಮಿ ದೇವಾಲಯವು ದಕ್ಷಿಣ ಭಾರತದ ವೈಷ್ಣವ ಧರ್ಮದ ನಾಲ್ಕು ಪ್ರಮುಖ ದೇವಾಲಯಗಳಲ್ಲಿ ಒಂದು. ಮೇಲುಕೋಟೆಯನ್ನು ತಿರುನಾರಾಯಣ ಪುರ ಅಥವಾ ಯದುಗಿರಿ ಎಂದೂ ಕರೆಯಲಾಗುತ್ತದೆ. ಈ ದೇವಾಲಯವು ಹದಿನಾಲ್ಕನೆಯ ಶತಮಾನಕ್ಕೂ ಹಿಂದಿನದಾಗಿದೆ. ಈ ದೇವಾಲಯವು ಹೊಯ್ಸಳ ದೊರೆಯಾದ ವಿಷ್ಣುವರ್ಧನನಿಂದ ನಿರ್ಮಾಣಗೊಂಡಿದೆ ಎಂದು ಹೇಳಲಾಗುತ್ತದೆ.

ಚೆಲುವನಾರಾಯಣ ದೇವಾಲಯದ ಎದುರು ನಲವತ್ತು ಅಡಿ ಎತ್ತರದ ದೀಪಸ್ತಂಭವಿದೆ. ಇದನ್ನು ಗರುಡಗಂಬ ಎಂದೂ ಕರೆಯುತ್ತಾರೆ (ಚಿತ್ರ ೧೩೫). ದೇವಾಲಯಕ್ಕೆ ಅಭಿಮುಖವಾಗಿರುವ ಕಡೆ ಮಂಟಪವನ್ನು ನಿರ್ಮಿಸಲಾಗಿದೆ. ಈ ದೀಪಸ್ತಂಭಕ್ಕೆ ಎರಡು ಅಡಿ ಎತ್ತರದ ಪೀಠವಿದೆ. ಇದರ ನಂತರ ಐದು ಅಡಿ ಎತ್ತರದ ಚೌಕಾಕಾರದ ರಚನೆಯು ಇರುವುದು ಕಾಣುತ್ತದೆ. ಈ ಚೌಕಾಕಾರದ ರಚನೆಯಲ್ಲಿ ಅದರ ಎತ್ತರಕ್ಕೂ ಉಬ್ಬುಶಿಲ್ಪವನ್ನು ರಚಿಸಲಾಗಿದೆ. ಇದರ ನಂತರದ ಭಾಗದಲ್ಲಿ ಒಂದೂವರೆ ಅಡಿ ಎತ್ತರದ ಎಂಟು ಮೂಲೆಯ ರಚನೆಯು ಇದೆ. ಇದರ ಮೇಲೆ ಸ್ತಂಭದ ಉದ್ದಕ್ಕೂ ಹದಿನಾರು ಭುಜಗಳನ್ನು ಹೊಂದಿದ ರಚನೆಯು ಇರುವುದು ಕಾಣುತ್ತದೆ. ಸ್ತಂಭದ ತುದಿಯಲ್ಲಿ ಘಟದ ರಚನೆ ಮತ್ತು ಚೌಕಾಕಾರದ ಫಲಕವಿದ್ದು ಇದರ ಮಧ್ಯದಲ್ಲಿ ಕಲ್ಲಿನ ಪುಟ್ಟ ರಚನೆ ಇರುವುದನ್ನು ನೋಡಬಹುದು.



ಚಿತ್ರ ೧೩೮



ಚಿತ್ರ ೧೩೯



ಚಿತ್ರ ೧೪೦



ಚಿತ್ರ ೧೪೧

ಹಾಸನ ಜಿಲ್ಲೆಯ ಬೇಲೂರಿನ ವಿಜಯ ನಾರಾಯಣ ದೇವಾಲಯವಿದೆ. ಇದು ಚೆನ್ನಕೇಶವ ದೇವಾಲಯ ಎಂದು ಪ್ರಸಿದ್ಧಿಯನ್ನು ಪಡೆದಿದೆ. ಈ ದೇವಾಲಯವು ಹೊಯ್ಸಳ ದೊರೆಯಾದ ವಿಷ್ಣುವರ್ಧನನಿಂದ ಕ್ರಿಸ್ತ ಶಕ ೧೧೪೭ರಲ್ಲಿ ನಿರ್ಮಾಣಗೊಂಡಿದೆ[೧೮]. ಈ ದೇವಾಲಯದ ಆವರಣದಲ್ಲಿ ೪೦ ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೩೬). ಗುರುತ್ವಾಕರ್ಷಣ ಶಕ್ತಿಯ ಬಿಂದುವಿನ ಗತಿಯಲ್ಲಿ ಈ ಕಂಬವನ್ನು ಚಾಕಚಕ್ಯತೆಯಿಂದ ನಿರ್ಮಿಸಲಾಗಿದೆ[೧೯]. ಈ ದೀಪಸ್ತಂಭದ ಪೀಠವು ದೇವಾಲಯದ ಅಡಿಪಾಯದಂತೆ ನಕ್ಷತ್ರಾಕಾರದ ರಚನೆಯನ್ನು ಹೊಂದಿದೆ. ಇದು ಮೂರು ಅಡಿ ಎತ್ತರವನ್ನು ಹೊಂದಿದೆ. ಸ್ತಂಭವು ಹತ್ತು ಅಡಿ ಎತ್ತರದ ಚೌಕಾಕಾರದ ರಚನೆಯನ್ನು ಹೊಂದಿದ್ದು ಇದರ ಮೇಲೆ ಅಷ್ಟಭುಜದ ರಚನೆಯನ್ನು ಹೊಂದಿದೆ. ಸ್ತಂಭದ ತುದಿಯಲ್ಲಿ ಘಟದ ರಚನೆಯಿದ್ದು ಇದರ ಮೇಲೆ ಚೌಕಾಕಾರದ ಫಲಕವು ಇರುವುದನ್ನು ನೋಡಬಹುದು.

ನುಗ್ಗೇಹಳ್ಳಿಯ ಸದಾಶಿವ ದೇವಾಲಯದ ಮುಂದೆ ಹನ್ನೆರಡು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೩೭). ದೀಪಸ್ತಂಭದ ಮೂರು ಅಡಿ ಎತ್ತರದ ಪೀಠದ ಭಾಗವನ್ನು ಕಲ್ಲು ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಇದರ ನಂತರ ಚೌಕಾಕಾರದ ರಚನೆಯು ಮೂರು ಅಡಿ ಎತ್ತರವನ್ನು ಹೊಂದಿದ್ದು, ಇದರ ಮೇಲ್ಮೈ ಒರಟಾಗಿದೆ. ಚೌಕಾಕಾರದ ನಂತರದ ದಂಡದ ಭಾಗವು ತುದಿಯವರೆಗೂ ಅಷ್ಟ ಭುಜಗಳನ್ನು ಹೊಂದಿದ್ದು ಅಲ್ಲಲ್ಲಿ ಪಟ್ಟಿಕೆಗಳಿವೆ. ದಂಡದ ಭಾಗದ ನಂತರ ತುದಿಯಲ್ಲಿ ವೃತ್ತಾಕಾರದ ರಚನೆ ಮತ್ತು ಚೌಕಾಕಾರದ ಫಲಕದ ರಚನೆಯು ಇದೆ.

ಆಲೂರು ತಾಲ್ಲೂಕಿನ ಗೊರೂರಿನಲ್ಲಿ ಇರುವ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯವು ಕ್ರಿಸ್ತ ಶಕ ೧೫೮೭ರಲ್ಲಿ ನಿರ್ಮಾಣಗೊಂಡಿದೆ[೨೦]. ಈ ದೇವಾಲಯವು ಪುರಾತನವಾದುದು. ಈ ದೇವಾಲಯದ ಆವರಣದಲ್ಲಿ ಹನ್ನೆರಡು ಅಡಿ ಎತ್ತರದ ದೀಪಸ್ತಂಭವಿದೆ. ಈ ದೀಪಸ್ತಂಭಕ್ಕೆ ಎರಡು ಅಡಿ ಎತ್ತರದ ಪೀಠವಿದೆ (ಚಿತ್ರ ೧೩೮). ಪೀಠದ ನಂತರದ ಸ್ತಂಭದ ಭಾಗವು ಒಂದು ಅಡಿ ಅಗಲ ಮತ್ತು ಒಂದೂವರೆ ಅಡಿ ಎತ್ತರದ ಚೌಕಾಕಾರದ ರಚನೆಯನ್ನು ಹೊಂದಿದೆ. ಚೌಕಾಕಾರದ ನಂತರದ ಭಾಗವು ಅಷ್ಟಭುಜದ ರಚನೆಯನ್ನು ಹೊಂದಿದ್ದು ಸ್ತಂಭದ ತುದಿಯಲ್ಲಿ ಘಟದ ಭಾಗವಷ್ಟೇ ಉಳಿದಿರುವುದು ಕಾಣುತ್ತದೆ. ದೀಪಸ್ತಂಭಕ್ಕೆ ಅಂಟಿಕೊಂಡಂತೆ ದೇವಮೂರ್ತಿಗೆ ಅಭಿಮುಖವಾಗಿ ಗರುಡನ ಶಿಲ್ಪವು ಇರುವುದನ್ನು ನೋಡಬಹುದು.

---

೧೮. S.K. Ramachandra Rao:
The Art and Architecture of Indian Temples, volume III, ಪುಟ–೨೨೮

೧೯. ಲೇಖನ– **ಚನ್ನಕೇಶವನ ಬೇಲೂರು ಶಿಲ್ಪಕಲೆಯ ತವರೂರು**, ಕರ್ಮವೀರ, ಯುಗಾದಿ ವಿಶೇಷಾಂಕ, ೨೦೦೩, ಪುಟ– ೩೫

೨೦. S.K. Ramachandra Rao:
The Art and Architecture of Indian Temples, volume III, ಪುಟ–೨೪೯

ಅರಕಲಗೂಡು ತಾಲ್ಲೂಕಿನ ರಾಮನಾಥಪುರದಲ್ಲಿ ಸುಬ್ರಹ್ಮಣ್ಯೇಶ್ವರ ದೇವಾಲಯವಿದೆ. ಸುಬ್ರಹ್ಮಣ್ಯೇಶ್ವರ ದೇವಾಲಯವು ಪ್ರಸಿದ್ಧವಾದ ದೇವಾಲಯವಾಗಿದೆ. ಈ ದೇವಾಲಯದ ಆವರಣದಲ್ಲಿ ಹತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೩೯). ಈ ದೀಪಸ್ತಂಭಕ್ಕೆ ಪೀಠದ ರಚನೆಯನ್ನು ಅಳವಡಿಸಲಾಗಿಲ್ಲ. ಸ್ತಂಭದ ಕೆಳಗಡೆ ಚೌಕಾಕಾರದ ಒಂದು ಅಡಿ ಎತ್ತರದ ರಚನೆ ಇದೆ. ಸ್ತಂಭದ ತಳಭಾಗದ ಅಗಲವು ಒಂದು ಅಡಿ ಇದ್ದು ಚೌಕಾಕಾರದ ರಚನೆಯ ನಾಲ್ಕೂ ಮೂಲೆಗಳಲ್ಲಿ ನಾಗಬಂಧದ ರಚನೆಯು ಇದೆ. ಇದರ ಮೇಲಿನ ಸ್ತಂಭವು ಅಷ್ಟಭುಜದ ಪಟ್ಟಿಕೆಯನ್ನು ಹೊಂದಿದ್ದು ನಂತರದ ಇಡೀ ಸ್ತಂಭವು ಹದಿನಾರು ಭುಜದ ರಚನೆಯನ್ನು ಹೊಂದಿದೆ. ಸ್ತಂಭದ ತುದಿಯಲ್ಲಿ ಘಟದ ರಚನೆ ಮತ್ತು ಚೌಕಾಕಾರದ ರಚನೆಯು ಇದೆ. ಫಲಕದ ನಡುವೆ ಲಂಬವಾದ ಪಟ್ಟ ರಚನೆ ಇರುವುದನ್ನು ನೋಡಬಹುದು.

ಅರಕಲಗೂಡು ತಾಲ್ಲೂಕಿನ ರಾಮನಾಥ ಪುರದಲ್ಲಿ ಪಟ್ಟಾಭಿರಾಮ ದೇವಾಲಯವಿದೆ. ಈ ದೇವಾಲಯದ ಹೊರಗಡೆ ಇಪ್ಪತ್ತೈದು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೪೦). ಈ ದೀಪಸ್ತಂಭಕ್ಕೆ ದೊಡ್ಡದಾದ ಪೀಠವಿದ್ದು ಇದರ ಎತ್ತರವು ಒಂದೂವರೆ ಅಡಿಯಾಗಿದೆ. ದೇವಾಲಯದ ಎದುರಿಗಿರುವ ದೀಪಸ್ತಂಭವು ಸೇರಿದಂತೆ ಮಂಟಪವನ್ನು ರಚಿಸಲಾಗಿದೆ. ದೀಪಸ್ತಂಭವು ಮುಖ್ಯದ್ವಾರಕ್ಕೆ ಎದುರಾಗಿರದೆ ಸ್ವಲ್ಪ ಪಕ್ಕದಲ್ಲಿ ಸ್ಥಾಪಿಸಲಾಗಿದೆ.

ದೀಪಸ್ತಂಭದ ಚೌಕಾಕಾರದ ಭಾಗದಲ್ಲಿ ಮೂರು ಕಡೆಗಳಲ್ಲಿ ಉಬ್ಬುಶಿಲ್ಪದ ರಚನೆಯು ಇರುವುದನ್ನು ಕಾಣಬಹುದು. ಈ ಉಬ್ಬುಶಿಲ್ಪದ ರಚನೆಯಲ್ಲಿ ಹನುಮಂತನ ಮತ್ತು ಗರುಡನ ಶಿಲ್ಪಗಳಿವೆ. ಇದರ ಮೂಲೆಗಳಲ್ಲಿ ನಾಗಬಂಧದ ರಚನೆ ಇದ್ದು ಇದರ ಮೇಲಿನ ಸ್ತಂಭದ ಭಾಗವು ಅಷ್ಟಭುಜಗಳನ್ನು ಹೊಂದಿದೆ. ಸ್ತಂಭದ ತುದಿಯಲ್ಲಿ ಘಟದ ರಚನೆ ಮತ್ತು ಚೌಕಾಕಾರದ ಫಲಕದ ರಚನೆಗಳಿವೆ. ಇಲ್ಲಿರುವ ಮಂಟಪವೂ ಸೇರಿದಂತೆ ಇಡೀ ದೀಪಸ್ತಂಭವನ್ನು ಸುಣ್ಣದಿಂದ ಅಲಂಕರಿಸಲಾಗಿರುವುದು ಕಾಣುತ್ತದೆ.

ತುಮಕೂರು ಜಿಲ್ಲೆಯ ಕೈದಾಳದಲ್ಲಿರುವ ಶ್ರೀ ಚೆನ್ನಕೇಶವ ದೇವಾಲಯವನ್ನು ಹೊಯ್ಸಳ ದೊರೆಯಾದ ಒಂದನೆಯ ನರಸಿಂಹನ ಸಾಮಂತ ಬಾಚಿ ಎಂಬುವವನು ಕ್ರಿಸ್ತ ಶಕ ೧೧೫೦ರಲ್ಲಿ ನಿರ್ಮಿಸಿದ್ದಾನೆ[೨೧]. ಚೆನ್ನಕೇಶವ ದೇವಾಲಯದ ಮುಖ್ಯದ್ವಾರದ ಹೊರಗೆ ಮೂವತ್ತು ಅಡಿಯ ದೀಪಸ್ತಂಭವಿದೆ (ಚಿತ್ರ ೧೪೧). ಇದು ಮೂರು ಅಡಿ ಎತ್ತರ ಮತ್ತು ಮೂರೂವರೆ ಅಡಿ ಅಗಲದ ಪೀಠವನ್ನು ಹೊಂದಿದೆ.

ಸ್ತಂಭದ ಚೌಕಾಕಾರದ ರಚನೆಯು ಐದು ಅಡಿಗಳಷ್ಟು ಎತ್ತರ ಮತ್ತು ಒಂದೂವರೆ ಅಡಿಯ ಅಗಲದ್ದಾಗಿದೆ. ಈ ರಚನೆಯ ನಾಲ್ಕು ದಿಕ್ಕುಗಳಲ್ಲಿ ಒಂದು ಅಡಿ ಎತ್ತರದ ಉಬ್ಬುಶಿಲ್ಪಗಳಿವೆ. ಚೌಕಾಕಾರದ ನಂತರದ ಸ್ತಂಭವು ಅಷ್ಟಭುಜಗಳನ್ನು ಹೊಂದಿದ್ದು

---

೨೧. S.K. Ramachandra Rao:
The Art and Architecture of Indian Temples, volume III, ಪುಟ–೩೭೯



ಚಿತ್ರ ೧೪೨



ಚಿತ್ರ ೧೪೩



ಚಿತ್ರ ೧೪೪



ಚಿತ್ರ ೧೪೫

ಇದರ ಮೇಲೆ ಘಟದ ರಚನೆ ಮತ್ತು ಚೌಕಾಕಾರದ ಫಲಕದ ರಚನೆಯು ಇದೆ. ಇಲ್ಲಿ ದೀಪವನ್ನು ಬೆಳಗುತ್ತಾರೆ.

ತುಮಕೂರು ತಾಲ್ಲೂಕಿನ ದೇವರಾಯನ ದುರ್ಗದಲ್ಲಿ ಇರುವ ಶ್ರೀ ಯೋಗಾ ನರಸಿಂಹಸ್ವಾಮಿ ದೇವಾಲಯವನ್ನು ಮೈಸೂರು ಅರಸನಾದ ಕಂಠೀರವ ನರಸರಾಜ ಒಡೆಯರ್‌ರು ನಿರ್ಮಿಸಿದ್ದಾರೆ. ದೇವರಾಯನ ದುರ್ಗ ಎನ್ನುವುದು ಒಂದು ಬೆಟ್ಟ. ಇದರ ಮೇಲೆ ಇರುವ ದೇವಾಲಯವು ಹದಿನಾರನೆಯ ಶತಮಾನದ ನಿರ್ಮಾಣವಾಗಿದೆ[೨೨]. ಈ ದೇವಾಲಯದ ಮುಖ್ಯದ್ವಾರದ ಎದುರು ದೀಪಸ್ತಂಭವಿದೆ (ಚಿತ್ರ ೧೪೨). ಇದರ ಎತ್ತರವು ಹದಿನೈದು ಅಡಿ. ಈ ದೀಪಸ್ತಂಭಕ್ಕೆ ಆರು ಅಂಗುಲ ಎತ್ತರ ಮತ್ತು ನಾಲ್ಕು ಅಡಿ ಅಗಲದ ಪೀಠವಿದೆ. ಈ ಪೀಠದ ನಾಲ್ಕೂ ಮೂಲೆಗಳಲ್ಲಿ ಪುಟ್ಟ ಗಾತ್ರದ ಬಲಿಪೀಠಗಳನ್ನು ಇರಿಸಲಾಗಿದೆ.

ಸ್ತಂಭದ ಚೌಕಾಕಾರದ ಭಾಗವು ಎರಡು ಅಡಿ ಎತ್ತರವನ್ನು ಹೊಂದಿದೆ. ಸ್ತಂಭದ ಉಳಿದ ಭಾಗವು ಸಮಾನ ಎತ್ತರದಲ್ಲಿ ಅಷ್ಟಭುಜ ಮತ್ತು ಹದಿನಾರು ಭುಜಗಳನ್ನು ಹೊಂದಿದೆ. ಇವುಗಳ ನಡುವೆ ಪಟ್ಟಿಕೆಯ ರಚನೆಯೂ ಇದೆ. ಪಟ್ಟಿಕೆಯ ಭಾಗದ ನಂತರ ಚೌಕಾಕಾರದ ರಚನೆ ಇದ್ದು ಇದರ ಮೇಲೆ ದೀಪವನ್ನು ಬೆಳಗಲು ಬೋಗುಣಿಯ ಆಕಾರವನ್ನು ರಚಿಸಲಾಗಿದೆ. ಈ ದೀಪಸ್ತಂಭದಲ್ಲಿ ದೇವಾಲಯದ ಮೂರ್ತಿಗೆ ಅಭಿಮುಖವಾಗಿ ಗರುಡನ ಶಿಲ್ಪವನ್ನು ಕೆತ್ತಿದ್ದಾರೆ.

ಸಿರಾ ತಾಲ್ಲೂಕಿನ ಬರಗೂರಿನಲ್ಲಿ ಶ್ರೀ ಮಹೇಂದ್ರೇಶ್ವರ ದೇವಾಲಯವಿದೆ. ಈ ದೇವಾಲಯವನ್ನು ನೊಳಂಬರ ಅರಸನಾದ ಒಂದನೆಯ ಮಹೇಂದ್ರನು ಕ್ರಿಸ್ತ ಶಕ ೮೭೮ರಲ್ಲಿ ನಿರ್ಮಿಸಿದ್ದಾನೆ ಎಂದು ತಿಳಿದು ಬರುತ್ತದೆ[೨೩]. ಈ ದೇವಾಲಯದ ಆವರಣದ ಹೊರಗೆ ಸ್ವಲ್ಪ ಪಕ್ಕದಲ್ಲಿ ಹನ್ನೆರಡು ಅಡಿ ಎತ್ತರದ ದೀಪಸ್ತಂಭವಿದೆ. ಈ ದೀಪಸ್ತಂಭವು ಸಾಧಾರಣವಾದ ಕಂಬವಾಗಿದೆ. ಸ್ತಂಭದ ಮೇಲೆ ದೀಪವನ್ನು ಬೆಳಗಲು ಅನುಕೂಲವಿರುವುದು ಕಾಣುತ್ತದೆ. ಪ್ರಸ್ತುತ ಇದನ್ನು ಬಳಸಲಾಗುತ್ತಿಲ್ಲ. ಈ ದೀಪಸ್ತಂಭದಲ್ಲಿ ಉಬ್ಬುಶಿಲ್ಪಗಳಿಲ್ಲ.

ತುರುವೇಕೆರೆ ತಾಲ್ಲೂಕಿನಲ್ಲಿ ಬಸವೇಶ್ವರ ದೇವಾಲಯವಿದೆ. ಇದು ಇತ್ತೀಚಿನ ದೇವಾಲಯವಾಗಿದೆ. ಈ ದೇವಾಲಯದ ಎದುರು ಇಪ್ಪತ್ತೈದು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೪೩). ಈ ದೀಪಸ್ತಂಭವು ಒಂದೂವರೆ ಅಡಿ ಎತ್ತರದ ಪೀಠವನ್ನು ಹೊಂದಿದೆ. ಸ್ತಂಭದ ತಳಭಾಗದಲ್ಲಿ ಚೌಕಾಕಾರದ ರಚನೆಯು ಇದೆ. ಈ ರಚನೆಯಲ್ಲಿ ಮೂಲಮೂರ್ತಿಗೆ

---

೨೨. S.K. Ramachandra Rao:
The Art and Architecture of Indian Temples, volume III, ಪುಟ–೩೧೬

೨೩. ಕೆಂಕೆರೆ ಹನುಮಂತೇಗೌಡ:
ಲೇಖನ– **ಗತ ವೈಭವದ ಘನ ಮೇರು ನಮ್ಮೂರು**– ಬರಗೂರು, ಪುಟ–೨

ಮುಖ ಮಾಡಿದಂತೆ ಉಬ್ಬುಶಿಲ್ಪದ ರಚನೆಯು ಇದೆ. ಉಳಿದ ಮೂರೂ ದಿಕ್ಕುಗಳಲ್ಲಿ ಉಬ್ಬುಶಿಲ್ಪಗಳಿಲ್ಲ.

ಚೌಕಾಕಾರದ ನಂತರದ ಸ್ತಂಭವು ಹದಿನಾರು ಭುಜಗಳನ್ನು ಸ್ತಂಭದ ತುದಿಯವರೆಗೂ ಹೊಂದಿದೆ. ಈ ಸ್ತಂಭದ ಮಧ್ಯದಲ್ಲಿ ಅಲ್ಲಲ್ಲಿ ಎರಡು ಕಡೆ ಅಷ್ಟಭುಜದ ರಚನೆಯನ್ನು ಪಟ್ಟಿಕೆಯಂತೆ ಬಳಸಲಾಗಿದೆ. ಸ್ತಂಭದ ತುದಿಯು ಘಟವನ್ನು ಮತ್ತು ಚೌಕಾಕಾರದ ಫಲಕವನ್ನು ಹೊಂದಿದ್ದು ಇದರ ಮಧ್ಯದಲ್ಲಿ ಲಂಬವಾದ ಕಲ್ಲಿನ ರಚನೆಯು ಇರುವುದು ಕಾಣುತ್ತದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಶ್ರೀ ಚೆನ್ನಕೇಶವ ದೇವಾಲಯವಿದೆ. ಮೈಸೂರು ಜಿಲ್ಲೆಯಲ್ಲಿ ಇರುವ ಸೋಮನಾಥ ಪುರದ ದೇವಾಲಯವನ್ನು ನಿರ್ಮಿಸಿದ ಸೋಮ-ದಂಡನಾಯಕನೇ ಈ ದೇವಾಲಯವನ್ನೂ ಕೂಡಾ ನಿರ್ಮಿಸಿದ್ದಾನೆ[೨೪]. ಈ ದೇವಾಲಯದ ಎದುರು ಎರಡೂವರೆ ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೪೪). ಈ ದೀಪಸ್ತಂಭಕ್ಕೆ ಪೀಠದ ಭಾಗವಿಲ್ಲ. ಸ್ತಂಭದ ಕೆಳಗಿನ ಚೌಕಾಕಾರದ ಭಾಗದ ಮುಕ್ಕಾಲು ಭಾಗವು ಭೂಮಿಯಲ್ಲಿ ಹುದುಗಿಕೊಂಡಿದೆ. ನಂತರ ಇರುವ ಎರಡು ಅಡಿ ಎತ್ತರದ ಅಷ್ಟಭುಜದ ರಚನೆಯ ನಂತರ ಚೌಕಾಕಾರದ ಫಲಕದಂತಿರುವ ಭಾಗವಿದೆ. ಇದರ ಮಧ್ಯದಲ್ಲಿ ದೀಪವನ್ನು ಬೆಳಗಲು ದುಂಡಗೆ ಕೆತ್ತಿರುವುದು ಕಾಣುತ್ತದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಶಂಕ್ರೇಶ್ವರ ದೇವಾಲಯವಿದೆ. ಇದನ್ನು ಮೂಲೆ ಶಂಕ್ರಣ್ಣೇಶ್ವರ ದೇವಾಲಯ ಎಂದೂ ಕರೆಯುತ್ತಾರೆ. ಈ ದೇವಾಲಯದ ಮುಂದೆ ಮೂವತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೪೫). ಇದರ ಪೀಠವು ಮೂರು ಅಡಿ ಎತ್ತರವನ್ನು ಮತ್ತು ಮೂರು ಅಡಿ ಅಗಲವನ್ನು ಹೊಂದಿದೆ. ಸ್ತಂಭದ ಚೌಕಾಕಾರದ ದಂಡದ ಭಾಗವು ಎರಡು ಅಡಿ ಅಗಲ ಮತ್ತು ಮೂರು ಅಡಿ ಎತ್ತರವನ್ನು ಹೊಂದಿದೆ. ಇದರ ಮೇಲೆ ಅಷ್ಟಭುಜದ ರಚನೆಯನ್ನು ಮಾಡಲಾಗಿದೆ. ಇದು ಒಂದು ಅಡಿ ಎತ್ತರವನ್ನು ಹೊಂದಿದೆ. ಸ್ತಂಭದ ಉಳಿದ ಭಾಗವು ಹದಿನಾರು ಭುಜಗಳನ್ನು ಹೊಂದಿದ್ದು ತುದಿಯಲ್ಲಿ ಚೌಕಾಕಾರದ ಭಾಗವನ್ನು ಹೊಂದಿದೆ. ಇದರ ಮೇಲೆ ಘಟದ ರಚನೆ ಮತ್ತು ಚೌಕಾಕಾರದ ಫಲಕವಿದೆ.

ತಿಪಟೂರು ತಾಲ್ಲೂಕಿನ ನೊಣವಿನಕೆರೆಯ ಬೇಟೆರಾಯಸ್ವಾಮಿ ದೇವಾಲಯ ಮತ್ತು ಗೋಪಾಲಸ್ವಾಮಿ ದೇವಾಲಯಗಳ ಎದುರು ಸುಮಾರು ನಾಲ್ಕು ಅಡಿ ಎತ್ತರದ ಪುಟ್ಟ ದೀಪಸ್ತಂಭಗಳಿವೆ. ಪುಟ್ಟ ದೀಪಸ್ತಂಭಗಳು ಸುಮಾರು ಎರಟರಿಂದ ಐದು ಅಡಿಯ ಎತ್ತರವನ್ನು ಹೊಂದಿರುತ್ತವೆ.

---

೨೪. S.K. Ramachandra Rao:
The Art and Architecture of Indian Temples, volume III, ಪುಟ-೩೨೩



ಚಿತ್ರ ೧೪೬



ಚಿತ್ರ ೧೪೭



ಚಿತ್ರ ೧೪೮



ಚಿತ್ರ ೧೪೯

ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಶೆಟ್ಟಿಕೆರೆಯಲ್ಲಿ ಯೋಗಾ ಮಾಧವ ದೇವಾಲಯವಿದೆ. ಈ ದೇವಾಲಯವನ್ನು ಮೂರನೆ ನರಸಿಂಹನ ಕಾಲದಲ್ಲಿ ಇದ್ದಂತಹ ಗೋಪಾಲ ಎಂಬ ದಂಡನಾಯಕನು ಕ್ರಿಸ್ತ ಶಕ ೧೨೬೧ರಲ್ಲಿ ನಿರ್ಮಿಸಿದ್ದಾನೆ[೨೫]. ಈ ದೇವಾಲಯದ ಹೊರ ಆವರಣದಲ್ಲಿ ದೀಪಸ್ತಂಭವಿದೆ (ಚಿತ್ರ ೧೪೬). ಇದರ ಎತ್ತರವು ಮೂವತ್ತು ಅಡಿಯಾಗಿದೆ. ಈ ದೀಪಸ್ತಂಭವು ಎರಡು ಅಡಿ ಎತ್ತರ ಮತ್ತು ನಾಲ್ಕು ಅಡಿ ಅಗಲದ ಪೀಠವನ್ನು ಹೊಂದಿದೆ.

ಸ್ತಂಭದ ಚೌಕಾಕಾರದ ರಚನೆಯು ಎರಡು ಅಡಿ ಅಗಲವನ್ನು ಮತ್ತು ಆರು ಅಡಿ ಎತ್ತರವನ್ನು ಪಡೆದಿದೆ. ಚೌಕಾಕಾರದ ರಚನೆಯ ನಂತರ ಐದು ಅಡಿ ಎತ್ತರದ ಅಷ್ಟಭುಜದ ರಚನೆಯು ಇದೆ. ಸ್ತಂಭದ ಉಳಿದ ಭಾಗವು ಹದಿನಾರು ಭುಜಗಳ ರಚನೆಯನ್ನು ಹೊಂದಿದೆ. ಸ್ತಂಭದ ತುದಿಯಲ್ಲಿ ಒಂದು ಅಡಿಯ ರಚನೆಯು ಇದೆ. ಇದರ ಮೇಲೆ ಘಟದ ಮತ್ತು ಚೌಕಾಕಾರದ ಫಲಕದ ರಚನೆಗಳು ಇರುವುದನ್ನು ನೋಡಬಹುದು. ಈ ದೀಪಸ್ತಂಭವು ದೇವಾಲಯದ ಮೂಲ ಮೂರ್ತಿಗೆ ಎದುರಿಗೆ ಇಲ್ಲ. ಇದನ್ನು ದೇವಸ್ಥಾನಕ್ಕೆ ಬಲಗಡೆಯಾಗಿ ಸ್ವಲ್ಪ ಪಕ್ಕದಲ್ಲಿ ಸ್ಥಾಪಿಸಲಾಗಿದೆ.

ಕುಣಿಗಲ್‌ನ ಶ್ರೀ ನರಸಿಂಹಸ್ವಾಮಿ ದೇವಾಲಯವು ಹೊಯ್ಸಳ ಕಾಲದಲ್ಲಿ ನಿರ್ಮಾಣಗೊಂಡಿದೆ. ನಂತರ ವಿಜಯನಗರದ ಅರಸರು ಇದರ ಜೀರ್ಣೋದ್ಧಾರವನ್ನು ಮಾಡಿದ್ದಾರೆ ಎನ್ನಲಾಗುತ್ತದೆ. ದೇವಾಲಯದ ಆವರಣದ ಹೊರಗೆ ಸುಮಾರು ಹದಿನೈದು ಅಡಿ ಎತ್ತರದ ದೀಪಸ್ತಂಭವಿದೆ.

ಬೆಂಗಳೂರು ಜಿಲ್ಲೆಯ ಆನೇಕಲ್ಲು ತಾಲ್ಲೂಕಿನ ಬನ್ನೇರುಘಟ್ಟದಲ್ಲಿ ಶ್ರೀ ಸಂಪಂಗಿರಾಮ ದೇವಾಲಯವಿದೆ. ಹೊಯ್ಸಳರ ಅಧೀನದಲ್ಲಿ ಇದ್ದಂತಹ ತಮಿಳು ಸಾಮಂತನಾದ ಪೂರ್ವಾದಿ ರಾಯ ಎಂಬುವವನು ಕ್ರಿಸ್ತ ಶಕ ೧೨೫೭ರಲ್ಲಿ ನಿರ್ಮಿಸಿದ್ದಾನೆ ಎಂದು ಇಲ್ಲಿರುವ ತಮಿಳು ಶಾಸನವು ತಿಳಿಸುತ್ತದೆ[೨೬]. ಈ ದೇವಾಲಯದ ಎದುರು ಇಪ್ಪತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೪೭). ಇದರ ಸ್ತಂಭದ ಭಾಗವು ಅಷ್ಟಭುಜಗಳನ್ನು ಹೊಂದಿದೆ. ದೀಪಸ್ತಂಭದ ತುದಿಯಲ್ಲಿ ಘಟದ ಮತ್ತು ಚೌಕಾಕಾರದ ಫಲಕದಂತಹ ರಚನೆಗಳು ಇರುವುದನ್ನು ಕಾಣಬಹುದು. ಈ ಸ್ತಂಭದ ಸುತ್ತಲೂ ಉಬ್ಬುಶಿಲ್ಪಗಳ ರಚನೆಯು ಇರುವುದಿಲ್ಲ. ದೇವಾಲಯಕ್ಕೆ ಪ್ರವೇಶಿಸುತ್ತಿದ್ದ ಹಾಗೆ ದೀಪಸ್ತಂಭಕ್ಕೆ ಅಂಟಿಕೊಂಡಂತೆ ಗಣಪತಿಯ ಮೂರ್ತಿಶಿಲ್ಪವನ್ನು ಇರಿಸಲಾಗಿದೆ.

ಸಂಪಂಗಿರಾಮ ದೇವಾಲಯದ ಆವರಣದ ಹೊರಗೆ ನೂರು ಮೀಟರ್‌ಗಳಷ್ಟು ದೂರದಲ್ಲಿ ಐವತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೪೮). ಈ ದೀಪಸ್ತಂಭವನ್ನು

---

೨೫. S.K. Ramachandra Rao:
The Art and Architecture of Indian Temples, volume III, ಪುಟ–೩೦೮

೨೬. S.K. Ramachandra Rao:
The Art and Architecture of Indian Temples, volume III, ಪುಟ–೨೧೪

ಸಂಪಂಗಿರಾಮ ದೇವಾಲಯದ ಮೂಲಮೂರ್ತಿಯ ಎದುರಿಗೆ ನಿಲ್ಲಿಸಲಾಗಿದೆ. ಇದಕ್ಕೆ ಸಾಧಾರಣವಾದ ಪೀಠವಿದೆ. ಪೀಠದ ಮೇಲೆ ಹತ್ತು ಅಡಿ ಎತ್ತರದ ಚೌಕಾಕಾರದ ರಚನೆಯು ದಂಡದ ಭಾಗದಲ್ಲಿ ಇದೆ. ಇದರ ನಾಲ್ಕೂ ಕಡೆಗಳಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಸ್ತಂಭದ ತುದಿಯಲ್ಲಿ ಘಟ ಮತ್ತು ಫಲಕದ ರಚನೆಯು ಇರುವುದನ್ನು ನೋಡಬಹುದು

ಆನೇಕಲ್ಲು ತಾಲ್ಲೂಕಿನಲ್ಲಿರುವ ಶ್ರೀ ಮಲ್ಲಿಕಾರ್ಜುನ ದೇವಾಲಯವು ವಿಶಾಲವಾದ ಆವರಣವನ್ನು ಹೊಂದಿದೆ. ಇಲ್ಲಿನ ದೀಪಸ್ತಂಭವು ಸುಮಾರು ಇಪ್ಪತ್ತು ಅಡಿ ಎತ್ತರವಿದ್ದು ಐದು ಅಡಿ ಎತ್ತರದ ಪೀಠದ ಮೇಲೆ ನಿಂತಿದೆ. ಇದು ಚೋಳರ ಶೈಲಿಯ ದೀಪಸ್ತಂಭವಾಗಿದೆ. ಈ ಕಂಬದಲ್ಲಿ ತ್ರಿಪುರರುದ್ರ ಶಿವ(ಪೂರ್ವ), ನಂದಿ(ದಕ್ಷಿಣ), ಗಣಪತಿ(ಪಶ್ಚಿಮ), ವೀರಭದ್ರ(ಉತ್ತರ) ಉಬ್ಬುಶಿಲ್ಪಗಳಿವೆ.

ಚೆನ್ನಪಟ್ಟಣ ತಾಲ್ಲೂಕಿನ ದೊಡ್ಡ ಮಳೂರಿನಲ್ಲಿರುವ ಶ್ರೀ ರಾಮಾಪ್ರಮೇಯ ಸ್ವಾಮಿ ದೇವಾಲಯವು ಬೃಹದಾಕಾರದ ದೇವಾಲಯವಾಗಿದೆ. ದೇವಾಲಯದ ಹೊರಗೆ ಮೂವತ್ತೈದು ಅಡಿ ಎತ್ತರದ ದೀಪಸ್ತಂಭವಿದೆ. ದೀಪಸ್ತಂಭದ ಪೀಠವು ಎರಡೂವರೆ ಅಡಿ ಎತ್ತರವನ್ನು ಪಡೆದಿದೆ. ಸ್ತಂಭದ ಚೌಕಾಕಾರದ ರಚನೆಯಲ್ಲಿ ಉಬ್ಬುಶಿಲ್ಪಗಳಿದ್ದು ಅವು ಅಸ್ಪಷ್ಟವಾಗಿವೆ. ಚೌಕಾಕಾರದ ನಂತರದ ಸ್ತಂಭದ ಭಾಗವು ತುದಿಯವರೆಗೂ ಅಷ್ಟಭುಜದ ರಚನೆಯನ್ನು ಹೊಂದಿದೆ. ಸ್ತಂಭದ ತುದಿಯಲ್ಲಿ ಘಟದ ಮತ್ತು ಚೌಕಾಕಾರದ ಫಲಕಗಳನ್ನು ಹೊಂದಿದೆ.

ಕನಕಪುರ ತಾಲ್ಲೂಕಿನ ಹಾರೋಹಳ್ಳಿಯ ಅರುಣಾಚಲೇಶ್ವರ ದೇವಾಲಯ ಹೈದರಾಲಿಯ (ಕ್ರಿಸ್ತ ಶಕ ೧೭೬೧ರಿಂದ ೧೭೮೨) ಆಸ್ಥಾನದಲ್ಲಿದ್ದಂತಹ ಸೂರ್ಯ ನಾರಾಯಣ ಐಯ್ಯರ್ ಮತ್ತು ಅವನ ತಮ್ಮ ವೆಂಕಟೇಶ ಐಯ್ಯರ್ ಎಂಬುವವರು ಇದರ ನಿರ್ಮಾಣವನ್ನು ಮಾಡಿದ್ದಾರೆ[೨೭]. ದೇವಾಲಯದ ಆವರಣವು ದೊಡ್ಡದಾಗಿದೆ. ಈ ದೇವಾಲಯದ ಮುಂದೆ ಇಪ್ಪತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೪೯). ಇದಕ್ಕೆ ಎರಡು ಅಡಿ ಎತ್ತರದ ಚೌಕಾಕಾರದ ಪೀಠವಿರುವುದು ಕಾಣುತ್ತದೆ.

ಪೀಠದ ನಂತರದ ಸ್ತಂಭದ ಭಾಗವು ತುದಿಯವರೆಗೆ ಅಷ್ಟಭುಜಗಳನ್ನು ಹೊಂದಿದೆ. ದೀಪಸ್ತಂಭದ ತುದಿಯಲ್ಲಿ ಒಂದು ಅಡಿ ಎತ್ತರದ ಚೌಕಾಕಾರದ ರಚನೆಯು ಇದೆ. ಇದೊಂದು ವಿಶೇಷವಾದ ದೀಪಸ್ತಂಭ ಎಂದೇ ಹೇಳಬಹುದು. ಈ ದೀಪಸ್ತಂಭದ ಮುಂದೆ ಸ್ತಂಭಕ್ಕೆ ಅಂಟಿಕೊಂಡಂತೆ ದೇವಮೂರ್ತಿಗೆ ಅಭಿಮುಖವಾಗಿ ನಂದಿಯ ಶಿಲ್ಪವನ್ನು ಇರಿಸಲಾಗಿದೆ.

---

೨೭. S.K. Ramachandra Rao:
The Art and Architecture of Indian Temples, volume III, ಪುಟ-೨೨೨



ಚಿತ್ರ ೧೫೦



ಚಿತ್ರ ೧೫೧



ಚಿತ್ರ ೧೫೨



ಚಿತ್ರ ೧೫೩

ಬೆಂಗಳೂರಿನಲ್ಲಿ ಇರುವ ವೀರಾಂಜನೇಯ ದೇವಾಲಯವು ಪುರಾತನವಾದ ದೇವಾಲಯವಾಗಿದೆ. ಈ ದೇವಾಲಯದ ಎದುರಿಗೆ ನಲವತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೫೦). ದೀಪಸ್ತಂಭಕ್ಕೆ ಎರಡೂವರೆ ಅಡಿ ಎತ್ತರದ ಪೀಠವಿದೆ. ಪೀಠದ ನಂತರದ ಚೌಕಾಕಾರದ ರಚನೆಯಲ್ಲಿ ಉಬ್ಬುಶಿಲ್ಪಗಳಿವೆ. ಚೌಕಾಕಾರದ ರಚನೆಯ ನಂತರ ಇಡೀ ಸ್ತಂಭವು ಅಷ್ಟಭುಜದ ರಚನೆಯನ್ನು ಹೊಂದಿದೆ. ಇದರ ಪ್ರಾರಂಭದಲ್ಲಿ ನಾಗಬಂಧದ ರಚನೆಯು ಇರುವುದು ಕಾಣುತ್ತದೆ.

ಸ್ತಂಭದ ತುದಿಯಲ್ಲಿ ಕಲ್ಲಿನ ಅಲಂಕಾರಿಕ ರಚನೆ ಇದ್ದು ತುದಿಯಲ್ಲಿ ಕಮಲದ ಮೊಗ್ಗು ಇರುವಂತೆ ರಚನೆಯನ್ನು ಮಾಡಲಾಗಿದೆ. ಈ ದೀಪಸ್ತಂಭದ ಮುಂದೆ ಐದು ಅಡಿ ಎತ್ತರದ ದೀಪಸ್ತಂಭವಿದೆ. ಈ ದೀಪಸ್ತಂಭವು ಕಲ್ಲಿನದಾಗಿದ್ದು ಚೌಕಾಕಾರದ ಕಂಬದ ಮೇಲೆ ಕಲ್ಲಿನಲ್ಲಿ ಬೊಗುಣಿಯನ್ನು ರಚಿಸಲಾಗಿದೆ. ಪ್ರಸ್ತುತ ಭಕ್ತರು ಪುಟ್ಟ ದೀಪಸ್ತಂಭದಲ್ಲಿ ದೀಪವನ್ನು ಬೆಳಗುವುದು ರೂಢಿ.

ಬೆಂಗಳೂರಿನ ಶ್ರೀನಿವಾಸ ದೇವಾಲಯವು ಇತ್ತೀಚಿನ ದೇವಾಲಯವಾಗಿದೆ. ಈ ದೇವಾಲಯವು ಪುರಾತನವಾದುದಾದರೂ ದೇವಾಲಯದ ಹೊರಾವರಣದ ರಚನೆಯು ಇತ್ತೀಚಿನ ನಿರ್ಮಾಣವಾಗಿದೆ. ಈ ದೇವಾಲಯದ ಮುಂದೆ ಇರುವ ದೀಪಸ್ತಂಭವು ಇಪ್ಪತ್ತೈದು ಅಡಿ ಎತ್ತರವನ್ನು ಹೊಂದಿದೆ (ಚಿತ್ರ ೧೫೧). ಇದರ ಪೀಠವು ಎರಡೂವರೆ ಅಡಿ ಎತ್ತರದ್ದಾಗಿದೆ. ಸ್ತಂಭದ ಚೌಕಾಕಾರದ ಭಾಗದಲ್ಲಿ ಉಬ್ಬುಶಿಲ್ಪಗಳಿವೆ ಇದರ ನಂತರ ನಾಲ್ಕೂ ಮೂಲೆಗಳಲ್ಲಿ ನಾಗಬಂಧದ ರಚನೆಯು ಇದೆ. ನಂತರದ ಸ್ತಂಭದ ಭಾಗವು ಅಷ್ಟಭುಜಗಳನ್ನು ಹೊಂದಿದೆ. ಸ್ತಂಭದ ತುದಿಯನ್ನು ಸುಂದರವಾಗಿ ಸಂಯೋಜಿಸಿರುವುದು ಕಾಣುತ್ತದೆ.

ಬೆಂಗಳೂರಿನ ಗವಿಪುರದಲ್ಲಿರುವ ಶ್ರೀ ಗವಿಗಂಗಾಧರೇಶ್ವರ ದೇವಾಲಯವು ಪ್ರಾಚೀವಾದ ದೇವಾಲಯುವಾಗಿದ್ದು ಈ ದೇವಾಲಯುದ ಮುಖಮಂಟಪವು ಕೆಂಪೇಗೌಡನಿಂದ ನಿರ್ಮಾಣಗೊಂಡಿದೆ[೨೮]. ಈ ದೇವಾಲಯದ ಮುಂದೆ ಇರುವ ದೀಪಸ್ತಂಭದ ಎತ್ತರವು ಹತ್ತು ಅಡಿಗಳು (ಚಿತ್ರ ೧೫೨). ಈ ದೀಪಸ್ತಂಭಕ್ಕೆ ಪೀಠವಿಲ್ಲ. ಸ್ತಂಭವು ಚೌಕಾಕಾರದ ಭಾಗ ಮತ್ತು ಹದಿನಾರು ಭುಜದ ರಚನೆಯನ್ನು ಹೊಂದಿದೆ. ಇವೆರಡಕ್ಕೂ ನಡುವೆ ಅಷ್ಟಭುಜದ ರಚನೆಯನ್ನು ಪಟ್ಟಿಕೆಯಂತೆ ಬಳಸಲಾಗಿದೆ.

ಸ್ತಂಭದ ತುದಿಯಲ್ಲಿ ಚೌಕಾಕಾರದ ರಚನೆ ಇದ್ದು ಇದರಲ್ಲಿ ದೀಪವನ್ನು ಬೆಳಗಲಾಗುತ್ತದೆ. ಚೌಕಾಕಾರದ ರಚನೆಯಲ್ಲಿ ಉಬ್ಬುಶಿಲ್ಪಗಳಿದ್ದು ಅವು ಅಸ್ಪಷ್ಟವಾಗಿವೆ. ಚೌಕಾಕಾರದ ರಚನೆಯ ಮೇಲೆ ನಾಗಬಂಧದ ರಚನೆಯು ಇದೆ.

---

೨೮. S.K. Ramachandra Rao:
The Art and Architecture of Indian Temples, volume III, ಪುಟ–೨೧೯



ಚಿತ್ರ ೧೫೪



ಚಿತ್ರ ೧೫೫



ಚಿತ್ರ ೧೫೬



ಚಿತ್ರ ೧೫೭

ಬೆಂಗಳೂರಿನ ಬಸನವನ ಗುಡಿಯಲ್ಲಿರುವ ಬಸವನ ದೇವಾಲಯವು ಪ್ರಸಿದ್ಧವಾದ ದೇವಾಲಯವಾಗಿದೆ. ಈ ದೇವಾಲಯದ ಮುಂದೆ ದೀಪಸ್ತಂಭವಿದೆ (ಚಿತ್ರ ೧೫೩). ಈ ದೀಪಸ್ತಂಭವು ಮೂವತ್ತೈದು ಅಡಿ ಎತ್ತರವನ್ನು ಹೊಂದಿದೆ. ಇದನ್ನು ಮುಖ್ಯದ್ವಾರದ ಹೊರಗೆ ಸ್ಥಾಪಿಸಲಾಗಿದೆ. ಇದಕ್ಕೆ ಮೂರು ಅಡಿ ಎತ್ತರದ ಪೀಠವಿದೆ. ಇದರ ಮೇಲಿನ ಸ್ತಂಭದ ಚೌಕಾಕಾರದ ಭಾಗದಲ್ಲಿ ಉಬ್ಬುಶಿಲ್ಪಗಳನ್ನು ರಚಿಸಲಾಗಿದೆ. ಬಹಳ ಸುಂದರವಾದ ಕೆತ್ತನೆಯನ್ನು ಈ ಉಬ್ಬುಶಿಲ್ಪಗಳು ಪಡೆದಿವೆ.

ಸ್ತಂಭದ ಚೌಕಾಕಾರದ ರಚನೆಯ ನಂತರದ ಸ್ತಂಭವು ಅಷ್ಟಭುಜದ ರಚನೆಯನ್ನು ದಂಡದ ಭಾಗದ ಉದ್ದಕ್ಕೂ ಹೊಂದಿದೆ. ಈ ಅಷ್ಟಭುಜದ ರಚನೆಯಲ್ಲಿ ಬರುವ ಮೂಲೆಯ ಲಂಬವಾದ ಪಟ್ಟಿಕೆಗಳು ಹೂವು ಬಳ್ಳಿಯ ಅಲಂಕಾರದಿಂದ ಕೂಡಿದೆ. ಈ ಅಲಂಕಾರದ ವಿನ್ಯಾಸದ ಅಗಲವು ಮೇಲಕ್ಕೆ ಹೋಗುತ್ತಿದ್ದಂತೆ ಸ್ತಂಭಕ್ಕೆ ತಕ್ಕಂತೆ ಚಿಕ್ಕದಾಗುತ್ತಾ ಹೋಗುತ್ತದೆ. ಸ್ತಂಭದ ಮೇಲೆ ತುದಿಯಲ್ಲಿ ದೀಪವನ್ನು ಬೆಳಗಲು ಕಲ್ಲಿನಲ್ಲಿ ಬೊಗುಣಿಯಂತೆ ಕೆತ್ತಲಾಗಿದೆ.

ಚಿಕ್ಕಜಾಲದಲ್ಲಿ ಶ್ರೀ ಚೆನ್ನಕೇಶವ ದೇವಾಲಯವಿದೆ. ಈ ದೇವಾಲಯವನ್ನು ಕ್ರಿಸ್ತ ಶಕ ೧೨೭೫ರಲ್ಲಿ ನಿರ್ಮಿಸಲಾಗಿದೆ[೨೯]. ಈ ದೇವಾಲಯದ ಆವರಣದಲ್ಲಿ ಎರಡು ದೀಪಸ್ತಂಭಗಳಿವೆ. ಒಂದು ಸ್ತಂಭವು ದೇವಾಲಯಕ್ಕೆ ಹತ್ತಿರದಲ್ಲಿದ್ದರೆ ಮತ್ತೊಂದನ್ನು ಸ್ವಲ್ಪ ದೂರದಲ್ಲಿ ಸ್ಥಾಪಿಸಲಾಗಿದೆ. ದೇವಾಲಯಕ್ಕೆ ಹತ್ತಿರವಿರುವ ದೀಪಸ್ತಂಭವು ಇಪ್ಪತ್ತು ಅಡಿ ಎತ್ತರವನ್ನು ಹೊಂದಿದೆ (ಚಿತ್ರ ೧೫೪). ಪೀಠವನ್ನು ಬಹಳ ಸರಳವಾಗಿ ರಚಿಸಲಾಗಿದೆ.

ಸ್ತಂಭದ ಕೆಳಗಿನ ಚೌಕಾಕಾರದ ಭಾಗದಲ್ಲಿ ಉಬ್ಬುಶಿಲ್ಪಗಳನ್ನು ರಚಿಸಲಾಗಿದೆ. ಸ್ತಂಭದಲ್ಲಿ ಇರುವ ಚೌಕಾಕಾರದ ನಂತರದ ಭಾಗವು ಅಷ್ಟಭುಜಗಳನ್ನು ಹೊಂದಿದೆ. ಸ್ತಂಭದ ತುದಿಯಲ್ಲಿ ದೀಪವನ್ನು ಬೆಳಗಲು ಚೌಕಾಕಾರದ ಕಲ್ಲಿನ ಫಲಕವನ್ನು ಇರಿಸಲಾಗಿದೆ.

ಇದೇ ದೇವಾಲಯದ ಮತ್ತೊಂದು ದೀಪಸ್ತಂಭವನ್ನು ಎತ್ತರದ ವೇದಿಕೆಯ ಮೇಲೆ ಸ್ಥಾಪಿಸಲಾಗಿದೆ. ಈ ದೀಪಸ್ತಂಭದ ಎತ್ತರವು ಮೂವತ್ತು ಅಡಿಯಾಗಿದೆ (ಚಿತ್ರ ೧೫೫). ಇದರ ಪೀಠವು ಸರಳವಾಗಿದ್ದು ಎರಡೂವರೆ ಅಡಿ ಎತ್ತರವನ್ನು ಹೊಂದಿದೆ. ಸ್ತಂಭವು ಒಂಬತ್ತು ಅಡಿಗಳ ಎತ್ತರದ ಚೌಕಾಕಾರದ ರಚನೆಯನ್ನು ಹೊಂದಿದೆ. ಇದರ ಅಗಲವು ಎರಡು ಅಡಿ. ಈ ಭಾಗದ ಎರಡು ಹಂತಗಳಲ್ಲಿ ಉಬ್ಬುಶಿಲ್ಪಗಳನ್ನು ರಚಿಸಲಾಗಿದೆ.

ಚೌಕಾಕಾರದ ನಂತರವಿರುವ ಅಷ್ಟಭುಜದ ರಚನೆಯು ಎರಡು ಅಡಿಗಳ ಎತ್ತರವನ್ನು ಹೊಂದಿದೆ. ಅಷ್ಟಭುಜದ ರಚನೆಯ ನಂತರ ಸ್ತಂಭವು ಹದಿನಾರು ಭುಜವನ್ನು ಹೊಂದಿರುವುದು ಕಾಣುತ್ತದೆ. ಸ್ತಂಭದ ತುದಿಯಲ್ಲಿ ದೀಪವನ್ನು ಬೆಳಗಲು ಅವಕಾಶವನ್ನು ಮಾಡಲಾಗಿತ್ತು. ಈಗ ಅದರ ಮೇಲ್ಭಾಗವು ಇಲ್ಲವಾಗಿದೆ.

---

೨೯. S.K. Ramachandra Rao:
The Art and Architecture of Indian Temples, volume III, ಪುಟ–೨೨೦



ಚಿತ್ರ ೧೫೮



ಚಿತ್ರ ೧೫೯



ಚಿತ್ರ ೧೬೦



ಚಿತ್ರ ೧೬೧

ಕೋಲಾರದಲ್ಲಿ ಇರುವ ಸೋಮೇಶ್ವರ ದೇವಾಲಯದ ನಿರ್ಮಾಣವನ್ನು ಕೋಲಾರಮ್ಮ ದೇವಾಲಯದ ಸಮಯದಲ್ಲಿ ನಿರ್ಮಿಸಿರುವ ಸಾಧ್ಯಾತೆ ಇದೆ. ಈ ದೇವಾಲಯದ ಆವರಣದಲ್ಲಿ ಇಪ್ಪತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೫೮). ಈ ದೀಪಸ್ತಂಭವು ಇಪ್ಪತ್ತು ಅಡಿ ಎತ್ತರವನ್ನು ಹೊಂದಿದೆ. ಸ್ತಂಭದ ಮೂರು ಅಡಿ ಎತ್ತರದ ಪೀಠವು ಸುಂದರವಾದ ಕೆತ್ತನೆಯಿಂದ ಕೂಡಿದೆ. ಸ್ತಂಭದಲ್ಲಿ ಚೌಕಾಕಾರದ ರಚನೆಯು ಇಲ್ಲ. ಆದರೆ ಪೀಠದ ನಂತರದ ಸ್ಥಳದಲ್ಲಿ ನಾಗಬಂಧದ ರಚನೆಯು ಇರುವುದನ್ನು ಕಾಣಬಹುದು. ಸ್ತಂಭವು ತುದಿಯವರೆಗೂ ಅಷ್ಟಭುಜದ ರಚನೆಯನ್ನು ಹೊಂದಿದೆ. ಸ್ತಂಭದ ತುದಿಯಲ್ಲಿ ಘಟದ ರಚನೆ ಮತ್ತು ಫಲಕದ ರಚನೆಯು ಇರುವುದನ್ನು ನೋಡಬಹುದು.

ಮಾಲೂರು ತಾಲ್ಲೂಕಿನ ಚಿಕ್ಕ ತಿರುಪತಿಯಲ್ಲಿ ಪ್ರಸನ್ನ ವೆಂಕಟರಮಣ ದೇವಾಲಯವಿದೆ. ಈ ದೇವಾಲಯವು ಪ್ರಸಿದ್ಧವಾದುದಾಗಿದೆ. ತಿರುಪತಿ ವೆಂಕಟರಮಣನ ದೇವಾಲಯಕ್ಕೆ ಹೋಗುವ ಭಕ್ತಾದಿಗಳು ಮೊದಲು ಇಲ್ಲಿನ ದೇವರ ದರ್ಶನ ಪಡೆಯುವುದು ರೂಢಿ. ಈ ದೇವಾಲಯದ ಆವರಣದ ಹೊರಗೆ ಇಪ್ಪತ್ತು ಅಡಿಯ ಎತ್ತರವನ್ನು ಹೊಂದಿದ ದೀಪಸ್ತಂಭವಿದೆ. ಇದಕ್ಕೆ ಪುಟ್ಟದಾದ ಪೀಠವು ಇದೆ (ಚಿತ್ರ ೧೫೯). ಈ ಸ್ತಂಭವು ಚೌಕಾಕಾರದ ಭಾಗವನ್ನೂ ಅಷ್ಟಭುಜದ ಭಾಗವನ್ನೂ ಹೊಂದಿದೆ. ಸ್ತಂಭದ ತುದಿಯಲ್ಲಿ ಘಟದ ರಚನೆ ಮತ್ತು ಚೌಕಾಕಾರದ ಫಲಕ ರಚನೆಯು ಇರುವುದು ಕಾಣುತ್ತದೆ.

ದೇವಾಲಯದ ಒಳ ಆವರಣದಲ್ಲಿ ಮತ್ತೊಂದು ದೀಪಸ್ತಂಭವಿದೆ (ಚಿತ್ರ ೧೬೦). ಈ ದೀಪಸ್ತಂಭವು ಪುಟ್ಟದಾದ ಪೀಠವನ್ನು ಹೊಂದಿದೆ. ಈ ದೀಪಸ್ತಂಭವು ಹತ್ತು ಅಡಿ ಎತ್ತರದ್ದಾಗಿದೆ. ಸ್ತಂಭದ ಚೌಕಾಕಾರದ ಭಾಗದಲ್ಲಿ ಉಬ್ಬುಶಿಲ್ಪಗಳಿದ್ದು ಇವು ಅಸ್ಪಷ್ಟವಾಗಿವೆ. ಚೌಕಾಕಾರದ ನಂತರ ಸ್ತಂಭದ ಭಾಗದಲ್ಲಿ ಅಷ್ಟಭುಜದ ರಚನೆಯು ಇದ್ದು ತುದಿಯಲ್ಲಿ ಚೌಕಾಕಾರದ ಫಲಕವು ಇದೆ.

ಮಾಲೂರು ತಾಲ್ಲೂಕಿನ ಟೇಕಲ್‌ನಲ್ಲಿರುವ ವರದರಾಜಸ್ವಾಮಿ ದೇವಾಲಯವು ಕ್ರಿಸ್ತ ಶಕ ೧೩೧೦ಕ್ಕಿಂತ ಪುರಾತನವಾದುದಾಗಿದೆ[೩೨]. ಹೊಯ್ಸಳರು ಮತ್ತು ವಿಜಯನಗರ ಅರಸರು ಇದರ ಜೀರ್ಣೋದ್ಧಾರವನ್ನು ಮಾಡಿದ್ದಾರೆ ಎಂದು ತಿಳಿದು ಬರುತ್ತದೆ. ಇದರ ಹೊರ ಆವರಣದಲ್ಲಿ ಇಪ್ಪತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೬೧). ಇದಕ್ಕೆ ನಾಲ್ಕು ಅಡಿ ಎತ್ತರದ ಪೀಠವಿದ್ದು ಇದನ್ನು ಹಂತಗಳಂತೆ ನಿರ್ಮಿಸಲಾಗಿದೆ. ಸ್ತಂಭದ ಭಾಗದಲ್ಲಿ ಎರಡು ಅಡಿ ಎತ್ತರದ ಚೌಕಾಕಾರದ ರಚನೆಯು ಇದ್ದು ಇದರ ಮೇಲಿನ ಉಳಿದ ಸ್ತಂಭದ ಭಾಗವು ಅಷ್ಟಭುಜಗಳನ್ನು ಹೊಂದಿದೆ. ಸ್ತಂಭದ ತುದಿಯಲ್ಲಿ ಘಟದ ರಚನೆ ಮತ್ತು ಚೌಕಾಕಾರದ ಫಲಕದ ರಚನೆಯು ಇರುವುದನ್ನು ನೋಡಬಹುದು. ಈ ಸ್ತಂಭದ ಅರ್ಧದಷ್ಟು ಭಾಗವನ್ನು ಬಣ್ಣದಿಂದ ಅಲಂಕರಿಸಲಾಗಿದೆ. ಪ್ರಸ್ತುತ ಈ ದೀಪಸ್ತಂಭವನ್ನು ಬಳಸುತ್ತಿಲ್ಲ.

---

೩೨. S.K. Ramachandra Rao:
The Art and Architecture of Indian Temples, volume III, ಪುಟ-೨೭೪



ಚಿತ್ರ ೧೬೨



ಚಿತ್ರ ೧೬೩



ಚಿತ್ರ ೧೬೪



ಚಿತ್ರ ೧೬೫

ಚಿಂತಾಮಣಿ ತಾಲ್ಲೂಕಿನ ಕೈವಾರದಲ್ಲಿ ಇರುವ ಅಮರ ನಾರಾಯಣ, ಭೀಮೇಶ್ವರ (ಭೀಮಲಿಂಗೇಶ್ವರ) ದೇವಾಲಯಗಳು ಕ್ರಿಸ್ತ ಶಕ ೧೨೮೩ಕ್ಕೂ ಹಿಂದೆ ನಿರ್ಮಿಸಿದಂತಹ ದೇವಾಲಯಗಳಾಗಿವೆ [೩೩]. ಬೀಮೇಶ್ವರ ದೇವಾಲಯದ ಆವರಣದಲ್ಲಿ ಧರ್ಮಲಿಂಗೇಶ್ವರ, ಪಾರ್ಥಲಿಂಗೇಶ್ವರ, ನಕುಲ ಲಿಂಗೇಶ್ವರ ಮತ್ತು ಸಹದೇವಲಿಂಗೇಶ್ವರ ದೇವಾಲಯಗಳಿವೆ. ಈ ದೇವಾಲಯದ ಆವರಣದಲ್ಲಿ ಹತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೬೨). ಈ ದೀಪಸ್ತಂಭಕ್ಕೆ ಎರಡು ಅಡಿ ಎತ್ತರದ ಚೌಕಾಕಾರದ ಸಾಧಾರಣವಾದ ಪೀಠವಿದೆ. ಸ್ತಂಭದ ತಳಭಾಗದಲ್ಲಿ ಒಂದು ಅಡಿ ಎತ್ತರ ಮತ್ತು ಒಂದು ಅಡಿ ಅಗಲವನ್ನು ಹೊಂದಿರುವ ಚೌಕಾಕಾರದ ರಚನೆ ಇದ್ದು ಇದರ ಮೇಲೆ ಅಷ್ಟಭುಜದ ರಚನೆಯು ಇರುವುದನ್ನು ನೋಡಬಹುದು. ಸ್ತಂಭದ ತುದಿಯಲ್ಲಿ ಚೌಕಾಕಾರದ ಫಲಕವಿದೆ. ಇಡೀ ಸ್ತಂಭವನ್ನು ಸುಣ್ಣ ಬಣ್ಣದಿಂದ ಅಲಂಕರಿಸಲಾಗಿದೆ.

ಚಿಕ್ಕಬಳ್ಳಾಪುರ ತಾಲ್ಲೂಕಿನ ಕಂದಾವರದಲ್ಲಿರುವ ಜ್ವರಹರೇಶ್ವರ ದೇವಾಲಯವು ಅತ್ಯಂತ ಪುರಾತನವಾದ ದೇವಾಲಯವಾಗಿದೆ. ಈ ದೇವಾಲಯವು ಚಿಕ್ಕದಾಗಿದ್ದರೂ ಇದರ ಎದುರು ಸುಮಾರು ನಲವತ್ತು ಅಡಿ ಎತ್ತರದ ದೀಪಸ್ತಂಭವು ಇರುವುದನ್ನು ನೋಡಬಹುದು (ಚಿತ್ರ ೧೬೩). ಈ ದೀಪಸ್ತಂಭಕ್ಕೆ ನಾಲ್ಕು ಅಡಿ ಎತ್ತರದ ಸುಂದರವಾದ ಪೀಠವಿದೆ. ಪೀಠದಲ್ಲಿ ಹೂವು ಬಳ್ಳಿಗಳಿಂದ ಅಲಂಕೃತವಾದ ಉಬ್ಬುಶಿಲ್ಪಗಳಿವೆ. ಪೀಠದ ನಂತರ ಸ್ತಂಭವು ಚೌಕಾಕಾರವನ್ನು ಹೊಂದಿದ್ದು ಒಂದು ಅಡಿ ಅಗಲ ಮತ್ತು ನಾಲ್ಕು ಅಡಿ ಎತ್ತರವನ್ನು ಹೊಂದಿದೆ. ಈ ಚೌಕಾಕಾರದ ಎತ್ತರಕ್ಕೂ ನಾಲ್ಕು ದಿಕ್ಕುಗಳಲ್ಲಿಯೂ ಉಬ್ಬುಶಿಲ್ಪಗಳನ್ನು ಕೆತ್ತಿರುವುದನ್ನು ಕಾಣುತ್ತೇವೆ. ಇಲ್ಲಿನ ಉಬ್ಬುಶಿಲ್ಪಗಳು ಸವೆದು ಹೋಗಿರುವುದರಿಂದ ಸ್ಪಷ್ಟವಾಗಿ ಕಾಣುವುದಿಲ್ಲ. ಸ್ತಂಭದ ಚೌಕಾಕಾರದ ನಂತರದ ಭಾಗವು ಅಷ್ಟಭುಜಗಳನ್ನು ಹೊಂದಿದೆ. ಸ್ತಂಭದ ತುದಿಯಲ್ಲಿ ಘಟದ ರಚನೆ ಮತ್ತು ಚೌಕಾಕಾರದ ಫಲಕದ ರಚನೆಯು ಇರುವುದನ್ನು ಕಾಣುತ್ತೇವೆ.

ಚಿಕ್ಕಬಳ್ಳಾಪುರ ತಾಲ್ಲೂಕಿನ ರಂಗಸ್ಥಳದಲ್ಲಿ ಶ್ರೀರಂಗನಾಥ ದೇವಾಲಯವಿದೆ. ಪ್ರಸ್ತುತ ದೇವಾಲಯದ ಆವರಣದಲ್ಲಿ ದೀಪಸ್ತಂಭವಿಲ್ಲ. ಅದರೆ ಈ ಆವರಣದಲ್ಲಿ ದೀಪಸ್ತಂಭವೊಂದು ಬಿದ್ದಿರುವುದು ಕಾಣುತ್ತದೆ (ಚಿತ್ರ ೧೬೪). ಇದರಲ್ಲಿ ಚೌಕಾಕಾರದ ರಚನೆ ಮತ್ತು ಅಷ್ಟಭುಜದ ರಚನೆ ಇರುವುದನ್ನು ಕಾಣುತ್ತೇವೆ. ಸ್ತಂಭದ ತುದಿಯ ರಚನೆಯು ಇಲ್ಲವಾಗಿದೆ. ಇದರ ಚೌಕಾಕಾರದ ರಚನೆಯಲ್ಲಿ ಗರುಡನ ಉಬ್ಬುಶಿಲ್ಪವು ಇರುವುದನ್ನು ಗಮನಿಸಬಹುದು. ಚೌಕಾಕಾರದ ಉಳಿದ ಮೂರೂ ಕಡೆಗಳಲ್ಲಿ ಉಬ್ಬುಶಿಲ್ಪದ ರಚನೆಗಳಿಲ್ಲ.

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಬನಶಂಕರಿಯಲ್ಲಿ ಬನಶಂಕರಿ

---

೩೩. S.K. Ramachandra Rao:
The Art and Architecture of Indian Temples, volume III, ಪುಟ–೨೭೦



ಚಿತ್ರ ೧೬೬



ಚಿತ್ರ ೧೬೭



ಚಿತ್ರ ೧೬೮



ಚಿತ್ರ ೧೬೯

ದೇವಾಲಯವಿದೆ. ಬನಶಂಕರಿಯ ಪುರಾತನ ದೇವಾಲಯವು ಚಾಲುಕ್ಯರ ಕಾಲದ್ದಾಗಿದೆ. ಅದು ಶಿಥಿಲಗೊಂಡಿರುವುದರಿಂದ ಅದರ ಪಕ್ಕದಲ್ಲೇ ಇನ್ನೊಂದು ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ. ಪ್ರಸ್ತುತದಲ್ಲಿ ಪೂಜಿಸಲ್ಪಡುತ್ತಿರುವ ದೇವಾಲಯವು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿಸಲಾಗಿದೆ ಎನ್ನಲಾಗುತ್ತದೆ. ಇದರ ಕಾಲವು ಕ್ರಿಸ್ತ ಶಕ ಸುಮಾರು ಹತ್ತನೆಯ ಶತಮಾನ. ಈ ದೇವಾಲಯದ ಆವರಣದಲ್ಲಿ ಮೂರು ದೀಪಸ್ತಂಭಗಳಿವೆ (ಚಿತ್ರ ೧೬೫). ಕಮಲದ ಮೊಗ್ಗಿನಂತೆ ರಚನೆಗೊಂಡಿರುವ ಈ ದೀಪಸ್ತಂಭಗಳಲ್ಲಿ ದೀಪವನ್ನು ಬೆಳಗಲು ಹೊರಚಾಚಿದಂತೆ ಕಲ್ಲಿನ ರಚನೆಯಿರುವುದು ಕಾಣುತ್ತದೆ. ಸ್ತಂಭದ ಮೇಲೆ ತುದಿಯಲ್ಲಿ ದೊಡ್ಡದಾಗಿ ದೀಪವನ್ನು ಬೆಳಗಲು ಅವಕಾಶವನ್ನು ಮಾಡಿರುತ್ತಾರೆ.

ಶಕ್ತಿ ದೇವತೆಯಾದ ಬನಶಂಕರಿ ದೇವಾಲಯದ ಮುಂದೆ ಇರುವ ಈ ಮೂರು ದೀಪಸ್ತಂಭಗಳನ್ನು ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿ ಎಂದು ಗುರುತಿಸಲಾಗುತ್ತದೆ. ಈ ದೀಪಸ್ತಂಭವನ್ನು ಕಲ್ಲಿನಿಂದ ಕಟ್ಟಲ್ಪಟ್ಟಿದ್ದರೂ ಎಲ್ಲೂ ಗಾರೆಯನ್ನು ಬಳಸಿದಂತೆ ಕಾಣುವುದಿಲ್ಲ. ಇದಕ್ಕೂ ಮೊದಲಿಗೆ ಬಳಸುತ್ತಿದ್ದ ದೀಪಸ್ತಂಭವು ಚೌಕಾಕಾರದ ರಚನೆ ಮತ್ತು ಅಷ್ಟಭುಜದ ರಚನೆಯನ್ನು ಹೊಂದಿರುವುದು ತಿಳಿದು ಬರುತ್ತದೆ (ಚಿತ್ರ ೧೬೬). ಪ್ರಸ್ತುತ ಈ ದೀಪಸ್ತಂಭವನ್ನು ಬಳಸುತ್ತಿಲ್ಲ. ಈ ದೀಪಸ್ತಂಭವನ್ನು ದೇವಾಲಯದ ಆವರಣದಲ್ಲಿ ಒಂದು ಮೂಲೆಯಲ್ಲಿ ನಿಲ್ಲಿಸಲಾಗಿದೆ.

ಬಾದಾಮಿ ತಾಲ್ಲೂಕಿನ ಪಟ್ಟದಕಲ್ ನಲ್ಲಿರುವ ಹನುಮಂತನ ಗುಡಿಯ ಮುಂದೆ ದೀಪಸ್ತಂಭವಿದೆ (ಚಿತ್ರ ೧೬೭). ಇಲ್ಲಿನ ದೇವಾಲಯಗಳನ್ನು ಚಾಲುಕ್ಯ ರಾಜರು ಕ್ರಿಸ್ತ ಶಕ ಏಳನೆಯ ಶತಮಾನದಿಂದ ಎಂಟನೆಯ ಶತಮಾದವರೆಗೆ ನಿರ್ಮಿಸಿರುವುದು ಕಂಡು ಬರುತ್ತದೆ. ಹನುಮಂತನ ಗುಡಿ ಎದುರು ಇರುವ ದೀಪಸ್ತಂಭದ ಎತ್ತರವು ಹತ್ತು ಅಡಿಗಳು. ಇದಕ್ಕೆ ಪುಟ್ಟದಾದ ಚೌಕಾಕಾರದ ಪೀಠವಿದೆ. ಸ್ತಂಭದ ದಂಡದ ಭಾಗದ ಎತ್ತರಕ್ಕೂ ಅಷ್ಟಭುಜದ ರಚನೆಯು ಇರುವುದನ್ನು ನೋಡಬಹುದು. ಇದು ಬಹಳ ಪ್ರಾಚೀನವಾದ ದೀಪಸ್ತಂಭ ಎಂದು ಹೇಳಬಹುದು.

ಗದಗ ಜಿಲ್ಲೆಯಲ್ಲಿ ಇರುವ ವೀರನಾರಾಯಣ ಮತ್ತು ತ್ರಿಕೂಟೇಶ್ವರ ದೇವಾಲಯಗಳಿಗೆ ಎರಡನೆಯ ಹರಿಹರನು ಕ್ರಿಸ್ತ ಶಕ ೧೩೭೯ರಲ್ಲಿ ದಾನ ನೀಡಿದಂತಹ ಉಲ್ಲೇಖಗಳು ದೊರೆಯುತ್ತವೆ[೩೪]. ಅಂದರೆ ಈ ದೇವಾಲಯಗಳು ಹದಿಮೂರನೆಯ ಶತಮಾನಕ್ಕೂ ಹಿಂದೆಯೇ ನಿರ್ಮಾಣಗೊಂಡಿವೆ ಎಂದಾಗುತ್ತದೆ. ವೀರನಾರಾಯಣ ದೇವಾಲಯದ ಮುಂದೆ ದೀಪಸ್ತಂಭವಿಲ್ಲ. ತ್ರಿಕೂಟೇಶ್ವರ ದೇವಾಲಯದ ಹೊರ ಆವರಣದಲ್ಲಿ ಒಂದು ದೀಪಸ್ತಂಭವಿದೆ. ಈ ದೀಪಸ್ತಂಭವು ಈ ಆವರಣದಲ್ಲಿ ಇರುವ ಯಾವುದೇ ದೇವಾಲಯದ ಮುಂದೆ ಇರದೆ ಪ್ರತ್ಯೇಕವಾಗಿ ನಿಂತಿದೆ (ಚಿತ್ರ ೧೬೮). ಈ ದೀಪಸ್ತಂಭದ

೩೪. S.K. Ramachandra Rao:
The Art and Architecture of Indian Temples, volume III, ಪುಟ-೧೭೭



ಚಿತ್ರ ೧೭೦



ಚಿತ್ರ ೧೭೧



ಚಿತ್ರ ೧೭೨-೧



ಚಿತ್ರ ೧೭೨-೨

ಎತ್ತರವು ಹದಿನೈದು ಅಡಿಯಾಗಿದೆ. ಸರಳವಾದ ರಚನೆಯನ್ನು ಈ ದೀಪಸ್ತಂಭವು ಹೊಂದಿದೆ.

ಗದಗ ತಾಲ್ಲೂಕಿನ ಕಲ್ಮೇಶ್ವರ ದೇವಾಲಯವಿದೆ. ಈ ದೇವಾಲಯವನ್ನು ಹೊಯ್ಸಳರ ಸಾಮ್ರಾಜ್ಯದಲ್ಲಿದ್ದ ಎನ್ನಲಾಗುವ ಜಕಣಾಚಾರಿ ಎಂಬ ಶಿಲ್ಪಿಯು ನಿರ್ಮಿಸಿದ್ದಾನೆ ಎಂದು ಸ್ಥಳೀಯರು ಹೇಳುತ್ತಾರೆ. ಕಲ್ಮೇಶ್ವರ ದೇವಾಲಯವು ಸಂಪೂರ್ಣವಾಗಿ ಪಾಳು ಬಿದ್ದಿದೆ. ಈ ದೇವಾಲಯದಲ್ಲಿ ಲಿಂಗ ಮತ್ತು ಬಸವಣ್ಣನ ಮೂರ್ತಿಗಳು ಸುಂದರವಾದ ಕೆತ್ತನೆಯಿಂದ ಕೂಡಿದೆ. ಈ ಪುಟ್ಟ ದೇವಾಲಯದ ಹೊರಗಿರುವ ದೀಪಸ್ತಂಭವು ಏಕಶಿಲಾ ಸ್ತಂಭವಾಗಿದೆ (ಚಿತ್ರ ೧೬೯). ಈ ದೀಪಸ್ತಂಭದ ಕೆತ್ತನೆಯು ಸರಳವಾಗಿದ್ದರೂ ಸುಂದರವಾಗಿ ರಚನೆಗೊಂಡಿದೆ. ಈ ಸ್ತಂಭದ ದಂಡದ ಭಾಗವು ನಾಲ್ಕು ಮೂಲೆಗಳನ್ನು ಹೊಂದಿದ್ದು ನಾಲ್ಕು ಮೂಲೆಗಳಲ್ಲೂ ಅಲ್ಲಲ್ಲಿ ಕೆತ್ತನೆಯನ್ನು ಮಾಡಲಾಗಿದೆ.

ಗದಗ ತಾಲ್ಲೂಕಿನ ಹನುಮಂತನಗುಡಿ ದೇವಾಲಯವಿದೆ. ಈ ದೇವಾಲಯದ ಆವರಣದ ಹೊರಗೆ ಹತ್ತು ಅಡಿ ಎತ್ತರದ ದೀಪಸ್ತಂಭವಿದೆ. ಈ ದೀಪಸ್ತಂಭವು ಏಕಶಿಲಾ ಸ್ತಂಭವಾಗಿದ್ದು ದೇವಾಲಯದ ಆವರಣದ ಹೊರಗೆ ನಿಂತಿದೆ.

ಗದಗ ತಾಲ್ಲೂಕಿನ ಪೇಟೆ ವೀರಭದ್ರೇಶ್ವರ ದೇವಾಲಯವಿದೆ. ಈ ದೇವಾಲಯದ ಆವರಣದ ಹೊರಗೆ ದೇವಾಲಯದ ಬಲಬದಿಗೆ ಅಂಟಿಕೊಂಡಂತೆ ದೀಪಸ್ತಂಭ ಇರುವುದನ್ನು ನೋಡಬಹುದು. ಈ ದೀಪಸ್ತಂಭವನ್ನು ದೀಪಮಾಲೆಗಂಬದಂತೆ ರಚಿಸಲಾಗಿದೆ.

ಬೆಳಗಾಂ ಜಿಲ್ಲೆಯ ಪಾಶ್ಚಾಪುರದ ಲಕ್ಷ್ಮೀ ದೇವಸ್ಥಾನದಲ್ಲಿ ಇಪ್ಪತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೭೦). ಈ ದೀಪಸ್ತಂಭಕ್ಕೆ ಎರಡು ಪೀಠಗಳಿವೆ. ಒಂದು ಮುಖ್ಯಪೀಠ ಅದರ ಮೇಲೊಂದು ಉಪಪೀಠ. ಇದರ ಮೇಲೆ ದೀಪಸ್ತಂಭವು ನಿಂತಿದೆ. ಎಂಟು ಮೂಲೆಗಳ ರಚನೆಯನ್ನು ಹೊಂದಿರುವ ಈ ದೀಪಸ್ತಂಭವು ವರ್ಣಮಯವಾಗಿದೆ. ಇದನ್ನು ದೀಪಮಾಲೆಗಂಬದಂತೆ ರಚಿಸಲಾಗಿದೆ.

ಬೆಳಗಾಂನ ಅಕ್ಕತಂಗಿಯರ ಹಳ್ಳದಲ್ಲಿ ಇರುವ ದುರ್ಗಾದೇವಿ ದೇವಾಲಯದ ಎದುರು ವಿಶೇಷವಾದ ದೀಪಸ್ತಂಭವಿದೆ (ಚಿತ್ರ ೧೭೧). ಇದರ ಪೀಠವು ಚೌಕಾಕಾರವಾಗಿದ್ದು ಅದರ ನಂತರದ ಭಾಗವು ವಿಶೇಷವಾದ ಅಲಂಕಾರದ ಕೆತ್ತನೆಯಿಂದ ಕೂಡಿದೆ. ಇದರ ನಂತರ ದೀಪಸ್ತಂಭವಿದ್ದು ಇದರಲ್ಲಿನ ಕಲ್ಲಿನ ಹೊರಚಾಚಿದಂತಹ ರಚನೆಗಳು ಸುಂದರವಾಗಿ ಕೆತ್ತಲ್ಪಟ್ಟಿವೆ.

ಬಳ್ಳಾರಿ ಜಿಲ್ಲೆಯ ಹಂಪಿಯಲ್ಲಿ ನೆಲಸ್ತರದ ಶಿವ ದೇವಾಲಯವಿದೆ. ಈ ದೇವಾಲಯದ ಆವರಣದಲ್ಲಿ ಇಪ್ಪತ್ತೈದು ಅಡಿ ಎತ್ತರದ ದೀಪಸ್ತಂಭವಿದೆ. ಈ ದೀಪಸ್ತಂಭವು ಸ್ತಂಭಗಳನ್ನು ಹೊಂದಿದ ಪ್ರಾಕಾರದ ಮಧ್ಯದಲ್ಲಿದೆ. ಈ ಪ್ರಾಕಾರವನ್ನು ನಂತರದ ಕಾಲದಲ್ಲಿ ನಿರ್ಮಿಸದಂತೆ ತೋರುತ್ತದೆ.

ಹಂಪಿಯ ಹಜಾರ ರಾಮಸ್ವಾಮಿ ದೇವಾಲಯವನ್ನು ಮೂಲವಾಗಿ ಎರಡನೆಯ ಪ್ರೌಢದೇವರಾಯನು (ಕ್ರಿಸ್ತ ಶಕ ೧೪೨೪-೧೪೪೬) ನಿರ್ಮಿಸಿದನು, ಅದರ ನಂತರದ ರಚನೆಯನ್ನು ಕೃಷ್ಣದೇವರಾಯನು (ಕ್ರಿಸ್ತ ಶಕ ೧೫೦೯-೧೫೨೦) ಮಾಡಿಸಿದನು ಎಂದು ಹೇಳಲಾಗುತ್ತದೆ[೩೫]. ಇದರ ಕಾಲವು ಸುಮಾರು ೧೪ ರಿಂದ ೧೫ನೆಯ ಶತಮಾನವಾಗಿದೆ. ಈ ದೇವಾಲಯದ ಹೊರ ಆವರಣವು ಬೃಹದಾಕಾರವಾಗಿದ್ದಿರಬೇಕು. ಈ ದೇವಾಲಯದ ಆವರಣದಲ್ಲಿ ಇದ್ದಂತಹ ಗೋಡೆಗಳು ಪ್ರಸ್ತುತ ಕಾಣಲು ಸಿಗುವುದಿಲ್ಲ. ದೇವಾಲಯದ ಎದುರಿಗೆ ಸ್ವಲ್ಪ ದೂರದಲ್ಲಿ ಮುಖ್ಯದ್ವಾರದಂತಹ ರಚನೆಯ ಅವಶೇಷಗಳು ಇರುವುದು ಕಾಣುತ್ತದೆ. ಇದಕ್ಕೂ ಮೊದಲು ಸುಮಾರು ಐವತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೭೨- ೧). ಈ ದೀಪಸ್ತಂಭಕ್ಕೆ ಸುಮಾರು ಹನ್ನೆರಡು ಅಡಿ ಎತ್ತರದ ಚೌಕಾಕಾರದ ರಚನೆಯು ಇದೆ. ಇದರ ಪೀಠದ ಭಾಗವೂ ಸಹ ಹಾಳಾಗಿರಬಹುದು.

ದೀಪಸ್ತಂಭದ ಚೌಕಾಕಾರದ ರಚನೆಯ ನಂತರ ಸುಮಾರು ಒಂದೂವರೆ ಅಡಿ ಎತ್ತರದ ಅಷ್ಟಭುಜದ ಭಾಗವಿದೆ. ಇದಾದ ಮೇಲೆ ಹದಿನಾರು ಭುಜದ ರಚನೆ ಇದೆ. ಹದಿನಾರು ಭುಜದ ರಚನೆಯ ನಂತರ ಮೂರು ಅಡಿ ಎತ್ತರದ ಅಷ್ಟ ಭುಜದ ರಚನೆಯು ಇರುವುದು ಕಾಣುತ್ತದೆ. ಇದರ ಮೇಲೆ ಸ್ತಂಭದ ತುದಿಯಲ್ಲಿ ಚೌಕಾಕಾರದ ಅಲಂಕಾರಿಕ ರಚನೆಯು ಇದ್ದು ನಂತರ ವೃತ್ತಾಕಾರದ ಘಟದ ಭಾಗವು ಮಾತ್ರ ಉಳಿದಿರುವುದನ್ನು ನೋಡಬಹುದು (ಚಿತ್ರ ೧೭೨-೨).

ಹಂಪಿಯ ವಿಜಯವಿಠಲ ದೇವಾಲಯದ ಆವರಣದಲ್ಲಿ ದೀಪಸ್ತಂಭವಿಲ್ಲ. ಈ ದೇವಾಲಯುದ ಆವರಣದ ಹೊರಗೆ ಸುವಾರು ಮೂವತ್ತು ಅಡಿಯು ದೀಪಸ್ತಂಭವಿರುತ್ತಿತ್ತು ಎಂದು ದೇವಾಲಯದ ಆವರಣದ ಹೊರಗೆ ಬಿದ್ದಿರುವ ಸ್ತಂಭವನ್ನು ನೋಡಿದರೆ ತಿಳಿಯುತ್ತದೆ (ಚಿತ್ರ ೧೭೩). ದೀಪಸ್ತಂಭದ ಅಳಿದುಳಿದ ಅವಶೇಷದಲ್ಲಿ ಚೌಕಾಕಾರದ ಭಾಗ ನಾಶವಾಗಿದೆ. ಅಷ್ಟಭುಜ ಮತ್ತು ಹದಿನಾರು ಭುಜದ ಭಾಗವು ಮಾತ್ರ ಉಳಿದಿದ್ದು ದೀಪಸ್ತಂಭದ ತುದಿಯ ಭಾಗವು ಇಲ್ಲಿಲ್ಲ.

ಹಂಪಿಯ ವಿಜಯವಿಠಲ ದೇವಾಲಯದ ಹತ್ತಿರ ವಿಷ್ಣುವಿನ ದೇವಾಲಯವಿದೆ. ಪ್ರಸ್ತುತ ಅದರ ರಿಪೇರಿ ಕಾರ್ಯವು ನಡೆಯುತ್ತಿದೆ. ಈ ದೇವಾಲಯದ ದೀಪಸ್ತಂಭವು ಸುಮಾರು ಇಪ್ಪತ್ತೈದು ಅಡಿ ಎತ್ತರವನ್ನು ಹೊಂದಿದೆ (ಚಿತ್ರ ೧೭೪). ಈ ಸ್ತಂಭದಲ್ಲಿ ಚೌಕಾಕಾರ, ಅಷ್ಟ ಭುಜದ ಆಕಾರ ಮತ್ತು ಹದಿನಾರು ಭುಜದ ರಚನೆಗಳು ಇವೆ. ಸ್ತಂಭದ ಮೇಲೆ ತುದಿಯಲ್ಲಿ ದೀಪವನ್ನು ಬೆಳಗಲು ದುಂಡನೆಯ ರಚನೆಯನ್ನು ಮಾಡಲಾಗಿದೆ. ಇದರ ಕಾಲವು ಸುಮಾರು ೧೬ ರಿಂದ ೧೭ನೆಯ ಶತಮಾನವಿರಬೇಕು.

ಬಳ್ಳಾರಿ ಜಿಲ್ಲೆಯ ಹಂಪಿಯಲ್ಲಿ ಉದ್ದಾನ ವೀರಭದ್ರ ದೇವಾಲಯವಿದೆ.

---

೩೫. S.K. Ramachandra Rao:
The Art and Architecture of Indian Temples, volume III, ಪುಟ-೧೪೪



ಚಿತ್ರ ೧೭೩



ಚಿತ್ರ ೧೭೪



ಚಿತ್ರ ೧೭೫

ಈ ದೇವಾಲಯದ ಹೊರಗೆ ಒಂದು ದೀಪಸ್ತಂಭವಿದೆ (ಚಿತ್ರ ೧೭೫). ಈ ದೀಪಸ್ತಂಭವು ಚತುರ್ಭುಜ ಮತ್ತು ಅಷ್ಟಭುಜಗಳನ್ನು ಹೊಂದಿದೆ. ಚತುರ್ಭುಜದ ಭಾಗದಲ್ಲಿ ಉಬ್ಬುಶಿಲ್ಪಗಳು ಇರುವುದನ್ನು ಗಮನಿಸಬಹುದು. ಮೇಲೆ ತುದಿಯಲ್ಲಿ ವೃತ್ತಾಕಾರದ ಘಟದ ಭಾಗವು ಉಳಿದಿರುವುದು ಕಾಣುತ್ತದೆ. ಈ ದೀಪಸ್ತಂಭದ ಪಕ್ಕದಲ್ಲೇ ರಸ್ತೆ ಇರುವುದರಿಂದ ಇದನ್ನು ದಾರಿದೀಪವನ್ನಾಗಿ ಬಳಸಲಾಗುತ್ತಿತ್ತು ಎಂದು ತೋರುತ್ತದೆ.

ದೇವಾಲಯದ ಆವರಣದಲ್ಲಿ ಪುಟ್ಟದಾದ ಹತ್ತು ಅಡಿಯ ದೀಪಸ್ತಂಭವಿದೆ. ಇದಕ್ಕೆ ಮೂರುಅಡಿಯ ಪೀಠವಿದೆ (ಚಿತ್ರ ೧೭೬). ಈ ಸ್ತಂಭವನ್ನು ಸುಣ್ಣ ಬಣ್ಣಗಳಿಂದ ಅಲಂಕರಿಸಲಾಗಿದೆ. ಸ್ತಂಭದ ಕೆಳಭಾಗವು ಚೌಕಾಕಾರವನ್ನು, ಮೇಲಿನ ಭಾಗವು ಅಷ್ಟಭುಜಗಳನ್ನು ಹೊಂದಿದ್ದು ನಂತರ ತುದಿಯಲ್ಲಿ ವೃತ್ತಾಕಾರದ ಮತ್ತು ಚೌಕಾಕಾರದ ರಚನೆಯು ಇದೆ.

ಹಂಪಿಯಲ್ಲಿ ಇರುವ ಗುಡ್ಡದ ಮೇಲೆ ಪುರಾತನ ದೇವಾಲಯಗಳ ಅವಶೇಷಗಳಿವೆ. ಇಲ್ಲಿ ಇಪ್ಪತ್ತು ಅಡಿ ಎತ್ತರದ ದೀಪಸ್ತಂಭವು ಇರುವುದು ಕಾಣುತ್ತದೆ (ಚಿತ್ರ ೧೭೭). ಈ ದೀಪಸ್ತಂಭವನ್ನು ಪ್ರಸ್ತುತ ಬಳಸಲಾಗುತ್ತಿಲ್ಲ.

ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕು ವಿದ್ಯಾಶಂಕರ ದೇವಾಲಯವನ್ನು ಕ್ರಿಸ್ತ ಶಕ ೧೩೫೬ರಲ್ಲಿ ವಿದ್ಯಾತೀರ್ಥರ ಜ್ಞಾಪಕಾರ್ಥವಾಗಿ ನಿರ್ಮಿಸಲಾಗಿದೆ[೩೬]. ವಿದ್ಯಾತೀರ್ಥರು ವಿಜಯನಗರ ಸಾಮ್ರಾಜ್ಯದ ಸ್ಥಾಪಕನಾದ ವಿದ್ಯಾರಣ್ಯರ ಗುರು. ಈ ದೇವಾಲಯದ ಎದುರಿಗೆ ಇರುವ ದೀಪಸ್ತಂಭವು ಸುಮಾರು ಹನ್ನೆರಡು ಅಡಿ ಎತ್ತರವಿದೆ (ಚಿತ್ರ ೧೭೮). ಇದಕ್ಕೆ ವೇದಿಕಾ ಭದ್ರ ಪೀಠದ ಶೈಲಿಯ ಪೀಠವಿದೆ. ಇದರ ಮೇಲಿನ ಭಾಗವು ಇಲ್ಲವಾಗಿದೆ. ಈ ಸ್ತಂಭದ ದಂಡದ ಭಾಗವು ಕೆಳಗಿನಿಂದ ಮೇಲಿನವರೆಗೆ ಚೌಕಾಕಾರವನ್ನು ಹೊಂದಿರುವುದು ಕಾಣುತ್ತದೆ. ಸ್ತಂಭದ ತುದಿಯ ಭಾಗವು ಇಲ್ಲವಾಗಿದೆ.


ಶೃಂಗೇರಿ ತಾಲ್ಲೂಕು ಶಾರದಾದೇವಿ ದೇವಾಲಯವಿದೆ. ಈ ದೇವಾಲಯದ ಮೂಲಮೂರ್ತಿಯನ್ನು ವಿದ್ಯಾತೀರ್ಥರು ಪ್ರತಿಷ್ಠಾಪಿಸಿದರು ಎನ್ನಲಾಗುತ್ತದೆ. ಶಾರದಾದೇವಿ ದೇವಾಲಯದ ಎದುರಿಗಿರುವ ದೀಪಸ್ತಂಭದ ಎತ್ತರ ಸುಮಾರು ಇಪ್ಪತ್ತೈದು ಅಡಿಯಾಗಿದೆ. ಈ ಸ್ತಂಭಕ್ಕೆ ಸಾಧಾರಣವಾದ ಪೀಠವಿದೆ (ಚಿತ್ರ ೧೭೯). ಈ ಸ್ತಂಭದಲ್ಲಿನ ದಂಡದ ಕೆಳಗಿನ ಭಾಗವು ಚೌಕಾಕಾರ, ಮಧ್ಯಭಾಗವು ಅಷ್ಟಮೂಲೆ ಮತ್ತು ಮೇಲಿನ ಭಾಗವು ಹದಿನಾರು ಭಾಗಗಳನ್ನು ಹೊಂದಿದೆ. ಸ್ತಂಭದ ತುದಿಯಲ್ಲಿ ವೃತ್ತಾಕಾರದ ಫಲಕದಂತಹ ಭಾಗವು ಉಳಿದಿರುವುದು ಕಾಣುತ್ತದೆ.

---

೩೬ S.K. Ramachandra Rao:
The Art and Architecture of Indian Temples, volume III, ಪುಟ–೧೫೮



ಚಿತ್ರ ೧೭೬



ಚಿತ್ರ ೧೭೭



ಚಿತ್ರ ೧೭೮



ಚಿತ್ರ ೧೭೯

ಉಡುಪಿ ಜಿಲ್ಲೆಯ ಅಂಬಲ್ಪಾಡಿಯಲ್ಲಿರುವ ಮಹಾಕಾಳಿ ದೇವಾಲಯವು ಹದಿನೈದನೆಯ ಶತಮಾನಕ್ಕೂ ಹಿಂದಿನ ದೇವಾಲಯವಾಗಿದೆ. ಈ ದೇವಾಲಯದ ಎದುರು ಮೂವತ್ತು ಅಡಿ ಎತ್ತರದ ದೀಪಸ್ತಂಭವಿದೆ.

ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕು ಹಿರೇಕಲ್ಮಠದಲ್ಲಿ ಶ್ರೀ ಚನ್ನಪ್ಪಸ್ವಾಮಿ ದೇವಾಲಯವಿದೆ. ಈ ದೇವಾಲಯದ ಆವರಣದಲ್ಲಿ ಮೂವತ್ತು ಅಡಿ ಎತ್ತರದ ಸುಂದರವಾದ ದೀಪಸ್ತಂಭವಿದೆ (ಚಿತ್ರ ೧೮೦). ಸ್ತಂಭದ ಪೀಠವು ಸಾಧಾರಣವಾಗಿ ಚೌಕಾಕಾರವನ್ನು ಹೊಂದಿದೆ. ಈ ಪೀಠದ ಸುತ್ತಲೂ ನಾಲ್ಕೂ ಕಡೆಗಳಲ್ಲಿ ಉಬ್ಬುಶಿಲ್ಪಗಳನ್ನು ಬಹಳ ಸುಂದರವಾಗಿ ಕೆತ್ತಲಾಗಿದೆ. ಸ್ತಂಭದ ದಂಡದ ಭಾಗದ ಸ್ಥಳದಲ್ಲಿಯೂ ಅಲ್ಲಲ್ಲಿ ಉಬ್ಬುಶಿಲ್ಪಗಳಿವೆ.

ಈ ಸ್ತಂಭವು ಕೆಳಗಡೆ ಎರಡು ಅಡಿ ಎತ್ತರದ ಚೌಕಾಕಾರದ ರಚನೆಯನ್ನು ಹೊಂದಿದೆ. ಅದರ ನಂತರ ಅಷ್ಟ ಭುಜದ ರಚನೆಯು ಇದೆ. ಇವೆರಡರ ನಡುವೆ ನಾಲ್ಕೂ ಮೂಲೆಗಳಲ್ಲಿ ನಾಗಬಂಧವನ್ನು ಕೆತ್ತಲಾಗಿದೆ. ದೀಪಸ್ತಂಭದ ತುದಿಯ ಭಾಗದಲ್ಲಿ ವೃತ್ತಾಕಾರದ ರಚನೆಯ ಜೊತೆಗೆ ಚೌಕಾಕಾರದ ಫಲಕವು ಇದೆ. ಇದಕ್ಕೂ ನಂತರ ತುತ್ತ ತುದಿಯಲ್ಲಿ ದೀಪವನ್ನು ಬೆಳಗುವ ಸ್ಥಳದಲ್ಲಿ ಫಲಕದ ಮೇಲೆ ಉದ್ದಕ್ಕೆ ರಚನೆ ಇದೆ.

ದಾವಣಗೆರೆ ಜಿಲ್ಲೆಯ ಹೊನ್ನಾಳಿಯಲ್ಲಿ ಬಳ್ಳೇಶ್ವರ ದೇವಾಲಯವಿದೆ. ಈ ದೇವಾಲಯದ ಎದುರು ಏಳು ಅಡಿ ಎತ್ತರದ ಪುಟ್ಟ ದೀಪಸ್ತಂಭವಿದೆ (ಚಿತ್ರ ೧೮೧). ಈ ಸ್ತಂಭಕ್ಕೆ ಪೀಠವಿಲ್ಲ. ಇದರ ಕಾಂಡ ಭಾಗದಲ್ಲಿ ಕೆಳಗೆ ಚೌಕಾಕಾರದ ರಚನೆ ಇದ್ದರೆ ಇದರ ಮೇಲೆ ಅಷ್ಟ ಮೂಲೆಯನ್ನು ಹೊಂದಿರುವ ರಚನೆಯು ಇದೆ. ಸ್ತಂಭದ ತುದಿಯ ಭಾಗವು ವಿಶೇಷವಾದ ಆಕಾರವನ್ನು ಹೊಂದಿರುವುದನ್ನು ನೋಡಬಹುದು. ಈ ಸ್ತಂಭವನ್ನು ಎರಡು ವಿಧದ ಕಲ್ಲಿನಿಂದ ನಿರ್ಮಾಣ ಮಾಡಿರುವುದನ್ನು ಕಾಣುತ್ತೇವೆ.

ದಾವಣಗೆರೆ ಜಿಲ್ಲೆಯ ಹೊನ್ನಾಳಿಯ ತೀರ್ಥರಾಮೇಶ್ವರ ದೇವಾಲಯದ ಆವರಣದಲ್ಲಿ ನಲವತ್ತು ಅಡಿಯ ದೀಪಸ್ತಂಭವಿದೆ (ಚಿತ್ರ ೧೮೨). ಈ ದೀಪಸ್ತಂಭಕ್ಕೆ ಮೂರು ಅಡಿ ಎತ್ತರದ ಪೀಠವಿದೆ. ಸ್ತಂಭದ ಸುಮಾರು ಎರಡು ಅಡಿ ಎತ್ತರದ ಚೌಕಾಕಾರದ ಭಾಗದ ನಾಲ್ಕೂ ಕಡೆಗಳಲ್ಲಿ ಅಲಂಕಾರಿಕ ವಿನ್ಯಾಸಗಳಿವೆ. ನಂತರದ ಸ್ತಂಭ ಭಾಗವು ತುದಿಯವರೆಗೂ ಎಂಟು ಮೂಲೆಗಳನ್ನು ಹೊಂದಿದೆ. ಇದರ ನಾಲ್ಕು ಭುಜಗಳಲ್ಲಿ ಹಂತಗಳಂತೆ ರಚನೆಯನ್ನು ಮಾಡಲಾಗಿದೆ. ಮೇಲೆ ತುದಿಯಲ್ಲಿ ದೊಡ್ಡದಾದ ವೃತ್ತಾಕಾರದ ರಚನೆ ಇದ್ದು ಅಲ್ಲಿ ದೀಪವನ್ನು ಬೆಳಗಲಾಗುತ್ತದೆ.

ಗುಲ್ಬರ್ಗಾ ಜಿಲ್ಲೆಯ ಜೇವರಗಿಯ ಕೋಳಖಾರದಲ್ಲಿ ಇರುವ ದೀಪಸ್ತಂಭವೊಂದು ಚೌಕಾಕಾರದ ಪೀಠವನ್ನು ಹೊಂದಿದ್ದು ಅದರ ಮೇಲಿರುವ ದೀಪಸ್ತಂಭವನ್ನು ಕಲ್ಲಿನಿಂದ ನಿರ್ಮಿಸಿದ್ದಾರೆ (ಚಿತ್ರ ೧೮೩). ಇಡೀ ದೀಪಸ್ತಂಭವು ಕಮಲದ ಮೊಗ್ಗಿನಂತೆ ಇದ್ದು



ಚಿತ್ರ ೧೮೦



ಚಿತ್ರ ೧೮೧



ಚಿತ್ರ ೧೮೨



ಚಿತ್ರ ೧೮೩

ಸುತ್ತಲೂ ಹೊರಚಾಚಿದಂತೆ ಕಲ್ಲಿನ ರಚನೆಯನ್ನು ಹೊಂದಿದೆ. ಇದರ ಮಧ್ಯದಲ್ಲಿ ಅಲ್ಲಲ್ಲಿ ಪುಟ್ಟ ಪುಟ್ಟದಾದ ಕಮಲದ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ.

ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಕೋರವಾರದ ದೇವಾಲಯವೊಂದರಲ್ಲಿ ಏಳು ದೀಪಸ್ತಂಭಗಳು ಇರುವುದು ಕಾಣುತ್ತದೆ (ಚಿತ್ರ ೧೮೪). ಇದರಲ್ಲಿ ಐದು ದೀಪಸ್ತಂಭಗಳು ಸುಮಾರು ಹದಿನೈದು ಅಡಿ ಎತ್ತರವನ್ನು ಹೊಂದಿದ್ದು ಒಂದೇ ರೇಖೆಯಲ್ಲಿ ನಿಂತಿವೆ. ಇನ್ನುಳಿದ ದೀಪಸ್ತಂಭಗಳಲ್ಲಿ ಒಂದನ್ನು ಮಂಟಪದ ಮೇಲೆ ಇರಿಸಲಾಗಿದೆ. ಮತ್ತೊಂದು ದೀಪಸ್ತಂಭವು ಇವೆಲ್ಲವುದಕ್ಕಿಂತಾ ಎತ್ತರವಾದುದು. ಇದರ ಎತ್ತರವು ಸುಮಾರು ಮೂವತ್ತು ಅಡಿ. ಈ ದೀಪಸ್ತಂಭಗಳು ಕೋನಾಕೃತಿಯಲ್ಲಿದ್ದು ಇವು ಅಷ್ಟಭುಜಗಳನ್ನು ಹೊಂದಿದೆ. ಈ ದೀಪಸ್ತಂಭಗಳಲ್ಲೂ ಹೊರಚಾಚಿದಂತಹ ಕಲ್ಲಿನ ರಚನೆಗಳಿರುವುದು ಕಾಣುತ್ತದೆ. ಸ್ತಂಭಗಳ ತುದಿಯಲ್ಲಿ ದೀಪವನ್ನು ಬೆಳಗಿಸಲು ಕಲ್ಲಿನ ಬಟ್ಟಲನ್ನು ಇರಿಸಲಾಗಿದೆ. ಈ ದೇವಾಲಯವು ಬಹಳ ವಿಶಾಲವಾದ ಆವರಣವನ್ನು ಹೊಂದಿದೆ.

ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ರೇವಗಿಯಲ್ಲಿನ ದೇವಾಲಯದಲ್ಲಿ ಐದು ದೀಪಸ್ತಂಭಗಳಿರುವುದು ಕಾಣುತ್ತದೆ (ಚಿತ್ರ ೧೮೫). ನಾಲ್ಕು ದೀಪಸ್ತಂಭಗಳನ್ನು ಉದ್ದಕ್ಕೂ ಜೋಡಿಸಿದಂತೆ ನಿಲ್ಲಿಸಲಾಗಿದ್ದು ಒಂದನ್ನು ಮಾತ್ರ ಪೀಠದಂತಿರುವ ಎತ್ತರದ ರಚನೆಯ ಮೇಲೆ ನಿಲ್ಲಿಸಲಾಗಿದೆ. ಚೌಕಾಕಾರವನ್ನು ಹೊಂದಿರುವ ಪೀಠದ ನಾಲ್ಕೂ ಕಡೆಗಳಲ್ಲಿಯೂ ದೀಪಸ್ತಂಭದಲ್ಲಿ ಇರುವಂತೆ ಕಲ್ಲಿನ ಹೊರಚಾಚಿದಂತಹ ರಚನೆ ಇರುವುದು ಕಾಣುತ್ತದೆ. ಇವನ್ನೂ ಕೂಡ ದೀಪವನ್ನು ಬೆಳಗಲು ಬಳಸಲಾಗುತ್ತದೆ.

ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಸನ್ನತಿಯಲ್ಲಿರುವ ದೀಪಸ್ತಂಭವು ಸುಮಾರು ಇಪ್ಪತ್ತೈದು ಅಡಿ ಎತ್ತರವಿದೆ (ಚಿತ್ರ ೧೮೬). ಇದರ ಪೀಠವು ಚೌಕಾಕಾರವಾಗಿದ್ದು ಮೂರು ಹಂತಗಳನ್ನು ಹೊಂದಿದೆ. ಇದರ ನಂತರದಲ್ಲಿ ಚೌಕಾಕಾರ ಮತ್ತು ಅಷ್ಟ ಮೂಲೆಗಳನ್ನು ಹೊಂದಿರುವ ಸ್ತಂಭದ ದಂಡದ ಭಾಗವು ಸಿಗುತ್ತದೆ. ಸ್ತಂಭದ ದಂಡದ ಭಾಗದ ಅಲ್ಲಲ್ಲಿ ಪಟ್ಟಿಕೆಗಳನ್ನು ರಚಿಸಿದ್ದಾರೆ. ತುದಿಯಲ್ಲಿ ದೀಪವನ್ನು ಬೆಳಗಲು ಬಟ್ಟಿನಾಕಾರದ ಕಲ್ಲಿನ ರಚನೆ ಇದೆ.

೩. ಲೋಹ ಮಾಧ್ಯಮದ ದೀಪಸ್ತಂಭಗಳು:

ಶಿಲೆ ಮತ್ತು ಕಾಷ್ಠದ ನಂತರ ಬಳಕೆಗೆ ಬಂದ ಮಾಧ್ಯಮವೆಂದರೆ ಲೋಹ. ವಿವಿಧ ಲೋಹಗಳನ್ನು ಉಪಯೋಗಿಸಿ ರಚಿಸುವ ಕುಶಲಕರ್ಮವೇ ಕರ್ಮಗಾರಿಕೆ ಇಲ್ಲವೇ ಕಮ್ಮಾರಿಕೆಯಾಗಿದೆ. ಲೋಹವು ಶಿಲೆಯಂತಾಗಲೀ ಅಥವಾ ಮರದ ರೀತಿಯಲ್ಲಾಗಲೀ ನೈಸರ್ಗಿಕವಾಗಿ ನೇರವಾಗಿ ದೊರೆಯುವುದಿಲ್ಲ. ಭೂಮಿಯ ಮಣ್ಣಿನಲ್ಲಿ ಲೋಹವು ಖನಿಜದ ರೂಪದಲ್ಲಿ ದೊರೆಯುತ್ತದೆ.



ಚಿತ್ರ ೧೮೪



ಚಿತ್ರ ೧೮೫



ಚಿತ್ರ ೧೮೬



ಚಿತ್ರ ೧೮೭

ಭೂಮಿಯಲ್ಲಿ ಸುರಂಗವನ್ನು ರಚಿಸಿ ಅಲ್ಲಿ ದೊರೆಯುವ ಖನಿಜಯುಕ್ತವಾದ ಮಣ್ಣನ್ನು ತೆಗೆದು, ಆ ಮಣ್ಣಿನಿಂದ ಖನಿಜಗಳನ್ನು ಬೇರ್ಪಡಿಸಲಾಗುತ್ತದೆ. ಈ ಸುರಂಗವನ್ನು ಗಣಿ ಎಂದು ಕರೆಯುತ್ತಾರೆ. ಈ ರೀತಿಯಾಗಿ ಗಣಿಯ ಮುಖಾಂತರ ಹೊರ ತೆಗೆದ ವಿವಿಧ ಖನಿಜಗಳನ್ನು ಪ್ರಮಾಣ ಬದ್ಧವಾಗಿ ಮಿಶ್ರ ಮಾಡಲಾಗುತ್ತದೆ. ವಿವಿಧ ಖನಿಜಗಳ ಮಿಶ್ರಣದಿಂದ ವಿವಿಧ ರೀತಿಯ ಲೋಹಗಳ ಉತ್ಪತ್ತಿಯಾಗುತ್ತದೆ. ಇವುಗಳಲ್ಲಿ ಕಬ್ಬಿಣ, ಕಂಚು ಹಾಗೂ ಹಿತ್ತಾಳೆ ಎಂಬ ಲೋಹಗಳನ್ನು ಶಿಲ್ಪಕಲೆಯಲ್ಲಿ ಹೆಚ್ಚಾಗಿ ಉಪಯೋಗಿಸಲಾಗುತ್ತದೆ.

ಮಾನವನು ಪ್ರಾಚೀನ ಕಾಲದಿಂದಲೂ ತನ್ನ ಉಪಕರಣಗಳ ತಯಾರಿಕೆಯಲ್ಲಿ ಲೋಹವನ್ನು ಬಳಸಿಕೊಂಡಿದ್ದಾನೆ ಎಂಬುವುದಕ್ಕೆ ಅನೇಕ ನಿದರ್ಶನಗಳು ದೊರೆಯುತ್ತವೆ. ಭಾರತದ ಸಂಸ್ಕೃತಿಯನ್ನು ಸಾರುವ ಸಿಂಧೂ ನದಿ ನಾಗರಿಕತೆಯಾದ ಹರಪ್ಪಾ, ಮೊಹೆಂಜೋದಾರೋಗಳಲ್ಲಿ ಕ್ರಿಸ್ತ ಪೂರ್ವ ಸುಮಾರು ಎರಡು ಸಾವಿರದ ಐನೂರರಲ್ಲಿ ರಚಿಸಿರುವ ನರ್ತಕಿಯ ಶಿಲ್ಪವು ಕಂಚಿನ ಶಿಲ್ಪವಾಗಿದೆ. ಇದರಿಂದ ಅಂದಿನ ಕಾಲದ ಜನರಿಗೆ ಇದ್ದಂತಹ ಲೋಹದ ಬಗೆಗಿನ ಜ್ಞಾನದ ವಿಕಾಸದ ಅಂದಾಜನ್ನು ಮಾಡುವುದು ಸಾಧ್ಯವಾಗುತ್ತದೆ.

ಋಗ್ವೇದದ ಕಾಲದಲ್ಲಿಯೂ ಲೋಹಗಳ ಉತ್ಪಾದನೆ ಹಾಗೂ ಬಳಕೆಯು ಇತ್ತು ಎಂಬುವುದು ತಿಳಿದು ಬರುತ್ತದೆ. ಕ್ರಿಸ್ತ ಪೂರ್ವ ಸುಮಾರು ಮುನ್ನೂರರಲ್ಲಿ ಇದ್ದಂತಹ ಸುಶ್ರುತ ಎಂಬ ವೈದ್ಯನು ಅತ್ಯಂತ ನೈಪುಣ್ಯದಿಂದ ತಯಾರಿಸಲ್ಪಟ್ಟ ಸುಮಾರು ನೂರೆಪ್ಪತ್ತೇಳು ವಿಧದ ಶಸ್ತ್ರಚಿಕಿತ್ಸಾ ಉಪಕರಣಗಳ ಉಲ್ಲೇಖಗಳು ಇರುವುದು ತಿಳಿದು ಬರುತ್ತವೆ.

ಮೌರ್ಯರ ಕಾಲದಲ್ಲಿ ಲೋಹದ ಕಸುಬುದಾರು ಕತ್ತಿ, ಭರ್ಜಿ, ಬಾಣದ ತುದಿ ಹೀಗೆ ಇನ್ನೂ ಮುಂತಾದವುಗಳನ್ನು ಲೋಹದಲ್ಲಿ ತಯಾರಿಸುತ್ತಿದ್ದರು[೩೭] ಎಂಬುದು ಗಮನಕ್ಕೆ ಬರುತ್ತದೆ. ಮೌರ್ಯರ ಕಾಲದಲ್ಲಿ ಎಲ್ಲಾ ವಿಧದ ಲೋಹಗಳು ಬಳಕೆಯಲ್ಲಿ ಇದ್ದವು ಎಂದೂ ಗೊತ್ತಾಗುತ್ತದೆ. ಈ ಕಾಲದಲ್ಲಿ ಚಿನ್ನ, ಬೆಳ್ಳಿ, ಕಬ್ಬಿಣವು ಹೆಚ್ಚಾಗಿ ಬಳಕೆಯಲ್ಲಿದ್ದುವು[೩೮] ಜೊತೆಗೆ ಆಭರಣ, ಪಾತ್ರೆ ಸೇರಿದಂತೆ ಇನ್ನಿತರೆ ಅಲಂಕಾರಕ್ಕೆ ಬೇಕಾದ ಹಾಗೂ ಗೃಹೋಪಯೋಗಿ ವಸ್ತುಗಳು, ಯುದ್ಧದ ಉಪಕರಣಗಳು ಇನ್ನೂ ಮುಂತಾದ ವಸ್ತುಗಳನ್ನು ಲೋಹ ಮಾಧ್ಯಮದಲ್ಲಿ ರಚಿಸಿದ್ದಂತಹ ನಿದರ್ಶನಗಳು ದೊರೆಯುತ್ತವೆ. ಶುಂಗರ ಕಾಲದಲ್ಲಿ ಲೋಹದ ಶಿಲ್ಪಗಳನ್ನು ರಚಿಸಿದ ಪುರಾವೆಗಳು ದೊರೆತಿಲ್ಲ[೩೯]. ಚಿನ್ನದ ಅಲಂಕಾರಿಕ ಬಿಲ್ಲೆಗಳು ಹಾಗೂ ಪ್ರಾಣಿಗಳ ಆಕಾರವನ್ನು ಹೊಂದಿದ ಆಭರಣಗಳನ್ನು ಹೊರತು ಪಡಿಸಿದರೆ ಕಂಚನ್ನು ಬಳಸಿದಂತೆ ಎಲ್ಲೂ ತಿಳಿದುಬಂದಿಲ್ಲ.

೩೭. The great tradition- **Indian Bronzes Master pieces**, ಪುಟ–೧೬

೩೮. Nagaswamy: **Facets of South Indian Art and Architecture-1**, ಪುಟ–೮

೩೯. The great tradition- **Indian Bronzes Master pieces**, ಪುಟ–೧೬

ಉತ್ತರ ಭಾರತದಲ್ಲಿ ಕುಶಾನರ ಕಾಲದಲ್ಲಿ ಅದರಲ್ಲೂ ಕ್ರಿಸ್ತ ಶಕ ಒಂದನೆಯ ಶತಮಾನದಿಂದ ಮೂರನೆಯ ಶತಮಾನದವರೆಗೆ ಕಂಚನ್ನು ಉಪಯೋಗಿಸಿರುವಂತಹುದು ಕಂಡು ಬರುತ್ತದೆ. ದಕ್ಷಿಣ ಭಾರತದ ಸಮಕಾಲೀನರಾದ ಶಾತವಾಹನ ಮತ್ತು ಇಕ್ಷ್ವಾಕು ರಾಜ್ಯದ ಆಡಳಿತದಲ್ಲಿ ಕಂಚನ್ನು ಉಪಯೋಗಿಸಿರುವುದನ್ನು ನೋಡಬಹುದು[೪೦]. ಮುಂದಿನ ಕುಶಾನ-ಗುಪ್ತರ ಕಾಲದಲ್ಲಿ ಅದರಲ್ಲೂ ಕ್ರಿಸ್ತ ಶಕ ನಾಲ್ಕನೆಯ ಶತಮಾನದ ಕೊನೆ ಮತ್ತು ಐದನೆಯ ಶತಮಾನದ ಪ್ರಾರಂಭದಲ್ಲಿ ಕಂಚಿಗೆ ಮಹತ್ತರವಾದ ಸ್ಥಾನವು ದೊರೆತಿರುವುದು ಗಮನಾರ್ಹವಾದ ಸಂಗತಿಯಾಗಿದೆ.

ಮಧ್ಯಕಾಲಿಕ ಅವಧಿಯಲ್ಲಿನ ಭಾರತದ ಹಲವಾರು ಪ್ರಮುಖ ಸ್ಥಾನಗಳಲ್ಲಿ ಕಂಚಿನ ಕುಶಲಕಲೆಯನ್ನು ನೋಡಬಹುದಾದರೂ ಪ್ರತಿ ಪ್ರದೇಶದಲ್ಲೂ ಅದರದೇ ಆದ ವಿಭಿನ್ನತೆಯನ್ನು ಗುರುತಿಸಬಹುದು. ದಕ್ಷಿಣ ಭಾರತದ ಪಲ್ಲವರ ಕಂಚಿನ ಶಿಲ್ಪಗಳಿಗೂ ಬಂಗಾಳ ಹಾಗೂ ಬಿಹಾರದ ಶಿಲ್ಪಗಳಿಗೂ ವ್ಯತ್ಯಾಸ ಇರುವುದು ಕಂಡುಬರುತ್ತದೆ. ಕರ್ನಾಟಕ ಹಾಗೂ ಆಂಧ್ರ ಪ್ರದೇಶಗಳಲ್ಲಿ ನೊಳಂಬ, ಕಾಕತೀಯ, ಗಂಗರು, ಚಾಲುಕ್ಯರು ಹೀಗೆ ಹಲವಾರು ರಾಜಾಶ್ರಯಗಳಲ್ಲಿ ನಿರ್ಮಾಣಗೊಂಡ ಲೋಹ ಶಿಲ್ಪಗಳಲ್ಲಿ ವಿವಿಧ ಶೈಲಿಗಳು ಇರುವುದನ್ನು ಗುರುತಿಸಬಹುದಾಗಿದೆ.

ದಕ್ಷಿಣ ಭಾರತದಲ್ಲಿ ಕಂಚಿನ ಮೂರ್ತಿ ಶಿಲ್ಪಗಳನ್ನು ಮೊದಲು ರಚಿಸಲು ಉತ್ತೇಜಿಸಿದವರು ಕ್ರಿಸ್ತ ಶಕ ಎಂಟನೆಯ ಶತಮಾನದಿಂದ ಒಂಬತ್ತನೆಯ ಶತಮಾನದವರೆಗೆ ರಾಜ್ಯವನ್ನಾಳಿದ ಪಲ್ಲವರು ಎಂದರೆ ತಪ್ಪಾಗಲಾರದು. ಹೊಯ್ಸಳರ ಕಾಲದಲ್ಲಿಯೂ ಕಂಚಿನ ಶಿಲ್ಪಗಳನ್ನು ತಯಾರಿಸುತ್ತಿದ್ದರು. ಕ್ರಿಸ್ತ ಶಕ ೧೧೧೧ ರಿಂದ ೧೧೪೧ರ ಸುಮಾರಿಗೆ ನಿರ್ಮಿಸಲಾದ ರಾಜ ವಿಷ್ಣುವರ್ಧನನ ಭಾವಚಿತ್ರವನ್ನು ಹೊಂದಿರುವ ಕಂಚಿನ ಶಿಲ್ಪವು ಇದಕ್ಕೆ ಒಳ್ಳೆಯ ನಿದರ್ಶನವಾಗಿದೆ[೪೧]. ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲೂ ಕಂಚಿನ ಶಿಲ್ಪಗಳಿಗೆ ಹೆಚ್ಚಿನ ಮಹತ್ವವಿರುವುದು ತಿಳಿದು ಬರುತ್ತದೆ. ಕೃಷ್ಣದೇವರಾಯನ ಕಾಲದಲ್ಲಿ ಕಂಚಿನ ಸಾವಿರಾರು ಶಿಲ್ಪಗಳನ್ನು ರಚಿಸಿರುವುದು ತಿಳಿದು ಬರುತ್ತದೆ.

ಸಿಂದೂ ನದಿ ನಾಗರಿಕತೆಯ ಹರಪ್ಪನ್ನರಿಗಿಂತ ಹಿಂದೆ ತಾಮ್ರವನ್ನು ಸುತ್ತಿಗೆಯಂತಹ ಭಾರವಾದ ವಸ್ತುಗಳಿಂದ ಹೊಡೆದೂ ಹೊಡೆದೂ ತಯಾರಿಸಲಾಗುತ್ತಿತ್ತು ಎಂದು ಹೇಳಲಾಗುತ್ತದೆ. ಇದೇ ವಿಧಾನದಲ್ಲಿ ಸೂಜಿ, ದಬ್ಬಳ, ಮೀನು ಹಿಡಿಯುವ ಹುಕ್ಕು, ಮಣಿಗಳು, ಬಳೆಗಳು ಹೀಗೆ ಇನ್ನೂ ಅನೇಕ ವಸ್ತುಗಳನ್ನು ತಯಾರಿಸಲಾಗುತ್ತಿತ್ತು. ಹರಪ್ಪನ್ನರ ಕಾಲದಲ್ಲಿ ಕಂಚನ್ನು ಕರಗಿಸಲು ತಯಾರಿಸಿದ ಒಲೆ ದೊರೆತಿರುವುದು ಇದಕ್ಕೆ ಮತ್ತೊಂದು ಸಾಕ್ಷಿ ದೊರೆತಂತಾಗಿದೆ. ಈ ಒಲೆಯು ವೃತ್ತಾಕಾರಲ್ಲಿ ಇರುವುದಲ್ಲದೇ ಇಟ್ಟಿಗೆ ಮತ್ತು ಮಣ್ಣನ್ನು ಉಪಯೋಗಿಸಿ ನಿರ್ಮಿಸಿದ್ದಾಗಿದೆ. ಆರ್ಯನ್ನರ ಕಾಲದಲ್ಲಿ

---

೪೦. The great tradition- **Indian Bronzes Master pieces**, ಪುಟ-೧೬

೪೧. The great tradition- **Indian Bronzes Master pieces**, ಪುಟ-೭೨

(ಕ್ರಿಸ್ತ ಪೂರ್ವ ಸುಮಾರು ೧೭೦೦ರಿಂದ) ಕಂಚನ್ನು ಬಳಸಿದ ಕುರುಹುಗಳು ದೊರೆಯುವುದಿಲ್ಲ[೪೨].

ಕ್ರಿಸ್ತ ಶಕ ನಾಲ್ಕೂರರಲ್ಲಿ ನಿರ್ಮಿಸಿರುವ ದಿಲ್ಲಿಯ ಕುತುಬ್ ಮಿನಾರ್‌ನ ಬಳಿ ಇರುವ ಮೆಹರಾಲಿಯಲ್ಲಿ ಕಬ್ಬಿಣದ ಕಂಬವೊಂದಿದೆ. ಈ ಕಂಬವು ಸುಮಾರು ಏಳೂವರೆ ಮೀಟರ್ ಎತ್ತರವಿದ್ದು ಇಂದಿನವರೆಗೂ ಜಂಗು (ತುಕ್ಕು) ಹಿಡಿಯದೇ ನಿಂತಿರುವುದೇ ಈ ಕಂಬದ ವಿಶೇಷ[೪೩]. ಈ ಕಂಬಕ್ಕೆ ಬಳಸಲ್ಪಟ್ಟ ಲೋಹದ ಮಿಶ್ರಣದ ಪ್ರಮಾಣವನ್ನು ಇಂದಿಗೂ ಗುರುತಿಸಲಾಗಿಲ್ಲ. ಇದರಿಂದ ಅಂದಿನ ಭಾರತೀಯ ಶಿಲ್ಪಿಗಳಿಗೆ ಲೋಹದ ಬಗ್ಗೆ ಇದ್ದಂತಹ ವಿಶೇಷವಾದ ಜ್ಞಾನದ ಕುರುಹಷ್ಟೇ ನಮಗೆ ದೊರೆತಿದೆ ಎನ್ನಬಹುದು.

ಲೋಹದ ಶಿಲ್ಪಕಲೆಯ ರಚನೆಯಲ್ಲಿ ಮೂರು ಪ್ರಮುಖ ವಿಧಗಳಿವೆ. ಅವೆಂದರೆ ಲೋಹ ಕೆತ್ತನೆ, ಲೋಹದ ಎರಕದ ಕಲೆ ಮತ್ತು ಲೋಹದ ತಗಡು ಶಿಲ್ಪರಚನೆ. ಲೋಹದ ಕೆತ್ತನೆಯನ್ನು ಮಾಡಬೇಕಾದ ಶಿಲ್ಪಿಯು ರಚಿಸುವ ಮೂರ್ತಿಗಿಂತ ಲೋಹದ ಗಾತ್ರವು ಹೆಚ್ಚಾಗಿರಬೇಕಾಗುತ್ತದೆ. ಶಿಲಾ ಕೆತ್ತನೆಯ ಮಾದರಿಯಲ್ಲೇ ಲೋಹದ ಕೆತ್ತನೆಯನ್ನೂ ಮಾಡಬೇಕಾಗುತ್ತದೆ. ಲೋಹ ಕೆತ್ತನೆಗೆ ಅನುಗುಣವಾಗಿ ವಿವಿಧ ರೀತಿಯ ಉಳಿಗಳನ್ನು ಉಪಯೋಗಿಸುವುದು ಅವಶ್ಯವಾಗಿದೆ. ಲೋಹದ ಶಿಲ್ಪದ ಗಾತ್ರಕ್ಕೆ ತಕ್ಕಂತೆ ಉಳಿಗಳ ಗಾತ್ರಗಳಲ್ಲೂ ವೈವಿಧ್ಯತೆಗಳು ಇರುವುದನ್ನು ಕಾಣಬಹುದು.

ಲೋಹದ ಎರಕದ ರಚನೆಯಲ್ಲಿ ಉಳಿಗಳ ಉಪಯೋಗ ಲೋಹಕೆತ್ತನೆಯಲ್ಲಿ ಬಳಸುವುದಕ್ಕಿಂತ ಕಡಿಮೆ ಪ್ರಮಾಣದ್ದಾಗಿರುತ್ತದೆ. ಈ ರಚನಾ ವಿಧಾನದಲ್ಲಿ ಮೊದಲು ನಮಗೆ ಬೇಕಾದ ಆಕಾರವನ್ನು ಮೇಣದಲ್ಲಿ ರಚಿಸಿಕೊಳ್ಳಬೇಕಾಗುತ್ತದೆ. ನಂತರ ಅದಕ್ಕೆ ಮೇಣದ ಕಡ್ಡಿಗಳನ್ನು ಬಳಸಿಕೊಂಡು ಲೋಹವನ್ನು ಸುರಿಯಲು ಅನುಕೂಲವನ್ನು ಮಾಡಲಾಗುತ್ತದೆ. ಮೇಣದ ಇಡೀ ರಚನೆಯನ್ನು ಮಣ್ಣಿನ ಜೊತೆಗೆ ಇನ್ನೂ ಹಲವಾರು ಸಾಮಗ್ರಿಗಳನ್ನು ಮಿಶ್ರ ಮಾಡಿಕೊಂಡು ಪ್ಯಾಕ್ ಮಾಡಲಾಗುತ್ತದೆ.

ಈ ರೀತಿಯಾಗಿ ತಯಾರಿಸಿದ ಮಣ್ಣಿನ ಕವಚವನ್ನು ಹೊತ್ತಂತಹ ರಚನೆಯನ್ನು ಸುಡಲಾಗುತ್ತದೆ. ಆಗ ಒಳಗಿನ ಮೇಣವು ಕರಗಿ ಮೇಣದ ಗಾತ್ರದ ಖಾಲೀ ಜಾಗವು ಉತ್ಪತ್ತಿಯಾಗುತ್ತದೆ. ಇದರಲ್ಲಿ ತಯಾರಾದ ಒಂದು ರಂಧ್ರದ ಮುಖಾಂತರ ಕಾಯಿಸಿ ಕರಗಿಸಿದ ಲೋಹವನ್ನು ಎರಕ ಹೊಯ್ಯಲಾಗುತ್ತದೆ. ದ್ರವವಾದ ಲೋಹವು ಘನರೂಪವನ್ನು ತಾಳಿದಾಗ ಮೌಲ್ಡನ್ನು ಒಡೆಯಲಾಗುತ್ತದೆ. ಒಳಗಿನ ಘನರೂಪದ ಲೋಹವು ಮೇಣದಲ್ಲಿ ಮಾಡಿದ ಆಕೃತಿಯಾಗಿ ಪರಿವರ್ತನೆಗೊಂಡಿರುತ್ತದೆ. ಇದಾದ ನಂತರ ಮೆರಗನ್ನು ಅರದ ಮುಖಾಂತರ ನೀಡಲಾಗುತ್ತದೆ. ಲೋಹ ಎರಕದ ಶಿಲ್ಪರಚನೆಯಲ್ಲಿ ಮೇಣವನ್ನು

---

೪೨. The great tradition- **Indian Bronzes Master pieces,** ಪುಟ-೯

೪೩. Raghavendra Rao: Article- **Mystery of Delhi's iron pillar,** Wisdom- International monthly digest, october 2004. ಪುಟ-೫೨

ಬಳಸುವುದು ಒಂದು ವಿಧಾನವಾದರೆ, ಮತ್ತೊಂದು ವಿಧಾನವನ್ನು ಸ್ಯಾಂಡ್ ಕ್ಯಾಸ್ಟಿಂಗ್ ಎಂದು ಕರೆಯುತ್ತಾರೆ.

ನಮಗೆ ಬೇಕಾದ ಆಕಾರವನ್ನು ಮರದಲ್ಲಿ ಅಥವಾ ಕಲ್ಲಿನಲ್ಲಿ ಕೆತ್ತಿ ಮಣ್ಣಿನ ನಡುವೆ ಇರಿಸಿ ಮಣ್ಣನ್ನು ಚೆನ್ನಾಗಿ ಹದವಾಗಿ ಕೂರುವಂತೆ ಮಾಡಲಾಗುತ್ತದೆ. ನಂತರ ಮರದ ಇಲ್ಲವೇ ಕಲ್ಲಿನ ಆ ಆಕೃತಿಯನ್ನು ಹೊರ ತೆಗೆದು ಅಲ್ಲಿ ನಿರ್ಮಾಣಗೊಂಡ ಖಾಲೀ ಜಾಗಕ್ಕೆ ದ್ರವರೂಪದ ಲೋಹವನ್ನು ರಂಧ್ರವೊಂದರ ಮುಖಾಂತರ ಒಳಗೆ ಹಾಕಲಾಗುತ್ತದೆ. ಲೋಹವು ತಣ್ಣಗಾಗಿ ಘನರೂಪವನ್ನು ತಾಳಿದ ಮೇಲೆ ದೊರೆಯುವ ಆಕಾರವನ್ನು ಅರವನ್ನು ಉಪಯೋಗಿಸಿ ಅದರ ಮೇಲ್ಮೈಯನ್ನು ಸಜ್ಜುಗೊಳಿಸಲಾಗುತ್ತದೆ. ಉಬ್ಬುಶಿಲ್ಪಗಳನ್ನು ಹೆಚ್ಚಾಗಿ ಈ ವಿಧಾನದಲ್ಲೇ ರಚಿಸಲಾಗುವುದು. ಹಾಗಾಗಿ ಲೋಹದ ಎರಕದ ವಿಧಾನದಲ್ಲಿ ಎರಡು ವಿಧಗಳಿರುವುದು ಕಾಣಲು ಸಿಗುತ್ತದೆ. ತಮಗೆ ಬೇಕಾದ ಕಲಾಕೃತಿಯನ್ನು ರಚಿಸಲು ಈ ಎರಡು ರೀತಿಯ ರಚನೆಯಲ್ಲಿ ಯಾವುದು ಅವಶ್ಯವೋ ಅದರ ಕ್ರಮವನ್ನು ಅನುಸರಿಸಿ ಕಲಾವಿದನು ಶಿಲ್ಪಗಳನ್ನು ರಚಿಸುತ್ತಾನೆ.

ಲೋಹಶಿಲ್ಪ ರಚನೆಯಲ್ಲಿ ಮತ್ತೊಂದು ವಿಧಾನವೆಂದರೆ ಲೋಹದ ತಗಡು ಶಿಲ್ಪ ರಚನೆಯಾಗಿದೆ. ಈ ರಚನಾ ವಿಧಾನವು ವಿಶೇಷವಾದುದಾಗಿದೆ. ಇದನ್ನು ಲೋಹ ಕೆತ್ತನೆಯ ರೀತಿಯಲ್ಲಾಗಲೀ ಅಥವಾ ಮೇಣದಲ್ಲಿ ರಚಿಸಿ ಎರಕ ಹೊಯ್ಯುವ ರೀತಿಯಲ್ಲಾಗಲೀ ರಚಿಸುವುದಿಲ್ಲ. ಲೋಹದ ತಗಡು ಎಂದರೆ ಲೋಹದ ತೆಳುವಾದ ಹಾಳೆ ಎಂದರ್ಥ. ಈ ವಿಧಾನದಲ್ಲಿ ಲೋಹದ ತಗಡಿನ ಜೊತೆಗೆ ಈ ರಚನಾ ವಿಧಾನದಲ್ಲಿ ಲಪ್ಪ, ಕೊಬ್ಬರಿ ಎಣ್ಣೆ ಇನ್ನೂ ಮುಂತಾದ ಇನ್ನಿತರೆ ಸಾಮಗ್ರಿಗಳನ್ನು ಬಳಸಲಾಗುತ್ತದೆ.

ಮೊದಲು ಲಪ್ಪ ಮತ್ತು ಕೊಬ್ಬರಿ ಎಣ್ಣೆಯನ್ನು ಒಂದು ವಿಶೇಷವಾದ ಪ್ರಮಾಣದಲ್ಲಿ ಬೆರೆಸಿ ಚೆನ್ನಾಗಿ ಕಾಯಿಸಲಾಗುತ್ತದೆ. ಅದು ಒಂದು ಹದಕ್ಕೆ ಬಂದ ಮೇಲೆ ಮರದ ಹಲಗೆ ಅಥವಾ ಗಟ್ಟಿಯಾದ ಸಮತಟ್ಟಿನ ಮೇಲೆ ರಚಿಸಲಿರುವ ಶಿಲ್ಪದ ಅಳತೆಗಿಂತ ದೊಡ್ಡದಾಗಿ ಚಪ್ಪಟೆಯಾಗಿ ಹಾಕಲಾಗುತ್ತದೆ. ನಂತರ ಲೋಹದ ತಗಡನ್ನು ತೆಗೆದುಕೊಂಡು ಅದರ ಮೇಲೆ ರಚಿಸಲಿರುವ ಶಿಲ್ಪದ ಚಿತ್ರವನ್ನು ರಚಿಸಲಾಗುತ್ತದೆ. ಲೋಹದ ತಗಡಿನ ಮೇಲೆ ಚಿತ್ರ ರಚನೆಯಾದ ನಂತರ ಎಲ್ಲೆಲ್ಲಿ ಚಿತ್ರಕ್ಕೆ ಅನುಗುಣವಾಗಿ ಎಲ್ಲಿ ಉಬ್ಬು ಬರುತ್ತದೋ ಅಲ್ಲಲ್ಲಿ ಉಪಕರಣಗಳ ಸಹಾಯದಿಂದ ಅದರ ಆಕಾರಗಳನ್ನು ರಚಿಸಲಾಗುತ್ತದೆ. ಹೀಗೆ ಲೋಹದ ಶಿಲ್ಪಗಳನ್ನು ಮೂರು ವಿವಿಧ ರೀತಿಯಲ್ಲಿ ರಚಿಸಬಹುದಾಗಿದೆ.

ಕೇರಳದ ಸಹಸ್ರ ದೀಪಂ ಭಾರತದ ಅತಿ ದೊಡ್ಡ ಲೋಹದ ತೈಲ ದೀಪವಾಗಿದೆ. ಇದನ್ನು ಭೋಪಾಲ್‌ನ ಇಂದಿರಾಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯದಲ್ಲಿ ೧೪ ಜುಲೈ ೨೦೦೩ರಲ್ಲಿ ಅನಾವರಣಗೊಳಿಸಲಾಗಿದೆ. ಸುಮಾರು ೨,೦೦೦ ಕಿಲೋ ತೂಕ ಹಾಗೂ ೧೫ ಅಡಿ ಎತ್ತರವಿರುವ ಈ ಸ್ತಂಭವು ೧೩ ಹಂತ (ಸ್ತರ)ಗಳನ್ನು ಹೊಂದಿದ್ದು ಒಮ್ಮೆಗೇ ೧೦೦೧ ದೀಪಗಳನ್ನು ಹೊತ್ತಿಸಬಹುದಾಗಿದೆ[೪೪].

---

೪೪. ಲೇಖನ– **ಸಹಸ್ರ ದೀಪಂ**, ವಿಜಯ ಕರ್ನಾಟಕ, ದಿನಪತ್ರಿಕೆ, ೧೬ ಜುಲೈ ೨೦೦೩, ಮುಖಪುಟ

ಲೋಹದ ದೀಪಸ್ತಂಭಗಳು ಹೆಚ್ಚಾಗಿ ಮಲೆನಾಡು ಪ್ರದೇಶಗಳಲ್ಲಿ ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದೊರೆಯುತ್ತವೆ. ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೊಲ್ಲೂರು ಮೂಕಾಂಬಿಕಾ ದೇವಾಲಯದ ಎದುರಿಗಿರುವ ದೀಪಸ್ತಂಭವು ಇದಕ್ಕೆ ಉತ್ತಮ ನಿದರ್ಶನವಾಗಿದೆ (ಚಿತ್ರ ೧೮೭). ಕೊಲ್ಲೂರಿನ ಮೂಕಾಂಬಿಕೆ ದೇವಾಲಯವನ್ನು ಕ್ರಿಸ್ತ ಶಕ ಏಳನೆಯ ಶತಮಾನಕ್ಕೂ ಹಿಂದೆ ನಿರ್ಮಿಸಲಾಗಿದೆ ಎಂದು ತಿಳಿದು ಬರುತ್ತದೆ[೪೫]. ಕೊಲ್ಲೂರು ಮೂಕಾಂಬಿಕಾ ಎದುರಿಗಿರುವ ದೀಪಸ್ತಂಭವು ಸುಮಾರು ೩೦ ಅಡಿ ಎತ್ತರವಿದ್ದು ಹಿತ್ತಾಳೆಯಿಂದ ನಿರ್ಮಿಸಿದ್ದಾಗಿದೆ. ಈ ಹಿತ್ತಾಳೆಯ ಕಂಬವನ್ನು ಸೋಮೇಶಿ ಎಲ್ಲಪ್ಪನ ಮಗ ಪಂಡ್ಯಪ್ಪನು ಮಾಡಿಸಿದನೆಂದು ದೀಪಸ್ತಂಭದಲ್ಲಿನ ಶಾಸನವು ತಿಳಿಸುತ್ತದೆ[೪೬]. ಈ ಶಾಸನದ ಮೇಲಿನ ಲಿಪಿಯಿಂದ ಈ ದೀಪಸ್ತಂಭವು ೧೮ನೆಯ ಶತಮಾನಕ್ಕೆ ಸೇರುತ್ತದೆ ಎಂದು ಗುರುತಿಸಲಾಗಿದೆ ಮತ್ತು ಈ ಸ್ತಂಭವನ್ನು ಆಗಲೇ ಪ್ರತಿಷ್ಠಾಪಿಸಿರುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತದೆ.

ಲೋಹದ ದೀಪಸ್ತಂಭಗಳು ಸುಂದರವಾಗಿ ಆಕರ್ಷಣೀಯವಾಗಿರುತ್ತವೆ. ಈ ದೀಪಸ್ತಂಭಗಳು ಎತ್ತರಕ್ಕೆ ಹೋದಂತೆ ಮೊನಚಾಗುತ್ತಾ ಹೋಗುತ್ತವೆ. ಇದರ ಪ್ರತಿ ಹಂತದಲ್ಲಿಯೂ ಕಮಲದಾಕಾರವು ಇರುವುದನ್ನು ಕಾಣಬಹುದು. ಈ ಕಮಲದ ಆಕಾರದಲ್ಲಿರುವ ಪ್ರತಿಯೊಂದು ದಳಗಳು ದೀಪದ ಹಣತೆಯಂತೆ ಇರುತ್ತವೆ. ಇವು ಅಗಲವಾಗಿರುತ್ತದೆ ಅಲ್ಲದೇ ಪ್ರತಿಯೊಂದರಲ್ಲೂ ದೀಪವನ್ನು ಬೆಳಗಲು ಅವಕಾಶವನ್ನು ಮಾಡಲಾಗಿರುತ್ತದೆ.

ಲೋಹದಲ್ಲಿ ರಚಿಸಲ್ಪಟ್ಟಿರುವ ದೀಪಸ್ತಂಭದ ಪೀಠದ ಕೆಳಗೆ ಕೂರ್ಮದ ಆಕಾರವನ್ನು ಹೊಂದಿದ ರಚನೆಯು ಇರುವುದನ್ನು ಗಮನಿಸಬಹುದು. ಈ ದೀಪಸ್ತಂಭಗಳ ಪೀಠಗಳು ಕೆಲವೆಡೆ ಬೃಂದಾವನದ ಆಕಾರವನ್ನು ಹೊಂದಿರುವುದು ಕಂಡು ಬರುತ್ತದೆ. ಉಡುಪಿಯ ಶ್ರೀ ಕೃಷ್ಣ ದೇವಾಲಯದ ಒಳ ಆವರಣದಲ್ಲಿರುವ ದೀಪಸ್ತಂಭವು ಇದಕ್ಕೆ ಸಾಕ್ಷಿಯಾಗಿ ನಿಂತಿದೆ. ಈ ದೀಪಸ್ತಂಭವು ಇಪ್ಪತ್ತು ಅಡಿ ಎತ್ತರವನ್ನು ಹೊಂದಿದೆ. ಇಲ್ಲಿ ದೀಪಸ್ತಂಭವೂ ಸೇರಿದಂತೆ ಪ್ರಾಕಾರವನ್ನು ನಿರ್ಮಿಸಲಾಗಿದೆ. ಈ ದೀಪಸ್ತಂಭವನ್ನು ಕೊಲ್ಲೂರಿನ ದೀಪಸ್ತಂಭದಂತೆ ರಚಿಸಲಾಗಿದೆ.

ಮಂಗಳೂರಿನಲ್ಲಿ ಇರುವ ಕದ್ರಿ ಮಂಜುನಾಥ ದೇವಾಲಯದ ಎದುರು ಲೋಹದ ದೀಪಸ್ತಂಭವಿದೆ. ಈ ದೀಪಸ್ತಂಭವು ಮೂವತ್ತು ಅಡಿ ಎತ್ತರವನ್ನು ಹೊಂದಿದೆ.

---

೪೫. S.K. Ramachandra Rao:
The Art and Architecture of Indian Temples, volume III, ಪುಟ–೭೫

೪೬. .....the weight of the brass sheet is said to have been 9 monds and four seers, The record is engraved in the characters of abt the 18th century to which period the pillar belongs.....
Choodamani Nandagopal and Vatsala Iyengar:
Temple Treasures, volume I, Temple Utensils and Rituals, ಪುಟ– ೧೧೩



ಚಿತ್ರ ೧೮೮-೧



ಚಿತ್ರ ೧೮೯



ಚಿತ್ರ ೧೮೮-೨

ಈ ದೀಪಸ್ತಂಭವು ಕಾಲುದೀಪದಂತೆ ಸ್ತಂಭದ ಕೆಳಗಿನಿಂದ ಮೇಲಿನವರೆಗೆ ಹಂತಗಳಲ್ಲಿ ಕಮಲದ ರಚನೆಯನ್ನು ಹೊಂದಿರುವುದನ್ನು ಕಾಣಬಹುದು.

ಮಡಿಕೇರಿ ಜಿಲ್ಲೆಯ ಭಾಗಮಂಡಲದಲ್ಲಿ ಭಗಂಡೇಶ್ವರ ದೇವಸ್ಥಾನವಿದೆ. ಭಗಂಡ ಎಂಬ ಮಹರ್ಷಿಯೊಬ್ಬರು ಇಲ್ಲಿನ ಮೂರ್ತಿಶಿಲ್ಪವನ್ನು ಸ್ಥಾಪಿಸಿರುವುದರಿಂದ ಈ ಹೆಸರು ಬಂದಿದೆ. ಈ ದೇವಾಲಯದ ಮುಂದೆ ದೀಪಸ್ತಂಭವಿದೆ (ಚಿತ್ರ ೧೮೮-೧.೨). ಇದನ್ನು ದೀಪಮಾಲೆಗಂಬ ಎಂದೂ ಕರೆಯುತ್ತಾರೆ. ದೇವಾಲಯದ ಹೊರ ಆವರಣದಲ್ಲಿ ಇರುವ ಈ ದೀಪಸ್ತಂಭವು ಲೋಹದ ದೀಪಸ್ತಂಭವಾಗಿದೆ. ಈ ದೀಪಸ್ತಂಭವು ವೃಕ್ಷದೀಪದ ರಚನೆಯನ್ನು ಹೊಂದಿರುವುದು ವಿಶೇಷವೇ ಆಗಿದೆ.

ದೀಪಸ್ತಂಭದಲ್ಲಿ ಮೂರು ಹಂತಗಳಿದ್ದು ಕೆಳಗಿನ ಹಂತದಲ್ಲಿ ಹದಿನೈದು ದೀಪದ ಹಣತೆಗಳನ್ನು, ಇದರ ನಂತರದ ಹಂತದಲ್ಲಿ ಹನ್ನೆರಡು ದೀಪದ ಹಣತೆಗಳನ್ನು, ಮೂರನೆಯ ಹಂತದಲ್ಲಿ ಒಂಬತ್ತು ಹಣತೆಗಳನ್ನು ಇರಿಸಲು ಅವಕಾಶವನ್ನು ಮಾಡಲಾಗಿದೆ. ದೀಪಸ್ತಂಭದ ತುದಿಯಲ್ಲಿ ದೊಡ್ಡ ಹಣತೆಯ ರಚನೆ ಇದ್ದು ಇದರ ಮಧ್ಯದಲ್ಲಿ ದೀಪದಮಲ್ಲಿಯ ಶಿಲ್ಪವಿದೆ. ದೀಪಸ್ತಂಭದ ದಂಡದ ಭಾಗವು ಸುರುಳಿಯಂತೆ ರಚನೆಯನ್ನು ಹೊಂದಿದೆ.

ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನ ಬರಗೂರಿನಲ್ಲಿರುವ ಆಂಜನೇಯನ ಗುಡಿ ಎದುರು ಕಲ್ಲಿನ ದೀಪಸ್ತಂಭವಿದೆ. ಇದರ ಮುಂದೆ ಮತ್ತೊಂದು ಲೋಹದ ದೀಪಸ್ತಂಭವಿದೆ. ಇದು ಕಬ್ಬಿಣದ ದೀಪಸ್ತಂಭವಾಗಿದೆ. ಇದು ಚೌಕಾಕಾರವನ್ನು ಹೊಂದಿರುವ ಉದ್ದನೆಯ ಸ್ತಂಭವಾಗಿದ್ದು ಇದರ ಎತ್ತರ ಏಳು ಅಡಿಯಾಗಿದೆ. ಇದರ ತುದಿಯಲ್ಲಿ ದೀಪವನ್ನು ಬೆಳಗಲು ಒಂದು ದೊಡ್ಡದಾದ ಚೌಕಾಕಾರದ ಬಟ್ಟಲನ್ನು ಅಳವಡಿಸಲಾಗಿದೆ.

ಬೆಂಗಳೂರು ಜಿಲ್ಲೆಯ ಆನೇಕಲ್ಲು ತಾಲ್ಲೂಕಿನ ಬನ್ನೇರುಘಟ್ಟದಲ್ಲಿ ಶ್ರೀ ಸಂಪಂಗಿರಾಮ ದೇವಾಲಯವಿದೆ. ಈ ದೇವಾಲಯದ ಆವರಣದಲ್ಲಿ ನಾಲ್ಕು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೮೯). ಭಕ್ತಾದಿಗಳು ಕರ್ಪೂರವನ್ನು ಬೆಳಗಲು ಅನುಕೂಲವಾಗಲೆಂದು ಇದನ್ನು ಸ್ಥಾಪಿಸಲಾಗಿದೆ. ಇದು ಕರ್ಪೂರವನ್ನು ಬೆಳಗುವ ಸ್ತಂಭವಾದರೂ ದೀಪದ ಸ್ತಂಭ ಎಂದು ಕರೆಯಬಹುದು. ಈ ದೀಪಸ್ತಂಭವು ಹೂವು ಬಳ್ಳಿಯ ವಿನ್ಯಾಸವನ್ನು ಹೊಂದಿದ್ದು ಬಹಳ ಅಲಂಕೃತವಾಗಿದೆ. ಸ್ತಂಭದ ತುದಿಯಲ್ಲಿ ಕರ್ಪೂರವನ್ನು ಬೆಳಗಲು ಚೌಕಾಕಾರದ ಲೋಹದ ಫಲಕವಿದೆ. ಇದು ಒಂದು ಅಡಿಯ ಚೌಕಾಕಾರವನ್ನು ಹೊಂದಿದೆ. ಈ ಸ್ತಂಭವನ್ನು ಕಲ್ಲಿನ ಪುಟ್ಟ ಪೀಠದ ಮೇಲೆ ಇರಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಹಂಪಿಯಲ್ಲಿರುವ ಶ್ರೀ ವಿರೂಪಾಕ್ಷ ದೇವಾಲಯವಿದೆ. ಈ ದೇವಾಲಯವು ಅತ್ಯಂತ ಪುರಾತನವಾದುದಾಗಿದೆ. ಈ ದೇವಾಲಯದ ಮೂಲಮೂರ್ತಿಯನ್ನು ಶ್ರೀರಾಮನು ಸ್ಥಾಪಿಸಿದನು ಎಂಬ ಸ್ಥಳ ಪುರಾಣವು



ಚಿತ್ರ ೧೯೦-೧



ಚಿತ್ರ ೧೯೦-೩



ಚಿತ್ರ ೧೯೦-೨

ದೊರೆಯುತ್ತದೆ. ಈ ದೇವಾಲಯವು ಅತ್ಯಂತ ಪುರಾತನವಾದುದಾಗಿದೆ. ರಾಜ ಮಹಾರಾಜರು ಸುಮಾರು ೧೬ನೆಯ ಶತಮಾನದವರೆಗೂ ಈ ದೇವಾಲಯಕ್ಕೆ ಪ್ರಾಕಾರಗಳನ್ನು ನಿರ್ಮಿಸುತ್ತಾ ಬಂದಿದ್ದಾರೆ. ಶ್ರೀ ವಿರೂಪಾಕ್ಷನು ವಿಜಯನಗರ ಅರಸರ ಆರಾಧ್ಯದೈವವಾಗಿದ್ದನು. ಆದ್ದರಿಂದ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಈ ದೇವಾಲಯಕ್ಕೆ ಹೊಚ್ಚು ಮಹತ್ವವಿರುತ್ತಿತ್ತು.

ವಿರೂಪಾಕ್ಷ ದೇವಾಲಯದ ಆವರಣದಲ್ಲಿ ದೀಪಸ್ತಂಭವಿದೆ (ಚಿತ್ರ ೧೯೦–೧). ಇದರ ಎತ್ತರವು ಮೂವತ್ತು ಅಡಿಯಾಗಿದೆ. ಈ ಸ್ತಂಭವನ್ನು ಕಬ್ಬಿಣದಲ್ಲಿ ರಚಿಸಲಾಗಿರುವುದೇ ವಿಶೇಷ. ಕಬ್ಬಿಣದ ದೀಪಸ್ತಂಭಗಳು ಹೆಚ್ಚಾಗಿ ದೊರೆಯುವುದಿಲ್ಲ. ಅದರಲ್ಲು ಈ ದೀಪಸ್ತಂಭವು ಪುರಾತನ ಕಾಲದಲ್ಲಿ ನಿರ್ಮಿಸಿರುವುದರಿಂದ ಇದು ಇನ್ನಷ್ಟು ಮಹತ್ವವನ್ನು ಹೊಂದುತ್ತದೆ. ಸ್ತಂಭದ ಪೀಠದ ಭಾಗವು ಕಲ್ಲಿನಿಂದ ನಿರ್ಮಿಸಲಾಗಿದೆ (ಚಿತ್ರ ೧೯೦–೨). ಈ ಪೀಠದಲ್ಲಿ ಆನೆಗಳ ಉಬ್ಬುಶಿಲ್ಪಗಳು ಇರುವುದನ್ನು ನೋಡಬಹುದು.

ಇದರ ಮೇಲೆ ಮತ್ತೊಂದು ಉಪಪೀಠವಿದೆ. ಇದಾದ ನಂತರ ಇರುವುದೇ ದೀಪಸ್ತಂಭದ ದಂಡದ ಭಾಗ. ಈ ಭಾಗವು ವೃತ್ತಾಕಾರವನ್ನು ಹೊಂದಿದ್ದು ಮೇಲೆ ಹೋದಂತೆ ಮೊನಚಾಗುತ್ತಾ ಹೋಗುತ್ತದೆ. ಇದಕ್ಕೆ ಅಲ್ಲಲ್ಲಿ ಪಟ್ಟಿಕೆಗಳನ್ನು ಅಲಂಕಾರಕ್ಕಾಗಿ ಹಾಕಲಾಗಿದೆ. ದೀಪಸ್ತಂಭದ ತುದಿಯು ವಿಶೇಷವಾದ ಅಲಂಕಾರದಿಂದ ಕೂಡಿರುವುದು ಕಾಣುತ್ತದೆ. (ಚಿತ್ರ ೧೯೦–೩) ಇದರಲ್ಲಿ ಒಂಬತ್ತು ದೀಪಗಳನ್ನು ಹೊಂದಲು ದೀಪದ ಬಟ್ಟಲುಗಳನ್ನು ಅಳವಡಿಸಲಾಗಿದೆ. ಇದು ಬಹಳ ವಿಶೇಷವಾದ ದೀಪಸ್ತಂಭ ಎಂದು ಹೇಳಬಹುದು.

ಹಿಂದೂ ದೇವಾಲಯಗಳಲ್ಲಷ್ಟೇ ಅಲ್ಲದೆ ಜೈನರ ಮಂದಿರವಾದ ಬಸದಿಗಳಲ್ಲೂ ದೀಪಸ್ತಂಭಗಳು ಇರುವುದನ್ನು ಕಾಣುತ್ತೇವೆ. ಇಲ್ಲಿ ಲೋಹದ ದೀಪಸ್ತಂಭಗಳು ಹೆಚ್ಚಾಗಿ ದೊರೆಯುತ್ತವೆ. ಇವು ಎತ್ತರದ ಕಾಲುದೀಪಗಳಾಗಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಧರ್ಮಸ್ಥಳದ ರತ್ನಗಿರಿಯಲ್ಲಿ ಗೊಮ್ಮಟೇಶ್ವರನ ಮೂರ್ತಿ ಇದೆ. ಈ ಮೂರ್ತಿಶಿಲ್ಪದ ಎರಡೂ ಕಡೆಗಳಲ್ಲಿ ಕಂಚಿನಲ್ಲಿ ತಯಾರಿಸಿದ ಕಾಲುದಿಪಗಳನ್ನು ಇರಿಸಲಾಗಿದೆ (ಚಿತ್ರ ೧೯೧–೧,೨). ಇವುಗಳ ರಚನೆಯು ಹಿಂದೂ ಸಂಪ್ರದಾಯದ ಕಾಲುದೀಪವನ್ನು ಹೋಲುತ್ತವೆ. ಇವು ಏಳು ಅಡಿ ಎತ್ತರವನ್ನು ಹೊಂದಿವೆ. ಈ ದೀಪಸ್ತಂಭದಲ್ಲಿ ದೀಪದ ಒಂದು ಬಟ್ಟಲಿದ್ದು ಅದರಲ್ಲಿ ಐದು ಕಡೆಗಳಲ್ಲಿ ಬತ್ತಿಯನ್ನು ಇಟ್ಟು ದೀಪವನ್ನು ಬೆಳಗಬಹುದು. ಇದರ ಮೇಲೆ ನವಿಲಿನ ಶಿಲ್ಪವಿದೆ.

ವೇಣೂರಿನಲ್ಲಿರುವ ಗೊಮ್ಮಟೇಶ್ವರ ಮೂರ್ತಿಯ ಎರಡೂ ಕಡೆಗಳಲ್ಲಿ ದೀಪದ ಸ್ತಂಭಗಳಿವೆ. ಇವು ಕೂಡಾ ಕಾಲುದೀಪಗಳಂತೆ ತೋರುತ್ತವೆ (ಚಿತ್ರ ೧೯೨). ಈ ದೀಪಸ್ತಂಭಗಳನ್ನು ಕಂಚಿನಲ್ಲಿ ರಚಿಸಲಾಗಿದೆ. ಇದರಲ್ಲಿ ಕಮಲದಂತೆ ರಚಿಸಲಾದ ಬಟ್ಟಲುಗಳನ್ನು ಏಳು ಹಂತಗಳಲ್ಲಿ ಒಂದರ ಮೇಲೆ ಒಂದರಂತೆ ಜೋಡಿಸಲಾಗಿದೆ. ಪ್ರತಿ



ಚಿತ್ರ ೧೯೧–೧



ಚಿತ್ರ ೧೯೧–೨



ಚಿತ್ರ ೧೯೨



ಚಿತ್ರ ೧೯೩

ಹಂತದಲ್ಲೂ ಐದ್ಯೆದು ದೀಪಗಳನ್ನು ಬೆಳಗಿಸುವ ಅವಕಾಶವು ಈ ದೀಪಸ್ತಂಭಗಳಲ್ಲಿ ಇದೆ. ಇದರ ಎತ್ತರ ಆರು ಅಡಿಗಳು.

ಕರ್ನಾಟಕದ ದೇವಾಲಯಗಳ ಆವರಣದಲ್ಲಿ ಲೋಹ ಮಾಧ್ಯಮದ ದೀಪಸ್ತಂಭಗಳು ದೊರೆಯುವುದು ಕಾಣುತ್ತದೆ. ಬಹಳ ಸುಂದರವಾದ ಕಲಾತ್ಮಕತೆಯಿಂದ ಕೂಡಿದ ದೀಪಸ್ತಂಭಗಳು ಇವಾಗಿವೆ.

೪. ಸಂಕೀರ್ಣ ಮಾಧ್ಯಮದ ದೀಪಸ್ತಂಭಗಳು:

ಸಂಕೀರ್ಣ ಮಾಧ್ಯಮ ಎಂದರೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಮಾಧ್ಯಮಗಳನ್ನು ಒಂದೇ ರಚನೆಯಲ್ಲಿ ಉಪಯೋಗಿಸಿಕೊಂಡು ರಚಿಸಿರುವುದು ಎಂದರ್ಥ. ದೀಪಸ್ತಂಭಗಳ ರಚನೆಯಲ್ಲಿ ಮರ, ಶಿಲೆ, ಗಾರೆ ಹಾಗೂ ಕೆಲವು ಕಡೆ ಲೋಹವನ್ನೂ ಬಳಸಿಕೊಂಡಿರುವುದನ್ನು ನೋಡಬಹುದು.

ದೀಪಸ್ತಂಭದ ಪೀಠ ಕಲ್ಲಿನದಾದರೆ ಕಂಬವು ಮರದ್ದೋ ಇಲ್ಲವೆ ಲೋಹದ್ದೋ ಆಗಿರುತ್ತದೆ. ಕೆಲವು ಕಡೆ ಇಟ್ಟಿಗೆಯನ್ನೂ ಬಳಸಿರುವುದು ಉಂಟು. ಕೆಲವು ದೀಪಸ್ತಂಭಗಳ ಪೀಠ ಹಾಗೂ ಕಂಬ ಎರಡೂ ಕಲ್ಲಿನದಾಗಿದ್ದರೆ ಅವುಗಳಲ್ಲಿನ ಉಬ್ಬು ಶಿಲ್ಪಗಳು ಗಾರೆಯಿಂದ ನಿರ್ಮಾಣಗೊಂಡಿರುತ್ತವೆ. ಕೆಲವು ಕಡೆಗಳಲ್ಲಿ ಶಿಲ್ಪಗಳು ಮತ್ತು ಅಲಂಕಾರಿಕ ವಿನ್ಯಾಸಗಳು ಲೋಹ ಮಾಧ್ಯಮದ್ದಾಗಿರುವುದು ಕಂಡು ಬರುತ್ತದೆ. ಆಯಾ ಪ್ರದೇಶಗಳಲ್ಲಿ ಹೇರಳವಾಗಿ ದೊರೆಯುವ ವಸ್ತುಗಳನ್ನು ಬಳಸಿ ಮಿಶ್ರ ಮಾಧ್ಯಮದ ದೀಪಸ್ತಂಭಗಳನ್ನು ಕಾಣುತ್ತೇವೆ. ಕೆಲವು ಕಡೆ ಮರಗಳು ಹೇರಳವಾಗಿ ದೊರೆತರೆ ಮತ್ತೆ ಕೆಲವು ಕಡೆ ಕಲ್ಲು, ಲೋಹ ದೊರೆಯುತ್ತದೆ. ಇನ್ನೂ ಕೆಲವು ಕಡೆಗಳಲ್ಲಿ ಈ ಮಾಧ್ಯಮಗಳು ಹೆಚ್ಚಾಗಿ ದೊರೆಯದಿದ್ದ ಪಕ್ಷದಲ್ಲಿ ಮಿಶ್ರ ಮಾಧ್ಯಮವನ್ನು ಬಳಸಬೇಕಾಗುತ್ತದೆ.

ತಮಗೆ ಬೇಕಾದ ವಸ್ತುಗಳು ದೊರೆಯದಿದ್ದಾಗ ವಿವಿಧ ವಸ್ತುಗಳನ್ನು ಉಪಯೋಗಿಸಿ ಜನರು ತಮ್ಮ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕಾಗುತ್ತದೆ. ಈ ರೀತಿಯ ಪರಿಸ್ಥಿತಿಯಿಂದಲೇ ಸಂಕೀರ್ಣ ಮಾಧ್ಯಮದ ರಚನೆಗಳು ರೂಪ ತಾಳಿದವು ಎಂದು ತೋರುತ್ತದೆ. ಸಂಕೀರ್ಣ ಮಾಧ್ಯಮದಲ್ಲಿ ಸುಧೆಯನ್ನು ಬಳಸಲಾಗುತ್ತಿತ್ತು. ಇದನ್ನು ಸುಣ್ಣ ಮತ್ತು ಕಪ್ಪೆ ಚಿಪ್ಪಿನ ಮಿಶ್ರಣದಿಂದ ತಯಾರಿಸುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ಸಿಮೆಂಟ್‌ನ ಗಾರೆಯನ್ನು ಬಳಸಲಾಗುತ್ತಿದೆ.

ಸಂಕೀರ್ಣ ಮಾಧ್ಯಮದ ದೀಪಸ್ತಂಭಗಳು ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ದೊರೆಯುತ್ತವೆ. ದೀಪಸ್ತಂಭದ ಪೀಠದ ಭಾಗವು ಕಲ್ಲಿನಿಂದ ರಚಿಸುವುದು ಪದ್ಧತಿ. ನಂತರದ ದೀಪಸ್ತಂಭಗಳ ರಚನೆಯಲ್ಲಿ ಕಲ್ಲು, ಮರ, ಲೋಹ, ಗಾರೆ ಹೀಗೆ ವಿವಿಧ ಮಾಧ್ಯಮಗಳನ್ನು ಉಪಯೋಗಿಸಿ ರಚಿಸಿರುತ್ತಾರೆ. ಕೆಲವು ದೀಪಸ್ತಂಭಗಳಲ್ಲಿ ಎಲ್ಲಾ ಮಾಧ್ಯಮಗಳನ್ನೂ ಬಳಸಿಕೊಂಡು ರಚಿಸಿರುವುದು ಕಂಡು ಬರುತ್ತದೆ.



ಚಿತ್ರ ೧೯೪



ಚಿತ್ರ ೧೯೫



ಚಿತ್ರ ೧೯೬-೧



ಚಿತ್ರ ೧೯೬-೨

ಮೈಸೂರು ಜಿಲ್ಲೆಯ ಅರಮನೆಯ ಒಳ ಆವರಣದಲ್ಲಿ ಶ್ರೀ ವರಾಹಸ್ವಾಮಿ ದೇವರ ಆಲಯವಿದೆ. ಈ ದೇವಾಲಯವನ್ನು ಕ್ರಿಸ್ತಶಕ ೧೮೦೯ ರಲ್ಲಿ ನಿರ್ಮಿಸಲಾಗಿದೆ[೪೭]. ಶ್ರೀರಂಗಪಟ್ಟಣದಲ್ಲಿದ್ದ ದೇವಾಲಯವು ಧ್ವಂಸವಾದಾಗ ಅಲ್ಲಿನ ದೇವಮೂರ್ತಿಗೆಂದು ಕಟ್ಟಿಸಿದುದು ಈ ವರಾಹಸ್ವಾಮಿ ದೇವಾಲಯ. ಈ ದೇವಾಲಯದ ಮುಂದೆ ಧ್ವಜಸ್ತಂಭ, ಬಲಿಪೀಠ ಹಾಗೂ ಗರುಡಗಂಬಗಳಿವೆ. ವರಾಹಸ್ವಾಮಿ ದೇವಾಲಯವನ್ನು ವಾಸ್ತುಶಾಸ್ತ್ರದ ಆಧಾರದ ಮೇಲೆ ನಿರ್ಮಿಸಿದಂತೆ ತೋರುತ್ತದೆ. ದೇವಾಲಯದ ಮುಖ್ಯದ್ವಾರದ ಒಳಗೆ ಮೊದಲಿಗೆ ಗರುಡಗಂಬವಿದೆ, ಗರುಡಗಂಬದ ನಂತರ ಬಲಿಪೀಠ, ಬಲಿಪೀಠದ ನಂತರ ಧ್ವಜಸ್ತಂಭವಿದೆ.

ಧ್ವಜಸ್ತಂಭದ ನಂತರ ಸಿಗುವುದೇ ಗರ್ಭಗೃಹ. ಈ ದೇವಾಲಯದಲ್ಲಿ ಇರುವ ಗರುಡಗಂಬವು ದೀಪಸ್ತಂಭವೂ ಹೌದು (ಚಿತ್ರ ೧೯೩). ಈ ಸ್ತಂಭದ ಪೀಠವು ಕಲ್ಲಿನದೇ ಆಗಿದೆ. ಪೀಠದ ನಂತರದ ಸುಮಾರು ನಾಲ್ಕು ಅಡಿಯಷ್ಟು ಎತ್ತರದ ಗಾರೆಯ ರಚನೆ ಇರುವುದು ಕಾಣುತ್ತದೆ. ಕಲ್ಲಿನ ಕಂಬದ ತುದಿಯಲ್ಲಿ ದೀಪ ಹಚ್ಚಲು ಕಬ್ಬಿಣದಲ್ಲಿ ತಯಾರಿಸಿದ ಅಲಂಕಾರಿಕ ರಚನೆಯು ಇರುವುದು ಕಾಣುತ್ತದೆ. ಈ ದೀಪಸ್ತಂಭದ ಎತ್ತರವು ಸುಮಾರು ನಲವತ್ತು ಅಡಿಗಳು. ಈ ಗಾರೆಯ ಚೌಕಾಕಾರದ ಭಾಗದಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ.

ದೇವಾಲಯದ ಆವರಣಕ್ಕೆ ಪ್ರವೇಶವಾಗುತ್ತಿರುವಂತೆ ದೀಪಸ್ತಂಭದಲ್ಲಿ ನಾಲ್ಕೂ ದಿಕ್ಕಿನಲ್ಲಿ ಕ್ರಮವಾಗಿ ಹನುಮಂತನ ಉಬ್ಬುಶಿಲ್ಪ, ಶಂಖ, ಗರುಡನ ಶಿಲ್ಪ ಮತ್ತು ಚಕ್ರದ ಉಬ್ಬುಶಿಲ್ಪಗಳು ಇರುವುದು ಕಾಣುತ್ತದೆ. ಇದರ ನಂತರದ ಸ್ತಂಭದ ಕಾಂಡ ಭಾಗವನ್ನು ಅಷ್ಟಭುಜವನ್ನಾಗಿ ರಚಿಸಿ ನಂತರ ಹದಿನಾರು ಭುಜಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಇವೆರಡಕ್ಕೂ ನಡುವೆ ಪಟ್ಟಿಕೆಯ ರಚನೆಯನ್ನು ಮಾಡಲಾಗಿದೆ.

ಶ್ರೀ ಆಂಜನೇಯ ದೇವಾಲಯವನ್ನು ಅರಮನೆಯ ಹೊರ ಆವರಣದಲ್ಲಿ ಸ್ಥಾಪಿಸಲಾಗಿದೆ. ಈ ದೇವಾಲಯದ ಎದುರಿಗೆ ಮೂವತ್ತು ಅಡಿ ಎತ್ತರದ ದೀಪಸ್ತಂಭವಿದೆ. ಈ ದೀಪಸ್ತಂಭಕ್ಕೆ ಮೂರು ಅಡಿ ಎತ್ತರದ ಪೀಠವಿದೆ. ಇದರ ಮೇಲೆ ಚೌಕಾಕಾರದ ರಚನೆ ಇದ್ದು ಇದರ ನಂತರ ಒಂದರ ಮೇಲೆ ಒಂದರಂತೆ ಅಷ್ಟಭುಜ ಮತ್ತು ಹದಿನಾರು ಭುಜಗಳ ರಚನೆಯು ಇರುವುದನ್ನು ನೋಡುತ್ತೇವೆ. ಇಡೀ ಸ್ತಂಭವು ಮೊದಲಿಗೆ ಸಂಪೂರ್ಣವಾಗಿ ಕಲ್ಲಿನದಾಗಿದ್ದು ಪ್ರಸ್ತುತ ಇದಕ್ಕೆ ವಿದ್ಯುತ್ ಬಲ್ಬುಗಳನ್ನು ಅಳವಡಿಸಲಾಗಿದೆ. ಇದರಲ್ಲಿ ಐದು ವಿದ್ಯುತ್ ಬಲ್ಬುಗಳಿವೆ.

ನಂಜನಗೂಡು ತಾಲ್ಲೂಕಿನಲ್ಲಿ ಇರುವ ಶ್ರೀ ನಂಜುಂಡೇಶ್ವರ ದೇವಾಲಯವು ಮೂಲವಾಗಿ ಚೋಳರ ಕಾಲದ್ದಲ್ಲಿ ನಿರ್ಮಿಸಿದ್ದಿರಬೇಕು. ಇದು ಬಹಳ ಪ್ರಾಚೀನವಾದ

೪೭. S.K. Ramachandra Rao:
The Art and Architecture of Indian Temples, volume III, ಪುಟ–೨೯೭



ಚಿತ್ರ ೧೯೭-೧



ಚಿತ್ರ ೧೯೮-೧



ಚಿತ್ರ ೧೯೭-೨



ಚಿತ್ರ ೧೯೮-೩



ಚಿತ್ರ ೧೯೮-೨

ದೇವಾಲಯವಾಗಿದೆ. ಈ ದೇವಾಲಯಕ್ಕೆ ಹೊಯ್ಸಳರು, ವಿಜಯನಗರ ಸಾಮ್ರಾಜ್ಯದ ಅರಸರು, ಮೈಸೂರಿನ ಒಡೆಯರ್ ಸೇರಿದಂತೆ ಎಲ್ಲ ರಾಜರೂ ಇದರ ಜೀರ್ಣೋದ್ಧಾರವನ್ನು ಮಾಡಿದ್ದಾರೆ ಎನ್ನಬಹುದು. ಇಲ್ಲಿನ ದೀಪಸ್ತಂಭದ ಎತ್ತರವು ನಲವತ್ತು ಅಡಿ. ಸ್ತಂಭಕ್ಕೆ ಕೆಳಗೆ ದೊಡ್ಡದಾದ ಪೀಠವಿದ್ದು ಸ್ತಂಭದ ದಂಡದ ಭಾಗವು ಕೆಳಗಿನಿಂದ ತುದಿಯವರೆಗೆ ಹದಿನಾರು ಭುಜಗಳನ್ನು ಹೊಂದಿದೆ. ಮೇಲೆ ಸ್ತಂಭದ ತುದಿಯಲ್ಲಿ ಗಾರೆಯಿಂದ ನಿರ್ಮಿಸಿದ ರಚನೆ ಇರುವುದನ್ನು ಕಾಣುತ್ತೇವೆ (ಚಿತ್ರ ೧೯೪). ಈ ಭಾಗವನ್ನು ನಂತರದ ದಿನಗಳಲ್ಲಿ ರಚಿಸಿದ್ದಿರಬೇಕು. ಗಾರೆಯ ಈ ಭಾಗಕ್ಕೆ ಬಣ್ಣವನ್ನು ಲೇಪಿಸಲಾಗಿದೆ. ದೀಪಸ್ತಂಭವು ಸೇರಿದಂತೆ ಮುಖಮಂಟಪವನ್ನು ನಂತರದ ದಿನಗಳಲ್ಲಿ ನಿರ್ಮಿಸಲಾಗಿರುವುದನ್ನು ಕಾಣುತ್ತೇವೆ.

ಟಿ. ನರಸೀಪುರ ತಾಲ್ಲೂಕಿನ ತಿರುಮಕೂಡಲಿನಲ್ಲಿ ಇರುವ ಶ್ರೀ ಅಗಸ್ತ್ಯೇಶ್ವರ ದೇವಾಲಯವು ಪುರಾತನವಾದುದು. ಈ ದೇವಾಲಯವು ಕ್ರಿಸ್ತ ಶಕ ಸುಮಾರು ಹತ್ತನೆಯ ಶತಮಾನಕ್ಕೆ ಸೇರಿದುದಾಗಿದೆ[೪೮]. ಅಗಸ್ತ್ಯೇಶ್ವರ ದೇವಾಲಯದ ಹೊರ ಆವರಣದಲ್ಲಿ ತೋರಣಗಂಬವಿದೆ (ಚಿತ್ರ ೧೯೫). ಈ ತೋರಣಗಂಬದ ಮೇಲೆ ಎರಡೂ ಕಡೆಗಳಲ್ಲಿ ಪುಟ್ಟ ಪುಟ್ಟ ದೀಪಸ್ತಂಭಗಳಿದ್ದು, ಅದರ ಮೇಲೆ ಕಬ್ಬಿಣದ ರಚನೆಯನ್ನು ಅಲಂಕಾರಕ್ಕಾಗಿ ರಚಿಸಲಾಗಿದೆ.

ಈ ದೇವಾಲಯದ ಹೊರಾವರಣದಲ್ಲಿ ಸ್ವಲ್ಪ ದೂರಕ್ಕೆ ಮೂವತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೯೬-೧). ಈ ಸ್ತಂಭದ ಚೌಕಾಕಾರದ ಭಾಗದಲ್ಲಿ ನಾಲ್ಕೂ ಕಡೆಗಳಲ್ಲಿ ಉಬ್ಬುಶಿಲ್ಪಗಳವೆ. ಇದರ ನಂತರ ನಾಲ್ಕು ಮೂಲೆಗಳಲ್ಲಿ ನಾಗಬಂಧದ ರಚನೆ ಇರುವುದು ಕಾಣುತ್ತದೆ. ಇದರ ನಂತರದ ಭಾಗವು ಹದಿನಾರು ಭುಜಗಳನ್ನು ಹೊಂದಿದೆ. ಚೌಕಾಕಾರಕ್ಕೂ ಹದಿನಾರು ಭುಜದ ರಚನೆಗೂ ಮಧ್ಯದಲ್ಲಿ ಅಷ್ಟಭುಜದ ಪಟ್ಟಿಕೆ ಇರುವುದು ಕಾಣುತ್ತದೆ. ಸ್ತಂಭದ ತುದಿಯ ಭಾಗವು ಚೋಳರ ಶೈಲಿಯ ರಚನೆಯನ್ನು ಹೊಂದಿದ್ದು ಅದರ ಮೇಲೆ ದೀಪವನ್ನು ಬೆಳಗಲು ಅವಕಾಶವನ್ನು ಮಾಡಲಾಗಿದೆ. ಇದರ ಮೇಲೆ ಲೋಹದ ಪಂಜರದಂತಹ ಅಲಂಕಾರಿಕ ರಚನೆಯು ಈ ದೀಪಸ್ತಂಭದಲ್ಲಿ ಇರುವುದನ್ನು ನೋಡಬಹುದು (ಚಿತ್ರ ೧೯೬-೨).

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ತೆರಕಣಾಂಬಿಯಲ್ಲಿ ಇರುವ ಪ್ರಸಿದ್ಧ ಲಕ್ಷ್ಮೀವರದರಾಜ ಸ್ವಾಮಿ ದೇವಾಲಯವನ್ನು ಕ್ರಿಸ್ತ ಶಕ ೧೩೦೩ರಲ್ಲಿ ನಿರ್ಮಿಸಿದ್ದಾರೆ[೪೯]. ಲಕ್ಷ್ಮೀವರದರಾಜ ಸ್ವಾಮಿ ದೇವಾಲಯದ ಹೊರಾವರಣದಲ್ಲಿ ಇರುವ ದೀಪಸ್ತಂಭವು ಮೂವತ್ತೈದು ಅಡಿ ಎತ್ತರವನ್ನು ಹೊಂದಿದೆ (ಚಿತ್ರ ೧೯೭-೧).

೪೮. S.K. Ramachandra Rao:
The Art and Architecture of Indian Temples, volume III, ಪುಟ-೩೦೫

೪೯. S.K. Ramachandra Rao:
The Art and Architecture of Indian Temples, volume III, ಪುಟ-೨೯೩

ಈ ದೀಪಸ್ತಂಭಕ್ಕೆ ಪೀಠವಿಲ್ಲ. ಸ್ತಂಭವು ಭೂಮಿಯಿಂದ ಲಂಬವಾಗಿ ನಿಂತಂತೆ ಸ್ಥಾಪಿಸಲಾಗಿದೆ. ಇದರ ಚೌಕಾಕಾರದ ಕೆಳಗಿನ ರಚನೆಯಲ್ಲಿ ನಾಲ್ಕೂ ಕಡೆಗಳಲ್ಲಿ ಉಬ್ಬುಶಿಲ್ಪಗಳಿವೆ. ಇದರ ನಂತರದ ರಚನೆಯು ಹದಿನಾರು ಭುಜಗಳನ್ನು ಹೊಂದಿದ್ದು ಮೇಲೆ ಅಲಂಕಾರಿಕವಾದ ರಚನೆಯು ಇರುವುದು ಕಾಣುತ್ತದೆ. ಕಲ್ಲಿನ ರಚನೆಯ ನಂತರ ಕಬ್ಬಿಣದ ರಚನೆಯನ್ನು ಈ ದೀಪಸ್ತಂಭದಲ್ಲಿ ಅಳವಡಿಸಲಾಗಿದೆ (ಚಿತ್ರ ೧೯೭-೨). ಎತ್ತರದ ಸ್ತಂಭಕ್ಕೆ ದೀಪವನ್ನು ಬೆಳಗಲು ಏಣಿಯನ್ನು ಕೂಡಾ ಅಳವಡಿಸಿರುವುದನ್ನು ಕಾಣಬಹುದು.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಶ್ರೀ ಸೌಮ್ಯಕೇಶವ ದೇವಾಲಯವನ್ನು ಕ್ರಿಸ್ತ ಶಕ ೧೧೭೧ಕ್ಕೂ ಮುಂಚೆ ನಿರ್ಮಿಸಲಾಗಿದೆ ಎಂದು ಇಲ್ಲಿ ದೊರೆಯುವ ಶಾಸನವೊಂದರಿಂದ ತಿಳಿದು ಬರುತ್ತದೆ[೫೦]. ಇದರ ಮುಂದಿರುವ ಗರುಡಗಂಬವು ೫೫ ಅಡಿ ಎತ್ತರದ್ದಾಗಿದೆ (ಚಿತ್ರ ೧೯೮-೧). ಇದು ದೀಪದ ಸ್ತಂಭವೂ ಆಗಿದೆ. ಚೆನ್ನಪಟ್ಟಣದ ಮುಖ್ಯಾಧಿಕಾರಿ ಜಗದೇವರಾಯನಿಂದ ಈ ದೀಪಸ್ತಂಭವು ನಿರ್ಮಾಣಗೊಂಡಿದೆ. ದೀಪಸ್ತಂಭದ ಪೀಠವು ಎಂಟು ಅಡಿ ಅಗಲವಿದ್ದು ನಾಲ್ಕು ಅಡಿ ಎತ್ತರವಿದೆ. ಈ ಪೀಠವನ್ನು ಮೂರು ಹಂತಗಳಲ್ಲಿ ವಿನ್ಯಾಸವನ್ನು ಮಾಡಲಾಗಿದೆ.

ದೀಪಸ್ತಂಭದ ಪೀಠದ ಭಾಗದ ಮೇಲೆ ಇರುವ ಚೌಕಾಕಾರದ ರಚನೆಯು ಐದು ಅಡಿ ಎತ್ತವಿದ್ದು ಎರಡೂವರೆ ಅಡಿ ಅಗಲವನ್ನು ಹೊಂದಿದೆ (ಚಿತ್ರ ೧೯೮-೨). ಚೌಕಾಕಾರದ ನಾಲ್ಕೂ ಕಡೆಗಳಲ್ಲಿ ಸುಂದರವಾದ ಉಬ್ಬುಶಿಲ್ಪಗಳನ್ನು ರಚಿಸಲಾಗಿದೆ. ಸ್ತಂಭದ ಚೌಕಾಕಾರದ ನಂತರದ ಭಾಗವು ಅಷ್ಟಭುಜಗಳನ್ನು ಹೊಂದಿರುವುದನ್ನು ಕಾಣುತ್ತೇವೆ. ಸ್ತಂಭದ ತುದಿಯಲ್ಲಿ ದೀಪವನ್ನು ಬೆಳಗಲು ಚೌಕಾಕಾರದ ಫಲಕದಂತಹ ರಚನೆಯನ್ನು ಮಾಡಲಾಗಿದೆ. ಈ ಭಾಗದಲ್ಲಿ ಕಬ್ಬಿಣದಲ್ಲಿ ತಯಾರಿಸಿದ ಪಂಜರದಂತಹ ರಚನೆಯನ್ನು ಅಳವಡಿಸಲಾಗಿದೆ (ಚಿತ್ರ ೧೯೮-೩). ಇದರಲ್ಲಿ ದೀಪವನ್ನು ಬೆಳಗಲು ದೀಪದ ಬಟ್ಟಲನ್ನು ಇರಿಸಲಾಗಿದೆ. ಹಬ್ಬ ಹರಿದಿನಗಳಲ್ಲಿ ದೀಪವನ್ನು ಬೆಳಗಲು ಲೋಹದ ಗಾಲಿಯನ್ನು ಮತ್ತು ಸರಪಳಿಗಳನ್ನು ಬಳಸಲಾಗುತ್ತದೆ. ದೀಪ ಹಚ್ಚಿ ಸರಪಳಿಯ ಸಹಾಯದಿಂದ ಇದನ್ನು ಮೇಲೆಕ್ಕೆ ಎಳೆದು ದೀಪಸ್ತಂಭದ ತುದಿಗೆ ಏರಿಸಿ ಅಲ್ಲಿರುವ ದೀಪದ ಬಟ್ಟಲಿನಲ್ಲಿ ದೀಪವು ಕೂರುವಂತೆ ವ್ಯವಸ್ಥೆಯನ್ನು ಮಾಡಲಾಗಿದೆ.

ಮಂಡ್ಯ ತಾಲ್ಲೂಕಿನ ಬಸರಾಳುವಿನ ಶ್ರೀ ಕಾಲಭೈರವ ದೇವಾಲಯವು ಇತ್ತೀಚಿನ ದೇವಾಲಯವಾಗಿದೆ. ಈ ದೇವಾಲಯದ ಎದುರು ಇಪ್ಪತ್ತು ಅಡಿ ಎತ್ತರದ ದೀಪಸ್ತಂಭವಿದೆ. ಈ ದೀಪಸ್ತಂಭಕ್ಕೆ ನಾಲ್ಕು ಅಡಿ ಎತ್ತರದ ಚೌಕಾಕಾರದ ಪೀಠವಿದೆ. ಈ ಪೀಠವನ್ನು ಕಲ್ಲು ಮತ್ತು ಗಾರೆಯನ್ನು ಬಳಸಿ ನಿರ್ಮಿಸಲಾಗಿದೆ. ಸ್ತಂಭದ ಕೆಳಭಾಗದಲ್ಲಿ ಚೌಕಾಕಾರದ

---

೫೦. S.K. Ramachandra Rao:
The Art and Architecture of Indian Temples, volume III, ಪುಟ-೨೮೫


ಚಿತ್ರ ೧೯೯


ಚಿತ್ರ ೨೦೦


ಚಿತ್ರ ೨೦೧-೧


ಚಿತ್ರ ೨೦೧-೨

ರಚನೆಯು ಇದೆ. ಈ ರಚನೆಯಲ್ಲಿ ಯಾವುದೇ ಉಬ್ಬುಶಿಲ್ಪಗಳಿಲ್ಲ. ದೀಪಸ್ತಂಭದ ನಂತರದ ರಚನೆಯು ಅಷ್ಟಭುಜಗಳನ್ನು ಹೊಂದಿದೆ. ದೀಪಸ್ತಂಭದ ತುದಿಯಲ್ಲಿ ವೃತ್ತಾಕಾರದ ಮತ್ತು ಚೌಕಾಕಾರದ ರಚನೆ ಇದ್ದು ಮೇಲೆ ದೀಪವನ್ನು ಬೆಳಗಲಾಗುತ್ತದೆ. ಈ ದೀಪಸ್ತಂಭದಲ್ಲಿ ದೀಪವನ್ನು ಬೆಳಗಲು ಅನುಕೂಲವಾಗುವಂತೆ ಕಬ್ಬಿಣದ ಏಣಿಯನ್ನು ಅಳವಡಿಸಲಾಗಿದೆ.

ಕೆ.ಆರ್. ಪೇಟೆ ತಾಲ್ಲೂಕಿನ ಕಿಕ್ಕೇರಿಯಲ್ಲಿರುವ ಕಿಕ್ಕೇರಮ್ಮ ದೇವಾಲಯವು ಗ್ರಾಮದೇವತೆಯನ್ನು ಪ್ರತಿನಿಧಿಸುತ್ತದೆ. ಈ ದೇವಾಲಯದ ಮುಂದೆ ಇಪ್ಪತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೧೯೯). ಇದು ಬಹಳ ಸರಳವಾದ ದೀಪಸ್ತಂಭ. ಇದರ ತುದಿಯಲ್ಲಿ ದೀಪವನ್ನು ಬೆಳಗಲು ಲೋಹದಲ್ಲಿ ತಯಾರಿಸಿದ ಹಣತೆಯ ಆಕಾರದ ರಚನೆಯನ್ನು ಅಳವಡಿಸಲಾಗಿರುತ್ತದೆ. ಸ್ತಂಭದ ದಂಡದ ಭಾಗವು ಚೌಕಾಕಾರದ ಭಾಗ ಮತ್ತು ಅಷ್ಟಭುಜದ ಭಾಗಗಳನ್ನು ಹೊಂದಿದೆ. ತುದಿಯಲ್ಲಿ ಫಲಕದಂತಹ ರಚನೆಯು ಇದಕ್ಕೆ ಇದೆ. ಈ ಫಲಕದ ನಾಲ್ಕು ಮೂಲೆಗಳಲ್ಲಿ ಪುಟ್ಟ ಪುಟ್ಟ ಗಂಟೆಗಳನ್ನು ತೂಗಿ ಬಿಡಲಾಗಿದೆ.

ಕೆ.ಆರ್. ಪೇಟೆ ತಾಲ್ಲೂಕಿನ ತಂಡೇಕೆರೆಯಲ್ಲಿರುವ ಶ್ರೀ ವೀರಭದ್ರೇಶ್ವರ ದೇವಾಲಯದ ಎದುರು ಸುಮಾರು ಮೂವತ್ತು ಅಡಿಯ ದೀಪಸ್ತಂಭವಿದೆ (ಚಿತ್ರ ೨೦೦). ಈ ದೀಪಸ್ತಂಭಕ್ಕೆ ಚೌಕಾಕಾರದ ಸರಳವಾದ ಪೀಠವಿದೆ. ಇದರ ನಂತರ ಸ್ತಂಭದ ದಂಡದ ಭಾಗದಲ್ಲಿ ಕೆಳಗಡೆ ಚೌಕಾಕಾರದ ರಚನೆಯು ಇದ್ದು ಇದರ ನಂತರದ ಸ್ತಂಭದ ಉದ್ದಕ್ಕೂ ವೃತ್ತಾಕಾರದ ರಚನೆಯು ಇದೆ. ಇವೆರಡಕ್ಕೂ ನಡುವೆ ಇರುವ ಅಷ್ಟಭುಜದ ರಚನೆಯನ್ನು ಪಟ್ಟಿಕೆಯಂತೆ ಬಳಸಲಾಗಿದೆ. ಸ್ತಂಭದ ತುದಿಯಲ್ಲಿ ಘಟದ ರಚನೆ ಮತ್ತು ಚೌಕಾಕಾರದ ಫಲಕದ ರಚನೆ ಇದ್ದು ಇದರ ನಂತರ ಪುಟ್ಟದಾಗಿ ಲಂಬವಾಗಿ ಕಲ್ಲಿನ ರಚನೆ ಇದೆ. ಇದರ ತುದಿಯಲ್ಲಿ ದೀಪವನ್ನು ಇರಿಸುವ ಸಲುವಾಗಿ ಲೋಹದಲ್ಲಿ ತಯಾರಿಸಿದ ಬಟ್ಟಲು ಇರುವುದು ಕಾಣುತ್ತದೆ. ಇದು ಇತ್ತೀಚಿನ ದೇವಾಲಯವಾಗಿದೆ.

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಕಡಬದಲ್ಲಿ ಶ್ರೀರಾಮ ದೇವಾಲಯವಿದೆ. ಇದನ್ನು ಪ್ರಸ್ತುತ ಲಕ್ಷ್ಮೀಜನಾರ್ಧನ ದೇವಾಲಯ ಎಂದು ಕರೆಯುತ್ತಾರೆ. ಇದು ತುಂಬಾ ಪ್ರಾಚೀನವಾದ ದೇವಾಲಯ. ಈ ದೇವಾಲಯದ ಆವರಣದಲ್ಲಿ ಶ್ರೀರಾಮ, ಶ್ರೀ ಕೃಷ್ಣ ಮತ್ತು ಲಕ್ಷ್ಮೀ ಜನಾರ್ಧನ ಸ್ವಾಮಿಯ ಗುಡಿಗಳಿವೆ. ಈ ದೇವಾಲಯದ ಎದುರು ನಲವತ್ತು ಅಡಿ ಎತ್ತರದ ಸುಂದರವಾದ ದೀಪಸ್ತಂಭವಿದೆ (ಚಿತ್ರ ೨೦೧-೧). ಈ ದೀಪಸ್ತಂಭದ ಪೀಠವು ಸಾಧಾರಣವಾದ ಪೀಠದಂತೆ ಇದ್ದು ಇದರ ಎರಡು ಕಡೆಗಳಲ್ಲಿ ಪೀಠಕ್ಕೆ ಅಂಟಿಕೊಂಡಂತೆ ಆನೆಯ ಶಿಲ್ಪಗಳಿವೆ.



ಚಿತ್ರ ೨೦೨



ಚಿತ್ರ ೨೦೩



ಚಿತ್ರ ೨೦೪



ಚಿತ್ರ ೨೦೫

ಸ್ತಂಭದ ಚೌಕಾಕಾರದ ರಚನೆಯು ಎರಡೂವರೆ ಅಡಿ ಎತ್ತರವಿದೆ. ಈ ಭಾಗದ ನಾಲ್ಕು ದಿಕ್ಕುಗಳಲ್ಲಿ ಉಬ್ಬುಶಿಲ್ಪಗಳಿವೆ. ಚೌಕಾಕಾರದ ನಂತರ ಅಷ್ಟಭುಜದ ರಚನೆಯನ್ನು ಪಟ್ಟಿಕೆಯಂತೆ ಬಳಸಿಕೊಳ್ಳಲಾಗಿದೆ. ಇವೆರಡಕ್ಕೂ ನಡುವೆ ನಾಗಬಂಧದ ರಚನೆಗಳಿವೆ. ಸ್ತಂಭದ ಚೌಕಾಕಾರದ ರಚನೆ ಮತ್ತು ಪೀಠವನ್ನು ಬಣ್ಣದಿಂದ ಅಲಂಕರಿಸಲಾಗಿದೆ. ಸ್ತಂಭದ ಉಳಿದ ಭಾಗವು ಹದಿನಾರು ಭುಜಗಳನ್ನು ಹೊಂದಿದೆ. ಹದಿನಾರು ಭುಜದ ನಂತರ ಘಟದ ರಚನೆ ಮತ್ತು ಚೌಕಾಕಾರದ ಫಲಕದ ರಚನೆಯು ಇದೆ. ಇದರ ಮೇಲೆ ಸ್ತಂಭದ ತುದಿಯಲ್ಲಿ ದೀಪವನ್ನು ಬೆಳಗುವ ಸ್ಥಳದಲ್ಲಿ ಸುಂದರವಾದ ಕಬ್ಬಿಣದ ಪಂಜರವನ್ನು ಇರಿಸಲಾಗಿದೆ (ಚಿತ್ರ ೨೦೧-೨).

ಗುಬ್ಬಿ ತಾಲ್ಲೂಕಿನ ಕಡಬದಲ್ಲಿ ಕೈಲಾಸೇಶ್ವರ ದೇವಾಲಯವಿದೆ. ಇದು ತುಂಬಾ ಪ್ರಾಚೀನವಾದ ದೇವಾಲಯ. ಈ ದೇವಾಲಯದ ಆವರಣದಲ್ಲಿ ಸುಮಾರು ನಲವತ್ತು ಅಡಿ ಎತ್ತರದ ದೀಪಸ್ತಂಭವಿತ್ತು. ಪ್ರಸ್ತುತ ಆ ದೀಪಸ್ತಂಭವು ದೇವಾಲಯದ ಆವರಣದಲ್ಲಿ ಮುರಿದು ಬಿದ್ದಿದೆ. ಈ ದೀಪಸ್ತಂಭವು ಚೌಕಾಕಾರದ ರಚನೆಯನ್ನು ಹೊಂದಿದ್ದು ಈ ಭಾಗವು ಸುಂದರವಾದ ಉಬ್ಬುಶಿಲ್ಪಗಳಿಂದ ಕೂಡಿದೆ. ಇದರ ನಂತರದ ಜಾಗದಲ್ಲಿ ಹದಿನಾರು ಭುಜಗಳನ್ನು ಹೊಂದಿರುವ ರಚನೆಯು ಇದೆ. ಸ್ತಂಭದ ಉಳಿದ ಭಾಗಗಳು ಕಾಣುತ್ತಿಲ್ಲ. ದೇವಾಲಯದ ಮುಂದೆ ನಿಂತಿರುವ ದೀಪಸ್ತಂಭವು ನೂತನವಾದ ನಿರ್ಮಾಣವಾಗಿದೆ (ಚಿತ್ರ ೨೦೨). ಈ ದೀಪಸ್ತಂಭವನ್ನು ಸಿಮೆಂಟ್ ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಲಾಗಿದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಲಕ್ಷ್ಮೀ ಬೇಟೆರಾಯಸ್ವಾಮಿ ದೇವಾಲಯವಿದೆ. ಈ ದೇವಾಲಯವು ಪುರಾತನವಾಗಿದ್ದು ಇದರ ಹೊರಾವಣದ ಪ್ರಾಕಾರಗಳು ನೂತನವಾಗಿ ನಿರ್ಮಿಸಲ್ಪಟ್ಟಿರುವುದು ಕಾಣುತ್ತದೆ. ಈ ದೇವಾಲಯದ ಮುಂದೆ ಇಪ್ಪತ್ತು ಅಡಿಯ ದೀಪಸ್ತಂಭವಿದೆ (ಚಿತ್ರ ೨೦೩). ಈ ದೀಪಸ್ತಂಭದ ಪೀಠವು ಏಳು ಅಡಿ ಅಗಲ ಮತ್ತು ಒಂದೂವರೆ ಅಡಿ ಎತ್ತರವನ್ನು ಹೊಂದಿದೆ. ಇದರ ಮೇಲೆ ಇರುವ ಚೌಕಾಕಾರದ ರಚನೆಯು ನಾಲ್ಕು ಅಡಿ ಎತ್ತರವಾಗಿದ್ದು ಬಣ್ಣದಿಂದ ಲೇಪಿತವಾಗಿದೆ. ಚೌಕಾಕಾರದ ರಚನೆಯ ಮೇಲೆ ಇರುವ ಅಷ್ಟಭುಜದ ರಚನೆಯು ಒಂದು ಅಡಿಯ ಎತ್ತರವನ್ನು ಪಡೆದಿದೆ. ಸ್ತಂಭದ ನಂತರದ ರಚನೆಯಲ್ಲಿ ಹದಿನಾರು ಭುಜದ ರಚನೆಯಿದ್ದು ಮೇಲೆ ತುದಿಯಲ್ಲಿ ಘಟದ ರಚನೆ ಮತ್ತು ಚೌಕಾಕಾರದ ಫಲಕದ ರಚನೆಯು ಇರುವುದನ್ನು ನೋಡಬಹುದು. ಫಲಕದ ನಂತರ ಮಧ್ಯದಲ್ಲಿ ಲಂಬವಾದ ಪುಟ್ಟ ರಚನೆ ಇದ್ದು ಇದರ ಮೇಲೆ ದೀಪವನ್ನು ಬೆಳಗಲು ಲೋಹದ ರಚನೆ ಇರುವುದು ಕಾಣುತ್ತದೆ.

ಬೆಂಗಳೂರು ಜಿಲ್ಲೆಯ ಶಿವಗಂಗೆ ಬೆಟ್ಟದ ತುದಿಯಲ್ಲಿರುವ ಶಿವನ ಗುಡಿಯ ಬಳಿ ಹತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೨೦೪). ಈ ದೀಪಸ್ತಂಭವು ಕಲ್ಲಿನದಾಗಿದ್ದು ಮೇಲೆ ತುದಿಯಲ್ಲಿ ಲೋಹದಲ್ಲಿ ತಯಾರಿಸಿದ ದೀಪದ ಬಟ್ಟಲು ಮತ್ತು ಅದನ್ನು



ಚಿತ್ರ ೨೦೬



ಚಿತ್ರ ೨೦೭



ಚಿತ್ರ ೨೦೮



ಚಿತ್ರ ೨೦೯-೧

ಹಿಡಿದಿರುವಂತೆ ರಚನೆ ಇದೆ. ಹೊಯ್ಸಳ ದೊರೆಯಾದ ನರಸಿಂಹನ ಕಾಲದಲ್ಲಿ ಇಲ್ಲಿನ ದೇವಾಲಯಗಳು ನಿರ್ಮಾಣವಾದ್ದರಿಂದ ಇದರ ಕಾಲವು ಸುಮಾರು ೧೧೪೧ ರಿಂದ ೧೧೭೩ರವರೆಗೆ ಇರಬಹುದು[೫೧].

ಬೆಂಗಳೂರು ಹೊಸಕೋಟೆ ತಾಲ್ಲೂಕಿನಲ್ಲಿ ಅವಿಮುಕ್ತೇಶ್ವರ ದೇವಾಲಯವಿದೆ. ಈ ದೇವಾಲಯವನ್ನು ಪೆನುಗೊಂಡ ಅರಸರ ಆಳ್ವಿಕೆಯಲ್ಲಿ ಸಗಟೂರಿನ ಮುಖ್ಯ ದಂಡಾಧಿಕಾರಿಯಾಗಿ ಇದ್ದಂತಹ ತಮ್ಮೇಗೌಡ ಎಂಬುವವನು ಕ್ರಿಸ್ತ ಶಕ ೧೫೯೫ರಲ್ಲಿ ನಿರ್ಮಿಸಿದ್ದಾನೆ[೫೨]. ಅವಿಮುಕ್ತ್ಯೇಶ್ವರ ದೇವಾಲಯದ ಆವರಣದಲ್ಲಿ ಇಪ್ಪತ್ತೈದು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೨೦೫). ಈ ದೀಪಸ್ತಂಭವು ದಕ್ಷಿಣ ಭಾಗದ ಇತರೆ ದೀಪಸ್ತಂಭಗಳಿಗಿಂತ ಭಿನ್ನವಾಗಿದೆ. ಕರ್ನಾಟಕದ ಉತ್ತರದ ಭಾಗದಲ್ಲಿ ದೊರೆಯುವ ದೀಪಸ್ತಂಭಗಳ ಶೈಲಿಯನ್ನು ಈ ದೀಪಸ್ತಂಭವು ಹೊಂದಿದೆ. ಚೌಕಾಕಾರದ ಪೀಠವನ್ನು ಹೊಂದಿರುವ ಈ ದೀಪಸ್ತಂಭದ ದಂಡದ ಭಾಗವು ಅಷ್ಟ ಭುಜಗಳನ್ನು ಹೊಂದಿದ್ದು ಎಲ್ಲಾ ದಿಕ್ಕುಗಳಲ್ಲಿಯೂ ಹೊರಚಾಚಿದಂತೆ ಕಲ್ಲಿನ ರಚನೆಯು ಇರುವುದು ಕಾಣುತ್ತದೆ. ಈ ಪ್ರತಿಯೊಂದು ರಚನೆಯಲ್ಲಿಯೂ ದೀಪವನ್ನು ಬೆಳಗಲು ಅವಕಾಶವನ್ನು ಮಾಡಲಾಗಿದೆ.

ಮಾಗಡಿ ತಾಲ್ಲೂಕಿನ ಸಾವನದುರ್ಗದ ವೀರಭದ್ರೇಶ್ವರ ದೇವಾಲಯವಿದೆ. ಈ ದೇವಾಲಯದ ಎದುರು ಇರುವ ದೀಪಸ್ತಂಭವು ಐವತ್ತು ಅಡಿ ಎತ್ತರದ್ದಾಗಿದೆ (ಚಿತ್ರ ೨೦೬). ಇದರ ಪೀಠವು ಐದು ಅಡಿ ಅಗಲ ಮತ್ತು ಎರಡು ಅಡಿ ಎತ್ತರವನ್ನು ಹೊಂದಿದೆ. ಪೀಠದ ಮೆಲಿನ ಸ್ತಂಭದ ಚೌಕಾಕಾರದ ಭಾಗದಲ್ಲಿ ಸುಂದರವಾದ ಉಬ್ಬುಶಿಲ್ಪಗಳಿವೆ. ಈ ಚೌಕಾಕಾರದ ರಚನೆಯ ಎತ್ತರ ಎರಡು ಅಡಿಯಾಗಿದೆ. ಇದರ ನಂತರದ ಸ್ತಂಭವು ನೀಳವಾಗಿದೆ. ಸ್ತಂಭದ ತುದಿಯು ಬಹಳ ಅಲಂಕಾರದಿಂದ ಕೂಡಿದೆ. ಇದರ ಮೆಲೆ ಕಬ್ಬಿಣದ ಪಂಜರದಂತಹ ರಚನೆ ಇತ್ತು ಎಂದು ಹೇಳಲಾಗುತ್ತದೆ. ಇದರ ಮೂಲೆಗಳಲ್ಲಿ ಗಂಟೆಗಳನ್ನು ಅಳವಡಿಸಲಾಗಿದ್ದು ಈಗ ಒಂದೆರಡು ಗಂಟೆಗಳು ಮಾತ್ರ ಇವೆ.

ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಆಲಂಬಗಿರಿಯ ವೆಂಕಟರಮಣ ದೇವಾಲಯವು ಕ್ರಿಸ್ತ ಶಕ ೧೩೩೦ಕ್ಕೂ ಹಿಂದೆ ನಿರ್ಮಿಸಿದುದಾಗಿದೆ[೫೩]. ಈ ದೇವಾಲಯವು ಬೃಹದಾದ ಆವರಣವನ್ನು ಹೊಂದಿರುವುದು ಕಾಣುತ್ತದೆ. ದೇವಾಲಯದ ಹೊರಗಡೆ ಮೂರು ದೀಪಸ್ತಂಭಗಳಿವೆ (ಚಿತ್ರ ೨೦೭). ಮಧ್ಯದ ದೀಪಸ್ತಂಭವು ದೇವಾಲಯದ

---

೫೧. S.K. Ramachandra Rao:
The Art and Architecture of Indian Temples, volume III, ಪುಟ–೨೨೪

೫೨. S.K. Ramachandra Rao:
The Art and Architecture of Indian Temples, volume III, ಪುಟ–೨೨೧

೫೩. S.K. Ramachandra Rao:
The Art and Architecture of Indian Temples, volume III, ಪುಟ–೨೬೯



ಚಿತ್ರ ೨೦೯-೨



ಚಿತ್ರ ೨೧೦



ಚಿತ್ರ ೨೧೧



ಚಿತ್ರ ೨೧೨

ಎದುರು ಸ್ಥಾಪಿಸಲಾಗಿದೆ. ಉಳಿದ ಎರಡು ದೀಪಸ್ತಂಭಗಳನ್ನು ಈ ಸ್ತಂಭದ ಪಕ್ಕದಲ್ಲಿ ನಿಲ್ಲಿಸಲಾಗಿದೆ. ದೇವಾಲಯದ ಎದುರಿಗಿರುವ ದೀಪಸ್ತಂಭವು ಎತ್ತರದ ಸ್ತಂಭವಾಗಿದ್ದು ಇದರ ಎತ್ತರವು ಇಪ್ಪತ್ತೈದು ಅಡಿಗಳು. ಇದರ ಪಕ್ಕದಲ್ಲಿರುವ ಸ್ತಂಭಗಳ ಎತ್ತರವು ಹತ್ತು ಅಡಿಗಳಾಗಿವೆ.

ಈ ಮೂರೂ ಸ್ತಂಭಗಳು ಸ್ತಂಭದ ಎತ್ತರಕ್ಕೆ ಅನುಗುಣವಾಗಿ ಪೀಠದ ಎತ್ತರವನ್ನು ಹೊಂದಿದ್ದು ಮಧ್ಯದಲ್ಲಿರುವ ಸ್ತಂಭದ ಪೀಠವು ಸ್ವಲ್ಪ ವಿಶೇಷವಾಗಿದೆ. ಈ ಸ್ತಂಭಗಳ ಚೌಕಾಕಾರದ ರಚನೆಗಳಲ್ಲಿ ಉಬ್ಬುಶಿಲ್ಪಗಳಿವೆ. ಅವು ಅಸ್ಪಷ್ಟವಾಗಿವೆ. ಚೌಕಾಕಾರದ ರಚನೆಯ ನಂತರ ಮೂರೂ ಸ್ತಂಭಗಳಲ್ಲೂ ಅಷ್ಟಭುಜದ ರಚನೆಯು ಇರುವುದನ್ನು ಕಾಣುತ್ತೇವೆ. ಸ್ತಂಭಗಳ ತುದಿಯಲ್ಲಿ ಘಟದ ರಚನೆ ಮತ್ತು ಚೌಕಾಕಾರದ ಫಲಕದ ರಚನೆಗಳಿವೆ. ಮಧ್ಯದ ಸ್ತಂಭದಲ್ಲಿ ಫಲಕದ ನಡುವೆ ದೀಪದ ಹಣತೆಯನ್ನು ಇಡಲು ಅನುಕೂಲವಾಗುವಂತೆ ಲೋಹದ ರಚನೆ ಇರುವುದನ್ನು ನೋಡಬಹುದು. ಉಳಿದ ದೀಪಸ್ತಂಭಗಳಲ್ಲೂ ಇದೇ ರೀತಿಯ ನಿರ್ಮಾಣವು ಇತ್ತು ಎಂದು ಕಾಣುತ್ತದೆ.

ಮುಳಬಾಗಿಲು ತಾಲ್ಲೂಕಿನ ವೀರಾಂಜನೇಯ ದೇವಸ್ಥಾನವನ್ನು ವಿಜಯನಗರ ಅರಸರು ನಿರ್ಮಿಸಿದ್ದಾರೆ. ಈ ದೇವಾಲಯವು ವಿಶಾಲವಾದ ಆವರಣವನ್ನು ಹೊಂದಿದೆ. ದೇವಾಲಯದ ಗರ್ಭಗುಡಿಗೆ ಎದುರಾಗಿ ಮುಖ್ಯದ್ವಾರದ ಒಳಗೆ ದೀಪಸ್ತಂಭವು ಇದೆ (ಚಿತ್ರ ೨೦೮). ಈ ದೀಪಸ್ತಂಭವು ಮೂವತ್ತು ಅಡಿ ಎತ್ತರವನ್ನು ಹೊಂದಿದೆ. ಇದರ ಪೀಠವು ಮೂರು ಅಡಿ ಎತ್ತರದ್ದಾಗಿದೆ. ಪೀಠದ ಮೇಲೆ ಚೌಕಾಕಾರದ ರಚನೆಯು ಎರಡೂವರೆ ಅಡಿ ಎತ್ತರವನ್ನು ಮತ್ತು ಒಂದು ಅಡಿ ಅಗಲವನ್ನು ಪಡೆದಿದೆ. ಚೌಕಾಕಾರದ ತುದಿಯಲ್ಲಿ ನಾಲ್ಕೂ ಕಡೆ ನಾಗಬಂಧದ ರಚನೆಯು ಇದೆ. ಇದರ ಮೇಲೆ ಇಡೀ ಸ್ತಂಭವು ಅಷ್ಟಭುಜದ ರಚನೆಯನ್ನು ಹೊಂದಿದೆ. ಸ್ತಂಭದ ತುದಿಯಲ್ಲಿ ಪಟ್ಟಿಕೆಗಳಿವೆ. ಇದರ ಮೇಲೆ ಚೌಕಾಕಾರದ ಫಲಕ ಇದ್ದು ಇದಕ್ಕೆ ಹೊಂದಿಕೊಂಡಂತೆ ಲೋಹದ ಪಂಜರದ ಅಳಿದುಳಿದ ಭಾಗಗಳು ಇರುವುದನ್ನು ನೋಡಬಹುದು. ಈ ಸ್ತಂಭದ ಅರ್ಧಭಾಗವನ್ನು ಸುಣ್ಣದಿಂದ ಅಲಂಕರಿಸಲಾಗಿದೆ.

ಗದಗ ತಾಲ್ಲೂಕಿನ ವೀರಭದ್ರೇಶ್ವರ ದೇವಾಲಯವಿದೆ. ಈ ದೇವಾಲಯವು ಇತ್ತೀಚಿನ ಕಾಲದಲ್ಲಿ ನಿರ್ಮಾಣವಾದುದಾಗಿದೆ. ದೇವಾಲಯದ ಹೊರ ಆವರಣದ ಎರಡೂ ಕಡೆಗಳಲ್ಲಿ ಒಂದೊಂದು ದೀಪಸ್ತಂಭವಿದೆ (ಚಿತ್ರ ೨೦೯-೧,೨). ಎರಡು ದೀಪಸ್ತಂಭಗಳ ಎತ್ತರವು ಸುಮಾರು ಮೂವತ್ತೈದು ಅಡಿ. ಇದರ ಪೀಠವು ಅಷ್ಟಮೂಲೆಗಳನ್ನು ಹೊಂದಿದ ಸಾಧಾರಣವಾದ ಪೀಠವಾಗಿದೆ. ಇಡೀ ದೀಪಸ್ತಂಭವನ್ನು ಕಲ್ಲು ಮತ್ತು ಗಾರೆಯಿಂದ ನಿರ್ಮಾಣ ಮಾಡಿದ್ದಾರೆ. ದೀಪಸ್ತಂಭದಲ್ಲಿ ದೀಪವನ್ನು ಬೆಳಗಲು ಕಂಬದ ಎತ್ತರಕ್ಕೂ ಹೊರಗೆ ಚಾಚಿದಂತೆ ಕಲ್ಲಿನ ರಚನೆಯನ್ನು ಮಾಡಲಾಗಿದೆ.



ಚಿತ್ರ ೨೧೩



ಚಿತ್ರ ೨೧೪



ಚಿತ್ರ ೨೧೫



ಚಿತ್ರ ೨೧೬-೧

ಗದಗ ತಾಲ್ಲೂಕಿನ ಮೈಲಾರ ಲಿಂಗೇಶ್ವರ ದೇವಾಲಯವಿದೆ. ಈ ದೇವಾಲಯವು ಇತ್ತೀಚಿನ ಕಾಲದ್ದಾಗಿದೆ. ಈ ದೇವಾಲಯದ ಆವರಣದಲ್ಲಿ ಹತ್ತು ಅಡಿ ಎತ್ತರದ ದೀಪಸ್ತಂಭವಿದೆ. ಇದರ ತುದಿಯಲ್ಲಿ ವಿದ್ಯುತ್ ದೀಪವನ್ನು ಅಳವಡಿಸಲಾಗಿದೆ.

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಮಹಾಕೂಟದಲ್ಲಿ ಇರುವ ಮಹಾಕೂಟೇಶ್ವರ ದೇವಾಲಯವು ಕ್ರಿಸ್ತ ಶಕ ಐದನೆಯ ಶತಮಾನಕ್ಕೂ ಹಿಂದಿನಿಂದಲೂ ಅಸ್ತಿತ್ವದಲ್ಲಿ ಇತ್ತು ಎಂದು ಇಲ್ಲಿನ ಶಾಸನಗಳಿಂದ ತಿಳಿದು ಬರುತ್ತದೆ[೫೪]. ಈ ದೇವಾಲಯದ ಆವರಣದ ಹೊರಗೆ ಇರುವ ದೀಪಸ್ತಂಭದ ಎತ್ತರವು ಇಪ್ಪತ್ತೈದು ಅಡಿಯಾಗಿದೆ. ಇದರ ಪೀಠವು ಚೌಕಾರವನ್ನು ಹೊಂದಿದ್ದು ಸರಳವಾದುದಾಗಿದೆ (ಚಿತ್ರ ೨೧೦). ಸ್ತಂಭದ ದಂಡ ಭಾಗದ ಕೆಳಭಾಗದಲ್ಲಿ ಒಂದು ಅಡಿ ಎತ್ತರದ ಚೌಕಾಕಾರದ ರಚನೆ ಇದೆ. ಇದರ ನಂತರ ಅಷ್ಟ ಭುಜದ ರಚನೆ ಇದೆ. ಈ ಅಷ್ಟಭುಜದ ರಚನೆಯ ನಾಲ್ಕು ದಿಕ್ಕುಗಳಿಂದ ಹೊರಚಾಚಿದಂತೆ ಕಲ್ಲಿನ ರಚನೆಯನ್ನು ಮಾಡಲಾಗಿದೆ. ಸ್ತಂಭದ ತುದಿಯಲ್ಲಿ ಚೌಕಾಕಾರದ ಪಟ್ಟಿಕೆ ಇದ್ದು ಮೇಲೆ ಕಬ್ಬಿಣದಲ್ಲಿ ತಯಾರಿಸಿದ ದೊಡ್ಡದಾದ ದೀಪದ ಬಟ್ಟಲು ಇದೆ.

ಮುಧೋಳದಲ್ಲಿರುವ ಬ್ರಹ್ಮಗಟ್ಟಿ ಮಠದ ಎದುರು ಕೋನಾಕೃತಿಯನ್ನು ಹೊಂದಿರುವ ದೀಪಸ್ತಂಭವಿದೆ (ಚಿತ್ರ ೨೧೧). ಈ ದೀಪಸ್ತಂಭವನ್ನು ಇಟ್ಟಿಗೆ ಮತ್ತು ಗಾರೆಯ ಸಹಾಯದಿಂದ ನಿರ್ಮಿಸಿದ್ದಾರೆ. ಈ ದೀಪಸ್ತಂಭದಲ್ಲಿ ಹಂತದ ರಚನೆಯನ್ನು ಮಾಡಲಾಗಿದೆ. ಇದು ಇತ್ತೀಚಿನ ಕಾಲದ ದೀಪಸ್ತಂಭವಾಗಿದೆ.

ಬಾಗಲಕೋಟೆ ಜಿಲ್ಲೆಯಲ್ಲಿರುವ ಸೀತಿಮನಿ ಗುಡ್ಡದ ಮೇಲಿರುವ ದೀಪಸ್ತಂಭವೊಂದರ ಅವಶೇಷವಿದೆ (ಚಿತ್ರ ೨೧೨). ಈ ದೀಪಸ್ತಂಭವನ್ನು ಮಾಲಗಂಬ ಎಂದೂ ಕರೆಯುತ್ತಾರೆ. ಈ ದೀಪಸ್ತಂಭವಿರುವ ಸ್ಥಳದಲ್ಲಿ ಯಾವುದೇ ದೇವಾಲಯವಿದ್ದಂತಹ ಪುರಾವೆಗಳು ದೊರೆಯುವುದಿಲ್ಲ. ಈ ದೀಪಸ್ತಂಭವನ್ನು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿರುವುದು ಕಾಣುತ್ತದೆ.

ಹುನಗುಂದ ತಾಲ್ಲೂಕಿನ ಐಹೊಳೆಯಲ್ಲಿರುವ ಇತ್ತೀಚಿನ ದುರ್ಗಾದೇವಿ ದೇವಾಲಯದ ಎದುರು ಸುಮಾರು ಹತ್ತು ಅಡಿಯ ದೀಪಸ್ತಂಭವಿದೆ (ಚಿತ್ರ ೨೧೩). ಇದಕ್ಕೆ ಬಣ್ಣವನ್ನು ಬಳಿಯಲಾಗಿದೆ. ಈ ಸ್ತಂಭದ ಮೇಲೆ ಕಬ್ಬಿಣದ ರಚನೆಯನ್ನು ಮಾಡಿರುವುದನ್ನು ನೋಡಬಹುದು.

ಗುಲ್ಬರ್ಗ ಜಿಲ್ಲೆಯ ಸೇಡಂನ ಮಣಿಕೇಶ್ವರ ದೇವಾಲಯದ ಎದುರು ದೀಪಸ್ತಂಭವಿದೆ (ಚಿತ್ರ ೨೧೪). ಈ ದೀಪಸ್ತಂಭಕ್ಕೆ ಮಂಟಪವನ್ನೂ ನಿರ್ಮಿಸಿದ್ದಾರೆ. ದೀಪಸ್ತಂಭವು ಸುಮಾರು ಮೂವತ್ತೈದು ಅಡಿ ಎತ್ತರವನ್ನು ಹೊಂದಿದೆ. ಈ ಸ್ತಂಭದ

---

೫೪. S.K. Ramachandra Rao:
The Art and Architecture of Indian Temples, volume III, ಪುಟ-೩೭



ಚಿತ್ರ ೨೧೬-೧



ಚಿತ್ರ ೨೧೬-೨



ಚಿತ್ರ ೨೧೭



ಚಿತ್ರ ೨೧೮

ದಂಡದ ಭಾಗದಲ್ಲಿ ನಾಲ್ಕು ಮೂಲೆ ಮತ್ತು ಎಂಟು ಮೂಲೆಯ ರಚನೆಗಳು ಒಂದರ ನಂತರ ಒಂದು ಪುನರಾವರ್ತನೆಗೊಂಡಿರುವುದು ಕಾಣುತ್ತದೆ. ಸ್ತಂಭದ ತುದಿಯಲ್ಲಿ ದೀಪವನ್ನು ಬೆಳಗಲು ಲೋಹದ ರಚನೆಯನ್ನು ಅಳವಡಿಸಲಾಗಿತ್ತೆಂದು ಕಾಣುತ್ತದೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿರುವ ತೇರು ಮಲ್ಲೇಶ್ವರ ದೇವಾಲಯದ ಎದುರು ಸುಮಾರು ನಲವತ್ತು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೨೧೫). ಈ ದೀಪಸ್ತಂಭದ ದಂಡದ ಭಾಗವು ಎಂಟು ಮೂಲೆಗಳನ್ನು ಹೊಂದಿದೆ. ಸ್ತಂಭದ ತುದಿಯಲ್ಲಿ ಲೋಹದಲ್ಲಿ ಮಾಡಿದ ರಚನೆಯಿದ್ದು, ಇದರಲ್ಲಿ ದೀಪವನ್ನು ಬೆಳಗಲು ಹಣತೆಗಳನ್ನು ಬಹಳ ಅಲಂಕಾರಯುತವಾಗಿ ಜೋಡಿಸಲಾಗಿದೆ. ಇಲ್ಲಿರುವ ಎಂಟು ಬಟ್ಟಲುಗಳು ಹಿರಿದಾಗಿದ್ದು ಪ್ರತಿ ಬಟ್ಟಲುಗಳು ಸುಮಾರು ಇಪ್ಪತ್ತು ಕೆ.ಜಿ ಎಣ್ಣೆಯನ್ನು ಹೊಂದುವ ಸಾಮರ್ಥ್ಯವನ್ನು ಪಡೆದಿವೆ. ಈ ದೇವಾಲಯದ ನಿರ್ಮಾಣವು ಸುಮಾರು ಕ್ರಿಸ್ತ ಶಕ ೧೪ನೆಯ ಶತಮಾನವಾಗಿದೆ.

ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಕಳಸದಲ್ಲಿ ಇರುವ ಕಳಸೇಶ್ವರ ದೇವಾಲಯವು ಹದಿನೈದನೆಯ ಶತಮಾನಕ್ಕೂ ಹಿಂದಿನ ಪ್ರಾಚೀನವಾದ ದೇವಾಲಯವಾಗಿದೆ. ಈ ದೇವಾಲಯವು ವಿಶಾಲವಾದ ಆವರಣವನ್ನು ಹೊಂದಿದೆ. ಈ ದೇವಾಲಯದ ಮುಂದೆ ಬಲಿಪೀಠ, ಧ್ವಜಸ್ತಂಭವಿದ್ದು, ನಂತರದ ಸ್ಥಳದಲ್ಲಿ ಮೂವತ್ತು ಅಡಿ ಎತ್ತರದ ಸುಂದರವಾದ ಕೆತ್ತನೆಯಿಂದ ಕೂಡಿದ ದೀಪಸ್ತಂಭವಿದೆ (ಚಿತ್ರ ೨೧೬-೧). ಇದಕ್ಕೆ ಭದ್ರಪೀಠದ ಶೈಲಿಯಲ್ಲಿ ಪೀಠವಿರುವುದು ಕಾಣುತ್ತದೆ (ಚಿತ್ರ ೨೧೬-೨). ಈ ಪೀಠದ ನಂತರ ಚೌಕಾಕಾರದ ರಚನೆಯು ಇದ್ದು, ಇದರ ನಾಲ್ಕೂ ಕಡೆಗಳಲ್ಲಿ ದೇವಾನು ದೇವತೆಯರ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಬಹಳ ಸುಂದರವಾದ ದೀಪಸ್ತಂಭವು ಇದಾಗಿದೆ.

ದೀಪಸ್ತಂಭದ ದಂಡದ ಭಾಗದಲ್ಲಿ ಚೌಕಾಕಾರದ ರಚನೆಯ ನಂತರ ಕ್ರಮವಾಗಿ ಅಷ್ಟಭುಜ ಮತ್ತು ಹದಿನಾರು ಭುಜದ ರಚನೆಗಳಿವೆ. ಈ ಸ್ತಂಭದ ದಂಡದ ಭಾಗವನ್ನು ಮೂರು ಸಮಭಾಗಗಳನ್ನಾಗಿ ವಿಂಗಡಿಸಿ ಈ ಮೂರೂ ರಚನೆಗಳನ್ನು ಮಾಡಲಾಗಿದೆ. ಅಷ್ಟ ಭಾಗದ ರಚನೆ ಮತ್ತು ಹದಿನಾರು ಭಾಗದ ರಚನೆಗಳಲ್ಲಿ ಮಧ್ಯ ಅಲ್ಲಲ್ಲಿ ಪಟ್ಟಿಕೆಗಳನ್ನು ಮಾಡಿರುತ್ತಾರೆ. ದಂಡದ ಭಾಗದ ಮೇಲೆ ಘಟದ ರಚನೆ ಮತ್ತು ಚೌಕಾಕಾರದ ರಚನೆಯು ಇದ್ದು ಇದನ್ನು ಕ್ರಮವಾಗಿ ಒಂದರ ಮೇಲೆ ಒಂದರಂತೆ ಇರಿಸಲಾಗಿದೆ (ಚಿತ್ರ ೨೧೬-೩). ಇದರಲ್ಲಿ ನಾಲ್ಕೂ ಮೂಲೆಗಳಲ್ಲಿ ದೀಪವನ್ನು ಬೆಳಗಲು ಹಣತೆಯಂತೆ ರಚನೆಯನ್ನು ಮಾಡಲಾಗಿದೆ. ದೀಪಸ್ತಂಭಕ್ಕೆ ದೀಪವನ್ನು ಬೆಳಗಲು ಅನುಕೂಲವಾಗುವಂತೆ ಲೋಹದ ಏಣಿಯನ್ನು ದೀಪಸ್ತಂಭಕ್ಕೆ ಅಳವಡಿಸಿದ್ದಾರೆ.



ಚಿತ್ರ ೨೧೯



ಚಿತ್ರ ೨೨೦



ಚಿತ್ರ ೨೨೧-೧



ಚಿತ್ರ ೨೨೧-೨

ಬೆಳಗಾಂ ಜಿಲ್ಲೆಯ ಮುಗಳಖೋದಲ್ಲಿರುವ ಸಿದ್ಧಸಂಸ್ಥಾನ ಮಠದ ಎದುರು ಸುಮಾರು ಎಪ್ಪತ್ತೈದು ಅಡಿ ಎತ್ತರದ ದೀಪಸ್ತಂಭವಿದೆ (ಚಿತ್ರ ೨೧೭). ಈ ದೀಪಸ್ತಂಭವನ್ನು ಕಲ್ಲಿನಿಂದ ನಿರ್ಮಿಸಿದ್ದಾರೆ. ಈ ಸ್ತಂಭದ ಸುತ್ತಲೂ ಕಂಡಭಾಗದ ಎತ್ತರಕ್ಕೂ ದೀಪವನ್ನು ಬೆಳಗುವ ಹಣತೆಯನ್ನು ಇಡುವ ಸಲುವಾಗಿ ಕಲ್ಲಿನಲ್ಲಿ ಹೊರಚಾಚಿದಂತೆ ರಚನೆಗಳನ್ನು ಮಾಡಲಾಗಿದೆ. ಸ್ತಂಭದ ತುದಿಯಲ್ಲಿ ದೀಪವನ್ನು ಬೆಳಗಲು ದೊಡ್ಡದಾದ ಬಟ್ಟಲಿನಾಕಾರದ ಲೋಹದ ರಚನೆಯನ್ನು ಅಳವಡಿಸಿದ್ದಾರೆ. ಈ ಬಟ್ಟಲಿಗೆ ಸುತ್ತಲೂ ನಾಲ್ಕೂ ಕಡೆಗಳಲ್ಲಿ ಪುಟ್ಟ ಗಂಟೆಗಳನ್ನು ಅಲಂಕಾರಕ್ಕಾಗಿ ತೂಗಿ ಬಿಟ್ಟಿರುವುದನ್ನು ಕಾಣಬಹುದು. ಈ ದೀಪಸ್ತಂಭಕ್ಕೆ ವೃತ್ತಾಕಾರದ ಪೀಠವಿದೆ.

ಬೆಳಗಾಂ ತಾಲ್ಲೂಕಿನ ಶ್ರೀ ಮಾರುತಿ ದೇವಾಲಯವಿದೆ. ಈ ದೇವಾಲಯದ ಆವರಣದಲ್ಲಿ ವಿಶೇಷವಾಗಿ ರಚನೆಗೊಂಡಿರುವ ದೀಪಸ್ತಂಭವಿದೆ (ಚಿತ್ರ ೨೧೮). ಈ ದೀಪಸ್ತಂಭದ ಎತ್ತರವು ಇಪ್ಪತ್ತೆರಡು ಅಡಿ. ದೀಪಸ್ತಂಭದ ಎತ್ತರಕ್ಕೂ ಅಲ್ಲಲ್ಲಿ ದೀಪಗಳನ್ನು ಬೆಳಗಲು ರಚನೆಯನ್ನು ಮಾಡಿರುವುದನ್ನು ನೋಡಬಹುದು. ಈ ದೀಪಸ್ತಂಭವನ್ನು ಬಣ್ಣದಿಂದ ಅಲಂಕರಿಸಲಾಗಿದೆ. ಕಲ್ಲಿನ ದೀಪಸ್ತಂಭ ಇದಾಗಿದ್ದು ಮೇಲೆ ತುದಿಯಲ್ಲಿ ಕಬ್ಬಿಣದ ದೊಡ್ಡ ಹಣತೆಯನ್ನು ಇದಕ್ಕೆ ಅಳವಡಿಸಲಾಗಿದೆ.

ಬೆಳಗಾಂ ಜಿಲ್ಲೆ ಕಪಿಲೇಶ್ವರ ದೇವಾಲಯವು ಕ್ರಿಸ್ತ ಶಕ ೧೨೦೪ರಲ್ಲಿ ನಿರ್ಮಿಸಿದ ಪುರಾತನ ದೇವಾಲಯವಾಗಿದೆ[೫೫]. ಪುರಾತನ ದೇವಾಲಯವು ಇದಾಗಿದ್ದರೂ ಇದರ ಮುಂದಿರುವ ದೀಪಸ್ತಂಭವು ಇತ್ತೀಚಿನದಾಗಿದೆ. ದೇವಾಲಯದ ಆವರಣವನ್ನು ಹೊಸದಾಗಿ ಅಲಂಕರಿಸಲಾಗಿದೆ. ಈ ದೇವಾಲಯದ ಆವರಣದಲ್ಲಿ ಇರುವ ದೀಪಸ್ತಂಭದ ಎತ್ತರವು ನಾಲ್ಕು ಅಡಿಯಾಗಿದೆ (ಚಿತ್ರ ೨೧೯). ಇಟ್ಟಿಗೆಯಲ್ಲಿ ನಿರ್ಮಿಸಿರುವ ಈ ದೀಪಸ್ತಂಭವನ್ನು ಚೌಕಾಕಾರದ ಸಣ್ಣ ಗೂಡಿನಂತೆ ನಿರ್ಮಿಸಲಾಗಿದೆ. ಇದರ ಮೇಲ್ಛಾವಣಿಯನ್ನು ಕಬ್ಬಿಣದಲ್ಲಿ ತಯಾರಿಸಲಾಗಿದೆ. ಇದೊಂದು ಆಧುನಿಕ ಶೈಲಿಯ ದೀಪಸ್ತಂಭವೇ ಆಗಿದೆ. ಬೆಳಗಾಂ ಜಿಲ್ಲೆಯ ರಾಮತೀರ್ಥದಲ್ಲಿ ಎಪ್ಪತ್ತೈದು ಅಡಿಯ ದೀಪಸ್ತಂಭವಿದೆ[೫೬].

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಹಂಪಿಯ ಶ್ರೀ ಚಕ್ರಕೋದಂಡರಾಮ ದೇವಾಲಯವನ್ನು ಕ್ರಿಸ್ತ ಶಕ ೧೫೩೯ರಲ್ಲಿ ಅಚ್ಯುತದೇವರಾಯನು ನಿರ್ಮಿಸಿದ್ದಾನೆ[೫೭].

---

೫೫. S.K. Ramachandra Rao:
The Art and Architecture of Indian Temples, volume III, ಪುಟ–೭

೫೬. S.K. Ramachandra Rao:
The Art and Architecture of Indian Temples, volume III, ಪುಟ–೧೪೫

೫೭. S.K. Ramachandra Rao:
The Art and Architecture of Indian Temples, volume III, ಪುಟ–೭

ಈ ದೇವಾಲಯದ ಆವರಣದಲ್ಲಿ ಇರುವ ದೀಪಸ್ತಂಭದ ಎತ್ತರವು ಸುಮಾರು ಇಪ್ಪತ್ತು ಅಡಿಯಾಗಿದೆ (ಚಿತ್ರ ೨೨೦). ಸರಳವಾದ ದೀಪಸ್ತಂಭ ಇದಾಗಿದ್ದು ಮೇಲೆ ತುದಿಯಲ್ಲಿ ಲೋಹದಲ್ಲಿ ತಯಾರಿಸಿದ ರಚನೆ ಇರುವುದನ್ನು ನೋಡಬಹುದು. ಇದರಲ್ಲಿ ದೀಪವನ್ನು ಬೆಳಗಲು ಅವಕಾಶವನ್ನು ಮಾಡಲಾಗಿರುತ್ತದೆ.

ಹಂಪಿಯ ವಿರೂಪಾಕ್ಷ ದೇವಾಲಯದ ಎದುರು ನಂದಿ ಮಂಟಪವಿದೆ. ನಂದಿಮಂಟಪದ ಮುಂದೆ ಸುಮಾರು ಇಪ್ಪತ್ತೈದು ಅಡಿ ಎತ್ತರದ ದೀಪಸ್ತಂಭವು ಇರುವುದನ್ನು ನೋಡಬಹುದು (ಚಿತ್ರ ೨೨೧-೧). ಈ ದೀಪಸ್ತಂಭಕ್ಕೆ ಚೌಕಾಕಾರದ ಪೀಠವಿದ್ದು ಸ್ತಂಭದ ಭಾಗವು ತಳದಲ್ಲಿ ಚೌಕಾಕಾರವನ್ನು ಮತ್ತು ಮೇಲೆ ಅಷ್ಟಭುಜದ ರಚನೆಯನ್ನು ಹೊಂದಿದೆ. ಅಷ್ಟಭುಜದ ನಾಲ್ಕು ಭಾಗಗಳಲ್ಲಿ ಹಂತದ ರೀತಿಯಲ್ಲಿ ರಚನೆಯನ್ನು ಮಾಡಲಾಗಿದೆ. ಸ್ತಂಭದ ತುದಿಯಲ್ಲಿ ಕಬ್ಬಿಣದ ರಚನೆಯಿದೆ (ಚಿತ್ರ ೨೨೧-೨). ಇದರ ಕೊಂಬೆಗಳಂತೆ ಇರುವ ರಚನೆಗಳಲ್ಲಿ ದೀಪದ ಹಣತೆಗಳನ್ನು ಇರಿಸಲಾಗುತ್ತಿತ್ತು. ಈಗ ಅದರ ಅವಶೇಷಗಳು ಮಾತ್ರ ಉಳಿದಿವೆ.

ಕರ್ನಾಟಕದ ದೇವಾಲಯಗಳ ಆವರಣದಲ್ಲಿ ವಿವಿಧ ಮಾಧ್ಯಮದ ದೀಪಸ್ತಂಭಗಳು ದೊರೆಯುತ್ತವೆ. ಆಯಾ ಪ್ರದೇಶಕ್ಕೆ ಅನುಗುಣವಾಗಿ ಅಲ್ಲಿ ದೊರೆಯುವ ಸಾಮಗ್ರಿಗಳಿಗೆ ತಕ್ಕಂತೆ ವಿವಿಧ ಮಾಧ್ಯಮಗಳ ಬಳಕೆಯು ದೀಪಸ್ತಂಭಗಳಲ್ಲಿ ಇರುವುದು ಕಾಣುತ್ತದೆ. ಈ ಮಾಧ್ಯಮಗಳಲ್ಲಿ ಹೆಚ್ಚಾಗಿ ಕಲ್ಲಿನ ಮತ್ತು ಸಂಕೀರ್ಣ ಮಾಧ್ಯಮದ ದೀಪಸ್ತಂಭಗಳೇ ಹೆಚ್ಚು. ಪ್ರಸ್ತುತ ದಿನಗಳಲ್ಲಿ ವಿದ್ಯುತ್ ದೀಪಗಳನ್ನು ಬಳಸುತ್ತಿರುವುದರಿಂದ ದೇವಾಲಯಗಳ ಆವರಣದಲ್ಲಿ ದೀಪಸ್ತಂಭಗಳ ಬಳಕೆಯು ಅಷ್ಟಾಗಿ ಕಂಡು ಬರುವುದಿಲ್ಲ. ಹಬ್ಬ ಹರಿದಿನಗಳಲ್ಲಿ ಅದರಲ್ಲೂ ಕೆಲವು ದೇವಾಲಯಗಳ ದೀಪಸ್ತಂಭಗಳಲ್ಲಿ ಮಾತ್ರ ದೀಪಗಳನ್ನು ಬೆಳಗುವ ಪದ್ಧತಿ ಇರುವುದು ಕಾಣುತ್ತದೆ.

* *** *

ಅಧ್ಯಾಯ: ಆರು

ದೀಪಸ್ತಂಭಗಳಲ್ಲಿನ ಶಿಲ್ಪಗಳ ವಸ್ತು, ವಿಷಯ

ದೀಪಸ್ತಂಭಗಳಲ್ಲಿನ ಶಿಲ್ಪಗಳ ವಸ್ತು, ವಿಷಯ

ಮಾನವನು ಪ್ರಕೃತಿಯಲ್ಲಿ ನಡೆಯುವ ಪ್ರಳಯಗಳಿಗೆ ಹೆದರಿ ಅವುಗಳನ್ನು ಶಮನ ಮಾಡುವ ನಂಬಿಕೆಯಿಂದ ಪ್ರಕೃತಿಯನ್ನೇ ಪೂಜಿಸತೊಡಗಿದನು ಎಂದು ಈಗಾಗಲೇ ಹೇಳಿದೆ. ಈ ರೀತಿಯಾಗಿ ದೈವತ್ವದ ಪರಮ ಚೈತನ್ಯದ ಇರುವಿಕೆಯ ನಂಬಿಕೆಯನ್ನು ಹೊತ್ತ ಇವನು ನಂತರದ ದಿನಗಳಲ್ಲಿ ಈ ವಿಶೇಷವಾದ ಶಕ್ತಿಗೆ ಮೂರ್ತ ರೂಪವನ್ನು ನೀಡಿ ಪೂಜಿಸತೊಡಗಿದನು. ತನ್ನ ನಂಬಿಕೆಯ ಆಧಾರದ ಮೇಲೆ ತನ್ನ ಕಾಲ್ಪನಿಕ ಶಕ್ತಿಗೆ ಅನುಗುಣವಾಗಿ ದೈವದ ಪರಿಕಲ್ಪನೆಯನ್ನು ಹೊಂದಿದನು. ಹೀಗೆ ಪ್ರಾರಂಭವಾದದ್ದು ಜನಪದರ ಜಾನಪದ ಆರಾಧನೆ ಎಂದು ಹೇಳಬಹುದು.

ನಂತರದ ದಿನಗಳಲ್ಲಿ ಜನಪದ ಆರಾಧನೆಗೆ ನೀತಿ ನಿಯಮಗಳನ್ನು ಹಾಕಿಕೊಂಡು ಶಿಷ್ಟಪದ ಆರಾಧನೆ ಎಂದು ಗುರುತಿಸಿಕೊಂಡಂತೆ ಕಾಣುತ್ತದೆ. ಚಿತ್ರ ಮತ್ತು ಶಿಲ್ಪಗಳು ಪ್ರಾರಂಭವಾದದ್ದು ಹೀಗೆಯೇ. ಧರ್ಮಕ್ಕೆ ಭಯವೆ ಮೂಲ[೧] ಎನ್ನುವ ಮಾತು ಸತ್ಯವಾದದ್ದೇ ಆಗಿದೆ. ಸಾಂಪ್ರದಾಯಿಕ ಚಿತ್ರ ಹಾಗೂ ಶಿಲ್ಪಗಳ ಬೆಳವಣಿಗೆಗೆ ಧರ್ಮವೇ ಮೂಲವಾದ್ದರಿಂದ ಭಯವೇ ಸಾಪ್ರದಾಯಿಕ ಕಲೆಗೆ ಮೂಲ ಎಂದರೆ ತಪ್ಪಾಗಲಾರದು.

---

೧. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ-ಹಿನ್ನೆಲೆ**, ಪುಟ-೨

ಭಾರತೀಯ ಕಲೆಗಳು ವಾಸ್ತವತೆಯನ್ನು ಪ್ರತಿಬಿಂಬಿಸುವುದಕ್ಕಿಂತ ಹೆಚ್ಚಾಗಿ ಸಾಂಕೇತಿಕತೆಗೆ ಮಹತ್ವವನ್ನು ನೀಡಲಾಗಿದೆ[೨] ಎಂದು ಜಿ.ಎಸ್. ಅಮುರ್‌ರವರು ತಮ್ಮ ಲೇಖನ ಒಂದರಲ್ಲಿ ಹೇಳುತ್ತಾರೆ. ಸಾಂಕೇತಿಕತೆಯನ್ನು ಪ್ರತಿಬಿಂಬಿಸುವ ಕಲೆಯು ಸರ್ವರಿಗೂ ತಿಳಿಯುವುದರಿಂದ ಕಲಾವಿದನು ಇದನ್ನು ಬಳಸುತ್ತಾನೆ. ಸಾಂಕೇತಿಕ ಕಲೆಯಲ್ಲಿ ಆಧ್ಯಾತ್ಮಿಕತೆ ಇರುವುದರಿಂದ ಅದು ಜ್ಞಾನವನ್ನು ಹರಡುತ್ತದೆ ಎಂದು ಕೆಲವು ಸಾಹಿತಿಯರ ಮತವಾಗಿರುವುದು ಸಮಂಜಸವೇ ಆಗಿದೆ.

ದೇವಾಲಯ ಎಂದರೆ ಧರ್ಮಕ್ಕೆ ಸಂಬಂಧಿಸಿದುದು ಎಂದರ್ಥ. ದೇವಾಲಯದಲ್ಲಿರುವ ಯಾವುದೇ ರಚನೆ, ವಿನ್ಯಾಸಗಳಲ್ಲಿ ಆಯಾ ಧರ್ಮಕ್ಕೆ ಸಂಬಂಧಿಸಿದ ಚಿತ್ರವಾಗಲಿ, ಶಿಲ್ಪವಾಗಲಿ ಇರುವುದನ್ನು ಕಾಣುತ್ತೇವೆ. ದೇವಾಲಯದ ಆವರಣದಲ್ಲಿ ಮೂಲ ಮೂರ್ತಿ ಅಥವಾ ಪೂಜಾ ಮೂರ್ತಿಯನ್ನು ಹೊರತು ಪಡಿಸಿದರೆ ಉಳಿದೆಲ್ಲಾ ಶಿಲ್ಪಗಳು ಉಬ್ಬುಶಿಲ್ಪಗಳೆಂದೇ ಹೇಳಬಹುದು. ಶೈವ ದೇವಾಲಯದ ಎದುರಿಗಿರುವ ನಂದಿ ಶಿಲ್ಪವನ್ನು ಮತ್ತು ಕೆಲವು ವೈಷ್ಣವ ದೇವಾಲಯಗಳಲ್ಲಿ ಇರುವ ಗರುಡನ ಶಿಲ್ಪಗಳನ್ನು ಹೊರತು ಪಡಿಸಿದರೆ ಉಳಿದೆಲ್ಲಾ ಶಿಲ್ಪಗಳು ಉಬ್ಬುಶಿಲ್ಪಗಳೇ ಆಗಿವೆ.

ಕಲೆಗಳಲ್ಲಿ ೬೪ ಕಲೆಗಳಿವೆ ಎಂದು ಜ್ಞಾನಿಗಳು ಹೇಳುತ್ತಾರೆ[೩]. ಇದರಲ್ಲಿ ಚಿತ್ರದ ಕೆಲಸ, ಲೋಹದ ಕೆಲಸ, ಕಲ್ಲಿನ ಕೆಲಸ, ಮಣ್ಣಿನ ಕೆಲಸ, ಮರದ ಕೆಲಸಗಳನ್ನೂ ಹೆಸರಿಸಲಾಗಿದೆ. ಶಿಲ್ಪವಾಗಲೀ ಅಥವಾ ವಾಸ್ತು ಶಿಲ್ಪವನ್ನಾಗಲೀ ಕುರಿತು ಹೇಳಬೇಕೆಂದರೆ ಮಾಧ್ಯಮಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಪ್ರಾಚೀನ ಕಾಲದಲ್ಲಿ ಮಣ್ಣು, ಮರ, ಶಿಲೆ, ಲೋಹಗಳನ್ನು ಶಿಲ್ಪ ರಚನಾ ವಿಧಿ ವಿಧಾನಗಳಲ್ಲಿ ಬಳಸಿಕೊಂಡಿರುವುದನ್ನು ನೋಡುತ್ತೇವೆ. ಪ್ರಾಚೀನ ಮನವನು ತನ್ನ ಭಾವನೆಗಳನ್ನು ಮೊದಲಿಗೆ ಅಭಿವ್ಯಕ್ತಿಸಿದ್ದು ರೇಖಾ ಚಿತ್ರಗಳ ಮೂಲಕವಾಗಿದೆ. ನಂತರದ ದಿನಗಳಲ್ಲಿ ಕಲ್ಲಿನ ಬಂಡೆಗಳ ಮೇಲೆ ಇನ್ನೊಂದು ಕಲ್ಲಿನಿಂದ ಕೊರೆದು ಚಿತ್ರಗಳನ್ನು ಇನ್ನೂ ಹೆಚ್ಚು ಆಳವಾಗಿ ಮಾಡಿ ಉಬ್ಬುಶಿಲ್ಪಗಳನ್ನು ಸೃಷ್ಟಿಸಿದನು.

ಸಂಸ್ಕೃತ ಹಾಗೂ ಕನ್ನಡ ಕಾವ್ಯಗಳಲ್ಲಿ ಚಿತ್ರಾ, ಚಿತ್ರಾರ್ಧ ಮತ್ತು ಚಿತ್ರಾಭಾಸ[೪] ಎಂಬ ಪದಗಳ ಬಳಕೆ ಹಲವಾರು ಕಡೆಗಳಲ್ಲಿ ಬಂದಿದೆ. ಇವುಗಳ ಪ್ರಕಾಕಾರ ಚಿತ್ರ ಎಂದರೆ ಶಿಲ್ಪ ಎಂದುದಾಗುತ್ತದೆ. ಚಿತ್ರಾರ್ಧ ಎಂದರೆ ಚಿತ್ರದ ಅರ್ಧ ಎಂದು ಅಂದರೆ ಉಬ್ಬುಶಿಲ್ಪ ಎಂದಾಗುತ್ತದೆ. ಚಿತ್ರಾಭಾಸ ಎಂದರೆ ಚಿತ್ರವು ಇರುವಂತೆ ಭಾಸವಾಗುವುದು

---

೨. G.S. Amur: **Ananda coomaraswamy centenary essays,**
Edited by C.D. Narasimhaiah, ಪುಟ- ೫೮

೩. ಸಂ: ಪ್ರೊ, ಮಲ್ಲೇಪುರಂ ಜಿ. ವೆಂಕಟೇಶ್:
ಶಿವರತ್ತ್ವ ರತ್ನಾಕರ, ಕೆಳದಿ ಬಸವರಾಜ ಸಂಕಲನ, ಪುಟ- ೨೧

೪. ಆ.ಲ. ನರಸಿಂಹನ್: ಲೇಖನ- ಚಿತ್ರ, ಚಿತ್ರಾರ್ಧ, ಚಿತ್ರಾಭಾಸ, **ಕಲಾಕೋಶ,**
ಪ್ರಧಾನ ಸಂಪಾದಕರು: ಪಿ. ಆರ್. ತಿಪ್ಪೇಸ್ವಾಮಿ, ಪುಟ-೧೪೭

ಎಂದರ್ಥ ಅಂದರೆ ಚಿತ್ರಕಲೆ (ರೇಖಾ ಚಿತ್ರ ಮತ್ತು ವರ್ಣಚಿತ್ರಗಳೆರಡೂ ಇದರಲ್ಲಿ ಸೇರುತ್ತವೆ) ಎಂದಾಗುತ್ತದೆ. ಯಾವುದೇ ಒಂದು ಮಾಧ್ಯಮವನ್ನು ಬಳಸಿಕೊಂಡು ವಾಸ್ತವಿಕವಾದ ಅಥವಾ ಕಾಲ್ಪನಿಕವಾದ ವಿಷಯಗಳನ್ನು ಹೊತ್ತಂತಹ ಆಕೃತಿಯನ್ನು ಶಿಲ್ಪ ಎಂದು ಕರೆಯುತ್ತೇವೆ.

ದೇವಾಲಯದ ಆವರಣದಲ್ಲಿ ಇರುವ ಶಿಲ್ಪ ಚಿತ್ರಗಳೆಲ್ಲವೂ ಪುರಾಣದ ಆಧಾರದ ಮೇಲೆ ರಚಿಸುವಂತಹವು. ಸಾಹಿತ್ಯದ ಮೂಲಕ ದೃಶ್ಯ ಮಾಧ್ಯಮವನ್ನು ಬಳಸಿಕೊಂಡು ಅದನ್ನು ಮೂಡಿಸಿದ ಕಲೆಗಾರನ ಕೃತಿಕರ್ಮ ಅಮರ[೫]. ಪುರಾಣಗಳ ಕಥೆಗಳಿಗೆ ಕಲಾವಿದನು ತನ್ನ ಕಲ್ಪನೆಯ ಸಾಮರ್ಥ್ಯವನ್ನು ಸೇರಿಸಿ ಚಿತ್ರ ಶಿಲ್ಪಗಳನ್ನು ರಚಿಸಿರುವುದು ಕಾಣುತ್ತದೆ. ದೇವಾಲಯದ ದೀಪಸ್ತಂಭಗಳೂ ಇದಕ್ಕೆ ಹೊರತೇನಲ್ಲ.

ದೇವಾಲಯದ ದೀಪಸ್ತಂಭಗಳು ಶಿಲ್ಪಗಳೇ ಆಗಿವೆ. ಯಾವುದು ತ್ರಿ ಆಯಾಮಗಳನ್ನು ಹೊಂದಿರುತ್ತದೆಯೋ ಅವನ್ನು ಶಿಲ್ಪ ಎಂದು ಕರೆಯುತ್ತೇವೆ. ಇವುಗಳಲ್ಲಿ ದೇವನ ಶಿಲ್ಪ, ಮಾನವನ ಶಿಲ್ಪ ಎಂದು ಎರಡು ವಿಧ. ಸೃಷ್ಟಿಯಾಗಿರುವ ಪ್ರತಿಯೊಂದನ್ನು ದೇವನ ಶಿಲ್ಪ ಎಂದು ಗುರುತಿಸಲಾಗುತ್ತದೆ. ಮನುಷ್ಯ ಮಾಡಿದಂತಹ ಶಿಲ್ಪಗಳನ್ನು ಮಾನವನ ಶಿಲ್ಪಗಳು ಎಂದು ತಿಳಿಯಲಾಗುತ್ತದೆ. ದೇವಾಲಯಗಳು, ಮನೆ ಮಂದಿರಗಳೆಲ್ಲ ಮಾನವನು ನಿರ್ಮಿಸಿದ ವಾಸ್ತುಶಿಲ್ಪಗಳಾಗಿವೆ. ಈ ದೇವಾಲಯದ ಆವರಣದಲ್ಲಿ ದೊರೆಯುವ ದೀಪಸ್ತಂಭವು ಮಾನವನು ನಿರ್ಮಿಸಿದ ಶಿಲ್ಪಗಳಲ್ಲಿ ಒಂದು.

ದೇವಾಲಯದ ಆವರಣದಲ್ಲಿ ನಿಂತಿರುವ ದೀಪಸ್ತಂಭವು ಉಬ್ಬುಶಿಲ್ಪಗಳ ಕೆತ್ತನೆಯಿಂದ ಕೂಡಿರುವುದನ್ನು ಕಾಣುತ್ತೇವೆ. ಈ ಉಬ್ಬುಶಿಲ್ಪಗಳು ಆಯಾ ಧರ್ಮದ ಪುರಾಣಗಳ ಆಧಾರದ ಮೇಲೆ ನಿರ್ಮಾಣಗೊಂಡಿರುತ್ತವೆ. ಶೈವ ಧರ್ಮದ ದೇವಾಲಯಗಳ ಆವರಣದಲ್ಲಿ ಶಿವನಿಗೆ ಸಂಬಂಧಿಸಿದ ಉಬ್ಬುಶಿಲ್ಪಗಳು ಇರುತ್ತವೆ. ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ದೇವಾಲಯಗಳ ಆವರಣದಲ್ಲಿ ವಿಷ್ಣುವಿಗೆ ಸಂಬಂಧಿಸಿದ ಉಬ್ಬುಶಿಲ್ಪಗಳು ಇರುತ್ತವೆ. ಬೇರೆ ಇನ್ನಾವುದೇ ಧರ್ಮದ ದೇವಾಲಯಗಳಲ್ಲಿ ಆಯಾ ಧರ್ಮಕ್ಕೆ ಸಂಬಂಧಿಸಿದ ಉಬ್ಬು ಶಿಲ್ಪಗಳು ಇರುವುದು ಕಾಣುತ್ತದೆ.

ಮನುಷ್ಯನು ಸಮಾಜವನ್ನು, ಗುಂಪುಗಳನ್ನು ಸ್ಥಾಪಿಸಿದಂದಿನಿಂದ ತನ್ನ ಸಮಾಜದ ಒಳಿತಿಗಾಗಿ, ಅಭಿವೃದ್ಧಿಗಾಗಿ ದುಡಿಯುತ್ತಲೇ ಬಂದಿದ್ದಾನೆ. ತಾವು ತಮ್ಮ ಜೀವನದಲ್ಲಿ ಕಂಡಂತಹ ಅನುಭವಗಳನ್ನು ಮುಂದಿನ ಪೀಳಿಗೆಗೆ ಉಪಯೋಗವಾಗಲಿ ಎನ್ನುವ ಧ್ಯೇಯದಿಂದ ಕಲೆಯನ್ನು ಬಳಸಿಕೊಂಡಿರಬೇಕು. ಕಲೆಯ ಸಂಕೇತಗಳನ್ನು ಬಳಸಿ ಜನ ಸಾಮಾನ್ಯರಿಗೆ ಸಂದೇಶಗಳನ್ನು ಕೊಡಲು ಪ್ರಯತ್ನಿಸಿರಬೇಕು. ಈ ನಿಟ್ಟಿನಲ್ಲೇ ಪ್ರಾರಂಭವಾದದ್ದು ಸಂಕೇತಗಳು ಎನ್ನಬಹುದು.

---


೫. ಡಾ. ಸಂತನು ಬಸು: ಲೇಖನ- **ಭಾರತೀಯ ಸಾಹಿತ್ಯ ಮತ್ತು ಶಿಲ್ಪಕಲೆಯಲ್ಲಿ ಕಮಲ**, ಮಲ್ಲಾರ ಮಾಸಪತ್ರಿಕೆ, ಅಕ್ಟೋಬರ್ ೨೦೦೨, ಪುಟ- ೩




ಚಿತ್ರ ೨೨೨-೧



ಚಿತ್ರ ೨೨೨-೨



ಚಿತ್ರ ೨೨೨-೩



ಚಿತ್ರ ೨೨೨-೪

ದೇವಾಲಯಗಳ ಆವರಣದಲ್ಲಿ ದೊರೆಯುವ ದೀಪಸ್ತಂಭಗಳಲ್ಲಿ ಇರುವ ಉಬ್ಬುಶಿಲ್ಪಗಳನ್ನು ಪ್ರಮುಖವಾಗಿ ಮೂರು ವಿಧವಾಗಿ ವಿಂಗಡಿಸಬಹುದು.

೧. ಧಾರ್ಮಿಕ ಶಿಲ್ಪಗಳು

೨. ಕಾಲ್ಪನಿಕ ಶಿಲ್ಪಗಳು

೩. ಸಾಮಾಜಿಕ ಶಿಲ್ಪಗಳು

ಧಾರ್ಮಿಕ ಶಿಲ್ಪಗಳು ಧರ್ಮ ಮತ್ತು ಕಲ್ಪನೆಯ ಹಿನ್ನೆಲೆಯಲ್ಲಿ ರೂಪುಗೊಂಡಿದ್ದರೆ ಕಾಲ್ಪನಿಕ ಶಿಲ್ಪಗಳು ಕೇವಲ ಕಲ್ಪನೆಯ ಆಧಾರದ ಮೇಲೆ ರಚಿಸಲ್ಪಟ್ಟಿರುತ್ತವೆ. ಸಾಮಾಜಿಕ ಶಿಲ್ಪಗಳು ಸಮಾಜವನ್ನು ಪ್ರತಿಬಿಂಬಿಸುವಂತೆ ನಿರ್ಮಾಣಗೊಂಡಿರುವುದು ಕಾಣುತ್ತದೆ.

೧. ಧಾರ್ಮಿಕ ಶಿಲ್ಪಗಳು

ದೇವಾಲಯದ ಆವರಣದಲ್ಲಿ ದೀಪಸ್ತಂಭವು ಇರುವುದರಿಂದ ಈ ದೀಪಸ್ತಂಭಗಳಲ್ಲಿ ಧರ್ಮಕ್ಕೆ ಸಂಬಂಧಿಸಿದ ಉಬ್ಬುಶಿಲ್ಪಗಳು ಹೆಚ್ಚಾಗಿ ದೊರೆಯುತ್ತವೆ. ದೇವಾಲಯದ ದೀಪಸ್ತಂಭಗಳಲ್ಲಿ ಇರುವ ಉಬ್ಬುಶಿಲ್ಪಗಳಲ್ಲಿ ಹೆಚ್ಚಿನ ಶಿಲ್ಪಗಳು ದೇವಾಲಯದ ಮೂಲ ದೇವರ ವಾಹನ ಇಲ್ಲವೇ ಅವರ ಪರಿವಾರ ದೇವತೆಗಳೋ ಆಗಿರುತ್ತವೆ. ಕೆಲವು ದೀಪಸ್ತಂಭಗಳಲ್ಲಿ ದೇವಮೂರ್ತಿಯರ ಶಿಲ್ಪಗಳೂ ಇರುವುದನ್ನು ನೋಡಬಹುದು. ಈ ಶಿಲ್ಪಗಳನ್ನು ಶಿಲ್ಪಶಾಸ್ತ್ರದಲ್ಲಿ ಇರುವ ಮಾನ ಪ್ರಮಾಣಗಳ ಆಧಾರದ ಮೇಲೆ ರಚಿಸಲಾಗಿರುತ್ತದೆ. ಶಿಲ್ಪಗಳ ಎತ್ತರವನ್ನು ತಾಲಗಳಲ್ಲಿ ವಿಭಜಿಸಿಕೊಂಡು ಶಿಲ್ಪವನ್ನು ರಚಿಸಲಾಗಿರುತ್ತದೆ.

ಶೈವ ಧರ್ಮದ ದೇವಾಲಯದ ಆವರಣದಲ್ಲಿ ಇರುವ ದೀಪಸ್ತಂಭಗಳಲ್ಲಿ ಶಿವನ ಪುತ್ರರಾದ ಗಣಪತಿ ಮತ್ತು ವೀರಭದ್ರರ ಶಿಲ್ಪಗಳು, ಪಾರ್ವತಿಪರಮೇಶ್ವರರ ಉಬ್ಬುಶಿಲ್ಪಗಳು, ಲಿಂಗದ ಉಬ್ಬುಶಿಲ್ಪ ಇಲ್ಲವೇ ಶಿವನ ವಾಹನವಾದ ನಂದಿಯ ಉಬ್ಬುಶಿಲ್ಪಗಳು ಇರುವುದು ಕಂಡು ಬರುತ್ತದೆ.

ವೈಷ್ಣವ ಧರ್ಮದ ದೇವಾಲಯಗಳ ಆವರಣದಲ್ಲಿ ಇರುವ ದೀಪಸ್ತಂಭಗಳಲ್ಲಿ ವಿಷ್ಣುವಿನ ಆಯುಧಗಳಾದ ಶಂಖ ಮತ್ತು ಚಕ್ರ, ವಿಷ್ಣುವಿನ ವಾಹನವಾದ ಗರುಡನ ಶಿಲ್ಪ ಮತ್ತು ರಾಮನ ಪರಮಭಕ್ತನಾದ ಹನುಮಂತನ ಉಬ್ಬುಶಿಲ್ಪಗಳು ಇರುವುದು ಕಾಣುತ್ತದೆ.

ಶಾಕ್ತ ಸಂಪ್ರದಾಯದ ದೇವಾಲಯಗಳಲ್ಲಿ ಇರುವ ದೀಪಸ್ತಂಭಗಳಲ್ಲಿ ಸ್ತ್ರೀ ದೇವತೆಗೆ ಸಂಬಂಧಿಸಿದಂತಹ ಶಿಲ್ಪಗಳು ಇರುವುದು ಕಾಣುತ್ತದೆ. ಈ ಉಬ್ಬುಶಿಲ್ಪಗಳು ಧರ್ಮಕ್ಕೆ, ಧರ್ಮದಲ್ಲಿ ಇರುವ ಪುರಾಣಗಳನ್ನು ಆಧರಿಸಿ ರೂಪುಗೊಂಡಿರುವಂತಹುವು.



ಚಿತ್ರ ೨೨೩-೧



ಚಿತ್ರ ೨೨೩-೨



ಚಿತ್ರ ೨೨೩-೩

ಇಂತಹ ಶಿಲ್ಪಗಳಿಗೆ ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ಅಳತೆ, ಪ್ರಮಾಣಗಳು ಇರುವುದು ಕಂಡು ಬರುತ್ತದೆ.

ಇವುಗಳ ತಾಲಮಾನಗಳನ್ನು ಇಲ್ಲಿ ಪಟ್ಟಿಕೆಯ ರೂಪದಲ್ಲಿ ಕೊಡಲಾಗಿದೆ.

ಕ್ರಮ	ತಾಲಮಾನ	ಉತ್ತಮ	ಮಧ್ಯಮ	ಅಧಮ (ಕನ್ಯಸ/ ಕನಿಷ್ಠ)
೧.	ದಶತಾಲ	ತ್ರಿಮೂರ್ತಿಗಳು (ಬ್ರಹ್ಮ-ವಿಷ್ಣು -ಮಹೇಶ್ವರ, ದತ್ತಾತ್ರೇಯ, ಬುದ್ಧ, ಅರ್ಹಂತ ಭಕ್ತರು (ಸಾಯುಜ್ಯ) ಬಲರಾಮ, ಶ್ರೀ ಕೃಷ್ಣ	ಸರಸ್ವತಿ, ಲಕ್ಷ್ಮೀ, ಪಾರ್ವತಿ, ಗೌರೀ, ಉಷಾ, ಭೂದೇವಿ, ದುರ್ಗಾ, ಸಪ್ತಮಾತೃಕೆಯರು, ಜ್ಯೇಷ್ಠಾದೇವಿ, ಶ್ರೀ ರಾಮ, ಪರಶುರಾಮ	ಇಂದ್ರ, ಅಗ್ನಿ, ಈಶಾನ, ಬೃಹಸ್ಪತಿ, ಶುಕ್ರಾಚಾರ್ಯ, ಚಂದ್ರ ಆದಿತ್ಯ, ಅಶ್ವಿನಿಗಳು, ಮುರುಗ, ಮಾರ್ಕಂಡೇಯ ವರುಣ, ನೀಲಾದೇವಿ, ಆರ್ಯ, ಸುಬ್ರಹ್ಮಣ್ಯ, ಚಂಡೇಶ್ವರ, ನವಗ್ರಹಗಳು, ಕ್ಷೇತ್ರಪಾಲಕ, ಭಕ್ತರು (ಸಾಮೀಪ್ಯ)
	೧೦×೧೨=೧೨೦	೧೨೪ ಅಂಗುಲ	೧೨೦	೧೧೬
೨.	ಸಾರ್ಧ ನವ ತಾಲ	-	ದೇವನೊಂದಿಗಿರುವ ದೇವಿ ವಿಗ್ರಹಗಳು ಸೀತ, ಪಾರ್ವತಿ, ಲಕ್ಷ್ಮಿ ಮುಂತಾದವರಿಗೆ	-
	೯½×೧೨= ೧೧೪	-	೧೧೪	-
೩.	ನವತಾಲ	ಅಷ್ಟವಸು, ವಿದ್ಯೇಶ್ವರರು, ದಿಕ್ಪಾಲಕರು, ನಿರ್ಋತಿ, ಗರುಡ, ಸೂರ್ಯ, ನಾಗರಾಜ, ರಾಹು ದೇವ-ದೇವತೆಗಳು, ಸಿದ್ಧರು, ಚಾರಣರು, ದಿವ್ಯರು, ಭಕ್ತರು (ಸಾಲೋಕ್ಯ)	ಯಕ್ಷರು, ಅಪ್ಸರೆಯರು, ಮರುತ್ತರು, ವಿದ್ಯಾಮೂರ್ತಿಗಳು ವಿದ್ಯಾಧರರು, ಋಷಿಗಳು	-
	೯×೧೨ = ೧೦೮	೧೧೨	೧೦೮	೧೦೪
೪.	ಅಷ್ಟ ತಾಲ	ಮಾನವರು	ಭೃಗು, ಕಶ್ಯಪ, ಭಗೀರಥ	-
	೮× ೧೨ = ೯೬	೧೦೦	೯೬	೯೨
೫.	ಸಪ್ತ ತಾಲ	ಸಾಧ್ಯರು, ಪಿಶಾಚಿಗಳು	ಅಗಸ್ತ್ಯ	-
	೭×೧೨= ೮೪	೮೮	೮೪	೮೦
೬.	ಷಟ್ ತಾಲ	-	ಕುಬ್ಜರು, ಗೂನು ಬೆನ್ನಿನವರು	-
	೬×೧೨ =೭೨	೭೬	೭೨	೬೮
೭.	ಪಂಚ ತಾಲ	ಗಣಪತಿ, ಷಣ್ಮುಖ, ವಾಮನ ಹನುಮಂತ	ಭೂತಗಣಗಳು	ಭೂತಗಣಗಳು
	೫×೧೨ = ೬೦	೬೪	೬೦	೫೬
೮.	ಚತುಸ್ತಾಲ	-	ವಾಮನ, ಭೂತಗಣಗಳು, ಅಪಸ್ಮಾರ	-
	೪×೧೨ = ೪೮	೫೨	೪೮	೪೪
೯.	ತ್ರಿತಾಲ	-	ಕಿನ್ನರರು, ಬಾಲಕರು	-
	೩×೧೨ = ೩೬	೪೦	೩೬	೩೨
೧೦.	ದ್ವಿತಾಲ	ಹಂಸ, ಮತ್ಸ್ಯ	ಕಿಂಪುರುಷ, ಕೂರ್ಮ, ಕೂಷ್ಮಾಂಡ	-
	೨×೧೨ = ೨೪	೨೮	೨೪	೨೦
೧೧.	ಏಕ ತಾಲ		ಕೂರ್ಮ ಶೀರ್ಷ ಮುಖ, ಕಬಂಧ	
	೧×೧೨ = ೧೨	-	೧೨	-

ಶಾಸ್ತ್ರದಲ್ಲಿ ಹೇಳಿರುವ ಅಳತೆಗಳನ್ನು ಬಳಸಬೇಕು
ಸೂಚನೆ: ೧. ಸಿಂಹ, ವೃಷಭ (ನಂದಿ) ಇತ್ಯಾದಿಗಳಿಗೆ ತಾಲಮಾನ ಕ್ರಮಗಳನ್ನು ಶಾಸ್ತ್ರದಲ್ಲಿ ಹೇಳಿರುವ ವಿವರಗಳನ್ನು ಮೇಲಿನ ಪಟ್ಟಿಯಲ್ಲಿ
೨. ಕಾಶ್ಯಪ ಶಿಲ್ಪದ ವಿವರಗಳೊಂದಿಗೆ ಮಾನಸಾರ, ಸಕಲಾಧಿಕಾರ, ಸಾರಸ್ವತೀಯ ಚಿತ್ರಕರ್ಮ ಇತ್ಯಾದಿ ಶಾಸ್ತ್ರಗಳಲ್ಲಿ ಹೇಳಿರುವ [illegible] ಆ ಅಳತೆಗಳನ್ನು ಅನುಸರಿಸಬೇಕು.
ಟಿಪ್ಪಣಿ: ಇದು ಸಾಧಾರಣವಾದ ತಾಲಮಾನ ಕ್ರಮ. ವಿಶೇಷ ವಿವರಗಳು ಆಯಾ ಶಾಸ್ತ್ರಗಳಲ್ಲಿ ಲಕ್ಷಣಗಳೊಂದಿಗೆ ಹೊಂದಿಕೊಳ್ಳುವಂತಾಗಿರುತ್ತವೆ.

(ಈ ಪಟ್ಟಿಕೆಯನ್ನು ಜಿ. ಜ್ಞಾನಾನಂದ ಅವರ ಶ್ರೀ ಕಾಶ್ಯಪ ಶಿಲ್ಪ ಶಾಸ್ತ್ರಂ ಎಂಬ ಗ್ರಂಥದ ಪುಟ ೩೩೮ರಿಂದ ತೆಗೆದುಕೊಳ್ಳಲಾಗಿದೆ.)

ನಾಗಮಂಡಲ:

ನಾಗಮಂಡಲ ಎನ್ನುವುದು ನಾಗನ ಮಂಡಲ ಎಂದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಗಮಂಡಲ ಎಂಬ ಹೆಸರಿನ ನೃತ್ಯಾಚರಣೆಯೂ ಇದೆ. ಏಳು ಹೆಡೆಯ ಸರ್ಪದ ಆಕೃತಿಯು ಚಿತ್ರದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಇದನ್ನು ಸುರುಳಿ ಸುರುಳಿಯಾಗಿ ಮಾಡಿ ಪವಿತ್ರವಾದ ಗಂಟುಗಳನ್ನು ಹಾಕಲಾಗಿರುತ್ತದೆ. ತಂತ್ರದಲ್ಲಿ ಸರ್ಪದ ಆಕೃತಿಗೆ



ಚಿತ್ರ ೨೨೪-೧



ಚಿತ್ರ ೨೨೪-೨



ಚಿತ್ರ ೨೨೪-೩



ಚಿತ್ರ ೨೨೪-೪

ವಿಶೇಷವಾದ ಸ್ಥಾನವಿದೆ. ತಂತ್ರವನ್ನು ಪ್ರತಿಬಿಂಬಿಸುವ ಶಾಸ್ತ್ರದಲ್ಲಿ ಕುಂಡಲಿನಿಗೆ ಮತ್ತು ಅದರಲ್ಲಿರುವ ಶಕ್ತಿಗೆ ವಿಶೇಷವಾದ ಮಹತ್ವವಿರುವುದು ತಿಳಿಯುತ್ತದೆ. ಕುಂಡಲಿನಿ ಚಕ್ರವನ್ನು ಸರ್ಪಾಕೃತಿಯಲ್ಲಿ ಚಿತ್ರಿಸುತ್ತಾರೆ[೬].

ಪ್ರಾಚೀನ ಕಾಲದಲ್ಲಿ ಕರ್ನಾಟಕದಲ್ಲಿ ನಾಗಧರ್ಮ ಎಂಬ ಧರ್ಮವೂ ಇತ್ತು. ವೇದಕಾಲಕ್ಕಿಂತಲೂ ಪ್ರಾಚೀನವಾದ ನಾಗಧರ್ಮವು ಕೂಡಾ ಇತರೆ ಧರ್ಮಗಳ ಜೊತೆಗೆ ವಿಜಯನಗರ ಸಾಮ್ರಾಜ್ಯದಲ್ಲಿ ಆಶ್ರಯವನ್ನು ಪಡೆದಿದ್ದವು[೭]. ನಾಗಶಿಲ್ಪವು ಕೊನೆ ಮೊದಲಿಲ್ಲದ ಕಾಲವನ್ನು ಸಾಂಕೇತಿಸುದಾಗಿದೆ. ತನ್ನ ಬಾಯಿಯಲ್ಲಿ ಬಾಲವನ್ನು ಹಾಕಿಕೊಂಡು ಸುರುಳಿಯಾಗಿ ಸುತ್ತಿಕೊಂಡ ನಾಗಶಿಲ್ಪದ ಚಿತ್ರಗಳು ಸತ್ಯ ಮತ್ತು ಶಾಶ್ವತವನ್ನು ಪ್ರತಿನಿಧಿಸುವುದಾಗಿದೆ ಎಂದು ತತ್ವಶಾಸ್ತ್ರ ಗ್ರಂಥಗಳಲ್ಲಿ ಹೇಳಿರುವುದು ತಿಳಿದು ಬರುತ್ತದೆ[೮]. ದೀಪಸ್ತಂಭಗಳಲ್ಲಿ ನಾಗಮಂಡಲದ ಉಬ್ಬುಶಿಲ್ಪವನ್ನೋ ಇಲ್ಲವೇ ನಾಗನ ಶಿಲ್ಪವನ್ನು ಚಿತ್ರಿಸಿರುವುದನ್ನು ಕಾಣುತ್ತೇವೆ.

ಶೈವ ಧರ್ಮದ ದೇವಾಲಯಗಳ ಆವರಣದಲ್ಲಿ ಇರುವ ದೀಪಸ್ತಂಭಗಳಲ್ಲಿ ಈ ರೀತಿಯ ಉಬ್ಬುಶಿಲ್ಪಗಳು ಹೆಚ್ಚಾಗಿ ದೊರೆಯುತ್ತವೆ. ಕೆಲವು ಶಿಲ್ಪಗಳನ್ನು ದೀಪಸ್ತಂಭದ ಎದುರು ಸ್ಥಾಪಿಸಲಾಗಿರುತ್ತದೆ.

ಕೀರ್ತಿ ಮುಖ:

ಕೀರ್ತಿಮುಖದ ಉಬ್ಬುಶಿಲ್ಪವು ದೇವಾಲಯಗಳ ಎಲ್ಲಾ ಪ್ರಾಕಾರಗಳಲ್ಲೂ ಒಂದಲ್ಲ ಒಂದು ರೀತಿಯಾಗಿ ಇರುವುದನ್ನು ನೋಡಬಹುದು. ಈ ಶಿಲ್ಪಗಳು ಹತ್ತನೆಯ ಶತಮಾನದಿಂದ ಈಚೆಗೆ ಹೆಚ್ಚಿನ ಮಹತ್ವವನ್ನು ಪಡೆದಿರುವುದು ಕಂಡು ಬರುತ್ತದೆ. ಕೀರ್ತಿಮುಖದ ರಚನೆಯು ಮೂರ್ತಿಶಿಲ್ಪಗಳಲ್ಲಿನ ಆಭರಣಗಳಲ್ಲಿ, ಪೀಠಗಳಲ್ಲಿ, ಮೂರ್ತಿಶಿಲ್ಪದ ಸುತ್ತ ಇರುವ ಪ್ರಭಾವಳಿಗಳಲ್ಲಿ ಇರುವುದು ಕಂಡು ಬರುತ್ತದೆ.

ಪುರಾಣಗಳಲ್ಲಿ ಕೀರ್ತಿಮುಖವನ್ನು ಕುರಿತು ಉಲ್ಲೇಖಗಳು ದೊರೆಯುತ್ತವೆ. ಪದ್ಮಪುರಾಣದಲ್ಲಿ ಇದನ್ನು ಕುರಿತು ಕಥೆಯಿರುವುದನ್ನು ನೋಡಬಹುದು[೯]. ಈ ಕಥೆಯಲ್ಲಿ ಜಲಾಂಧರನ ಸನ್ನಿವೇಶವನ್ನು ಕುರಿತು ಹೇಳಲಾಗಿದೆ. ಈ ಕಥೆಯಲ್ಲಿ ಹೇಳಿರುವಂತೆ ಜಲಾಂಧರನ ಜೊತೆಗೆ ಯುದ್ಧವನ್ನು ಮಾಡಲು ಕೀರ್ತಿಮುಖನು ಶಿವನ ತಲೆಗೂದಲಿನಿಂದ ಉದ್ಭವಿಸಿದನು. ಬಹಳ ಹಸಿವಿನಿಂದ ಇದ್ದಂತಹ ಕೀರ್ತಿಮುಖನು ಜಲಾಂಧರನ ಪರ ಇದ್ದಂತಹ ರಾಹುವನ್ನು ತಿನ್ನಲು ಹಿಡಿದುಕೊಂಡನು.

---

೬ ಚಂದ್ರಕಾಂತ ಕುಸನೂರು: **ಕಲೆ, ಅನುಭವ ಮತ್ತು ಅನುಭಾವ,** ಪುಟ– ೬೩

೭ ಡಾ. ಹೆಚ್. ತಿಪ್ಪೇರುದ್ರಸ್ವಾಮಿ: **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಪುಟ– ೧೯೩

೮. Choodamani Nandagopal, Vatsla Iyengar:
Temple Treasures, Volume-II, Temple jewellery, ಪುಟ– ೫೧

೯. Choodamani Nandagopal, Vatsla Iyengar:
Temple Treasures, Volume-II, Temple jewellery, ಪುಟ– ೪೮



ಚಿತ್ರ ೨೨೫-೧



ಚಿತ್ರ ೨೨೫-೨



ಚಿತ್ರ ೨೨೫-೩



ಚಿತ್ರ ೨೨೫-೪

ರಾಹುವು ತನ್ನ ಪ್ರಾಣ ರಕ್ಷಣೆಗಾಗಿ ಶಿವನಲ್ಲಿ ಅಂಗಲಾಚಿ ಬೇಡಿಕೊಂಡನು. ಆಗ ಶಿವನು ಕೀರ್ತಿಮುಖಕ್ಕೆ ತನ್ನ ಹಸಿವನ್ನು ನೀಗಿಸಿಕೊಳ್ಳಲು ತನ್ನನ್ನು ತಾನೇ ತಿನ್ನುವಂತೆ ಆಜ್ಞಾಪಿಸಿದನು. ಆಗ ಕೀರ್ತಿಮುಖನಿಗೆ ತನ್ನ ತಲೆಯ ಹೊರತಾಗಿ ಇನ್ನುಳಿದ ದೇಹವನ್ನು ಮಾತ್ರ ತಿನ್ನಲು ಸಾಧ್ಯವಾಯಿತು. ತಿನ್ನಲಾಗದೆ ಅವನ ತಲೆಯ ಭಾಗವಷ್ಟೇ ಉಳಿಯಿತು. ಆದ್ದರಿಂದ ಕೀರ್ತಿಮುಖದ ಶಿಲ್ಪ ಚಿತ್ರಗಳಲ್ಲಿ ಕೇವಲ ತಲೆಯ ಭಾಗ ಮಾತ್ರ ಇರುವುದನ್ನು ಗಮನಿಸಬಹುದು.

ಕೀರ್ತಿಯು ಮುಖದ ಶಿಲ್ಪವು ಸಿಂಹದ ಮುಖವಾಗಿದ್ದು ಬಾಯಿ ತೆರೆದುಕೊಂಡಿರುತ್ತದೆ. ಇದಕ್ಕೆ ಕೋರೆಹಲ್ಲುಗಳು, ಉದ್ದನೆಯ ನಾಲಿಗೆ ಹೊರಚಾಚಿದಂತೆ ಚಿತ್ರಿಸಲಾಗಿರುತ್ತದೆ. ಈ ರೀತಿಯ ಉಬ್ಬುಶಿಲ್ಪಗಳು ಹೆಚ್ಚಾಗಿ ಹೊಯ್ಸಳರ ವಾಸ್ತುಶಿಲ್ಪದಲ್ಲಿ ನೋಡಬಹುದು. ಕೆಲವು ಶಿಲ್ಪಗಳಲ್ಲಿ ಕೀರ್ತಿಮುಖವು ಇಡೀ ದೇಹವನ್ನು ಹೊಂದಿರುವುದು ಕಾಣುತ್ತದೆ. ಈ ರೀತಿಯ ಶಿಲ್ಪಗಳಲ್ಲಿ ಕೀರ್ತಿಮುಖವು ಎರಡೂ ಕೈಗಳಿಂದ ಗೋಳವೊಂದನ್ನು ಅದುಮಿ ಹಿಡಿದು ಕುಳಿತಿರುವಂತೆ ರಚನೆಯು ಇರುವುದನ್ನು ನೋಡಬಹುದು. ಇದರಲ್ಲಿನ ಗೋಳವು ರಾಹುವಿನ ಸಾಂಕೇತಿಸುತ್ತದೆ ಎಂದು ಕಾಣುತ್ತದೆ. ಈ ರೀತಿಯಾಗಿ ರಚಿಸಲ್ಪಟ್ಟ ಉಬ್ಬುಶಿಲ್ಪಗಳು ದೀಪಸ್ತಂಭಗಳಲ್ಲೂ ದೊರೆಯುತ್ತವೆ.

ಕೂರ್ಮದ ಶಿಲ್ಪ:

ಕೆಲವು ದೀಪಸ್ತಂಭಗಳ ಪೀಠದ ನಂತರದ ಜಾಗದಲ್ಲಿ ಕಂಬದ ಕೆಳಗೆ ಆಮೆಯ ಶಿಲ್ಪವಿರುವುದು ಕಾಣುತ್ತದೆ. ಆಮೆಯ ಶಿಲ್ಪವು ಇಡೀ ದೀಪಸ್ತಂಭವನ್ನು ಹೊತ್ತು ನಿಂತಂತೆ ಶಿಲ್ಪದ ರಚನೆಯಿರುವುದು ಕಂಡು ಬರುತ್ತದೆ. ಪುರಾಣಗಳಲ್ಲಿ ದೊರೆಯುವಂತೆ ದೇವ-ದಾನವರು ವಾಸುಕಿ ಎಂಬ ಹಗ್ಗದಿಂದ ಕ್ಷೀರ ಸಾಗರವನ್ನು ಮಂದರ ಪರ್ವತದ ಸಹಾಯದಿಂದ ಮಂಥನ ಮಾಡುವ ಸಂದರ್ಭದಲ್ಲಿ ಮಂದಾರ ಪರ್ವತವು ಸಮುದ್ರದ ತಳದಲ್ಲಿ ಹೋಗಿ ಹೂತುಕೊಂಡಿತು. ಅದರಿಂದ ಗಾಭರಿಗೊಂಡ ದೇವ-ದಾನವರು ವಿಷ್ಣುವಿನಲ್ಲಿ ರಕ್ಷಿಸಲು ಬೇಡಿಕೊಂಡರು.

ವಿಷ್ಣುವು ತನ್ನ ಒಂದು ಅಂಶದಿಂದ ಕೂರ್ಮದ ರೂಪವನ್ನು ತಾಳಿ, ತನ್ನ ಬೆನ್ನ ಮೇಲೆ ಮಂದಾರ ಪರ್ವತವನ್ನು ಏರಿಸಿಕೊಂಡು ಮಂಥನ ಮಾಡಲು ಸಹಾಯ ಮಾಡುತ್ತಾನೆ. ಈ ಮಂಥನದಿಂದಲೇ ಸಕಲ ಸೃಷ್ಟಿಯು ಆಯಿತು ಎಂದು ಪುರಾಣಗಳಲ್ಲಿ ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಸಕಲ ಸೃಷ್ಟಿಗೂ ಕಾರಣವಾದ ಮಂದಾರ ಪರ್ವತವನ್ನು ಎತ್ತಿ ಹಿಡಿದಂತೆ ಆಮೆಯು ದೀಪಸ್ತಂಭವನ್ನು ಎತ್ತಿ ಹಿಡಿದ ಹಾಗೆ ರಚಿಸಿರುವುದು ವಿಶೇಷವೇ ಆಗಿದೆ.

ದೀಪಸ್ತಂಭವು ಸೃಷ್ಟಿಯ ಸಂಕೇತವಾದ್ದರಿಂದ ಈ ರೀತಿಯಾಗಿ ಆಮೆಯ ಶಿಲ್ಪವಿರುವುದು ತೋರಿ ಬರುತ್ತದೆ. ಆಮೆಯ ಶಿಲ್ಪವು ದೃಢ ಮನಸ್ಸನ್ನು ಸಾಂಕೇತಿಸುತ್ತದೆ



ಚಿತ್ರ ೨೨೬-೧



ಚಿತ್ರ ೨೨೬-೨



ಚಿತ್ರ ೨೨೭-೧



ಚಿತ್ರ ೨೨೭-೨

ಎಂದೂ ವಿವರಣೆಗಳು ದೊರೆಯುತ್ತವೆ. ತುಳಸಿ ಕಟ್ಟೆಯನ್ನು ಸಹಾ ಆಮೆಯು ಬೆನ್ನ ಮೇಲೆ ಹೊತ್ತುಕೊಂಡಂತೆ ಶಿಲ್ಪವು ದೊರೆಯುತ್ತದೆ. ಕೊಡ್ಯಾಡ್ಕದ ಅನ್ನಪೂರ್ಣೇಶ್ವರಿ ದೇವಾಲಯದ ಆವರಣದಲ್ಲಿ ಇರುವ ಬೃಂದಾವನದಲ್ಲೂ ಈ ರೀತಿಯ ರಚನೆಯು ಇರುವುದು ಕಂಡು ಬರುತ್ತದೆ. ಕ್ಷೀರ ಸಾಗರದ ಮಂಥನದ ಸಮಯದಲ್ಲಿ ಲಕ್ಷ್ಮಿಯ ಸೃಷ್ಟಿಯಾಯಿತು ಎಂದು ಪುರಾಣಗಳಲ್ಲಿ ಹೇಳಲಾಗುತ್ತದೆ. ತುಳಸಿಯನ್ನು ವಿಷ್ಣುವಿನ ಪತ್ನಿಯಾದ ಲಕ್ಷ್ಮಿ ಎಂದೂ ಭಾವಿಸುತ್ತಾರೆ[೧೦]. ಆದ್ದರಿಂದಲೇ ಆಮೆಯ ಶಿಲ್ಪವು ಇಲ್ಲಿ ರಚಿಸಲ್ಪಟ್ಟಿದೆ. ಎಂದು ಹೇಳಬಹುದು.

ಕಮಲ:

ಕಮಲದ ಪೀಠವನ್ನು ಹಿಂದೂ ದೇವಾನುದೇವತೆಗಳ ಶಿಲ್ಪಗಳಲ್ಲಿ ಅಳವಡಿಸಿರುವುದನ್ನು ಕಾಣುತ್ತೇವೆ. **ಅಥರ್ವವೇದ**ದಲ್ಲಿ ಕಮಲವನ್ನು ಭೂಮಾತೆ ಎಂದು ವರ್ಣಿಸಲಾಗಿದೆ[೧೧]. ಬ್ರಹ್ಮನು ಸೃಷ್ಟಿಯ ಕಾಲದಲ್ಲಿ ನೀರಿನ ಮೇಲಿನ ಕಮಲ ಪುಷ್ಪದ ಮೇಲೆ ನಿಂತು ಸೃಷ್ಟಿಯ ಕಾರ್ಯವನ್ನು ನೆರವೇರಿಸಿದನು ಎಂದು **ತೈತಿರೀಯ** ಸಂಹಿತೆ ಹೇಳುತ್ತದೆ[೧೨]. ಪ್ರಜಾಪತಿಯು ಅಗ್ನಿಯನ್ನು ಸೃಷ್ಟಿಸಿದನು ಎಂದು ಹೇಳುವುದು ಪುರಾಣಗಳಲ್ಲಿ ಹೇಳಲಾಗಿದೆ. ಅಗ್ನಿಯು ಜಲದ ಮೇಲಿನ ಪುಷ್ಪ ಕಮಲದ ಮೇಲೆ ಜನಿಸಿದ ಎಂದು **ಶತಪಥ ಬ್ರಾಹ್ಮಣ** ಹೇಳುತ್ತದೆ[೧೩]. ಅಗ್ನಿಯು ಜಲದ ಮೇಲೆ ಸೃಷ್ಟಿಯಾದ್ದರಿಂದ ಕಮಲವನ್ನು ಅಗ್ನಿಯ ಸಂಕೇತವನ್ನಾಗಿ ಬಳಸಲಾಗುತ್ತದೆ. ಹಿಂದೂ ಧರ್ಮದಲ್ಲಿ ಜಗತ್ ಸೃಷ್ಟಿಗೆ ಕಾರಣನಾದ ಬ್ರಹ್ಮನು ಕಮಲದ ಮೇಲೆ ಕುಳಿತಿರುವನು ಎಂಬ ನಂಬಿಕೆ ಇರುವುದು ತಿಳಿದು ಬರುತ್ತದೆ.

ಹಿಂದೂ ಸಂಪ್ರದಾಯದಲ್ಲಿ ಕಮಲ ಪುಷ್ಪ ಎಂದರೆ ಕೇವಲ ಪುಷ್ಪ ಮಾತ್ರವಲ್ಲ ಅದು ಅಗ್ನಿಯನ್ನು, ಸೃಷ್ಟಿಯನ್ನು ಸಾಂಕೇತಿಸುತ್ತದೆ ಎಂದಾಗುತ್ತದೆ. **ಮೈತ್ರಯಣಿ** ಸಂಹೀತ ಹಾಗೂ **ಪಂಚವಿಂಶ ಬ್ರಾಹ್ಮಣ**ದಲ್ಲಿ ಕಮಲದ ಉಗಮ ಕುರಿತಂತೆ ಬೇರೆ ಬೇರೆ ದಂತಕತೆಗಳು ದೊರೆಯುತ್ತವೆ[೧೪]. ಸರಸ್ವತಿ ದೇವಿ, ಲಕ್ಷ್ಮೀ ದೇವಿಯರು ಕಮಲದೊಂದಿಗೆ ಇರುವುದನ್ನು ಹಿಂದೂ ಸಂಪ್ರದಾಯದ ಶಿಲ್ಪ, ಚಿತ್ರಗಳಲ್ಲಿ ಕಾಣುತ್ತೇವೆ. ಶಕ್ತಿಯ ಸಂಕೇತವನ್ನಾಗಿಯೂ

---

೧೦. ಎನ್. ಶ್ರೀನಿವಾಸ್ ಉಡುಪಿ: ಲೇಖನ– ಜಾಗತಿಕ ಧರ್ಮದ ಮುಖ್ಯ ಸಂಕೇತಗಳು, **ಧರ್ಮ, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ,** ಮೂಲ ಲೇಖಕರು: ಡಾ. ಥಾಮಸ್ ಮಾಣಿಕ್ಯಂ, ಪುಟ–೪೭೭

೧೧. ಡಾ. ಸಂತನು ಬಸು: ಲೇಖನ– **ಭಾರತೀಯ ಸಾಹಿತ್ಯ ಮತ್ತು ಶಿಲ್ಪಕಲೆಯಲ್ಲಿ ಕಮಲ,** ಮಲ್ಲಾರ ಮಾಸಪತ್ರಿಕೆ, ಅಕ್ಟೋಬರ್ ೨೦೦೨, ಪುಟ– ೩

೧೨. ಡಾ. ಸಂತನು ಬಸು: ಲೇಖನ– **ಭಾರತೀಯ ಸಾಹಿತ್ಯ ಮತ್ತು ಶಿಲ್ಪಕಲೆಯಲ್ಲಿ ಕಮಲ,** ಮಲ್ಲಾರ ಮಾಸಪತ್ರಿಕೆ, ಅಕ್ಟೋಬರ್ ೨೦೦೨, ಪುಟ– ೪

೧೩. ಡಾ. ಸಂತನು ಬಸು: ಲೇಖನ– **ಭಾರತೀಯ ಸಾಹಿತ್ಯ ಮತ್ತು ಶಿಲ್ಪಕಲೆಯಲ್ಲಿ ಕಮಲ,** ಮಲ್ಲಾರ ಮಾಸಪತ್ರಿಕೆ, ಅಕ್ಟೋಬರ್ ೨೦೦೨, ಪುಟ– ೪

೧೪. ಡಾ. ಸಂತನು ಬಸು: ಲೇಖನ– **ಭಾರತೀಯ ಸಾಹಿತ್ಯ ಮತ್ತು ಶಿಲ್ಪಕಲೆಯಲ್ಲಿ ಕಮಲ,** ಮಲ್ಲಾರ ಮಾಸಪತ್ರಿಕೆ, ಅಕ್ಟೋಬರ್ ೨೦೦೨, ಪುಟ– ೩



ಚಿತ್ರ ೨೨೮-೧




ಚಿತ್ರ ೨೨೮-೨



ಚಿತ್ರ ೨೨೮-೩



ಚಿತ್ರ ೨೨೯



ಚಿತ್ರ ೨೩೦

ಕಮಲವನ್ನು ಬಳಸುವುದು ವೇದಕಾಲೀನ ಆರಂಭದಲ್ಲಿ ಕಂಡು ಬರುವುದು[೧೫]. ಸುಖ, ಸಂತೋಷ, ಸೌಂದರ್ಯಗಳ ಪ್ರತೀಕ ಕಮಲ[೧೬] ಎಂದು ವೇದ ಕಾಲದಲ್ಲಿ ಭಾವಿಸಲಾಗಿತ್ತು.

ಕಮಲವು ವಿಶ್ವದ ಸೃಷ್ಟಿಗೆ ಕಾರಣ ಎಂದು ಪ್ರಾಚೀನ ಕಾಲದಿಂದಲೂ ನಂಬಿಕೆ ಇರುವುದು ತಿಳಿದು ಬರುತ್ತದೆ. ಕಮಲವನ್ನು ಚರಾಚರಗಳ ಯೋನಿ ಎಂದು ಗುರುತಿಸುವುದುಂಟು[೧೭]. ಅಂದರೆ ಕಮಲವು ಸೃಷ್ಟಿಯ ಸಂಕೇತ ಎಂದು ಹೇಳುವುದಾಗಿದೆ. ಸೃಷ್ಟಿಕರ್ತನಾದ ಬ್ರಹ್ಮನೇ ಕಮಲದಲ್ಲಿ ಉದಯಿಸಿದ ಎಂದು ಪುರಾಣಗಳಲ್ಲಿ ಹೇಳಲಾಗುತ್ತದೆ. ಕಮಲದಲ್ಲಿ ಅಲೌಕಿಕವಾದ ದೈವೀ ಶಕ್ತಿ ಇದೆ ಎಂದು ಅದನ್ನು ಸಾಂಕೇತಿಕವಾಗಿ ಶಿಲ್ಪಗಳಲ್ಲಿ ಬಳಸಲಾಗುತ್ತದೆ. ಕಮಲವು ಸುಭಿಕ್ಷದ ಸಂಕೇತ; ದೈವತ್ವದ ಸತ್ಯ-ಧರ್ಮಗಳ ಸಂಕೇತವೂ ಸಹ ಆಗಿದೆ[೧೮] ಎಂದೂ ಕೆಲವು ವಿವರಣೆಗಳು ದೊರೆಯುತ್ತವೆ. ಕಮಲವು ಸೃಷ್ಟಿಯ ಮೂಲ ಎಂದೂ ಚರಾಚರಗಳ ಯೋನಿ ಎಂದೂ ಗುರುತಿಸುವ ಜೊತೆಗೆ ನಿರ್ಮಲತೆಯ ಸಂಕೇತವನ್ನು ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ಹೊಂದಿದೆ ಎಂದು ಹೇಳಲಾಗುತ್ತದೆ.

ಹಂಸ:

ದೀಪಸ್ತಂಭಗಳಲ್ಲಿ ಹಂಸದ ಉಬ್ಬುಶಿಲ್ಪಗಳು ಇರುವುದನ್ನು ಕಾಣುತ್ತೇವೆ. ಪುರಾಣಗಳ ಪ್ರಕಾರ ಹಂಸವು ಬ್ರಹ್ಮನ್ನು ಪ್ರತಿನಿಧಿಸುತ್ತದೆ. ಪುರಾಣದಲ್ಲಿ ಹೇಳಿರುವಂತೆ ಬ್ರಹ್ಮ ವಿಷ್ಣುವಿನ ನಡುವೆ ಪರಮಾತ್ಮನು ಮಹಾ ಅಗ್ನಿಸ್ತಂಭದಂತೆ ನಿಂತಾಗ ಬ್ರಹ್ಮನು ಅಗ್ನಿಸ್ತಂಭದ ತುದಿಯನ್ನು ನೋಡಲು ಹಂಸ ರೂಪವನ್ನು ತಾಳಿದ್ದನು ಆದ್ದರಿಂದ ಹಂಸವು ಬ್ರಹ್ಮನನ್ನು ಪ್ರತಿನಿಧಿಸುತ್ತದೆ. ಹಂಸವು ಊರ್ಧ್ವ ಗತಿಯನ್ನು ಹೊಂದಿದೆ ಹಾಗೂ ಜ್ಞಾನ ಮತ್ತು ಅಜ್ಞಾನಗಳ ತತ್ವವನ್ನು ಅರಿಯುತ್ತದೆ. ಹಂಸವು ಉತ್ತಮವಾದ ಪಕ್ಷಿಯೂ ಆಗಿದೆ. ಆದುದರಿಂದ ತಾನು ಹಂಸ ರೂಪವನ್ನು ತಾಳಿದುದಾಗಿ ಬ್ರಹ್ಮನು ಹೇಳುತ್ತಾನೆ[೧೯] ಎಂದು ಪುರಾಣಗಳು ತಿಳಿಸುತ್ತವೆ.

ಹಂಸ ಎಂಬ ಪದವನ್ನು ಹಿಂದುಮುಂದು ಮಾಡಿ ಸ ಕಾರ ಹ ಕಾರವನ್ನು ತೆಗೆದುಬಿಟ್ಟರೆ ಉಳಿಯುವ **ಓಂ** ಎಂಬ ಶಬ್ದವು ಪ್ರಣವ ಮಂತ್ರ ಎಂದು ಹೇಳಲಾಗುತ್ತದೆ. ಹಂಸ ಎಂಬ ಪದವನ್ನು ಹಿಂದುಮುಂದು ಮಾಡಿದರೆ **ಸೋಹಂ** ಎಂಬ ಪದವು

---

೧೫. ಡಾ. ಸಂತನು ಬಸು: ಲೇಖನ- **ಭಾರತೀಯ ಸಾಹಿತ್ಯ ಮತ್ತು ಶಿಲ್ಪಕಲೆಯಲ್ಲಿ ಕಮಲ**, ಮಲ್ಲಾರ ಮಾಸಪತ್ರಿಕೆ, ಅಕ್ಟೋಬರ್ ೨೦೦೨, ಪುಟ- ೪

೧೬. ಡಾ. ಸಂತನು ಬಸು: ಲೇಖನ- **ಭಾರತೀಯ ಸಾಹಿತ್ಯ ಮತ್ತು ಶಿಲ್ಪಕಲೆಯಲ್ಲಿ ಕಮಲ**, ಮಲ್ಲಾರ ಮಾಸಪತ್ರಿಕೆ, ಅಕ್ಟೋಬರ್ ೨೦೦೨, ಪುಟ- ೪

೧೭. ಡಾ. ವಿಠಲರಾವ್ ಗಾಯಕ್ವಾಡ್: **ಲಜ್ಜಾ ಗೌರಿ**, ಪುಟ- ೧೨

೧೮. ಡಾ. ಸಂತನು ಬಸು: ಲೇಖನ- **ಭಾರತೀಯ ಸಾಹಿತ್ಯ ಮತ್ತು ಶಿಲ್ಪಕಲೆಯಲ್ಲಿ ಕಮಲ**, ಮಲ್ಲಾರ ಮಾಸಪತ್ರಿಕೆ, ಅಕ್ಟೋಬರ್ ೨೦೦೨, ಪುಟ- ೫

೧೯. ಹಾಸನದ ಪಂಡಿತ್ ವೆಂಕಟ್ ರಾವ್: ಶ್ರೀ ವ್ಯಾಸ ಮಹರ್ಷಿ ಪ್ರಣೀತಂ- **ಶಿವ ಮಹಾಪುರಾಣಂ**, ಭಾಗ-೨, ಪುಟ- ೧೯೪



ಚಿತ್ರ ೨೩೧-೧



ಚಿತ್ರ ೨೩೧-೨



ಚಿತ್ರ ೨೩೧-೩



ಚಿತ್ರ ೨೩೧-೪

ದೊರೆಯುತ್ತದೆ. ಇದರಲ್ಲಿ ಇರುವ **ಸ** ಕಾರದ ಅರ್ಥವು ಶಿವನಾಗಿರುವನು, **ಅಹಂ** ಎಂಬ ಶಬ್ದವು ಮನುಷ್ಯನ ಜೀವ ಎಂದೂ ಈ ಎರಡೂ ಶಬ್ದಗಳ ಸಂಯೋಗವು ಜೀವ ಮತ್ತು ಪರಮಾತ್ಮರ ಐಕ್ಯವನ್ನು ಭೋಧಿಸುವುದು[೨೦] ಎಂದಾಗುತ್ತದೆ.

ಶಿವಲಿಂಗ:

ಹಿಂದೂ ಧರ್ಮದಲ್ಲಿರುವ ಶೈವ ಪಂಥದವರು ಶಿವನನ್ನು ಸಾಂಕೇತಿಕವಾಗಿ ಲಿಂಗದಂತೆ ಪೂಜಿಸುತ್ತಾರೆ. ಶಿವಲಿಂಗವು ಸೃಷ್ಟಿ, ಕ್ರಿಯೆ, ಜ್ಞಾನದ ಸಂಕೇತವಾಗಿದೆ ಎಂದು ನಂಬುತ್ತಾರೆ. ಈ ಶಿವಲಿಂಗದ ಉಬ್ಬುಶಿಲ್ಪಗಳನ್ನು ದೀಪಸ್ತಂಭದ ಮೇಲೆ ಇರುವುದನ್ನು ನೋಡುತ್ತೇವೆ. ಈ ಉಬ್ಬುಶಿಲ್ಪಗಳು ಶೈವ ಧರ್ಮದ ದೇವಾಲಯದ ಆವರಣದಲ್ಲಿ ಇರುವ ದೀಪಸ್ತಂಭಗಳಲ್ಲಿ ಹೆಚ್ಚಾಗಿ ದೊರೆಯುತ್ತದೆ. ದೀಪಸ್ತಂಭವೇ ಸೃಷ್ಟಿಗೆ ಕಾರಣವಾದ ಶಿವಲಿಂಗದ ಪ್ರತೀಕವಾಗಿದೆ ಎನ್ನಬಹುದು.

ನಂದಿಯ ಶಿಲ್ಪ:

ಶೈವ ಧರ್ಮದ ದೇವಾಲಯಗಳ ಆವರಣದಲ್ಲಿ ನಂದಿಯ ಕಂಬವು ಇರುವುದನ್ನು ನೋಡಬಹುದು. ನಂದಿಯು ಶಿವ ವಾಹನವಾದ್ದರಿಂದ ದೀಪಸ್ತಂಭಗಳಲ್ಲಿ ನಂದಿಯ ಉಬ್ಬುಶಿಲ್ಪವನ್ನು ರಚಿಸಿರುತ್ತಾರೆ. ಈ ನಂದಿ ಶಿಲ್ಪವು ದೇವಾಲಯದ ದೇವಮೂರ್ತಿಗೆ ಅಭಿಮುಖವಾಗಿರುವ ದಿಕ್ಕಿನಲ್ಲಿ ರಚಿಸಲಾಗಿರುತ್ತದೆ. ನಂದಿಯು ಗಾಂಭೀರ್ಯವನ್ನು ಸೂಚಿಸುತ್ತದೆ ಎಂದು ಹೇಳಲಾಗುತ್ತದೆ.

ತ್ರಿಶೂಲಾ:

ಇದನ್ನು ಕೂಡಾ ಸೂರ್ಯನ ತೇಜಸ್ಸಿನ ಒಂದು ಅಂಶದಿಂದ ತಯಾರಾದುದು ಎಂದು ಪುರಾಣಗಳಲ್ಲಿ ಹೇಳಿಕೆಯು ದೊರೆಯುತ್ತದೆ[೨೧]. ಇದು ಶಿವನ ಆಯುಧವಾಗಿದೆ. ತ್ರಿಶೂಲವು ಮೂರು ಶೂಲಗಳನ್ನು ಹೊಂದಿರುವ ಆಯುಧವಾಗಿದೆ. ಶೈವ ಧರ್ಮದ ದೇವಾಲಯಗಳ ದೀಪಸ್ತಂಭಗಳಲ್ಲಿ ತ್ರಿಶೂಲದ ಉಬ್ಬುಶಿಲ್ಪಗಳು ದೊರೆಯುತ್ತವೆ. ಇದು ದುಷ್ಟತನದ ಸಂಹಾರದ ಪ್ರತೀಕವಾಗಿದೆ.

ವೀರಭದ್ರನ ಶಿಲ್ಪ:

ದೇವಾಲಯದ ದೀಪಸ್ತಂಭಗಳಲ್ಲಿ ವೀರಭದ್ರನ ಶಿಲ್ಪಗಳು ಇರುವುದು ಕಾಣುತ್ತದೆ. ಈ ರೀತಿಯ ಶಿಲ್ಪಗಳು ಶೈವ ಧರ್ಮದ ದೇವಾಲಯದ ದೀಪಸ್ತಂಭಗಳಲ್ಲಿ ಹೆಚ್ಚಾಗಿ ದೊರೆಯುತ್ತದೆ. ಈ ಶಿಲ್ಪಗಳಲ್ಲಿ ವೀರಭದ್ರನು ಸಕಲ ಆಯುಧಗಳನ್ನು ಹೊಂದಿರುವುದರ ಜೊತೆಗೆ ಉಗ್ರ ರೂಪವನ್ನು ತಾಳಿರುವಂತೆ ಶಿಲ್ಪದ ರಚನೆಯನ್ನು ಮಾಡಿರುತ್ತಾರೆ.

---

೨೦. ಹಾಸನದ ಪಂಡಿತ್ ವೆಂಕಟ್ ರಾವ್:
 ಶ್ರೀ ವ್ಯಾಸ ಮಹರ್ಷಿ ಪ್ರಣೀತಂ- **ಶಿವ ಮಹಾಪುರಾಣಂ**, ಭಾಗ-೧೦, ಪುಟ- ೨೦೧
೨೧. ಬೆನಗಲ್ ರಾಮರಾವ್, ಪಾನ್ಯಂ ಸುಂದರ ಶಾಸ್ತ್ರಿ: **ಪುರಾಣನಾಮ ಚೂಡಾಮಣಿ**, ಪುಟ-೨೧೩



ಚಿತ್ರ ೨೩೨



ಚಿತ್ರ ೨೩೩



ಚಿತ್ರ ೨೩೪

ಗಣಪತಿಯ ಶಿಲ್ಪ:

ಗಣಪತಿಯ ಶಿಲ್ಪವನ್ನು ಹೆಚ್ಚಾಗಿ ಶೈವ ದೇವಾಲಯದ ದೀಪಸ್ತಂಭಗಳಲ್ಲಿ ರಚಿಸಲಾಗಿರುತ್ತದೆ. ಗಣಪತಿಯು ವಿಘ್ನ ನಿವಾರಕನೆಂದೂ, ವಿಧ್ಯಾದೇವತೆ ಎಂದೂ ಪರಿಗಣಿಸಲಾಗುತ್ತದೆ. ಭಾರತೀಯ ಸಂಪ್ರದಾಯದಲ್ಲಿ ಮೊದಲಿಗೆ ಗಣಪತಿಯನ್ನು ಪ್ರಾರ್ಥಿಸಿ ನಂತರ ಯಾವುದೇ ಕಾರ್ಯವನ್ನು ಪ್ರಾರಂಭಿಸುವುದು ವಾಡಿಕೆ. ಆದ್ದರಿಂದ ವೈಷ್ಣವ ದೇವಾಲಯದಲ್ಲೂ ಕೆಲವು ಕಡೆ ಗಣಪತಿಯ ಪೂಜೆ ಇರುವುದನ್ನು ಕಾಣುತ್ತೇವೆ. ಕೆಲವು ವೈಷ್ಣವ ದೇವಾಲಯದ ಆವರಣದ ದೀಪಸ್ತಂಭಗಳಲ್ಲೂ ಗಣಪತಿಯ ಉಬ್ಬುಶಿಲ್ಪವನ್ನು ಕೆತ್ತಲಾಗಿರುತ್ತದೆ.

ಗರುಡ:


ಪಕ್ಷಿರಾಜ, ಇದು ವಿಷ್ಣುವಿನ ವಾಹನ. ಗರುಡನ ಶಿಲ್ಪಗಳು ವೈಷ್ಣವ ಧರ್ಮದ ದೇವಾಲಯಗಳ ಆವರಣದಲ್ಲಿ ದೊರೆಯುತ್ತದೆ. ಗರುಡನನ್ನು ದೇವಾಲಯದ ದೇವಮೂರ್ತಿಗೆ ಎದುರಿಗೆ ಇರುವ ಸ್ತಂಭದಲ್ಲಿ, ದೇವಮೂರ್ತಿಗೆ ಅಭಿಮುಖವಾಗಿ ಸ್ಥಾಪಿಸಲಾಗಿರುತ್ತದೆ. ಕೆಲವು ದೇವಾಲಯಗಳ ಅವರಣದಲ್ಲಿ ಗರುಡನಿಗಾಗಿಯೇ ವಿಶೇಷವಾದ ಸ್ತಂಭಗಳನ್ನು ಸ್ಥಾಪಿಸಿರುತ್ತಾರೆ. ಇವನ್ನು ಗರುಡಗಂಬ ಎಂದೂ ಕರೆಯುತ್ತಾರೆ. ಗರುಡಗಂಬಗಳು ಇಲ್ಲದಿದ್ದ ಪಕ್ಷದಲ್ಲಿ ದೇವಾಲಯದಮೂಲಮೂರ್ತಿಗೆ ಎದುರಾಗಿ ಗರುಡನ ಶಿಲ್ಪಗಳನ್ನು ಸ್ಥಾಪಿಸಲಾಗಿರುತ್ತದೆ.

ಕೆಲವು ದೇವಾಲಯಗಳಲ್ಲಿ ದೇವಾಲಯದ ಎದುರಿಗೆ ಸ್ತಂಭಗಳಲ್ಲಿ ಗರುಡನನ್ನು ಚಿತ್ರಿಸದೆ, ವಿಶೇಷವಾಗಿ ಗರುಡನ ಮೂರ್ತಿಶಿಲ್ಪವನ್ನು ಇರಿಸಿರುವುದನ್ನು ಕಾಣಬಹುದು. ಹಾಸನ ಜಿಲ್ಲೆಯ ಬೇಲೂರಿನ ಶ್ರೀ ಚೆನ್ನಕೇಶವ ದೇವಾಲಯದ ಆವರಣದಲ್ಲಿ ಇರುವ ಗರುಡನ ಶಿಲ್ಪವು ಇದಕ್ಕೆ ಉತ್ತಮ ನಿದರ್ಶನವಾಗಿದೆ. ದೇವಾಲಯದ ದೀಪಸ್ತಂಭಗಳಲ್ಲಿ ಗರುಡನ ಉಬ್ಬುಶಿಲ್ಪಗಳು ಇರುವುದನ್ನು ಕಾಣುತ್ತೇವೆ. ಗರುಡನ ಶಿಲ್ಪದಲ್ಲಿ ಮನುಷ್ಯ ದೇಹವನ್ನು ಹೊತ್ತಿರುವಂತ ಗರುಡನು ರೆಕ್ಕೆಗಳನ್ನು ಹೊಂದಿರುತ್ತಾನೆ. ಇವನ ಮೂಗು ಗರುಡನ ಕೊಕ್ಕಿನ ಆಕಾರವನ್ನು ಹೊಂದಿರುವಂತೆ ಶಿಲ್ಪ ರಚನೆಯನ್ನು ಮಾಡಲಾಗಿರುತ್ತದೆ.


ಗರುಡನ ಶಿಲ್ಪವು ಹೆಚ್ಚಾಗಿ ದೇವಾಲಯದ ದೇವಮೂರ್ತಿಗೆ ಅಭಿಮುಖ ಇರುವುದಲ್ಲದೆ. ಎರಡೂ ಕೈಮುಗಿದು ವಿಧೇಯನಾಗಿ ನಮಸ್ಕರಿಸುತ್ತಿರುವಂತೆ ಶಿಲ್ಪದ ರಚನೆಯು ಇರುವುದನ್ನು ನೋಡಬಹುದು. ಕೆಲವು ದೀಪಸ್ತಂಭಗಳಲ್ಲಿ ದೇವಾಲಯದ ಮೂರ್ತಿಗೆ ಅಭಿಮುಖವಾಗಿರದ ಗರುಡನ ಶಿಲ್ಪವು ದೇವಾಲಯದ ಮೂರ್ತಿಯ ಕಡೆ ಮುಖಮಾಡಿ ನಮಸ್ಕರಿಸುತ್ತಿರುವಂತೆ ಚಿತ್ರಿಸಲಾಗಿರುತ್ತದೆ. ಗರುಡನ ಶಿಲ್ಪವು ಕುಳಿತಿರುವಂತೆ ಇಲ್ಲವೆ ನಿಂತಿರುವಂತೆ ಶಿಲ್ಪವನ್ನು ಚಿತ್ರಿಸಲಾಗಿರುತ್ತದೆ. ಗರುಡನು ಕುಳಿತುಕೊಳ್ಳುವ ಭಂಗಿಯನ್ನು ಗರುಡಾಸನ ಎನ್ನಲಾಗುತ್ತದೆ.



ಚಿತ್ರ ೨೩೫-೧



ಚಿತ್ರ ೨೩೫-೨



ಚಿತ್ರ ೨೩೬-೧



ಚಿತ್ರ ೨೩೬-೨

ಹನುಮಂತನ ಶಿಲ್ಪ:

ಹನುಮಂತನು ಶ್ರೀ ರಾಮನ ಪರಮ ಭಕ್ತನಾದ್ದರಿಂದ ಹನುಮಂತನ ಶಿಲ್ಪಗಳನ್ನು ವೈಷ್ಣವ ಧರ್ಮದ ದೇವಾಲಯಗಳಲ್ಲಿ ಸ್ಥಾಪಿಸಿರುತ್ತಾರೆ. ದೇವಾಲಯದ ದೀಪಸ್ತಂಭಗಳಲ್ಲಿ ಅದರಲ್ಲೂ ವೈಷ್ಣವ ದೇವಾಲಯಗಳ ದೀಪಸ್ತಂಭಗಳಲ್ಲಿ ಹನುಮಂತನ ಉಬ್ಬುಶಿಲ್ಪಗಳು ಇರುವುದನ್ನು ನೋಡಬಹುದು. ದೀಪಸ್ತಂಭಗಳಲ್ಲಿ ಗರುಡನು ದೇವಾಲಯದ ದೇವ ಮೂರ್ತಿಗೆ ಅಭಿಮುಖವಾಗಿದ್ದರೆ ಇದರ ವಿರುದ್ಧದ ಸ್ಥಾನದಲ್ಲಿ ಹನುಮಂತನ ಶಿಲ್ಪವು ಇರುವುದು ಕಾಣುತ್ತದೆ. ಇಲ್ಲಿರುವ ಶಿಲ್ಪದಲ್ಲಿ ಹನುಮಂತನು ಒಂದು ಕೈಯಲ್ಲಿ ಗಧೆಯನ್ನು ಮತ್ತೊಂದು ಕೈಯಲ್ಲಿ ಅಭಯ ಹಸ್ತವನ್ನು ಹೊಂದಿರುತ್ತಾನೆ.

ದೀಪಸ್ತಂಭದ ಅಕ್ಕಪಕ್ಕದಲ್ಲಿ ಹನುಮಂತನ ಶಿಲ್ಪವಿದ್ದರೆ ಅಂತಹ ಶಿಲ್ಪಗಳಲ್ಲಿ ಹನುಮಂತನು ದೇವಮೂರ್ತಿಯ ಕಡೆಗೆ ಮುಖಮಾಡಿ ಕೈ ಜೋಡಿಸಿ ನಮಸ್ಕರಿಸುತ್ತಿರುವಂತೆ ಶಿಲ್ಪರಚನೆಯನ್ನು ಮಾಡಲಾಗಿರುತ್ತದೆ. ಹನುಮಂತನ ಗುಡಿಯ ಎದುರು ಇರುವ ದೀಪಸ್ತಂಭಗಳಲ್ಲಿ ಇರುವ ದೀಪಸ್ತಂಭದಲ್ಲಿ ದೇವಮೂರ್ತಿಗೆ ಅಭಿಮುಖವಾಗಿ ಹನುಮಂತನ ಶಿಲ್ಪಗಳಿರುತ್ತವೆ. ಈ ಶಿಲ್ಪಗಳಲ್ಲಿ ಇರುವ ಹನುಮಂತನು ಒಂದು ಕೈಯಲ್ಲಿ ಗಧೆಯನ್ನು ಮತ್ತೊಂದು ಕೈಯಲ್ಲಿ ಅಭಯ ಹಸ್ತವನ್ನು ಹೊಂದಿರುತ್ತಾನೆ.

ಊರ್ಧ್ವ ಪುಂಡ್ರ:

ಹಣೆಯ ಮೇಲೆ ಊರ್ಧ್ವ ಮುಖವಾಗಿ ಇರುವ ಪವಿತ್ರವಾದ ಚಿಹ್ನೆಯನ್ನು ನಾಮ ಎನ್ನುತ್ತಾರೆ. ಊರ್ಧ್ವ ಪುಂಡ್ರವು ಮೂರು ನಾಮಗಳನ್ನು ಹೊಂದಿರುತ್ತದೆ. ಈ ಚಿಹ್ನೆಯನ್ನು ಮುಖ್ಯವಾಗಿ ವೈಷ್ಣವ ಧರ್ಮದವರು ಬಳಸುತ್ತಾರೆ. ಈ ನಾಮದ ಅಕ್ಕ ಪಕ್ಕದಲ್ಲಿ ಶಂಖ ಚಕ್ರಗಳು ಇರುತ್ತವೆ. ವಿಷ್ಣುವಿನ ಮೂರ್ತಿಶಿಲ್ಪದ ಹಣೆಯ ಮೇಲೆಯೂ ಈ ಚಿಹ್ನೆ ಇರುವುದನ್ನು ನೋಡಬಹುದು. ವೈಷ್ಣವ ಧರ್ಮದ ದೀಪಸ್ತಂಭಗಳಲ್ಲಿ ಈ ಚಿಹ್ನೆಯ ಉಬ್ಬುಶಿಲ್ಪವನ್ನು ಕಾಣುತ್ತೇವೆ. ಕೆಲವು ದೀಪಸ್ತಂಭಗಳಲ್ಲಿ ಒಂದು ದಿಕ್ಕಿನಲ್ಲಿ ಊರ್ಧ್ವ ಪುಂಡ್ರ ಮಾತ್ರ ಇದ್ದು ದೀಪಸ್ತಂಭದ ಉಳಿದ ಕಡೆಯಲ್ಲಿ ಒಂದು ಕಡೆ ಶಂಖದ ಉಬ್ಬುಶಿಲ್ಪ ಮತ್ತೊಂದು ಕಡೆ ಚಕ್ರದ ಉಬ್ಬುಶಿಲ್ಪ ಇರುವುದನ್ನು ನೋಡಬಹುದು.

ಶಂಖ, ಚಕ್ರ:

ಶಂಖ ಮತ್ತು ಚಕ್ರಗಳು ವಿಷ್ಣವಿನ ಆಯುಧಗಳು. ಈ ಚಕ್ರವನ್ನು ಪುರಾಣಗಳಲ್ಲಿ ಸೂರ್ಯನ ತೇಜಸ್ಸಿನ ಒಂದು ಅಂಶದಿಂದ ತಯಾರಾದುದು ಎನ್ನಲಾಗುತ್ತದೆ[೨೨]. ಚಕ್ರವು ಪ್ರಕೃತಿಯನ್ನು ಮತ್ತು ಜ್ಞಾನವನ್ನು ಪ್ರತಿನಿಧಿಸುವುದಾಗಿದೆ. ಚಕ್ರಕ್ಕೆ ಅಜ್ಞಾನವನ್ನು, ಕೆಟ್ಟತನವನ್ನು ಹೊಡೆದೋಡಿಸಿ ತನ್ನ ಒಡೆಯನ ಬಳಿ ಹಿಂದಿರುಗುವ ಶಕ್ತಿ ಇದೆ[೨೩] ಎಂದು ನಂಬಲಾಗುತ್ತದೆ.

೨೨. ಬೆನಗಲ್ ರಾಮರಾವ್, ಪಾನ್ಯಂ ಸುಂದರ ಶಾಸ್ತ್ರಿ: **ಪುರಾಣನಾಮ ಚೂಡಾಮಣಿ**, ಪುಟ-೨೧೩

೨೩. Choodamani Nandagopal, Vatsla Iyengar:
Temple Treasures, Volume-II, Temple jewellery, ಪುಟ- ೫೨



ಚಿತ್ರ ೨೩೭-೧



ಚಿತ್ರ ೨೩೭-೨



ಚಿತ್ರ ೨೩೭-೩



ಚಿತ್ರ ೨೩೮

ವಿಷ್ಣು ಹಿಡಿದಿರುವ ಚಕ್ರದ ಹೆಸರು ಸುದರ್ಶನ ಚಕ್ರ. ಈ ಚಕ್ರವನ್ನು ಶಿವನು ವಿಷ್ಣುವಿನ ಪೂಜೆಗೆ ಮೆಚ್ಚಿ ಕೊಟ್ಟನು[೨೪] ಎಂದು ಪುರಾಣವು ಹೇಳುತ್ತದೆ. ಅಂದು ಕಾರ್ತಿಕ ಶುಕ್ಲ ೧೪, ವೈಕುಂಠ ಚತುರ್ದಶಿ ಎಂದೂ ಈ ದಿನ ವಿಶೇಷ ಪೂಜೆಯು ಇರುತ್ತದೆ. ದೇವಾಲಯಗಳಲ್ಲಿ ಈ ದಿನ ವಿಷ್ಣು ಪೂಜೆ ಮತ್ತು ಇದರ ಮರುದಿನ ಶಿವನ ಪೂಜೆಯು ವಿಜೃಂಭಣೆಯಿಂದ ಜರುಗುತ್ತದೆ. ಶ್ರೀ ಕೃಷ್ಣನ ಶಂಖದ ಹೆಸರು ಪಾಂಚಜನ್ಯ[೨೫]. ಶಂಖವು ಪುರುಷನ್ನು ಪ್ರತಿನಿಧಿಸುತ್ತದೆ[೨೬]. ಇದರ ನಾದವು ಅಜ್ಞಾನವನ್ನು ಹೊಡೆದೋಡಿಸುತ್ತದೆ ಎಂದು ಪುರಾಣಗಳಲ್ಲಿ ತಿಳಿಸಲಾಗಿದೆ.

ಶಿಲ್ಪ, ಚಿತ್ರಗಳಲ್ಲಿ ಶಂಖ ಚಕ್ರಗಳೆರಡನ್ನೂ ವಿಷ್ಣುವು ತನ್ನ ಎರಡು ಕೈಗಳಲ್ಲಿ ಹಿಡಿದಿರುವುದನ್ನು ನೋಡಬಹುದು. ಈ ಎರಡೂ ಅಜ್ಞಾನವನ್ನು ತೊಲಗಿಸಿ ಜ್ಞಾನವನ್ನು ಮೂಡಿಸುವ ಉದ್ದೇಶವನ್ನು ಹೊಂದಿವೆ. ಶಿಲ್ಪ ಚಿತ್ರಗಳಲ್ಲಿ ಶಂಖ ಚಕ್ರಗಳು ಮೂರು ನಾಮದ ಅಕ್ಕಪಕ್ಕದಲ್ಲಿ ಚಿತ್ರಿಸಲ್ಪಟ್ಟಿರುತ್ತದೆ. ಕೇವಲ ಶಂಖ ಚಕ್ರಗಳಿದ್ದರೆ ಅವನ್ನು ಬಿಡಿ ಬಿಡಿಯಾಗಿ ಚಿತ್ರಿಸಲಾಗಿರುತ್ತದೆ. ದೀಪಸ್ತಂಭಗಳಲ್ಲೂ ಶಂಖ ಮತ್ತು ಚಕ್ರಗಳ ಉಬ್ಬುಶಿಲ್ಪಗಳು ಇರುವುದನ್ನು ಕಾಣುತ್ತೇವೆ.

ಆನೆಯ ಶಿಲ್ಪ:

ದೀಪಸ್ತಂಭಗಳಲ್ಲಿ ಆನೆಯ ಶಿಲ್ಪಗಳು ಇರುವುದು ಕಾಣುತ್ತದೆ. ಈ ಶಿಲ್ಪಗಳಲ್ಲಿ ಆನೆಯು ಮಾಹುತನ ಜೊತೆಗೆ ಇರುವಂತೆ ರಚನೆಯನ್ನು ಮಾಡಲಾಗಿರುತ್ತದೆ. ಕೆಲವು ದೀಪಸ್ತಂಭಗಳ ಪೀಠಗಳಲ್ಲಿ ಇಲ್ಲವೇ ದಂಡದ ಭಾಗದಲ್ಲಿ ಈ ಶಿಲ್ಪವು ಉಬ್ಬುಶಿಲ್ಪದಂತೆ ಇದ್ದರೆ ಇನ್ನು ಕೆಲವು ದೀಪಸ್ತಂಭಗಳಲ್ಲಿ ದೀಪಸ್ತಂಭವನ್ನು ತನ್ನ ಬೆನ್ನ ಮೇಲೆ ಹೊತ್ತುಕೊಂಡಂತೆ ಶಿಲ್ಪದ ರಚನೆಯನ್ನು ಮಾಡಲಾಗಿರುತ್ತದೆ. ಆನೆಯು ಬಲದ (ಶಕ್ತಿಯ)ಸಂಕೇತವಾಗಿದೆ. ಆನೆಯು ಗಜಲಕ್ಷ್ಮಿಯ ವಾಹನವೂ ಆಗಿರುವುದು ದೀಪಸ್ತಂಭಗಳಲ್ಲಿ ಬಳಸುವುದಕ್ಕೆ ಮತ್ತೊಂದು ಕಾರಣವಿರಬೇಕು.

೨. ಕಾಲ್ಪನಿಕ ಶಿಲ್ಪಗಳು

ದೇವಾಲಯದ ಆವರಣದಲ್ಲಿ ಇರುವ ದೀಪಸ್ತಂಭಗಳ ಮೇಲೆ ರಚಿಸಲ್ಪಟ್ಟಿರುವ ಉಬ್ಬುಶಿಲ್ಪಗಳು ಕಲ್ಪನೆಯ ಆಧಾರದ ಮೇಲೆ ನಿರ್ಮಾಣಗೊಂಡಿರುವುದು ತಿಳಿದು ಬರುತ್ತದೆ. ಈ ರೀತಿಯ ಉಬ್ಬುಶಿಲ್ಪಗಳು ಧಾರ್ಮಿಕವಾದ ಹಿನ್ನೆಲೆಯನ್ನು ಹೊಂದಿರುತ್ತವೆ. ಧರ್ಮದ ಹಿನ್ನೆಲೆಯನ್ನು ಹೊಂದದೆ ನಿರ್ಮಾಣವಾಗಿರುವ ಉಬ್ಬುಶಿಲ್ಪಗಳನ್ನು ಕಾಲ್ಪನಿಕ ಶಿಲ್ಪಗಳೆಂದು ಪರಿಗಣಿಸಲಾಗುತ್ತದೆ. ಉದಾಹರಣೆಗೆ ಹೊನ್ನಾಳಿಯ ಹಿರೇಕಲ್ಮಠದ

---

೨೪. ಬೆನಗಲ್ ರಾಮರಾವ್, ಪಾನ್ಯಂ ಸುಂದರ ಶಾಸ್ತ್ರಿ: **ಪುರಾಣನಾಮ ಚೂಡಾಮಣಿ**, ಪುಟ–೬೧೧

೨೫. ಬೆನಗಲ್ ರಾಮರಾವ್, ಪಾನ್ಯಂ ಸುಂದರ ಶಾಸ್ತ್ರಿ: **ಪುರಾಣನಾಮ ಚೂಡಾಮಣಿ**, ಪುಟ–೩೭೭

೨೬. Choodamani Nandagopal, Vatsla Iyengar: **Temple Treasures**, Volume-II, Temple jewellery, ಪುಟ– ೫೨



ಚಿತ್ರ ೨೩೯-೧



ಚಿತ್ರ ೨೩೯-೨



ಚಿತ್ರ ೨೩೯-೩



ಚಿತ್ರ ೨೩೯-೪

ದೀಪಸ್ತಂಭದಲ್ಲಿ ಗಂಡಭೇರುಂಡದ ಉಬ್ಬುಶಿಲ್ಪವಿದೆ. ಈ ಉಬ್ಬುಶಿಲ್ಪದಲ್ಲಿ ಗಂಡಭೇರುಂಡ ಪಕ್ಷಿಯು ತನ್ನೆರಡು ಕೊಕ್ಕು ಮತ್ತು ಕಾಲುಗಳ ಸಹಾಯದಿಂದ ನಾಲ್ಕು ಆನೆಗಳನ್ನು ಹೊತ್ತುಕೊಂಡು ಹಾರುತ್ತಿರುವಂತೆ ಚಿತ್ರಿಸಲಾಗಿದೆ. ವಾಸ್ತವದಲ್ಲಿ ಸಾಧ್ಯವಿಲ್ಲದ್ದು ಮತ್ತು ಧಾರ್ಮಿಕ ಹಿನ್ನೆಲೆಯನ್ನು ಹೊಂದದೆ ಕೇವಲ ಕಲ್ಪನೆಯ ಆಧಾರದ ಮೇಲೆ ಈ ಶಿಲ್ಪಗಳು ರಚಿಸಲ್ಪಟ್ಟಿರುವುದನ್ನು ಕಾಣುತ್ತೇವೆ.

೩. ಸಾಮಾಜಿಕ ಶಿಲ್ಪಗಳು

ಕೆಲವು ದೀಪಸ್ತಂಭಗಳಲ್ಲಿ ಪುರಷ ಮತ್ತು ಸ್ತ್ರೀಯರ ಶಿಲ್ಪಗಳು ಇರುವುದನ್ನು ಕಾಣುತ್ತೇವೆ. ದೇವಾಲಯಗಳನ್ನು ನಿರ್ಮಿಸಿದ ರಾಜರ ಇಲ್ಲವೇ ದೀಪಸ್ತಂಭಕ್ಕೆ ದಾನವನ್ನು ನೀಡಿದ ಮಹಾತ್ಮರ ಶಿಲ್ಪಗಳು ಇವಾಗಿವೆ ಎಂದು ತಿಳಿಯಬಹುದು. ಈ ರೀತಿಯ ಶಿಲ್ಪಗಳನ್ನು ದೇವಾಲಯದ ದೇವಮೂರ್ತಿಗೆ ಅಭಿಮುಖವಾಗಿ ರಚಿಸಲಾಗಿರುತ್ತದೆ. ಈ ಶಿಲ್ಪಗಳು ದೇವಾಲಯದ ದೇವಮೂರ್ತಿಗೆ ಕೈ ಜೋಡಿಸಿ ನಮಸ್ಕರಿಸುತ್ತಿರುವಂತೆ ಶಿಲ್ಪ ರಚನೆಯನ್ನು ಮಾಡಲಾಗಿರುತ್ತದೆ. ಕೆಲವು ದೀಪಸ್ತಂಭಗಳಲ್ಲಿ ಲೈಂಗಿಕ ಶಿಲ್ಪಗಳು ಇರುತ್ತವೆ.

ಕೆಲವು ಸಾಮಾಜಿಕ ಶಿಲ್ಪಗಳಲ್ಲಿ ಸಂತರ ಶಿಲ್ಪ, ನರ್ತಿಸುತ್ತಿರುವವರ ಶಿಲ್ಪ, ಸಂಗೀತವಾದ್ಯವನ್ನು ನುಡಿಸುತ್ತಿರುವವರ ಶಿಲ್ಪಗಳು ಇರುವುದನ್ನು ನೋಡಬಹುದು. ಇವು ಅಲ್ಲಿದ್ದಂತಹ ಕೀರ್ತನಕಾರರ ಇಲ್ಲವೇ ನರ್ತಕ, ನರ್ತಕಿಯರನ್ನು ಪ್ರತಿಬಿಂಬಿಸುವ ಉಬ್ಬುಶಿಲ್ಪಗಳಿರಬೇಕು ಎಂದು ತೋರುತ್ತದೆ.

ಲೈಂಗಿಕ ಶಿಲ್ಪಗಳು:

ವಿಶ್ವದ ಎಲ್ಲಾ ಕಲಾ ಚಟುವಟಿಕೆಗಳಲ್ಲಿ ಲೈಂಗಿಕಕ್ಕೆ ಸಂಬಂಧಿಸಿದ ವಿಷಯದ ನಿರೂಪಣೆಯನ್ನು ಪ್ರಧಾನವಾಗಿರಿಸಿಕೊಂಡು ರಚಿಸಿರುವ ಚಿತ್ರ, ಶಿಲ್ಪಗಳು ದೊರೆಯುತ್ತವೆ[೨೭]. ಇಂದಿನ ಸಮಾಜದಲ್ಲಿ ಲೈಂಗಿಕ ಚಿತ್ರ, ಶಿಲ್ಪಗಳನ್ನು ಸಾರ್ವಜನಿಕವಾಗಿ ಅಭಿವ್ಯಕ್ತಿಸುವುದು ಕಷ್ಟ. ಇವನ್ನು ಜನರು ಅಸಹ್ಯ ಮತ್ತು ಅಸಭ್ಯತೆಯಿಂದ ಕೂಡಿದುದು ಎನ್ನುತ್ತಾರೆ. ಆದರೆ ಇದು ಬದುಕಿನ ಒಂದು ಭಾಗವೇ ಸರಿ. ಹಿಂದಿನ ಕಾಲದಲ್ಲಿ ರಚನೆಗೊಂಡಿರುವ ವಾಸ್ತುಶಿಲ್ಪಗಳಲ್ಲಿ ಲೈಂಗಿಕ ಶಿಲ್ಪಗಳು ಹೆಚ್ಚಾಗಿ ದೊರೆಯುತ್ತವೆ.

ಕೆಲವು ಪ್ರಾಚೀನ ಸಂಸ್ಕೃತಿಗಳಲ್ಲಿ ಸಂಭೋಗವೇ ಪವಿತ್ರ ದೇವಭಕ್ತಿಗೆ ಸೂಚನೆ ಎಂಬ ಅಭಿಪ್ರಾಯಗಳು ಇತ್ತು[೨೮]. ನಮ್ಮ ಉಪನಿಷತ್ತುಗಳಲ್ಲಿ ಪೂರ್ವಿಕರು ಗುಪ್ತಾಂಗಕ್ಕೆ ಬಹು ಗೌರವಗಳನ್ನು ಕೊಟ್ಟಿರುವ ಉಲ್ಲೇಖಗಳು ದೊರೆಯುತ್ತವೆ[೨೯]. ಲೈಂಗಿಕ ಶಿಲ್ಪಗಳು

---

೨೭. ಆ.ಲ. ನರಸಿಂಹನ್: ಲೇಖನ– ಲೈಂಗಿಕ ಚಿತ್ರ, ಶಿಲ್ಪಗಳು, **ಕಲಾಕೋಶ**, ಪ್ರಧಾನ ಸಂಪಾದಕರು: ಪಿ.ಆರ್. ತಿಪ್ಪೇಸ್ವಾಮಿ, ಪುಟ– ೨೯೩

೨೮. ಎಸ್. ಆರ್. ಶಾಸ್ತ್ರಿ: **ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ**, ಮೂಲ: ತಾಪಿ ಧರ್ಮರಾವ್, ಪುಟ–೬

೨೯. ಎಸ್. ಆರ್. ಶಾಸ್ತ್ರಿ: **ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ**, ಮೂಲ: ತಾಪಿ ಧರ್ಮರಾವ್, ಪುಟ–೭



ಚಿತ್ರ ೨೪೦



ಚಿತ್ರ ೨೪೧-೧



ಚಿತ್ರ ೨೪೧-೨



ಚಿತ್ರ ೨೪೧-೩

ರಥಗಳ ಮೇಲೆ, ಗರ್ಭಗುಡಿಯ ವಿಮಾನದ ಮೇಲೆ, ದೇವಾಲಯದ ಗೋಡೆಗಳ ಮೇಲೆ, ಅಷ್ಟೇ ಏಕೆ ಗರ್ಭಗುಡಿಯಲ್ಲಿ ಲಿಂಗ, ಪೀಠದ ರೂಪದಲ್ಲಿ ಇರುವುದನ್ನು ಕಾಣಬಹುದು.

ಅಂದಿನ ದಿನಗಳಲ್ಲಿ ಲೈಂಗಿಕ ಕ್ರಿಯೆಯು ಒಂದು ಮಹಾಕಾರ್ಯ, ಒಂದು ಪ್ರಜಾ ಸೇವೆ, ಒಂದು ಮಹಾ ಭಕ್ತಿ, ಒಂದು ಪವಿತ್ರವಾದ ಆರಾಧನೆ[೩೦] ಎಂಬ ನಂಬಿಕೆ ಇದ್ದುದು ತಿಳಿದು ಬರುತ್ತದೆ. ವಿಶ್ವದಲ್ಲಿ ಎಲ್ಲಾ ಕಡೆಯು ಈ ಲೈಂಗಿಕ ಪೂಜೆಯ ವಿಶ್ವರೂಪ ದರ್ಶನವಾಗುತ್ತದೆ[೩೧]. ಲೈಂಗಿಕ ಶಿಲ್ಪಗಳಲ್ಲಿ ಸ್ತ್ರೀ, ಪುರುಷ ಶಿಲ್ಪಗಳನ್ನು ನಗ್ನರಾಗಿ ಚಿತ್ರಿಸಿರುವುದರ ಜೊತೆಗೆ ಅವರು ಲೈಂಗಿಕ ಚಟುವಟಿಕೆಯಲ್ಲಿ ತೊಡಗಿರುವಂತೆಯೂ ಶಿಲ್ಪಗಳನ್ನು ರಚಿಸಿರುವುದನ್ನು ಕಾಣುತ್ತೇವೆ.

ದೇವಾಲಯದ ಒಳ ಆವರಣ ಮತ್ತು ಹೊರ ಆವರಣ ಸೇರಿದಂತೆ ಎಲ್ಲಾ ಪ್ರಾಕಾರಗಳಲ್ಲೂ ಈ ಲೈಂಗಿಕ ಶಿಲ್ಪಗಳನ್ನು ರಚಿಸಿರುವುದನ್ನು ನೋಡಬಹುದು. ಲೈಂಗಿಕತೆಯ ಜ್ಞಾನವನ್ನು ಜನ ಸಾಮಾನ್ಯರಿಗೆ ತಿಳಿಸುವುದೆ ಇದರ ಪ್ರಮುಖ ಉದ್ದೇಶಗಳಲ್ಲೊಂದು. ದೀಪಸ್ತಂಭವು ಜ್ಞಾನದ ಸಂಕೇತವಾದ್ದರಿಂದ ದೀಪಸ್ತಂಭಗಳಲ್ಲೂ ಈ ರೀತಿಯ ಶಿಲ್ಪಗಳು ಇರುವುದನ್ನು ನೋಡಬಹುದು.

ಕವಿ ಸಾರ್ವಭೌಮನಾದ ಶ್ರೀನಾಥ ಮಹಾಕವಿಯು ತನ್ನ **ಹರವಿಲಾಸ** ಎಂಬ ಕಾವ್ಯದಲ್ಲಿ ಬಹು ಭಕ್ತಿಯಿಂದ ಶಿವಲಿಂಗವನ್ನು ಕುರಿತು ಹಾಗೂ ಅದು ಪೂಜಾರ್ಹವಾಗಲು ಕಾರಣವೇನು ಎಂಬುದನ್ನು ಕುರಿತು ವಿವರಿಸಿದ್ದಾನೆ[೩೨]. ಲಿಂಗವೇ ಗುಪ್ತಾಂಗವೆಂದೂ, ಅದೇ ಜ್ಯೋತಿರ್ಮಹಾಲಿಂಗ ಎಂದು ವಿವರಣೆ ಇರುವುದು ತಿಳಿದು ಬರುತ್ತದೆ. ಇದರಲ್ಲಿ ಮಹಾಲಿಂಗವನ್ನು ಸ್ತಂಭನ ಮಾಡುವ ಸನ್ನಿವೇಶವನ್ನು ಕುರಿತು ತಿಳಿಸಲಾಗಿದೆ. ಪುರುಷಾವಯವ ಲಿಂಗಕ್ಕೆ ಪೂಜೆ ಇದ್ದರೆ, ಸ್ತ್ರೀಯರ ಗುಪ್ತಾಂಗವಾದ ಯೋನಿಗೂ ಪೂಜೆ ಮಾಡುವುದು ಕೂಡಾ ಇದೆ[೩೩]. ಇವೆರಡು ಸೃಷ್ಟಿಯ ಸಂಕೇತವಾಗಿವೆ.

ಕೆಲವು ದೇವಾಲಯಗಳಲ್ಲಿ ಒಂದಕ್ಕಿಂತಾ ಹೆಚ್ಚು ದೀಪಸ್ತಂಭಗಳು ಇರುವುದನ್ನು ನೋಡುತ್ತೇವೆ. ಮೂರು ದೀಪಸ್ತಂಭಗಳು ಪುರುಷ ದೇವಾಲಯದ ಎದುರಿಗಿದ್ದರೆ ಅವು ತ್ರಿಮೂರ್ತಿಯರಾದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಎಂದು ಗುರುತಿಸಿಕೊಳ್ಳುತ್ತವೆ. ಅದೇ ರೀತಿಯಾಗಿ ಶಾಕ್ತ ದೇವಾಲಯದ ಮುಂದೆ ಮೂರು ದೀಪಸ್ತಂಭಗಳಿದ್ದರೆ ಅವು

೩೦. ಎಸ್. ಆರ್. ಶಾಸ್ತ್ರಿ: ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ,
ಮೂಲ: ತಾಪಿ ಧರ್ಮರಾವ್, ಪುಟ-೩೧

೩೧. ಎಸ್. ಆರ್. ಶಾಸ್ತ್ರಿ: ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ,
ಮೂಲ: ತಾಪಿ ಧರ್ಮರಾವ್, ಪುಟ-೪೯

೩೨. ಎಸ್. ಆರ್. ಶಾಸ್ತ್ರಿ: ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ,
ಮೂಲ: ತಾಪಿ ಧರ್ಮರಾವ್, ಪುಟ-೪೪

೩೩. ಎಸ್. ಆರ್. ಶಾಸ್ತ್ರಿ: ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ,
ಮೂಲ: ತಾಪಿ ಧರ್ಮರಾವ್, ಪುಟ-೯೨



ಚಿತ್ರ ೨೪೨-೧



ಚಿತ್ರ ೨೪೨-೨



ಚಿತ್ರ ೨೪೨-೩



ಚಿತ್ರ ೨೪೨-೪

ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಸರಸ್ವತಿಯನ್ನು ಸಾಂಕೇತಿಸುತ್ತವೆ ಎನ್ನಲಾಗುತ್ತದೆ. ಮಹಾಕಾಳಿಯು ಶಕ್ತಿಯನ್ನೂ, ಮಹಾಲಕ್ಷ್ಮಿಯು ಐಶ್ವರ್ಯವನ್ನೂ ಮತ್ತು ಸರಸ್ವತಿಯು ವಿದ್ಯೆ, ಜ್ಞಾನವನ್ನೂ ಸಾಂಕೇತಿಸುವುದಾಗಿದೆ.

ದೇವಾಲಯದ ಆವರಣದಲ್ಲಿ ಐದು ದೀಪಸ್ತಂಭಗಳು ಇದ್ದರೆ ಅವು ದೇವಾಲಯಗಳಲ್ಲಿ ಬಳಸುವ ದೀಪಗಳಂತೆಪಂಚಭೂತಗಳನ್ನು ಪ್ರತಿನಿಧಿಸುವುದಾಗಿದೆ. ಕೆಲವು ದೇವಾಲಯಗಳ ಆವರಣದಲ್ಲಿ ಒಂಬತ್ತು ದೀಪಸ್ತಂಭಗಳು ಇರುತ್ತವೆ. ಇವು ನವಗ್ರಹಗಳನ್ನು ಸಾಂಕೇತಿಸುತ್ತದೆ ಎಂದು ಒಂದು ವಿವರಣೆ ದೊರೆತರೆ ಇನ್ನೊಂದರಲ್ಲಿ ಜೀವವು ಪರಮಾತ್ಮನನ್ನು ಹೊಂದಬೇಕಾದರೆ ಕಾಯದಲ್ಲಿರುವ ಒಂಬತ್ತು ಚಕ್ರಗಳನ್ನು ದಾಟಬೇಕಾಗುತ್ತದೆ[೩೪] ಎಂದು ಹೇಳುವುದರ ಸಂಕೇತವಾಗಿದೆ ಎನ್ನುವ ವಿವರಣೆಗಳು ದೊರೆಯುತ್ತವೆ. ಅವನ್ನು ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುಧ್ಧಿ, ಅಗ್ನಿ, ಶಿಖಿ, ಬ್ರಹ್ಮರಂಧ್ರ ಹಾಗೂ ಪಶ್ಚಿಮ ಚಕ್ರಗಳು ಎಂದು ಹೆಸರಿಸಲಾಗುತ್ತದೆ. ದೇವಾಲಯಗಳಲ್ಲಿನ ದೀಪ ಮತ್ತು ಅವುಗಳ ವೈವಿಧ್ಯತೆಯ ಉದ್ದೇಶಗಳು ದೀಪಸ್ತಂಭದಲ್ಲೂ ಇರುವುದು ಕಾಣುತ್ತದೆ.

ಪ್ರಾರಂಭದ ಕಾಲದಲ್ಲಿ ಸ್ತಂಭವನ್ನು ದೇವರೆಂದು ಪೂಜಿಸುತ್ತಿದ್ದುದೂ ಉಂಟು. ಸ್ತಂಭದ ಮೇಲೆ ಕೆತ್ತಲಾದ ಅಲಂಕಾರ, ಕಂಬದ ಮೇಲಿನ ಶಿಲ್ಪಗಳು ಸ್ತಂಭದ ಸೌಂದರ್ಯದ ವಸ್ತುಗಳಾಗಿವೆ. ಮೌರ್ಯರ ಕಾಲದ ಸ್ತಂಭಗಳಲ್ಲಿ ಬಹಳಷ್ಟು ಸ್ತಂಭಗಳು ಪ್ರಾಣಿಗಳ ಉಬ್ಬುಶಿಲ್ಪಗಳನ್ನು ಹೊಂದಿದ್ದು, ಅವುಗಳಿಗೆ ಬೌದ್ಧ ಪುರಾಣದ ಅರ್ಥಗಳನ್ನು ಕೊಡಲಾಗಿದೆ. ಬೌದ್ಧ ಪುರಾಣವನ್ನು ಆಧರಿಸಿ ನಿರ್ಮಾಣಗೊಂಡ ಕಂಬದ ನಾಲ್ಕು ದಿಕ್ಕನ್ನೂ ನಾಲ್ಕು ಸಂಕೇತಗಳ ಮುಖಾಂತರ ಪ್ರತಿಬಿಂಬಿಸಲಾಗುತ್ತದೆ.

ಆನೆಯು ಪೂರ್ವದಿಕ್ಕು, ಕುದುರೆಯು ದಕ್ಷಿಣ ದಿಕ್ಕು, ರಾಮಪುರದ ಎತ್ತು ಪಶ್ಚಿಮ ದಿಕ್ಕು ಹಾಗೂ ಸಿಂಹವು ಉತ್ತರ ದಿಕ್ಕಿನ ರಕ್ಷಕರಂತೆ ಪ್ರತಿನಿಧಿಸಲ್ಪಟ್ಟಿವೆ. ಅಶೋಕನ ಕಾಲದ ಶಿಲಾ ಶಿಲ್ಪ ರಚನೆಯಲ್ಲಿ ಅತಿ ನುಣುಪಾದ ಮೇಲ್ಮೈ ಸಾಮಾನ್ಯವಾಗಿ ಕಾಣಲು ಸಿಗುತ್ತವೆ. ಈ ನುಣುಪಾದ ಮೇಲ್ಮೈಯನ್ನು ನೋಡುತ್ತಿದ್ದಂತೆ ಇವು ಅಶೋಕನ ಕಾಲದ ಶಿಲಾಕೃತಿಗಳೆಂದು ಬಹಳ ಸುಲಭವಾಗಿ ಗುರುತಿಸಬಹುದಾಗಿದೆ.

ಅಧ್ಯಯನದ ವ್ಯಾಪ್ತಿಗೆ ಬರುವ ಜಿಲ್ಲೆಗಳಲ್ಲಿ ಇರುವ ದೇವಾಲಯಗಳು, ಅಲ್ಲಿರುವ ದೀಪಸ್ತಂಭಗಳು ಮತ್ತು ಅವುಗಳಲ್ಲಿ ಇರುವ ಉಬ್ಬುಶಿಲ್ಪಗಳನ್ನು ಕುರಿತು ಇಲ್ಲಿ ಪ್ರತ್ಯೇಕವಾಗಿ ಹೇಳಲಾಗಿದೆ.

ಮೈಸೂರು ಜಿಲ್ಲೆ ವರಾಹಸ್ವಾಮಿ ದೇವಾಲಯವು ವೈಷ್ಣವ ಧರ್ಮಕ್ಕೆ ಸೇರಿದ

೩೪. ಶಿವಪ್ರಕಾಶ ತುಕ್ಕಣ್ಣವರ: ಲೇಖನ- ದೀಪಸ್ತಂಭಗಳು- ಪ್ರತಿಷ್ಠಾಪನಾಕಲೆ, ನಿಜದ ನೆಲೆ, ಡಾ. ಬಿ.ಕೆ. ಹಿರೇಮಠ ಅಭಿನಂದನಾ ಗ್ರಂಥ.ಪುಟ-೨೨೯



ಚಿತ್ರ ೨೪೩-೧



ಚಿತ್ರ ೨೪೩-೨



ಚಿತ್ರ ೨೪೩-೩



ಚಿತ್ರ ೨೪೩-೪

ದೇವಾಲಯವಾಗಿದೆ. ಆದ್ದರಿಂದ ಈ ದೇವಾಲಯದಲ್ಲಿ ವಿಷ್ಣುವಿಗೆ ಸಂಬಂಧ ಪಟ್ಟಂತಹ ವಿಷಯಗಳ ಉಬ್ಬುಶಿಲ್ಪಗಳು ದೀಪಸ್ತಂಭದಲ್ಲಿ ಇವೆ. ದೀಪಸ್ತಂಭದ ಚೌಕಾಕಾರದ ಭಾಗದಲ್ಲಿ ಉಬ್ಬುಶಿಲ್ಪಗಳು ಇರುವುದನ್ನು ಕಾಣುತ್ತೇವೆ. ಮುಖ್ಯದ್ವಾರದಿಂದ ದೇವಾಲಯವನ್ನು ಪ್ರವೇಶಿಸುತ್ತಿದ್ದಂತೆ ದೀಪಸ್ತಂಭದಲ್ಲಿ ರಾಮನ ಪರಮಭಕ್ತನಾದ ಹನುಮಂತನ ಶಿಲ್ಪವು ಎದುರಾಗುತ್ತದೆ (ಚಿತ್ರ ೨೨೨-೧). ಈ ಶಿಲ್ಪದಲ್ಲಿ ಹನುಮಂತನು ತನ್ನ ಎಡಗೈಯಲ್ಲಿ ಗಧೆಯನ್ನು ಹಿಡಿದಿದ್ದು ಬಲಗೈಯಲ್ಲಿ ಅಭಯ ಹಸ್ತವನ್ನು ಹೊಂದಿದ್ದಾನೆ. ದೀಪಸ್ತಂಭಕ್ಕೆ ಪ್ರದಕ್ಷಿಣ ಪಥದಲ್ಲಿ ಬಂದರೆ ಇದರ ನಂತರ ವಿಷ್ಣುವಿನ ಆಯುಧಗಳಲ್ಲಿ ಒಂದಾದ ಸುದರ್ಶನ ಚಕ್ರದ ಸಂಕೇತವಾಗಿರುವ ಚಕ್ರದ ಉಬ್ಬುಶಿಲ್ಪವಿದೆ (ಚಿತ್ರ ೨೨೨-೨).

ಸ್ತಂಭದ ಮೂರನೆಯ ದಿಕ್ಕಿನಲ್ಲಿ ದೇವಾಲಯದ ಮೂಲಮೂರ್ತಿಗೆ ಅಭಿಮುಖವಾಗಿ ಎರಡೂ ಕೈಗಳನ್ನು ಜೋಡಿಸಿ ವಂದಿಸುತ್ತಾ ನಿಂತಿರುವ ವಿಷ್ಣುವಿನ ವಾಹನನಾದ ಗರುಡನ ಶಿಲ್ಪವು ಇರುವುದು ಕಾಣುತ್ತದೆ (ಚಿತ್ರ ೨೨೨-೩). ಇವನ ಎರಡೂ ತೆಕ್ಕೆಗಳ ಎರಡೂ ಕಡೆಗಳಲ್ಲಿ ನಾಗನನ್ನು ಹಿಡಿದಿರುವಂತೆ ಶಿಲ್ಪ ರಚನೆಯಾಗಿದೆ. ಸ್ತಂಭದ ನಾಲ್ಕನೆಯ ದಿಕ್ಕಿನಲ್ಲಿ ವಿಷ್ಣುವಿನ ಮತ್ತೊಂದು ಆಯುಧವಾದ ಪಾಂಚಜನ್ಯ ಎಂಬ ಹೆಸರಿನ ಶಂಖದ ಉಬ್ಬುಶಿಲ್ಪವು ಇರುವುದನ್ನು ನೋಡಬಹುದು (ಚಿತ್ರ ೨೨೨-೪). ಈ ಎಲ್ಲಾ ಶಿಲ್ಪಗಳ ಸುತ್ತಲೂ ಗೂಡಿನಂತೆ ರಚನೆಯನ್ನು ಮಾಡಲಾಗಿದೆ. ಇವುಗಳನ್ನು ವರ್ಣಗಳಿಂದ ಅಲಕರಿಸಿರುವುದನ್ನು ಕಾಣುತ್ತೇವೆ.

ಒಂಟಿ ಕೊಪ್ಪಲಿನಲ್ಲಿರುವ ಶ್ರೀ ವೆಂಕಟರಮಣಸ್ವಾಮಿವು ವೈಷ್ಣವ ಧರ್ಮದ ದೇವಾಲಯವಾಗಿದೆ. ಈ ದೇವಾಲಯದ ಹೊರಗಡೆ ಇರುವ ದೀಪಸ್ತಂಭದ ಚೌಕಾಕಾರದ ಭಾಗದಲ್ಲಿ ಉಬ್ಬುಶಿಲ್ಪಗಳಿವೆ. ಇದರಲ್ಲಿ ದೇವ ಮೂರ್ತಿಗೆ ಅಭಿಮುಖವಾಗಿ ಕೈ ಮುಗಿಯುತ್ತಿರುವಂತಹ ಗರುಡನ ಕುಳಿತಿರುವ ಶಿಲ್ಪವಿದೆ (ಚಿತ್ರ ೨೨೩-೧). ಇವನು ಕುಳಿತಿರುವ ಭಂಗಿಯನ್ನು ಗರುಡಾಸನ ಎಂದು ಕರೆಯಲಾಗುತ್ತದೆ. ನಂತರದ ಭಾಗದಲ್ಲಿ ಹನುಮಂತನ ಶಿಲ್ಪವಿದೆ (ಚಿತ್ರ ೨೨೩-೨). ಈ ಶಿಲ್ಪದಲ್ಲಿ ಹನುಮಂತನ ಬಲಗೈಯು ಅಭಯಹಸ್ತವನ್ನು ಹೊಂದಿದೆ. ಎಡಗೈಯಲ್ಲಿ ಯಾವುದೋ ಹೂವನ್ನು ಹಿಡಿದಿದ್ದಾನೆ. ಹನುಮಂತನ ಬಾಲಕ್ಕೆ ಗಂಟೆಯನ್ನು ಕಟ್ಟಲಾಗಿದೆ.

ಸ್ತಂಭದ ಇನ್ನೊಂದು ದಿಕ್ಕಿನಲ್ಲಿ ಊರ್ಧ್ವಪುಂಡ್ರದ ಚಿಹ್ನೆಯನ್ನು ಉಬ್ಬುಶಿಲ್ಪದಲ್ಲಿ ತೋರಿಸಲಾಗಿದೆ. ದೀಪಸ್ತಂಭದ ನಾಲ್ಕನೆಯ ದಿಕ್ಕಿನಲ್ಲಿ ಸಂಗೀತಗಾರ್ತಿಯ ಉಬ್ಬುಶಿಲ್ಪವಿದ್ದು ಅವಣ ಬಲಗೈಯಲ್ಲಿ ವಾದ್ಯವೊಂದನ್ನು ಹಿಡಿದಿದ್ದಾಳೆ (ಚಿತ್ರ ೨೨೩-೩). ಅವಳು ಹಾಡುತ್ತಾ ನರ್ತಿಸುತ್ತಿರುವಂತೆ ಉಬ್ಬುಶಿಲ್ಪವನ್ನು ರಚಿಸಲಾಗಿದೆ. ಚೋಳರ ಸಾಮ್ರಾಜ್ಯದ ಆಳ್ವಿಕೆಯು ಇಲ್ಲಿ ಇದ್ದುದರಿಂದ ಅವರ ಪ್ರಭಾವವನ್ನು ಅವಳ ವಸ್ತ್ರ ವಿನ್ಯಾಸ, ಕೇಶ ವಿನ್ಯಾಸಗಳ ಶೈಲಿಯಲ್ಲಿ ಇರುವುದನ್ನು ಗುರುತಿಸಬಹುದು.



ಚಿತ್ರ ೨೪೪-೧



ಚಿತ್ರ ೨೪೪-೨



ಚಿತ್ರ ೨೪೪-೩



ಚಿತ್ರ ೨೪೪-೪

ಮೈಸೂರಿನ ಜಯನಗರದಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಾಲಯವಿದೆ. ಶ್ರೀ ಚಾಮುಂಡೇಶ್ವರಿ ದೇವಾಲಯವು ಶೈವ ಧರ್ಮದ ದೇವಾಲಯವಾಗಿದೆ. ಈ ದೇವಾಲಯದ ಹೊರ ಆವರಣದಲ್ಲಿರುವ ದೀಪಸ್ತಂಭದ ಚೌಕಾಕಾರದ ಭಾಗದಲ್ಲಿ ಉಬ್ಬುಶಿಲ್ಪಗಳು ಇರುವುದನ್ನು ಕಾಣಬಹುದು. ಇದು ಶಕ್ತಿ ದೇವತೆಯಾದ್ದರಿಂದ ದೇವತೆಗೆ ಸಂಬಂಧಿಸಿದವುಗಳು ದೀಪಸ್ತಂಭದಲ್ಲಿ ಇರುವುದನ್ನು ನೋಡಬಹುದು.

ಮೂಲ ದೇವತೆಗೆ ಅಭಿಮುಖವಾಗಿ ಚಾಮುಂಡಿಯ ವಾಹನವಾದ ಸಿಂಹದ ಉಬ್ಬುಶಿಲ್ಪವನ್ನು ಸ್ತಂಭದಲ್ಲಿ ಕೆತ್ತಲಾಗಿದೆ (ಚಿತ್ರ ೨೨೪-೧). ಇದರ ನಂತರ ಡಮರುಗದ ಶಿಲ್ಪವಿದ್ದು ಅದಕ್ಕೆ ಹಾವು ಸುತ್ತಿಕೊಂಡಂತೆ ಶಿಲ್ಪವನ್ನು ರಚಿಸಲಾಗಿದೆ (ಚಿತ್ರ ೨೨೪-೨). ಸಿಂಹದ ಶಿಲ್ಪದ ವಿರುದ್ಧ ದಿಕ್ಕಿನಲ್ಲಿ ಗಣಪತಿಯ ಉಬ್ಬುಶಿಲ್ಪ ಇರುವುದನ್ನು ಕಾಣಬಹುದು (ಚಿತ್ರ ೨೨೪-೩). ಸ್ತಂಭದ ನಾಲ್ಕನೆಯ ದಿಕ್ಕಿನ ಉಬ್ಬುಶಿಲ್ಪದಲ್ಲಿ ತ್ರಿಶೂಲದ ರಚನೆಯು ಇದೆ (ಚಿತ್ರ ೨೨೪-೪). ಇದರ ನಂತರ ಸ್ತಂಭದ ನಾಲ್ಕೂ ಮೂಲೆಗಳಲ್ಲೂ ನಾಗಬಂಧದ ರಚನೆಯು ಇರುವುದನ್ನು ಕಾಣುತ್ತೇವೆ.

ಕೆ.ಆರ್ ನಗರ ತಾಲ್ಲೂಕಿನಲ್ಲಿರುವ ಅರ್ಕೇಶ್ವರವು ಶೈವ ಧರ್ಮದ ದೇವಾಲಯವಾಗಿದೆ. ಈ ದೇವಾಲಯದ ಹೊರ ಆವರಣದಲ್ಲಿ ದಿಪಸ್ತಂಭವಿದೆ. ಸ್ತಂಭದ ಚೌಕಾಕಾರದ ಕೆಳಗಿನ ಭಾಗದಲ್ಲಿ ಉಬ್ಬುಶಿಲ್ಪಗಳಿವೆ. ಇದರ ಮೇಲೆ ನಾಲ್ಕೂ ಕಡೆಗಳಲ್ಲಿ ಕಮಲದ ವಿನ್ಯಾಸವನ್ನು ಉಬ್ಬುಶಿಲ್ಪದಲ್ಲಿ ರಚಿಸಲಾಗಿದೆ (ಚಿತ್ರ ೨೨೫-೧). ಸ್ತಂಭದಲ್ಲಿ ಎದುರಿಗೆ ಗಣಪತಿಯ ಉಬ್ಬುಶಿಲ್ಪವಿದ್ದು ಅದಕ್ಕೆ ಗೂಡನ್ನು ಕಟ್ಟಲಾಗಿದೆ. ಇದರ ನಂತರದ ದಿಕ್ಕಿನಲ್ಲಿ ಇಬ್ಬರು ಯುವತಿಯರು ನರ್ತಿಸುತ್ತಿರುವಂತೆ ಇರುವ ಶಿಲ್ಪದ ರಚನೆಯು ಇದೆ (ಚಿತ್ರ ೨೨೫-೨). ಇವರನ್ನು ನಗ್ನರನ್ನಾಗಿ ಚಿತ್ರಿಸಲಾಗಿದೆ. ದೇವಾಲಯದ ಮೂಲಮೂರ್ತಿಗೆ ಅಭಿಮುಖವಾಗಿ ಬಸವನ ಶಿಲ್ಪವಿದ್ದು ಇದರ ಜೊತೆಗೆ ನಿಂತಂತೆ ಚಿಕ್ಕದಾಗಿ ಮನುಷ್ಯನ ಶಿಲ್ಪವಿರುವುದು ಕಾಣುತ್ತದೆ (ಚಿತ್ರ ೨೨೫-೩). ದೀಪಸ್ತಂಭದ ನಾಲ್ಕನೆಯ ದಿಕ್ಕಿನಲ್ಲಿ ಅಲಂಕಾರದಿಂದ ಕೂಡಿದ ಹಂಸದ ಶಿಲ್ಪವಿರುವುದನ್ನು ನೋಡಬಹುದು (ಚಿತ್ರ ೨೨೫-೪). ಈ ದೀಪಸ್ತಂಭದ ಉಬ್ಬುಶಿಲ್ಪಗಳಿಗೆ ಬಣ್ಣವನ್ನು ಹಚ್ಚಿರುವುದರಿಂದ ಇವು ಇನ್ನೂ ಸುಂದರವಾಗಿ ಕಾಣುತ್ತಿವೆ.


ಟಿ. ನರಸೀಪುರದ ತಿರುಮಕೂಡಲಿನಲ್ಲಿ ಇರುವ ಅಗಸ್ತ್ಯೇಶ್ವರ ದೇವಾಲಯವು ಶೈವ ಧರ್ಮದ ದೇವಾಲಯವಾಗಿದೆ. ಈ ದೇವಾಲಯದ ದ್ವಾರದ ಮುಂದೆ ತೋರಣಗಂಬವಿದೆ. ಇಲ್ಲಿರುವ ತೋರಣಗಂಬದ ಮೇಲೆ ಎರಡೂ ಕಡೆಗಳಲ್ಲಿ ದೀಪವನ್ನು ಬೆಳಗಲು ದೀಪಸ್ತಂಭವನ್ನು ನಿರ್ಮಾಣ ಮಾಡಲಾಗಿದೆ. ತೋರಣಗಂಬದ ಒಂದು ಸ್ತಂಭದಲ್ಲಿ ಮೂಲಮೂರ್ತಿಗೆ ಅಭಿಮುಖವಾಗಿ ಪೀಠದ ಮೇಲೆ ಕುಳಿತಂತಹ ನಂದಿಯ ಶಿಲ್ಪವಿದೆ. ಇದರ ನಂತರದ ದಿಕ್ಕಿನಲ್ಲಿ ಹಂಸದ ಶಿಲ್ಪ ಇರುವುದನ್ನು ಕಾಣಬಹುದು (ಚಿತ್ರ ೨೨೬-೧). ಮೂಲ ಮೂರ್ತಿಗೆ ವಿರುದ್ಧ ದಿಕ್ಕಿನಲ್ಲಿ ಕುಳಿತಿರುವ ಗಣಪತಿಯ ಶಿಲ್ಪವಿದೆ.



ಚಿತ್ರ ೨೪೫-೧




ಚಿತ್ರ ೨೪೫-೨



ಚಿತ್ರ ೨೪೫-೩



ಚಿತ್ರ ೨೪೫-೪



ಚಿತ್ರ ೨೪೫-೫

ನಾಲ್ಕನೆಯ ದಿಕ್ಕಿನಲ್ಲಿ ದೇಹದೊಂದಿಗೆ ಇರುವ ಕೀರ್ತಿಮುಖದ ಶಿಲ್ಪವು ಇದ್ದು ಇದರ ಎರಡು ಕೈಗಳನ್ನು ಮುಂದಕ್ಕೆ ಇಟ್ಟುಕೊಂಡು ಕುಳಿತಂತೆ ಕಾಣುತ್ತದೆ (ಚಿತ್ರ ೨೨೬-೨). ಈ ರೀತಿಯ ಶಿಲ್ಪಗಳು ವಿಜಯನಗರ ಕಾಲದ ದೇವಾಲಯಗಳಲ್ಲಿ ಹೆಚ್ಚಾಗಿ ರಚಿಸಿರುವುದನ್ನು ಕಾಣುತ್ತೇವೆ.

ತೋರಣಗಂಬದ ಇನ್ನೊಂದು ಕಂಬದ ಚೌಕಾಕಾರದ ಭಾಗದಲ್ಲಿ ದೇವಾಲಯದ ಮೂಲಮೂರ್ತಿಗೆ ಅಭಿಮುಖವಾಗಿ ಕುಳಿತಿರುವ ಗಣಪತಿಯ ಶಿಲ್ಪವಿದೆ. ನಂತರದ ದಿಕ್ಕಿನಲ್ಲಿ ಕೈಮುಗಿದು ನಿಂತಿರುವ ಋಷಿಯೊಬ್ಬನ ಶಿಲ್ಪವಿದೆ (ಚಿತ್ರ ೨೨೭-೧) . ಗಣಪತಿಯ ಶಿಲ್ಪಕ್ಕೆ ವಿರುದ್ಧ ದಿಕ್ಕಿನಲ್ಲಿ ವೀರಭದ್ರನ ಶಿಲ್ಪವನ್ನು ನಿಂತಂತೆ ರಚಿಸಲಾಗಿದೆ. ಈ ಸ್ತಂಭದ ನಾಲ್ಕನೆಯ ದಿಕ್ಕಿನಲ್ಲಿ ಋಷಿಯೊಬ್ಬನು ಕೈಮುಗಿದು ನಿಂತಂತೆ ಶಿಲ್ಪ ರಚನೆಯನ್ನು ಮಾಡಿರುವುದು ಕಾಣುತ್ತದೆ (ಚಿತ್ರ ೨೨೭-೨). ಈ ಸ್ತಂಭಗಳಲ್ಲಿನ ಚೌಕಾಕಾರದ ಭಾಗದ ನಂತರ ನಾಲ್ಕೂ ಮೂಲೆಗಳಲ್ಲಿ ನಾಗಬಂಧದ ರಚನೆ ಇರುವುದನ್ನು ನೋಡಬಹುದು.

ಅಗಸ್ತ್ಯೇಶ್ವರ ದೇವಾಲಯದ ಹೊರ ಆವರಣದಲ್ಲಿ ಸ್ವಲ್ಪ ದೂರದಲ್ಲಿ ಎತ್ತರದ ದಿಪಸ್ತಂಭವಿದ್ದು, ಇದರ ಚೌಕಾಕಾರದ ಭಾಗದಲ್ಲಿ ಉಬ್ಬುಶಿಲ್ಪಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಈ ಸ್ತಂಭದಲ್ಲಿ ದೇವಾಲಯಕ್ಕೆ ಅಭಿಮುಖವಾಗಿ ನಂದಿಯ ಶಿಲ್ಪವಿದೆ. ಇದರ ನಂತರ ಇರುವ ಎರಡೂ ಕಡೆಗಳಲ್ಲಿ ಕೈಮುಗಿದು ನಿಂತಂತೆ ಮನುಷ್ಯನ ಶಿಲ್ಪಗಳಿವೆ (ಚಿತ್ರ ೨೨೮-೧,೨). ದೀಪಸ್ತಂಭದ ನಾಲ್ಕನೆಯ ದಿಕ್ಕಿನಲ್ಲಿ ಗಣಪತಿಯು ಕುಳಿತಂತೆ ಇರುವ ಶಿಲ್ಪವಿದೆ (ಚಿತ್ರ ೨೨೮-೩). ಇದರ ಪೀಠದಲ್ಲಿ ಗಣಪತಿಯ ವಾಹನವಾದ ಇಲಿಯ ಉಬ್ಬುಶಿಲ್ಪವು ಇರುವುದನ್ನು ಕಾಣಬಹುದು. ಈ ದೀಪಸ್ತಂಭವನ್ನು ಸುಣ್ಣ ಬಣ್ಣಗಳಿಂದ ಅಲಂಕರಿಸಲಾಗಿದೆ.

ಚಾಮರಾಜನಗರ ಜಿಲ್ಲೆಯ ತೆರಕಣಾಂಬಿಯಲ್ಲಿ ಶ್ರೀ ಲಕ್ಷ್ಮೀವರದರಾಜಸ್ವಾಮಿ ದೇವಾಲಯವಿದೆ. ಈ ದೇವಾಲಯವು ವೈಷ್ಣವ ಧರ್ಮದ ದೇವಾಲಯವಾಗಿದೆ. ಇಲ್ಲಿರುವ ದೀಪಸ್ತಂಭಕ್ಕೆ ಪೀಠವಿಲ್ಲ. ಸ್ತಂಭದ ಕೆಳಗಡೆಯ ಚೌಕಾಕಾರದ ಭಾಗದಲ್ಲಿ ದೇವಮೂರ್ತಿಗೆ ಅಭಿಮುಖವಾಗಿ ಗರುಡನ ಶಿಲ್ಪವಿದೆ (ಚಿತ್ರ ೨೨೯). ಇದರ ಮೇಲೆ ಮಾಲಸ್ಥಾನ, ನಂತರ ನಾಗಬಂಧದ ರಚನಗಳಿವೆ. ನಾಗಬಂಧದ ನಂತರದ ಸ್ಥಾನವಾದ ಅಷ್ಟಭುಜವನ್ನು ಪಟ್ಟಿಕೆಯ ರೂಪದಲ್ಲಿ ಇಲ್ಲಿ ಬಳಸಲಾಗಿದೆ. ಈ ಪಟ್ಟಿಕೆಯು ವಿನ್ಯಾಸದ ಕೆತ್ತನೆಯಿಂದ ಕೂಡಿದೆ. ಬಹಳ ಸುಂದರವಾದ ಕೆತ್ತನೆಯನ್ನು ಈ ಸ್ತಂಭವು ಹೊಂದಿದೆ.

ಚಾಮರಾಜನಗರದಲ್ಲಿರುವ ಶ್ರೀ ಚಾಮರಾಜೇಶ್ವರ ದೇವಾಲಯದ ಎದುರಿಗೆ ದೀಪಸ್ತಂಭವಿದೆ. ಇದು ಶೈವ ಧರ್ಮದ ದೇವಾಲಯವಾಗಿದೆ. ಈ ದೀಪಸ್ತಂಭದಲ್ಲಿ ದೇವಮೂರ್ತಿಗೆ ಅಭಿಮುಖವಾಗಿ ನಂದಿಯ ಉಬ್ಬುಶಿಲ್ಪವು ಇರುವುದನ್ನು ನೋಡಬಹುದು



ಚಿತ್ರ ೨೪೬-೧



ಚಿತ್ರ ೨೪೬-೨



ಚಿತ್ರ ೨೪೬-೩



ಚಿತ್ರ ೨೪೬-೪

(ಚಿತ್ರ ೨೩೦). ಉಳಿದ ಮೂರೂ ಕಡೆಗಳಲ್ಲಿ ಯಾವುದೇ ಶಿಲ್ಪಗಳಿಲ್ಲ. ಈ ನಂದಿಯ ಶಿಲ್ಪಕ್ಕೆ ಕಪ್ಪು ಬಣ್ಣವನ್ನು ಬಳಿಯಲಾಗಿದೆ. ಇದು ಒಂದು ಅಡಿಯ ಎತ್ತರವನ್ನು ಹೊಂದಿದೆ. ಈ ದೀಪಸ್ತಂಭಕ್ಕೆ ಅಂಟಿಕೊಂಡಂತೆ ಪುಟ್ಟ ನಂದಿಯ ಸ್ತಂಭವನ್ನು ಸ್ಥಾಪಿಸಲಾಗಿದೆ.

ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಶ್ರೀ ಸೌಮ್ಯಕೇಶವ ದೇವಾಲಯವಿದೆ. ಸೌಮ್ಯಕೇಶವ ದೇವಾಲಯವು ವೈಷ್ಣವ ಧರ್ಮಕ್ಕೆ ಸೇರಿದ ದೇವಾಲಯವಾಗಿದೆ. ಈ ದೇವಾಲಯದ ಎದುರಿಗೆ ಇರುವ ದೀಪಸ್ತಂಭವು ಬಹಳ ಸುಂದರವಾದ ಕೆತ್ತನೆಯನ್ನು ಒಳಗೊಂಡಿದೆ. ದೀಪಸ್ತಂಭದಲ್ಲಿ ದೇವಾಲಯಕ್ಕೆ ಅಭಿಮುಖವಾಗಿರುವ ಕಡೆ ಕೈಮುಗಿದು ನಿಂತಿರುವ ಗರುಡನ ಶಿಲ್ಪವಿದೆ (ಚಿತ್ರ ೨೩೧-೧). ಇದರ ನಂತರದ ಸ್ಥಳದಲ್ಲಿ ಮುಲಮೂರ್ತಿಯ ಕಡೆ ಮುಖ ಮಾಡಿ ನಮಸ್ಕರಿಸುತ್ತಾ ನಿಂತಿರುವ ಹನುಮಂತನ ಸುಂದರವಾದ ಉಬ್ಬುಶಿಲ್ಪವು ಇರುವುದನ್ನು ನೋಡಬಹುದು (ಚಿತ್ರ ೨೩೧-೨). ಗರುಡನ ಶಿಲ್ಪದ ವಿರುದ್ಧ ದಿಕ್ಕಿನಲ್ಲಿ ಊರ್ಧ್ವಪುಂಡ್ರದ ಉಬ್ಬು ಕೆತ್ತನೆಯು ಇದೆ (ಚಿತ್ರ ೨೩೧-೩). ಇದರಲ್ಲಿ ಮಧ್ಯದಲ್ಲಿ ಮೂರು ನಾಮದ ರಚನೆಯು ಇದ್ದು ಅದರ ಅಕ್ಕ ಪಕ್ಕಗಳಲ್ಲಿ ಶಂಖ ಮತ್ತು ಚಕ್ರದ ಕೆತ್ತನೆಯು ಇದೆ. ಸ್ತಂಭದ ನಾಲ್ಕನೆಯ ದಿಕ್ಕಿನಲ್ಲಿ ಇಡೀ ದೇಹದ ಸಮೇತವಾಗಿ ಇರುವ ಕೀರ್ತಿಮುಖದ ಉಬ್ಬುಶಿಲ್ಪವು ಇರುವುದು ಕಾಣುತ್ತದೆ (ಚಿತ್ರ ೨೩೧-೪). ಈ ಶಿಲ್ಪಗಳ ಎತ್ತರ ಮೂರು ಅಡಿಗಳು.

ಕೆ.ಆರ್. ಪೇಟೆ ಸಾಸಲು ಎಂಬ ಸ್ಥಳದಲ್ಲಿರುವ ಶಂಭುಲಿಂಗೇಶ್ವರ ದೇವಾಲಯವು ಶೈವ ಧರ್ಮದ ದೇವಾಲಯವಾಗಿದೆ. ಈ ದೇವಾಲಯದ ಎದುರಿಗಿರುವ ದೀಪಸ್ತಂಭದಲ್ಲಿ ನಾಗನ ಉಬ್ಬುಶಿಲ್ಪ ಇರುವುದನ್ನು ಕಾಣುತ್ತೇವೆ (ಚಿತ್ರ ೨೩೨). ಶೈವ ದೇವಾಲಯಗಳಲ್ಲಿ ನಾಗ ಶಿಲ್ಪಗಳು ಹೆಚ್ಚಾಗಿ ಇರುವುದನ್ನು ಕಾಣುತ್ತೇವೆ. ಈ ನಾಗಶಿಲ್ಪವು ಎರಡು ಸುತ್ತು ಹಾಕಿಕೊಂಡು ಹೆಡೆಯನ್ನು ಎತ್ತಿರುವಂತೆ ಕೆತ್ತಲಾಗಿದೆ. ದೇವಾಲಯದ ದೇವಮೂರ್ತಿಗೆ ಅಭಿಮುಖವಾಗಿ ಈ ಶಿಲ್ಪವನ್ನು ಸ್ಥಾಪಿಸಲಾಗಿದೆ.

ಕೆ.ಆರ್. ಪೇಟೆ ತಾಲ್ಲೂಕಿನ ತೆಂಡೇಕೆರೆಯಲ್ಲಿರುವ ವೀರಭದ್ರೇಶ್ವರ ದೇವಾಲಯದ ಎದುರು ಎತ್ತರದ ದಿಪಸ್ತಂಭವಿದೆ. ಈ ದೇವಾಲಯವು ಶೈವ ಧರ್ಮದ ದೇವಾಲಯವಾಗಿದೆ. ಈ ದೀಪಸ್ತಂಭದಲ್ಲಿ ನಂದಿಯ ಉಬ್ಬುಶಿಲ್ಪವು ಇರುವುದನ್ನು ಕಾಣುತ್ತೇವೆ (ಚಿತ್ರ ೨೩೩). ಈ ನಂದಿಯ ಶಿಲ್ಪವು ದೇವಾಲಯದ ದೇವಮೂರ್ತಿಗೆ ಅಭಿಮುಖವಾದ ಸ್ತಂಭದ ಚೌಕಾಕಾರದ ಭಾಗದಲ್ಲಿ ಇದೆ. ಉಳಿದ ಮೂರು ಕಡೆಗಳಲ್ಲಿ ಶಿಲ್ಪಗಳಿಲ್ಲ.

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯಲ್ಲಿ ಪೇಟೆ ಆಂಜನೇಯ ದೇವಾಲಯವಿದೆ. ಈ ದೇವಾಲಯದ ಹೊರ ಆವರಣದಲ್ಲಿ ಇಪ್ಪತ್ತು ಅಡಿಯ ದೀಪಸ್ತಂಭವಿದ್ದು ಇದಕ್ಕೆ ಪೀಠವಿಲ್ಲ (ಚಿತ್ರ ೨೩೪). ದೀಪಸ್ತಂಭದ ಚೌಕಾಕಾರದ ನಾಲ್ಕೂ ಭಾಗಗಳಲ್ಲಿ ವಿನ್ಯಾಸ ಕೆತ್ತನೆ ಇದ್ದು ಇವು ತುಂಬಾ ಅಲಂಕೃತವಾಗಿರುವುದು



ಚಿತ್ರ ೨೪೭-೧



ಚಿತ್ರ ೨೪೭-೨



ಚಿತ್ರ ೨೪೭-೩

ಕಾಣುತ್ತದೆ. ಈ ಸ್ತಂಭದ ಪಟ್ಟಿಕೆಗಳಲ್ಲೂ ಚಿತ್ತಾರಗಳು ಇರುವುದನ್ನು ನೋಡಬಹುದು. ಇದರ ರಚನೆಯಲ್ಲಿ ಚೋಳರ ಕಲಾಕೌಶಲ್ಯದ ಪ್ರಭಾವವು ಇರುವಂತೆ ಕಾಣುತ್ತದೆ.

ಮೇಲುಕೋಟೆಯಲ್ಲಿ ಇರುವ ಪ್ರಸಿದ್ಧವಾದ ದೇವಾಲಯ ಎಂದರೆ ಶ್ರೀ ಚೆಲುವನಾರಾಯಣನ ದೇವಾಲಯ. ಈ ಬೃಹದಾದ ಆಲಯದ ಹೊರಗಡೆ ಎತ್ತರದ ದೀಪಸ್ತಂಭವಿದೆ. ಈ ದೀಪಸ್ತಂಭದ ಚೌಕಾಕಾರದ ಭಾಗದಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಉಬ್ಬುಶಿಲ್ಪಗಳಿವೆ. ದೇವಾಲಯದ ದೇವಮೂರ್ತಿಗೆ ಅಭಿಮುಖವಾಗಿ ಗರುಡನ ಶಿಲ್ಪವಿದ್ದು ಗರುಡನು ಕೈ ಮುಗಿದು ನಮಸ್ಕರಿಸುತ್ತಿರುವಂತೆ ಶಿಲ್ಪದ ರಚನೆಯನ್ನು ಮಾಡಲಾಗಿದೆ.

ಸ್ತಂಭದ ನಂತರದ ದಿಕ್ಕಿನಲ್ಲಿ ಹಂಸದ ಉಬ್ಬುಶಿಲ್ಪವಿದ್ದು ಇದರ ಮೇಲೆ ಬಣ್ಣವನ್ನು ಲೇಪಿಸಿರುವುದರಿಂದ ಅಸ್ಪಷ್ಟವಾಗಿ ಕಾಣುತ್ತದೆ. ಸ್ತಂಭದ ಮೂರನೆಯ ದಿಕ್ಕಿನಲ್ಲಿ ದೇಹವನ್ನು ಹೊಂದಿರುವ ಕೀರ್ತಿಮುಖದ ಉಬ್ಬುಶಿಲ್ಪ ಇರುವುದನ್ನು ಕಾಣಬಹುದು (ಚಿತ್ರ ೨೩೫–೧). ಸ್ತಂಭದ ನಾಲ್ಕನೆಯ ದಿಕ್ಕಿನಲ್ಲಿ ಹನುಮಂತನ ಉಬ್ಬುಶಿಲ್ಪವಿದೆ (ಚಿತ್ರ ೨೩೫–೨). ಈ ಉಬ್ಬುಶಿಲ್ಪದಲ್ಲಿ ಹನುಮಂತನು ದೇವಾಲಯದ ಮೂಲಮೂರ್ತಿಯ ಕಡೆಗೆ ಮುಖ ಮಾಡಿ ನಮಸ್ಕರಿಸುತ್ತಿದ್ದಂತೆ ಇರುವ ಶಿಲ್ಪವು ಇದಾಗಿದೆ. ಈ ಉಬ್ಬುಶಿಲ್ಪಗಳು ಬಹಳ ಸುಂದರವಾದ ಕೆತ್ತನೆಯನ್ನು ಹೊಂದಿವೆ. ಈ ಭಾಗದಲ್ಲಿರುವ ದೀಪಸ್ತಂಭಗಳಲ್ಲಿ ಅತಿ ಎತ್ತರದ ಉಬ್ಬುಶಿಲ್ಪಗಳು ಇವು ಎಂದರೆ ತಪ್ಪಾಗಲಾಗರದು. ದೀಪಸ್ತಂಭಕ್ಕೆ ಮಂಟಪವನ್ನು ಕಟ್ಟಿ ಇದರ ಮೇಲೆ ಗಂಟೆಯನ್ನು ತೂಗುಬಿಡಲಾಗಿದೆ. ಈ ಮಂಟಪದ ನಾಲ್ಕೂ ಸ್ತಂಭಗಳಲ್ಲಿ ಉಬ್ಬುಶಿಲ್ಪಗಳಿವೆ.

ಹಾಸನ ಜಿಲ್ಲೆಯ ಗೊರೂರಿನಲ್ಲಿ ಶ್ರೀ ಯೋಗಾ ನರಸಿಂಹಸ್ವಾಮಿ ದೇವಾಲಯವಿದೆ. ಈ ದೇವಾಲಯವು ಅತ್ಯಂತ ಪ್ರಾಚೀನವಾದುದು. ಈ ದೇವಾಲಯದ ಆವರಣದಲ್ಲಿ ದೀಪಸ್ತಂಭವಿದೆ. ದೀಪಸ್ತಂಭದಲ್ಲಿನ ಚೌಕಾಕಾರದ ರಚನೆಯಲ್ಲಿ ಗರುಡನ ಉಬ್ಬುಶಿಲ್ಪವನ್ನು ನಿರ್ಮಿಸಲಾಗಿತ್ತು. ಪ್ರಸ್ತುತ ಈ ಉಬ್ಬುಶಿಲ್ಪಕ್ಕೆ ಎದುರಾಗಿ ಗರುಡನ ಮೂರ್ತಿಶಿಲ್ಪವನ್ನು ಇರಿಸಲಾಗಿದೆ (ಚಿತ್ರ ೨೩೬–೧). ಇದರ ವಿರುದ್ಧ ದಿಕ್ಕಿನಲ್ಲಿ ಹನುಮಂತನ ಉಬ್ಬುಶಿಲ್ಪವಿದೆ. ಹನುಮಂತನು ಎಡಗೈಯಲ್ಲಿ ಕಮಲವನ್ನು, ಬಲಗೈಯಲ್ಲಿ ಅಭಯ ಮುದ್ರೆಯನ್ನು ಹೊಂದಿದ್ದಾನೆ (ಚಿತ್ರ ೨೩೬–೨). ಇಡೀ ದೀಪಸ್ತಂಭವನ್ನು ಬಣ್ಣದಿಂದ ಅಲಂಕರಿಸಲಾಗಿದೆ.

ಅರಕಲಗೂಡು ತಾಲ್ಲೂಕಿನ ರಾಮನಾಥಪುರದಲ್ಲಿರುವ ಶ್ರೀ ಪಟ್ಟಾಭಿರಾಮ ದೇವಾಲಯವು ದೊಡ್ಡದಾದ ಆವರಣವನ್ನು ಹೊಂದಿದೆ. ದೇವಾಲಯದ ಮುಖ್ಯದ್ವಾರದ ಹೊರಗೆ ದೀಪಸ್ತಂಭವನ್ನು ಸ್ಥಾಪಿಸಲಾಗಿದೆ. ದೀಪಸ್ತಂಭವೂ ಸೇರಿದಂತೆ ಮಂಟಪವೊಂದನ್ನು ನಿರ್ಮಿಸಲಾಗಿದೆ. ದೀಪಸ್ತಂಭದ ಚೌಕಾಕಾರದ ರಚನೆಯಲ್ಲಿ ಉಬ್ಬುಶಿಲ್ಪಗಳು ಇರುವುದನ್ನು ನೋಡಬಹುದು. ದೇವಾಲಯದ ಮೂಲಮೂರ್ತಿಗೆ ಅಭಿಮುಖವಾಗಿ ಹನುಮಂತನ



ಚಿತ್ರ ೨೪೭-೪



ಚಿತ್ರ ೨೪೭-೫



ಚಿತ್ರ ೨೪೮-೧



ಚಿತ್ರ ೨೪೮-೨

ಉಬ್ಬುಶಿಲ್ಪವಿದೆ (ಚಿತ್ರ ೨೩೭-೧). ಹನುಮಂತನು ಎಡಗೈಯಲ್ಲಿ ಗಧೆಯನ್ನು ಬಲಗೈಯಲ್ಲಿ ಅಭಯ ಹಸ್ತವನ್ನು ಹೊಂದಿದ್ದಾನೆ. ಹನುಮಂತನ ಬಾಲದ ತುದಿಯಲ್ಲಿ ಗಂಟೆಯನ್ನು ತೂಗಿಬಿಟ್ಟಂತೆ ರಚನೆಯು ಇದೆ.

ದೀಪಸ್ತಂಭದ ಎರಡೂ ಕಡೆಗಳಲ್ಲಿ ದೇವಾಲಯದ ಮೂಲಮೂರ್ತಿ ಕೈ ಮುಗಿಯುತ್ತಿದ್ದಂತೆ ಒಂದು ಕಡೆ ಗರುಡನ ಉಬ್ಬುಶಿಲ್ಪವಿದ್ದರೆ (ಚಿತ್ರ ೨೩೭-೨) ಮತ್ತೊಂದು ಕಡೆ ಹನುಮಂತನ ಉಬ್ಬುಶಿಲ್ಪಗಳು ಇರುವುದನ್ನು ನೋಡಬಹುದು (ಚಿತ್ರ ೨೩೭-೩). ದೀಪಸ್ತಂಭದ ನಾಲ್ಕನೆಯ ಭಾಗದಲ್ಲಿ ಉಬ್ಬುಶಿಲ್ಪದ ರಚನೆ ಇರುವುದಿಲ್ಲ.

ಮಡಿಕೇರಿ ಜಿಲ್ಲೆಯಲ್ಲಿರುವ ಭಾಗಮಂಡಲದ ಭಗಂಡೇಶ್ವರ ದೇವಾಲಯದ ಆವರಣದಲ್ಲಿ ಸುಬ್ರಹ್ಮಣ್ಯೇಶ್ವರ ಮತ್ತು ವಿಷ್ಣುವಿನ ದೇವಾಲಯಗಳಿವೆ. ಇಲ್ಲಿ ಭಗಂಡೇಶ್ವರ ಮೂರ್ತಿಗೆ ಎದುರಾಗಿ ಬಲಿಪೀಠವಿದ್ದರೆ, ವಿಷ್ಣುವಿಗೆ ಎದುರಾಗಿ ತುಳಸಿಯ ಬೃಂದಾವನವಿದೆ. ಸುಬ್ರಹ್ಮಣ್ಯೇಶ್ವರ ದೇವರಿಗೆ ಎದುರಾಗಿ ಹೊರಗೆ ದೀಪಸ್ತಂಭವಿದೆ. ಇದು ವೃಕ್ಷದೀಪದಂತೆ ರಚನೆಗೊಂಡಿರುವುದನ್ನು ಕಾಣಬಹುದು. ಈ ದೀಪಸ್ತಂಭದ ತುದಿಯಲ್ಲಿ ದೀಪದ ಮಲ್ಲಿಯ ಶಿಲ್ಪವಿದೆ (ಚಿತ್ರ ೨೩೮). ದೀಪದ ಮಲ್ಲಿ ತನ್ನ ಕೈಯಲ್ಲಿ ಒಂದು ಹಣತೆಯನ್ನು ಹಿಡಿದಿರುವಂತೆ ಶಿಲ್ಪರಚನೆಯನ್ನು ಮಾಡಲಾಗಿದೆ. ವೃಕ್ಷದೀಪ ಮತ್ತು ದೀಪದ ಮಲ್ಲಿ ಶೈಲಿಗಳೆರಡೂ ಇದರಲ್ಲಿ ಸಮೀಕರಿಸಿರುವುದು ಕಾಣುತ್ತದೆ.

ತುಮಕೂರು ಜಿಲ್ಲೆಯ ಕೈದಾಳದಲ್ಲಿ ಶ್ರೀ ಚೆನ್ನಕೇಶವ ದೇವಾಲಯವಿದೆ. ಈ ದೇವಾಲಯದ ಮುಖ್ಯದ್ವಾರದ ಹೊರಗೆ ದೀಪಸ್ತಂಭವಿದೆ. ಈ ದೀಪಸ್ತಂಭದ ಚೌಕಾಕಾರದ ಭಾಗಗಳಲ್ಲಿ ನಾಲ್ಕೂ ಕಡೆ ಉಬ್ಬುಶಿಲ್ಪಗಳ ರಚನೆ ಇರುವುದನ್ನು ಕಾಣುತ್ತೇವೆ. ದೇವಾಲಯದ ಮೂಲಮೂರ್ತಿಗೆ ಅಭಿಮುಖವಾಗಿ ಕಮಲ ಪುಷ್ಪದ ರಚನೆಯು ಇರುವುದನ್ನು ಕಾಣುತ್ತೇವೆ (ಚಿತ್ರ ೨೩೯-೧). ಇದರ ನಂತರದ ದಿಕ್ಕಿನಲ್ಲಿ ಶಂಖದ ಉಬ್ಬುಶಿಲ್ಪವಿದೆ (ಚಿತ್ರ ೨೩೯-೨). ಸ್ತಂಭದ ಮೂರನೆಯ ದಿಕ್ಕಿನಲ್ಲಿ ಮತ್ತೊಂದು ವಿನ್ಯಾಸದ ಕಮಲ ಪುಷ್ಪದ ರಚನೆಯು ಇದ್ದು (ಚಿತ್ರ ೨೩೯-೩) ಸ್ತಂಭದ ನಾಲ್ಕನೆಯ ದಿಕ್ಕಿನಲ್ಲಿ ಚಕ್ರದ ಉಬ್ಬುಶಿಲ್ಪವು ಇರುವುದು ಕಾಣುತ್ತದೆ (ಚಿತ್ರ ೨೩೯-೪). ಇವುಗಳ ಎತ್ತರ ಸುಮಾರು ಒಂದು ಅಡಿಯಾಗಿದೆ. ಇದು ವೈಷ್ಣವ ಧರ್ಮದ ದೇವಾಲಯವಾಗಿದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಬಸವೇಶ್ವರ ದೇವಾಲಯವಿದೆ. ಈ ದೇವಾಲಯದ ಹೊರಾವರಣದಲ್ಲಿ ದೀಪಸ್ತಂಭವಿದೆ. ಈ ದೇವಾಲಯವು ಶೈವ ಧರ್ಮದ ದೇವಾಲಯವಾಗಿದೆ. ದೇವಾಲಯದ ಮೂಲಮೂರ್ತಿಗೆ ಅಭಿಮುಖವಾಗಿರುವ ಸ್ತಂಭದ ಚೌಕಾಕಾರದ ಸ್ಥಳದಲ್ಲಿ ಉಬ್ಬುಶಿಲ್ಪದ ರಚನೆಯು ಇರುವುದನ್ನು ಕಾಣುತ್ತೇವೆ (ಚಿತ್ರ ೨೪೦). ಸ್ತಂಭದ ಉಳಿದ ಮೂರು ಭಾಗಗಳಲ್ಲಿ ಶಿಲ್ಪಗಳಿಲ್ಲ. ಸ್ತಂಭದಲ್ಲಿ ಇರುವ ಉಬ್ಬುಶಿಲ್ಪಗಳನ್ನು ಎರಡು ಹಂತಗಳಲ್ಲಿ ನಿರ್ಮಿಸಲಾಗಿದೆ.

ಚೌಕಾಕಾರದ ಕೆಳಗಿನ ರಚನೆಯಲ್ಲಿ ಸ್ತ್ರೀ ಪುರುಷರ ಉಬ್ಬುಶಿಲ್ಪವು ಇದೆ.



ಚಿತ್ರ ೨೪೪-೩



ಚಿತ್ರ ೨೪೪-೪



ಚಿತ್ರ ೨೪೪-೫



ಚಿತ್ರ ೨೪೪-೬

ಇದರಲ್ಲಿ ಇರುವ ಸ್ತ್ರೀ ಮತ್ತು ಪುರುಷರು ದೇವಾಲಯದ ಮೂಲಮೂರ್ತಿಗೆ ಕೈ ಮುಗಿಯುತ್ತಾ ನಿಂತಂತೆ ಕೆತ್ತನೆಯನ್ನು ಮಾಡಲಾಗಿದೆ. ದೇವಾಲಯವನ್ನು ನಿರ್ಮಿಸಿದವರ ಇಲ್ಲವೇ ದೇವಾಲಯದ ಪೂಜೆಗೆ ದಾನ ನೀಡಿದಂತವರ ಜ್ಞಾಪಕಾರ್ಥವಾಗಿ ಈ ಉಬ್ಬುಶಿಲ್ಪವನ್ನು ರಚಿಸಿರಬೇಕು. ಇದರ ಮೇಲಿನ ಭಾಗದಲ್ಲಿ ನಂದಿಯ ಉಬ್ಬುಶಿಲ್ಪದ ರಚನೆಯು ಇರುವುದನ್ನು ನೋಡಬಹುದು. ನಂದಿಯು ಮುಖವು ಎಡಕ್ಕೆ ಮುಖಮಾಡಿದಂತೆ ಕೆತ್ತಲಾಗಿದೆ.

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ಕೈಲಾಸೇಶ್ವರ ದೇವಾಲಯವಿದೆ. ಇದು ಶೈವ ಧರ್ಮದ ದೇವಾಲಯವಾಗಿದೆ. ಈ ದೇವಾಲಯದ ಎದುರು ಸಿಮೆಂಟ್ ಗಾರೆ, ಇಟ್ಟಿಗೆಯನ್ನು ಬಳಸಿಕೊಂಡು ನಿರ್ಮಿಸಿರುವ ನೂತನವಾದ ದೀಪಸ್ತಂಭವಿದೆ. ಪ್ರಾಚೀನ ಕಾಲದಲ್ಲಿ ನಿರ್ಮಿಸಲಾಗಿದ್ದ ದೀಪಸ್ತಂಭದ ಭಾಗವು ದೇವಾಲಯದ ಹೊರ ಆವರಣದಲ್ಲಿ ಬಿದ್ದಿರುವುದನ್ನು ಕಾಣಬಹುದು. ಈ ಸ್ತಂಭವು ಎರಡು ಅಡಿಗಳ ಅಗಲವನ್ನು ಹೊಂದಿದೆ. ಇಲ್ಲಿ ಬಿದ್ದಿರುವ ದೀಪಸ್ತಂಭದ ಮೂರು ಭಾಗಗಳಲ್ಲಿ ಇರುವ ಉಬ್ಬುಶಿಲ್ಪಗಳನ್ನು ನೋಡಬಹುದು.

ಸ್ತಂಭದ ಚೌಕಾಕಾರದ ಒಂದು ಭಾಗದಲ್ಲಿ ತುರುವೇಕೆರೆಯ ಬಸವೇಶ್ವರ ದೇವಾಲಯದ ದೀಪಸ್ತಂಭದಲ್ಲಿದ್ದಂತೆ ಶಿಲ್ಪ ರಚನೆಯು ಇರುವುದನ್ನು ಕಾಣುಬಹುದು (ಚಿತ್ರ ೨೪೧-೧). ಈ ಚೌಕಾಕಾರದ ಕೆಳಗಿನ ಭಾಗದಲ್ಲಿ ಸ್ತ್ರೀ, ಪುರುಷರ ಶಿಲ್ಪವಿದ್ದು ಇವರಿಬ್ಬರು ದೇವಾಲಯದ ಮೂಲಮೂರ್ತಿಗೆ ಕೈ ಮುಗಿಯುತ್ತಿರುವಂತೆ ಚಿತ್ರಿಸಲಾಗಿದೆ. ಈ ಇಬ್ಬರೂ ಸಕಲ ಆಭರಣಗಳನ್ನು ಧರಿಸಿದ್ದಾರೆ. ಇವರು ರಾಜರಾಣಿಯರಂತೆ ಕಾಣುತ್ತಾರೆ. ಇದರ ಮೇಲಿನ ಭಾಗದಲ್ಲಿ ನಂದಿಯ ಉಬ್ಬುಶಿಲ್ಪವಿದೆ. ಈ ನಂದಿಯು ಬಲಕ್ಕೆ ಮುಖ ಮಾಡಿದಂತೆ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ.

ಸ್ತಂಭದ ಮತ್ತೊಂದು ಬದಿಯಲ್ಲಿ ಲಿಂಗದ ಉಬ್ಬುಶಿಲ್ಪವಿದೆ (ಚಿತ್ರ ೨೪೧-೨). ಈ ಲಿಂಗವನ್ನು ಸರ್ಪವು ಸುತ್ತಿಕೊಂಡಂತೆ ಶಿಲ್ಪ ರಚನೆಯನ್ನು ಮಾಡಲಾಗಿದೆ. ದೀಪಸ್ತಂಭದ ಮೂರನೆಯ ಭಾಗದಲ್ಲಿ ಕಮಲ ಪುಷ್ಪದ ಉಬ್ಬುಶಿಲ್ಪವನ್ನು ಮಾಡಲಾಗಿದೆ (ಚಿತ್ರ ೨೪೧-೩). ಈ ಉಬ್ಬುಶಿಲ್ಪಗಳು ಸುಮಾರು ಒಂದೂವರೆ ಅಗಲವನ್ನು ಹೊಂದಿವೆ. ದೀಪಸ್ತಂಭದ ನಾಲ್ಕನೆಯ ದಿಕ್ಕಿನಲ್ಲಿರುವ ಉಬ್ಬುಶಿಲ್ಪವು ಗಣಪತಿಯ ಶಿಲ್ಪವಾಗಿರುವ ಸಾಧ್ಯತೆ ಇದೆ. ಈ ಭಾಗವನ್ನು ನೋಡಲಾಗುವುದಿಲ್ಲ. ಈ ಉಬ್ಬುಶಿಲ್ಪಗಳ ಮೇಲೆ ನಾಲ್ಕು ಮೂಲೆಗಳಲ್ಲಿ ನಾಗಬಂಧದ ರಚನೆಯಿರುವುದನ್ನು ನೋಡಬಹುದು. ದೀಪಸ್ತಂಭದಲ್ಲಿರುವ ಉಬ್ಬುಶಿಲ್ಪಗಳು ಸೂಕ್ಷ್ಮವಾದ ಕಲಾಕೌಶಲ್ಯತೆಯನ್ನು ಹೊಂದಿವೆ.

ಗುಬ್ಬಿ ತಾಲ್ಲೂಕಿನ ಕಡಬದಲ್ಲಿ ಇರುವ ಶ್ರೀ ಲಕ್ಷ್ಮೀ ಜನಾರ್ಧನ ದೇವಾಲಯವು ಪ್ರಸಿದ್ಧವಾದುದು. ಇದು ವೈಷ್ಣವ ಧರ್ಮದ ದೇವಾಲಯವಾಗಿದೆ. ಈ ದೇವಾಲಯವನ್ನು



ಚಿತ್ರ ೨೪೯-೧



ಚಿತ್ರ ೨೪೯-೨



ಚಿತ್ರ ೨೪೯-೩



ಚಿತ್ರ ೨೪೯-೪

ಶ್ರೀ ರಾಮನ ದೇವಾಲಯ ಎಂದೂ ಕರೆಯುತ್ತಾರೆ. ದೇವಾಲಯದ ಹೊರ ಆವರಣದಲ್ಲಿ ಎತ್ತರದ ದೀಪಸ್ತಂಭವಿದೆ. ಈ ದೀಪಸ್ತಂಭದ ಚೌಕಾಕಾರದ ರಚನೆಯಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಈ ದೀಪಸ್ತಂಭದಲ್ಲಿ ಇರುವ ಚೌಕಾಕಾರದ ಭಾಗದಲ್ಲಿ ದೇವಾಲಯದ ಮೂಲಮೂರ್ತಿಗೆ ಅಭಿಮುಖವಾಗಿ ಗರುಡನ ಉಬ್ಬುಶಿಲ್ಪವಿದೆ (ಚಿತ್ರ ೨೪೨-೧). ದೇವಮೂರ್ತಿಗೆ ಅಭಿಮುಖವಾಗಿರುವುದರಿಂದ ಈ ಶಿಲ್ಪದಲ್ಲಿ ಗರುಡನು ಕೈ ಮುಗಿದು ನಮಸ್ಕರಿಸುತ್ತಾ ನಿಂತಿದ್ದಾನೆ. ಇದರ ನಂತರದ ಭಾಗದಲ್ಲಿ ಹಂಸದ ಶಿಲ್ಪವಿದ್ದು ಹಂಸವು ಕೊಕ್ಕಿನಲ್ಲಿ ಹಾವನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ (ಚಿತ್ರ ೨೪೨-೨).

ಗರುಡನಿಗೆ ವಿರುದ್ಧವಾದ ದಿಕ್ಕಿನಲ್ಲಿ ಊರ್ಧ್ವಪುಂಡ್ರದ ಉಬ್ಬುಶಿಲ್ಪವನ್ನು ನೋಡಬಹುದು (ಚಿತ್ರ ೨೪೨-೩). ಇದರಲ್ಲಿ ಮಧ್ಯದಲ್ಲಿ ನಾಮದ ಚಿಹ್ನೆಯಿದ್ದು ಇದರ ಎರಡೂ ಕಡೆಗಳಲ್ಲಿ ಶಂಖ, ಚಕ್ರಗಳಿವೆ. ಈ ಉಬ್ಬುಶಿಲ್ಪದ ಮೇಲೆ ಸೂರ್ಯ, ಚಂದ್ರರ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ದೀಪಸ್ತಂಭದ ನಾಲ್ಕನೆಯ ದಿಕ್ಕಿನಲ್ಲಿ ಕಮಲ ಪುಷ್ಪದ ಉಬ್ಬುಶಿಲ್ಪವಿದೆ (ಚಿತ್ರ ೨೪೨-೪). ದೀಪಸ್ತಂಭದ ಚೌಕಾಕಾರದ ರಚನೆಯ ಮೇಲಿನ ನಾಲ್ಕೂ ಮೂಲೆಗಳಲ್ಲಿ ನಾಗಬಂಧದ ರಚನೆಯನ್ನು ಮಾಡಲಾಗಿದೆ. ಇದರ ಮೇಲೆ ಇರುವ ಪಟ್ಟಿಕೆಯ ಭಾಗದಲ್ಲಿ ನಾಲ್ಕು ದಳದ ಪುಷ್ಪಗಳ ವಿನ್ಯಾಸವು ಇರುವುದನ್ನು ನೋಡಬಹುದು. ಉಬ್ಬುಶಿಲ್ಪಗಳು ಇರುವ ಭಾಗವನ್ನು ಬಣ್ಣಗಳ ಸಹಾಯದಿಂದ ಇನ್ನಷ್ಟು ಸುಂದರಗೊಳಿಸಲಾಗಿದೆ.

ಬೆಂಗಳೂರು ಜಿಲ್ಲೆಯ ಆನೇಕಲ್ಲು ತಾಲ್ಲೂಕಿನ ಬನ್ನೇರುಘಟ್ಟದಲ್ಲಿ ಸಂಪಂಗಿರಾಮ ದೇವಾಲಯವಿದೆ. ಸಂಪಂಗಿರಾಮ ದೇವಾಲಯವನ್ನು ಚಂಪಕಧಾಮ ದೇವಾಲಯ ಎಂದೂ ಕರೆಯುತ್ತಾರೆ. ಈ ದೇವಾಲಯವು ವೈಷ್ಣವ ಧರ್ಮದ ದೇವಾಲಯವಾಗಿದೆ. ಈ ದೇವಾಲಯಕ್ಕೆ ಸುಮಾರು ನೂರು ಮೀಟರ್ ದೂರದಲ್ಲಿ ಎತ್ತರದ ದೀಪಸ್ತಂಭವಿದೆ. ಈ ದೀಪಸ್ತಂಭದ ಚೌಕಾಕಾರದ ಭಾಗದ ನಾಲ್ಕು ದಿಕ್ಕುಗಳಲ್ಲಿ ಎರಡು ಅಡಿ ಎತ್ತರದ ಉಬ್ಬುಶಿಲ್ಪಗಳಿವೆ.

ದೇವಾಲಯಕ್ಕೆ ಅಭಿಮುಖವಾಗಿ ಚಕ್ರದ ಉಬ್ಬುಶಿಲ್ಪವಿದೆ (ಚಿತ್ರ ೨೪೩-೧). ಇದಕ್ಕೆ ಪ್ರದಕ್ಷಿಣ ಪಥವನ್ನು ಹಾಕಿದಾಗ ಇರುವ ದಿಕ್ಕಿನಲ್ಲಿ ಹನುಮಂತನ ಉಬ್ಬುಶಿಲ್ಪದ ರಚನೆಯು ಇದೆ (ಚಿತ್ರ ೨೪೩-೨). ಹನುಮಂತನು ದೇವಾಲಯದ ಕಡೆ ಮುಖ ಮಾಡಿ ಎರಡೂ ಕೈಯನ್ನು ಜೋಡಿಸಿ ನಮಸ್ಕರಿಸುತ್ತಿರುವಂತೆ ಶಿಲ್ಪ ರಚನೆಯನ್ನು ಮಾಡಲಾಗಿದೆ. ಚಕ್ರದ ಉಬ್ಬುಶಿಲ್ಪಕ್ಕೆ ವಿರುದ್ಧ ದಿಕ್ಕಿನಲ್ಲಿ ಶಂಖದ ಉಬ್ಬುಶಿಲ್ಪವಿದೆ (ಚಿತ್ರ ೨೪೩-೩). ಇದರ ನಂತರದ ನಾಲ್ಕನೆಯ ದಿಕ್ಕಿನಲ್ಲಿ ಗರುಡನ ಶಿಲ್ಪವಿದೆ (ಚಿತ್ರ ೨೪೩-೪). ಗರುಡನ ಉಬ್ಬುಶಿಲ್ಪದಲ್ಲಿ ಗರುಡನು ಹನುಮಂತನ ಉಬ್ಬುಶಿಲ್ಪದಲ್ಲಿ ಇರುವಂತೆ ದೇವಾಲಯದ ಮೂಲಮೂರ್ತಿಯ ಕಡೆ ಮುಖಮಾಡಿ ಎರಡೂ ಕೈ



ಚಿತ್ರ ೨೫೦-೧



ಚಿತ್ರ ೨೫೦-೨



ಚಿತ್ರ ೨೫೧-೧



ಚಿತ್ರ ೨೫೧-೨

ಜೋಡಿಸಿ ನಮಸ್ಕರಿಸುತ್ತಿದ್ದಾನೆ. ಈ ಉಬ್ಬುಶಿಲ್ಪಗಳು ವಾತಾವರಣದ ಹವಾಮಾನದ ಪರಿಣಾಮವಾಗಿ ಅಸ್ಪಷ್ಟವಾಗಿ ಗೋಚರಿಸುತ್ತವೆ.

ಸಂಪಂಗಿರಾಮ ದೇವಾಲಯದ ಆವರಣದಲ್ಲಿ ಮತ್ತೊಂದು ದೀಪಸ್ತಂಭವಿದೆ. ಈ ದೀಪಸ್ತಂಭದಲ್ಲಿ ಮುಖ್ಯದ್ವಾರಕ್ಕೆ ಅಭಿಮುಖವಾಗಿ ಗಣಪತಿಯ ಶಿಲ್ಪವನ್ನು ಇರಿಸಲಾಗಿದೆ. ಈ ಮೂರ್ತಿ ಶಿಲ್ಪಕ್ಕೆ ಗೂಡನ್ನು ಸಹ ನಿರ್ಮಿಸಲಾಗಿದೆ. ಇನ್ನುಳಿದಂತೆ ಸ್ತಂಭದಲ್ಲಿ ಯಾವುದೇ ಶಿಲ್ಪಗಳಿಲ್ಲ.

ಬೆಂಗಳೂರಿನ ಚಿಕ್ಕಜಾಲವು ದೇವನಹಳ್ಳಿಯ ರಸ್ತೆಯಲ್ಲಿದೆ. ಇಲ್ಲಿ ಶ್ರೀ ಚೆನ್ನಕೇಶವ ದೇವಾಲಯವಿದೆ. ಇದು ವೈಷ್ಣವ ಧರ್ಮದ ಅತ್ಯಂತ ಪುರಾತನವಾದ ದೇವಾಲಯವಾಗಿದೆ. ಈ ದೇವಾಲಯದ ಎದುರು ಎರಡು ದೀಪಸ್ತಂಭಗಳಿವೆ. ಒಂದು ದೀಪಸ್ತಂಭವು ದೇವಾಲಯಕ್ಕೆ ಹತ್ತಿರವಾಗಿದೆ. ಈ ಎರಡು ದೀಪಸ್ತಂಭಗಳನ್ನು ಒಂದರ ಹಿಂದೆ ಒಂದಂತೆ ಸ್ಥಾಪಿಸಲಾಗಿದೆ.

ದೇವಾಲಯಕ್ಕೆ ಹತ್ತಿರವಿರುವ ದೀಪಸ್ತಂಭದ ಚೌಕಾಕಾರದ ಭಾಗದಲ್ಲಿ ಉಬ್ಬುಶಿಲ್ಪಗಳಿವೆ. ಈ ದೀಪಸ್ತಂಭದಲ್ಲಿ ದೇವಾಲಯಕ್ಕೆ ಅಭಿಮುಖವಾಗಿ ಶಂಖದ ಉಬ್ಬುಶಿಲ್ಪವಿದೆ (ಚಿತ್ರ ೨೪೪–೧). ಇದರ ನಂತರದ ದಿಕ್ಕಿನಲ್ಲಿ ಗರುಡನ ನಿಂತಿರುವ ಶಿಲ್ಪ ರಚನೆಯು ಇದ್ದು ಗರುಡನು ದೇವಾಲಯದ ಮೂರ್ತಿಯ ಕಡೆ ಮುಖಮಾಡಿ ನಮಸ್ಕರಿಸುತ್ತಿರುವಂತೆ ರಚಿಸಲಾಗಿದೆ (ಚಿತ್ರ ೨೪೪–೨).

ದೇವಾಲಯಕ್ಕೆ ಅಭಿಮುಖದ ವಿರುದ್ಧ ದಿಕ್ಕಿನಲ್ಲಿ ಕೊಳಲನ್ನು ಊದುತ್ತಾ ನಿಂತಿರುವ ಗೋಪಾಲಕೃಷ್ಣನ ಉಬ್ಬುಶಿಲ್ಪದ ರಚನೆಯು ಇದೆ (ಚಿತ್ರ ೨೪೪–೩). ದೀಪಸ್ತಂಭದ ನಾಲ್ಕನೆಯ ದಿಕ್ಕಿನಲ್ಲಿ ಹನುಮಂತನು ನಿಂತಿರುವಂತೆ ಶಿಲ್ಪ ರಚನೆಯನ್ನು ಮಾಡಲಾಗಿದೆ (ಚಿತ್ರ ೨೪೪–೪). ಇಲ್ಲಿರುವ ಹನುಮಂತನ ಶಿಲ್ಪವು ದೇವಾಲಯಕ್ಕೆ ಮುಖಮಾಡದೆ ಇದರ ವಿರುದ್ಧ ದಿಕ್ಕಿಗೆ ಮುಖ ಮಾಡಿ ನಮಸ್ಕರಿಸುತ್ತಿರುವಂತೆ ಶಿಲ್ಪವನ್ನು ರಚಿಸಲಾಗಿದೆ. ಇದು ದೇವಾಲಯದ ಆವರಣದಲ್ಲಿ ಇರುವ ಇನ್ನೊಂದು ದೀಪಸ್ತಂಭಕ್ಕೆ ನಮಸ್ಕರಿಸುತ್ತಿರುವಂತೆ ಭಾಸವಾಗುತ್ತದೆ. ಇದು ಪುರಾತನ ದೇವಾಲಯವಾದ್ದರಿಂದ ಉಬ್ಬುಶಿಲ್ಪಗಳು ಒರಟಾಗಿರುವುದರ ಜೊತೆಗೆ ಅಸ್ಪಷ್ಟವಾಗಿ ಕಾಣುತ್ತವೆ. ಈ ಭಾಗವನ್ನು ಬಣ್ಣದಿಂದ ಅಲಂಕರಿಸಲಾಗಿತ್ತೆಂದು ತೋರುತ್ತದೆ. ಉಬ್ಬುಶಿಲ್ಪಗಳಲ್ಲಿ ಅಲ್ಲಲ್ಲಿ ಬಣ್ಣಗಳು ಉಳಿದಿರುವುದನ್ನು ನೋಡಬಹುದು.

ದೇವಾಲಯದ ಆವರಣದಲ್ಲಿ ಇರುವ ಮತ್ತೊಂದು ದೀಪಸ್ತಂಭವು ಸ್ವಲ್ಪ ದೊಡ್ಡದಾಗಿದೆ. ಈ ದೀಪಸ್ತಂಭದಲ್ಲಿ ಇರುವ ಚೌಕಾಕಾರದ ರಚನೆಯಲ್ಲಿ ಉಬ್ಬುಶಿಲ್ಪಗಳಿವೆ. ಇದರಲ್ಲಿ ಎರಡು ಹಂತಗಳಲ್ಲಿ ಶಿಲ್ಪಗಳನ್ನು ರಚಿಸಿರುವುದನ್ನು ನೋಡಬಹುದು. ಕೆಳಗಿನ ಭಾಗದಲ್ಲಿ ದೇವಾಲಯಕ್ಕೆ ಅಭಿಮುಖವಾಗಿ ಶಿಲ್ಪ ರಚನೆಯನ್ನು ಮಾಡಿಲ್ಲ. ಉಳಿದ



ಚಿತ್ರ ೧೫೮-೩



ಚಿತ್ರ ೧೫೮-೪



ಚಿತ್ರ ೧೫೮-೫

ಮೂರೂ ಕಡೆಗಳಲ್ಲಿ ಶಿಲ್ಪಗಳಿವೆ. ದೀಪಸ್ತಂಭದ ಅಕ್ಕ ಪಕ್ಕದಲ್ಲಿರುವ ಭಾಗಗಳಲ್ಲಿ ಕೀರ್ತಿಮುಖವು ದೇಹದೊಂದಿಗೆ ಇರುವಂತೆ ಚಿತ್ರಿಸಲಾಗಿದೆ (ಚಿತ್ರ ೨೪೫-೧,೨). ಈ ರೀತಿಯ ಉಬ್ಬು ರಚನೆಗಳನ್ನು ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಿರುವ ವಾಸ್ತುಶಿಲ್ಪಗಳಲ್ಲಿ ಹೆಚ್ಚಾಗಿ ಕಾಣಬಹುದು.

ದೇವಾಲಯಕ್ಕೆ ಅಭಿಮುಖದ ವಿರುದ್ಧ ದಿಕ್ಕಿನಲ್ಲಿ ಹನುಮಂತನ ಶಿಲ್ಪವಿದೆ (ಚಿತ್ರ ೨೪೫-೩). ಹನುಮಂತನು ನಮಸ್ಕರಿಸುತ್ತಿರುವಂತೆ ಶಿಲ್ಪರಚನೆಯನ್ನು ಮಾಡಲಾಗಿದೆ. ಚೌಕಾಕಾರದ ಮೇಲಿನ ಭಾಗದಲ್ಲಿ ದೇವಾಲಯಕ್ಕೆ ಅಭಿಮುಖವಾಗಿ ಗರುಡನ ಉಬ್ಬು ಶಿಲ್ಪವಿದೆ (ಚಿತ್ರ ೨೪೫-೪). ಈ ಉಬ್ಬು ಶಿಲ್ಪದಲ್ಲಿ ಗರುಡನು ನಿಂತಿದ್ದು ಕೈ ಮುಗಿಯುತ್ತಿರುವಂತೆ ಶಿಲ್ಪ ರಚನೆ ಇದೆ. ಇದರ ನಂತರದ ದಿಕ್ಕಿನಲ್ಲಿ ಶಂಖದ ಶಿಲ್ಪ ರಚನೆಯು ಇರುವುದು ಕಾಣುತ್ತದೆ.

ದೀಪಸ್ತಂಭದ ಮೂರನೆಯ ಭಾಗದ ಈ ಹಂತದಲ್ಲಿ ಉಬ್ಬುಶಿಲ್ಪವಿಲ್ಲ. ನಾಲ್ಕನೆಯ ದಿಕ್ಕಿನಲ್ಲಿ ಚಕ್ರದ ಸುಂದರವಾದ ಶಿಲ್ಪ ರಚನೆಯಿದ್ದು ಸವೆದು ಹೋದುದರಿಂದ ಅಸ್ಪಷ್ಟವಾಗಿ ಕಾಣುತ್ತದೆ (ಚಿತ್ರ ೨೪೫-೫). ದೀಪಸ್ತಂಭದ ಚೌಕಾಕಾರದ ರಚನೆಯ ಮೇಲಿನ ನಾಲ್ಕೂ ಮೂಲೆಗಳಲ್ಲಿ ನಾಗಬಂಧದ ರಚನೆಯು ಇದೆ. ನಾಗಬಂಧದ ನಡುವಿನ ಸ್ಥಳದಲ್ಲಿ ಹೂವು ಬಳ್ಳಿಗಳಿಂದಕೂಡಿದ ವಿನ್ಯಾಸವನ್ನು ಮಾಡಲಾಗಿದೆ. ಇದರ ಕೆಳಗೆ ಚೌಕಾಕಾರದ ಭಾಗದ ಮಾಲಸ್ಥಾನದಲ್ಲಿ ಮಾಲೆಯಂತೆ ಅಲಂಕಾರದ ವಿನ್ಯಾಸವನ್ನು ಕೆತ್ತಿರುವುದು ಕಾಣುತ್ತದೆ.

ಬೆಂಗಳೂರಿನ ಬಸವನ ಗುಡಿಯಲ್ಲಿ ಬಸವೇಶ್ವರ ದೇವಾಲಯವಿದೆ. ಇದು ಶಿವನ ವಾಹನವಾದ ನಂದಿಯ ದೇವಾಲಯವಾಗಿದೆ. ಈ ದೇವಾಲಯದ ಹೊರ ಆವರಣದಲ್ಲಿ ದೊಡ್ಡದಾದ ದೀಪಸ್ತಂಭವಿದೆ. ದೀಪಸ್ತಂಭದ ಚೌಕಾಕಾರದ ರಚನೆಯಲ್ಲಿ ಸುಂದರವಾದ ಕೆತ್ತನೆಯಿಂದ ಕೂಡಿದ ಉಬ್ಬುಶಿಲ್ಪಗಳಿವೆ. ದೇವಾಲಯಕ್ಕೆ ಅಭಿಮುಖವಾಗಿರುವ ಭಾಗದಲ್ಲಿ ಸಂಗೀತದ ವಾದ್ಯದೊಂದಿಗೆ ಇರುವ ಪುರುಷನ ಶಿಲ್ಪವಿದೆ (ಚಿತ್ರ ೨೪೬-೧). ಈ ಪುರುಷನು ವಾದ್ಯವನ್ನು ನುಡಿಸುತ್ತಾ ನರ್ತನವನ್ನು ಮಾಡುತ್ತಿರುವಂತೆ ಶಿಲ್ಪ ರಚನೆಯನ್ನು ಮಾಡಲಾಗಿದೆ. ಇವನು ಸಂಗೀತದಲ್ಲಿ ತಲ್ಲೀನನಾಗಿರುವಂತೆ ಶಿಲ್ಪವು ಕಾಣುತ್ತದೆ. ಇವನ ದೇಹವನ್ನು ಆಭರಣಗಳಿಂದ ಅಲಂಕರಿಸಲಾಗಿದೆಯಲ್ಲದೆ ವಿಶೇಷವಾದ ಕೇಶವಿನ್ಯಾಸವನ್ನೂ ಇವು ಹೊಂದಿರುವುದನ್ನು ನೋಡಬಹುದು.


ಚೌಕಾಕಾರದ ಮತ್ತೊಂದು ಬದಿಯಲ್ಲಿ ಯೋಗಿಯೊಬ್ಬನ ಉಬ್ಬುಶಿಲ್ಪವಿದೆ (ಚಿತ್ರ ೨೪೬-೨). ಈ ಶಿಲ್ಪದಲ್ಲಿ ಯೋಗಿಯೊಬ್ಬನು ಬಲಗೈಯಲ್ಲಿ ಜಪಮಾಲೆಯನ್ನು ಹಿಡಿದಿದ್ದು ಜಪ ಮಾಡುತ್ತ ಇರುವಂತಿರುವಂತೆ ಶಿಲ್ಪದಲ್ಲಿ ಕೆತ್ತನೆಯನ್ನು ಮಾಡಲಾಗಿದೆ.




ಚಿತ್ರ ೨೫೨



ಚಿತ್ರ ೨೫೪



ಚಿತ್ರ ೨೫೩-೧



ಚಿತ್ರ ೨೫೩-೨



ಚಿತ್ರ ೨೫೫

ಯೋಗಿಯು ನಿಂತಿದ್ದೂ ಧ್ಯಾನದಲ್ಲಿ ಮಗ್ನನಾಗಿದ್ದಾನೆ. ಇವನು ಖಾವಿ ವಸ್ತ್ರವನ್ನು ಧರಿಸಿದ್ದಾನೆ. ತಲೆಯ ಮೇಲೆಯೂ ವಸ್ತ್ರವನ್ನು ಧರಿಸಿರುವುದು ಕಾಣುತ್ತದೆ. ದೀಪಸ್ತಂಭದ ಮೂರನೆಯ ದಿಕ್ಕಿನಲ್ಲಿ ಪರಮೇಶ್ವರನ ಮೂರ್ತಿ ಶಿಲ್ಪವಿದೆ (ಚಿತ್ರ ೨೪೬-೩). ಇದು ಬಹಳ ಸುಂದರವಾದ ಉಬ್ಬುಶಿಲ್ಪವಾಗಿದೆ. ಪರಮೇಶ್ವರನು ನಿಂತಿದ್ದು ಚತುರ್ಭುಜವನ್ನು ಹೊಂದಿದ್ದಾನೆ. ಇವನ ಹಿಂದಿನ ಕೈಗಳಲ್ಲಿ ತ್ರಿಶೂಲ ಮತ್ತು ಢಮರುಗವನ್ನು ಹಿಡಿದಿದ್ದಾನೆ. ಇವನ ಮುಂದಿನ ಬಲಗೈಯು ಅಭಯ ಮುದ್ರೆಯನ್ನು ಹೊಂದಿದ್ದು ಎಡಗೈಯಲ್ಲಿ ದಂಡವನ್ನು ಹೊಂದಿರುವುದು ಕಾಣುತ್ತದೆ. ಪರಮೇಶ್ವರನು ಸರ್ವಾಲಂಕಾರದಿಂದ ಕೂಡಿದ್ದಾನೆ. ಇವನ ತಲೆಯ ಮೇಲೆ ಕಿರೀಟವೂ ಇದೆ.

ದೀಪಸ್ತಂಭದ ನಾಲ್ಕನೆಯ ದಿಕ್ಕಿನಲ್ಲಿ ಕೀರ್ತಿಮುಖವು ದೇಹದೊಂದಿಗೆ ಇರುವ ಉಬ್ಬುಶಿಲ್ಪವು ಇರುವುದು ಕಾಣುತ್ತದೆ (ಚಿತ್ರ ೨೪೬-೪). ಇದು ನಾಗಮಂಗಲದ ಶ್ರೀ ಸೌಮ್ಯಕೇಶವ ದೇವಾಲಯದ ಎದುರು ಇರುವ ದೀಪಸ್ತಂಭದಲ್ಲಿ ಇರುವ ಕೀರ್ತಿಮುಖದ ಶಿಲ್ಪದಂತೆ ಸುಂದರವಾಗಿದೆ. ಈ ಶಿಲ್ಪದಲ್ಲಿ ಕೀರ್ತಿಮುಖದ ಮುಖವು ಸ್ವಲ್ಪ ಪಕ್ಕಕ್ಕೆ ಮಾಡಿದಂತೆ ಚಿತ್ರಿಸಲಾಗಿದೆ. ದೀಪಸ್ತಂಭದ ಚೌಕಾಕಾರದ ರಚನೆಯ ಮೇಲಿನ ನಾಲ್ಕೂ ಮೂಲೆಗಳಲ್ಲಿ ನಾಗಬಂಧದ ರಚನೆಯು ಇದೆ. ಈ ರಚನೆಯ ಮಧ್ಯದ ಸ್ಥಳವು ಹೂವು ಬಳ್ಳಿಗಳಿಂದ ಕೂಡಿದ ವಿನ್ಯಾಸದ ಕೆತ್ತನೆಯನ್ನು ಹೊಂದಿದೆ.

ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿನ ಸಾವನದುರ್ಗದಲ್ಲಿ ವೀರಭದ್ರೇಶ್ವರ ದೇವಾಲಯವಿದೆ. ಇದು ಶೈವ ಧರ್ಮದ ದೇವಾಲಯವಾಗಿದೆ. ಈ ದೇವಾಲಯದ ಹೊರ ಆವರಣದಲ್ಲಿ ಐವತ್ತು ಅಡಿ ಎತ್ತರದ ದೀಪಸ್ತಂಭವಿದೆ. ಈ ದೀಪಸ್ತಂಭದ ಪೀಠದ ನಾಲ್ಕೂ ಕಡೆ ಒಂದೊಂದು ಕುಬ್ಜ ಶಿಲ್ಪಗಳಿದ್ದು ಇವು ದೀಪಸ್ತಂಭವನ್ನು ಹೊತ್ತುಕೊಂಡಿದೆ ಎಂಬಂತೆ ಶಿಲ್ಪವನ್ನು ರಚಿಸಲಾಗಿದೆ (ಚಿತ್ರ ೨೪೭-೧). ದೀಪಸ್ತಂಭದ ಚೌಕಾಕಾರದ ರಚನೆಯಲ್ಲಿ ಮೂಲದೇವರಿಗೆ ಅಭಿಮುಖವಾಗಿರುವ ದಿಕ್ಕಿನಲ್ಲಿ ಕುರಿತಲೆಯ ದಕ್ಷನ ಉಬ್ಬುಶಿಲ್ಪವಿದೆ (ಚಿತ್ರ ೨೪೭-೨). ಈ ಶಿಲ್ಪದಲ್ಲಿ ದಕ್ಷನು ಮೂಲದೇವರಿಗೆ ಕೈ ಮುಗಿದು ನಮಸ್ಕರಿಸುತ್ತಿದ್ದಾನೆ. ನಂತರದ ದಿಕ್ಕಿನಲ್ಲಿ ನಂದಿಯ ನಿಂತಿರುವ ಶಿಲ್ಪವಿದೆ (ಚಿತ್ರ ೨೪೭-೩). ನಂದಿಯನ್ನು ಮೂಲದೇವರಿಗೆ ಮುಖ ಮಾಡಿದಂತೆ ಚಿತ್ರಿಸಲಾಗಿದೆ.

ಮೂಲದೇವರಿಗೆ ಅಭಿಮುಖವಾಗಿರುವ ದಿಕ್ಕಿನ ವಿರುದ್ಧ ದಿಕ್ಕಿನಲ್ಲಿ ಭೈರವನ ಉಬ್ಬುಶಿಲ್ಪವು ಇರುವುದನ್ನು ನೋಡಬಹುದು (ಚಿತ್ರ ೨೪೭-೪). ಭೈರವನ ಶಿಲ್ಪವು ಚತುರ್ಭುಜಗಳನ್ನು ಹೊಂದಿದ್ದು ಇವುಗಳಲ್ಲಿ ಆಯುಧಗಳನ್ನು ಹಿಡಿದಿರುವುದು ಕಾಣುತ್ತದೆ. ಸ್ತಂಭದ ನಾಲ್ಕನೆಯ ದಿಕ್ಕಿನಲ್ಲಿ ಕೈ ಮುಗಿದು ನಿಂತಿರುವ ಸ್ತ್ರೀಯ ಶಿಲ್ಪವಿದ್ದು ಇವಳನ್ನು ದಕ್ಷನ ಪತ್ನಿ ಎಂದು ಗುರುತಿಸಲಾಗುತ್ತದೆ (ಚಿತ್ರ ೨೪೭-೫). ಸ್ತಂಭದ ಚೌಕಾಕಾರದ ರಚನೆಯ ಮೇಲಿನ ನಾಲ್ಕೂ ಮೂಲೆಗಳಲ್ಲಿ ನಾಗಬಂಧದ ರಚನೆಯು ಇದೆ.

ಮಾಗಡಿ ತಾಲ್ಲೂಕಿನ ಸಾವನದುರ್ಗದಲ್ಲಿ ಪ್ರಸ್ತುತವಾಗಿ ಪ್ರಸಿದ್ಧಿಯನ್ನು ಪಡೆದಿರುವ



ಚಿತ್ರ ೨೫೬-೧



ಚಿತ್ರ ೨೫೬-೨



ಚಿತ್ರ ೨೫೬-೩

ದೇವಾಲಯ ಎಂದರೆ ಶ್ರೀ ಲಕ್ಷ್ಮೀನರಸಿಂಹ ದೇವಾಲಯ. ಇದು ವೈಷ್ಣವ ಧರ್ಮದ ದೇವಲಯವಾಗಿದೆ. ಈ ದೇವಾಲಯದ ಆವರಣದಲ್ಲಿ ದೀಪಸ್ತಂಭವಿದೆ. ಸ್ತಂಭದ ಪೀಠದ ಭಾಗದಲ್ಲಿಯೂ ಉಬ್ಬುಶಿಲ್ಪಗಳು ಇರುವುದನ್ನು ನೋಡಬಹುದು. ಪೀಠದ ಮೂರೂ ಕಡೆಗಳಲ್ಲಿ ಎಂಡು ದಳದ ಪುಷ್ಪದ ರಚನೆಯನ್ನು ಕೆತ್ತಲಾಗಿದೆ (ಚಿತ್ರ ೨೪೮–೧). ಒಂದು ಭಾಗದಲ್ಲಿ ಮಾತ್ರ ಹಾವಿನ ಶಿಲ್ಪವನ್ನು ಕೆತ್ತಿರುವುದನ್ನು ನೋಡಬಹುದು (ಚಿತ್ರ ೨೪೮–೨). ದೀಪಸ್ತಂಭದ ಚೌಕಾಕಾರದಲ್ಲಿಯು ಕೂಡಾ ಸುಂದರವಾದ ಉಬ್ಬುಶಿಲ್ಪಗಳಿವೆ.

ದೇವಾಲಯದ ಮೂಲಮೂರ್ತಿಗೆ ಅಭಿಮುಖವಾಗಿ ಸ್ತಂಭದ ಚೌಕಾಕಾರದ ಭಾಗದಲ್ಲಿ ಚಕ್ರದ ಉಬ್ಬುಶಿಲ್ಪವು ಇರುವುದನ್ನು ಕಾಣಬಹುದು (ಚಿತ್ರ ೨೪೮–೩). ಇದರ ನಂತರದ ಭಾಗದಲ್ಲಿ ಗರುಡನ ಉಬ್ಬುಶಿಲ್ಪವಿದೆ (ಚಿತ್ರ ೨೪೮–೪). ಇದರಲ್ಲಿ ಗರುಡನು ದೇವಾಲಯದ ಕಡೆ ಮುಖಮಾಡಿ ನಮಸ್ಕರಿಸುತ್ತಾ ನಿಂತಿದ್ದಾನೆ. ಇವನು ಸೊಂಟದಲ್ಲಿ ಹಾವನ್ನು ಧರಿಸಿದ್ದಾನೆ. ಇದರ ತಲೆಯ ಮೇಲೆ ಕಮಾನಿನಂತಹ ರಚನೆ ಇದ್ದು ಇದರ ಮಧ್ಯದಲ್ಲಿ ಕೀರ್ತಿಮುಖದ ಶಿಲ್ಪವಿದೆ.

ದೀಪಸ್ತಂಭದ ಮೂರನೆಯ ದಿಕ್ಕಿನಲ್ಲಿ ಶಂಖದ ರಚನೆಯ ಉಬ್ಬುಶಿಲ್ಪವಿದೆ (ಚಿತ್ರ ೨೪೮–೫). ಇದರ ನಂತರದ ಸ್ಥಳದಲ್ಲಿ ಹನುಮಂತನ ಉಬ್ಬುಶಿಲ್ಪವಿದೆ (ಚಿತ್ರ ೨೪೮–೬). ಹನುಮಂತನು ಕೂಡಾ ಗರುಡನಂತೆ ದೇವಾಲಯದ ಮೂಲಮೂರ್ತಿಯ ಕಡೆ ಮುಖಮಾಡಿ ಕೈ ಮುಗಿದು ನಮಸ್ಕರಿಸುತ್ತಾ ನಿಂತಿದ್ದಾನೆ. ಇವನ ಮೇಲೆಯೂ ಕಮಾನಿನಂತಹ ರಚನೆ ಇದ್ದು ಇದರ ಮಧ್ಯದಲ್ಲಿ ಕೀರ್ತಿಮುಖದ ಉಬ್ಬುಶಿಲ್ಪವಿರುವುದು ಕಾಣುತ್ತದೆ. ದೀಪಸ್ತಂಭದ ಚೌಕಾಕಾರದ ಭಾಗದ ಮೇಲೆ ಮೂಲೆಗಳಲ್ಲಿ ನಾಗಬಂಧದ ರಚನೆಯು ಇರುವುದನ್ನು ನೋಡಬಹುದು. ದೀಪಸ್ತಂಭದ ಪೀಠದ ಭಾಗ ಮತ್ತು ಉಬ್ಬುಶಿಲ್ಪಗಳು ಇರುವವ ಚೌಕಾಕಾರದ ಭಾಗವನ್ನು ನೀಲಿ, ಹಸಿರು ಮತ್ತು ಹಳದಿ ಬಣ್ಣಗಳಿಂದ ಅಲಂಕರಿಸಲಾಗಿದೆ.

ಬೆಂಗಳೂರಿನ ಪ್ರಸಿದ್ಧವಾದ ವೀರಾಂಜನೇಯ ದೇವಾಲಯದ ಎದುರು ದೀಪಸ್ತಂಭವಿದೆ. ಈ ದೀಪಸ್ತಂಭದ ಚೌಕಾಕಾರವಿರುವ ಭಾಗದಲ್ಲಿ ಉಬ್ಬುಶಿಲ್ಪಗಳು ಇರುವುದನ್ನು ಕಾಣುತ್ತೇವೆ. ದೇವಾಲಯದ ಮೂಲಮೂರ್ತಿಗೆ ಅಭಿಮುಖವಾಗಿ ಬಲಗೈಯಲ್ಲಿ ಅಭಯ ಮುದ್ರೆಯನ್ನು ಮತ್ತು ಎಡಗೈಯಲ್ಲಿ ಗಧೆಯನ್ನು ಹೊಂದಿರುವ ಹನುಮಂತನ ನಿಂತಿರುವ ಶಿಲ್ಪವು ಇರುವುದು ಕಾಣುತ್ತದೆ. ಇದರ ಅಕ್ಕ ಪಕ್ಕದ ಭಾಗಗಳಲ್ಲಿ ಒಂದು ಕಡೆ ಶಂಖದ ಉಬ್ಬುಶಿಲ್ಪ ಮತ್ತೊಂದು ಕಡೆ ಚಕ್ರದ ಉಬ್ಬುಶಿಲ್ಪಗಳಿವೆ. ಹನುಮಂತನ ಶಿಲ್ಪಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ಮೂರು ನಾಮದ ಸಂಕೇತವನ್ನು ಹೊಂದಿದ ಉಬ್ಬುಶಿಲ್ಪವು ಇರುವುದನ್ನು ನೋಡಬಹುದು. ಈ ಶಿಲ್ಪಗಳು ಎರಡು ಅಡಿಯ ಎತ್ತರವನ್ನು ಹೊಂದಿವೆ.

ಬೆಂಗಳೂರಿನ ಶ್ರೀನಿವಾಸ ದೇವಾಲಯವು ಪುರಾತನವಾದುದು. ಇದು ಕೂಡಾ



ಚಿತ್ರ ೨೫೬-೪



ಚಿತ್ರ ೨೫೬-೫



ಚಿತ್ರ ೨೫೬-೬

ವೈಷ್ಣವ ಧರ್ಮದ ದೇವಾಲಯವಾಗಿದೆ. ಈ ದೇವಾಲಯಕ್ಕೆ ಸೇರಿಕೊಂಡಿರುವ ಪ್ರಾಕಾರಗಳು ನೂತನವಾದುದಾಗಿವೆ. ದೀಪಸ್ತಂಭವೂ ನೂತನವಾಗಿ ನಿರ್ಮಿಸಿದಂತೆ ಕಾಣುತ್ತದೆ. ಈ ದೀಪಸ್ತಂಭದ ಚೌಕಾಕಾರದ ರಚನೆಯಲ್ಲಿ ದೇವಾಲಯದ ದೇವ ಮೂರ್ತಿಗೆ ಅಭಿಮುಖವಾಗಿ ಕೈಮುಗಿದು ನಿಂತಿರುವ ಗರುಡನ ಶಿಲ್ಪವಿದೆ (ಚಿತ್ರ ೨೪೯-೧). ಇದರ ನಂತರ ಚಕ್ರದ ಉಬ್ಬುಶಿಲ್ಪ (ಚಿತ್ರ ೨೪೯-೨), ನಾಮದ ಉಬ್ಬುಶಿಲ್ಪ (ಚಿತ್ರ ೨೪೯-೩) ಮತ್ತು ಶಂಖದ ಉಬ್ಬುಶಿಲ್ಪ (ಚಿತ್ರ ೨೪೯-೪)ಗಳು ಕ್ರಮವಾಗಿ ರಚನೆಗೊಂಡಿವೆ. ಚೌಕಾಕಾರದ ಮೇಲಿನ ಮೂಲೆಗಳಲ್ಲಿ ನಾಗಬಂಧದ ರಚನೆಯನ್ನು ಮಾಡಲಾಗಿದೆ.

ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಆಲಂಬಗಿರಿಯಲ್ಲಿ ಶ್ರೀ ವೆಂಕಟರಮಣ ಸ್ವಾಮಿ ದೇವಾಲಯವಿದೆ. ಈ ದೇವಾಲಯಕ್ಕೆ ವಿಶಾಲವಾದ ಆವರಣವು ಇದೆ. ದೇವಾಲಯದ ಹೊರ ಆವರಣದಲ್ಲಿ ಸಾಲಾಗಿ ಮೂರು ದೀಪಸ್ತಂಭಗಳನ್ನು ಸ್ಥಾಪಿಸಲಾಗಿದೆ. ದೀಪಸ್ತಂಭವು ತುಂಬಾ ಹಳೆಯದಾದ್ದರಿಂದ ದೀಪಸ್ತಂಭದಲ್ಲಿನ ಉಬ್ಬುಶಿಲ್ಪಗಳು ಅಳಿಸಿ ಹೋದಂತೆ ಕಾಣುತ್ತವೆ. ಈ ಮೂರೂ ದೀಪಸ್ತಂಭಗಳಲ್ಲಿ ಉಬ್ಬುಶಿಲ್ಪಗಳಿದ್ದು ಅವು ಅಸ್ಪಷ್ಟವಾಗಿವೆ. ಮಧ್ಯದ ದೀಪಸ್ತಂಭದ ಉಬ್ಬುಶಿಲ್ಪಗಳನ್ನು ಸ್ವಲ್ಪ ಮಟ್ಟಿಗೆ ಗುರುತಿಸಬಹುದಾಗಿದೆ.

ಮಧ್ಯದ ದೀಪಸ್ತಂಭದಲ್ಲಿ ಇರುವ ಚೌಕಾಕಾರದ ಭಾಗದಲ್ಲಿ ದೇವಾಲಯದ ಮೂಲಮೂರ್ತಿಗೆ ಅಭಿಮುಖವಾಗಿ ಚಕ್ರದ ಉಬ್ಬುಶಿಲ್ಪವಿದೆ (ಚಿತ್ರ ೨೫೦-೧). ಇದರ ನಂತರದ ಸ್ಥಳದಲ್ಲಿ ಹನುಮಂತನ ಉಬ್ಬುಶಿಲ್ಪವಿದ್ದು ಹನುಮಂತನು ಮೂಲದೇವರಿಗೆ ಕೈ ಮುಗಿದು ನಮಸ್ಕರಿಸುತ್ತಿರುವಂತೆ ಶಿಲ್ಪದ ರಚನೆಯನ್ನು ಮಾಡಲಾಗಿದೆ (ಚಿತ್ರ ೨೫೦-೨). ಉಳಿದ ದಿಕ್ಕುಗಳಲ್ಲಿ ಶಂಖದ ಉಬ್ಬುಶಿಲ್ಪ ಮತ್ತು ಕಮಲದ ವಿನ್ಯಾಸವನ್ನು ಹೊಂದಿರುವ ಶಿಲ್ಪಗಳು ಈ ದೀಪಸ್ತಂಭಗಳಲ್ಲಿವೆ. ಚೌಕಾಕಾರದ ಮೇಲಿನ ಭಾಗವು ಮಾಲೆಯಂತೆ ಕೆತ್ತಲ್ಪಟ್ಟಿರುವುದು ಕಾಣುತ್ತದೆ. ಇದರ ಮೇಲೆ ನಾಗಬಂಧದ ರಚನೆಯು ದೀಪಸ್ತಂಭಗಳಲ್ಲಿ ಇರುವುದು ಕಾಣುತ್ತದೆ.

ಚಿಕ್ಕಬಳ್ಳಾಪುರ ತಾಲ್ಲೂಕಿನ ಕಂದಾವರದಲ್ಲಿ ಶ್ರೀ ಜ್ವರಹರೇಶ್ವರ ದೇವಾಲಯವಿದೆ. ಇದು ಅತ್ಯಂತ ಪ್ರಾಚೀನವಾದ ದೇವಾಲಯವಾಗಿದೆ. ಈ ದೇವಾಲಯದ ಎದುರು ನಲವತ್ತು ಅಡಿ ಎತ್ತರದ ದೀಪಸ್ತಂಭವಿದೆ. ಈ ದೀಪಸ್ತಂಭದ ಪೀಠದಲ್ಲಿ ಅಲಂಕೃತವಾದ ವೃತ್ತಾಕಾರದ ರಂಗೋಲಿಯಂತೆ ಇರುವ ಉಬ್ಬುಶಿಲ್ಪಗಳನ್ನು ನೋಡಬಹುದು. ಪೀಠದಲ್ಲಿನ ಲಂಬವಾದ ಪಟ್ಟಿಕೆಗಳಿದ್ದು ಒಂದೊಂದು ಪಟ್ಟಿಕೆಯು ಒಂದೊಂದು ವಿನ್ಯಾಸವನ್ನು ಹೊಂದಿದೆ. ದೀಪಸ್ತಂಭದ ಚೌಕಾಕಾರದ ಭಾಗದ ಎತ್ತರವು ಸುಮಾರು ಏಳು ಅಡಿಯಾಗಿದ್ದು ಚೌಕಾಕಾರದ ಎತ್ತರಕ್ಕೂ ಹೂವು ಬಳ್ಳಿಯ ವಿನ್ಯಾಸದ ರಚನೆಯು ಇರುವುದನ್ನು ಕಾಣುತ್ತೇವೆ. ವೃತ್ತಾಕಾರದ ವಿನ್ಯಾಸದ ನಡುವೆ ಇತರೆ ಉಬ್ಬುಶಿಲ್ಪಗಳನ್ನು ಮಾಡಲಾಗಿದೆ (ಚಿತ್ರ ೨೫೧-೧,೨,೩,೪). ಇವುಗಳಲ್ಲಿ ಪ್ರಾಣಿ ಪಕ್ಷಿಗಳ ಶಿಲ್ಪಗಳೂ ಇವೆ. ಇದು ಶೈವ



ಚಿತ್ರ ೨೫೬-೭



ಚಿತ್ರ ೨೫೬-೮



ಚಿತ್ರ ೨೫೬-೯



ಚಿತ್ರ ೨೫೬-೧೦



ಚಿತ್ರ ೨೫೬-೧೧

ಧರ್ಮದ ದೇವಾಲಯವಾದರೂ ಈ ಉಬ್ಬುಶಿಲ್ಪಗಳ ನಡುವೆ ಗೋಪಾಲ ಕೃಷ್ಣನ ಶಿಲ್ಪವು ಇರುವುದು ವಿಶೇಷವಾಗಿ ಕಾಣುತ್ತದೆ.

ಇದರಲ್ಲಿ ಇರುವ ಶಿಲ್ಪಗಳಲ್ಲಿ ಸಾಮಾಜಿಕ ಶಿಲ್ಪಗಳೂ ಇವೆ. ದೇವಾಲಯದ ಹೆಸರು ಜ್ವರಹರೇಶ್ವರವಾಗಿರುವ ಹಿನ್ನೆಲೆಯಲ್ಲಿ ನೋಡಿದರೆ ಕಾಯಿಲೆಯಿಂದ ಬಳಲುತ್ತಿದ್ದ ಜನರಿಗಾಗಿ ಈ ದೇವಾಲಯವನ್ನು ನಿರ್ಮಿಸಿದ್ದರೆಂದು ತೋರುತ್ತದೆ. ಇಲ್ಲವೇ ಈ ದೇವಾಲಯದ ಆವರಣದಲ್ಲಿ ರೋಗಿಗಳಿಗಾಗಿ ಆಸ್ಪತ್ರೆಯು ಇತ್ತೆಂದು ಕಾಣುತ್ತದೆ. ದೇವಾಲಯದ ದೀಪಸ್ತಂಭದಲ್ಲಿ ರೋಗಿಗೆ ಚಿಕಿತ್ಸೆಯನ್ನು ನೀಡುತ್ತಿರುವಂತೆ ರಚಿಸಿರುವ ಉಬ್ಬುಶಿಲ್ಪಗಳು ದೊರೆಯುತ್ತವೆ. ಇವು ಅಸ್ಪಷ್ಟವಾಗಿವೆ. ದೀಪಸ್ತಂಭದ ಪೀಠದಲ್ಲಿಯೂ ಅಲಂಕಾರಿಕ ಕೆತ್ತನೆಗಳು ಇರುವುದು ಕಾಣುತ್ತದೆ (ಚಿತ್ರ ೨೫೧-೫).

ಗದಗ ಜಿಲ್ಲೆಯ ಬೆಟಗೇರಿಯಲ್ಲಿನ ಮೈಲಾರ ಲಿಂಗೇಶ್ವರ ದೇವಾಲಯವು ಶೈವ ಧರ್ಮದ ದೇವಲಯವಾಗಿದೆ. ಈ ದೇವಾಲಯದ ಆವರಣದ ಹೊರಗೆ ದೀಪಸ್ತಂಭವಿದೆ. ಈ ದೀಪಸ್ತಂಭದಲ್ಲಿ ಜೋಡಿ ನಾಗಶಿಲ್ಪ ಇರುವುದನ್ನು ಕಾಣಬಹುದು (ಚಿತ್ರ ೨೫೨). ಈ ಉಬ್ಬುಶಿಲ್ಪವು ದೇವಾಲಯದ ಮೂಲಮೂರ್ತಿಗೆ ಅಭಿಮುಖವಾಗಿ ಇದೆ. ಜೋಡಿನಾಗಗಳ ಮಧ್ಯದಲ್ಲಿ ಹೂವಿನ ಶಿಲ್ಪವನ್ನು ರಚಿಸಲಾಗಿದೆ. ಈ ಉಬ್ಬುಶಿಲ್ಪವನ್ನು ಬಣ್ಣಗಳಿಂದ ಅಲಂಕರಿಸಲಾಗಿದೆ. ಇದನ್ನು ನಾಗರ ಕಟ್ಟೆ ಎಂದೂ ಕರೆಯುತ್ತಾರೆ.

ಬಳ್ಳಾರಿ ಜಿಲ್ಲೆಯ ಹಂಪಿಯ ಕಿಷ್ಕಿಂಧದಲ್ಲಿ ಇರುವ ಶ್ರೀ ಚಕ್ರ ಕೋದಂಡರಾಮ ದೇವಾಲಯದ ಎದುರು ದೀಪಸ್ತಂಭವಿದೆ. ಈ ದೇವಾಲಯವು ವೈಷ್ಣವ ಧರ್ಮದ ದೇವಾಲಯವಾಗಿದೆ. ಇದರ ಎದುರು ಇರುವ ದೀಪಸ್ತಂಭದಲ್ಲಿ ಗರುಡನ ಉಬ್ಬುಶಿಲ್ಪವಿದ್ದು ಇದರ ಅಕ್ಕಪಕ್ಕಗಳಲ್ಲಿ ಚಕ್ರ ಮತ್ತು ಶಂಖದ ಶಿಲ್ಪಗಳಿವೆ (ಚಿತ್ರ ೨೫೩-೧). ಇವನ್ನು ಬಿಡಿ ಬಿಡಿಯಾಗಿ ಸ್ಥಾಪಿಸಲಾಗಿದೆ. ಇದನ್ನು ದೇವಾಲಯದ ಮೂಲಮೂರ್ತಿಗೆ ಅಭಿಮುಖವಾಗಿ ಇರಿಸಲಾಗಿದೆ. ಈ ದೀಪಸ್ತಂಭದ ಪೀಠದ ಭಾಗದಲ್ಲಿ ಕೆಳಗಡೆ ಹನುಮಂತನ ಶಿಲ್ಪವಿದೆ (ಚಿತ್ರ ೨೫೩-೨). ಈ ಶಿಲ್ಪದಲ್ಲಿ ಹನುಮಂತನು ಬಲಗೈಯಲ್ಲಿ ಗಧೆಯನ್ನು ಹಿಡಿದಿದ್ದಾನೆ. ಇವನ ಎಡಗೈಯು ಅಭಯ ಮುದ್ರೆಯನ್ನು ಹೊಂದಿದೆ.

ಹಂಪಿಯ ಉದ್ಧಾನ ವೀರಭದ್ರ ದೇವಾಲಯವು ಶೈವ ಧರ್ಮದ ದೇವಾಲಯವಾಗಿದೆ. ಈ ದೇವಾಲಯದ ಹೊರಗಡೆ ದೇವ ಮೂರ್ತಿಗೆ ಎದುರಾಗಿ ಎತ್ತರದ ದೀಪಸ್ತಂಭವಿದೆ. ಈ ದೀಪಸ್ತಂಭದಲ್ಲಿ ಪುರುಷ ಮತ್ತು ಸ್ತ್ರೀಯ ಜೋಡಿ ಶಿಲ್ಪವಿದೆ (ಚಿತ್ರ ೨೫೪). ಈ ಎರಡೂ ಶಿಲ್ಪಗಳು ದೇವರಿಗೆ ಕೈ ಮುಗಿಯುತ್ತಾ ನಿಂತಿರುವಂತೆ ಶಿಲ್ಪ ರಚನೆಯನ್ನು ಮಾಡಲಾಗಿದೆ. ಈ ಶಿಲ್ಪದ ಮೇಲಿನ ಭಾಗದಲ್ಲಿ ಶಿವಲಿಂಗದ ಉಬ್ಬುಶಿಲ್ಪ ಇರುವುದನ್ನು ಕಾಣುತ್ತೇವೆ. ಸ್ತಂಭದ ಚೌಕಾಕಾರದ ಇನ್ನುಳಿದ ಮೂರು ಕಡೆಗಳಲ್ಲಿ ಶಿಲ್ಪಗಳಿಲ್ಲ. ಈ ಸ್ತಂಭಕ್ಕೆ ಸುಣ್ಣ ಬಣ್ಣವನ್ನು ಬಳಿಯಲಾಗಿದೆ.




ಚಿತ್ರ ೨೫೬–೧೧



ಚಿತ್ರ ೨೫೬–೧೨



ಚಿತ್ರ ೨೫೬–೧೩



ಚಿತ್ರ ೨೫೬–೭



ಚಿತ್ರ ೨೫೬–೧೪



ಚಿತ್ರ ೨೫೬–೧೬

ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ತೀರ್ಥ ರಾಮೇಶ್ವರ ದೇವಾಲಯವು ಶೈವ ಧರ್ಮದ ದೇವಾಲಯವಾಗಿದೆ. ಈ ದೇವಾಲಯದ ಆವರಣದಲ್ಲಿ ಎತ್ತರದ ದೀಪಸ್ತಂಭವಿದೆ. ಈ ದೀಪಸ್ತಂಭದಲ್ಲಿ ಲಿಂಗದ ಶಿಲ್ಪವಿದ್ದು ಅದರ ಎದುರು ನಂದಿ ಕುಳಿತಿರುವಂತೆ ಉಬ್ಬುಶಿಲ್ಪವನ್ನು ಮಾಡಲಾಗಿದೆ (ಚಿತ್ರ ೨೫೫). ಈ ಉಬ್ಬುಶಿಲ್ಪವು ದೇವಾಲಯದ ದೇವ ಮೂರ್ತಿಗೆ ಅಭಿಮುಖವಾಗಿ ಕೆತ್ತಲಾಗಿದೆ. ಇನ್ನುಳಿದ ಭಾಗದಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿಲ್ಲ.

ದಾವಣಗೆರೆ ಜಿಲ್ಲೆಯ ಹೊನ್ನಾಳಿಯಲ್ಲಿರುವ ಹಿರೇಕಲ್ಮಠದ ಚೆನ್ನಪ್ಪಸ್ವಾಮಿ ದೇವಾಲಯದ ಆವರಣದಲ್ಲಿ ದೀಪಸ್ತಂಭವಿದೆ. ಈ ದೀಪಸ್ತಂಭವು ದೊಡ್ಡದಾದ ಪೀಠದ ಭಾಗವನ್ನು ಹೊಂದಿದೆ. ಇದರ ನಾಲ್ಕೂ ಕಡೆಗಳಲ್ಲಿ ಉಬ್ಬುಶಿಲ್ಪಗಳು ಇರುವುದನ್ನು ನೋಡಬಹುದು. ದೇವಾಲಯಕ್ಕೆ ಅಭಿಮುಖವಾಗಿರುವ ಪೀಠದ ಭಾಗವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿಕೊಂಡು ಉಬ್ಬುಶಿಲ್ಪಗಳನ್ನು ರಚಿಸಲಾಗಿದೆ (ಚಿತ್ರ ೨೫೬–೧). ಈ ಭಾಗದ ಮಧ್ಯದಲ್ಲಿ ನಾಗಮಂಡಲದ ಉಬ್ಬುಶಿಲ್ಪವಿದೆ (ಚಿತ್ರ ೨೫೬–೨). ಇದರಲ್ಲಿ ಏಳು ತಲೆಯ ಹಾವಿನ ಶಿಲ್ಪವಿದೆ.

ನಾಗಮಂಡಲ ಶಿಲ್ಪದ ಎಡಗಡೆಯ ಭಾಗದಲ್ಲಿ ಹುಲಿಯು ಗರ್ಜಿಸುತ್ತಿರುವಂತೆ ಚಿತ್ರಿಸಲಾಗಿದೆ (ಚಿತ್ರ ೨೫೬–೩). ಇದರ ಕಾಲ ಬಳಿ ಚಿಕ್ಕದಾಗಿ ನಾಯಿ ಮರಿಯೊಂದು ಬೊಗಳುತ್ತಿರುವಂತೆ ಇಲ್ಲಿ ತೋರಿಸಲಾಗಿದೆ. ಈ ಭಾಗದ ಬಲ ಭಾಗದಲ್ಲಿ ಆನೆಯ ಉಬ್ಬುಶಿಲ್ಪವಿದ್ದು ಇದರ ಮೇಲೆ ಕುಳಿತಿರುವ ಮಾಹುತನು ಆನೆಯುನ್ನು ನಿಯಂತ್ರಿಸುತ್ತಿರುವಂತೆ ಶಿಲ್ಪ ರಚನೆಯನ್ನು ಮಾಡಲಾಗಿದೆ (ಚಿತ್ರ ೨೫೬–೪). ಆನೆಯು ತನ್ನ ಸೊಂಡಿಲಿನಲ್ಲಿ ಹೂವಿನ ಹಾರವನ್ನು ಹಿಡಿದುಕೊಂಡು ಹೋಗುತ್ತಿರುವಂತೆ ಕಾಣುತ್ತದೆ.

ಪೀಠದ ಮತ್ತೊಂದು ಬದಿಯಲ್ಲಿ ಮೂರು ಪುಷ್ಪಗಳ ವಿನ್ಯಾಸವು ಇರುವುದನ್ನು ನೋಡಬಹುದು (ಚಿತ್ರ ೨೫೬–೫). ಪೀಠದ ಮೂರನೆಯ ದಿಕ್ಕಿನಲ್ಲಿ ಇರುವ ಭಾಗವನ್ನು ಐದು ಭಾಗಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ (ಚಿತ್ರ ೨೫೬–೬). ಇದರಲ್ಲಿ ಕೊನೆಯ ಭಾಗವನ್ನು ಅಡ್ಡವಾಗಿ ಮತ್ತೆರಡು ಭಾಗವನ್ನಾಗಿ ವಿಭಜಿಸಿಕೊಂಡು ಶಿಲ್ಪ ರಚನೆಯನ್ನು ಮಾಡಿದ್ದಾರೆ. ಇದರಲ್ಲಿನ ಒಂದು ಭಾಗದಲ್ಲಿ ರಾಜ ರಾಣಿಯರು ಪಲ್ಲಂಗದ ಮೇಲೆ ಕುಳಿತು ಚರ್ಚಿಸುತ್ತಿದ್ದಾರೆ (ಚಿತ್ರ ೨೫೬–೭), ಅವರ ಕಾಲ ಬಳಿ ನೀರಿನ ಕೊಳಗಳಿವೆ. ರಾಜನ ಎಡಗೈಯಲ್ಲಿ ಕತ್ತಿಯನ್ನು ಹಿಡಿದಿದ್ದಾನೆ.

ಎರಡನೆಯ ಭಾಗದಲ್ಲಿ ಕೈಮುಗಿದು ಕುಳಿತಿರುವ ಗರುಡನ ಶಿಲ್ಪವಿದೆ (ಚಿತ್ರ ೨೫೬–೮). ಮೂರನೆಯ ಭಾಗದಲ್ಲಿ ಶಿವಯೋಗಿಯೊಬ್ಬ ಕೈಯಲ್ಲಿ ಲಿಂಗವನ್ನು ಹಿಡಿದು ಪೂಜಿಸುತ್ತಿರುವ ಉಬ್ಬುಶಿಲ್ಪವಿದೆ (ಚಿತ್ರ ೨೫೬–೯). ನಾಲ್ಕನೆಯ ಭಾಗದಲ್ಲಿ ನೃತ್ಯಗಾರನೊಬ್ಬ



ಚಿತ್ರ ೨೫೭-೧



ಚಿತ್ರ ೨೫೭-೨



ಚಿತ್ರ ೨೫೭-೩



ಚಿತ್ರ ೨೫೭-೪

ನರ್ತಿಸುತ್ತಿರುವಂತೆ ಉಬ್ಬುಶಿಲ್ಪದ ರಚನೆಯು ಇದೆ (ಚಿತ್ರ ೨೫೬-೧೦). ಐದನೆಯ ಭಾಗದ ಮೇಲ್ಭಾಗದಲ್ಲಿ ಕುರಿಯ ಶಿಲ್ಪವಿದೆ ಅದರ ಹಿಂದೆ ಮನುಷ್ಯನೊಬ್ಬ ನಿಂತಿದ್ದಾನೆ (ಚಿತ್ರ ೨೫೬-೧೧). ಇದೊಂದು ಯುದ್ಧದ ಶಿಲ್ಪದಂತೆ ಕಾಣುತ್ತದೆ. ಇದರ ಕೆಳಗಿನ ಭಾಗದಲ್ಲಿ ಹಂದಿಯ ಉಬ್ಬುಶಿಲ್ಪವಿದೆ.

ಪೀಠದ ನಾಲ್ಕನೆಯ ದಿಕ್ಕಿನಲ್ಲಿರುವ ಭಾಗವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿಕೊಂಡು ಶಿಲ್ಪದ ರಚನೆಯನ್ನು ಮಾಡಲಾಗಿದೆ. ಮೊದಲನೆಯ ಭಾಗದಲ್ಲಿ ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವಂತೆ ಶಿಲ್ಪಗಳನ್ನು ರಚಿಸಲಾಗಿದೆ (ಚಿತ್ರ ೨೫೬-೧೨). ಇದರ ಒಂದು ಕಡೆ ಪುರುಷನೊಬ್ಬನು ಪಲ್ಲಂಗದ ಮೆಲೆ ಮಲಗಿಕೊಂಡು ಸ್ತ್ರೀಯೊಬ್ಬಳ ಜೊತೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದರೆ, ಇದರ ಪಕ್ಕದಲ್ಲಿ ಒರ್ವ ಸ್ತ್ರೀಯೊಂದಿಗೆ ಪುರುಷರಿಬ್ಬರು ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವ ಶಿಲ್ಪವು ಇಲ್ಲಿದೆ.

ಇದರ ನಂತರದ ಭಾಗದಲ್ಲಿ ಪುರಾಣಗಳಲ್ಲಿ ಬರುವ ವ್ಯಾಘ್ರ ಪಾದ ಎಂಬ ಮುನಿಯು ಶಿವಲಿಂಗವನ್ನು ಪೂಜಿಸುತ್ತಿರುವಂತೆ ಉಬ್ಬುಶಿಲ್ಪವನ್ನು ಮಾಡಲಾಗಿದೆ (ಚಿತ್ರ ೨೫೬-೧೩). ಇವನ ಎದುರು ಶಿವಲಿಂಗಕ್ಕೆ ನಮಸ್ಕರಿಸುತ್ತಿರುವ ಪುರುಷನ ಶಿಲ್ಪವಿದೆ. ಇದರ ಮೇಲೆ ಒಂದು ಮೂಲೆಯಲ್ಲಿ ಕುದುರೆಯ ಶಿಲ್ಪವಿದೆ. ಮೂದಿನ ಭಾಗದಲ್ಲಿ ಪುರುಷನೊಬ್ಬನು ನರ್ತಿಸುತ್ತಿರುವ ಉಬ್ಬುಶಿಲ್ಪವಿದ್ದು ಇದು ಅಸ್ಪಷ್ಟವಾಗಿದೆ.

ದೀಪಸ್ತಂಭದ ಚೌಕಾಕಾರದ ದಂಡದ ಭಾಗದಲ್ಲಿ ಒಂದು ಕಡೆ ಹಂಸದ ಉಬ್ಬುಶಿಲ್ಪವು ಇರುವುದನ್ನು ನೋಡಬಹುದು (ಚಿತ್ರ ೨೫೬-೧೪). ಮತ್ತೊಂದು ಬದಿಯಲ್ಲಿ ಗಂಡಭೇರುಂಡದ ಉಬ್ಬುಶಿಲ್ಪವಿದೆ (ಚಿತ್ರ ೨೫೬-೧೫). ಗಂಡಭೇರುಂಡವು ತನ್ನ ಕೊಕ್ಕುಗಳಲ್ಲಿ ಒಂದೊಂದು ಮತ್ತು ಕಾಲುಗಳಲ್ಲಿ ಎರಡರಂತೆ ಒಟ್ಟಾರೆ ನಾಲ್ಕು ಆನೆಗಳನ್ನು ಹೊತ್ತುಕೊಂಡು ಹಾರುತ್ತಿರುವಂತಹ ಶಿಲ್ಪ ಇದಾಗಿದೆ. ಇದು ಅತ್ಯಂತ ವಿಶೇಷವಾದ ಶಿಲ್ಪವೇ ಆಗಿದೆ.

ದೇವಾಲಯದ ಮೂಲಮೂರ್ತಿಗೆ ಅಭಿಮುಖವಾಗಿರುವ ಚೌಕಾಕಾರದ ಸ್ತಂಭದ ಭಾಗದಲ್ಲಿ ಭಕ್ತನೊಬ್ಬನ ಉಬ್ಬುಶಿಲ್ಪವಿದೆ (ಚಿತ್ರ ೨೫೬-೧೬). ಈ ಭಕ್ತನು ದೇವಾಲಯದ ದೇವಮೂರ್ತಿಗೆ ಕೈ ಮುಗಿದು ನಮಸ್ಕರಿಸುತ್ತಾ ನಿಂತಿರುವ ಉಬ್ಬುಶಿಲ್ಪ ಇದಾಗಿದೆ. ದೀಪಸ್ತಂಭದ ಚೌಕಾಕಾರದ ಸ್ಥಳದಲ್ಲಿ ಅಲ್ಲಲ್ಲಿ ಕಲ್ಲಿನ ಹೊರಚಾಚಿದಂತಹ ರಚನೆಗಳು ಇವೆ (ಚಿತ್ರ ೨೫೬-೧೭). ಈ ರಚನೆಯಲ್ಲಿ ಮನುಷ್ಯನ ಮುಖಗಳಂತೆ ಶಿಲ್ಪವನ್ನು ಕೆತ್ತಿರುವುದು ಕಾಣುತ್ತದೆ. ಒಟ್ಟಾರೆ ಹೇಳುವುದಾದರೆ ಈ ದೀಪಸ್ತಂಭದ ಉಬ್ಬುಶಿಲ್ಪಗಳು ವಿಶೇಷವಾದುದಾಗಿದೆ ಎನ್ನಬಹುದು.

ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಕಳಸದಲ್ಲಿ ಶ್ರೀ ಕಳಸೇಶ್ವರ ದೇವಾಲಯವಿದೆ. ಈ ದೇವಾಲಯದ ಆವರಣದಲ್ಲಿ ಎತ್ತರದ ದೀಪಸ್ತಂಭವಿದೆ.



ಚಿತ್ರ ೨೫೭-೫



ಚಿತ್ರ ೨೫೮-೧



ಚಿತ್ರ ೨೫೮-೨

ಈ ದೀಪಸ್ತಂಭವು ಸುಂದರವಾಗಿ ಕೆತ್ತಲಾಗಿರುವ ಉಬ್ಬುಶಿಲ್ಪಗಳನ್ನು ಹೊಂದಿದೆ. ದೀಪಸ್ತಂಭದ ದಂಡದ ಭಾಗದ ನಾಲ್ಕೂ ಕಡೆಗಳಲ್ಲಿ ಉಬ್ಬುಶಿಲ್ಪಗಳಿವೆ. ಈ ಶಿಲ್ಪಗಳ ಸುತ್ತಲೂ ಕಮಾನಿನಂತೆ ರಚನೆಯನ್ನು ಮಾಡಿದ್ದಾರೆ. ಈ ಕಮಾನಿನಂತಹ ರಚನೆಯ ಮಧ್ಯದಲ್ಲಿ ಮೇಲೆ ಕೀರ್ತಿಮುಖದ ಶಿಲ್ಪವಿರುವುದು ಕಾಣುತ್ತದೆ.

ಶ್ರೀ ಕಳಸೇಶ್ವರ ದೇವಾಲಯದ ಮೂಲಮೂರ್ತಿಗೆ ಅಭಿಮುಖವಾಗಿರುವ ಚೌಕಾಕಾರದ ಭಾಗದಲ್ಲಿ ಉಮಾಮಹೇಶ್ವರರು ನಂದಿಯ ಮೇಲೆ ಸವಾರಿ ಮಾಡುತ್ತಿರುವ ಶಿಲ್ಪವಿದೆ (ಚಿತ್ರ ೨೫೭-೧). ಇವರು ಸಕಲ ಆಭರಣಗಳಿಂದ ಅಲಂಕೃತರಾಗಿದ್ದಾರೆ. ಈ ಉಬ್ಬುಶಿಲ್ಪದ ನಂತರದ ದಿಕ್ಕಿನಲ್ಲಿ ಗಣಪತಿಯ ಶಿಲ್ಪವಿದೆ (ಚಿತ್ರ ೨೫೭-೨). ಈ ಗಣಪತಿಯು ಚತುರ್ಭುಜ ಗಣಪನಾಗಿದ್ದಾನೆ. ತನ್ನ ಹಿಂದಿನ ಕೈಗಳಲ್ಲಿ ಪಾಶ, ಅಂಕುಶಗಳನ್ನು ಹಿಡಿದಿದ್ದಾನೆ.

ಉಮಾ ಮಹೇಶ್ವರರ ಶಿಲ್ಪದ ವಿರುದ್ಧ ದಿಕ್ಕಿಗೆ ಗರುಡನ ಶಿಲ್ಪವಿರುವುದು ಕಾಣುತ್ತದೆ (ಚಿತ್ರ ೨೫೭-೩). ಈ ಗರುಡನು ಎರಡೂ ತೆಕ್ಕೆಗಳಲ್ಲಿ ಹಾವುಗಳನ್ನು ಹಿಡಿದು ಕೈ ಮುಗಿದಿರುವ ಉಬ್ಬುಶಿಲ್ಪವು ಇದಾಗಿದೆ. ಇದರ ನಂತರದ ದೀಪಸ್ತಂಭದ ನಾಲ್ಕನೆಯ ದಿಕ್ಕಿನಲ್ಲಿ ಹನುಮಂತನು ಕೈ ಮುಗಿದು ನಿಂತಿರುವ ಉಬ್ಬುಶಿಲ್ಪವಿರುವುದನ್ನು ನೋಡುತ್ತೇವೆ (ಚಿತ್ರ ೨೫೭-೪). ದೀಪಸ್ತಂಭದ ನಾಗಬಂಧ ರಚನೆಯ ಮಧ್ಯದಲ್ಲಿ ನಾಲ್ಕೂ ಕಡೆಗಳಲ್ಲಿ ಉಬ್ಬು ಶಿಲ್ಪಗಳಿರುವುದನ್ನು ಕಾಣಬಹುದು. ಇದರಲ್ಲಿ ಗೋಪಾಲಕೃಷ್ಣ (ಚಿತ್ರ ೨೫೭-೫), ನವಿಲು, ಗರುಡನ ಶಿಲ್ಪ ಮತ್ತು ಹೂವು ಬಳ್ಳಿಗಳ ವಿನ್ಯಾಸದ ಶಿಲ್ಪಗಳಿರುತ್ತವೆ. ಇದು ಶೈವ ಧರ್ಮದ ದೇವಾಲಯವಾದರೂ ವೈಷ್ಣವ ಧರ್ಮದಲ್ಲಿ ಇರುವಂತೆ ಹನುಮಂತನ, ಗರುಡನ ಉಬ್ಬುಶಿಲ್ಪಗಳು ಇರುವುದು ವಿಶೇಷವಾಗಿ ಗಮನ ಸೆಳೆಯುತ್ತವೆ.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೊಲ್ಲೂರು ಮೂಕಾಂಬಿಕೆ ದೇವಾಲಯದ ಎದುರು ದೀಪಸ್ತಂಭವಿದೆ. ಇದನ್ನು ಲೋಹದಲ್ಲಿ ರಚಿಸಲಾಗಿದೆ. ಸ್ತಂಭದ ಅಡಿಪಾಯ ಭಾಗದ ಪೀಠದ ಮೇಲೆ ಆಮೆಯ ಶಿಲ್ಪವಿರುವುದನ್ನು ಕಾಣುತ್ತೇವೆ (ಚಿತ್ರ ೨೫೮-೧). ಇದರ ನಂತರದ ಪಟ್ಟಿಕೆಯ ಸ್ಥಾನದಲ್ಲಿ ಹಾವುಗಳ ಶಿಲ್ಪವಿರುವುದನ್ನು ನೋಡಬಹುದು (ಚಿತ್ರ ೨೫೮-೨). ಹಾವು ಕುಂಡಲಿನಿ ಸರ್ಪದಂತೆ ಜಾಗ್ರತೆಯನ್ನು ಸಾಂಕೇತಿಸುತ್ತದೆ ಎನ್ನಲಾಗುತ್ತದೆ.

ಇದರ ಮೇಲೆ ಕಮಲದ ಪೀಠವಿದ್ದು ಇದರ ನಂತರ ಆನೆಯನ್ನು ನಿಯಂತ್ರಿಸುತ್ತಿರುವ ಮಾಹುತನನ್ನು ಹೊತ್ತ ಶಿಲ್ಪವಿದೆ(ಚಿತ್ರ ೨೫೮-೩). ಈ ಶಿಲ್ಪವು ಕಲಾತ್ಮಕವಾಗಿ ರೂಪುಗೊಂಡಿದೆ. ಆನೆಯ ಮೇಲಿನ ಅಂಬಾರಿಯ ನಾಲ್ಕೂ ಕಡೆಗಳಲ್ಲಿ ಶಿವ, ಪಾರ್ವತಿ, ಗಣೇಶ, ಲಕ್ಷ್ಮಿಯರ ಉಬ್ಬುಶಿಲ್ಪಗಳು ಇರುವುದು ಕಂಡು ಬರುತ್ತವೆ.



ಚಿತ್ರ ೨೫೮-೩



ಚಿತ್ರ ೨೫೯-೧



ಚಿತ್ರ ೨೫೯-೨

ದೇವತಾ ಮೂರ್ತಿಯರನ್ನು ಹೊತ್ತು ನಿಂತಂತಹ ಆನೆಯನ್ನು ಶಕ್ತಿಯ ಸಂಕೇತವೆಂದು ಪರಿಗಣಿಸಲಾಗುತ್ತದೆ. ಇದರ ನಂತರದ ಸ್ಥಳದಲ್ಲಿ ಲಂಬವಾಗಿ ಕಂಬವಿದ್ದು ಹಂತ ಹಂತದಲ್ಲೂ ಕಮಲದ ಬಟ್ಟಲಿನ ಆಕಾರದಲ್ಲಿ ಸುತ್ತಲೂ ದೀಪವನ್ನು ಬೆಳಗಲು ದಳಗಳ ಮಾದರಿಯಲ್ಲಿ ರಚಿಸಿರುವುದನ್ನು ಕಾಣುತ್ತೇವೆ. ಲೋಹದ ದೀಪಸ್ತಂಭಗಳನ್ನು ಹೆಚ್ಚಾಗಿ ಇದೇ ರೀತಿಯಲ್ಲಿ ಮಾಡಿರುತ್ತಾರೆ. ಉಡುಪಿಯ ಶ್ರೀ ಕೃಷ್ಣನ ದೇವಾಲಯದ ಆವರಣದಲ್ಲಿ ಇರುವ ದೀಪಸ್ತಂಭವು ಲೋಹದ ದೀಪಸ್ತಂಭವಾಗಿದೆ.

ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ಇರುವ ಬನಶಂಕರಿ ದೇವಾಲಯದ ಕಲ್ಯಾಣಿಯಲ್ಲಿ ಎತ್ತರದ ದೀಪಸ್ತಂಭವಿದೆ. ಇದನ್ನು ದೀಪಮಾಲೆಗಂಬ ಎಂದು ಕರೆಯುತ್ತಾರೆ. ಈ ದೀಪಸ್ತಂಭಕ್ಕೆ ಎತ್ತರದ ಕೊಠಡಿಯಂತೆ ನಿರ್ಮಿಸಿ ಇದರ ಸುತ್ತಲೂ ದೀಪವನ್ನು ಬೆಳಗಲು ಕಲ್ಲಿನ ಹೊರಚಾಚಿದ ರಚನೆಗಳನ್ನು ಅಳವಡಿಸಲಾಗಿದೆ (ಚಿತ್ರ ೨೫೯-೧). ಇಡೀ ದೀಪಸ್ತಂಭದ ರಚನೆಯನ್ನು ಹೊತ್ತುನಿಂತಂತೆ ನಾಲ್ಕೂ ಕಡೆಗಳಲ್ಲಿ ಆನೆಯ ಶಿಲ್ಪಗಳನ್ನು ರಚಿಸಿರುವುದು ಕಾಣುತ್ತದೆ (ಚಿತ್ರ ೨೫೯-೨).

ದೇವಾಲಯಗಳ ಆವರಣದಲ್ಲಿ ಇರುವ ದೀಪಸ್ತಂಭಗಳಲ್ಲಿ ಉಬ್ಬುಶಿಲ್ಪಗಳು ಹೆಚ್ಚಾಗಿ ಇರುವುದಿಲ್ಲ. ಕೆಲವು ದೇವಾಲಯಗಳ ದೀಪಸ್ತಂಭಗಳಲ್ಲಿ ಮಾತ್ರ ಈ ರೀತಿಯ ಉಬ್ಬುಶಿಲ್ಪಗಳು ಇರುವುದು ಕಾಣುತ್ತದೆ. ದೇವಾಲಯದ ದೇವಮೂರ್ತಿಗೆ ಸಂಬಂಧಿಸಿದಂತೆ ಉಬ್ಬುಶಿಲ್ಪಗಳನ್ನು ನಿರ್ಮಿಸಲಾಗಿರುತ್ತದೆ. ಕೆಲವು ಶೈವ ದೇವಾಲಯಗಳಲ್ಲಿ ವೈಷ್ಣವ ಧರ್ಮದಲ್ಲಿ ದೊರೆಯುವ ಉಬ್ಬುಶಿಲ್ಪಗಳು ಇರುವುದು ಕಾಣುತ್ತದೆ.

ದೀಪಸ್ತಂಭಗಳಲ್ಲಿ ಇರುವ ಚೌಕಾಕಾರದ ಭಾಗದಲ್ಲಿ ಹೆಚ್ಚು ಸ್ಥಳಾವಕಾಶ ಇರುವುದರಿಂದ ಈ ಭಾಗದಲ್ಲಿ ಉಬ್ಬುಶಿಲ್ಪಗಳು ರಚಿಸಲ್ಪಟಿರುತ್ತವೆ. ಸ್ತಂಭದ ಉಳಿದ ಭಾಗದಲ್ಲಿ ಅಲಂಕಾರಿಕ ವಿನ್ಯಾಸಗಳನ್ನು ಕೆತ್ತಿರುವುದು ಕಂಡು ಬರುತ್ತದೆ. ಈ ವಿನ್ಯಾಸಗಳನ್ನು ತೆಳುವಾಗಿ ಕೆತ್ತಲಾಗಿರುತ್ತದೆ. ದೀಪಸ್ತಂಭಗಳು ದೇವಾಲಯದ ಆವರಣದಲ್ಲಿ ಮೂಲವಾಗಿ ಬೆಳಕಿಗೆ ಎಂದು ಪ್ರಾರಂಭಿಸಿದರೂ ನಂತರ ಅದಕ್ಕೆ ಆಧ್ಯಾತ್ಮಿಕವಾದ ಮಾನ್ಯತೆಯು ದೊರೆತಿರುವುದು ಕಾಣುತ್ತದೆ. ದೀಪಸ್ತಂಭವು ಜ್ಞಾನವನ್ನು ಸಾಂಕೇತಿಸುತ್ತದೆ. ಸೃಷ್ಟಿಯನ್ನು ಸಾಂಕೇತಿಸುತ್ತದೆ. ಅದರಂತೆ ಇದರಲ್ಲಿ ಇರುವ ಉಬ್ಬುಶಿಲ್ಪಗಳು ಜ್ಞಾನ ಮತ್ತು ಸೃಷ್ಟಿಯ ಸಂಕೇತಗಳಾಗಿವೆ ಎನ್ನಬಹುದು.

* *** *

ಅಧ್ಯಾಯ: ಏಳು

ಸಮಾರೋಪ

ಸಮಾರೋಪ

ವಿಶ್ವದ ಯಾವುದೇ ಸಂಪ್ರದಾಯವನ್ನು ಅವಲೋಕಿಸಿದರೆ ಅವುಗಳ ಹಿನ್ನೆಲೆಯು ಅಲ್ಲಿನ ಪುರಾಣದ ಆಧಾರದ ಮೇಲೆ ರೂಪುಗೊಂಡಿರುವುದು ಕಾಣುತ್ತದೆ. ಭಾರತೀಯ ಸಂಪ್ರದಾಯದ ದೇವಾಲಯಗಳೂ ಇದಕ್ಕೆ ಹೊರತೇನಲ್ಲ. ಪುರಾಣಗಳಲ್ಲಿ ಮಾನವನ ಬದುಕಿಗೆ ಅವಶ್ಯವಿರುವ ಪ್ರತಿಯೊಂದು ವಿಷಯವನ್ನು ಕುರಿತು ಉಲ್ಲೇಖಗಳು ಇರುವುದು ಕಾಣುತ್ತದೆ. ಜೀವನಕ್ಕೆ ಬೇಕಾದ ಪಂಚಭೂತಗಳ ಸ್ಥಾನವು ಪುರಾಣಗಳಲ್ಲಿ ಹೆಚ್ಚಿನ ಮಹತ್ವ ಪಡೆದಿರುವುದನ್ನು ನೋಡಬಹುದು. ಮಾನವನು ಈ ಪಂಚಭೂತಗಳಲ್ಲಿ ಅಗ್ನಿಯನ್ನು ತನ್ನ ಧಾರ್ಮಿಕ ಆಚರಣೆಯಲ್ಲಿ ಬಳಸಿಕೊಳ್ಳುವುದರ ಮೂಲಕ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದಾನೆ.

ಪುರಾಣಗಳಲ್ಲಿ ಅಗ್ನಿಯನ್ನು ಕುರಿತಾದ ಉಲ್ಲೇಖಗಳು ಇರುವುದು ತಿಳಿಯುತ್ತದೆ. ಅಗ್ನಿಗೆ ಆತ್ಮ ಪರಮಾತ್ಮನನ್ನು ಒಂದುಗೂಡಿಸುವ ಶಕ್ತಿ ಇದೆ ಎಂದು ಹೇಳಲಾಗುತ್ತದೆ. ಆದ್ದರಿಂದ ಅಗ್ನಿಯನ್ನು ದೇವ ಮತ್ತು ಮಾನವನ ನಡುವೆ ಇರುವ ಮಧ್ಯವರ್ತಿ ಎಂದು ಅರ್ಥೈಸಿಕೊಳ್ಳಾಗುತ್ತದೆ. ಪುರಾಣಗಳಲ್ಲಿ ಅಗ್ನಿಯು ಜ್ಞಾನದ ಸಂಕೇತವಾಗಿದೆ. ಅಗ್ನಿ ಸ್ತಂಭವು ಪರಮಾತ್ಮನ ಇರುವಿಕೆಯನ್ನು ತೋರಿಸುತ್ತದೆ. ಅಗ್ನಿಸ್ತಂಭವು ಈಶ್ವರನೇ ಎಂದು ಹೇಳಿರುವ ಉಲ್ಲೇಖಗಳು, ಕಥೆಗಳು ಪುರಾಣದಲ್ಲಿ ಇರುವುದು ಕಂಡು ಬರುತ್ತದೆ. ಕೆಲವು ಪುರಾಣಗಳಲ್ಲಿ ಮಹಾಗ್ನಿ ರೂಪವನ್ನು ಹೊಂದಿದ್ದ ಶಿವನು ನಂತರ ಲಿಂಗದ ರೂಪವನ್ನು ತಾಳಿದನು

ಎಂಬ ಉಲ್ಲೇಖಗಳು ಇರುವುದನ್ನು ನೋಡಿದರೆ ದೀಪಸ್ತಂಭವು ಶಿವನ ರೂಪವೆಂದು ತಿಳಿಯಬಹುದಾಗಿದೆ.

ಪ್ರಾಚೀನ ಕಾಲದಲ್ಲಿ ಮಾನವನು ಗುಹೆಗಳಲ್ಲಿ ವಾಸಿಸುತ್ತಿದ್ದನು. ಹೀಗೆ ವಾಸಿಸುತ್ತಿದ್ದ ಮಾನವನು ಆಹಾರಕ್ಕಾಗಿ ವಲಸೆ ಹೋಗಬೇಕಾಗುತ್ತಿತ್ತು. ಗುಹೆಗಳಿಲ್ಲದ ಸ್ಥಳಗಳಲ್ಲಿ ತಾನೆ ಗುಹೆಗಳನ್ನು ನಿರ್ಮಿಸಿಕೊಳ್ಳಬೇಕಾಗುತ್ತಿತ್ತು. ಗುಹೆಗಳನ್ನು ನಿರ್ಮಿಸಲು ಅವನು ಮೊದಲು ಬಳಸಿದ್ದು ನಿಸರ್ಗದಲ್ಲಿ ದೊರೆಯುವ ಮರವನ್ನು. ಮರದ ಕೊಂಬೆ ರೆಂಬೆಗಳು ಅವನಿಗೆ ಗುಡಿಸಲನ್ನು ನಿರ್ಮಾಣ ಮಾಡಲು ಉಪಯೋಗವಾದವು. ಗುಡಿಸಲಿನ ರಚನೆಯಲ್ಲಿ ಮೊದಲು ಬಳಸಿದ ಸ್ತಂಭಗಳೇ ಅವನ ಕಟ್ಟಡ ನಿರ್ಮಾಣಕ್ಕೆ ಮೂಲ ಆಧಾರಸ್ತಂಭಗಳಾದವು.

ಗುಡ್ಡಗಾಡುಗಳಲ್ಲಿ ಕಾಡಿನ ಪ್ರಾಣಿಯಂತೆ ವಾಸಿಸುತ್ತಿದ್ದ ಮಾನವನಿಗೆ ಕಾಡ್ಗಿಚ್ಚಿನ ರೂಪದಲ್ಲಿ ಅಗ್ನಿಯ ದರ್ಶನವಾಗಿರಬೇಕು. ಈ ಅಗ್ನಿಯನ್ನು ತನ್ನ ಗುಹೆಗೆ ಕೊಂಡೊಯ್ಯುವಾಗ ಅವನು ಹೋದ ದಾರಿ ಗುಡಿಸಲು ಬೆಳಕಿನಿಂದ ಕಂಗೊಳಿಸಿದುದನ್ನು ಮಾನವನು ಕಂಡನು. ಈ ಬೆಳಕು ಮಾನವನ ಮುಂದಿನ ಆಧ್ಯಾತ್ಮಿಕ ಬೆಳವಣಿಗೆಗೆ ನಾಂದಿಯಾಯಿತು. ಬೆಳಗಿನ ಹೊತ್ತು ಸೂರ್ಯನು ಬೆಳಕನ್ನು ಕೊಡುತ್ತಿದ್ದರಿಂದ ಸೂರ್ಯನನ್ನು ದೇವರೆಂದು ನಂಬಿದನು. ರಾತ್ರಿಯ ಹೊತ್ತು ಸೂರ್ಯನಿಲ್ಲದಾಗ ಆವರಿಸುತ್ತಿದ್ದ ಕತ್ತಲಿಗೆ ಹೆದರುತ್ತಿದ್ದ ಮಾನವನಿಗೆ ಈ ದೀಪವು ದಾರಿದೀಪದಂತೆ ಗೋಚರಿಸಿತು ಎಂದರೆ ತಪ್ಪಾಗಲಾರದು. ಸೂರ್ಯನಿಲ್ಲದ ರಾತ್ರಿಯ ಹೊತ್ತು ಅಗ್ನಿಯು ಬೆಳಕನ್ನು ಕೊಡುತ್ತಿದ್ದರಿಂದ ಮಾನವನು ಅಗ್ನಿಯನ್ನು ಪೂಜಿಸಿದನು.

ಅಗ್ನಿಯಿಂದ ಬೆಳಕು ಮತ್ತು ಕಾವನ್ನು ಪಡೆಯಬಹುದು ಎಂಬ ಅನುಭವವನ್ನು ಪಡೆದನು. ಮಾನವನು ನಾಗರೀಕನಾಗಲು ಅವನ ಜೀವನದಲ್ಲಿ ಪಡೆದುಕೊಂಡ ಅನುಭವಗಳೇ ಕಾರಣ. ಹೊಸ ಹೊಸ ಅನುಭವದ ಸಹಾಯದಿಂದ ಹೊಸ ಹೊಸ ಅವಿಷ್ಕಾರಗಳನ್ನು ಕಂಡುಕೊಂಡಿದ್ದಾನೆ. ಬೆಳಕಿನ ಕಾವಿಗೆ ಕಾಡು ಪ್ರಾಣಿಗಳು ಹೆದರುತ್ತವೆ ಎಂದೂ ಅವುಗಳ ಕೊಬ್ಬನ್ನು ಬಳಸಿ ಬೆಂಕಿಯನ್ನು ಉರಿಸಬಹುದು ಎಂದು ಅವನು ಅರಿತನು. ಈ ರೀತಿಯಾಗಿ ಬೆಳಕಿಗಾಗಿ ಬಳಸಿಕೊಂಡ ಬೆಂಕಿಯು ಅವನ ಜ್ಞಾನದ ಕಣ್ಣು ತೆರೆಸಿತು ಎಂದರೆ ತಪ್ಪಾಗಲಾರದು.

ಬೆಂಕಿಯನ್ನು ಕಂಡುಕೊಂಡು ಅದರಲ್ಲಿ ಒಂದು ಸಣ್ಣ ಕಿಡಿಯನ್ನು ಬಳಸಿಕೊಂಡು ಅದಕ್ಕೆ ದೀಪ ಎಂದು ಕರೆದನು. ಸಂಸ್ಕೃತದಲ್ಲಿ ದೀಪ ಎಂದರೆ ಅಂಧಕಾರವನ್ನು ತೊಲಗಿಸುವುದು ಎಂದು ಅರ್ಥ. ಈ ದೀಪವು ಎತ್ತರದಲ್ಲಿ ಇದ್ದರೆ ಬೆಳಕು ಹೆಚ್ಚು ಜಾಗವನ್ನು ಆವರಿಸುತ್ತದೆ ಎಂದೂ ತಿಳಿದನು. ಅದಕ್ಕೆ ಎತ್ತರದ ಪೀಠವನ್ನು ಮಾಡಿ ಅದನ್ನು ಕಾಲು ದೀಪ ಎಂದು ಗುರುತಿಸಿದನು. ನಂತರದ ದಿನಗಳಲ್ಲಿ ಅವಕ್ಕೆ ಅಲಂಕರಣ ಸಾಮಗ್ರಿಗಳನ್ನು ಸೇರಿಸಿ ವಿಧ ವಿಧದ ದೀಪಗಳನ್ನು ತಯಾರಿಸಿಕೊಂಡನು.

ದೇವಾಲಯದ ಆವರಣದಲ್ಲಿ ವಿವಿಧ ರೀತಿಯ ದೀಪಗಳು ಇರುವುದನ್ನು ಕಾಣಬಹುದು. ಇವುಗಳಲ್ಲಿ ಆರತಿದೀಪ, ಕಾಲುದೀಪ, ವೃಕ್ಷದೀಪ, ದೀಪದ ಮಲ್ಲಿ ಮತ್ತು ತೂಗುದೀಪಗಳು ಪ್ರಮುಖವಾದವು. ಸಾಲುದೀಪ, ತೋರಣ ದೀಪಗಳು ಕೆಲವು ದೇವಾಲಯಗಳ ಆವರಣದಲ್ಲಿ ಇರುವುದನ್ನು ಕಾಣುತ್ತೇವೆ.

ದೀಪಗಳಲ್ಲಿ ಅತ್ಯಂತ ವಿಶೇಷವಾದ ದೀಪವೆಂದರೆ ನಂದಾದೀಪ. ನಂದಾದೀಪ ಎಂದರೆ ಎಂದೂ ನಂದದ, ಆರದ ದೀಪ ಎಂದು ಅರ್ಥ. ಈ ದೀಪಗಳನ್ನು ದೇವಾಲಯದ ಆವರಣದಲ್ಲಿ ಇರಿಸಲಾಗಿರುತ್ತದೆ. ಇದರಲ್ಲಿನ ದೀಪವು ನಿರಂತರವಾಗಿ ಬೆಳಗುತ್ತಿರುತ್ತದೆ. ಚರಿತ್ರೆಯಲ್ಲಿ ನಂದಾದೀಪಕ್ಕಾಗಿ ರಾಜಮಹಾರಾಜರು ದಾನವನ್ನು ಕೊಟ್ಟಂತಹ ಉಲ್ಲೇಖಗಳು ದೊರೆಯುತ್ತವೆ. ಕೆಲವು ಕಾಲುದೀಪ, ತೂಗುದೀಪ ಮತ್ತು ದೀಪದ ಮಲ್ಲಿಯ ದೀಪಗಳು ನಂದಾದೀಪದಂತೆ ಕಾರ್ಯನಿರ್ವಹಿಸುತ್ತವೆ. ತೂಗುದೀಪಗಳಲ್ಲಿ ಹನಿ ಹನಿಯಾಗಿ ಎಣ್ಣೆ ಅಥವಾ ತುಪ್ಪವು ದೀಪಕ್ಕೆ ಬೀಳುವಂತೆ ಅನುಕೂಲವನ್ನು ಮಾಡಲಾಗಿರುತ್ತದೆ.

ಪ್ರಕೃತಿಯಲ್ಲಿ ನಡೆಯುವ ಅನಿರೀಕ್ಷಿತ ಘಟನೆಗಳಿಗೆ ಹೆದರುತ್ತಿದ್ದ ಮಾನವನು ಅದನ್ನು ಶಾಂತಗೊಳಿಸುವುದಾಗಿ ಪ್ರಕೃತಿಯನ್ನೇ ಪೂಜಿಸತೊಡಗಿದನು. ಹೀಗೆ ಅವನು ಪೂಜಿಸಿದ್ದು ತನಗೆ ಆಹಾರವನ್ನೂ ನೆರಳನ್ನೂ ಕೊಡುತ್ತಿದ್ದ ಮರಗಳನ್ನು. ಮರಗಳಿಗೆ ಪೂಜೆ ಪುನಸ್ಕಾರಗಳನ್ನು ಮಾಡುತ್ತಿದ್ದ ಮಾನವನು ನಂತರದ ದಿನಗಳಲ್ಲಿ ಅದಕ್ಕೆ ಕಂಬಗಳನ್ನು ಕಟ್ಟಿ ಚಪ್ಪರಗಳನ್ನು ಹಾಕಿಕೊಂಡು ಗುಡಿ ಗೋಪುರಗಳನ್ನು ನಿರ್ಮಿಸಿಕೊಂಡನು. ಮರವು ಒಣಗಿದಾಗ ಅದರ ಸ್ಥಾನದಲ್ಲಿ ಕಲ್ಲನೋ ಇಲ್ಲ ಇನ್ನಾವುದೋ ವಸ್ತುವನ್ನು ಇಟ್ಟು ಪೂಜಿಸತೊಡಗಿದ. ಹೀಗೆ ಪ್ರಾರಂಭವಾದದ್ದು ಮೂರ್ತಿ ಪೂಜೆ ಎಂದು ತೋರುತ್ತದೆ. ನಂತರದ ದಿನಗಳಲ್ಲಿ ಅದಕ್ಕೆ ಮುಖಮಂಟಪವೂ ಸೇರಿದಂತೆ ಇತರೆ ಪ್ರಾಕಾರಗಳನ್ನು ಜೋಡಿಸಿದಂತೆ ಕಾಣುತ್ತದೆ.

ಮಾನವನು ಸಂಘ ಜೀವಿಯಾಗುತ್ತಿದ್ದಂತೆ ಅಲೆಮಾರಿಯಂತೆ ಅಲೆದಾಡುವುದನ್ನು ಬಿಟ್ಟು ಶಾಶ್ವತವಾಗಿ ಒಂದು ಕಡೆ ನೆಲೆ ನಿಂತನು. ಅವನ ಭಯದಿಂದ ನಿರ್ಮಾಣವಾದ ದೇವಾಲಯಗಳು ಧಾರ್ಮಿಕ ನೆಲೆಗಳಷ್ಟೇ ಆಗಿರದೆ ಅವನ ಸಮಾಜದ ಚಟುವಟಿಕೆಗಳಿಗೆ ಕೇಂದ್ರ ಬಿಂದುವಾಯಿತು. ಇಲ್ಲಿ ರಾತ್ರಿಯ ಹೊತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೂ ಜರುಗುತ್ತಿದ್ದವು. ಕೆಲವು ದೇವಾಲಯಗಳು ಆಸ್ಪತ್ರೆಯಂತೆ ಕಾರ್ಯನಿರ್ವಹಿಸುತ್ತಿದ್ದ ಪುರಾವೆಗಳು ಚರಿತ್ರೆಯಲ್ಲಿ ದೊರೆಯುತ್ತವೆ.

ಕೆಲವು ದೇವಾಲಯಗಳು ವಿದ್ಯಾಕೇಂದ್ರಗಳೂ ಆಗಿದ್ದವು. ಹೀಗಿರುವಾಗ ದೇವಾಲಯದ ಆವರಣದಲ್ಲಿ ರಾತ್ರಿಯ ಹೊತ್ತು ಬೆಳಕಿನ ಅವಶ್ಯಕತೆ ಇತ್ತು. ಆದುದರಿಂದ ಮೊದಲು ಬೆಳಕಿಗಾಗಿ ದೀಪಸ್ತಂಭಗಳನ್ನು ದೇವಾಲಯದ ಆವರಣದಲ್ಲಿ ಸ್ಥಾಪಿಸಿದನು ಎಂದು ತೋರುತ್ತದೆ. ಅಷ್ಟೇ ಅಲ್ಲದೆ ಬೆಂಕಿ ಇದ್ದರೆ ಕ್ರೂರ ಮೃಗಗಳು ಸುಳಿಯುವುದಿಲ್ಲ

ಎಂಬುವುದು ದೇವಾಲಯಗಳ ಆವರಣದಲ್ಲಿ ದೀಪಸ್ತಂಭಗಳು ಅಸ್ತಿತ್ವಕ್ಕೆ ಮತ್ತೊಂದು ಕಾರಣದಂತೆ ತೋರುತ್ತದೆ. ನಂತರದ ದಿನಗಳಲ್ಲಿ ದೀಪಸ್ತಂಭವು ಅಧ್ಯಾತ್ಮಿಕತೆಯ ರೂಪವನ್ನು ಪಡೆಯಿತು ಎಂದು ಎನಿಸುತ್ತದೆ.

ಚರಿತ್ರೆಯಲ್ಲಿ ದೊರೆಯುವ ಪ್ರಾಚೀನ ದೇವಾಲಯಗಳು ಎಂದರೆ ಸಮಾಧಿ ಮಂದಿರಗಳೇ ಆಗಿವೆ. ಬುದ್ಧನ ಸಮಾಧಿ ಮಂದಿರಗಳು ಎಂದು ಕರೆಸಿಕೊಳ್ಳುವ ಸ್ತೂಪಗಳೇ ಇದಕ್ಕೆ ಸಾಕ್ಷಿ. ತನ್ನ ಜೊತೆಗಿರುವವರು ಯಾರಾದರೂ ಸತ್ತರೆ ಅವರ ಕಳೇಬರವನ್ನು ಹೂತು ಅದರ ಮೇಲೆ ಕಲ್ಲನ್ನು ಇಡುವ ಪದ್ಧತಿಯು ಪ್ರಾಚೀನ ಕಾಲದಲ್ಲಿ ಇದ್ದುದು ತಿಳಿದು ಬರುತ್ತದೆ. ಹೀಗೆ ಇಡುವಾಗ ಆ ದೇಹದ ತಲೆ ಇರುವ ಭಾಗದಲ್ಲಿ ಒಂದು ಕಲ್ಲು, ದೇಹದ ಭಾಗದಲ್ಲಿ ಮತ್ತೊಂದು ಕಲ್ಲು, ಕೈಕಾಲುಗಳು ಇರುವ ಜಾಗದಲ್ಲಿ ಕಲ್ಲುಗಳನ್ನು ಇಡುತ್ತಿದ್ದನು. ಇದೇ ಆಧಾರದ ಮೇಲೆ ವಾಸ್ತು ರಚನೆಯ ಬೆಳವಣಿಗೆಯು ಆಗಿರಬೇಕು.

ದೇವಾಲಯದ ವಾಸ್ತು ರಚನೆಯಲ್ಲಿ ಈ ರೀತಿಯ ಅಂಶಗಳು ಇರುವುದು ಕಾಣುತ್ತದೆ. ಹಿಂದೂ ಧರ್ಮದ ದೇವಾಲಯಗಳು ವಾಸ್ತುಶಾಸ್ತ್ರದ ಆಧಾರದ ಮೇಲೆ ನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ. ವಾಸ್ತುಶಾಸ್ತ್ರ ಗ್ರಂಥದಲ್ಲಿ ಕಟ್ಟಡದ ಯಾವ ಭಾಗವು ಯಾವದಿಕ್ಕಿಗೆ ಇರಬೇಕು, ಅದರ ಪ್ರಮಾಣಗಳು ಏನು ಎಂಬುದರನ್ನು ಕುರಿತು ತಿಳಿಸಲಾಗುತ್ತದೆ. ವಾಸ್ತು ಎಂದರೆ ವಾಸಿಸುವ ಸ್ಥಳ ಎಂದು ಅರ್ಥ.

ದೇವಾಲಯದ ವಾಸ್ತುವಿನಲ್ಲಿ ದೇವಾನುದೇವತೆಗಳು ವಾಸಿಸುತ್ತಾರೆ ಎನ್ನುವ ನಂಬಿಕೆಯು ಹಿಂದೂ ಧರ್ಮದಲ್ಲಿ ಇರುವುದು ಕಾಣುತ್ತದೆ. ದೇವಾಲಯದ ಆವರಣದಲ್ಲಿ ವಾಸ್ತುಪುರುಷನ ಮಲಗಿರುವ ಚಿತ್ರವನ್ನು ಕಲ್ಪಿಸಿಕೊಂಡು ಅವನ ತಲೆ ಇರುವಲ್ಲಿ ಗರ್ಭಗುಡಿ, ಅವನ ಪಾದ ಇರುವಲ್ಲಿ ಮಹಾದ್ವಾರ, ಅವನ ಕೈ, ದೇಹದ ಇತರೆ ಭಾಗಗಳಿರುವೆಡೆ ದೇವಾಲಯದ ಇತರೆ ಪ್ರಾಕಾರಗಳು ಬರುವಂತೆ ನಿರ್ಮಿಸಿಕೊಂಡನು.

ವಾಸ್ತುಶಾಸ್ತ್ರದ ಪ್ರಕಾರ ದೇವಾಲಯದ ಆವರಣ ಹೊರಗೆ ಇರುವ ಬಲಿಪೀಠವು ವಾಸ್ತು ಪುರುಷನ ಹೊಕ್ಕುಳ(ನಾಭಿ)ಯ ಸ್ಥಾನದಲ್ಲಿದೆ ಎಂದು ಹೇಳಲಾಗುತ್ತದೆ. ದೇವಾಲಯದ ಮಹಾದ್ವಾರವನ್ನು ಅವನ ಪಾದ ಎಂದು ಗುರುತಿಸಲಾಗುತ್ತದೆ. ಹೀಗಿರುವಾಗ ದೇವಾಲಯದ ಆವರಣದಲ್ಲಿ ದೀಪಸ್ತಂಭಗಳು ಬಲಿಪೀಠ ಮತ್ತು ಮಹಾದ್ವಾರದ ನಡುವೆ ಇರುವುದನ್ನು ನೂಡಬಹುದು. ಹಾಗಾದರೆ ದೀಪಸ್ತಂಭದ ಸ್ಥಾನವು ವಾಸ್ತು ಪುರುಷನ ಜನನೇಂದ್ರಿಯದ ಸ್ಥಾನವನ್ನು ಸಾಂಕೇತಿಸುತ್ತದೆ ಎಂದು ಅರ್ಥೈಸಿಕೊಳ್ಳಬಹುದಾಗಿದೆ. ಈ ದೀಪಸ್ತಂಭಗಳು ದೇವಾಲಯದ ಗರ್ಭಗುಡಿಯ ಮೇಲ್ಛಾವಣಿಗಿಂತ ಎತ್ತರವಾಗಿಯೂ ಗರ್ಭಗುಡಿಯ ಮೇಲಿನ ವಿಮಾನಕ್ಕಿಂತಲೂ ಚಿಕ್ಕದಾಗಿಯೂ ನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ.

ದೀಪಸ್ತಂಭದ ವಾಸ್ತುರಚನೆಯಲ್ಲಿ ಬ್ರಹ್ಮಭಾಗ ವಿಷ್ಣುಭಾಗ ಮತ್ತು ರುದ್ರಭಾಗಗಳು ಇರುವುದನ್ನು ಕಾಣುತ್ತೇವೆ. ಈ ರೀತಿಯ ರಚನೆಯು ಲಿಂಗದಲ್ಲಿಯೂ ಇರುವುದು ತಿಳಿದು ಬರುತ್ತದೆ. ಬ್ರಹ್ಮ ಭಾಗ ಮತ್ತು ವಿಷ್ಣು ಭಾಗಗಳು ಶಿವಲಿಂಗದ ಪೀಠದಲ್ಲಿ ಇರುತ್ತವೆ. ಪೀಠದ ಮೇಲೆ ರುದ್ರ ಭಾಗವು ಮಾತ್ರ ಇರುವುದು ಕಾಣುತ್ತದೆ. ಇದನ್ನು ಪೂಜಾ ಭಾಗ ಎಂದೂ ಕರೆಯುತ್ತಾರೆ. ಶಿವಲಿಂಗದಲ್ಲಿ ಇರುವಂತೆ ಪಾರ್ವತೀ ಸ್ವರೂಪದ ಪೀಠವು ದೀಪಸ್ತಂಭಗಳಲ್ಲಿ ಇರುವುದಿಲ್ಲ.

ದೀಪಸ್ತಂಭದ ರಚನೆಯನ್ನು ಪೀಠ, ದಂಡ ಮತ್ತು ಗ್ರೀವಗಳಾಗಿ ವಿಂಗಡಿಸಬಹುದು. ದೀಪಸ್ತಂಭದಲ್ಲಿ ಲಿಂಗದಲ್ಲಿ ಇರುವಂತೆ ಚೌಕಾಕಾರದ ಭಾಗ, ಅಷ್ಟಭುಜದ ಭಾಗ ಮತ್ತು ವೃತ್ತಾಕಾರದ ಇಲ್ಲವೇ ಹದಿನಾರು ಭುಜದ ಭಾಗಗಳು ಇರುತ್ತವೆ. ಇದನ್ನು ದಂಡದ ಭಾಗ ಎಂದು ಗುರುತಿಸಲಾಗುತ್ತದೆ. ಸ್ತಂಭದ ತುದಿಯಲ್ಲಿ ಇರುವ ಭಾಗವನ್ನು ಗ್ರೀವ ಎಂದು ಕರೆಯಲಾಗುತ್ತದೆ. ಈ ಭಾಗದಲ್ಲಿ ಘಟ ಮತ್ತು ಫಲಕದ ರಚನೆಗಳು ಇರುವುದನ್ನು ಕಾಣುತ್ತೇವೆ. ಇದರ ಮೇಲೆ ಬಲಿಪೀಠ ಇಲ್ಲವೇ ಲಿಂಗಾಕಾರದ ಪುಟ್ಟ ರಚನೆಯು ಇರುವುದನ್ನು ನೋಡಬಹುದು. ಈ ರೀತಿಯ ದೀಪಸ್ತಂಭಗಳು ಕರ್ನಾಟಕದಲ್ಲಿ ಹೆಚ್ಚಾಗಿ ದೊರೆಯುತ್ತವೆ.

ಕರ್ನಾಟಕದಲ್ಲಿ ದೊರೆಯುವ ಮತ್ತೊಂದು ವಿಧದ ಏಕಶಿಲಾಸ್ತಂಭವು ಚೋಳರ ಶೈಲಿಯ ಸ್ತಂಭವಾಗಿದೆ. ಈ ದೀಪಸ್ತಂಭವನ್ನು ಪೀಠ, ದಂಡ, ಗ್ರೀವ ಎಂದು ಮೂರು ಭಾಗಗಳನ್ನಾಗಿ ವಿಂಗಡಿಸಬಹುದು. ಸ್ತಂಭದ ದಂಡದ ಭಾಗವು ಚೌಕಾಕಾರದ ಭಾಗ ಮತ್ತು ಅಷ್ಟಭುಜದ ಭಾಗವನ್ನು ಮಾತ್ರ ಹೊಂದಿರುತ್ತದೆ. ಈ ಸ್ತಂಭದ ಗ್ರೀವದ ಭಾಗದಲ್ಲಿ ಘಟ, ಫಲಕ, ಪೋಟಿಕಾ ಮತ್ತು ಬಲಿಪೀಠ ಎಂಬ ರಚನೆಗಳು ಇರುವುದು ಕಾಣುತ್ತದೆ.

ಕೆಲವು ದೀಪಸ್ತಂಭಗಳಲ್ಲಿ ಸ್ತಂಭದ ದಂಡದ ಭಾಗವು ಧಾರಾಲಿಂಗದಂತೆ ಕೆಳಗಿನಿಂದ ತುದಿಯವರೆಗೂ ಲಂಬವಾದ ಪಟ್ಟಿಕೆಗಳನ್ನು ಹೊಂದಿರುತ್ತದೆ. ದೀಪಸ್ತಂಭದ ರಚನೆಯಲ್ಲಿ ಸ್ತಂಭದ ಉದ್ದಕ್ಕೂ ನಾಲ್ಕು ಪಟ್ಟಿಕೆಗಳಿದ್ದರೆ ಅದನ್ನು ಬ್ರಹ್ಮಕಾಂತ ಎಂದೂ ಎಂಟು ಪಟ್ಟಿಕೆಗಳಿದ್ದರೆ ಅದನ್ನು ವಿಷ್ಣುಕಾಂತ ಎಂದೂ ಹದಿನಾರು ಪಟ್ಟಿಕೆಗಳಿದ್ದರೆ ಅದನ್ನು ರುದ್ರಕಾಂತ ಎಂದೂ ಕರೆಯುತ್ತಾರೆ.

ಕೆಲವು ದೇವಾಲಯಗಳ ಆವರಣದ ಹೊರಗೆ, ಮುಖ್ಯದ್ವಾರಕ್ಕೂ ಹೊರಗೆ ಎತ್ತರದ ದೀಪಸ್ತಂಭಗಳನ್ನು ಸ್ಥಾಪಿಸಿರುವುದು ಕಾಣುತ್ತದೆ. ದೇವಾಲಯಗಳು ಊರ ಹೊರಗೆ ಇದ್ದರೆ ಈ ರೀತಿಯ ನಿರ್ಮಾಣವನ್ನು ಮಾಡಿರುತ್ತಾರೆ. ಕೆಲವು ದೇವಾಲಯಗಳಲ್ಲಿ ದೂರದಿಂದಲೇ ಭಕ್ತನಿಗೆ ದೇವರ ದರ್ಶನವಾಗಲಿ ಎಂದು ದೇವಾಲಯದ ಆವರಣದಲ್ಲಿ ದೇವಮೂರ್ತಿಗೆ ಎದುರಾಗಿ ಇರಬೇಕಾದ ದೀಪಸ್ತಂಭವನ್ನು ಸ್ವಲ್ಪ ಪಕ್ಕದಲ್ಲಿ

ಸ್ಥಾಪಿಸಲಾಗಿರುತ್ತದೆ. ಈ ರೀತಿಯ ದೇವಾಲಯಗಳಲ್ಲಿ ದೇವಾಲಯದ ದೇವಮೂರ್ತಿಗೆ ಎದುರಿಗೆ ಬೇರೆ ಇನ್ನಾವುದೇ ಸ್ತಂಭಗಳು ಇರುವುದಿಲ್ಲ.

ದೇವಾಲಯದ ಪ್ರಾಕಾರವು ದೊಡ್ಡದಾದರೆ ಎತ್ತರದ ದೀಪಸ್ತಂಭಗಳನ್ನು ದೇವಾಲಯದ ಹೊರಗೆ ಇಲ್ಲವೇ ಆವರಣದ ಒಳಗೆ ಸ್ವಲ್ಪ ಪಕ್ಕದಲ್ಲಿ ಸ್ಥಾಪಿಸಿರುವುದನ್ನು ಕಾಣುತ್ತೇವೆ. ಇವನ್ನು ಬೆಳಕಿಗಾಗಿ ಸ್ಥಾಪಿಸಿದ್ದಾರೆ ಎಂದು ಇಲ್ಲಿ ಅರ್ಥೈಸಿಕೊಳ್ಳಬೇಕಾಗುತ್ತದೆ. ದೇವಾಲಯದ ಆವರಣದ ಹೊರಗೆ ಇರುವ ದೀಪಸ್ತಂಭಗಳು ದೇವಾಲಯದ ಮಹಾದ್ವಾರದ ಎತ್ತರಕ್ಕೆ ಅನುಗುಣವಾಗಿ ನಿರ್ಮಿಸಿರುತ್ತಾರೆ. ಇದರ ಎತ್ತರವು ಮುಖ್ಯ ದ್ವಾರಕ್ಕಿಂತ ಎತ್ತರವಾಗಿಯೂ ಮತ್ತು ದ್ವಾರದ ಮೇಲಿನ ಗೋಪುರಕ್ಕಿಂತ ಚಿಕ್ಕದಾಗಿಯೂ ನಿರ್ಮಿಸಿರುವುದು ಕಾಣುತ್ತದೆ. ಈ ದೀಪಸ್ತಂಭದ ಎತ್ತರಕ್ಕೂ ದೇವಾಲಯದ ಗಭಗುಡಿಯ ಮೇಲಿನ ಗೋಪುರದ ಎತ್ತರಕ್ಕೂ ಯಾವುದೇ ಸಂಬಂಧವಿರುವುದಿಲ್ಲ.

ದಕ್ಷಿಣ ಕರ್ನಾಟಕದಲ್ಲಿ ದೀಪಸ್ತಂಭಗಳು ಎಂದು ಕರೆಸಿಕೊಳ್ಳುವ ಸ್ತಂಭಗಳು ದೊರೆತರೆ ಉತ್ತರ ಕರ್ನಾಟಕದಲ್ಲಿ ದೀಪಮಾಲೆಗಂಬಗಳು ದೊರೆಯುತ್ತವೆ. ದೀಪಸ್ತಂಭಗಳು ಏಕಶಿಲಾ ಸ್ತಂಭಗಳಾದರೆ ದೀಪಮಾಲೆಗಂಬಗಳು ಕಟ್ಟುಕಂಬಗಳು. ಇವನ್ನು ಹೆಚ್ಚಾಗಿ ಶಿಲೆಯಲ್ಲಿ ನಿರ್ಮಿಸಿರುತ್ತಾರೆ. ದೀಪಸ್ತಂಭದಲ್ಲಿ ಸ್ತಂಭದ ತುದಿಯಲ್ಲಿ ಮಾತ್ರ ದೀಪವನ್ನು ಬೆಳಗಲು ಅವಕಾಶವನ್ನು ಮಾಡಿರುತ್ತಾರೆ. ದೀಪಮಾಲೆಗಂಬದಲ್ಲಿ ಕಂಬದ ಎತ್ತರಕ್ಕೂ ದೀಪಗಳನ್ನು ಬೆಳಗಬಹುದು. ಈ ಸ್ತಂಭಗಳಲ್ಲಿ ದೀಪಗಳನ್ನು ಬೆಳಗಲು ಸ್ತಂಭದಿಂದ ಹೊರಚಾಚಿದಂತೆ ರಚನೆಗಳು ಇರುವುದು ಕಾಣುತ್ತದೆ. ಪ್ರತಿಯೊಂದರಲ್ಲೂ ದೀಪವನ್ನು ಬೆಳಗುವ ಅನುಕೂಲವನ್ನು ಮಾಡಲಾಗಿರುತ್ತದೆ. ಇದು ದೀಪದ ಮಾಲೆಯಂತೆ ಕಾಣುವುದರಿಂದ ದೀಪಮಾಲೆಗಂಬ ಎಂದು ಹೆಸರು.

ದೇವಾಲಯದ ದೀಪಸ್ತಂಭಗಳನ್ನು ವಿವಿಧ ಮಾಧ್ಯಮಗಳಲ್ಲಿ ನಿರ್ಮಿಸಿರುವುದು ಕಾಣುತ್ತದೆ. ಮಾನವನು ತನ್ನ ಪರಿಸರಕ್ಕೆ ತಕ್ಕಂತೆ ಅಲ್ಲಿ ದೊರೆಯುವ ಸಾಮಗ್ರಿಗಳಿಗೆ ಅನುಗುಣವಾಗಿ ವಿವಿಧ ಮಾಧ್ಯಮಗಳನ್ನು ಕಂಡುಕೊಂಡಿದ್ದಾನೆ. ಮೊದಲಿಗೆ ಅವನು ಬಳಸಿದ್ದು ಮರವನ್ನು. ಮರದ ಒಣಗಿದ ಕೊಂಬೆರೆಂಬೆಗಳಿಂದ ಗುಡಿಸಲನ್ನು ಮಾನವನು ನಿರ್ಮಿಸುತ್ತಿದ್ದನು. ನಂತರದ ದಿನಗಳಲ್ಲಿ ಅವುಗಳು ಸುಂದರವಾಗಿ ಕಾಣಲು ಕೆತ್ತನೆಯ ಕೆಲಸವನ್ನು ಮಾಡಿದಂತೆ ತೋರುತ್ತದೆ.

ಅತ್ಯಂತ ಪ್ರಾಚೀನವಾದ ಮೌರ್ಯರ ಕಾಲದ ವಾಸ್ತುಶಿಲ್ಪವನ್ನು ಶಿಲಾ ಮಾಧ್ಯಮವನ್ನು ಬಳಸಿ ನಿರ್ಮಿಸಿರುವುದು ಕಾಣುತ್ತದೆ. ಆದರೆ ಇವುಗಳಲ್ಲಿ ಮರದ ರೀತಿಯಲ್ಲಿ ಕೆತ್ತನೆಯನ್ನು ಮಾಡಿರುವುದು ಗಮನಾರ್ಹವಾದುದು. ಈ ವಾಸ್ತುಶಿಲ್ಪವನ್ನು

ನೋಡಿದರೆ ಮರದಲ್ಲಿ ನಿರ್ಮಿಸಿರುವಂತೆ ಕಾಣುತ್ತದೆ. ಇದನ್ನು ನೋಡಿದರೆ ಇದಕ್ಕೂ ಮೊದಲಿಗೆ ಮರದಿಂದ ನಿರ್ಮಿಸಲ್ಪಟ್ಟ ರಚನೆಗಳು ಇದ್ದುವೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಅವು ಪ್ರಕೃತಿಯಲ್ಲಿ ಉಂಟಾಗುವ ಹವಾಮಾನದ ಬದಲಾವಣೆಗೆ ಹಾಳಾಗಿರುವ ಸಾಧ್ಯತೆಗಳೇ ಹೆಚ್ಚು. ಅದ್ದರಿಂದ ಪ್ರಾಚೀನ ಕಾಲದಲ್ಲಿ ಮರವನ್ನು ಬಳಸಿಕೊಂಡು ನಿರ್ಮಾಣವಾದ ಯಾವುದೇ ವಾಸ್ತುಶಿಲ್ಪಗಳು ನಮಗೆ ದೊರೆತಿಲ್ಲ. ಶಿಲಾ ಮಾಧ್ಯಮದಲ್ಲಿ ನಿರ್ಮಾಣವಾದ ಮರಕೆತ್ತನೆಯ ಶೈಲಿಯನ್ನು ಗುರುತಿಸಿ ಮೊದಲಿಗೆ ಮರದ ಕಟ್ಟಡಗಳು ಇದ್ದುವೆಂದು ಊಹಿಸಬಹುದಷ್ಟೇ.

ಹಿಂದೂ ಧರ್ಮದಲ್ಲಿ ಒಂದೊಂದು ಮರದಲ್ಲಿ ಒಂದೊಂದು ದೇವರು ನೆಲೆಸಿರುವರು ಎಂದು ನಂಬಲಾಗುತ್ತದೆ. ದೇವರು ಇರುವರು ಎಂದು ಗುರುತಿಸುವ ಮರಗಳನ್ನು ಮನೆಯ ನಿರ್ಮಾಣದಲ್ಲಿ ಬಳಸಲಾಗುವುದಿಲ್ಲ. ಇವುಗಳನ್ನು ಕೇವಲ ದೇವಾಲಯದ ವಾಸ್ತುವಿನಲ್ಲಿ ಮಾತ್ರ ಬಳಸಲಾಗುತ್ತದೆ. ಪೀಠಗಳನ್ನು ನಿರ್ಮಾಣ ಮಾಡಲು ಒಂದು ಜಾತಿಯ ಮರವನ್ನು ಬಳಸಿದರೆ ಪೀಠದ ಮೇಲಿನ ದೇವಮೂರ್ತಿಗೆ ಮತ್ತೊಂದು ಮರವನ್ನು ಬಳಸಲಾಗುವುದು. ಕೆಲವು ಮರಗಳ ಬಳಕೆಯಲ್ಲಿ ಅವುಗಳ ಸಾಮರ್ಥ್ಯದ ಆಧಾರದ ಮೇಲೆ ವಿಂಗಡಿಸಿಕೊಡು ಗೃಹ ನಿರ್ಮಾಣವನ್ನು ಮಾಡುವುದು ಕಂಡು ಬರುತ್ತದೆ. ಮರದ ಬಳಕೆಯಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆಯು ಇರುವುದನ್ನು ಗಮನಿಸಬಹುದು. ಇದು ಅಲ್ಲಿ ವಾಸಿಸುತ್ತಿರುವ ಜನರ ಜ್ಞಾನ ಮತ್ತು ಅನುಭವಗಳ ಮೇಲೆ ಅವಲಂಬಿಸಿರುತ್ತವೆ.

ಮರ ಮಾಧ್ಯಮದ ದೀಪಸ್ತಂಭಗಳು ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಹೆಚ್ಚಾಗಿ ದೊರೆಯುತ್ತವೆ. ಈ ಪ್ರದೇಶವನ್ನು ಹೊರತು ಪಡಿಸಿದರೆ ಉಳಿದ ಭಾಗದಲ್ಲಿ ಮರ ಮಾಧ್ಯಮದ ದೀಪಸ್ತಂಭಗಳು ದೊರೆಯುವುದಿಲ್ಲ. ಪ್ರಸ್ತುತ ಇಂತಹ ದೀಪಸ್ತಂಭಗಳಲ್ಲಿ ದೀಪವನ್ನು ಬೆಳಗಲಾಗುವುದಿಲ್ಲ. ಮರದ ದೀಪಸ್ತಂಭವನ್ನು ಹೆಚ್ಚಾಗಿ ಮಾವಿನ ಮರದಲ್ಲಿ ನಿರ್ಮಿಸಿರುವುದು ಕಾಣುತ್ತದೆ. ಈ ದೀಪಸ್ತಂಭಗಳನ್ನು ವರ್ಷಕ್ಕೆ ಒಂದು ಬಾರಿ ಬದಲಿಸಲಾಗುತ್ತದೆ.

ಮರ ಮಾಧ್ಯಮದ ರಚನೆಯನ್ನು ಮಾಡಲು ಕಲಿತ ಮಾನವನು ನಂತರ ಬಳಸಿದ ಮಾಧ್ಯಮವೆಂದರೆ ಕಲ್ಲು. ಕಲ್ಲು ಪ್ರಕೃತಿಯಲ್ಲಿ ನೇರವಾಗಿ ದೊರೆಯುವ ಮಾಧ್ಯಮವಾಗಿದೆ. ಇದು ಮರಕ್ಕಿಂತಲೂ ಗಟ್ಟಿಯಾದ ಮಾಧ್ಯಮ ಮತ್ತು ಹೆಚ್ಚು ಬಾಳಿಕೆ ಬರುತ್ತದೆ. ಚರಿತ್ರೆಯಲ್ಲಿ ನಮಗೆ ದೊರೆತಿರುವ ಪ್ರಾಚೀನ ಕಾಲದ ವಾಸ್ತುಶಿಲ್ಪಗಳು ಹೆಚ್ಚಿನದಾಗಿ ಕಲ್ಲಿನದಾಗಿವೆ. ಮೌರ್ಯರ ಕಾಲದಲ್ಲಿ ನಿರ್ಮಾಣವಾದ ಸ್ತೂಪ, ವಿಹಾರ ಮತ್ತು ಚೈತ್ಯಾಹಾಲ್‌ಗಳೇ ಇದಕ್ಕೆ ಸಾಕ್ಷಿ.

ಪ್ರತಿಯೊಂದು ಪ್ರದೇಶದಲ್ಲಿಯೂ ವಿವಿಧ ಬಣ್ಣದ, ವಿವಿಧ ವಿನ್ಯಾಸವನ್ನು

ಹೊಂದಿರುವ ಶಿಲೆಗಳು ದೊರೆಯುತ್ತವೆ. ಇವು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದು ಕಂಡು ಬರುತ್ತದೆ. ಕೆಲವು ಕೆಡೆ ಕಪ್ಪು ಬಣ್ಣದ ಕಲ್ಲು ದೊರೆತರೆ ಮತ್ತೆ ಕೆಲವು ಕಡೆಗಳಲ್ಲಿ ಕೆಂಪು ಬಣ್ಣದ ಕಲ್ಲುಗಳು ಇರುವುದನ್ನು ನೋಡಬಹುದು. ಆಯಾ ಪ್ರದೇಶಗಳಲ್ಲಿ ನೈಸರ್ಗಿಕವಾಗಿ ದೊರೆಯುವ ಕಲ್ಲುಗಳನ್ನು ಉಪಯೋಗಿಸಿಕೊಂಡು ಮಾನವನು ತನಗೆ ಬೇಕಾದ ವಾಸ್ತುಶಿಲ್ಪಗಳನ್ನು ನಿರ್ಮಿಸಿರುವುದು ಕಾಣುತ್ತದೆ.

ದೇವಾಲಯದ ಆವರಣದಲ್ಲಿ ಶಿಲಾ ಮಾಧ್ಯಮದ ದೀಪಸ್ತಂಭಗಳು ದೊರೆಯುತ್ತವೆ. ಶಿಲಾ ಮಾಧ್ಯಮದ ದೀಪಸ್ತಂಭಗಳಲ್ಲಿ ಇರುವ ದಂಡದ ಭಾಗವು ಹೆಚ್ಚಾಗಿ ಏಕಶಿಲಾ ಸ್ತಂಭವಾಗಿರುತ್ತದೆ. ಇದರಲ್ಲಿ ಸ್ತಂಭದ ತುದಿಯಲ್ಲಿ ದೀಪವನ್ನು ಬೆಳಗಲು ಸ್ಥಳಾವಕಾಶವನ್ನು ಮಾಡಿರುತ್ತಾರೆ. ಸ್ತಂಭದ ತುದಿಯಲ್ಲಿ ಕಲ್ಲಿನಲ್ಲಿ ಮಾಡಿದ ದೀಪದ ಬಟ್ಟಲು ಇರುವುದು ಕಾಣುತ್ತದೆ. ಕರ್ನಾಟಕದ ದಕ್ಷಿಣದ ಭಾಗದಲ್ಲಿ ಶಿಲಾ ಮಾಧ್ಯಮದ ದೀಪಸ್ತಂಭಗಳು ಹೆಚ್ಚಾಗಿ ದೊರೆಯುವುದನ್ನು ನೋಡಬಹುದು.

ದೀಪಸ್ತಂಭಗಳನ್ನು ಸುಂದರವಾಗಿ ನಿರ್ಮಿಸಲು ಮಾನವನು ಬಳಸಿದ ಮತ್ತೊಂದು ಮಾಧ್ಯಮವೆಂದರೆ ಲೋಹ. ಭಾರತೀಯ ನಾಗರೀಕತೆಯ ಮೂಲ ಎಂದು ಗುರುತಿಸಿಕೊಳ್ಳುವ ಸಿಂಧೂನದಿ ನಾಗರೀಕತೆಯ ಕಾಲದಲ್ಲಿ ಕಂಚಿನ ಶಿಲ್ಪಗಳನ್ನು ರಚಿಸುತ್ತಿದ್ದರು. ದೀಪಸ್ತಂಭಗಳಲ್ಲಿ ಹೆಚ್ಚಾಗಿ ಕಂಚನ್ನು ಬಳಸಿಕೊಂಡಿರುವುದು ಕಾಣುತ್ತದೆ. ಕೆಲವು ದೀಪಸ್ತಂಭಗಳನ್ನು ಕಬ್ಬಿಣದಲ್ಲೂ ನಿರ್ಮಿಸಲಾಗಿದೆ.

ಕರ್ನಾಟಕದ ಕೆಲವು ದೇವಾಲಯದ ಆವರಣದಲ್ಲಿ ಕಂಚಿನ ದೀಪಸ್ತಂಭಗಳು ಇರುವುದು ಕಾಣುತ್ತದೆ. ಕೆಲವು ದೇವಾಲಯಗಳಲ್ಲಿ ಧ್ವಜಸ್ತಂಭವನ್ನೂ ಲೋಹದಲ್ಲಿ ರಚಿಸಿರುತ್ತಾರೆ. ಲೋಹದಲ್ಲಿ ನಿರ್ಮಿಸಿದ ಧ್ವಜಸ್ತಂಭಗಳಿಗೆ ಚಿನ್ನದ ಇಲ್ಲವೇ ಬೆಳ್ಳಿಯ ಲೇಪನವನ್ನೂ ಮಾಡಿರುತ್ತಾರೆ. ದೀಪಸ್ತಂಭಗಳಿಗೆ ಚಿನ್ನದ ಇಲ್ಲವೇ ಬೆಳ್ಳಿಯ ಲೇಪನವು ಇರುವುದಿಲ್ಲ. ದೀಪಸ್ತಂಭಗಳು ಲೋಹದ್ದಾದರೆ ಕಂಚಿನ ಇಲ್ಲವೇ ಕಬ್ಬಿಣದಲ್ಲಿ ರಚಿಸಲ್ಪಟ್ಟಿರುವುದು ಕಾಣುತ್ತದೆ.

ವಾಸ್ತುಶಾಸ್ತ್ರದಲ್ಲಿ ಧ್ವಜಸ್ತಂಭಗಳನ್ನು ಕುರಿತು ಹೇಳುತ್ತಾ ಧ್ವಜಸ್ತಂಭವನ್ನು ಮರದಿಂದ ರಚಿಸಬೇಕು ಎಂದು ಹೇಳಲಾಗಿದೆ. ಇದಕ್ಕೆ ಲೋಹದ ಕವಚವನ್ನು ಹಾಕಲೇಬೇಕು ಎಂಬ ನಿಯಮವು ವಾಸ್ತುಶಾಸ್ತ್ರದಲ್ಲಿ ಇಲ್ಲ. ಆದರೆ ಇದರ ಪೀಠ ಮಾತ್ರ ಕಲ್ಲಿನದಾಗಿರಬೇಕು ಎನ್ನುವ ನಿಯಮವು ವಾಸ್ತುಶಾಸ್ತ್ರದಲ್ಲಿ ಇರುವುದು ಕಾಣುತ್ತದೆ. ದೀಪಸ್ತಂಭಗಳಲ್ಲೂ ಇದೇ ನಿಯಮವನ್ನು ಅನುಸರಿಸಿರಬೇಕು. ದೀಪಸ್ತಂಭಗಳು ಯಾವುದೇ ಮಾಧ್ಯಮದಲ್ಲಿ ನಿರ್ಮಾಣವಾಗಿದ್ದರೂ ಇದರ ಪೀಠ ಮಾತ್ರ ಕಲ್ಲಿನಲ್ಲಿ ನಿರ್ಮಿಸಿರುವುದು ಕಾಣುತ್ತದೆ.

ಕಲೆ ಎನ್ನುವುದು ಮೂಲತಃ ಪ್ರಕೃತಿಯ ಮಡಿಲಲ್ಲಿ ಬೆಳದ ಮಾನವನ ಸ್ವಭಾವಕ್ಕೆ ಸಂಬಂಧಿಸಿದುದಾಗಿದೆ[೧]. ಪ್ರಸ್ತುತ ದಿನಗಳಲ್ಲಿ ಇರುವಂತೆ 'ಕಲೆಗಾಗಿ ಕಲೆ' ಎಂಬ ಉದ್ದೇಶ

---

೧. ಡಾ. ಎಸ್. ಸಿ. ಪಾಟೀಲ: **ಕರ್ನಾಟಕ ಜನಪದ ಚಿತ್ರಕಲೆ** (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ), ಪಿಹೆಚ್.ಡಿ ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಮ.ಪ್ರ. ಪುಟ– ೧೮.

ಪ್ರಾಚೀನ ಯುಗದಲ್ಲಿ ಇರಲಿಲ್ಲ. ಕಲೆಯು ಧರ್ಮಕ್ಕಾಗಿ ಎಂಬ ತತ್ತ್ವವು ಇತ್ತು ಎಂಬ ಮಾತು ಸತ್ಯವಾದುದೇ ಆಗಿದೆ. ದೇವಾಲಯಗಳಲ್ಲಿರುವ ಕಲೆಯನ್ನು ನೋಡಿದರೆ ಈ ವಿಷಯ ತಿಳಿದು ಬರುತ್ತದೆ. ಧರ್ಮಕ್ಕೆ ಭಯವೇ ಮೂಲ ಕಾರಣ ಎನ್ನುವ ಹಿನ್ನೆಲೆಯಲ್ಲಿಯೇ ಧರ್ಮದ ಹಿನ್ನೆಲೆಯನ್ನು ಹೊಂದಿರುವ ಸಾಂಪ್ರದಾಯಿಕ ಕಲೆಗೂ ಭಯವೇ ಮೂಲ ಕಾರಣ ಎನ್ನಬಹುದಾಗಿದೆ. ಕಲೆಯು ಧಾರ್ಮಿಕತೆ ಹಾಗೂ ಆಧ್ಯಾತ್ಮಿಕತೆಯನ್ನು ಮೀರಿ ನಿಂತಿರುವುದೆಂದು ಭಾರತೀಯರ ಪರಿಕಲ್ಪನೆ. ಹಾಗಾಗಿ ಭಾರತೀಯರು ದೇವಾಲಯದ ಆವರಣಗಳಲ್ಲಿ ಚಿತ್ರಗಳನ್ನಾಗಿಯೋ, ಮೂರ್ತಿಶಿಲ್ಪಗಳನ್ನಾಗಿಯೋ ಇಲ್ಲವೇ ಸಂಕೇತಗಳನ್ನಾಗಿಯೋ ಕಲೆಯನ್ನು ಬಳಸಿಕೊಂಡಿರುವುದು ಕಾಣುತ್ತದೆ.

ದೇವಾಲಯಗಳಲ್ಲಿ ಕಲೆಯು ಮಾನವನ ಆಧ್ಯಾತ್ಮಿಕ ಚಿಂತನೆ, ಅನುಭವಗಳನ್ನು ಉತ್ತುಂಗಕ್ಕೆ ಏರಿಸುವುದಾಗಿದೆ. ಭಾರತೀಯ ಧಾರ್ಮಿಕ ಆಚರಣೆಗಳಲ್ಲಿ ಶೈವ, ವೈಷ್ಣವ, ಶಾಕ್ತ, ಬೌದ್ಧ ಮತ್ತು ಜೈನ ಪಂಥಗಳ ಆಧಾರದ ಮೇಲೆ ನಡೆಯುವುದನ್ನು ನೋಡಬಹುದು. ಶೈವ, ವೈಷ್ಣವ, ಶಾಕ್ತ ಧರ್ಮದ ಪಂಥಗಳನ್ನು ಒಟ್ಟಾರೆಯಾಗಿ ಹಿಂದೂ ಪಂಥವೆಂದು ಕರೆಯಲಾಗುತ್ತದೆ. ಪುರಾಣಗಳಲ್ಲಿ ಶಿವ, ವಿಷ್ಣು, ಬ್ರಹ್ಮ ಮತ್ತು ಶಕ್ತಿಯನ್ನು ಪ್ರಮುಖ ದೇವತೆಗಳೆಂದು ಪರಿಗಣಿಸಿ ಪೂಜಾಚರಣೆಗಳು ನಡೆಯುತ್ತವೆ. ಇನ್ನುಳಿದ ದೇವಾನು ದೇವತೆಗಳು ಇವರ ಸಹಚರರಂತೆ ಇಲ್ಲವೇ ಉಪದೇವತೆಗಳಂತೆ ಚಿತ್ರಿಸಲಾಗುತ್ತದೆ.

ಕಲೆಯು ಮಾನವನ ಸಮಾಜದ ಜೊತೆ ಜೊತೆಗೆ ಬೆಳೆದು ಬಂದುದಾಗಿದೆ. ಇದು ಅವನ ಬದುಕಿನ ಅವಿಭಾಜ್ಯ ಅಂಗ ಎಂದೂ ಹೇಳಬಹುದು. ಕಲೆಯು ಎಂದೂ ನಿಲ್ಲುವಂತಹುದಲ್ಲ ಅದರಲ್ಲಿ ಬದಲಾವಣೆಗಳು, ಪ್ರಯೋಗಗಳು ನಡೆಯುತ್ತಲೇ ಇರುತ್ತವೆ. ಆದರೆ ಸಾಂಪ್ರದಾಯಿಕ ಕಲೆಯಲ್ಲಿ ಈ ರೀತಿಯ ಬದಲಾವಣೆಗಳು ದೊರೆಯುವುದಿಲ್ಲ. ಅದಕ್ಕೆ ತನ್ನದೇ ಆದ ನೀತಿ ನಿಯಮಗಳು ಇರುವುದನ್ನು ಕಾಣುತ್ತೇವೆ. ಆನಂದ ಕುಮಾರಸ್ವಾಮಿಯವರ ಪ್ರಕಾರ ಭಾರತೀಯ ಕಲೆಯು ಕಲಾವಿದನ ಸ್ವಂತ ಅಭಿವ್ಯಕ್ತಿಯಲ್ಲ ಅದು ಅವನ ಸಮಾಜದ, ಸಮುದಾಯದ ಅನುಭವಕ್ಕೆ ಸೇರಿರುವಂತಹುದು[೨]. ದೇವಾಲಯಗಳು ಸಮಾಜದ ಕೇಂದ್ರಬಿಂದುವಾದ್ದರಿಂದ ಅವು ಸಮಾಜದ, ಸಮುದಾಯದ ಅಭಿವ್ಯಕ್ತಿಗೆ ಮೂಲ ಕೇಂದ್ರವಾಗಿದ್ದವು.

ದೇವಾಲಯಗಳ ಆವರಣದಲ್ಲಿ ಚಿತ್ರ, ಶಿಲ್ಪಗಳನ್ನು ರಚಿಸಿ ಮಾನವನು ತನ್ನ ಜೀವನದ ಧ್ಯೇಯೋದ್ದೇಶಗಳನ್ನು ಮುಂದಿನ ಪೀಳಿಗೆಗಾಗಿ ಬಿಟ್ಟುಕೊಡುವ ಕಾರ್ಯವನ್ನು ಕೈಗೊಂಡನು. ದೇವಾಲಯವು ಧರ್ಮದ ಆಧಾರದ ಮೇಲೆ ನಿರ್ಮಾಣವಾಗಿರುವುದು ಕಾಣುತ್ತದೆ. ಆಯಾ ಧರ್ಮಗಳ ಪುರಾಣಗಳಲ್ಲಿ ಬರುವ ಸನ್ನಿವೇಶವನ್ನು ಇಲ್ಲವೇ ಅವುಗಳನ್ನು ಪ್ರತಿಬಿಂಬಿಸುವ ಇತರೆ ಶಿಲ್ಪಗಳನ್ನು ದೇವಾಲಯದ ಆವರಣದಲ್ಲಿ ಕೆತ್ತಲಾಗಿರುತ್ತದೆ.

---

೨. G.S. Amur: **Ananda coomaraswamy centenary essays,**
Edited by C.D. Narasimhaiah, ಪುಟ– ೫೮

ದೇವಾಲಯದ ಮೂಲದೇವರಿಗೆ ಸಂಬಂಧಿಸಿದ ಶಿಲ್ಪಗಳು ದೀಪಸ್ತಂಭಗಳಲ್ಲಿ ಇರುತ್ತವೆ. ಶೈವ ಧರ್ಮದ ದೇವಾಲಯವಾದರೆ ಶಿವನ ವಾಹನವಾದ ನಂದಿ, ಶಿವನ ಅಮೂರ್ತ ರೂಪ ಎಂದು ಗುರುತಿಸಿಕೊಳ್ಳುವ ಲಿಂಗ, ಶಿವನ ಆಯುಧಗಳು, ಗಣಪತಿ ಮುಂತಾದ ಉಬ್ಬುಶಿಲ್ಪಗಳು ದೇವಾಲಯದ ದೀಪಸ್ತಂಭಗಳಲ್ಲಿ ಇರುವುದನ್ನು ಕಾಣುತ್ತೇವೆ. ವೈಷ್ಣವ ಧರ್ಮದ ದೇವಾಲಯದ ದೀಪಸ್ತಂಭಗಳಲ್ಲಿ ವಿಷ್ಣುವಿನ ವಾಹನವಾದ ಗರುಡ, ಶ್ರೀ ರಾಮನ ಪರಮಭಕ್ತನಾದ ಹನುಮಂತ, ವಿಷ್ಣುವಿನ ಆಯುಧಗಳೂ ಸೇರಿದಂತೆ ಮುಂತಾದ ಉಬ್ಬುಶಿಲ್ಪಗಳು ಇರುತ್ತವೆ.

ಶಾಕ್ತ ಧರ್ಮದ ದೇವಾಲಯಗಳ ಆವರಣದಲ್ಲಿ ಹೆಚ್ಚಾಗಿ ದೀಪಸ್ತಂಭಗಳು ದೊರೆಯುವುದಿಲ್ಲ. ಈ ದೇವಾಲಯದ ಆವರಣದಲ್ಲಿ ಮೊದಲಿಗೆ ದೀಪಸ್ತಂಭಗಳು ಇರುತ್ತಿತ್ತು ಎಂದು ತೋರುತ್ತದೆ. ಪ್ರಸ್ತುತ ಅವುಗಳ ಸಂಖ್ಯೆಯು ಕಡಿಮೆಯಾಗಿದೆ. ಶಾಕ್ತ ದೇವಾಲಯಗಳ ಆವರಣದಲ್ಲಿ ಇರುವ ದೀಪಸ್ತಂಭಗಳಲ್ಲಿ ದೇವಿಗೆ ಸಂಬಂಧಿಸಿದ ಶಿಲ್ಪಗಳು ಇರುವುದನ್ನು ಕಾಣುತ್ತೇವೆ.

ದೀಪಸ್ತಂಭವು ಸೃಷ್ಟಿಯನ್ನು ಸಾಂಕೇತಿಸುತ್ತದೆ ಎನ್ನುವ ಹಿನ್ನೆಲೆಯಲ್ಲಿ ದೀಪಸ್ತಂಭದ ಕೆಳಗೆ ಕೂರ್ಮದ ಶಿಲ್ಪವು ಇರುವುದು ಕಾಣುತ್ತದೆ. ಪುರಾಣ ಕತೆಗಳಲ್ಲಿ ಬರುವ ಮಂದಾರ ಪರ್ವತದ ಮಂಥನದ ಸನ್ನಿವೇಶದಲ್ಲಿ ಮಂದಾರ ಪರ್ವತವನ್ನು ತನ್ನ ಬೆನ್ನ ಮೇಲೆ ಹೊತ್ತುಕೊಂಡ ಕೂರ್ಮವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ದೀಪಸ್ತಂಭದಲ್ಲಿ ಇರುವ ಕಮಲದ ಶಿಲ್ಪಗಳು ಸೃಷ್ಟಿ, ಜ್ಞಾನದ ಸಂಕೇತವಾಗಿದೆ. ಕಮಲವನ್ನು ಚರಾಚರಗಳ ಯೋನಿ ಎಂದೂ ಕರೆಯುತ್ತಾರೆ. ಎಂದರೆ ಕಮಲವು ಸೃಷ್ಟಿಯ ಸಂಕೇತ ಎಂದು ಇಲ್ಲಿ ಅರ್ಥೈಸಿಕೊಳ್ಳಬಹುದು.

ದೀಪಸ್ತಂಭಗಳಲ್ಲಿ ಇರುವ ಹಂಸದ ಶಿಲ್ಪವು ಬ್ರಹ್ಮನ ಸಂಕೇತವಾಗಿದೆ. ಪುರಾಣದ ಕತೆಯೊಂದರಲ್ಲಿ ಹೇಳಿರುವಂತೆ ಮಹಾಗ್ನಿ ಸ್ತಂಭವನ್ನು ನೋಡಲು ಬ್ರಹ್ಮನು ಹಂಸ ರೂಪವನ್ನು ತಾಳಿದುದನ್ನು ಇಲ್ಲಿ ಸ್ಮರಿಸಬಹುದು. ಕಮಲವನ್ನೂ ಬ್ರಹ್ಮನ ಸಂಕೇತವೆಂದೂ ಗುರುತಿಸಲಾಗುತ್ತದೆ. ಬ್ರಹ್ಮನು ಕಮಲದ ಮೇಲೆ ನಿಂತು ಸೃಷ್ಟಿಯ ಕಾರ್ಯವನ್ನು ಮಾಡಿದನು ಎಂಬ ಹಿಂದೂ ಧರ್ಮದಲ್ಲಿ ಇರುವ ನಂಬಿಕೆಯು ಈ ರೀತಿಯಾಗಿ ಅರ್ಥೈಸಿಕೊಳ್ಳುವಂತೆ ಮಾಡುತ್ತದೆ.

ಧರ್ಮವು ಮಾನವನ ಮನಸ್ಸನ್ನು ಚಂಚಲವಾಗದಂತೆ ನಿಯಂತ್ರಿಸುತ್ತದೆ. ಮನುಷ್ಯನ ಕೌಟುಂಬಿಕ, ಸಾಮಾಜಿಕ, ನೈತಿಕ ಬದುಕನ್ನು ನಿಯಂತ್ರಿಸಿ ಅದಕ್ಕೆ ದಾರಿ ತೋರುವುದು ಧರ್ಮದ ಉದ್ದೇಶಗಳಲ್ಲೊಂದಾಗಿದೆ[೩]. ಕಲೆಯು ಸಮುದಾಯದ ಸಂಪ್ರದಾಯ ಮತ್ತು

೩. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ- ಧರ್ಮ, ಕನ್ನಡ ವಿಶ್ವವಿದ್ಯಾಲಯ, ಪುಟ- ೩೫೯

ನಂಬಿಕೆಗಳಿಂದ ಪ್ರೇರಿತವಾದುದು. ಕಲೆಯ ಮಾಧ್ಯಮವನ್ನು ಬಳಸಿಕೊಂಡು ಆಯಾ ಸಮುದಾಯದ, ಸಂಪ್ರದಾಯದ ಸಂದೇಶಗಳನ್ನು ಮುಂದಿನ ಪೀಳಿಗೆಗೆ ತಿಳಿಸುವುದೂ ಅದರ ಮೂಲ ಉದ್ದೇಶವಾಗಿದೆ.

ಋಗ್ವೇದದಲ್ಲಿ **ರೂಪಂ ರೂಪಂ ಪ್ರತಿರೂಪೋ ಬಭೂವ ತದಸ್ಯ ರೂಪಂ ಪ್ರತಿಕ್ಷಣಾಯಃ** ಎಂದು ಹೇಳಲಾಗಿದೆ[೪]. ಋಗ್ವೇದದಲ್ಲಿ ಪರಮಾತ್ಮನ ವರ್ಣನೆಯನ್ನು ಮಾಡುತ್ತಾ ಅವನು ಪ್ರತಿಯೊಂದು ರೂಪಕ್ಕೆ ಮೂಲ ರೂಪನಾಗಿ ಇರುವನು ಎಂದೂ, ಪ್ರತಿಕ್ಷಣದಲ್ಲೂ ಕಾಣುವ ಎಲ್ಲವೂ ಅವನೇ ಎಂದು ಹೇಳಲಾಗಿದೆ. ಸಮಸ್ತವೂ ಅವನೇ ಎಂದು ಇದರರ್ಥವಾಗಿದೆ. ವೇದಗಳು ಭಾರತೀಯರ ಮೂಲ ಮತ್ತು ಬಹಳ ಪ್ರಮುಖವಾದ ಧರ್ಮ ಗ್ರಂಥಗಳಾಗಿವೆ.

ವೇದ ಸಂಸ್ಕೃತಿ ಎಂದರೆ ವೇದದಲ್ಲಿ ಪ್ರತಿಬಿಂಬಿತವಾದ ವ್ಯಕ್ತಿಯ ಅಂತರಂಗ ಜೀವನದಲ್ಲಿ ಬೇರುಬಿಟ್ಟ, ವಿಚಾರ, ತತ್ತ್ವ, ಧ್ಯೇಯ, ಮೌಲ್ಯ, ಸೌಂದರ್ಯ ಪ್ರಜ್ಞೆ, ಮಾನವನ ಉನ್ನತಿ ಅವನತಿಗಳ ಪ್ರಜ್ಞೆ, ಧಾರ್ಮಿಕ ಪ್ರಜ್ಞೆ, ಜೀವನ ಪರಿಕಲ್ಪನೆ, ಇತ್ಯಾದಿಗಳ ಸಮಗ್ರ ಚಿತ್ರ. ವೇದದಲ್ಲಿ ಶ್ರೀ ಎಂದರೆ ಲಕ್ಷ್ಮಿ ಎಂದು ಅರ್ಥೈಸಿಕೊಳ್ಳಲಾಗುತ್ತದೆ. ಜೀವನವನ್ನು ಸುಂದರವಾಗಿ, ಸಾರ್ಥಕವಾಗಿ, ಪರಿಪೂರ್ಣವಾಗಿ ಬಾಳಲು ಏನೆಲ್ಲಾ ಅವಶ್ಯಕವಿದೆಯೋ ಅವೆಲ್ಲವೂ ಶ್ರೀಯ ಅನುಗ್ರಹವೇ ಆಗಿದೆ[೫]. ಈ ಶ್ರೀಯನ್ನು ಒಲಿಸಿಕೊಳ್ಳಲು ದೀಪವನ್ನು ಬೆಳಗಲಾಗುತ್ತದೆ. ಬೆಳಕು ಜೀವನಕ್ಕೆ ಅವಶ್ಯವಾದುದಾಗಿದೆ.

ಬೆಳಕಿಲ್ಲದೆ ಜೀವನ ನಡೆಯುವುದಿಲ್ಲ. ಪ್ರಸ್ತುತ ದಿನಗಳಲ್ಲಿ ಕೃತಕ ಬೆಳಕನ್ನು ಬಳಸುತ್ತೇವೆ. ಆದರೆ ಪ್ರಾಚೀನ ಕಾಲದಲ್ಲಿ ರಾತ್ರಿಯ ವೇಳೆ ಅಗ್ನಿಯನ್ನು ಬಳಸಲಾಗುತ್ತಿತ್ತು. ಅಗ್ನಿಯು ತೇಜಸ್ಸಿನ ತತ್ತ್ವವನ್ನು ಒಳಗೊಂಡಿದೆ[೬]. ಕಣ್ಣು ನೋಡುವುದೇ ತೇಜಸ್ಸಿನ ಸಹಾಯದಿಂದ. ಜ್ಞಾನದಿಂದ ಮಾತ್ರ ಮುಕ್ತಿ ಎಂದೂ ಮತ್ತು ಅನಂತ ಜ್ಞಾನದ ನಿಧಿ ಜೀವಾತ್ಮನಲ್ಲಿ ಇರುವುದು ಎಂದೂ ಉಪನಿಷತ್ತುಗಳು ಬೋಧಿಸುವುವು[೭]. ದೀಪದರ್ಶನದಿಂದ ಕೀರ್ತಿಯ್ನೂ, ಉತ್ತಮವಾದ ಜ್ಞಾನವನ್ನು ಪಡೆಯುವರು[೮] ಎಂಬುದನ್ನು ಕುರಿತು ಪುರಾಣಗಳು ಹೇಳುತ್ತವೆ.

ನಂದಾದೀಪವನ್ನು ಕೇವಲ ಹಿಂದೂ ಸಂಪ್ರದಾಯದಲ್ಲಿ ಮಾತ್ರವಲ್ಲದೆ ಮುಸ್ಲಿಂ ಧರ್ಮದಲ್ಲೂ ಬಳಸಿರುವುದನ್ನು ಕಾಣುತ್ತೇವೆ. ತಾಜ್ ಮಹಲಿನ ಒಳಗೆ ಈಗಿರುವ

---

೪. ಚಂದ್ರಕಾಂತ ಕುಸನೂರು: **ಕಲೆ ಅನುಭವ ಮತ್ತು ಅನುಭಾವ**, ಪುಟ-೫೩.

೫. ಜ್ಞಾನವು ಬ್ರಹ್ಮ ಶ್ರೀ, ಜ್ಞಾಪಕವು ಮೇಧಾ ಶ್ರೀ, ಆರೋಗ್ಯವು ದೈಹಿಕ ಶ್ರೀ ಹೀಗೆಯೇ ಯಾವುದು ಮನುಷ್ಯನನ್ನು ಶ್ರೇಯಸ್ಸಿನ ದಾರಿಯತ್ತ ಒಯ್ಯುವುದೋ ಅದು ಶ್ರೀ ಅನುಗ್ರಹದಿಂದಲೇ.....
ಪ್ರೊ, ಕೆ.ಎಸ್. ನಾರಾಯಣಾಚಾರ್ಯ: **ವೇದ ಸಂಸ್ಕೃತಿಯ ಪರಿಚಯ**. ಪುಟ-೨೬

೬ ಪ್ರೊ, ಕೆ.ಎಸ್. ನಾರಾಯಣಾಚಾರ್ಯ: **ವೇದ ಸಂಸ್ಕೃತಿಯ ಪರಿಚಯ**, ಪುಟ- ೧೫೫

೭ ಸ್ವಾಮಿ ಪ್ರಭವಾನಂದ: **ಭಾರತೀಯ ಆಧ್ಯಾತ್ಮಿಕ ಪರಂಪರೆ**, ಪುಟ-೧೨೨

೮. ಆಸ್ಥಾನ್ ವಿದ್ವಾನ್ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರೀ:
ಶ್ರೀ ಸ್ಕಾಂದ ಮಹಾಪುರಾಣಂ, ಮಾಹೇಶ್ವರ ಖಂಡ-೧, ಪುಟ- ೧೭

ಅಮೃತಶಿಲಾ ಜಾಲಂದ್ರದ ತೆರೆಯನ್ನು ಔರಂಗಜೇಬ್ ಮಾಡಿಸಿದನಂತೆ ಛಾವಣಿಯಿಂದ ಸಮಾಧಿಗಳ ಮೇಲೆ ಲಾರ್ಡ್ ಕರ್ಜನ್ ನೀಡಿರುವ ಸುಂದರವಾದ ಕಂಚಿನ ಲಾಂದ್ರವನ್ನು ತೂಗಿಬಿಡಲಾಗಿದೆ. ಈ ದೀಪವು ಹಗಲೂ ರಾತ್ರಿ ಉರಿಯುತ್ತಿರುತ್ತದೆ[೯]. ಮೆನೋರಾ ಎಂಬುವುದು ಯಹೂದಿ ಧರ್ಮದಲ್ಲಿ ಬಳಸುವ ದೀಪಸ್ತಂಭ. ಈ ಧರ್ಮದಲ್ಲಿ ಮೆನೋರಾವು ಭಗವಂತನಿಂದಾದ ವಿಶ್ವಸೃಷ್ಟಿಯನ್ನು ಪ್ರತಿನಿಧಿಸುತ್ತದೆ[೧೦] ಎಂದು ಹೇಳಬಹುದು.

ದಕ್ಷಿಣ ಕರ್ನಾಟಕದಲ್ಲಿ ದೊರೆಯುವ ನೀಳವಾದ ದೀಪಸ್ತಂಭಗಳು ಕಾಲುದೀಪದ ಪರಿಕಲ್ಪನೆಯಲ್ಲಿ ಮೂಡಿ ಬಂದಿದ್ದರೆ, ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ದೊರೆಯುವ ದೀಪಮಾಲೆಗಂಬಗಳು ವೃಕ್ಷದೀಪದ ಪರಿಕಲ್ಪನೆಯಿಂದ ಮೂಡಿ ಬಂದಿರುವುದು ಕಾಣುತ್ತದೆ. ದೇವಾಲಯದ ಆವರಣದಲ್ಲಿ ದೇವಮೂರ್ತಿಗೆ ಎದುರಾಗಿ ಇರುವ ದೀಪಸ್ತಂಭಗಳು ಸೃಷ್ಟಿ, ಜ್ಞಾನ, ಅರಿವು ಮತ್ತು ಸತ್ಯ ದರ್ಶನದ ಸಂಕೇತವಾಗಿದೆ ಎನ್ನಬಹುದು.

ದೀಪಸ್ತಂಭಗಳು ಲಿಂಗದ ರಚನೆಯನ್ನು ಹೊಂದಿರಲಿ ಇಲ್ಲವೆ ಕಮಲದ ಮೊಗ್ಗಿನ ರಚನೆಯನ್ನು ಹೊಂದಿರುವ ದೀಪಮಾಲೆಗಂಬಗಳಾಗಿರಲಿ ಇವು ಜ್ಞಾನ ಮತ್ತು ಸೃಷ್ಟಿಯನ್ನು ಸಾಂಕೇತಿಸುತ್ತವೆ ಎಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ದೇವಾಲಯದ ದೇವಮೂರ್ತಿಗೆ ಎದುರಾಗಿ ಇರುವ ದೀಪಸ್ತಂಭಗಳ ಸ್ಥಾಪನೆಯಲ್ಲಿ ಮೊದಲಿಗೆ ಮುಖ್ಯವಾಗಿ ಬೆಳಕನ್ನು ಕೊಡುವ ಉದ್ದೇಶವು ಇದ್ದಿತು ನಂತರದ ದಿನಗಳಲ್ಲಿ ಇದಕ್ಕೆ ತಾತ್ವಿಕ ಮತ್ತು ಆಧ್ಯಾತ್ಮಿಕ ಮಹತ್ವಗಳು ಸೇರಿಕೊಂಡವು ಎಂದು ತಿಳಿಯುತ್ತದೆ. ದೀಪಮಾಲೆಗಂಬಗಳು ಪ್ರಮುಖವಾಗಿ ಬೆಳಕನ್ನು ಕೊಡುವ ಉದ್ದೇಶವನ್ನು ಹೊಂದಿರುವುದು ಕಾಣುತ್ತದೆ.

ವಿಜ್ಞಾನ, ಮನಃ ಶಾಸ್ತ್ರ ಯಾವುದೂ ಮಾನವನ ರಹಸ್ಯಮಯ ಮನಸ್ಸನ್ನು ಅರಿಯುವ ಸಾಮರ್ಥ್ಯವನ್ನು ಹೊಂದಿಲ್ಲ. ಗುಡಿಯ ಪಾವಿತ್ರ್ಯ ಇರುವುದು ಅದರ ಕಲೆಗಾರಿಕೆಯಲ್ಲಲ್ಲ, ಅದರಿಂದ ಪ್ರಯೋಜನದಿಂದಲೂ ಅಲ್ಲ; ಅದರ ಆದ್ಯಾತ್ಮಿಕತೆಯಲ್ಲಿ[೧೧]. ಗುಡಿಯ ಒಳಗಿನ ಮೂರ್ತಿಗಿಂತ ಗುಡಿಯೇ ವಿಶೇಷವಾದ ಪಾವಿತ್ರ್ಯತೆಯನ್ನು ಹೊಂದಿರುತ್ತದೆ.

ಹಿಂದೂ ಸಮಾಜಕ್ಕೆ ದೇವಾಲಯಗಳ ಕೊಡುಗೆ ಅಪಾರವಾದುದು. ದೇವಾಲಯಗಳು ತಮ್ಮ ಧರ್ಮ ಸಂಸ್ಕೃತಿಗಳೆಂಬ ದೀಪವನ್ನು ನಿರಂತರವಾಗಿ ಕಾಪಾಡಿಕೊಂಡು ಬಂದದ್ದಲ್ಲದೆ ಸಮಾಜದ ಐಕ್ಯಕ್ಕೂ ಶ್ರಮಿಸಿವೆ. ನೂರಾರು ಜನರಿಗೆ ಜೀವನೋಪಾಯವನ್ನು ಒದಗಿಸಿವೆ. ದೇವಾಲಯವು ಲಲಿತಕಲೆಗಳಿಗೆ ಉತ್ತೇಜನ ನೀಡಿದೆ.

---

೯. ಲೇಖನ– **ತಾಜ್ ಮಹಲ್**, ಸಂಯುಕ್ತ ಕರ್ನಾಟಕ ದಿನಪತ್ರಿಕೆ, ಸಾಪ್ತಾಹಿಕ ಸೌರಭ, ೨೧ ನವೆಂಬರ್ ೨೦೦೪

೧೦. ಎನ್. ಶ್ರೀನಿವಾಸ್ ಉಡುಪಿ: ಲೇಖನ– ಜಾಗತಿಕ ಧರ್ಮದ ಮುಖ್ಯ ಸಂಕೇತಗಳು, **ಧರ್ಮ, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ**, ಪುಟ– ೪೭೮

೧೧. ಪ್ರೊ. ಎಸ್.ಕೆ. ರಾಮಚಂದ್ರ ರಾವ್: **ಭಾರತದ ದೇವಾಲಯ ನೆಲೆ–ಹಿನ್ನೆಲೆ**, ಪುಟ–೧೦೫

ವೈದಿಕ ಮತ್ತು ಶಾಸ್ತ್ರೀಯ ಜ್ಞಾನವು ಉಳಿಯಲು ಮತ್ತು ಬೆಳೆಯಲು ದೇವಾಲಯಗಳು ಸಹಕಾರಿಯಾಗಿವೆ. ಪುರಾತನ ಕಾಲದಲ್ಲಿ ದೇವಾಲಯಗಳು ಆಸ್ಪತ್ರೆಯಂತೆಯೂ ಜೊತೆಗೆ ನ್ಯಾಯಾಲಯಗಳಂತೆಯೂ ಕಾರ್ಯ ನಿರ್ವಹಿಸುತ್ತಿದ್ದವು ಎಂದು ತಿಳಿದು ಬರುತ್ತದೆ.

ವೈಜ್ಞಾನಿಕವಾಗಿ ನೋಡಿದರೆ ಪರಿಸರ ಶುದ್ಧೀಕರಣದಲ್ಲಿ ಅರ್ಥಪೂರ್ಣವಾದ ಪಾತ್ರವಹಿಸುತ್ತಾರೆ ಎಂಬ ಕಾರಣಕ್ಕಾಗಿಯೇ ಅಗ್ನಿ ಮತ್ತು ಸೂರ್ಯರನ್ನು ಅಗ್ರಪಂಕ್ತಿಯಲ್ಲಿ ಇರಿಸಲಾಗಿದೆ ಎಂದು ಜಮ್ಮು ವಿಶ್ವವಿದ್ಯಾಲಯದ ವಿದ್ವಾಂಸರೊಬ್ಬರು ಮಂಡಿಸಿರುವುದು ತಿಳಿಯುತ್ತದೆ[೧೨]. ಕೇವಲ ಪರಿಸರ ಶುದ್ಧೀಕರಣಕ್ಕಾಗಿ ಮಾತ್ರವಲ್ಲ ಮನಸ್ಸಿನ ಶುದ್ಧೀಕರಣಕ್ಕೂ ಜೊತೆಗೆ ಬೆಳಕನ್ನು ಕೊಡುವುದರಿಂದಲೂ ಅಗ್ನಿ ಮತ್ತು ಸೂರ್ಯರನ್ನು ಅಗ್ರಪಂಕ್ತಿಯಲ್ಲಿ ಇರಿಸಲಾಗಿದೆ ಎಂದು ಹೇಳುವುದು ಸರಿ ಎನಿಸುತ್ತದೆ.

ದೇವಾಲಯಗಳ ಆವರಣದಲ್ಲಿ ಇರುವ ಪ್ರತಿಯೊಂದು ಆಚರಣೆಯನ್ನೂ ಕುರಿತು ವಿಶೇಷವಾದ ಅಧ್ಯಯನವನ್ನು ಮಾಡಬಹುದು. ಇವುಗಳಲ್ಲಿ ಅಷ್ಟೇ ಆಳವಾದ ವಸ್ತು ವಿಷಯಗಳು ಇರುವುದು ಗಮನಕ್ಕೆ ಬರುತ್ತದೆ. ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಂತಹ ಆಚಾರ ವಿಚಾರಗಳಿಗೆ ತಮ್ಮದೇ ಆದ ಉದ್ದೇಶ, ಸ್ವರೂಪಗಳು ಇರುವುದು ಕಾಣುತ್ತದೆ. ಇದು ಕೇವಲ ಆಚರಣೆ ಮಾತ್ರ ಅಲ್ಲ. ದೇವಾಲಯದ ಆವರಣದಲ್ಲಿ ಇರುವ ಒಂದು ದೀಪದ ಕಂಬದ ಸ್ಥಾನಮಾನ, ಅದರ ಉದ್ದೇಶವು ಇಷ್ಟೆಲ್ಲಾ ಅರ್ಥಗಳು ಅಚ್ಚರಿಗೊಳಿಸುವಂತೆ ಇರುವುದು ಗಮನಾರ್ಹವಾದ ವಿಷಯವಾಗಿದೆ.

ಚಾರಿತ್ರಿಕಾಂಶಗಳ ಮೂಲಕ ಧಾರ್ಮಿಕ, ತಾತ್ವಿಕ ಸತ್ಯಗಳನ್ನು ವ್ಯಕ್ತಪಡಿಸುವುದು ಒಂದು ರೀತಿಯ ಸಾಹಿತ್ಯ[೧೩]. ಇದು ವೇದದ ಸಾಹಿತ್ಯ ಎಂದು ಗುರುತಿಸಿಕೊಳ್ಳುತ್ತದೆ. ಈ ಸಾಹಿತ್ಯದಲ್ಲಿ ಚರಿತ್ರೆಯ ಆಧಾರದ ಮೇಲೆ ಮಾನವನ ವಿಚಾರಗಳ ನಿಜ ಸ್ವರೂಪವನ್ನು ತಿಳಿಯುವುದಾಗಿದೆ. ದೇವಾಲಯದ ಆವರಣದಲ್ಲಿ ಇರುವ ಕಲೆಯಲ್ಲಿ ಧರ್ಮ ಮತ್ತು ತತ್ವಗಳು ಅಡಕವಾಗಿರುವುದು ಕಾಣುತ್ತದೆ. ಕಲೆಯು ಮಾನವನ ಅಭಿವ್ಯಕ್ತಿಗೆ ಒಂದು ಮಾಧ್ಯಮವಷ್ಟೇ ಆಗಿದೆ. ದೇವಾಲಯವು ಧಾರ್ಮಿಕ ಆಚರಣೆಯ ಹಿನ್ನೆಲೆಯಲ್ಲಿ ಮಾನವನ ಅಭಿವ್ಯಕ್ತಿಗೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದೆ ಎಂದರೆ ತಪ್ಪಾಗಲಾರದು.

* *** *

೧೨. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ- ಧರ್ಮ, ಕನ್ನಡ ವಿಶ್ವವಿದ್ಯಾಲಯ. ಪುಟ- ೨೦೦
೧೩. ಪ್ರೊ. ಕೆ.ಎಸ್. ನಾರಾಯಣಾಚಾರ್ಯ: ವೇದ ಸಂಸ್ಕೃತಿಯ ಪರಿಚಯ, ಮುನ್ನುಡಿ

ಅನುಬಂಧಗಳು

ಅನುಬಂಧ ೧

ಕ್ಷೇತ್ರ ಕಾರ್ಯದ ಸ್ಥಳಗಳು

ಕ್ರಮ	ಸ್ಥಳ	ದೇವಸ್ಥಾನದ ಹೆಸರು	ತಾಲ್ಲೂಕು	ಜಿಲ್ಲೆ	ದೀಪಸ್ತಂಭ
೧	ಚಾಮುಂಡಿ ಬೆಟ್ಟ	ಶ್ರೀ ಚಾಮುಂಡೇಶ್ವರಿ	ಮೈಸೂರು	ಮೈಸೂರು	ಇಲ್ಲ
೨	ಚಾಮುಂಡಿ ಬೆಟ್ಟ	ಶ್ರೀ ಮಹಾಬಲೇಶ್ವರ	ಮೈಸೂರು	ಮೈಸೂರು	ಇಲ್ಲ
೩	ಅರಮನೆ	ಶ್ರೀ ಭುವನೇಶ್ವರಿ	ಮೈಸೂರು	ಮೈಸೂರು	ಇಲ್ಲ
೪	ಅರಮನೆ	ಶ್ರೀ ವರಾಹಸ್ವಾಮಿ	ಮೈಸೂರು	ಮೈಸೂರು	ಇದೆ
೫	ಅರಮನೆ	ಶ್ರೀ ಲಕ್ಷ್ಮೀರಮಣ	ಮೈಸೂರು	ಮೈಸೂರು	ಇಲ್ಲ
೬	ಅರಮನೆ	ಶ್ರೀ ಆಂಜನೇಯ	ಮೈಸೂರು	ಮೈಸೂರು	ಇದೆ
೭	ಒಂಟಿಕೊಪ್ಪಲು	ಶ್ರೀ ವೆಂಕಟರಮಣ	ಮೈಸೂರು	ಮೈಸೂರು	ಇದೆ
೮	ಜಯನಗರ	ಶ್ರೀ ಚಾಮುಂಡೇಶ್ವರಿ	ಮೈಸೂರು	ಮೈಸೂರು	ಇದೆ
೯	ನಂಜನಗೂಡು	ಶ್ರೀ ನಂಜುಂಡೇಶ್ವರ	ನಂಜನಗೂಡು	ಮೈಸೂರು	ಇದೆ
೧೦	ಸೋಮನಾಥ ಪುರ	ಶ್ರೀ ಪ್ರಸನ್ನ ಕೇಶವ	ಟಿ. ನರಸೀಪುರ	ಮೈಸೂರು	ಇದೆ
೧೧	ತಲಕಾಡು	ಶ್ರೀ ವೈದ್ಯನಾಥ	ಟಿ. ನರಸೀಪುರ	ಮೈಸೂರು	ಇಲ್ಲ
೧೨	ತಿರುಮಕೂಡಲು	ಶ್ರೀ ಅಗಸ್ತ್ಯೇಶ್ವರ	ಟಿ. ನರಸೀಪುರ	ಮೈಸೂರು	ಇದೆ
೧೩	ಮುಡುಕುತೊರೆ	ಶ್ರೀ ಮಲ್ಲಿಕಾರ್ಜುನ	ಟಿ. ನರಸೀಪುರ	ಮೈಸೂರು	ಇದೆ
೧೪	ಕೆ. ಆರ್. ನಗರ	ಶ್ರೀ ಅರ್ಕೇಶ್ವರ	ಕೆ.ಆರ್.ನಗರ	ಮೈಸೂರು	ಇದೆ
೧೫	ಸಾಲಿಗ್ರಾಮ	ಶ್ರಿ ಯೋಗಾನರಸಿಂಹ ಸ್ವಾಮಿ	ಕೆ.ಆರ್. ನಗರ	ಮೈಸೂರು	ಇಲ್ಲ
೧೬	ಶ್ರೀರಂಗಪಟ್ಟಣ	ಶ್ರೀ ಶ್ರೀರಂಗನಾಥ	ಶ್ರೀರಂಗಪಟ್ಟಣ	ಮಂಡ್ಯ	ಇದೆ
೧೭	ನಾಗಮಂಗಲ	ಶ್ರೀ ಸೌಮ್ಯಕೇಶವ	ನಾಗಮಂಗಲ	ಮಂಡ್ಯ	ಇದೆ
೧೮	ನಾಗಮಂಗಲ	ಶ್ರೀ ಭುವನೇಶ್ವರ	ನಾಗಮಂಗಲ	ಮಂಡ್ಯ	ಇದೆ
೧೯	ಕಿಕ್ಕೇರಿ	ಶ್ರೀ ಕಿಕ್ಕೇರಮ್ಮ	ಕೆ.ಆರ್. ಪೇಟೆ	ಮಂಡ್ಯ	ಇದೆ
೨೦	ಕಿಕ್ಕೇರಿ	ಶ್ರೀ ಬ್ರಹ್ಮೇಶ್ವರ	ಕೆ.ಆರ್. ಪೇಟೆ	ಮಂಡ್ಯ	ಇಲ್ಲ
೨೧	ಸಾಸಲು	ಶ್ರೀ ಶಂಭುಲಿಂಗೇಶ್ವರ	ಕೆ.ಆರ್. ಪೇಟೆ	ಮಂಡ್ಯ	ಇದೆ
೨೨	ಸಾಸಲು	ಶ್ರೀ ಸೋಮೇಶ್ವರ	ಕೆ.ಆರ್. ಪೇಟೆ	ಮಂಡ್ಯ	ಇದೆ
೨೩	ಸಾಸಲು	ಶ್ರೀ ಬಸವೇಶ್ವರ	ಕೆ.ಆರ್. ಪೇಟೆ	ಮಂಡ್ಯ	ಇಲ್ಲ
೨೪	ಹೊಸಹೊಳಲು	ಶ್ರೀ ಲಕ್ಷ್ಮೀನಾರಾಯಣ	ಕೆ.ಆರ್. ಪೇಟೆ	ಮಂಡ್ಯ	ಇಲ್ಲ
೨೫	ಅಗ್ರಹಾರ ಬಾಚಹಳ್ಳಿ	ಶ್ರೀ ಹುಣಸೇಶ್ವರ	ಕೆ.ಆರ್. ಪೇಟೆ	ಮಂಡ್ಯ	ಇಲ್ಲ
೨೬	ತೆಂಡೇಕೆರೆ	ಶ್ರೀ ವೀರಭದ್ರೇಶ್ವರ	ಕೆ.ಆರ್. ಪೇಟೆ	ಮಂಡ್ಯ	ಇದೆ
೨೭	ಬಸರಾಳು	ಶ್ರೀ ಕಾಲಭೈರವ	ಮಂಡ್ಯ	ಮಂಡ್ಯ	ಇದೆ
೨೮	ಬಸರಾಳು	ಶ್ರೀ ಮಲ್ಲಿಕಾರ್ಜುನ	ಮಂಡ್ಯ	ಮಂಡ್ಯ	ಇಲ್ಲ
೨೯	ಮೇಲುಕೋಟೆ	ಶ್ರೀ ಪೇಟೆ ಆಂಜನೇಯ	ಪಾಂಡವಪುರ	ಮಂಡ್ಯ	ಇದೆ
೩೦	ಮೇಲುಕೋಟೆ	ಶ್ರೀ ಚೆಲುವ ನಾರಾಯಣ	ಪಾಂಡವಪುರ	ಮಂಡ್ಯ	ಇದೆ
೩೧	ತೆರಕಣಾಂಬಿ	ಶ್ರೀ ಲಕ್ಷ್ಮೀವರದರಾಜ ಸ್ವಾಮಿ	ಚಾಮರಾಜನಗರ	ಚಾಮರಾಜನಗರ	ಇದೆ

೩೨	ಚಾಮರಾಜನಗರ	ಶ್ರೀ ಚಾಮರಾಜೇಶ್ವರ	ಚಾಮರಾಜನಗರ	ಚಾಮರಾಜನಗರ	ಇದೆ
೩೩	ಗೋಪಾಲಸ್ವಾಮಿ ಬೆಟ್ಟ	ಶ್ರೀ ಗೋಪಾಲಸ್ವಾಮಿ	ಗುಂಡ್ಲುಪೇಟೆ	ಚಾಮರಾಜನಗರ	ಇಲ್ಲ
೩೪	ಗುಂಡ್ಲುಪೇಟೆ	ಶ್ರೀ ವೀರನಾರಾಯಣ ಸ್ವಾಮಿ	ಗುಂಡ್ಲುಪೇಟೆ	ಚಾಮರಾಜನಗರ	ಇಲ್ಲ
೩೫	ಭಾಗಮಂಡಲ	ಶ್ರೀ ಭಗಂಡೇಶ್ವರ	ಮಡಿಕೇರಿ	ಕೊಡಗು	ಇದೆ
೩೬	ತಲಕಾವೇರಿ	ಶ್ರೀ ಅಗಸ್ತ್ಯೇಶ್ವರ	ಮಡಿಕೇರಿ	ಕೊಡಗು	ಇಲ್ಲ
೩೭	ಮಡಿಕೇರಿ	ಶ್ರೀ ಓಂಕಾರೇಶ್ವರ	ಮಡಿಕೇರಿ	ಕೊಡಗು	ಇಲ್ಲ
೩೮	ಹಳೇಬೀಡು	ಶ್ರೀ ಹೊಯ್ಸಳೇಶ್ವರ	ಬೇಲೂರು	ಹಾಸನ	ಇಲ್ಲ
೩೯	ಬೇಲೂರು	ಶ್ರೀ ಚೆನ್ನಕೇಶವ	ಬೇಲೂರು	ಹಾಸನ	ಇದೆ
೪೦	ಅರಸೀಕೆರೆ	ಶ್ರೀ ಚಂದ್ರಮೌಳೀಶ್ವರ	ಅರಸೀಕೆರೆ	ಹಾಸನ	ಇಲ್ಲ
೪೧	ಗೊರೂರು	ಶ್ರೀ ತ್ರಿಕೂಟ ಲಿಂಗೇಶ್ವರ	ಆಲೂರು	ಹಾಸನ	ಇಲ್ಲ
೪೨	ಗೊರೂರು	ಶ್ರೀ ಯೋಗ ನರಸಿಂಹಸ್ವಾಮಿ	ಆಲೂರು	ಹಾಸನ	ಇದೆ
೪೩	ಗೊರೂರು	ಶ್ರೀ ವಾಸುದೇವ	ಆಲೂರು	ಹಾಸನ	ಇಲ್ಲ
೪೪	ರಾಮನಾಥಪುರ	ಶ್ರೀ ಸುಬ್ರಹ್ಮಣ್ಯೇಶ್ವರ	ಅರಕಲಗೂಡು	ಹಾಸನ	ಇದೆ
೪೫	ರಾಮನಾಥಪುರ	ಶ್ರೀ ಪಟ್ಟಾಭಿರಾಮ	ಅರಕಲಗೂಡು	ಹಾಸನ	ಇದೆ
೪೬	ಕೈದಾಳ	ಶ್ರೀ ಚೆನ್ನಕೇಶವ	ತುಮಕೂರು	ತುಮಕೂರು	ಇದೆ
೪೭	ದೇವರಾಯನ ದುರ್ಗ	ಶ್ರೀ ಯೋಗಾನರಸಿಂಹ ಸ್ವಾಮಿ	ತುಮಕೂರು	ತುಮಕೂರು	ಇದೆ
೪೮	ಬರಗೂರು	ಶ್ರೀ ಮಹೇಂದ್ರೇಶ್ವರ	ಸಿರಾ	ತುಮಕೂರು	ಇದೆ
೪೯	ಬರಗೂರು	ಶ್ರೀ ಆಂಜನೇಯ	ಸಿರಾ	ತುಮಕೂರು	ಇದೆ
೫೦	ಕಡಬ	ಶ್ರೀ ರಾಮ	ಗುಬ್ಬಿ	ತುಮಕೂರು	ಇದೆ
೫೧	ಕಡಬ	ಶ್ರೀ ಕೈಲಾಸೇಶ್ವರ	ಗುಬ್ಬಿ	ತುಮಕೂರು	ಇದೆ
೫೨	ತುರುವೇಕೆರೆ	ಶ್ರೀ ಮಹಾಲಕ್ಷ್ಮೀ ಬೇಟೆರಾಯಸ್ವಾಮಿ	ತುರುವೇಕೆರೆ	ತುಮಕೂರು	ಇದೆ
೫೩	ತುರುವೇಕೆರೆ	ಶ್ರೀ ಬಸವೇಶ್ವರ	ತುರುವೇಕೆರೆ	ತುಮಕೂರು	ಇದೆ
೫೪	ತುರುವೇಕೆರೆ	ಶ್ರೀ ಚೆನ್ನಕೇಶವ	ತುರುವೇಕೆರೆ	ತುಮಕೂರು	ಇದೆ
೫೫	ತುರುವೇಕೆರೆ	ಮೂಲಾ ಶಂಕರ್ಣೇಶ್ವರ	ತುರುವೇಕೆರೆ	ತುಮಕೂರು	ಇದೆ
೫೬	ನೊಣವಿನಕೆರೆ	ಶ್ರೀ ಕಲ್ಮೇಶ್ವರ	ತಿಪಟೂರು	ತುಮಕೂರು	ಇಲ್ಲ
೫೭	ನೊಣವಿನಕೆರೆ	ಶ್ರೀ ನೊಣಬೇಶ್ವರ	ತಿಪಟೂರು	ತುಮಕೂರು	ಇಲ್ಲ
೫೮	ನೊಣವಿವಕೆರೆ	ಶ್ರೀ ಬೇಟೆರಾಯಸ್ವಾಮಿ	ತಿಪಟೂರು	ತುಮಕೂರು	ಇದೆ
೫೯	ನೊಣವಿನಕೆರೆ	ಶ್ರೀ ಗೋಪಾಲಸ್ವಾಮಿ	ತಿಪಟೂರು	ತುಮಕೂರು	ಇದೆ
೬೦	ಶೆಟ್ಟಿಕೆರೆ	ಶ್ರೀ ಯೋಗಾ ಮಾಧವ	ಚಿಕ್ಕನಾಯಕನ ಹಳ್ಳಿ	ತುಮಕೂರು	ಇದೆ
೬೧	ಕುಣಿಗಲ್	ಶ್ರೀ ನರಸಿಂಹಸ್ವಾಮಿ	ಕುಣಿಗಲ್	ತುಮಕೂರು	ಇದೆ
೬೨	ಬನ್ನೇರುಘಟ್ಟ	ಶ್ರೀ ಸಂಪಂಗಿ ರಾಮ	ಆನೇಕಲ್	ಬೆಂಗಳೂರು	ಇದೆ
೬೩	ಆನೇಕಲ್	ಶ್ರೀ ಮಲ್ಲಿಕಾರ್ಜುನ	ಆನೇಕಲ್	ಬೆಂಗಳೂರು	ಇದೆ
೬೪	ಹೊಸಕೋಟೆ	ಶ್ರೀ ಅವಿಮುಕ್ತೇಶ್ವರ	ಹೊಸಕೋಟೆ	ಬೆಂಗಳೂರು	ಇದೆ
೬೫	ದೊಡ್ಡ ಮಳೂರು	ಶ್ರೀ ರಾಮಾಪ್ರಮೇಯಸ್ವಾಮಿ	ಚನ್ನಪಟ್ಟಣ	ಬೆಂಗಳೂರು	ಇದೆ
೬೬	ಹಾರೋಹಳ್ಳಿ	ಶ್ರೀ ಅರುಣಾಚಲೇಶ್ವರ	ಕನಕಪುರ	ಬೆಂಗಳೂರು	ಇದೆ

೬೭	ಬೆಂಗಳೂರು	ಶ್ರೀ ವೀರಾಂಜನೇಯ	ಬೆಂಗಳೂರು	ಬೆಂಗಳೂರು	ಇದೆ
೬೮	ಬೆಂಗಳೂರು	ಶ್ರೀ ಶ್ರೀನಿವಾಸ	ಬೆಂಗಳೂರು	ಬೆಂಗಳೂರು	ಇದೆ
೬೯	ಬೆಂಗಳೂರು	ಶ್ರೀ ಗವಿ ಗಂಗಾಧರೇಶ್ವರ	ಬೆಂಗಳೂರು	ಬೆಂಗಳೂರು	ಇದೆ
೭೦	ಬೆಂಗಳೂರು	ಬಸವನ ಗುಡಿ	ಬೆಂಗಳೂರು	ಬೆಂಗಳೂರು	ಇದೆ
೭೧	ಚಿಕ್ಕಜಾಲ	ಶ್ರೀ ಚೆನ್ನಕೇಶವ	ಬೆಂಗಳೂರು	ಬೆಂಗಳೂರು	ಇದೆ
೭೨	ಸಾವನದುರ್ಗ	ಶ್ರೀ ವೀರಭದ್ರೇಶ್ವರ	ಮಾಗಡಿ	ಬೆಂಗಳೂರು	ಇದೆ
೭೩	ಸಾವನದುರ್ಗ	ಶ್ರೀ ಲಕ್ಷ್ಮೀನರಸಿಂಹ	ಮಾಗಡಿ	ಬೆಂಗಳೂರು	ಇದೆ
೭೪	ಮುಳಬಾಗಿಲು	ಶ್ರೀ ವೀರಾಂಜನೇಯ	ಮುಳಬಾಗಿಲು	ಕೋಲಾರ	ಇದೆ
೭೫	ಕುರುಡು ಮಲೆ	ಶ್ರೀ ಮಹಾ ಗಣಪತಿ	ಮುಳಬಾಗಿಲು	ಕೋಲಾರ	ಇಲ್ಲ
೭೬	ಕುರುಡು ಮಲೆ	ಶ್ರೀ ಸೋಮೇಶ್ವರ	ಮುಳಬಾಗಿಲು	ಕೋಲಾರ	ಇಲ್ಲ
೭೭	ಬೇತಮಂಗಲ	ಶ್ರೀ ವಿಜಯೇಂದ್ರ	ಬಂಗಾರು ಪೇಟೆ	ಕೋಲಾರ	ಇದೆ
೭೮	ಕೋಲಾರ	ಶ್ರೀ ಕೋಲಾರಮ್ಮ	ಕೋಲಾರ	ಕೋಲಾರ	ಇದೆ
೭೯	ಕೋಲಾರ	ಶ್ರೀ ಸೋಮೇಶ್ವರ	ಕೋಲಾರ	ಕೋಲಾರ	ಇದೆ
೮೦	ಚಿಕ್ಕ ತಿರುಪತಿ	ಶ್ರೀ ಪ್ರಸನ್ನ ವೆಂಕಟರಮಣ	ಮಾಲೂರು	ಕೋಲಾರ	ಇದೆ
೮೧	ಟೇಕಲ್	ಶ್ರೀ ವರದರಾಜ ಸ್ವಾಮಿ	ಮಾಲೂರು	ಕೋಲಾರ	ಇದೆ
೮೨	ಆಲಂಬಗಿರಿ	ಶ್ರೀ ವೆಂಕಟರಮಣ	ಚಿಂತಾಮಣಿ	ಕೋಲಾರ	ಇದೆ
೮೩	ಕೈವಾರ	ಶ್ರೀ ಅಮರ ನಾರಾಯಣ	ಚಿಂತಾಮಣಿ	ಕೋಲಾರ	ಇಲ್ಲ
೮೪	ಕೈವಾರ	ಶ್ರೀ ಭೀಮಲಿಂಗೇಶ್ವರ	ಚಿಂತಾಮಣಿ	ಕೋಲಾರ	ಇದೆ
೮೫	ಕಂದಾವರ	ಶ್ರೀ ಜ್ವರಹರೇಶ್ವರ	ಚಿಕ್ಕಬಳ್ಳಾಪುರ	ಕೋಲಾರ	ಇದೆ
೮೬	ರಂಗಸ್ಥಳ	ಶ್ರೀ ರಂಗನಾಥಸ್ವಾಮಿ	ಚಿಕ್ಕಬಳ್ಳಾಪುರ	ಕೋಲಾರ	ಇಲ್ಲ
೮೭	ಬನಶಂಕರಿ	ಶ್ರೀ ಬನಶಂಕರಿ	ಬಾದಾಮಿ	ಬಾಗಲಕೋಟೆ	ಇದೆ
೮೮	ಮಹಾಕೂಟ	ಶ್ರೀ ಮಹಾಕೂಟೇಶ್ವರ	ಬಾದಾಮಿ	ಬಾಗಲಕೋಟೆ	ಇದೆ
೮೯	ಪಟ್ಟದಕಲ್	--------	ಬಾದಾಮಿ	ಬಾಗಲಕೋಟೆ	ಇದೆ
೯೦	ಐಹೊಳೆ	--------	ಹುನಗುಂದ	ಬಾಗಲಕೋಟೆ	ಇಲ್ಲ
೯೧	ಐಹೊಳೆ	ಶ್ರೀ ದುರ್ಗಾದೇವಿ	ಹುನಗುಂದ	ಬಾಗಲಕೋಟೆ	ಇದೆ
೯೨	ಗದಗ	ಶ್ರೀ ವೀರಭದ್ರೇಶ್ವರ	ಗದಗ	ಗದಗ	ಇದೆ
೯೩	ಗದಗ	ಶ್ರೀ ಕಲ್ಮೇಶ್ವರ	ಗದಗ	ಗದಗ	ಇದೆ
೯೪	ಗದಗ	ಶ್ರೀ ತ್ರಿಕೂಟೇಶ್ವರ	ಗದಗ	ಗದಗ	ಇದೆ
೯೫	ಗದಗ	ಶ್ರೀ ವೀರನಾರಾಯಣ	ಗದಗ	ಗದಗ	ಇಲ್ಲ
೯೬	ಗದಗ	ಶ್ರೀ ಮೈಲಾರ ಲಿಂಗೇಶ್ವರ	ಗದಗ	ಗದಗ	ಇದೆ
೯೭	ಗದಗ	ಶ್ರೀ ಹನುಮಂತನ ಗುಡಿ	ಗದಗ	ಗದಗ	ಇದೆ
೯೮	ಗದಗ	ಶ್ರೀ ಅಂಬಾ ಭವಾನಿ	ಗದಗ	ಗದಗ	ಇಲ್ಲ
೯೯	ಗದಗ	ಶ್ರೀ ಪೇಟೆ ವೀರಭದ್ರೇಶ್ವರ	ಗದಗ	ಗದಗ	ಇದೆ
೧೦೦	ಗದಗ	ಶ್ರೀ ನಗರೇಶ್ವರ	ಗದಗ	ಗದಗ	ಇಲ್ಲ
೧೦೧	ಗದಗ	ಶ್ರೀ ಸೋಮನಾಥ	ಗದಗ	ಗದಗ	ಇಲ್ಲ

೧೦೨	ಬೆಳಗಾಂ	ಶ್ರೀ ಕಪಿಲೇಶ್ವರ	ಬೆಳಗಾಂ	ಬೆಳಗಾಂ	ಇದೆ
೧೦೩	ಬೆಳಗಾಂ	ಶ್ರೀ ಮಾರುತಿ	ಬೆಳಗಾಂ	ಬೆಳಗಾಂ	ಇದೆ
೧೦೪	ಬೆಳಗಾಂ	ಶ್ರೀ ೧೦೦೮ ನೇಮಿನಾಥ ದಿಗಂಬರ ಜೈನ ಮಂದಿರ	ಬೆಳಗಾಂ	ಬೆಳಗಾಂ	ಇಲ್ಲ
೧೦೫	ಬೆಳಗಾಂ	ಕಮಲ ಬಸದಿ	ಬೆಳಗಾಂ	ಬೆಳಗಾಂ	ಇಲ್ಲ
೧೦೬	ಹಂಪಿ	ಶ್ರೀ ವಿರೂಪಾಕ್ಷ	ಹೊಸಪೇಟೆ	ಬಳ್ಳಾರಿ	ಇದೆ
೧೦೭	ಹಂಪಿ	ಶ್ರೀ ಕೃಷ್ಣ	ಹೊಸಪೇಟೆ	ಬಳ್ಳಾರಿ	ಇಲ್ಲ
೧೦೮	ಹಂಪಿ	ಶ್ರೀ ಉದ್ಧಾನವೀರಭದ್ರ ಸ್ವಾಮಿ	ಹೊಸಪೇಟೆ	ಬಳ್ಳಾರಿ	ಇದೆ
೧೦೯	ಹಂಪಿ	ಶ್ರೀ ನೆಲಸ್ತರದ ಶಿವ	ಹೊಸಪೇಟೆ	ಬಳ್ಳಾರಿ	ಇದೆ
೧೧೦	ಹಂಪಿ	ಶ್ರೀ ಹಜಾರ ರಾಮ	ಹೊಸಪೇಟೆ	ಬಳ್ಳಾರಿ	ಇದೆ
೧೧೧	ಹಂಪಿ	ಶ್ರೀ ವಿಜಯವಿಠಲ	ಹೊಸಪೇಟೆ	ಬಳ್ಳಾರಿ	ಇಲ್ಲ
೧೧೨	ಕಿಷ್ಕಿಂದ	ಶ್ರೀ ಚಕ್ರ ಕೋದಂಡರಾಮ	ಹೊಸಪೇಟೆ	ಬಳ್ಳಾರಿ	ಇದೆ
೧೧೩	ಹೊರನಾಡು	ಶ್ರೀ ಅನ್ನಪೂರ್ಣೇಶ್ವರಿ	ಮೂಡಿಗೆರೆ	ಚಿಕ್ಕಮಗಳೂರು	ಇಲ್ಲ
೧೧೪	ಕಳಸ	ಶ್ರೀ ಕಳಸೇಶ್ವರ	ಮೂಡಿಗೆರೆ	ಚಿಕ್ಕಮಗಳೂರು	ಇದೆ
೧೧೫	ಶೃಂಗೇರಿ	ಶ್ರೀ ಶಾರದಾದೇವಿ	ಶೃಂಗೇರಿ	ಚಿಕ್ಕಮಗಳೂರು	ಇದೆ
೧೧೬	ಶೃಂಗೇರಿ	ಶ್ರೀ ವಿದ್ಯಾಶಂಕರ	ಶೃಂಗೇರಿ	ಚಿಕ್ಕಮಗಳೂರು	ಇದೆ
೧೧೭	ಕೊಲ್ಲೂರು	ಶ್ರೀ ಮೂಕಾಂಬಿಕೆ	ಕುಂದಾಪುರ	ಉಡುಪಿ	ಇದೆ
೧೧೮	ಉಡುಪಿ	ಶ್ರೀ ಕೃಷ್ಣ	ಉಡುಪಿ	ಉಡುಪಿ	ಇದೆ
೧೧೯	ಅಂಬಲ್ಪಾಡಿ	ಶ್ರೀ ಮಹಾಕಾಳಿ	ಉಡುಪಿ	ಉಡುಪಿ	ಇದೆ
೧೨೦	ಮೂಡುಬಿದ್ರೆ	ಸಾವಿರಕಂಬದ ಬಸದಿ	ಕಾರ್ಕಳ	ಉಡುಪಿ	ಇಲ್ಲ
೧೨೧	ಗೋಕರ್ಣ	ಶ್ರೀ ಮಹಾಬಲೇಶ್ವರ	ಕಾರವಾರ	ಉತ್ತರ ಕನ್ನಡ	ಇಲ್ಲ
೧೨೨	ಇಡಗುಂಜಿ	ಶ್ರೀ ಗಣಪತಿ	ಹೊನ್ನಾವರ	ಉತ್ತರ ಕನ್ನಡ	ಇಲ್ಲ
೧೨೩	ಮುರುಡೇಶ್ವರ	ಶ್ರೀ ಮುರುಡೇಶ್ವರ	ಭಟ್ಕಳ	ಉತ್ತರ ಕನ್ನಡ	ಇಲ್ಲ
೧೨೪	ಬೈಂದೂರು	ಶ್ರೀ ಕ್ಷೇತ್ರ ಕಿರು ಮಂತ್ರಾಲಯ, ರಾಘವೇಂದ್ರ ಸ್ವಾಮಿ	ಭಟ್ಕಳ	ಉತ್ತರ ಕನ್ನಡ	ಇಲ್ಲ
೧೨೫	ಕಟೀಲು	ಶ್ರೀ ದುರ್ಗಾಪರಮೇಶ್ವರಿ	ಮಂಗಳೂರು	ಮಂಗಳೂರು	ಇಲ್ಲ
೧೨೬	ಕೊಡ್ಯಾಡ್ಕ	ಶ್ರೀ ಅನ್ನಪೂರ್ಣೇಶ್ವರಿ	ಮಂಗಳೂರು	ಮಂಗಳೂರು	ಇಲ್ಲ
೧೨೭	ಧರ್ಮಸ್ಥಳ	ಶ್ರೀ ಮಂಜುನಾಥ	ಬೆಳ್ತಂಗಡಿ	ದಕ್ಷಿಣ ಕನ್ನಡ	ಇಲ್ಲ
೧೨೮	ರತ್ನಗಿರಿ	ಶ್ರೀ ಗೊಮ್ಮಟೇಶ್ವರ	ಬೆಳ್ತಂಗಡಿ	ದಕ್ಷಿಣ ಕನ್ನಡ	ಇದೆ
೧೨೯	ಕುಕ್ಕೆ	ಶ್ರೀ ಸುಬ್ರಹ್ಮಣ್ಯ	ಸುಳ್ಯಾ	ದಕ್ಷಿಣ ಕನ್ನಡ	ಇದೆ
೧೩೦	ಹೊನ್ನಾಳಿ	ಶ್ರೀ ಚನ್ನಪ್ಪ ಸ್ವಾಮಿ	ಹೊನ್ನಾಳಿ	ದಾವಣಗೆರೆ	ಇದೆ

ಅನುಬಂಧ ೨

ಕ್ಷೇತ್ರಕಾರ್ಯದ ಸ್ಥಳಗಳನ್ನು ಹೊಂದಿದ ನಕಾಶೆ



ಅನುಬಂಧ- ೩

ಸಂದರ್ಶಿಸಿದ ಗ್ರಂಥಾಲಯಗಳು

೧. ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಬಾದಾಮಿ, ಬನಶಂಕರಿ

೨. ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ, ಮೈಸೂರು

೪. ಎಪಿಗ್ರಾಫಿಕ್ ಲೈಬ್ರರಿ, ಮೈಸೂರು

೫. ಆರ್ಕಿಯಾಲಜಿ ಡಿಪಾರ್ಟ್‌ಮೆಂಟ್, ಮೈಸೂರು

೬. ಮಾನಸ ಗಂಗೋತ್ರಿ, ಮೈಸೂರು

೭. ಸೆಂಟ್ರಲ್ ಲೈಬ್ರರಿ, ಮೈಸೂರು

೮. ಓರಿಯಂಟಲ್ ಲೈಬ್ರರಿ, ಮೈಸೂರು

೯. ರಂಗಾಯಣ, ಮೈಸೂರು

೧೦. ಮಿಥಿಕ್ ಸೊಸೈಟಿ, ಬೆಂಗಳೂರು

ಅನುಬಂಧ-೪

ಸಂದರ್ಶನಗಳು

೧. ತಿರುಮಲೆ ಶ್ರೀ ರಂಗಾಚಾರ್ಯ, ಬೆಂಗಳೂರು

೨. ಡಾ. ಜಿ. ಜ್ಞಾನಾನಂದ, ಬೆಂಗಳೂರು

೩. ಚಂದ್ರಕಾಂತ ಕುಸನೂರು, ಬೆಳಗಾಂ

೪. ಹರಿಹರೇಶ್ವರ, ಮೈಸೂರು

೫. ಹೊರೆಯಾಲ ದೊರೆಸ್ವಾಮಿ, ಮೈಸೂರು

೬. ವಿಜಯ ವೆಲ್ಲೂರು, ಚೆನ್ನೈ

೭. ವೆಂಕಟೇಶಾಚಾರ್ (ಗರುಡಗಂಬ ಶಿಲ್ಪಿ), ಬೆಂಗಳೂರು

ಅನುಬಂಧ – ೫

ಸಂಕ್ಷೇಪಗಳು

೧.	ಕ. ವಿ. ವಿ. ಹಂ	–	ಕನ್ನಡ ವಿಶ್ವ ವಿದ್ಯಾಲಯ, ಹಂಪಿ
೨.	ಮೈ. ವಿ. ವಿ	–	ಮೈಸೂರು ವಿಶ್ವ ವಿದ್ಯಾನಿಲಯ
೩.	ಕ. ಲ. ಕ. ಅ	–	ಕರ್ನಾಟಕ ಲಲಿತಕಲಾ ಅಕಾಡೆಮಿ
೪.	ಕ. ಶಿ. ಅ	–	ಕರ್ನಾಟಕ ಶಿಲ್ಪಕಲಾ ಅಕಾಡೆಮಿ
೫.	ಕ್ರಿ. ಪೂ	–	ಕ್ರಿಸ್ತ ಪೂರ್ವ
೬.	ಕ್ರಿ. ಶ	–	ಕ್ರಿಸ್ತ ಶಕ
೭.	ಪ್ರ. ಸಂ.	–	ಪ್ರಧಾನ ಸಂಪಾದಕರು
೮.	ಸಂ.	–	ಸಂಪಾದಕರು
೯.	ಸಂಶೋ.	–	ಸಂಶೋಧಕರು
೧೦.	ನಿ.	–	ನಿರೂಪಣೆ
೧೧.	ಪ್ರ.	–	ಪ್ರಕಾಶಕರು
೧೨.	ಅನು.	–	ಅನುವಾದಕರು
೧೩.	ಚಿತ್ರ	–	ಚಿತ್ರ ಸಂಖ್ಯೆ
೧೪.	E.	–	Editor
೧೫.	Es.	–	Editors
೧೬.	Pb.	–	Published by
೧೭.	Pr.	–	Printed at

ಅನುಬಂಧ- ೬

ಗ್ರಂಥ ಋಣ

೧. ಆಲೇಖ್ಯ (ಕಲಾಲೇಖನಗಳ ಸಂಗ್ರಹ) — ಡಾ. ಆ.ಲ. ನರಸಿಂಹನ್
ಸಂಯೋಜಿತ, ಜಯನಗರ, ಬೆಂಗಳೂರು- ೧೯೯೯

೨. ಇತಿಹಾಸ ದರ್ಶನ, ಸಂಪುಟ ೧೯/೨೦೦೪ — ಸಂ: ಎಂ.ಜಿ. ನಾಗರಾಜ್, ಡಾ. ಪಿ.ವಿ. ಕೃಷ್ಣಮೂರ್ತಿ
ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

೩. ಎಪಿಗ್ರಾಫಿಯ ಕರ್ನಾಟಿಕ- ಮಂಡ್ಯ ಜಿಲ್ಲೆ
ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವ ವಿದ್ಯಾನಿಲಯ – ೧೯೭೭

೪. ಎಪಿಗ್ರಾಫಿಯ ಕರ್ನಾಟಿಕ- ಮೈಸೂರು ಜಿಲ್ಲೆ
ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವ ವಿದ್ಯಾನಿಲಯ- ೧೯೭೫

೫. ಎಪಿಗ್ರಾಫಿಯ ಕರ್ನಾಟಿಕ – ಕೊಡಗು ಜಿಲ್ಲೆ
ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವ ವಿದ್ಯಾನಿಲಯ- ೧೯೭೨

೬. ಕರ್ನಾಟಕದ ಸಾಂಪ್ರದಾಯಿಕ ಶಿಲ್ಪಕಲೆ — ಡಾ. ಶೀಲಾಕಾಂತ ಪತ್ತಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು- ೧೯೯೫

೭. ಕರ್ನಾಟಕದ ದೇವಾಲಯಗಳು — ಸಂ: ಸು. ರಂಗಸ್ವಾಮಿ
ನಿರೂಪಣೆ: ಕಾಕೋಳು ರಾಘವೇಂದ್ರ, ಬೆ.ಗೋ. ರಮೇಶ್
ಹಂಸಧ್ವನಿ ಪ್ರಕಾಶನ, ಬೆಂಗಳೂರು- ೧೯೯೫

೮. ಕರ್ನಾಟಕ ದೇವಾಲಯ ಕೋಶ – ಹಾವೇರಿ ಜಿಲ್ಲೆ — ಡಾ. ಸಿ. ಮಹದೇವ, ಡಾ. ಸಿ.ಎಸ್. ವಾಸುದೇವನ್, ರಮೇಶ ನಾಯ್ಕ
ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ- ೧೯೯೯

೯. ಕರ್ನಾಟಕ ದೇವಾಲಯ ಕೋಶ – ಬಳ್ಳಾರಿ ಜಿಲ್ಲೆ — ಡಾ. ಕೆ.ಎಂ. ಸುರೇಶ್, ವಾಸುದೇವ್ ಬಡಿಗೇರ್, ಮಾಡಲಗಿ ಕೊಟ್ರೇಶ್, ಎಸ್.ವೈ. ಸೋಮಶೇಖರ್
ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ- ೧೯೯೯

೧೦. ಕರ್ನಾಟಕದ ಜನಪದ ಚಿತ್ರಕಲೆ — ಡಾ. ಎಸ್.ಸಿ. ಪಾಟೀಲ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ತೋಂಟದಾರ್ಯ ಸಂಸ್ಥಾನ ಮಠ, ಗದಗ, ೧೯೯೩

೧೧. ಕರ್ನಾಟಕ ಸಂಸ್ಕೃತಿ ಸಮೀಕ್ಷೆ — ಡಾ. ಹೆಚ್. ತಿಪ್ಪೇರುದ್ರಸ್ವಾಮಿ
ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿ ಪುರಂ, ಮೈಸೂರು-೧೯೯೨

೧೨. ಕರ್ನಾಟಕ ಜನಪದ ಕಲೆಗಳ ಕೋಶ — ಸಂ: ಡಾ. ಹಿ.ಚಿ. ಬೋರಲಿಂಗಯ್ಯ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩. ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣಗಳ ಬಳಕೆ — ಕೆ.ವಿ. ಕಾಳೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ– ೧, ಬಳ್ಳಾರಿ ಜಿಲ್ಲೆ,
ಕನ್ನಡ ವಿಶ್ವವಿದ್ಯಾಲಯ, ಹಂಪಿ– ೧೯೯೯

೧೫. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ, ಸಂಪುಟ–೪ — ಸಂ: ಡಾ. ತಂಬಂಡ ವಿಜಯ್ ಪೂಣಚ್ಚ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ– ೨೦೦೧

೧೬. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ, ಸಂಪುಟ–೬
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ– ೨೦೦೧

೧೭. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ, ಸಂಪುಟ–೯
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ– ೨೦೦೧

೧೮. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ, ಸಂಪುಟ– ೩ — ಸಂ: ಡಾ. ರಹಮತ್ ತರೀಕೆರೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ– ೨೦೦೦

೧೯. ಕರಕುಶಲಕಲೆಗಳು, ಕನ್ನಡ ವಿಶ್ವಕೋಶ –೨ — ಸಂ: ಡಾ. ಕರೀಗೌಡ ಬೀಚನಹಳ್ಳಿ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ– ೨೦೦೦

೨೦. ಕಲಾಕೋಶ — ಪ್ರ. ಸಂ: ಪಿ.ಆರ್. ತಿಪ್ಪೇಸ್ವಾಮಿ
ಸಂ: ಎನ್. ಮರಿಶಾಮಾಚಾರ್, ಡಾ. ಆ.ಲ. ನರಸಿಂಹನ್,
ವಿ.ಟಿ. ಕಾಳೆ, ಡಾ. ಬಿ.ಕೆ. ಹಿರೇಮಠ್
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು– ೧೯೯೪

೨೧. ಕಲೆ ಅನುಭವ ಮತ್ತು ಅನುಭಾವ — ಚಂದ್ರಕಾಂತ ಕುಸನೂರು
ಪ್ರ: ಮಾಲಗಿತ್ತಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್,
ಸದಾಶಿವನಗರ, ಬೆಳಗಾವಿ– ೧೯೯೦

೨೨. ಕಾಶ್ಯಪ ಶಿಲ್ಪಶಾಸ್ತ್ರ — ಅನು: ಡಾ. ಜಿ. ಜ್ಞಾನಾನಂದ
ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು– ೧೯೯೮

೨೩. ಚಿಕ್ಕಮಗಳೂರು ಜಿಲ್ಲಾದರ್ಶನ — ಪ್ರ. ಸಂ: ಬ. ಪಾರ್ಥಸಾರಥಿ
ಪ್ರಕಟಣೆ: ಚಿಕ್ಕಮಗಳೂರು ಜಿಲ್ಲೆ ಶತಮಾನೋತ್ಸವ ಸಮಿತಿ
ಚಿಕ್ಕಮಗಳೂರು– ೧೯೮೭

೨೪. ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ — ಅನು: ಎಸ್.ಆರ್. ಶಾಸ್ತ್ರೀ
ಮೂಲ: ತಾಪಿ ಧರ್ಮಾರಾವ್,
ನವಕರ್ನಾಟಕ ಪ್ರಕಾಶನ, ಬೆಂಗಳೂರು– ೧೯೯೮

೨೫. ನಮ್ಮ ದೇವಾಲಯಗಳು — ಸ್ವಾಮಿ ಹರ್ಷಾನಂದ
ಶ್ರೀ ರಾಮಕೃಷ್ಣ ಆಶ್ರಮ, ಯಾದವಗಿರಿ,
ಮೈಸೂರು– ೧೯೯೭

೨೬. ನಿಜದ ನೆಲೆ — ಸಂ: ಡಾ. ಎಸ್.ಸಿ. ಪಾಟೀಲ, ಸತ್ಯಾನಂದ ಪಾತ್ರೋಟಿ
ಡಾ. ಬಿ.ಕೆ. ಹಿರೇಮಠ ಅಭಿನಂದನಾ ಗ್ರಂಥ
ವೈರಾಗ್ಯದ ಮಲ್ಲಣ್ಣಾರ್ಯ ಪ್ರಕಾಶನ,
ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ–೨೦೦೩

೨೭. ಪದ್ಮ ಮಹಾಪುರಾಣಂ — ಅನು: ಬೇಲದಕೆರೆ ಸೂರ್ಯನಾರಾಯಣ ಶಾಸ್ತ್ರಿ
ಶ್ರೀ ಚಾಮರಾಜೇಂದ್ರ ಗ್ರಂಥಮಾಲಾ,
ಶ್ರೀ ಬಸವೇಶ್ವರ ಎಲೆಕ್ಟ್ರಿಕ್ ಪ್ರೆಸ್, ಮೈಸೂರು -೧೯೪೫

೨೮. ಪುರಾಣ ನಾಮ ಚೂಡಾಮಣಿ — ಬೆನಗಲ್ ರಾಮರಾವ್, ಪಾನ್ಯಂ ಸುಂದರ ಶಾಸ್ತ್ರಿ
ಪ್ರ. ಸಂ: ರಾಜ ಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ
ನಿರ್ದೇಶಕರು, ಪ್ರಸಾರಾಂಗ, ಮೈ. ವಿ. ವಿ.- ೧೯೭೩

೨೯. ಭರತಮುನಿ ನಾಟ್ಯಶಾಸ್ತ್ರ — ಅನು: ಆದ್ಯ ರಂಗಾಚಾರ್ಯ
ನೀನಾಸಂ ರಂಗ ಶಿಕ್ಷಣ ಕೇಂದ್ರ, ಹೆಗ್ಗೋಡು,
ಅಕ್ಷರ ಪ್ರಕಾಶನ, ಸಾಗರ, ಕರ್ನಾಟಕ- ೧೯೯೬

೩೦. ಭಾರತದ ದೇವಾಲಯ ನೆಲೆ-ಹಿನ್ನೆಲೆ — ಪ್ರೊ. ಎಸ್.ಕೆ. ರಾಮಚಂದ್ರ ರಾವ್
ಐ.ಬಿ.ಹೆಚ್ ಪ್ರಕಾಶನ, ಬೆಂಗಳೂರು- ೧೯೯೦

೩೧. ಭಾರತೀಯ ಆಧ್ಯಾತ್ಮಿಕ ಪರಂಪರೆ — ಸ್ವಾಮಿ ಪ್ರಭವಾನಂದ
ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು -೨೦೦೪

೩೨. ಮೈಸೂರು ಚಾಮುಂಡೇಶ್ವರಿ ದೇವಸ್ಥಾನ, — ಅನು: ಮಹೇಶ ತಿಪ್ಪಶೆಟ್ಟಿ
ಲೇಖಕರು: ಬಿ.ಬಿ. ಗೋಸ್ವಾಮಿ, ಎಸ್.ಜಿ. ಮೋರಬ
ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ,
ಬೆಂಗಳೂರು- ೨೦೦೨

೩೩. ಮೈಸೂರು ಪಂಚಾಂಗ — ಆರ್. ಕುಮಾರ್, ಕೆ. ಮನೋಹರ್
ಪರಿಶೋಧಕರು: ಶ್ರೀ ಸಿದ್ಧಾಂತಿ ವಿ. ರಾಮಕೃಷ್ಣ ಶಾಸ್ತ್ರಿ
ಒಂಟಿಕೊಪ್ಪಲ್ ಪಂಚಾಂಗ ಮಂದಿರ
ವಾಣಿವಿಲಾಸ ಮೊಹಲ್ಲಾ, ಮೈಸೂರು-೨

೩೪. ಯುಗಯಾತ್ರಿ ಭಾರತೀಯ ಸಂಸ್ಕೃತಿ, ಸಂಪುಟ-೩ — ಸಂ: ಹರಿದಾಸ ಭಟ್ಟಾಚಾರ್ಯ
ಪ್ರಸಾರಾಂಗ, ಮೈ. ವಿ.ವಿ, ಮೈಸೂರು- ೧೯೭೫

೩೫. ರೂಪಲಕ್ಷಣ ಸಂಗ್ರಹ, ಸಂಪುಟ-೧, — ಡಾ. ಜಿ. ಜ್ಞಾನಾನಂದ
ಕ. ಶಿ. ಅ, ಬೆಂಗಳೂರು- ೨೦೦೪

೩೬. ಲಜ್ಜಾ ಗೌರಿ, — ಅನು: ಡಾ. ವಿಠಲರಾವ್ ಗಾಯಕ್ವಾಡ್
ಮರಾಠಿ ಮೂಲ: ಡಾ. ರಾಮಚಂದ್ರ ಚಿಂತಾಮಣಿ ಢೇರೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ- ೨೦೦೩

೩೭. ವಾಸ್ತು ಎಷ್ಟು ವಾಸ್ತವ — ಅನು: ನಾ.ಭಾ. ಚಂದ್ರಶೇಖರಾಚಾರ್ಯ
ನವಕರ್ನಾಟಕ ಪ್ರಕಾಶನ- ೨೦೦೩

೩೮. ವಾಸ್ತುಸೂತ್ರೋಪನಿಷತ್ತು — ಬಿ.ವಿ. ವೀರಭದ್ರಪ್ಪ
ತೆಲುಗು ಅನಾವರಣ: ಶ್ರೀ ಪೆದಪಾಟಿ ನಾಗೇಶ್ವರ ರಾವ್
ವೇದ ವಿದ್ಯಾ ಪ್ರಕಾಶನ, ಕಲ್ಯಾಣ ನಗರ, ಧಾರವಾಡ- ೧೯೮೨

೩೯. ವೇದ ಸಂಸ್ಕೃತಿಯ ಪರಿಚಯ, ಸಂಪುಟ-೨, — ಪ್ರೊ. ಕೆ.ಎಸ್. ನಾರಾಯಣಾಚಾರ್ಯ
ವೇದ ವಿದ್ಯಾ ಪ್ರಕಾಶನ, ಕಲ್ಯಾಣ ನಗರ, ಧಾರವಾಡ- ೧೯೮೨

೪೦. ಶಿವತತ್ವ ರತ್ನಾಕರ – ಪ್ರಥಮ ಸಂಪುಟ — ಸಂ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್
ಸಂಕಲನ: ಕೆಳದಿ ಬಸವರಾಜ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೧೯೯೯

೪೧. ಶಿವಲಿಂಗ ಚಾರಿತ್ರ್ಯ — ಎಂ.ಜಿ. ನಂಜುಂಡಾರಾಧ್ಯರು
ಪ್ರ: ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಗ್ರಂಥ ಭಂಡಾರ
ಬಸವನಗುಡಿ, ಬೆಂಗಳೂರು- ೧೯೯೭

೪೨. ಶಿವ ಮಹಾಪುರಾಣಂ ಸಂಪುಟ ೧ – ೧೨ — ಅನು: ಹಾಸನದ ಪಂಡಿತ್ ವೆಂಕಟ ರಾವ್
ಶ್ರೀ ಚಾಮುಂಡೇಶ್ವರಿ ಎಲೆಕ್ಟ್ರಿಕ್ ಪ್ರೆಸ್,
ಶ್ರೀ ಬಸವೇಶ್ವರ ಎಲೆಕ್ಟ್ರಿಕ್ ಪ್ರೆಸ್
ಮೈಸೂರು – ೧೯೪೫

೪೩. ಶ್ರೀ ಬ್ರಾಹ್ಮೀಯ ಚಿತ್ರಕರ್ಮ ಶಾಸ್ತ್ರಂ, ಸಂಪುಟ ೧ – ೫ — ಸಂ: ಡಾ. ಜಿ. ಜ್ಞಾನಾನಂದ
ಸಂಸ್ಕೃತಿ ಸಾಹಿತ್ಯ ಪ್ರಸಾರ ಸಮಿತಿ, ಜ್ಞಾನ ಭಂಡಾರ,
ಭಾರತ್ ನಗರ, ಕೆ.ಜಿ.ಎಫ್- ೨೦೦೩

೪೪. ಶ್ರೀ ಸ್ಕಾಂದ ಮಹಾಪುರಾಣಂ — ಅನು: ಮೋಟಗಾನ ಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರೀ
ಶ್ರೀ ಚಾಮರಾಜೇಂದ್ರ ಗ್ರಂಥಮಾಲಾ,
ಬೆಂಗಳೂರು ಪ್ರೆಸ್, ಮೈಸೂರು ರಸ್ತೆ, ಬೆಂಗಳೂರು- ೧೯೪೫

೪೫. ಸೌಂದರ್ಯ ಲಹರೀ — ಸಂ: ಸು. ನಾರಾಯಣ ಶಾಸ್ತ್ರಿ
ಕನ್ನಡ ಅಧ್ಯಯನ ಸಂಸ್ಥೆ, ಮೈ. ವಿ. ವಿ, – ೧೯೭೧

೪೬. ಹಳೇಬೀಡು — ಟಿ.ಎಸ್. ರಾಜಗೋಪಾಲ್
ಐ. ಬಿ. ಹೆಚ್. ಪ್ರಕಾಶನ, ಬೆಂಗಳೂರು ೧೯೯೪

– * –

ಲೇಖನಗಳು

೧.	ಅಗ್ನಿ, ಲಕ್ಷ್ಮಿ, ಶುಕ್ರ ಮತ್ತು ದೀಪ – ಒಂದು ವಿವೇಚನೆ ಮಲ್ಲಾರ ಮಾಸಪತ್ರಿಕೆ ಮೇ– ೨೦೦೫	ಎಸ್.ಕೆ. ಹರಿಹರೇಶ್ವರ
೨.	ಅರಕೆರೆಯಲ್ಲೊಂದು ವಿಶಿಷ್ಟ ಶಿಲ್ಪಕಲೆಯ ದೇವಾಲಯ ಸಂಯುಕ್ತ ಕರ್ನಾಟಕ ದಿನಪತ್ರಿಕೆ, ಜಿಲ್ಲಾ ವಾರ್ತಾ ವಿಶೇಷ, ಏಪ್ರಿಲ್೧೦, ೨೦೦೩	ಹಾರನಹಳ್ಳಿ ನಾಗೇಂದ್ರ
೩.	ಉಜ್ಜಯಿನಿಯ ಶಿಖರ ತೈಲಾಭಿಷೇಕ ಸುಧಾ ಮಾಸಪತ್ರಿಕೆ, ಮೇ ೬, ೨೦೦೪	ಭೀಮಣ್ಣ ಗಜಾಪುರ
೪.	ಕಾರ್ಕಳದ ಜೈನ ಪರಿಸರ – ಒಂದು ಸಮೀಕ್ಷೆ ಮಲ್ಲಾರ ಮಾಸಪತ್ರಿಕೆ, ಮಾರ್ಚ್ ೨೦೦೨	ಡಾ. ವಸಂತಕುಮಾರಿ
೫.	ಗವಿ ಗಂಗಾಧರೇಶ್ವರನಿಗೆ ನಗರೀಕರಣದ ಒತ್ತಡ ಸುಧಾ ಮಾಸಪತ್ರಿಕೆ, ೧೯ ಫೆಬ್ರವರಿ ೨೦೦೪	ದೇವು ಪತ್ತಾರ್
೬.	ಗತ ವೈಭವದ ಘನ ಮೇರು ನಮ್ಮೂರು– ಬರಗೂರು ಶ್ರೀ ಶ್ರೀನಿವಾಸ ಪ್ರಿಂಟರ್ಸ್, ಶಿರಾ– ೨೦೦೬	ಕೆಂಕೆರೆ ಮನುಮಂತೇಗೌಡ
೭.	ಚೆನ್ನಕೇಶವನ ಬೇಲೂರು ಶಿಲ್ಪಕಲೆಯ ತವರೂರು ಕರ್ಮವೀರ ಮಾಸಪತ್ರಿಕೆ, ಯುಗಾದಿ ವಿಶೇಷಾಂಕ – ೨೦೦೩	
೮.	ಜೈನ ಧರ್ಮ– ಒಂದು ಇಣುಕು ನೋಟ ಮಲ್ಲಾರ ಮಾಸಪತ್ರಿಕೆ, ಏಪ್ರಿಲ್ ೨೦೦೨	ಎಸ್ಸೆಮ್ಕೆ
೯.	ತಮಿಳು ನಾಡಿನಲ್ಲಿ ರಾಷ್ಟ್ರಕೂಟರ ದೇವಾಲಯ ವಿಜಯ ಕರ್ನಾಟಕ ದಿನಪತ್ರಿಕೆ, ೧೪ ಆಗಸ್ಟ್ ೨೦೦೫	
೧೦.	ತಾಜ್ ಮಹಲ್, ಸಾಪ್ತಾಹಿಕ ಸೌರಭ, ಸಂಯುಕ್ತ ಕರ್ನಾಟಕ ದಿನಪತ್ರಿಕೆ, ೨೧ ನವೆಂಬರ್ ೨೦೦೪	
೧೧.	ಧರ್ಮ ವಿಜಯ ವಿಜಯ ಕರ್ನಾಟಕ ದಿನಪತ್ರಿಕೆ, ೧೧ ಜೂನ್ ೨೦೦೧	ಡಿ. ಸತ್ಯನಾರಾಯಣ
೧೨.	ಪ್ರಾರ್ಥನೆಯ ಅಂತರಾರ್ಥ ಮಲ್ಲಾರ ಮಾಸಪತ್ರಿಕೆ, ಜೂನ್ ೨೦೦೪	ಜ್ಯೋತಿ
೧೩.	ಭಾರತೀಯ ಸಾಹಿತ್ಯ ಮತ್ತು ಶಿಲ್ಪಕಲೆಯಲ್ಲಿ ಕಮಲ ಮಲ್ಲಾರ ಮಾಸಪತ್ರಿಕೆ, ಅಕ್ಟೋಬರ್, ನವೆಂಬರ್ ೨೦೦೨	ಸಂತನು ಬಸು
೧೪.	ಭಟ್ಕಳದ ಕೇತ ಪೈ ನಾರಾಯಣ ದೇವಾಲಯ ತರಂಗ ಮಾಸಪತ್ರಿಕೆ, ೨೬ ಫೆಬ್ರವರಿ ೨೦೦೪	ಜೀಯು ಹೊನ್ನಾವರ
೧೫.	ಮಲೆನಾಡಿನ ಮರಮನೆಗೆ ಕಾಡಿನ ನೆರಳಿನ ಬರೀ ನೆನಪು ಸಸ್ಯ ಸಂಪತ್ತು ಅಂಕಣ, ಸುಧಾ ಮಾಸಪತ್ರಿಕೆ ೨೫–೩–೨೦೦೪	ಶಿವಾನಂದ ಕಳವೆ

೧೬.	ಮರೆತು ಹೋದ ಕಾಲ ಮರೆಯಲಾಗದ ಕುರುಹು ಸುಧಾ ಮಾಸಪತ್ರಿಕೆ ೨೭ ಫೆಬ್ರವರಿ ೨೦೦೩	ಪುರುಷೋತ್ತಮ ಬಿಳಿಮಲೆ
೧೭.	ಮಂಜೇಶ್ವರದ ಅನಂತೇಶ್ವರನಿಗೆ ಸಹಸ್ರ ಕುಂಭಾಭಿಷೇಕ ತರಂಗ ಮಾಸಪತ್ರಿಕೆ, ೧೨ ಫೆಬ್ರವರಿ ೨೦೦೪	ಕೆ.ಎನ್. ಶಿವಕುಮಾರ್
೧೮.	ಯೋಗಿ ನಾರೇಯಣರ ತಪೋಭೂಮಿ ಕೈವಾರ ಸಂಯುಕ್ತ ಕರ್ನಾಟಕ ದಿನಪತ್ರಿಕೆ, ಜಿಲ್ಲಾ ವಾರ್ತಾವಿಶೇಷ, ೧೦ ಏಪ್ರಿಲ್ ೨೦೦೩	ಎ. ದೇವರಾಜು
೧೯.	ವೈಷ್ಣವ ಧರ್ಮದ ಹುಟ್ಟು ಬೆಳವಣಿಗೆ ಮಲ್ಲಾರ ಮಾಸಪತ್ರಿಕೆ ಏಪ್ರಿಲ್ ೨೦೦೨	ಡಾ. ವಿ ವೆಂಕಟೇಶ್
೨೦.	ಸಹಸ್ರ ದೀಪಂ ವಿಜಯ ಕರ್ನಾಟಕ ದಿನಪತ್ರಿಕೆ ಮುಖಪುಟ, ೧೬ ಜುಲೈ ೨೦೦೩	
೨೧.	ಸ್ತಂಭ ಪುರಾಣ ಮಲ್ಲಾರ ಮಾಸಪತ್ರಿಕೆ, ಮಾರ್ಚ್ ೨೦೦೨	ತಿರುಮಲೆ ಶ್ರೀ ರಂಗಾಚಾರ್ಯ
೨೨.	ಸ್ತಂಭ ಪುರಾಣ ಮಲ್ಲಾರ ಮಾಸಪತ್ರಿಕೆ, ಜೂನ್ ೨೦೦೨	ತಿರುಮಲೆ ಶ್ರೀ ರಂಗಾಚಾರ್ಯ
೨೩.	ಸ್ತಂಭ ಪುರಾಣ ಮಲ್ಲಾರ ಮಾಸಪತ್ರಿಕೆ, ಜುಲೈ ೨೦೦೨	ತಿರುಮಲೆ ಶ್ರೀ ರಂಗಾಚಾರ್ಯ
೨೪.	ಸ್ತಂಭ ಮಾಲಾ ಮಲ್ಲಾರ ಮಾಸಪತ್ರಿಕೆ, ಆಗಸ್ಟ್ ೨೦೦೨	ತಿರುಮಲೆ ಶ್ರೀ ರಂಗಾಚಾರ್ಯ
೨೫.	ಸ್ತಂಭ ಪುರಾಣ ಮಲ್ಲಾರ ಮಾಸಪತ್ರಿಕೆ, ಏಪ್ರಿಲ್ ೨೦೦೩	ತಿರುಮಲೆ ಶ್ರೀ ರಂಗಾಚಾರ್ಯ
೨೬.	ಸ್ತಂಭ ಮಾಲಾ ಮಲ್ಲಾರ ಮಾಸಪತ್ರಿಕೆ, ಜುಲೈ ೨೦೦೩	ತಿರುಮಲೆ ಶ್ರೀ ರಂಗಾಚಾರ್ಯ
೨೭.	ಸ್ತಂಭ ಮಾಲಾ ಮಲ್ಲಾರ ಮಾಸಪತ್ರಿಕೆ, ಸೆಪ್ಟೆಂಬರ್ ೨೦೦೩	ತಿರುಮಲೆ ಶ್ರೀ ರಂಗಾಚಾರ್ಯ
೨೮.	ಹಿಂದೂ ಎನ್ನಲು ಹೆಮ್ಮೆ ಪಡೋಣ ಕರ್ಮವೀರ ಮಾಸಪತ್ರಿಕೆ, ೨೩ ಮೇ ೨೦೦೪	ಡಾ. ಎಂ. ಚಿದಾನಂದ ಮೂರ್ತಿ

– * –

ಇಂಗ್ಲೀಷ್ ಗ್ರಂಥ ಋಣ

1. **Agama-Kosha** — S.K. Ramachandra Rao,
   (Agama Encyclopedia) Volume III
   Kalpatharu Research Academy,
   Bangalore- 1992
2. **Ananda coomaraswamy centenary essays** — E: C.D. Narasimhaiah
   prasaranga, university of Mysore- 1982
3. **Architecture and Art of Southern India** — George Michell
   The new cambridge history of India-1995
4. **Archeology of coorg** — K.K. Subbayya
   by Geetha Book House, Mysore- 1998
5. **A Cultural History of India** — Burrow,
   Edited by A.L. Basham,
   clarendon press, Oxford - 1975
6. **A History of Art** (Ancient Art) volume- 1 — Dr. Carrotti,
   Swathy Publications, New Delhi- 1979
7. **Elements of Indian art** — S.P. Gupta,
   Shashi Prabha Asthana
   Pb: Indra Prastha Museum of Art and Archeology,
   New Delhi - 1986
8. **Facets of South Indian Art and Architecture** — R. Nagaswamy
   Aryan Books International. New Delhi- 1989
9. **Hindu India** — Hernistierlin,
   (From Khajuraho to the temple city of Madurai)
   Taschen, London- 1978
10. **Hindu Symbols** — Swami Harshananda
    Ramakrishna math, Bangalore- 2000
11. **Homage to karnataka** — E: Dr. Saryu Doshi
    Marg Publications, Tata enterprises- 1994
12. **Homage to Shravana Belagola** — E: Dr. Saryu Doshi
    Marg Publications, Tata enterprises- 1995
13. **Indian art** — Roy C. Craven
    Thames and Hudson Limited, London- 1982

14. **Indian Architecture** — Percy Brown
(Buddhist and Hindu Periods)
Taraporevala, New Delhi-1986

15. **Indian Temple Architecture** — Adam Hardy
(Karnataka Dravida tradition 7th to 13th Centuries)
Indira Gandhi National Centre for the Arts,
Abhinav Publications- 1988

16. **Jainism**- A Study — E: Dr. T.G. Kalghatgi
Department of Jainology and Prakrits,
University of Mysore- 1990

17. **Karnataka Architecture** — S. Rajashekhara
Aryan Books International. New Delhi- 1987

18. **Lakulisa and Linga Polymorphism** — K.V. Sundara Rajan
Pb: Vishveshvarananda Vedic Research Institute
Sadhuashram, Hosiarpur (India) - 1964

19. **Lamps of India** — D.G. Kelkar
Pb: the Director, Publications division,
Government of India, old secratariat, Delhi.
Pr: Coronation printing works, Delhi- 1972

20. **Mysore Gazetteer**- Volume- 2 part-1 — Hayavadana Rao
B.R. Publishing Corp., Delhi-1973

21. **Mysore Gazetteer**- Volume- 5 — E: S.K. Saraswathi
B.R. Publishing Corp., Delhi- 1973

22. **On the Study of Indian Architecture** — James Fergusson
Thames and Hudson Limited, London- 1985

23. **Panorama of Jain Art** - South India — C. Shivarama Murti
The times of India, New Delhi- 1991

24. **Progress of Archeology (1956-1972)** — M.S. Nagaraja Rao,
M.S. Nagaraja Rao,
Director of Archeology and Museums
in Karnataka, Mysore, 1978
Pb: The times of India

25. **South Indian Festivities** — P.V. Jagadish Ayyar
Archeology Department,
Madras- 1993

26. **Studies in Indian Temple Architecture**
Papers presented at a seminar held in Varanasi
Varanasi- 1967

27. **South Indian Shrines** — P. V. Jagadish Ayyar
Asian Educational Services, New Delhi- 1992

28. **South Indian Bronzes** — C. Shivaramamurthy
Lalitkala Academy, India 1998

29. **Temple Treasures** (Ritual Utensils) - volume I — Choodamani Nandagopal, Vatsala Iyengar
Pb: Craft Council of Karnataka, Bangalore- 2002

30. **Temple Treasures** (Temple Jewellery) - volume II — Choodamani Nandagopal, Vatsala Iyengar
Pb: Craft Council of Karnataka, Bangalore- 2002

31. **Temple Treasures** (Temple Chariots) - volume III — Choodamani Nandagopal, Vatsala Iyengar
Pb: Craft Council of Karnataka, Bangalore- 2002

32. **Temple Gateways in South India** — James C. Harle
The new cambridge history of India- 1999

33. **Temples of South India** — K.R. Shrinivasan
National Book Trust, India- 1998

34. **Temples of North India** — Krishna deva
National Book Trust, India-1998

35. **Temples of India** Volume I text, II plates — Krishna deva
Aryan Books International, New Delhi-1999

36. **The Art of India** — Calambur Shivarama murti
Harry N. Abrahms inc., publishers, New york- 1997

37. **The Art And Architecture in karnataka** — Es: D.V. Devraj, Dr. Channabasappa Patil
(Papers presented by national seminar on Archeology 1985)

38. **The Art and Architecture of Indian Temples,** — S.K. Ramachandra Rao,
Volume 3, Kalpatharu research Academy,
Bangalore-1993

39. **The Great tradition- Indian Bronzes Master pieces**
specially published for the festival if India

40. **The Hindu Temple** - Volume I and II — Stella Kramrisch
Motilal Bansaridas, New Delhi-1991

41. **The Indian Temple Art and Architecture** — P.R. Shrinivasan
prasaranga, Bangalore- 1992

– * –

ಇಂಗ್ಲೀಷ್ ಲೇಖನಗಳು

1. **Essential part of Typical temple**
Sanathana dharma.com
http/www.Sanathanadharma.com/temple/essential.htm.
2. **Mystery of Delhi's iron pillar** — Raghavendra Rao
Wisdom- international monthly digest
E: K.V. Govinda Rao, october- 2004

ಅನುಬಂಧ- ೭

ಚಿತ್ರ ಋಣ

೧. ಕರ್ನಾಟಕ ಜನಪದ ಶಿಲ್ಪಕಲೆ – ಒಂದು ಅಧ್ಯಯನ, — ಡಾ. ಶಿವಾನಂದ ಹೆಚ್. ಬಂಟನೂರು
ಪಿಹೆಚ್.ಡಿ ಮ.ಪ್ರ., ಕ.ವಿ.ವಿ, ಹಂಪಿ
ಲಲಿತಕಲಾ ನಿಕಾಯ, ೨೦೦೨
(ಚಿತ್ರ (೨೫೮–೧)

೨. ಕರಕುಶಲಕಲೆಗಳು, ಕನ್ನಡ ವಿಶ್ವಕೋಶ –೨ — ಸಂ: ಕರೀಗೌಡ ಬೀಚನಹಳ್ಳಿ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ– ೨೦೦೦
(ಚಿತ್ರ ೩೬)

೩. ಕಾಶ್ಯಪ ಶಿಲ್ಪಶಾಸ್ತ್ರ — ಅನು: ಡಾ. ಜಿ. ಜ್ಞಾನಾನಂದ
ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು– ೧೯೯೮
(ಚಿತ್ರ ೯೮–೧೦೫)

೪. ಮಲ್ಲಾರ ಮಾಸಪತ್ರಿಕೆ, ಆಗಸ್ಟ್ ೨೦೦೨ — ತಿರುಮಲೆ ಶ್ರೀ ರಂಗಾಚಾರ್ಯ
(ಚಿತ್ರ ೨೦೪, ೨೧೨)

೫. **Lamps of India** — D.G. Kelkar
Pb: the Director, Publications division,
Government of India, old secratariat, Delhi.
Pr: Coronation printing works, Delhi- 1972
(ಚಿತ್ರ ೮–೩೨, ೨೪–೩೦, ೩೨, ೩೩, ೩೫)

೬. **Indian Temple Architecture** — Adam Hardy
(Karnataka Dravida tradition 7th to 13th Centuries)
Indira Gandhi National Centre for the Arts,
Abhinav Publications- 1988
(ಚಿತ್ರ ೧೦೬)

೭. **Panorama of Jain Art** - South India — C. Shivarama Murti
The times of India, New Delhi- 1991
(ಚಿತ್ರ (೯೨–೧.೨), ೧೯೨)

೮. **Temple Treasures** (Ritual Utensils) - volume I — Choodamani Nandagopal, Vatsala Iyengar
Pb: Craft Council of Karnataka,
Bangalore- 2002
(ಚಿತ್ರ ೨೧೫)

ಕರ್ನಾಟಕದ ಐತಿಹಾಸಿಕ ದೀಪಸ್ತಂಭ









